ಮುಕ್ರಿಕ ಕೋಳಿಯ ದ್ಸಬಹ್ ಮಾಡಲು ಹೋಗುವಾಗ ಒಬ್ಬ ಹುಡುಗ ಅವರನ್ನು ನೋಡಿ ಕೇಳುತ್ತಾನೆ. ನೀವು ಎಲ್ಲಿಗೆ ಹೋಗುವುದು. ಆವಾಗ ಅವರು ಹೇಳುತ್ತಾರೆ ನಾನು ಗೋಲಿ ಮರದ ಕೆಳಗೆ ಕೋಳಿಯ ಕತ್ತು ಕೊಯ್ಯಲು ಹೋಗುವುದು. ಆವಾಗ ಅವನು ಕೇಳುತ್ತಾನೆ ನೀವು ಯಾವ ವಸ್ತ್ರ ಹಾಕಿ ಹೋಗುವುದು. ಆವಾಗ ಅವರು ಹೇಳುತ್ತಾರೆ ನಾನು ರೇಶ್ಮೆ ಬಟ್ಟೆಯನ್ನು ಹಾಕಿ ಹೋಗುತ್ತೇನೆ ಎಂದು, ನೀವು ಯಾವುದರಲ್ಲಿ ಹೋಗುವುದು ಎಂದು ಕೇಳುವಾಗ ಅವರು ಹೇಳುತ್ತಾರೆ ನಾನು ಕುದುರೆಯ ಮೇಲೆ ಹೋಗುವುದು ಅಂತ.

**ಎವುಡೆಗ್ ಪೋಂಡೆ ಮುಕುರಿಕ**
**ಗೋಲಿಡೆ ಆದಿ ಕೋಲಿ ಅರ್ಕೊ ಪೋಂಡೆ**
**ಎಂದ್ ಉಡ್‌ತೊ ಪೋಂಡೆ?**
**ಪಟ್ಟ್ ಉಡ್‌ತೊ ಪೋಂಡೆ**
**ಎಂದ್‌ರ್‌ತೆ ಮೇಲೆ ಪೋಂಡೆ?**

**ಕುದುರೆಡೆ ಮೇಲೆ ಪೋಂಡೆ**
**ಪಟ್ಟೆ ಉಡ್ರಾಲ್ ಚೆಟ್ಟಿಚ್ಚಿ**
**ಪೊಯ್ಸರ್ ಮಾಲೆ ಕೂತುಚ್ಚಿ**

19. ಸೋನ ತಿಂಗಳಲ್ಲಿ ಹಾಡುವ ಹಾಡು.

**ಬೈಲುಂ ಮಲೆ**
**ತಗರೆ ಕಾಯಿಂತ್**
**ಕುದುರೆಗ್ ಮಂಜೆಲ...**

20.ಹಡಗಿನಲ್ಲಿ ಹೋಗುವಾಗ ಹಾಡುವ ಹಾಡು.

ಹಿಂದಿನ ಕಾಲದಲ್ಲಿ ವ್ಯಾಪಾರಕ್ಕಾಗಿ ಹಡಗಿನಲ್ಲಿ ಹೋಗುತ್ತಿದ್ದರು. ಆವಾಗ ಅವರು ಹಾಡನ್ನು ಹಾಡುತ್ತಾ ಹೋಗುತ್ತಿದ್ದರು. ಅವರ ಬರುವಿಕೆಯನ್ನು ಕಾದು ಅವರಿಗೆ ಹಾಡನ್ನು ಕಟ್ಟುತ್ತಿದ್ದರು. ಮೋಹಿಯದ್ದೀನ್ ಎಂಬ ಶ್ರೀಮಂತ ಹಡಗಿನಲ್ಲಿ ಭತ್ತವನ್ನು ತುಂಬಿಸಿ ವ್ಯಾಪಾರಕ್ಕೆ ಕನ್ನೂರು ಎಂಬ ಊರಿಗೆ ಹೋಗಿದ್ದರು. ಅವರು ನಾಳೆ ಊರಿಗೆ ಬರುವಾಗ ಇಸ್ಮಾಯಿಲಬ್ಬ ತೇಡೆಯ ತಲೆಯನ್ನು ತೆಗೆದುಕೊಂಡು ಬರುತ್ತಾರೆ. ಉಮ್ಮಂಞೆ ಎಂಬ ಹುಡುಗಿ ಅದನ್ನು ಕತ್ತರಿಸಿ ಪದಾರ್ಥ ಮಾಡುತ್ತಾಳೆ. ದಲ್ಲಾಳಿ ಸಾಹೇಬ ಊಟ ತಯಾರಿಸುತ್ತಾನೆ. ಉಮರಬ್ಬ ಎಂಬವರು ಅದನ್ನು ಬಂದು ತಿನ್ನುತ್ತಾರೆ. ಅದು ನಿಜವಾಗಿ ಇಟ್ಟದು ಬೂಟು ಸಾಹೇಬರಾದ ಮೊಹಿಯದ್ದೀನ್ ಎಂಬ ಶ್ರೀಮಂತರಿಗೆ.

**ನ್ಞಂಡೆ ಬೋಬ ಮೊದಲಾಲಿ**
**ಅಬನಾಕ ತಂಡೇಲ**
**ನೆಲ್ ಮೊರೊಚಿ ಬುಡ್ರಾರ್**
**ಕನ್ನೂರ್ಗ್ ಪೋಯಿರಾರ್**
**ನಾಲೆ ಬನ್ನ್ ಎತ್ರಾರ್**
**ಯಾಟೆರೆ ತಲೆರೆ ಕರಿಯಲ್ಲೆ**
**ಇಸ್ಮಾಯಿಲಬ್ಬ ಕೊನನಲ್ಲೆ**
**ಉಮ್ಮಂಞೆ ಪೆನ್ನ್ ಮುರಿಚಲ್ಲೆ**
**ದಲ್ಲಾಲಿ ಸಾಹಬ್‌ರೆ ಚೋರಲ್ಲೆ**
**ಬೂಟ್ ಸಾಹಬ್‌ರೆ ಬಯರಲ್ಲೆ**
**ಉಮರಬ್ಬ ತಿಂಡಲ್ಲೆ.**

21. ದೋಣಿಯಲ್ಲಿ ಹೋಗುವಾಗ ಹಾಡುತ್ತಿದ್ದ ಹಾಡು

ಹಿಂದಿನ ಕಾಲದಲ್ಲಿ ಅಣ್ಣ ಕೆಲಸ ಬಿಟ್ಟು ದೋಣೀಯಲ್ಲಿ ಬರುವಾಗ ಅವರ ತಂಗಿ ಅವರನ್ನು ನೋಡಿ ಅಮ್ಮನನ್ನು ಕರೆದು ಹೇಳುತ್ತಿದ್ದಳು, ಅಣ್ಣಂದಿರ ದೋಣಿ ಬಂತು, ಮೀನನ್ನು ಸುಟ್ಟ ಗಂಜಿ ಕೊಡು ಅಕ್ಕಿಯ ಬಂಡಲನ್ನು ಎತ್ತಲು ಹೊತ್ತಾಯಿತು ಅದರಿಂದ ಅಕ್ಕಿಯನ್ನು ತುರಿಸಲು ಹೊತ್ತಾಯಿತು ಅಮ್ಮ ಎಂದು ಹೇಳುತ್ತಾಳೆ.

**ಕಾಕಡಜಲೆ ವಾಡ ಬಂತ್‌ಲೆ ಏ ಉಮ್ಮಾಯ**
**ಮತ್ತಿ ಚುಟ್ಟು ಕಂಞೆ ತಾಲೆ ಏ ಉಮ್ಮಾಯ**
**ವಾಡ ಪೊರಿಕೊ ನ್ಯಾರ ಆಯ್ತ್‌ಲೆ ಏ ಉಮ್ಮಾಯ**
**ಅರಿ ಚೊರಿಕೊ ನ್ಯಾರ ಆಯ್ತ್‌ಲೆ ಏ ಉಮ್ಮಾಯ.**

22. ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು

**ಪೇರ್ ಪೆರ್ನಾಲ್‌ಗ್ ನೀರ್ ನೀನ್ ಒರ್ಕ ಬರ್ನ್ನ ಬುಲ**
**ನೀರ್ ನೀನಿಟ್ಟೆ ಕೂರ್ ಕುಪಯ ಮಾತಿಟ್ಟ್**
**ನಾರ್ ನಕ್ಕೊರ್ಕ ತಾರ್ ತರ್ನ್ನಬುಲ.**

23. ಬಾನಾಲ (ನ) ಬಾನಾಲ (ನ)

**ನ್ಞಂಡೆ ಮೋಲು (ನು) ಬಾನಾಲ (ನ)**
**ನ್ಞಂಡೆ ಮೋಲು (ನು) ಬಾಲುಂಬೊ**
**ಆರ್‌ಗೆಲ್ಲೊಂ ಕೊಂಡಾಟ**
**ಅಬ್ಬಗುಂ ಕೊಂಡಾಟ.....ಉಮ್ಮೊಗುಂ ಕೊಂಡಾಟ**
**ಕಾಕಗುಂ ಕೊಂಡಾಟ.....ಮಾಮಿಗುಂ ಕೊಂಡಾಟ**
**ನ್ಞಂಡೆ ಮೊಲು (ನು) ಬಾಲುಂಬೋ, ಎಂದೆಲ್ಲಾ ಬೇನುವುಲಾ**
**ಮಾಜೆರೆ ಮರ ಕೊತ್ತಿಟ್ಟ್, ಉಂಜಾಲಿಡೊನುವಲಾ**
**ಚಕ್ಕೆರೆ ಮರ ಕೊತ್ತಿಟ್ಟ್, ಕಟ್ಟಿಲಿಡೊನುವಲಾ.**

24. ಈ ಹಾಡನ್ನು ಮಕ್ಕಳು ಜೋಗಿ ಅರಸನ ಹೆಣ್ಣು ಆನೆಯನ್ನು ನೋಡಿ ಹಾಡುತ್ತಿದ್ದರು. ಮಕ್ಕಳು ಕೇಳುತ್ತಿದ್ದರು ಆನೆಯ ಕೈಯಲ್ಲಿ ಏನಿದೆ. ಆವಾಗ ಹಿರಿಯರು ಹೇಳುತ್ತಿದ್ದರು ಆನೆಯ ಕೈಯಲ್ಲಿ ಕತ್ತಿ ಇದೆ. ಕತ್ತಿಯನ್ನು ಮುಟ್ಟಿದರೆ

ಏನಾಗುತ್ತದೆ ಎಂದು ಮುಗ್ದ ಮಕ್ಕಳು ಕೇಳುವಾಗ ಹಿರಿಯರು ಹೇಳುತ್ತಾರೆ ಅದನ್ನು ಮುಟ್ಟಿದರೆ ಕೈ ಮುರಿದು ಹೋಗುತ್ತದೆ, ಮುರಿದ ಕೈಯಿಂದ ಲಿಂಬೆ ಹಣ್ಣನ್ನು ಮುಟ್ಟಿದರೆ ಕೈ ಉರಿಯುತ್ತದೆ ಎಂದು ಹೇಳುತ್ತಾರೆ.

**ಆನೆ ಆನೆ ಆನೆ**
**ಆನೆ ಓಡಿ ಬನ್ನಾನ್**
**ಮುಟ್ಟತ್ತೆ ಆನೆ ಮರ್ಲಾನೆ**
**ಜೋಗಿ ಅರಸರೆ ಪೆನ್ನಾನೆ**
**ಆನೆ ಆನೆ ಆನೆ**
**ಆನೆರೆ ಕೈಲ್ ಎಂದುಂಡು**
**ಆನೆರೆ ಕೈಲ್ ಕತ್ತಿ ಉಂಡು**
**ಕತ್ತಿ ತೊಟ್ಟೆಂಗ್ ಎಂದಾವುರು**
**ಕತ್ತಿ ತೊಟ್ಟೆಂಗ್ ಕೈಮುರಿಯು**
**ನಾರಜ್ಜ ತೊಟ್ಟೆಂಗ್ ಕೈಕತ್ತು.**

25. **ಆನೆ ಆನೆ ಆನೆ**
**ಆನೆ ಕೆಟ್ಟೊ ಬಲ್ಲಿಲ್ಲೆ**
**ಉಮ್ಮರೆ ಬಾಯಿಲ್ ಪಲ್ಲಿಲ್ಲೆ**
**ಆನೆ ಆನೆ ಆನೆ**
**ಮುಟ್ಟಾತ್ತಾನೆ ಮರ್ಲಾನೆ**
**ಜೋಗಿ ಅರಸರೊ ಪೆನ್ನಾನೆ**
**ಆನೆಂ ಕುದುರೆಂ ಬಲ್ಲಾಲ್‌ಕ್**
**ಮಂಗಯಿ ಸರಪಲಿ**
**ನ್ಂಡೆ ಮೋನು.....**

26. ಹಿರಿಯರ ಬಗ್ಗೆ ಹಾಡುವ ಹಾಡು
**ಬೆಲಮ ಬೆಲಮ, ನಜಲೊ ಬೆಲಮ**
**ವರಕ್ ಬರೋಲೊ ಮಸಲೆ ಚೆಲ್ಲೊ ಪಾವತ್ತೊ ಬೆಲಮ**
**ನಜಲೆಲ್ಲಾರೆ ಪಿರ್ಸತ್ತೊ ನಲ್ಲೊ ಬೆಲಮ**
**ಪಲ್ಲಿಲ್ಲಾತೆ ಚಿರಿಕ್‌ಡ್ ಚಂದತ್ತೊ ಬೆಲಮ.**

27. ಏ ಅಬ್ಬುಬಾಕ ನಿಜಲೊ ತೊಕ್ಕುಲೆಂದ್ರಮೆ?

**ಅದ್ ಮಂಜ್ಜಲಾಟೆ?**

**ಅದ್ರೆ ತೊಟ್ಟು ನೋಕಮ**

**ಅದ್‌ಕ್ ನೊಂಬಲಾವುಲ್ಲೆ?**

**ಅದ್ರೆ ಚಿಕ್ಕಿ ನೋಕಮ?**

**ಅದ್‌ಲ್ ಚೋರೆ ಬರುವಲ್ಲೆ.....?**

28. ಔತಣಕೂಟದ ಬಗ್ಗೆ ಹಾಡುವ ಹಾಡು

ಈ ಹಾಡನ್ನು ಕಲ್ಲಾಪು ಎಂಬ ಊರಿನ ಅಲ್ಲು ಕಾಕ ಎಂಬವರು ತನ್ನ ಮನೆಯಲ್ಲಿ ಔತಣಕೂಟವನ್ನು ಬಹಳ ಭರ್ಜರಿಯಿಂದ ಮಾಡಿದಾಗ ಊರಿನವರು ಅವರಿಗೆ ಹೇಳಿ ತಮಾಷೆ ಮಾಡುತ್ತಿದ್ದರು. ಕಾಕ ನಿಮ್ಮ ತುಪ್ಪದೂಟ (ನೈಚೋರು) ಇದರಲ್ಲಿ ನಮಗೆ ಕಲ್ಲು ಸಿಕ್ಕಿದೆ. ಮಾಂಸದ ಪದಾರ್ಥದಲ್ಲಿ ಮಾಂಸದ ತುಂಡುಗಳಿಲ್ಲ. ಕೇವಲ ಎಲುಬುಗಳಿವೆ. ಬೇಳೆ ಸಾರಿನಲ್ಲಿ ಉಪ್ಪು ಹೆಚ್ಚಾಗಿದೆ ಎಂದು ಹೇಳುತ್ತಿದ್ದರು.

**ಕಲ್ಲಾಪುರೆ ಅಲ್ಲೂ ಕಾಕ**

**ನೈಚೋರುಲು ಕಲ್ಲ್ ಕಾಕ**

**ಎರ್ಚಿರೊ ಕರಿಲ್ ಮುಲ್ಲೂ ಕಾಕ**

**ಬೇಲೆರೊ ಕರಿಲ್ ಉಪ್ಪು ಕಾಕ.**

29. ಸಾವುಞ್ಞಾಕ ಎಂಬವರ ಮನೆಯಲ್ಲಿ ಬಂಗುಡೆ ಮೀನು ಪದಾರ್ಥವನ್ನು ದಿನಾಲೂ ಮಾಡುತ್ತಿದ್ದರು. ಅದಕ್ಕಾಗಿ ನೆರೆಕರೆಯವರು ಹಾಡುತ್ತಿದ್ದರು.

**ಸಾವುಞಾರೆ ಅವುತು**

**ಐಲೆರೆ ಕರಿ ಚೋರು.**

**ನಂಜಾಲೆ ಅವುತ್ತು**

**ಮತ್ತಿ ಚುಟ್ಟು ತರ್ರು**

30. ಈ ಹಾಡಿನಲ್ಲಿ ನಿಂಬೆ ಹಣ್ಣನ್ನು ತಿಂದರೆ ಬಾಯಿ ತುಟಿ ಹುಳಿಯಾಗುತ್ತದೆ ಎಂದು ಹೇಳಲಾಗುತ್ತದೆ. ಹರಿವೆ ಪದಾರ್ಥ ಇದರಲ್ಲಿ ಉಪ್ಪಿಲ್ಲ ಮತ್ತು ಕೊತ್ತಂಬರಿಯಲ್ಲಿ ಬೀಜ ಇಲ್ಲ ಎಂದು ಅದರ ರೂಪದ ಬಗ್ಗೆ ವರ್ಣಿಸಲಾಗುತ್ತದೆ.

**ಚುಯ್ ಚುಯ್ ಚುಂಡಜ್ಜ**
**ಚುಂಡು ಪುಲಿಕ್ಕು ನಾರಜ್ಜೆ**
**ಚೀರೆಡೆ ಕರಿಕ್ ಉಪ್ಪಿಲ್ಲೆ**
**ಕೊತ್ತಂಬರಿಕ್ಕ್ ಬಿತ್ತಿಲ್ಲೆ.**

31. ಈ ಹಾಡನ್ನು ಮದುವೆಯ ಸಂದರ್ಭದಲ್ಲಿ ಮದುಮಗಳಿಗೆ ತಮಾಷೆಗಾಗಿ ಹಾಡಲಾಗುತ್ತದೆ. ಮದುವೆಗೆ ಬಂದ ಹೆಂಗಸರು ಮದುಮಗಳ ಸುತ್ತಲೂ ಕುಳಿತು ಈ ಹಾಡನ್ನು ಹಾಡುತ್ತಿದ್ದರು. ಮದುಮಗಳ ಬಳಿ ಅವರು ಹೇಳುತ್ತಿದ್ದರು ಬಿರಿಯಾನಿಯನ್ನು ಬೇಯಿಸಲು ಇಟ್ಟಿದ್ದಾರೆ, ಬಾದಾಮಿ ಹಣ್ಣಿನ ರಸ (ಶರ್ಬತ್)ನ್ನು ಹಾಲು ಹಾಕಿ ಮಾಡಿದ್ದಾರೆ, ಬಿಸಿ ನೀರು ಹಂಡೆಯಲ್ಲಿದೆ, ಸಪ್ಪೆ ನೀರು ಬೇಕಾದರೆ ಬಾವಿಯಲ್ಲಿ ಇದೆ, ಲಕ್ಸ್ ಸಾಬೂನನ್ನು ಪೆಟ್ಟಿಗೆಯಲ್ಲಿ ಇಡಲಾಗಿದೆ ಮತ್ತು ಬಿಳಿ ಬೈರಾಸ್ ಗೂಟದಲ್ಲಿದೆ. ನೀನು ಹೋಗಿ ಸ್ನಾನ ಮಾಡಿ ಬಾ. ಸ್ನಾನ ಮಾಡಿ ಬರುವಾಗ ಚಾಹ ಇದೆ ಮತ್ತು ನಿನಗೆ ಬಾಯಾರಿಕೆಯಾದರೆ ಹಣ್ಣಿನ ರಸ (ಶರ್ಬತ್) ಇದೆ.

**ಬಿರಿಯಾನಿ ಬೇವೊಂಗುಂಡು, ಬಾದಾಮಿ ಶರ್ಬತುಂಡ್**
**ಪಾಲ್ ಬೀತಿ ಬೆರ್ಕೊಂಗುಂಡು, ಬೆಚ್ಚ ತನ್ನಿ ಮಂಡೆಲುಂಡು**
**ಚಪ್ಪೆ ತನ್ನಿ ಕೆನ್ತ್ ಲುಂಡು**
**ಬೆಲ್ತೆ ತಟ್ಟ ಕುಟ್ಟಿಲುಂಡು**
**ಲಕ್ಸ್ ಸೋಪು ಪೆಟ್ಟಿಲುಂಡು, ನೀ ಕುಲಿ**
**ಕುಲ್ಚಿ ಬರೊಂಬೊ ಚಾಯ ಉಂಡು**
**ತಾಗ ಅವುಡೆಂಗ್ ಶರ್ಬತುಂಡು.....**

32. ಮದುವೆಯ ಸಂದರ್ಭ ಹೆಂಗಸರು ಮದುಮಗಳಲ್ಲಿ ಹೇಳುತ್ತಿದ್ದರು. ಮಲ್ಲಿಗೆ ಹೂ ತುಂಬಾ ಪರಿಮಳವಾಗಿದೆ. ಅದನ್ನು ತಲೆಗೆ ಇಟ್ಟರೆ ಇನ್ನೂ ಪರಿಮಳವಾಗಿರುತ್ತದೆ. ಮದುಮಗಳಿಗೆ ನಾಚಿಕೆ, ನಾದಿನಿಯರು ಕುಡಿಯಲು ಹಾಲು ಮತ್ತು ಉಪ್ಪು ನೀರು ತೆಗೆದುಕೊಂಡು ಬರುವರು ಎಂದು ಹಾಡುತ್ತಿದ್ದರು.

**ಮಲ್ಲಿಗೆ ಪೂ ಬಾರಿ ಕಮ್ಮನೆ**
**ತಲೆಕ್ ಬೆಚ್ಚೆಂಗ್ ಬಾರಿ ಕಮ್ಮನೆ**
**ಪುದಿಯೆಪೆನ್ನ್ಗ್ ತಂಜನೆ ಮಂಜನೆ**

**ಮಚುಂಚಿ ಮಾರೆ ಪಾಲ್ ಬರು**
**ಕುಡಿಕೊಗು ಉಪ್ಪು ತನ್ನಿ ಬರು.....**

33. ಮದುಮಗಳಿಗೆ ಮದುಮಗನನ್ನು ನೋಡಿ ಸಂತೋಷವಾಗುತ್ತದೆ ಎಂದು ಹೆಂಗಸರು ಮದುಮಗಳ ತಾಯಿ ಪಾತುಮ್ಮ ದಾದ ಎಂಬವರಲ್ಲಿ ಹೇಳಿ ಹಾಡುತ್ತಿದ್ದರು. ಕೋಟು ಮತ್ತು ಪ್ಯಾಂಟು ಹಾಕಿ ಮದುಮಗ ಬರುವುದೊಂದು ಸಂತೋಷ ಮದುಮಗಳು ಮದುಮಗನನ್ನು ನೋಡಿ ಭಯಪಡುತ್ತಿದ್ದಾಳೆ ಎಂದು ಹೆಂಗಸರು ಮದುಮಗಳ ತಾಯಿಯಾದ ಪಾತುಮ್ಮ ದಾದನಿಗೆ ತೋರಿಸಿ ಹಾಡುತ್ತಿದ್ದರು.

**ಕೋಟು ಪ್ಯಾಂಟ್‌ಲ್ ಪುದಿಯಾಂಪುಲ ಬಂಡೋರು ಜೋಸು**
**ಪುದಿಯೆ ಪೆನ್ನ್ ಕಂಡ್ ಹೈಬತ್ತ್**
**ನೋಕೊರು ಪಾತುಮ್ಮ ದಾದ**
**ಪಾತುಮ್ಮದಾದ ಪಾತುಮ್ಮ ದಾದ.....**

34. ಮದುವೆಯ ದಿನ ಮದುಮಗಳ ಸುತ್ತಲೂ ಕುಳಿತು ಈ ಹಾಡನ್ನು ಹಾಡುತ್ತಿದ್ದರು. ಮದುಮಗಳ ಬಳಿ ಅವರು ಹೇಳುತ್ತಿದ್ದರು ಮದುವೆಯ ಶಾಮಿಯಾನವನ್ನು ನೀನು ಒಮ್ಮೆ ನೋಡು ಅಲಂಕರಿಸಿದ ಕೋಣೆ (ಮಜ್ಲಿಸ್) ಎಷ್ಟೊಂದು ಸುಂದರವಾಗಿದೆ. ಇದನ್ನೆಲ್ಲಾ ನೋಡಿ ಮದುಮಗಳಿಗೆ ಎಂತ ಒಂದು ವಯ್ಯಾರ ಅವಳಿಗೆ ಇಂದು ಮನೆಯಲ್ಲಿ ಮದುವೆ ಎಂದು.

**ಮಂಜೆಲ್ತೆ ದೊಂಪ ನೀನ್ ಒರ್ಕ ನೋಕು**
**ಚಮ್‌ಚೆ ಮಜ್ಲಿಸ್ ಎಂದೊರು ನೋಕು**
**ಪುದಿಯೆ ಪೆನ್ನ್‌ಗ್ ಎಂದೊರು ಮ್ಯಾಲ**
**ಕಾರನ ಅವುಲ್‌ಗ್ ಇಂಡ್ ಮಂಜೆಲ.....**

35. ಅತ್ತೆ ತನ್ನ ಅಳಿಯನಿಗೆ ತಮಾಷೆಯ ಉಪಚಾರವಾಗಿ ಹಾಡುವ ಹಾಡು

**ಅಪ್ಪ ಚುಡು ಚುಡು ಪಾತಿಮ**
**ಇಪ್ಪ ಬರು ಬರು ಮಾಪುಲೆ**
**ಬನ್ನೆ ಮಾಪುಲೆ ಪಾಂಞೆ ಪೋಯಿ**
**ಚುಟ್ಟೆ ಅಪ್ಪ ಕರಿಂಞೆ ಪೋಯಿ.**

36. ಈ ಹಾಡನ್ನು ಅತ್ತೆ ತನ್ನ ಅಳಿಯ ದುಬೈ ಎಂಬ ಪರದೇಶದಿಂದ ಬಂದಾಗ ಹಾಡುತ್ತಾರೆ. ಅತ್ತೆ ತನ್ನ ಅಳಿಯನನ್ನು ನೋಡಿ ಕೇಳುತ್ತಾರೆ. ನೀನು ಯಾವಾಗ ದುಬೈಯಿಂದ ಬಂದದ್ದು. ನೀನು ಹಾಕಿದ ಕೋಟು ಮತ್ತು ಪ್ಯಾಂಟನ್ನು ತೆಗೆದು ಒಂದು ಲುಂಗಿ ಹಾಕಿಕೊ ನನ್ನ ಮಗಳು ನೆಪಿಸನಿಗೆ ನಿನ್ನನ್ನು ಕಾದು ಕಾದು ಸಾಕಾಯಿತು. ನನಗೆ  ಅವಳಿಗೆ ಸಮಾದಾನ ಹೇಳಿ ಹೇಳಿ ಸಾಕಾಯಿತು. ನೀನು ಒಮ್ಮೆ ಹೋಗಿ ಅವಳನ್ನು ನೋಡು ಎಂದು ಅತ್ತೆ ತನ್ನ ಅಳಿಯನಲ್ಲಿ ಹೇಳುತ್ತಾಳೆ.

**ಎಂದೆ ಮರ್‌ಮೋನೆ**
**ದುಬೈರೆ ಎಪ್ಪ ಬನ್ನೆರೆ?**
**ಕೋಟ್ ಪ್ಯಾಂಟ್ ಮಾತಿ**
**ಒರು ಮುಂಡು ಇದ ಉಡ್ತುಗ**
**ನ್ಂಡೆ ಮೋಲು ನೆಬಿಸ**
**ನಿಂಡೆ ಕಾತ್ ಕಾತ್ ಬೆಡಇತ್ತ್**
**ನಕ್ಕ್ ಸಮದಾನ ಚೊನ್ನ್ ಚೊನ್ನ್ ಬೆಡ್‌ಇತ್ತ್**
**ಒರ್ಕ ಅವುಲ್‌ಡೆ ಮೊಗ ತೆಲ್ಲ್ ನೋಕ್ ನ್ಂಡೆ ಮರ್‌ಮೋನೆ.**

37. ಈ ಹಾಡನ್ನು ಬಟ್ಟ ಸೂಪಿ ಎಂಬವರ ಅಳಿಯಂದಿರನ್ನು ನೋಡಿ ಅಕ್ಕ ಪಕ್ಕದವರು ಕಟ್ಟಿದ ಹಾಡಾಗಿದೆ.

**ಅಕ್ಕರೆ ಇಕ್ಕರೆ ಆರಡಿ ಉಮ್ಮ**
**ಬಟ್ಟ ಸೂಪಿರೆ ಮರ್ ಮಕ್ಕ...**

38. ಈ ಹಾಡನ್ನು ಅತ್ತೆ ತನ್ನ ಅಳಿಯನಿಗೆ ತಮಾಷೆಯ ಉಪಚಾರವಾಗಿ ಹಾಡಿದ ಹಾಡಾಗಿದೆ.

**ನಡನ್ನ್ ಬಂತ್ ಬಚ್ಚಿದ್ ಚೊಂತ್**
**ತೆಲ್ಲ್ ಕೆಡನ್ ಒರಂಜ ಚೊಂತ್**
**ಅಪರ್ತೆ ಅವುತೆ ಬೆಂಚಿ ಕೊಡಂತ್**
**ನ್ಜಲೊ ನಲ್ಲೊರು ಮಾಮಿ**
**ನ್ಜಲೊ ಬಂಗಾರ್ ಮಾಮಿ.**

39. ಮದುವೆಯ ದಿನ ಅಚ್ಚಬಾಕ ಎಂಬ ಅಜ್ಜ ತನ್ನ ಮೊಮ್ಮಗಳ ಮದುವೆ ಮಾಡುವಾಗ ಅಚ್ಚಬಾಕರನ್ನು ನೋಡಿ ಮದುವೆಗೆ ಬಂದವರು ಹಾಡಿದ ಹಾಡಾಗಿದೆ.

**ಅಚ್ಚಬಾಕರೊ ಮೋಲೆ ಮೋಲುಗು ನಾಲೆ ಜಾವುಗು ಮಂಜೆಲ**
**ಎಲ್ಲಾರುಗುಂ ತಾಲಮೇಲ, ಅಚ್ಚಬಾಕೊಗು ಮೇಲ್ ಕೀಲ್**
**ಎಲ್ಲಾರುಗುಂ ಅವುಲೆ ಬಾಲೆ, ಅಚ್ಚಬಾಕೊಗು ಪೊದೊರಿ ಬಾಲ**
**ಎಲ್ಲಾರುಗುಂ ಕೋಲಿ ಕಾಚೆದ್, ಅಚ್ಚಬಾಕೊಗು ಪೂಚೆ ಕಾಚೆದ್.**

40. ಮೀನುಗಳು ಹಾಡುವ ಹಾಡು ತನ್ನ ಸಹೋದರ ಮೀನು ಹಿಡಿಯಲು ಹೋದಾಗ ಸಹೋದರಿ ಹಾಡುವ ಹಾಡಾಗಿದೆ ಇದು. ಕಡಲಿನಲ್ಲಿದ್ದ ಕಲ್ಯಾ ಮೀನು ಮತ್ತು ಕೆರೆಯಲ್ಲಿದ್ದ ತೋಲ್ಯ ಮೀನನ್ನು ನನ್ನ ಸಹೋದರ ಹಿಡಿದು ತಂದಿದ್ದಾನೆ. ಅದನ್ನು ನನ್ನ ಅಮ್ಮ ಪದಾರ್ಥ ಮಾಡಲು ಇಟ್ಟಿದ್ದಾರೆ. ನಾವೆಲ್ಲ ಅದನ್ನು ತಿನ್ನಲು ಕಾದು ಕುಳಿತ್ತಿದ್ದೇವೆ ಎಂದು ಸಹೋದರಿ ಹಾಡುತ್ತಾಳೆ.

**ಕಾಡ್‌ಲ್ ಕಲ್ಯಮೀನ್**
**ತೋಡುಲ್ ತೊಲ್ಯಾಮೀನ್**
**ನ್ಂಡೆ ಆಜಲೆ ಪಿಡ್ಟೋ ಮೀನ್**
**ನ್ಂಡೆ ಉಮ್ಮ ಕರಿ ಬೆಚ್ಚೆ ಮೀನ್**
**ನ್ಂಡೆ ಮಾರ ಕೂಟು ಮೀನ್**

41. ಈ ಹಾಡನ್ನು ಮೀನು ಹಾಡುತ್ತದೆ. ಎರಡು ಮೀನುಗಳಿರುತ್ತವೆ. ಅದರಲ್ಲಿ ಒಂದು ಮೀನಿಗೆ ಇನ್ನೊಂದು ಮೀನನ್ನು ನೋಡಿದರೆ ಆಗುವುದಿಲ್ಲ. ಆ ಸಂದರ್ಭ ಆ ಮೀನು ಹಾಡುವ ಹಾಡಾಗಿರುತ್ತದೆ. ಆ ಮೀನು ದ್ವೇಷದಿಂದ ಹೇಳುತ್ತದೆ. ನನ್ನನ್ನು ಮುರಿಯುವ ಕತ್ತಿಯಿಂದ ನೀನು ಅವನನ್ನು ಮುರಿಯಬಾರದು. ಅವನನ್ನು ಮುರಿಯುವ ಕತ್ತಿಯಿಂದ ನನ್ನನ್ನು ಮುರಿಯಬಾರದು. ನನ್ನನ್ನು ಹಾಕಿದ ಪಾತ್ರೆಯಲ್ಲಿ ಅವನನ್ನು ಹಾಕಬಾರದು ಮತ್ತು ಅವನನ್ನು ಹಾಕಿದ ಪಾತ್ರೆಯಲ್ಲಿ ನನ್ನನ್ನು ಹಾಕಬಾರದು ಎಂದು ಹೇಳಿ ಹಾಡುತ್ತದೆ.

**ನ್ಂಡೆ ಮುರ್ಚೆ ಕತ್ತಿಲ್ ಅವುಂಡೆ ಮುರಿಕಂಡ**
**ಅವುಂಡೆ ಮುರ್ಚೆ ಕತ್ತಿಲ್ ನ್ಂಡೆ ಮುರಿಕಂಡ**
**ನ್ಂಡೆ ಇಟ್ಟೆ ಚಟ್ಟಿಲ್ ಅವುಂಡೆ ಇಡಂಡ**
**ಅವುಂಡೆ ಇಟ್ಟೆ ಚಟ್ಟಿಲ್ ನ್ಂಡೆ ಇಡಂಡ.**

42.ಒಂದು ಊರಿನ ಬಗ್ಗೆ ಉಲ್ಲೇಖಿಸಿ ಹಾಡುವ ಹಾಡಾಗಿದೆ.

**ಮೈಕಾಲೊಮ್ಮ ಮೈಕಾಲ**
**ಎಂದೊರು ಚಂದತ್ತೆ ಮೈಕಾಲ**
**ಪಂಡತ್ತೆ ಇಂಡತ್ತೆ ಮೈಕಾಲ**
**ಅಕ್ಕರೆ ಇಕ್ಕರೆ ನಡುಲೊರು ಪೊಲೆಕೆರೆ**
**ಮೈಕಾಲೊಮ್ಮ ಮೈಕಾಲ.**

43.ಬಿಸೆಲಿ (ಒಂದು ಬಗೆಯ ಮಣ್ಣಿನ ಪಾತ್ರೆ)ಯಲ್ಲಿ ಬಸಲೆ ಬಳ್ಳಿಯ ಪದಾರ್ಥವನ್ನು ಮಾಡಿ ಅದನ್ನು ಕಾಲಿ ಮಾಡುವಾಗ 'ನಂದಾವರ' ಎಂಬ ಊರಿನ ಒಂದು ಹೆಂಗಸು ಬರುತ್ತಿದ್ದರು. ಅವರನ್ನು ನೋಡಿ ತಲೆಗೆ ಒಂದು ಪೆಟ್ಟು ಕುಂಡೆಗೆ ಒಂದು ಪೆಟ್ಟು ಕೊಟ್ಟು ಅಲ್ಲಿಯೇ ಅವರನ್ನು ಕೂತುಕೊಳ್ಳಿಸು ಎಂದು ಹೇಳಿ ಹಾಡುತ್ತಿದ್ದರು.

**ಬಸಲೆರೆ ಕರಿಯಾಕಿಟ್ಟ್**
**ಬಿಸೆಲಿ ಬಡಿಕುಂಬೊ**
**ನಂದಾರ್‌ಡೆ ಅಯ್‌ಮ ಬನ್ನೋಂತಿತ್ತ್**
**ತಲೆಕೊರು ಅಡಿ**
**ಕುಂಡಿಗೊರು ಮನೆ**
**ದೈಪಾಟ್ ಅವುಡ ದೈಪಾಟ್.**

44.ಬ್ಯಾರಿ ಭಾಷೆಯಲ್ಲಿ ಸ್ನೇಹಿತನಿಗೆ 'ಅಲಿಯ' ಎಂದು ಕರೆಯುತ್ತಾರೆ. ಒಬ್ಬ ಸ್ನೇಹಿತ ತನ್ನ ಸ್ನೇಹಿತನ ತಂಗಿಯನ್ನು ಮದುವೆಯಾಗಲು ಬಯಸುತ್ತಾನೆ. ಅವನು ಹೋಗಿ ಅವಳ ಬಳಿ ಮದುವೆಯ ಪ್ರಸ್ತಾವ ಮಾಡಿದಾಗ ಅವಳು ಅವನನ್ನು ನಿರಾಕರಿಸುತ್ತಾಳೆ. ಆಗ ಅವನು ತನ್ನ ಸ್ನೇಹಿತನ ಬಳಿ ಅವನ ತಂಗಿ ಹೇಳಿದ ಮಾತುಗಳನ್ನು ಹೇಳುತ್ತಾನೆ. ಅಲಿಯ ಅಲಿಯ ನಿನ್ನ ತಂಗಿ ಹೇಳಿದ್ದು ನಾನು ಅವಳಿಗೆ ಬೇಡವಂತೆ. ನಾನು ಕುಂಟ ಕಾಲಿನವನಂತೆ, ನಾನು ಸುಂದರ ವಾಗಿಲ್ಲವಂತೆ, ನನ್ನ ತೂತು ದೋಣಿಯಂತೆ, ಅಂಕುಡೊಂಕು ಜಳ್ಳವಂತೆ ಎಂದು ಹೇಳೀ ಈ ಹಾಡನ್ನು ಹಾಡುತ್ತಾನೆ.

**ಅಲಿಯ ಅಲಿಯ**
**ನ್ಂಡೆ ಕಣ್ಣಲಿಯ**

**ನಿಂಡೆ ಪೆಂಜ್ಜಲ್ ಚೊನ್ನೆ**
**ನಾ ಬೇಂಡವುಲ**
**ನಾ ತಾಂಟವುಲ**
**ನಾ ಮೋಂಟವುಲ**
**ನಂಡೆ ಒಟ್ಟ ವಾಡವುಲ**
**ಮೋಂಟು ಜಲ್ಲವುಲ.**

45. ಒಬ್ಬ ಹುಡುಗ ದಾರಿಯಲ್ಲಿ ಇನ್ನೊಂದು ಹುಡುಗನನ್ನು ಕರೆದು ಕೇಳುತ್ತಾನೆ ಅಲಿಯ ಅಲಿಯ (ಸ್ನೇಹಿತ) ನಿನ್ನ ಹೆಸರು ಹೇಗೆ ಎಂದು ಅವನ ತನ್ನ ಹೆಸರು 'ಚೆರ್ ಪುಕುಟ್ಟಿ' ಎಂದು ಹೇಳುತ್ತಾನೆ.

**ಅಲಿಯ ಅಲಿಯ**
**ಚೊಂಬಲಿಯಿ**
**ನಿಂಡೆ ಪೇರೆಜನೆ?**
**ಚೆರ್‌ಪುಕುಟ್ಟಿ.....**

46. ಹುಡುಗಿಯರಿಗೆ ಹಾಡುವ ಹಾಡು

ಸಾನುಂ ಪಾತಿಮಾ ಎಂಬ ಹುಡುಗಿಯ ಬಳಿ ಒಬ್ಬ ಬಂದು ಕೇಳುತ್ತಾನೆ ಒಂದು ಅಪ್ಪ (ದೋಸೆ) ಕೊಡು ಮಗಳೆ ಸಾನುಂ ಪಾತಿಮ, ಎರಡು ಅಪ್ಪ ಕೊಡು, ಇಲ್ಲದಿದ್ದರೆ ಮೂರು ಅಪ್ಪ ಕೊಡು, ಅದೂ ಕೊಡದಿದ್ದರೆ ನಾಲ್ಕು ಅಪ್ಪ ಕೊಡು, ಇಲ್ಲದಿದ್ದರೆ ಐದು ಕೊಡು, ಅದೂ ಕೊಡದಿದ್ದರೆ ಆರು ಕೊಡು, ಇಲ್ಲದಿದ್ದರೆ ಏಳು ಕೊಡು, ಅದೂ ಕೊಡದಿದ್ದರೆ ಎಂಟಾದರು ಕೊಡು, ಅದೂ ಕೊಡಲು ಆಗದಿದ್ದರೆ ಒಂಬತ್ತು ಇಲ್ಲದಿದ್ದರೆ, ಹತ್ತು ಅಪ್ಪವಾದರೂ ಕೊಡು ಎಂದು ಹೇಳುವಾಗ ಸಾನುಂ ಪಾತಿಮ ಅಪ್ಪ ಕೊಡದೆ ಓಡಿ ಹೋಗುತ್ತಾಳೆ.

**ಒರು ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಜಂಡ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಮೂನ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ನಾಲ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಅಂಜಿ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಆರ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**

**ಏಲ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಎಟ್ಟ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಒಲಿಂಬೊ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಪತ್ತ್ ಅಪ್ಪ ತಾಡಿ ಮೋಲು ಸಾನುಂ ಪಾತಿಮ**
**ಪಾತಿಮ ಸಾನ್ ಅಪ್ಪ ಎಡ್ತ್ ಓಡಿಯಾಲ್.....**

47. ಹುಡುಗಿ ತಾನು ಸುಂದರಿಯಾಗಿದ್ದೇನೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾಗ ಅದನ್ನು ನೋಡಿದವರು ಹಾಡುತ್ತಾರೆ. ತಾನು ಸುಂದರಿ ಸುಂದರಿ ಎಂದು ನೀನು ಜಂಬ ಕೊಚ್ಚ ಬೇಡ. ಸುಂದರಿಯಾಗಿದ್ದರೂ ನಿನಗೆ ಬುದ್ಧಿಬೇಕು. ಎಷ್ಟು ಆದರೂ ನದಿಯ ನೀರಿಗಿಂತ ಗಂಜಿಯೆ ರುಚಿಯಾಗಿರುತ್ತದೆ. ನೀನು ಬಿಳಿಯಾಗಿದ್ದಿ ಸುಂದರವಾದ ಹೆಂಡತಿ ಎಂದು ಜಂಬ ಕೊಚ್ಚಬೇಡ. ಎಷ್ಟಾದರೂ ಸಪ್ಪೆ ನೀರು ಕೂಡ ಬಿಳಿಯಾಗಿರುತ್ತದೆ ಎಂದು ಹೇಳುತ್ತಾರೆ.

**ಚಂದ ಚಂದಾಂಟ್ ಅಂಗಲಾಪು ಆಕಂಡ**
**ಚಂದ ಇನ್ನೆಂಗುಂ ಅಖಿಲಿಲ್ಲೆ**
**ಪೊಲೆಡೊ ತನ್ನಿ ತೆಲಿ ಆಯೆಂಗುಂ ಸುವಾದ್ ಇಲ್ಲೆ**
**ಬೆಲ್ತೆ ಪೆಂಞಾಯೀಂಟ್ ಗತ್ತ್ ನೀ ಕಾಟಂಡ**
**ಚಪ್ಪೆ ತನ್ನಿ ಬೆಲ್ಪಲ್ಲೇ.**

48. ಮಕ್ಕಳಿಗೆ ಹಾಡುವ ಹಾಡುಗಳು, ಒಂದು ಮಗು ಬಂದು ಅಂಗಡಿಯವನಲ್ಲಿ ಹೇಳುತ್ತದೆ. ಹಲಸಿನಕಾಯಿಯ ತಿಂಡಿಯನ್ನು ಮಾಡಲು ಹಲಸಿನ ಕಾಯಿ ಕೊಡಬೇಕು ಎಂದು ಅಜ್ಜಿ ಹೇಳುತ್ತಿದ್ದಾರೆ. ಆಗ ಅವನು ಕೇಳುತ್ತಾನೆ, ನೀನು ನಿನ್ನೆ ತೆಗೆದುಕೊಂಡು ಹೋದದ್ದು ಏನು ಮಾಡಿದ್ದೀಯಾ? ಆವಾಗ ಮಗು ಹೇಳುತ್ತದೆ ಅದು ಕೊಳೆತು ಹೋಗಿದೆ. ಆವಾಗ ಅವನು ಕೇಳುತ್ತಾನೆ ನೀನು ಕೊಳೆತ್ತದ್ದನ್ನು ಏನು ಮಾಡಿದ್ದೀಯಾ? ಆವಾಗ ಮಗು ಹೇಳುತ್ತದೆ ಅದನ್ನು ನಾನು ಎಮ್ಮೆಗೆ ಕೊಟ್ಟಿದ್ದೇನೆ. ಎಮ್ಮೆ ನಿನಗೆ ಅದಕ್ಕೆ ಬದಲಾಗಿ ಏನು ಕೊಟ್ಟಿತು ಎಂದು ಕೇಳುತ್ತಾನೆ. ಅದಕ್ಕೆ ಮಗು ನನಗೆ ಸೆಗಣಿ ಕೊಟ್ಟಿತು ಎಂದು ಹೇಳುತ್ತದೆ. ಆ ಸೆಗಣಿಯನ್ನು ಏನು ಮಾಡಿದೆ ಎಂದು ಕೇಳುತ್ತಾನೆ. ಅದನ್ನು ನಾನು ಗದ್ದೆಗೆ ಹಾಕಿದ್ದೇನೆ ಎಂದು ಹೇಳುತ್ತದೆ. ಅದರ ಬದಲಾಗಿ ಗದ್ದೆ ನಿನಗೆ ಏನು ಕೊಟ್ಟಿತು ಎಂದು ಕೇಳುತ್ತಾನೆ. ಆಗ ಮಗು ಅದು ನನಗೆ

ಭತ್ತ ಕೊಟ್ಟಿತು ಎಂದು ಹೇಳುತ್ತದೆ. ಭತ್ತವನ್ನು ಏನು ಮಾಡಿದಿ ಎಂದು ಕೇಳುತ್ತಾನೆ? ಮಗು ನಾನು ಕೋಳಿಗೆ ಕೊಟ್ಟಿದ್ದೇನೆ ಎಂದು ಹೇಳುತ್ತದೆ. ಕೋಳಿ ನಿನಗೆ ಏನು ಕೊಟ್ಟಿತು ಎಂದು ಕೇಳಿದಾಗ ಕೋಳಿ ನನಗೆ ಮೊಟ್ಟೆ ಕೊಟ್ಟಿತು ಎಂದು ಹೇಳುತ್ತದೆ. ಇಲ್ಲಿ ಮಗುವಿನ ಮುಗ್ಧತೆಯ ಬಗ್ಗೆ ವರ್ಣಿಸಲಾಗುತ್ತದೆ.

**ಚಂಯ್ ಚುಂಯ್ ಚಕ್ಕಿಡಪ್ಪ**
**ಅಜ್ಜಿ ಚೊನ್ನೆ ಚಕ್ಕೆ ತರನೂಲು**
**ಇನ್ನೆಲೆ ಕೊನೆಯೆದ್ ಎಂದಾಕೆ?**
**ಬೇಜ್ಜೆತ್.....**
**ಬೇಜ್ಜೆದ್ ಎಂದಾಕೆ?**
**ಎರ್‌ದ್‌ಗ್ ಇಟ್ಟೆ.....**
**ಎರ್‌ದ್ ಎಂದ್ರೆ ತಂತ್?**
**ಚಾಜನ ತಂತ್.....**
**ಚಾಜನ ಎಂದಾಕೆ?**
**ಕಂಡತ್ತ್‌ಗ್ ಇಟ್ಟೆ.....**
**ಕಂಡ ಎಂದ್ರೆ ತಂತ್?**
**ನೆಲ್ಲ್ ತಂತ್.....**
**ನೆಲ್ಲ್ ಎಂದಾಕೆ?**
**ಕೋಲಿಗ್ ಇಟ್ಟೆ.....**
**ಕೋಲಿ ಎಂದ್ರೆ ತಂತ್?**
**ಮುಟ್ಟೆ ತಂತ್.....**

49. ಒಂದು ಮಗು ಅಳುತ್ತಾ ಬರುತ್ತದೆ. ಆಗ ಆ ಮಗುವನ್ನು ನೋಡಿದ ಒಂದು ಅಜ್ಜಿ ಯಾರಮ್ಮ ನೀನು, ನೀನು ಎಲ್ಲಿಂದ ಬಂದಿದ್ದೀಯಾ ಯಾಕೆ ಬಂದಿದ್ದೀಯಾ ಎಂದು ಕೇಳುತ್ತಾಳೆ. ಈ ನಿನ್ನ ಸುಂದರವಾದ ಅಳು, ನಗು ನಿನ್ನ ಚರಪರ ಯಾತಕ್ಕಾಗಿ? ನಿನ್ನ ಕಣ್ಣು ಆಕಾಶದಲ್ಲಿ ಮಿನುಗುವ ನಕ್ಷತ್ರದಂತಿದೆ, ನಿನ್ನ ಮುಖ ಹದಿನಾಲ್ಕನೇ ಚಂದಮಾಮದಂತಿದೆ. ಈ ನಿನ್ನ ಕಿವಿ, ಮುಖ ಬಹಳ ಸುಂದರವಾಗಿದೆ ಎಂದು ಅಜ್ಜಿ ಮಗುವಿನ ಸೌಂದರ್ಯದ ಬಗ್ಗೆ ವರ್ಣಿಸುತ್ತಾರೆ.

**ಆರುಮ್ಮ ನೀನ್ ಎವುಡ್ಡೊ ಬನ್ನೆ?**
**ಎಂದಿಗ್ ಬನ್ನೆ ಚೆಲ್ಲುಮ್ಮ?**
**ಈ ನಿಂಡೊ ಬುಲುಪು, ಈ ನಿಂಡೊ ಚಿರಿಕೆ**
**ಈ ನಿಂಡೊ ಕಾಕಾ ಕೀಕೀ ಕೂಕೂ**
**ಈ ನಿಂಡೊ ಕಣ್ಣ್ ಆಕಾಶತ್‌ಲ್ ಮಿನ್ನ್**
**ಈ ನಿಂಡೊ ಚೇಲ್ ಮಾದ ಪೊವ್ನಾಲ್**
**ಈ ನಿಂಡೊ ಕಾದ್ ಮೊಗವುಂ ಬಾಯಿ.**

50. ಒಬ್ಬ ತಾಯಿ ಇತರ ಮಕ್ಕಳನ್ನು ನೋಡಿ, ಮಕ್ಕಳೇ ಮಕ್ಕಳೇ ನೀವು ನನ್ನ ಮಗನನ್ನು ನೋಡಿದ್ದೀರಾ ಎಂದು ಕೇಳುತ್ತಾರೆ. ಆಗ ಮಕ್ಕಳು ಹೇಳುತ್ತಾರೆ, ಹೌದು ನಾನು ನಿಮ್ಮ ಮಗನನ್ನು ಕುದ್ರೋಳಿ (ಒಂದು ಊರು)ಯ ಪೇಟೆಯಲ್ಲಿ ನೊಡೀದ್ದೇವೆ. ಅಲ್ಲಿ ಕುದುರೆಯನ್ನು ಬಿಟ್ಟು ಆಡವಾಡುತ್ತಿದ್ದಾನೆ. ಆಗ ತಾಯಿ ಹೇಳುತ್ತಾಳೆ ನೀವು ಅವನನ್ನು ಹೋಗಿ ಒಮ್ಮೆ ಕರೆದುಕೊಂಡು ಬನ್ನಿ, ನೀವು ಕರೆದುಕೊಂಡು ಬಂದರೆ ಅವನಿಗೆ ಇಟ್ಟ ಉಪ್ಪು ಗಂಜಿ ನಿಮಗೆ ಕೊಡುತ್ತೇನೆ ಎಂದು ಹೇಳುತ್ತಾಳೆ.

**ಮಕ್ಕಲೆ ಮಕ್ಕಲೆ ನಜಲೆ ಮೋನ್‌ಡೆ ಕಂಡ್ರೊರ**
**ಕಂಡೊಮೆ ಕಂಡೊಮೆ ಕುದ್ರೋಲಿಡೆ ಪ್ಯಾಂಟೆಲ್**
**ಕುದ್ರೆ ಬುಟ್ಟು ಕಲಿಕ್‌ರ.....**
**ಅವುನ್‌ಡೆ ಒರ್‌ಕ ಬಿಲ್ಟೊಂಬರು ಮಕ್ಕಲೆ**
**ಅವುನ್‌ಗ್ ಬೆಚ್ಚೆ ಉಪ್ಪು ಕಂಞಿ**
**ನಿಜೊಗು ತಂಡ ಮಕ್ಕಲೆ**
**ಅವುನ್‌ಡೆ ಒರ್‌ಕ ಬಿಲ್ಟೊಂಬರು.**

51. ಮಗುವನ್ನು ಆಟವಾಡಿಸುವಾಗ ತಾಯಿ ಹಾಡುತ್ತಾಳೆ. ನನ್ನ ಮಗುವಿಗೆ ಒಂದು ಆನೆಯುಂಟು. ಅದನ್ನು ಕಟ್ಟಲು ಹಗ್ಗವಿಲ್ಲ. ನನ್ನ ಮಗನ ಬಾಯಿಯಲ್ಲಿ ಹಲ್ಲಿಲ್ಲ ಅದು ಅಜ್ಜನ ಕಾಲದ ಕಾಡಾನೆಯಾಗಿತ್ತು. ಅದು ಊರಿನ ರಾಜನಾಗಿತ್ತು. ಮಗುವಿನ ತಂದೆಯ ಪ್ರೀತಿಯ ಆನೆಯಾಗಿತ್ತು. ಅದನ್ನು ತಾಯಿಯೇ ಸಾಕುತ್ತಿದ್ದಳು. ತಾಯಿ ಮಗುವಿನಲ್ಲಿ ಹೇಳುತ್ತಾಳೆ. ನೀನು ಊರಿನ ಸುಲ್ತಾನ. ಕೊಳಲನ್ನು ಊದಿ ಅಮ್ಮನಿಗೊಂದು ಮುತ್ತು ಕೊಡು ಮಗನೆ ಎಂದು ಹೇಳುತ್ತಾಳೆ. ಆನೆಯ

ಬಳಿ ಆಟವಾಡಿ ಮುಗುಳ್ನಕ್ಕು ಹಾಲು ಮತ್ತು ಜೇನನ್ನು ಕುಡಿದು ಅಪ್ಪನ ಹೆಗಲಲ್ಲಿ ಆಟವಾಡು ಎಂದು ಹೇಳುತ್ತಾಳೆ.

**ಅನೆಂಡು ಮೋನುಗೊರು ಆನೆಂಡು**
**ನ್ಂಡೆ ಮೋನುಗೊರು ಆನೆಂಡು**
**ಆನೆ ಕೆಟ್ಟೊಗು ಬಲ್ಲಿಲ್ಲೆ**
**ಮೋಂಡೊ ಬಾಯಿಲ್ ಪಲ್ಲಿಲ್ಲೆ**
**ಬೋಬರೊ ಕಾಲತ್ತೊ ಕಾಡಾನೆ**
**ರಾಯತ್ತೊ ರಾಜಾವು ಈ ಆನೆ**
**ಅಬ್ಬರೆ ಪಿರ್ಸತ್ತೊ ಪೆನ್ನಾನೆ**
**ಉಮ್ಮಮೇ ಬಲ್ತಿಯೋ ಬೆಲ್ತಾನೆ**
**ರಾಯತ್ತೊ ಸುಲ್ತಾನ್ ನೀ ಮೋನೆ**
**ಆನೆಲ್ ಸವಾರಿ ಪೋ ಮೋನೆ**
**ಬೀನೆರೆ ಚೆಂಡ್ಲ್ ಊದಿಲ್**
**ಉಮ್ಮೊಗು ಮುತ್ತು ಕೊಡು ಮೋನೆ**
**ಆನೆ ಕಲ್ಟೋಂಟೆ ಬಾ ಮೋನೆ**
**ಪೊಂಜಿರಿ ಚಿರಿಕೊನು ಪೂ ಮೋನೆ**
**ಪಾಲುಂ ತೇನುಂ ಕುಡ್ಚಿಟ್ಟ್**
**ಅಬ್ಬರೊ ಕುಂಜಿಲ್ ಕಲಿಮೋನೆ.**

52. ಈ ಹಾಡನ್ನು ಅಮ್ಮ ತನ್ನ ಮುಗ್ಧ ಕಂದನಿಗಾಗಿ ಹಾಡುತ್ತಾಳೆ. ತನ್ನ ಕಂದ ಚಪ್ಪಾಳೆ ತಟ್ಟುವುದನ್ನು ನೋಡಿ ಅಮ್ಮ ಹಾಡುತ್ತಾಳೆ ಚಪ್ಪಾಳೆ ತಟ್ಟು ನನ್ನ ಅಂದವಾದ ಸಣ್ಣ ಸಣ್ಣ ಕೈಗಳಲ್ಲಿ ಚಪ್ಪಾಳೆ ತಟ್ಟು ನೀ, ನಿನ್ನ ಬಂಗಾರದಂತಿನ ಕೈಗಳಲ್ಲಿ ಚಪ್ಪಾಳೆ ತಟ್ಟು ಎಂದು ಸಂತೋಷದಿಂದ ಹಾಡುತ್ತಾಳೆ.

**ತಾಯ್ ತಾಯ್ ತಾಯ್**
**ನ್ಂಡೆ ಪುತ್ತು ಕೈಕ್ ತಾಯ್**
**ಬಂಗಾರ್ ಕೈಕ್ ತಾಯ್**
**ತಾಯ್ ತಾಯ್ ತಾಯ್.....**

53. ಈ ಹಾಡಿನ ಸಾರಾಂಶ ಸ್ಪಷ್ಟವಾಗಿಲ್ಲ. ಆದರೆ ರಾಜನ ಮಗಳಿಗೆ ಪಟ್ಟಾಧಿಕಾರ ಸಿಕ್ಕಿದ ಸಂದರ್ಭದಲ್ಲಿ ಹಾಡಿದ ಹಾಡಾಗಿದೆ ಎಂದು ಹೇಳಲಾಗುತ್ತದೆ.

**ಇಚ್ಚನ್ನಾರ್ ಕಾಲಂ ಚೆಯ್ಡ್**
**ಎರ್‌ಮೆನ್ನಾರ್ ದುಕ್ಕಂ ಪೊಟ್ಟಿ**
**ಕಡಲೆಲ್ಲ ಕೊತ್ತಿ ಮರಜೆ**
**ತತ್ತಾನೆ ಕನ್ನಡತ್ತ್**
**ಮರ ಎಲ್ಲ ಎಲೆತಾತಿ**
**ರಾಜಾವುಡೆ ಮೇಲ್ ಪಟ್ಟಂ ಕೆಟ್ಟಿ**
**ರಾಜಾವುಡೆ ಪೆಂಞಾಯಿ ಸಾನ್ ಪಿಂಞನ ಒಡ್‌ಬಾಲ್.**

54. ಅಬ್ದುಲ್ ರಹಿಮಾನ್ ಎಂಬವರ ಗಾಡಿಯಲ್ಲಿ ಒಂದು ಹಾವಿತ್ತು. ಅದನ್ನು ನೋಡಿ ಜನರು ಹಾವನ್ನು ಸಾಯಿಸಲು ಒಂದು ಬೆತ್ತವನ್ನು ತೆಗೆದುಕೊಂಡು ಬನ್ನಿ, ಅದರಲ್ಲಿ ರಕ್ತವಾಗುತ್ತಿದ್ದರೆ ಅದನ್ನು ತೊಳೆಯಲು ಕೆರೆಗೆ ಹೋಗು ಎಂದು ಹೇಳುತ್ತಾರೆ. ಕೆರೆಯಲ್ಲಿ ತುಂಬಾ ಮೀನುಗಳಿರುತ್ತವೆ. ಮೀನನ್ನು ಹಿಡಿಯಲು ಮೀನುಗಾರಿಕೆ ಬಲೆ ತೆಗೆದುಕೊಂಡು ಬಾ ಎಂದು ಹೇಳುವಾಗ.

**ಅಬ್ದುಲ್ ರಹಿಮಾನ್ ಬಂಡಿಕ್ಕೊ**
**ಬಂಡಿಲ್ ಒರು ಪಾಂಬಿಕ್ಕೊ**
**ಪಾಂಬು ಕೊಲ್ಲು ಬೆತ್ತ ಎಡ್ತೊಬಾ**
**ಬೆತ್ತ ನೊರೊಡಿ ಚೋರೆ**
**ಚೋರೆ ಕಲ್ಲೊ ತೋಡು ಪೊ**
**ತೋಡು ನೊರೋಡಿ ಮೀನ್**
**ಮೀನ್ ಪಿಡಿಕೊ ಬಲೆ ಎಡ್ತೊ ಬಾ**
**ಬಲೆ ನೊರೊಡಿ ಮೀನ್.**

55. ನಾಲ್ಕು ಮತ್ತು ಮೂರು ಏಳಾಗುವಾಗ, ಲಿಂಬೆ ಹಣ್ಣಿನ ಮರದಲ್ಲಿ ಹೂವು ಹೋಗುವಾಗ, ನನಗೆ ನೀನು ಮಗನಾಗುವಾಗ ನಿನ್ನಪ್ಪ ನನಗೆ ಏನಾಗಬೇಕು ಎಂದು ತಾಯಿ ಮಗಳಲ್ಲಿ ಕೇಳುತ್ತಾಳೆ.

**ನಾಲ್ ಮೂನು ಏಲಾವುಂಬೊ**
**ನಾರಜ್ಜೆ ಮರ್‌ತ್‌ಲ್ ಪೂ ಪೋಂಬೊ**
**ನಕ್ಕ್ ನೀ ಮೋನಾವುಂಬೊ**
**ನಿಂಡಬ್ಬ ನಕ್ಕ್ ಎಂದಾವೊನು.**

# ಜಾನಪದ ಕಥೆಗಳು

ಅದೊಂದು ಕಾಲವಿತ್ತು ಅಜ್ಜಿ–ಅಜ್ಜಂದಿರು ಹೇಳಿಕೊಡುತ್ತಿದ್ದ ಕಥೆಗಳನ್ನು ಕೇಳುವುದಕ್ಕೆ ಮಕ್ಕಳು ಮರಿ ಮಕ್ಕಳು ಕಾಯುತ್ತಿದ್ದರು. ಅಜ್ಜಿ ಹೇಳುತ್ತಿದ್ದ ಕಥೆಗಳನ್ನು ಕೇಳಿ 'ಹೂಂ ಹೂಂ' ಎಂದು ಪ್ರತಿಕ್ರಿಯಿಸುತ್ತಿದ್ದರು. ಆದರೆ ಇಂದು ಮಕ್ಕಳಿಗೂ ಮರಿಮಕ್ಕಳಿಗೂ ಅಜ್ಜ–ಅಜ್ಜಿಯಂದಿರು ಹೇಳುವ ಕಥೆಗಳನ್ನು ಕೇಳಲು ಸಮಯವಿಲ್ಲ ಹಿಂದಿನ ಕಾಲದಲ್ಲಿ ಅಜ್ಜಿಯ ಕಥೆಗಳನ್ನು ಕೇಳಲು ಸುತ್ತುಮುತ್ತು ಕುಳಿತು ಅಜ್ಜಿ ಮಲಗುವಾಗ ಹೇಳುತ್ತಿದ್ದ ಕಥೆಗಳನ್ನು ಕೇಳುವ ಆನಂದವೇ ಬೇರೆಯಾಗಿತ್ತು. ಈಗಿನ ಕಾಲದ ಮಕ್ಕಳಿಗೆ ಅದು ಯಾವುದೂ ಗೊತ್ತಿಲ್ಲ. ಮಕ್ಕಳು ಗಲಾಟೆ ಮಾಡುತ್ತಾರೆ ಎಂದು ಮಕ್ಕಳಿಗೆ ದೂರದರ್ಶನ, ಟ್ಯಾಬ್‌ಗಳನ್ನು ಕೊಡುತ್ತಾರೆ. ಹಿಂದಿನ ಕಾಲದಲ್ಲಿ ಅಜ್ಜಿಯಂದಿರು ಹೇಳಿಕೊಡುತ್ತಿದ್ದ ಕಥೆಗಳನ್ನು ಕೇಳಲು ಇಂದು ಆಸೆ ಆಗುತ್ತದೆ. ನಾನು ಕೆಲವು ಅಜ್ಜ–ಅಜ್ಜಿಯಂದಿರು ಹೇಳುತ್ತಿದ್ದ ಕಥೆಗಳನ್ನು ಸಂಗ್ರಹಣೆ ಮಾಡಿದ್ದೇನೆ.

## 1. ಸತ್ಯವಂತ ಹುಡುಗಿ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ ಅವನಿಗೆ ಎರಡು ಮಕ್ಕಳು. ಅದರಲ್ಲಿ ಒಂದು ಹುಡುಗ ಇನ್ನೊಂದು ಹುಡುಗಿ. ಒಂದು ದಿನ ರಾಜನ ಮಗಳು ಹುಡುಗರು ಹಾಕುವ ಬಟ್ಟೆಯನ್ನು ಹಾಕಿ ಹೋಗುತ್ತಿದ್ದಳು. ಆಗ ರಾಜನ ಮಗಳ ಹಿಂದೆ ಸೈನಿಕರು ಬರುತ್ತಾರೆ. ಆವಾಗ ಇನ್ನೊಬ್ಬ ಹೇಳುತ್ತಾನೆ. ಅದು ಹುಡುಗಿ ಅಲ್ಲ ಹುಡುಗ. ಆವಾಗ ಅವನು ಹೇಳುತ್ತಾನೆ ನೀನು ಏನು ಬೇಕಾದರೂ ಹೇಳು ಅದು ಹುಡುಗ ಅಲ್ಲ ಹುಡುಗಿ. ಹಾಗೆ ಆ ವ್ಯಕ್ತಿ ಹುಡುಗಿಯೊ ಅಲ್ಲ ಹುಡುಗವಾ ಎಂದು ತಿಳಿಯಲು ಒಂದು ಮಣ್ಣಿನ ಪಾತ್ರೆಯ ಅಂಗಡಿಗೆ ಅವರು ಹೋಗುತ್ತಾರೆ. ರಾಜನ ಮಗಳೂ ಕೂಡ ಹೋಗುತ್ತಾಳೆ. ಸೈನಿಕರು ಹುಡುಗನ ರೂಪ ತಾಳಿದ ರಾಜನ ಮಗಳ ಬಳಿ ಹೇಳುತ್ತಾರೆ ಮಣ್ಣಿನ ಪಾತ್ರ ತೆಗೆಯುವಾ ಅಂತ. ಆಗ ಹುಡುಗನಾದ ರಾಜನ ಮಗಳು ಹೇಳುತ್ತಾಳೆ ನಮಗೆ ಹುಡುಗರಿಗೆ ಮಣ್ಣಿನ ಪಾತ್ರೆ ಯಾಕೆ, ನಮಗೆ ಬೇಕಾದದ್ದು ಒಂದು ಸಣ್ಣ ಕೂಸು (ಮಣ್ಣಿನ ನೀರು ಕುಡಿಯುವ ಪಾತ್ರೆ).

ಅವಳು ಜವುಳಿ ಅಂಗಡಿಗೆ ಹೋಗುತ್ತಾಳೆ. ಆಗ ಅಲ್ಲಿ ಸೈನಿಕರು ಹೆಂಗಸರ ಸೀರೆ ರವಕೆ ನೋಡುವಾಗ ಹುಡುಗನಾದ ರಾಜನ ಮಗಳು ಹೇಳುತ್ತಾಳೆ

ನಮಗೆ ಬೇಕಾದದ್ದು ಸೀರೆ ಮತ್ತು ರವಕೆ ಅಲ್ಲ ನಮಗೆ ಬೇಕಾದದ್ದು ಲುಂಗಿ ಮತ್ತು ಅಂಗಿ. ಹಾಗೆ ಅವರು ಹೂವಿನ ಅಂಗಡಿಗೆ ಹೋಗುತ್ತಾರೆ. ಆಗ ಹುಡುಗರ ವೇಷ ಧರಿಸಿದ ಹುಡುಗಿ ಹೇಳುತ್ತಾಳೆ ನಮಗೆ ಹುಡುಗರಿಗೆ ಹೂವು ಯಾಕೆ? ನಮಗೆ ಬೇಕಾದದ್ದು ಕಿವಿಗೆ ಇಡಲು ಒಂದು ಸಣ್ಣ ಹೂವು. ಹಾಗೆ ಅವರು ಹೋಗುತ್ತಾ ಇರುವಾಗ ಪ್ರಾರ್ಥನೆಗೆ ಕರೆ ಆಗುತ್ತದೆ. ವುಲೂವ್ (ನಮಾಝ್ ಮಾಡುವ ಮುಂಚೆ ಮಾಡುವ ಕಾರ್ಯ)ಮಾಡಲು ಕೆರೆಯ ಹತ್ತಿರ ಹೋಗುತ್ತಾರೆ. ಆಗ ಅಲ್ಲಿ ಒಂದು ನಿರ್ಗೀಸ್ ಅಂತ ಹೇಳುವ ಹಕ್ಕಿ ಬಂದು ಅವಳ ಮೇಲೆ ಮಲವಿಸರ್ಜನೆ ಮಾಡುತ್ತದೆ. ಆಗ ಅವಳು ಕೇಳುತ್ತಾಳೆ ತೂ? ನಿರ್ಗೀಸ್ ಹಕ್ಕಿಯೇ ನಿನಗೆ ಗಂಡಸರ ಮೇಲೆ ಮಲವಿಸರ್ಜನೆ ಮಾಡಲು ನಾಚಿಗೆ ಆಗುವುದಿಲ್ಲವೇ. ಹಾಗೆ ಅವರು ಹೋಗಿ ಒಂದು ಊರಿಗೆ ಮುಟ್ಟುತ್ತಾರೆ. ಆ ಊರಿನ  ಜನರು ಅವಳನ್ನು ನೋಡಿ ಹುಡುಗವಾ ಹುಡುಗಿಯೋ ಎಂದು ತಿಳಿಯಲು ಆ ಊರಿನ ರಾಜನ ಬಳಿ ಕರೆದುಕೊಂಡು ಹೋಗುತ್ತಾರೆ. ಆಗ ಆ ಹುಡುಗಿ ರಾಜನ ಮನೆಗೆ ಹೋಗಿ ಸೀರೆ ಎಲ್ಲಾ ಉಟ್ಟು ಅಲಂಕರಿಸುತ್ತಾಳೆ. ರಾಜನ ಹೆಂಡತಿಯ ಬಳಿ ಬಂದು ಕೇಳುತ್ತಾಳೆ.

ರಾಜ ನೋಡಿದರೆ ನನ್ನ ಹತ್ತಿರ ಬರಬಹುದಾ ನಿನ್ನ ಹತ್ತಿರ ಬರಬಹುದಾ? ಆಗ ರಾಜನ ಹೆಂಡತಿ ಹೇಳುತ್ತಾಳೆ. ನಿನ್ನ ಬಳಿ ಬರಬಹುದು. ಆಗ ಅವಳು ಹೇಳುತ್ತಾಳೆ, ನನ್ನ ಬಳಿ ಬರುವುದು ಬೇಡ. ರಾಜ ನಿನ್ನ ಬಳಿಯೇ ಇರಲಿ ಎಂದು ಅಲ್ಲಿಂದ ಹೋಗುತ್ತಾಳೆ. ಹೋಗಿ ಒಂದು ಕಡೆ ಬ್ಯಾಂಗರ (ಒಂದು ಜಾತಿಯ ಮರ)ದ ಕೆಳಗೆ ನುಗ್ಗಿ ಕುಳಿತುಕೊಳ್ಳುತ್ತಾಳೆ. ಅವಳು ಅದರ ಒಳಗೆ ಕುಳಿತುಕೊಳ್ಳುವಾಗ ಅವಳ ಸೀರೆಯ ಸೆರಗು ಸ್ವಲ್ಪ ಹೊರಗೆ ಬಂದಿರುತ್ತದೆ. ಅದರ ಒಳಗೆ ಕೂತು ಅವಳು ಕುರ್‌ಆನಿನ ಆಯಿತನ್ನು ಓದುತ್ತಿರುತ್ತಾಳೆ. ಇವಳು ಓದುವುದನ್ನು ಕೇಳಿ ಅಲ್ಲಿದ್ದ ಪ್ರಾಣಿ ಪಕ್ಷಿಗಳೆಲ್ಲ ಅಚ್ಚರಿಗೊಳ್ಳುತ್ತದೆ. ಆಗ ಒಬ್ಬ ರಾಜ ಕುದುರೆಯಲ್ಲಿ ಮರದ ಹತ್ತಿರ ಹೋಗುತ್ತಿರುತ್ತಾನೆ. ಆಗ ಆ ರಾಜನಿಗೆ ಮರದ ಹತ್ತಿರ ಓದುವುದು ಕೇಳಿಸುತ್ತದೆ. ರಾಜನು ಸುತ್ತ ಮುತ್ತಲೂ ನೋಡುತ್ತಾನೆ. ಯಾರನ್ನೂ ಕಾಣುವುದಿಲ್ಲ. ಮರದ ಹತ್ತಿರ ಹೋಗಿ ನೋಡುವಾಗ ರಾಜನಿಗೆ ಮರದ ಒಳಗಿನಿಂದ ಸೀರೆಯ ಸೆರಗು ಹೊರಗೆ ಬಂದದ್ದು ಕಾಣುತ್ತದೆ. ನೋಡಿ ರಾಜನು ಕೇಳುತ್ತಾನೆ. ಏ ಹುಡುಗಿಯೇ ನೀನು ಯಾಕೆ ಮರದ ಹತ್ತಿರ ಕುಳಿತುಕೊಂಡಿದ್ದೀಯಾ? ಹೊರಗೆ ಬಾ. ಆಗ ಅವಳು ಕೇಳುತ್ತಾಳೆ ನಾನು ಹೊರಗೆ ಬಂದರೆ ನೀನು ನನ್ನನ್ನು ಏನೆಂದು ಅನಿಸುತ್ತೀಯಾ? ಆಗ ರಾಜ

ಹೇಳುತ್ತಾನೆ 'ಮದುವೆ ಆಗುವವರೆಗೆ ನಾನು ನಿನ್ನನ್ನು ಸಹೋದರಿಯೆಂದು ಅನಿಸುತ್ತೇನೆ. ಮದುವೆ ಆದ ನಂತರ ನಾನು ನಿನ್ನನ್ನು ಹೆಂಡತಿಯಾಗಿ ನೋಡುತ್ತೇನೆ' ಎಂದು ಹೇಳುತ್ತಾನೆ. ಆಗ ಆ ಹುಡುಗಿ ಮರದ ಬಳಿ ಹೇಳುತ್ತಾಳೆ ನಿಜವಾದ ಅಪ್ಪನಿಗೆ ನಾನು ಹುಟ್ಟಿದ ಮಗಳಾದರೆ ಮರ ಎರಡು ಭಾಗವಾಗಬೇಕು. ಆಗಲೆ ತಕ್ಷಣ ಮರ ಎರಡು ಭಾಗವಾಗುತ್ತದೆ. ಹುಡುಗಿ ಹೊರಗೆ ಬರುತ್ತಾಳೆ. ಹೊರಗೆ ಬಂದು ಹೇಳುತ್ತಾಳೆ. ನಿಜವಾದ ಅಪ್ಪನಿಗೆ ನಾನು ಹುಟ್ಟಿದ ಮಗಳಾದರೆ ಮರ ಎರಡು ಪುನಃ ಒಂದಾಗಬೇಕೆಂದು. ಹಾಗೆ ಮರ ಎರಡು ಒಂದಾಗುತ್ತದೆ. ರಾಜ ಅವಳನ್ನು ಕುದುರೆಯ ಮೇಲೆ ಕುಳ್ಳಿರಿಸಿ ಕರೆದುಕೊಂಡು ಹೋಗುತ್ತಾನೆ. ತನ್ನ ಅರಮನೆಗೆ ಕರೆದುಕೊಂಡು ಹೋಗಿ ರಾಜ ಅವಳನ್ನು ಮದುವೆಯಾಗುತ್ತಾನೆ.

ಕಥೆ ಹೇಳಿದವರು: **ಮೈಮುನ ಮೇಲ್ಕಾರ್**

## 2. ಗುಬ್ಬಿ ಅಕ್ಕನ ಮಗು

ಒಂದು ಊರಿನಲ್ಲಿ ಗುಬ್ಬಿ ಅಕ್ಕ ಮತ್ತು ಕಾಗೆ ಅಕ್ಕ ಇದ್ದರು. ಅವರು ಪ್ರೀತಿಯಿಂದ ಒಂದಾಗಿ ಬಾಳುತ್ತಿದ್ದರು. ಹಾಗೆ ಇರುವಾಗ ಒಂದು ದಿನ ರಾತ್ರಿ ಜೋರು ಮಳೆ, ಗಾಳಿ, ಗುಡುಗು–ಸಿಡಿಲು ಬರುತ್ತದೆ. ಆ ಗಾಳಿ ಮಳೆಗೆ ಭೂಮಿಯೇ ನಡುಗಿದ ಹಾಗೆ ಆಗುತ್ತದೆ. ಗುಡುಗು ಮಿಂಚಿಗೆ ಕಾಗೆ ಅಕ್ಕನ ಮನೆ ಸಿಡಿಲು ಬಡಿದು ಬೀಳುತ್ತದೆ. ಕಾಗೆ ಅಕ್ಕನಿಗೆ ನಿಲ್ಲಲು ಮನೆ ಇರುವುದಿಲ್ಲ. ಒದ್ದೆಯಾಗಿ ಚಳಿ ಹಿಡಿದು ಹೋಗುತ್ತದೆ. ಆಗ ಕಾಗೆ ಅಕ್ಕನಿಗೆ ಗುಬ್ಬಿ ಅಕ್ಕನ ನೆನಪಾಗುತ್ತದೆ.

ಕಾಗೆ ಅಕ್ಕ ಮೆಲ್ಲ ಗುಬ್ಬಿ ಅಕ್ಕನ ಮನೆಗೆ ಹಾರುತ್ತಾ ಬರುತ್ತದೆ. ಮನೆಗೆ ಬಾಗಿಲು ಹಾಕಿರುತ್ತದೆ. ಕಾಗೆ ಅಕ್ಕ ಮೆಲ್ಲ ಬಾಗಿಲ ಹತ್ತಿರ ಬಂದು ಹೇಳುತ್ತದೆ, ಗುಬ್ಬಿ ಅಕ್ಕ ಗುಬ್ಬಿ ಅಕ್ಕ ಬಾಗಿಲು ತೆಗೆಯಿರಿ. ಗುಬ್ಬಿ ಅಕ್ಕ ಗುಬ್ಬಿ ಅಕ್ಕ ಸ್ವಲ್ಪ ಬಾಗಿಲು ತೆಗೆಯಿರಿ ಎಂದು ಹೇಳಿ ಕಾಗೆ ಅಕ್ಕ ಅಳುತ್ತದೆ. ಕಾಗೆ ಅಕ್ಕನ ಅಳುವಿಗೆ ಗುಬ್ಬಿ ಅಕ್ಕನ ಕರುಣೆ ಉಕ್ಕಿ ಬರುತ್ತದೆ. ಗುಬ್ಬಿ ಅಕ್ಕ ಕಾಗೆ ಅಕ್ಕನಿಗೆ ಹಲಸಿನ ಊಟ ಎಲ್ಲಾ ಕೊಟ್ಟು ಸತ್ಕರಿಸುತ್ತದೆ. ಗುಬ್ಬಿ ಅಕ್ಕ ಮಗುವಿಗೆ ಮೊಲೆಯುಣಿಸಿ ಮಲಗಿಸುತ್ತದೆ. ಕಾಗೆ ಅಕ್ಕನ ಬಳಿ ಹೇಳುತ್ತದೆ. ನೀನು ಮಂಚದ ಕೆಳಗೆ ಮಲಗು ಗುಬ್ಬಿ ಅಕ್ಕನಿಗೆ ಸುಸ್ತಾಗಿ ನಿದ್ದೆ ಬರುತ್ತದೆ. ಕಾಗೆ ಅಕ್ಕ ಕಣ್ಣು ಮುಚ್ಚಿ ಗುಬ್ಬಿ ಅಕ್ಕ ಮಲಗುವುದನ್ನೇ ಕಾಯುತ್ತಲಿರುತ್ತವೆ. ಅರ್ಧ ರಾತ್ರಿ ಆಗುವಾಗ ಗುಬ್ಬಿ ಅಕ್ಕನ ಮಗು ಅಳುತ್ತದೆ. ಗುಬ್ಬಿ ಅಕ್ಕನಿಗೆ ಮಾತ್ರ ಒಳ್ಳೆಯ ನಿದ್ದೆ ಹತ್ತಿರುತ್ತದೆ. ಗುಬ್ಬಿ ಅಕ್ಕನಿಗೆ ನಿದ್ದೆ ಕಣ್ಣಿನಲ್ಲಿ ಟಕ್–ಟಕ್ ಎಂದು ಶಬ್ದ ಕೇಳುತ್ತದೆ. ಅದು ಏನು ಶಬ್ದ

ಎಂದು ಗುಬ್ಬಿ ಅಕ್ಕ ಕಾಗೆ ಅಕ್ಕನ ಬಳಿ ಪ್ರೀತಿಯಿಂದ ಕೇಳುತ್ತದೆ. ಕಾಗೆ ಅಕ್ಕ ಹೇಳುತ್ತದೆ, ಅದು ನನ್ನ ಬಾಯಲ್ಲಿ ಕಡ್ಲೆ ಇತ್ತು ಅದನ್ನು ನಾನು ತಿಂದದ್ದು. ನೀನು ಸುಮ್ಮನೆ ಮಲಗಿ ಗುಬ್ಬಿ ಅಕ್ಕ ಎಂದು ಹೇಳುತ್ತದೆ. ಗುಬ್ಬಿ ಅಕ್ಕನಿಗೆ ಪುನಃ ಟಕ್–ಟಕ್, ಟಕ್–ಟಕ್ ಎಂದು ಶಬ್ದ ಕೇಳುತ್ತದೆ. ಆವಾಗ ಗುಬ್ಬಿ ಅಕ್ಕ ಪುನಃ ಏನು ಶಬ್ದ ಎಂದು ಕೇಳುತ್ತದೆ. ಆಗ ಕಾಗೆ ಅಕ್ಕ ಹೇಳುತ್ತದೆ. ಅದು ನನ್ನ ಬಾಯಲ್ಲಿ ಉಳಿದ ಕಡ್ಲೆ ಇತ್ತು ಎಂದು.

ಮುಂಜಾನೆ ಆಗುತ್ತದೆ. ಸೂರ್ಯ ಅಸ್ತಮಿಸುವಾಗ ಗುಬ್ಬಿ ಅಕ್ಕನ ಮಗು ಅಳುತ್ತಿರುತ್ತದೆ. ಗುಬ್ಬಿ ಅಕ್ಕ ಎದ್ದು ಮಗುವನ್ನು ಎತ್ತುತ್ತದೆ. ಎತ್ತುವಾಗ ಮಗುವಿನ ದೇಹದಲ್ಲಿ ಎಲ್ಲಾ ರಕ್ತವಿರುತ್ತದೆ. ಮಗುವಿನ ಎರಡು ಕಣ್ಣುಗಳೂ ಕಾಣೆಯಾಗಿರುತ್ತದೆ. ಮಗುವಿನ ಅಳುವಿಗೆ ಇಡೀ ಮನೆಯೇ ನಡುಗುತ್ತದೆ. ಗುಬ್ಬಿ ಅಕ್ಕನ ಹೃದಯ ಹೊರಗೆ ಬಂದಹಾಗೆ ಆಗುತ್ತದೆ. ಗುಬ್ಬಿ ಅಕ್ಕನ ಅಳು ಕೇಳಲು ಯಾರೂ ಇಲ್ಲ ಕಾಗೆ ಅಕ್ಕ ಮತ್ತೆ ಕಾಣಲು ಸಿಗುವುದಿಲ್ಲ.

ಕಥೆ ಹೇಳಿದವರು: **ರಹ್ಮತ್ ಗುಡ್ಡೆಅಂಗಡಿ**

### 3. ಸಹೋದರ ಮತ್ತು ಸಹೋದರಿ

ಒಂದು ಊರಿನಲ್ಲಿ ಒಬ್ಬರಿದ್ದರು ಅವರಿಗೆ ಎರಡು ಮಕ್ಕಳು ಒಂದು ಹುಡುಗ ಮತ್ತು ಒಂದು ಹುಡುಗಿ. ಆ ಹುಡುಗಿ ಪ್ರೌಢ ವಯಸ್ಸಿಗೆ ಬರುತ್ತಾಳೆ. ವಯಸ್ಸಿಗೆ ಬಂದ ನಂತರ ಬಹಳ ಸುಂದರವಾದ ಹುಡುಗಿ ಆಗುತ್ತಾಳೆ. ಸ್ವಂತ ಅಣ್ಣ ತಂಗಿಯ ಸೌಂಧರ್ಯವನ್ನು ನೋಡಿ ಅಚ್ಚರಿಗೊಳ್ಳುತ್ತಾನೆ. ತಂಗಿಯನ್ನು ಅಣ್ಣ ಮದುವೆ ಆಗಲು ಬಯಸುತ್ತಾನೆ. ಆದರೆ ತಂಗಿ ಸ್ವಂತ ಅಣ್ಣನನ್ನು ಮದುವೆ ಆಗಲು ಒಪ್ಪುವುದಿಲ್ಲ. ತಂಗಿ ಅಣ್ಣನನ್ನು ಮದುವೆಯಾಗಲು ಒಪ್ಪದಿದ್ದಕ್ಕೆ ಒಂದು ದಿನ ಅಣ್ಣ ಅವಳನ್ನು ಓಡಿಸಿಕೊಂಡು ಹೋಗುತ್ತಾನೆ. ಓಡಿಸಿಕೊಂಡು ಹೋಗುವಾಗ ಅಲ್ಲಿ ಒಂದು ನದಿ ಇರುತ್ತದೆ. ಇಬ್ಬರೂ ತಪ್ಪಿ ನದಿಗೆ ಬೀಳುತ್ತಾರೆ. ಬಿದ್ದು ಇಬ್ಬರೂ ಮೀನು ಆಗುತ್ತಾರೆ. ಅಣ್ಣ ಬಾಲೆಮೀನು (ಒಂದು ಜಾತಿಯ ಮೀನು) ಆಗುತ್ತಾನೆ. ತಂಗಿ ಮುಗುಡು ಮೀನು (ಒಂದು ಜಾತಿಯ ಮೀನು) ಆಗುತ್ತಾಳೆ.

ಹಾಗೆ ಒಂದು ದಿನ ಒಬ್ಬ ಅಜ್ಜ ನದಿಗೆ ಗಾಳ ಹಾಕಲು ಹೋಗುತ್ತಾರೆ. ಅವರಿಗೆ ಗಾಳದಲ್ಲಿ ಈ ಎರಡು ಮೀನುಗಳು ಸಿಗುತ್ತವೆ. ಅಜ್ಜ ಆ ಮೀನುಗಳನ್ನು ತೆಗೆದುಕೊಂಡು ಮನೆಗೆ ಹೋಗುತ್ತಾರೆ. ಹೋಗಿ ಮಗಳ ಹತ್ತಿರ ಪದಾರ್ಥ ಮಾಡಲು ಕೊಡುತ್ತಾರೆ. ಮಗಳು ಮೀನನ್ನು ಕತ್ತರಿಸಲು ತಯಾರಿ ನಡೆಸುತ್ತಾಳೆ.

ಆಗ ತಂಗಿ ಆದ ಮುಗುಡು ಮೀನು ಅಜ್ಜನ ಮಗಳ ಬಳಿ ಕೋಪದಿಂದ ಹೇಳುತ್ತಾಳೆ.

ನನ್ನನ್ನು ಕತ್ತರಿಸಿದ ಕತ್ತಿಯಲ್ಲಿ ಅವನನ್ನು ಕತ್ತರಿಸಬೇಡ
ಅವನನ್ನು ಕತ್ತರಿಸಿದ ಕತ್ತಿಯಲ್ಲಿ ನನ್ನನ್ನು ಕತ್ತರಿಸಬೇಡ
ನನ್ನನ್ನು ಹಾಕಿದ ಪಾತ್ರೆಯಲ್ಲಿ ಅವನನ್ನು ಹಾಕಬೇಡ
ಅವನನ್ನು ಹಾಕಿದ ಪಾತ್ರಯಲ್ಲಿ ನನ್ನನ್ನು ಹಾಕಬೇಡ

ಬಳಿಕ ಅಜ್ಜ ಮತ್ತು ಅಜ್ಜನ ಮಗಳು ಮೀನನ್ನು ಚಂದ ಕತ್ತರಿಸಿ ತೊಳೆದು ಅದನ್ನು ಪದಾರ್ಥ ಮಾಡಿ ತಿನ್ನುತ್ತಾರೆ.

ಕಥೆ ಹೇಳಿದವರು: **ಝೊಹರ ಪಾಣೆಮಂಗಳೂರು**

## 4. ತಂಗಿ

ಒಂದು ಊರಿನಲ್ಲಿ ಏಳು ಅಣ್ಣಂದಿರಿಗೆ ಒಂದು ತಂಗಿ ಅವರ ಅಪ್ಪ ಮತ್ತು ಅಮ್ಮ ತೀರಿಹೋಗಿರುತ್ತಾರೆ. ಹಾಗೇ ಏಳು ಅಣ್ಣಂದಿರಿಗೆ ತಂಗಿಯ ಬಳಿ ತುಂಬಾ ಪ್ರೀತಿ. ಒಂದು ದಿನ ಏಳು ಅಣ್ಣಂದಿರು ಮುತ್ತು ತೆಗೆದುಕೊಂಡು ಬರಲು ಏಳು ಸಮುದ್ರ ದಾಟಿ ಹೋಗುತ್ತಾರೆ. ಹೋಗುವಾಗ ಬಾಳೆ ಗಿಡ ಮತ್ತು ತೆಂಗಿನ ಮರದ ಹತ್ತಿರ ಹೇಳಿ ಹೋಗುತ್ತಾರೆ. ನಮ್ಮ ತಂಗಿಗೆ ನೀವೆ ಕಾವಲುಗಾರರು. ನಾವು ಬರುವವರೆಗೆ ನೀವಿಬ್ಬರು ನಮ್ಮ ತಂಗಿಯನ್ನು ಚಂದ ನೋಡಿಕೊಳ್ಳಬೇಕು. ಹಾಗೆ ಹೇಳಿ ಅವರು ಹೋಗುತ್ತಾರೆ.

ಒಂದು ದಿನ ಈ ಹುಡುಗಿಯ ಮನೆಯಲ್ಲಿ ಬೆಂಕಿ ಪೊಟ್ಟಣ ಮುಗಿದಿರುತ್ತದೆ. ಇವಳು ಬೆಂಕಿ ಮಾಡಲು ಬೆಂಕಿಪೊಟ್ಟಣ ತೆಗೆದುಕೊಂಡು ಬರಲು ಒಬ್ಬ ಬ್ರಾಹ್ಮಣನ ಮನೆಗೆ ಹೋಗುತ್ತಾಳೆ. ಅಲ್ಲಿ ಹೋಗಿ ನನ್ನ ಮನೆಯಲ್ಲಿ ಬೆಂಕಿಪೊಟ್ಟಣ ಮುಗಿದಿದೆ. ನನಗೆ ಒಂದು ಪೊಟ್ಟಣ ಬೆಂಕಿಕಡ್ಡಿ ಕೊಡಿ ಎಂದು ಹೇಳುತ್ತಾಳೆ. ಬ್ರಾಹ್ಮಣ ಒಳಗಿನಿಂದ ಬೆಂಕಿಪೊಟ್ಟಣ ತಂದು ಕೊಡುತ್ತಾನೆ. ಅವಳು ಅದನ್ನು ತೆಗೆದುಕೊಂಡು ಮನೆಗೆ ಹೋಗುತ್ತಾಳೆ. ಬೆಂಕಿ ಮಾಡುತ್ತಾ ಇರುತ್ತಾಳೆ.

ಮನೆಯಲ್ಲಿ ಯಾರು ಇಲ್ಲವೆಂದು ಗೊತ್ತಾಗಿ ಬ್ರಾಹ್ಮಣ ಮೆಲ್ಲ ಹುಡುಗಿಯ ಮನೆಗೆ ಬಂದು ಹೇಳುತ್ತಾನೆ. ಏಳು ಸಮುದ್ರವನ್ನು ದಾಟಿ ಹೋದವರು ಬಂದರಮ್ಮ ಬಾಗಿಲು ತೆಗೆ. ಇವನನ್ನು ನೋಡಿ ತೆಂಗಿನ ಮರ ಮತ್ತು ಬಾಳೆ ಗಿಡ ಹೇಳುತ್ತದೆ. ಏಳು ಸಮುದ್ರ ದಾಟಿ ಹೋದವರು ಬಂದಿಲ್ಲಮ್ಮ ಬಾಗಿಲು ತೆಗೆಯಬೇಡ. ಆಗ ಬ್ರಾಹ್ಮಣ ಕೋಪದಿಂದ ಅವನ ಎರಡು ದವಡೆ ಹಲ್ಲುಗಳನ್ನು ಕಚ್ಚಿ ಬಾಗಿಲಿನ

ಕೆಳಗೆ ಹಾಕಿ ಹೋಗುತ್ತಾನೆ.

ಆದ ಮೇಲೆ ಏಳು ಸಮುದ್ರವನ್ನು ದಾಟಿ ಹೊರಗೆ ಹೋದ ಅಣ್ಣಂದಿರು ಮುತ್ತು ತೆಗೆದುಕೊಂಡು ಬರುತ್ತಾರೆ. ಅವರು ಬರುವುದನ್ನು ನೋಡಿ ತೆಂಗಿನ ಮರ ಮತ್ತು ಬಾಳೆ ಗಿಡ ಹೇಳುತ್ತದೆ. ಏಳು ಸಮುದ್ರ ದಾಟಿ ಹೊರಗೆ ಹೋದವರು ಬಂದರು ಬಾಗಿಲು ತೆಗೆಯಮ್ಮ. ಆಗ ಆ ಹುಡುಗಿ ಬಂದು ಬಾಗಿಲು ತೆಗೆಯುತ್ತಾಳೆ. ಬಾಗಿಲು ತೆಗೆಯುವಾಗ ಬ್ರಾಹ್ಮಣ ಕೆಳಗೆ ಹಾಕಿದ ದವಡೆ ಹಲ್ಲು ಅವಳ ಕಾಲಿಗೆ ಚುಚ್ಚುತ್ತದೆ. ಆಗ ಏಳೂ ಅಣ್ಣಂದಿರು ಅವಳನ್ನು ರಾಜನ ಬಳಿ ಕರೆದುಕೊಂಡು ಹೋಗುತ್ತಾರೆ. ರಾಜ ಅವಳಿಗೆ ಚುಚ್ಚಿದ ದವಡೆ ಹಲ್ಲನ್ನು ತೆಗೆದು ಅವಳನ್ನು ಮದುವೆಯಾಗುತ್ತಾನೆ.

ಕಥೆ ಹೇಳಿದವರು: **ಮರಿಯಮ್ಮ ಮೊಡಂತ್ಯಾರ್**

## 5. ಗುಬ್ಬಿ ಮತ್ತು ಕಾಗೆ

ಒಂದು ಊರಿನಲ್ಲಿ ಕಾಗೆ ಮತ್ತು ಗುಬ್ಬಚ್ಚಿ ಇರುತ್ತದೆ. ಕಾಗೆಗೆ ಒಂದು ದಿನ ತುಂಬಾ ಹಸಿವಾಗುತ್ತದೆ. ತಿನ್ನಲು ಏನೂ ಸಿಗುವುದಿಲ್ಲ. ಆಗ ಅದಕ್ಕೆ ಗುಬ್ಬಚ್ಚಿಯ ನೆನಪಾಗುತ್ತದೆ. ಕಾಗೆ ಮೆಲ್ಲನೆ ಗುಬ್ಬಚ್ಚಿಯ ಮನೆಗೆ ಅದರ ಮಗುವನ್ನು ತಿನ್ನಲು ಹೋಗುತ್ತದೆ. ಹೋಗಿ ಹೇಳುತ್ತದೆ 'ಗುಬ್ಬಿ ಅಮ್ಮ, ಗುಬ್ಬಿ ಅಮ್ಮ, ಒಮ್ಮೆ ಬಾಗಿಲು ತೆಗೆ'. ಆಗ ಗುಬ್ಬಚ್ಚಿ ಯಾರು ಅಂತ ಕೇಳುತ್ತದೆ. ನಾನು ಕಾಗೆ ಎಂದು ಹೇಳುತ್ತದೆ. ಗುಬ್ಬಚ್ಚಿ ಹೇಳುತ್ತದೆ 'ನಿಲ್ಲು ನನ್ನ ಮಕ್ಕಳನ್ನು ಸ್ನಾನ ಮಾಡಿಸುತ್ತಿದ್ದೇನೆ'. ಇನ್ನೊಮ್ಮೆ ಕಾಗೆ ಕರೆಯುತ್ತದೆ. 'ಗುಬ್ಬಿ ಅಮ್ಮ ಗುಬ್ಬಿ ಅಮ್ಮ ಒಮ್ಮೆ ಬಾಗಿಲು ತೆಗೆ'. ಗುಬ್ಬಿ ಅಮ್ಮ ಹೇಳುತ್ತದೆ 'ನಿಲ್ಲು ನನ್ನ ಮಕ್ಕಳಿಗೆ ಊಟ ಕೊಡುತ್ತಿದ್ದೇನೆ'. ಕಾಗೆ ಇನ್ನೊಮ್ಮೆ ಬಾಗಿಲು ತಟ್ಟಿ ಬಡಿದು ಹೇಳುತ್ತದೆ, 'ಗುಬ್ಬಿ ಅಮ್ಮ ಗುಬ್ಬಿ ಅಮ್ಮ ಒಮ್ಮೆ ಬಾಗಿಲು ತೆಗೆ'. ಗುಬ್ಬಿ ಅಮ್ಮ ಹೇಳುತ್ತದೆ 'ನಿಲ್ಲು ನನ್ನ ಮಕ್ಕಳನ್ನು ಮಲಗಿಸುತ್ತಿದ್ದೇನೆ'. ಆಗ ಬಾಗಿಲು ತೆಗೆಯದಿದ್ದದ್ದನ್ನು ನೋಡಿ ಕಾಗೆ ಗುಬ್ಬಚ್ಚಿಗೆ ಆಸೆ ಮೂಡಿಸುತ್ತದೆ. ನಾನು ನಿನಗೆ ಮತ್ತು ನಿನ್ನ ಮಕ್ಕಳಿಗೆ ತಿನ್ನಲು ಕಡ್ಲೆ ತೆಗೆದುಕೊಂಡು ಬಂದಿದ್ದೇನೆ ಒಮ್ಮೆ ಬಾಗಿಲು ತೆಗೆ ಅಂತ ಹೇಳುತ್ತದೆ. ಆದರೂ ಕೂಡ ಗುಬ್ಬಚ್ಚಿ ಬಾಗಿಲು ತೆಗೆಯುವುದಿಲ್ಲ. ಬಾಗಿಲು ತೆಗೆಯದ್ದನ್ನು ಕಂಡು ಕಾಗೆ ನಿರಾಸೆಯಿಂದ ಹೋಗುತ್ತದೆ.

ಕಥೆ ಹೇಳಿದವರು: **ರಹ್ಮತ್ ಗುಡ್ಡೆಅಂಗಡಿ.**

## 6. ಬುದ್ಧಿವಂತ

ಅರಬಿಸ್ಥಾನ ಎಂಬ ಊರಿನಲ್ಲಿ ಅಬ್ಬಾಸ್ ಎಂಬ ಒಬ್ಬ ಅರಬಿ ಇದ್ದ. ಅವನು ಒಂದು ಒಂಟೆಯನ್ನು ಸಾಕಿದ್ದ. ಒಂದು ದಿನ ಅವನು ದೂರದ ಪೇಟೆಗೆ ವಹಿವಾಟು ಮಾಡಲು ಹೋಗಲು ತಯಾರಿ ನಡೆಸುತ್ತಾನೆ. ಅಬ್ಬಾಸ್ ಒಂಟೆಯ ಮೇಲೆ ಗೇರು ಬೀಜದ ಎಣ್ಣೆ ಮತ್ತು ಅವನಿಗೆ ಬೇಕಾದ ಸಾಮಾಗ್ರಿಗಳನ್ನು ಇಟ್ಟು ಒಂಟೆಯ ಮೇಲೆ ಹತ್ತಿ ಕುಳಿತುಕೊಂಡು ಹೋಗುತ್ತಾನೆ.

ಹೋಗಿ ಒಂದು ಹೊಯಿಗೆಯ ಪ್ರದೇಶವನ್ನು ತಲುಪುತ್ತಾನೆ. ಅಲ್ಲಿ ಬಿಸಿಲು ತಾಗಿ ಅಬ್ಬಾಸ್‌ಗೆ ಅಯಾಸ ಆದ ಹಾಗೆ ಆಗುತ್ತದೆ. ಅವನಿಗೆ ಅರ್ಧ ದಾರಿ ಮುಟ್ಟಿದ ಮೇಲೆ ಒಂದು ಮರ ಕಾಣುತ್ತದೆ. ಆ ಮರದ ನೆರಳಿಗೆ ಒಂಟೆಯನ್ನು ನಿಲ್ಲಿಸಿ ಸ್ವಲ್ಪ ಹೊತ್ತು ಮಲಗುತ್ತಾನೆ. ಅವನಿಗೆ ಎಚ್ಚರವಾಗಿ ನೋಡುವಾಗ ಅವನ ಒಂಟೆ ಇರುವುದಿಲ್ಲ. ಅವನಿಗೆ ಕಂಗಾಲಾಗುತ್ತದೆ. ಅವನ ಒಂಟೆ ಕಾಣುವುದಿಲ್ಲ. ಸುತ್ತ ಮುತ್ತಲೂ ನೋಡುತ್ತಾರೆ ಎಲ್ಲಿಯೂ ಒಂಟೆ ಕಾಣುವುದಿಲ್ಲ.

ವಹಿವಾಟು ಮಾಡಲು ಇದ್ದ ಗೇರುಬೀಜ ಅಲ್ಲದೆ ಅವನ ಊಟ, ಕುಡಿಯಲು ನೀರು ಎಲ್ಲವೂ ಅದರಲ್ಲಿತ್ತು ಅಬ್ಬಾಸ್ ಬೇಸರದಲ್ಲಿ ಮುಳುಗಿ ಹೋಗುತ್ತಾನೆ. ಏನು ಮಾಡುವುದು ಎಂದು ಗೊತ್ತಾಗದೆ ಅವನು ಕಾಣೆಯಾದ ಒಂಟೆಯನ್ನು ಹುಡುಕಿಕೊಂಡು ಹೋಗುತ್ತಾನೆ.

ಸ್ವಲ್ಪ ದೂರ ನಡೆದುಕೊಂಡು ಹೋಗುವಾಗ ಅಬ್ಬಾಸ್‌ಗೆ ಒಬ್ಬ ಸಿಗುತ್ತಾನೆ. ಅಬ್ಬಾಸ್ ಅವನಿಗೆ 'ಅಸ್ಸಲಾಂ ಅಲೈಕುಂ' ಅಣ್ಣ ಎಂದು ಹೇಳುತ್ತಾನೆ. ಆ ವ್ಯಕ್ತಿ 'ವ ಅಲೈಕುಂ ಸಲಾಂ' ಎಂದು ಪ್ರತಿಕ್ರಿಯಿಸುತ್ತಾನೆ. ನನ್ನ ಹೆಸರು ಅಬ್ಬಾಸ್ ನಿಮ್ಮ ಹೆಸರು ಏನು ಅಣ್ಣಾ ಎಂದು ಕೇಳುತ್ತಾನೆ. ಆವಾಗ ಅವರು ನನ್ನ ಹೆಸರು ಉಮರ್ ಎಂದು ಹೇಳುತ್ತಾರೆ.

ಆಗ ಅವರ ಹತ್ತಿರ ಅಬ್ಬಾಸ್ ಹೇಳುತ್ತಾರೆ ನಾನು ಒಂದು ವಹಿವಾಟಿಗೆ ಬಂದದ್ದು. ಪೇಟೆಗೆ ಹೋಗುತ್ತಿರುವಾಗ ಬಿಸಿಲಿನಲ್ಲಿ ನನಗೆ ಸ್ವಲ್ಪ ಆಯಾಸ ಆಯಿತು. ಹಾಗೆ ನಾನು ನನ್ನ ಒಂಟೆಯಿಂದ ಇಳಿದು ಸ್ವಲ್ಪ ಹೊತ್ತು ಮರದ ಕೆಳಗೆ ಮಲಗಿದ್ದೆ. ಅಲ್ಲಿಯೇ ನನಗೆ ನಿದ್ದೆ ಹತ್ತುತ್ತದೆ. ಎಚ್ಚರಿಕೆಯಾಗುವಾಗ ನನ್ನ ಒಂಟೆ ಕಾಣುವುದಿಲ್ಲ. ನೀವು ಏನಾದರು ನನ್ನ ಒಂಟೆಯನ್ನು ನೋಡಿದ್ದೀರಾ? ಎಂದು ಕೇಳುತ್ತಾನೆ.

ಆಗ ಉಮ್ಮರ್ ಎಂಬ ವ್ಯಕ್ತಿ ಕೇಳುತ್ತಾರೆ ನಿಮ್ಮ ಒಂಟೆಯ ಮೇಲೆ ಸರಕು ಏನಾದರೂ ಇತ್ತಾ? ಆಗ ಅಬ್ಬಾಸ್ 'ಇತ್ತು ಇತ್ತು' ಎಂದು ಹೇಳುತ್ತಾನೆ.

ಉಮರ್ ಕೇಳುತ್ತಾರೆ, ಅದರ ಒಂದು ಕಾಲು ಕುಂಟಿತ್ತಾ? ಅಬ್ಬಾಸ್ 'ಇತ್ತು ಇತ್ತು' ಎಂದ ಹೇಳುತ್ತಾನೆ. ಪುನಃ ಉಮರ್ ಕೇಳುತ್ತಾರೆ 'ಅದರ ಎಡ ಭಾಗದ ಕಣ್ಣು ಕಾಣುವುದಿಲ್ಲವಲ್ಲ'. ಅಬ್ಬಾಸ್ ಹೇಳುತ್ತಾರೆ 'ಹೌದು ಹೌದು' ಕಾಣುವುದಿಲ್ಲ. ನಿಜ ಹೇಳಿದಿರಿ ನೀವು. ನೀವು ನೋಡಿದ್ದೀರಾ ಎಂದು ಕೇಳುತ್ತಾರೆ. ಪುನಃ ಉಮ್ಮರ್ ಕೇಳುತ್ತಾರೆ ಅದರ ಎರಡು ಹಲ್ಲುಗಳಿಲ್ಲವಲ್ಲಾ? ಆಗ ಅಬ್ಬಾಸ್ ಹೇಳುತ್ತಾರೆ 'ಹೌದು ಮಾರಾಯರೇ, ನೀವು ಹೇಳುವುದೆಲ್ಲಾ ನಿಜ. ಎಲ್ಲಿ ಇದೆ, ಅಂತ ಬೇಗ ಹೇಳಿ. ಎಂದು ಹೇಳುತ್ತಾನೆ. ಉಮ್ಮರ್ ಪುನಃ ಕೇಳುತ್ತಾನೆ 'ಅದರ ಮೇಲೆ ಗೇರು ಬೀಜ ಮತ್ತು ಎಣ್ಣೆ ಇತ್ತಾ? ಮತ್ತೆ ನಿನ್ನೆ ನೀವು ನಿಮ್ಮ ಒಂಟೆಗೆ ಹುರುಳಿ ಬೇಯಿಸಿ ತಿನ್ನಿಸಿದ್ದೀರಾ ಏನು? ಆಗ ಅಬ್ಬಾಸ್‌ನಿಗೆ ತಾಳ್ಮೆ ಇರುವುದಿಲ್ಲ. ಅಬ್ಬಾಸ್ ಹೇಳುತ್ತಾರೆ 'ಹೌದು ಮಾರ್ರಾಯರೇ' ನೀವು ಹೇಳುವುದು ನೂರಕ್ಕೆ ನೂರು ಸತ್ಯ. ನೀವು ಒಮ್ಮೆ ನನಗೆ ನನ್ನ ಒಂಟೆಯನ್ನು ತೋರಿಸಿ ಆವಾಗ ಉಮ್ಮರ್ ಹೇಳುತ್ತಾರೆ ನಿಮ್ಮ ಒಂಟೆಯನ್ನು ನಾನು ನೋಡಿಲ್ಲ ಮಾರ್ರಾಯರೇ ಆಗ ಅಬ್ಬಾಸ್‌ನಿಗೆ ಎಲ್ಲಿಲ್ಲದ ಕೋಪ ಬರುತ್ತದೆ. ಅಬ್ಬಾಸ್ ಹೇಳುತ್ತಾರೆ. ನೀವು ಸುಳ್ಳು ಹೇಳುತ್ತಿದ್ದೀರಾ, ನಿಮ್ಮನ್ನು ನಾನು ಬಿಡುವುದಿಲ್ಲ. ನನಗೆ ನನ್ನ ಒಂಟೆಯನ್ನು ಮರ್ಯಾದೆಯಲ್ಲಿ ತೋರಿಸಿ ಹಾಗೆ ಇಬ್ಬರಿಗೆ ಚರ್ಚೆ ಆಗುತ್ತದೆ. ಜನರೆಲ್ಲ ಬಂದು ಸೇರುತ್ತಾರೆ. ವಿಷಯ ಗೊತ್ತಾಗಿ ಜನರು ಅಬ್ಬಾಸ್‌ನ ಜೊತೆ ಸೇರುತ್ತಾರೆ.

ವಿಷಯ ರಾಜನ ಹತ್ತಿರ ಹೋಗಿ ಮುಟ್ಟುತ್ತದೆ. ರಾಜ ಉಮ್ಮರ್‌ನ ಬಳಿ ನೀವು ಇವರ ಒಂಟೆಯನ್ನು ನೋಡಿದ್ದೀರ 'ನೀವು ಇವರ ಒಂಟೆಯ ರೂಪವನ್ನೆಲ್ಲಾ ನೋಡಿದ ಹಾಗೆ ಹೇಳುತ್ತಿದ್ದೀರ' ಅಂತೆ ಹೌದ? ಎಂದು ಕೇಳುತ್ತಾನೆ. ಆಗ ಉಮ್ಮರ್ ಹೇಳುತ್ತಾರೆ, 'ರಾಜ ನಾನು ಇವರ ಒಂಟೇ ಹೋದ ಕಾಲಿನ ಹೆಜ್ಜೆಯನ್ನು ನೋಡಿದೆ. ಆದರೆ ಮೂರು ಕಾಲುಗಳ ಹೆಜ್ಜೆ ಕಾಣಿಸಿತು. ಒಂದು ಕಾಲು ಎಳೆದುಕೊಂಡ ಹಾಗೆ ಕಾಣಿಸಿತು. ಅದಕ್ಕೆ ನಾನು ಒಂದು ಕಾಲು ಕುಂಟಲ್ಲವೇ ಎಂದು ಕೇಳಿದೆ. ಮತ್ತೆ ಒಂಟೆ ಹೋದ ದಾರಿಯಲ್ಲಿ ಬಲ ಭಾಗದಲ್ಲಿ ಮಾತ್ರ ಸೊಪ್ಪು ತಿಂದದ್ದು ಕಾಣಿಸಿತು. ಎಡ ಭಾಗದಲ್ಲಿ ಕಾಣಿಸಲಿಲ್ಲ. ಅದಕ್ಕೆ ಒಂದೇ ಕಣ್ಣು ಇರಬಹುದು ಎಂದು ವಿಚಾರಿಸಿ ಕೇಳಿದೆ ನಾನು, ಆಗ ರಾಜ ಕೇಳುತ್ತಾನೆ ಸರಿ. ಆದರೆ ಅದರ ಎರಡು ಹಲ್ಲುಗಳು ಇಲ್ಲ ಎಂದು ನಿಮಗೆ ಹೇಗೆ ಗೊತ್ತಾಯಿತು? ಆಗ ಉಮ್ಮರ್ ಹೇಳುತ್ತಾರೆ. ಅದು ಕಚ್ಚಿದ ಎಲೆಗಳಲ್ಲಿ ಎರಡು ಹಲ್ಲಿನಷ್ಟು ಅಗಲದಲ್ಲಿ ಎಲೆ ತುಂಡಾಗದೆ ಇದ್ದದ್ದನ್ನು ನೋಡಿದೆ. ಹಾಗೆ ನಾನು ಹೇಳಿದೆ ರಾಜ ಎಂದು ಹೇಳುತ್ತಾನೆ. ಮತ್ತೆ ಒಂಟೆ

ಹೋಗುತ್ತಾ ಇದ್ದ ದಾರಿಯಲ್ಲಿ ಗೇರುಬೀಜ ಚೆಲ್ಲಿತ್ತು, ಅದರಲ್ಲಿ ಎಣ್ಣೆ ಕೂಡ ಇತ್ತು. ಇರುವೆ ಅದರ ತುಂಬಾ ಇತ್ತು. ಅದು ಹುರುಳಿ ತಿಂದಿತ್ತು ಎಂದು ನಿಮಗೆ ಹೇಗೆ ಗೊತ್ತಾಯಿತು. ಆಗ ಉಮ್ಮರ್ ಹೇಳುತ್ತಾರೆ ಆ ಒಂಟೆಯ ಮಲವಿಸರ್ಜನೆಯಲ್ಲಿ ಕರಗದ ಕೆಲವು ಹುರುಳಿಗಳಿದ್ದವು. ನಿಜವಾಗಿಯು ನಾನು ಒಂಟೆಯನ್ನು ನೋಡಿಲ್ಲ ಎಂದು ರಾಜನ ಬಳಿ ಹೇಳುತ್ತಾನೆ.

ಉಮ್ಮರ್‌ನ ಮಾತು ಕೇಳಿ ಅವರ ಬುದ್ದಿವಂತಿಕೆಯನ್ನು ನೋಡಿ ರಾಜನಿಗೆ, ಜನರಿಗೆ ಎಲ್ಲರಿಗೂ ಸಂತೋಷವಾಗುತ್ತದೆ. ಅಬ್ಬಾಸ್‌ಗೂ ಉಮ್ಮರ್‌ನ ತಪ್ಪು ಇಲ್ಲ ಎಂದು ಅರಿವಾಗುತ್ತದೆ. ಅಬ್ಬಾಸ್ ಉಮ್ಮರ್‌ನನ್ನು ತಬ್ಬಿಕೊಂಡು ಕ್ಷಮೆ ಕೇಳುತ್ತಾನೆ. ಮತ್ತೆ ಅವರು ಇಬ್ಬರೂ ಒಟ್ಟಿಗೆ ಒಂಟೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಒಂಟೆ ಒಂದು ಕಡೆ ಮೇಯುತ್ತಾ ಇತ್ತು.

ಕಥೆ ಹೇಳಿದವರು: **ಎಂ.ಎಂ. ಅಬ್ದುಲ್ ಸಲೀಂ, ಪಾಲಿಬೆಟ್ಟ**

## 7. ಚಾಲಾಕಿ ಮಗ

ಒಂದು ಊರಿನಲ್ಲಿ ಅಮ್ಮ ಮತ್ತು ಮಗ ಇರುತ್ತಾರೆ. ಅಮ್ಮನೇ ಕೆಲಸ ಮಾಡಿ ಮನೆಯನ್ನು ನೋಡಿಕೊಳ್ಳುತ್ತಾ ದಿನ ಕಳೆಯುತ್ತಿದ್ದರು. ಅಮ್ಮನಿಗೆ ವಯಸ್ಸಾಗುತ್ತದೆ. ಅಮ್ಮನಿಗೆ ಕೆಲಸ ಮಾಡಲು ಆಗುವುದಿಲ್ಲ ಹಾಗೆ ಅಮ್ಮ ಒಂದು ದಿನ ಮಗನನ್ನು ಕರೆದು ಹೇಳುತ್ತಾಳೆ ನನಗೆ ಉಷಾರಿಲ್ಲ ಮಗನೇ. ಇನ್ನು ನೀನೆ ಕೆಲಸ ಮಾಡಲು ಹೋಗಬೇಕು ಎಂದು ಹೇಳುತ್ತಾರೆ. ಹಾಗೆ ಮಗ ನಡೆದುಕೊಂಡು ಒಂದು ಊರಿಗೆ ಹೋಗುತ್ತಾನೆ. ಅಲ್ಲಿ ಒಂದು ಮನೆಯಲ್ಲಿ ಅಜ್ಜಿ ದೋಸೆ ಮಾಡುತ್ತಾ ಇರುತ್ತಾಳೆ. ಇವನನ್ನು ನೋಡಿ ಅಜ್ಜಿಗೆ ಬಹಳ ಸಂತೋಷವಾಗುತ್ತದೆ. ಅವನಿಗೆ ಬೇಕಾದಷ್ಟು ದೋಸೆ ತಿನ್ನಲು ಕೊಡುತ್ತಾಳೆ ಹಾಗೆ ಅಜ್ಜಿ ಕುಡುಪು (ಒಂದು ರೀತಿಯ ಪಾತ್ರೆ) ತೆಗೆದುಕೊಂಡು ಬರಲು ಹೊರಗೆ ಹೋದಾಗ ಇವನು ಎರಡು ದೋಸೆ ತೆಗೆದು ಹೊಟ್ಟೆ ತುಂಬಾ ತಿನ್ನುತ್ತಾನೆ. ಅಜ್ಜಿ ಒಳಗೆ ಬಂದು ಅವನಿಗೆ ಚಟ್ನಿ ಹಾಕಿ ಅವನನ್ನು ಸತ್ಕರಿಸುತ್ತಾಳೆ. ಆದ ಮೇಲೆ ಅಜ್ಜಿ ನಿನ್ನ ಹೆಸರು ಏನು ಎಂದು ಕೇಳುತ್ತಾಳೆ. ಅದಕ್ಕೆ ಅವನು 'ಸುಳ್ಳು' ಎಂದು ಹೇಳುತ್ತಾನೆ. ಅವನು ಮನೆಗೆ ಹೋಗುವಾಗ ಮೆಲ್ಲ ಅಜ್ಜಿ ಮಾಡಿದ ಎಲ್ಲಾ ದೋಸೆಗಳನ್ನು ಕದ್ದುಕೊಂಡು ಓಡಿಹೋಗುತ್ತಾನೆ. ಹಾಗೆ ಓಡಿ ಹೋಗಿ ಒಂದು ಊರಿಗೆ ತಲುಪುತ್ತಾನೆ. ಅಲ್ಲಿ ಅಗಸ ಬಟ್ಟೆ ತೊಳೆಯುತ್ತಿರುತ್ತಾರೆ. ಅಲ್ಲಿಗೆ ಹೋಗಿ 'ಸುಳ್ಳು' ನಿನ್ನ ಮಕ್ಕಳೆಲ್ಲಾ ಗಲಾಟೆ ಮಾಡುತ್ತಿದ್ದಾರೆ.

ನಿನ್ನ ಹೆಂಡತಿ ತೀರಿಹೋಗಿದ್ದಾಳೆ ಎಂದು ಅಗಸನ ಬಳಿ ಹೇಳುತ್ತಾನೆ. ಅದಕ್ಕೆ ಮಡ್ಯಲ ನಿನ್ನ ಹೆಸರು ಏನು ಅಂತ ಕೇಳುತ್ತಾನೆ ಅದಕ್ಕೆ ಸುಳ್ಳು 'ಬಿರುಗಾಳಿ' ಎಂದು ಹೇಳುತ್ತಾನೆ. ಅಗಸ ಅವನಲ್ಲಿ ಅಲ್ಲಿ ನೋಡಿಕೊಳ್ಳಲು ಹೇಳಿ ಹೆದರಿಕೊಂಡು ಮನೆಗೆ ಹೋಗುತ್ತಾನೆ. ಅಲ್ಲಿ ಹೆಂಡತಿ ಮಕ್ಕಳು ಆಟವಾಡುತ್ತಿರುತ್ತಾರೆ. ಅವನಿಗೆ ತುಂಬಾ ಕೋಪ ಬರುತ್ತದೆ. ಬಿರುಗಾಳಿಗೆ ಎರಡು ಹೊಡಿಯಬೇಕು ಎಂದು ಬರುತ್ತಾನೆ. ಅಲ್ಲಿ ಮುಟ್ಟುವಾಗ ಬಟ್ಟೆ ಇರುವುದಿಲ್ಲ. ಅವನು ಕೂಡ ಇರುವುದಿಲ್ಲ. ಅವನಿಗೆ ಬೇಸರವಾಗುತ್ತದೆ. ಹಾಗೆ ಬಿರುಗಾಳಿ ಓಡಿಕೊಂಡು ಹೋಗಿ ಒಂದು ಊರಿಗೆ ತಲುಪುತ್ತಾನೆ. ಅಲ್ಲಿ ಒಬ್ಬ ಕುದುರೆಗೆ ನೀರಿಲ್ಲದೆ ಬೇಸರದಿಂದ ಕೂತಿರುತ್ತಾನೆ. ಕುದುರೆ ಅವನ ಹತ್ತಿರವೇ ಇರುತ್ತದೆ. ಬಿರುಗಾಳಿ ಅವನಲ್ಲಿ ಏನಾಯಿತು ಅಣ್ಣಾ ನೀವು ಯಾಕೆ ಕೂತಿದ್ದೀರಾ ಎಂದು ಕೇಳುತ್ತಾನೆ. ಅದಕ್ಕೆ ಅವನು ನನಗೆ ಮತ್ತು ನನ್ನ ಕುದುರೆಗೆ ಕುಡಿಯಲು ನೀರಿಲ್ಲ ಎಂದು ಬೇಸರದಿಂದ ಹೇಳುತ್ತಾನೆ. ಅದಕ್ಕೆ ಬಿರುಗಾಳಿ ಇಲ್ಲಿ ಹತ್ತಿರದಲ್ಲಿ ನೀರು ಇದೆ. ಒಂದು ಅರಣ್ಯವನ್ನು ದಾಟಿ ಹೋದರೆ ನೀರು ಸಿಗುತ್ತದೆ ಎಂದು ಹೇಳುತ್ತಾನೆ. ಅದಕ್ಕೆ ಕುದುರೆ ಮೇಯಿಸುವವನು ನಿನ್ನ ಹೆಸರು ಏನು ಎಂದು ಕೇಳುತ್ತಾನೆ. ಅದಕ್ಕೆ ಬಿರುಗಾಳಿ ನನ್ನ ಹೆಸರು 'ಹಳೆಯ ಸಾಲ' ಎಂದು ಹೇಳುತ್ತಾನೆ. ಹಾಗೆ ಅವನು ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಹಳೆಯ ಸಾಲವನ್ನು ನಿಲ್ಲಿಸಿ ಒಂದು ಬಾಲ್ದಿ ಹಿಡಿದುಕೊಂಡು ಹೋಗುತ್ತಾನೆ. ಅವನು ಹೋಗುವುದನ್ನು ಕಾಯುತ್ತಿದ್ದ ಹಳೆಯ ಸಾಲ ಅವನ ಕುದುರೆಯ ಮೇಲೆ ಕುಳಿತುಕೊಂಡು ಹೋಗುತ್ತಾನೆ. ಕುದುರೆ ಮೇಯಿಸುವವನಿಗೆ ನೀರು ಸಿಗುವುದಿಲ್ಲ. ಬೇಸರದಿಂದ ಹಿಂದೆ ಬರುತ್ತಾನೆ. ನೋಡುವಾಗ ಅವನ ಕುದುರೆ ಕೂಡ ಇರುವುದಿಲ್ಲ. ಹಳೆಯ ಸಾಲ ಕೂಡ ಇರುವುದಿಲ್ಲ. ಅವನು ಅಳುತ್ತಾ ಕುಳಿತುಕೊಳ್ಳುತ್ತಾನೆ. ಹಳೆಯ ಸಾಲ ಕುದುರೆಯಲ್ಲಿ ಕೂತುಕೊಂಡು ಬೇರೆ ಊರಿಗೆ ಹೋಗುತ್ತಾನೆ. ಅಲ್ಲಿ ಅಮ್ಮ ಮಗಳು ನಡೆದುಕೊಂಡು ಹೋಗುತ್ತಿರುತ್ತಾರೆ. ಮಗಳನ್ನು ನೋಡಿ ಮದುವೆಯಾಗಲು ಬಯಸುತ್ತಾನೆ. ಅವನು ಅವರ ಹತ್ತಿರ ಬಂದು ನಿಮಗೆ ನಡೆಯಲು ಆಯಾಸವಾಗುತ್ತಿಲ್ಲವಾ. ನನ್ನ ಕುದುರೆಯ ಮೇಲೆ ನಿಮ್ಮ ಮಗಳು ಕುಳಿತುಕೊಳ್ಳಲಿ ಎಂದು ಹೇಳುತ್ತಾನೆ. ನೀವು ಮೆಲ್ಲನೆ ಬನ್ನಿ ನಾನು ಮೆಲ್ಲ ಕುದುರೆಯನ್ನು ಓಡಿಸುತ್ತೇನೆ. ಮಾತನಾಡಿಕೊಂಡು ಹೋಗುವ ಎಂದು ಹೇಳುತ್ತಾನೆ. ಹಾಗೆ ಮಗಳ ಅಮ್ಮ ನಿನ್ನ ಹೆಸರು ಏನು ಎಂದು ಕೇಳುತ್ತಾರೆ. ಅದಕ್ಕೆ ಹಳೆಯ ಸಾಲ ನನ್ನ ಹೆಸರು 'ಅಳಿಯ' ಎಂದು ಹೇಳುತ್ತಾನೆ. ಹಾಗೇ ಮೆಲ್ಲ ಮೆಲ್ಲ ಓಡಿ ಕುದುರೆ ಜೋರಾಗಿ

ಓಡಿಕೊಂಡು ಹೋಗುತ್ತದೆ. ಅವರು ಅದರ ಹಿಂದೆ ಬೊಬ್ಬೆ ಹಾಕುತ್ತಾ ಓಡಿಕೊಂಡು ಹೋಗುತ್ತಾರೆ. ಆದರೂ ಮಗಳು ಸಿಗುವುದಿಲ್ಲ. ಹಾಗೆ ಅಳಿಯ ಮನೆಗೆ ಹೋಗುತ್ತಾನೆ. ಅಮ್ಮನನ್ನು ನೋಡಿ ಅಮ್ಮ ನಿಮಗೆ ತಿನ್ನಲು ದೋಸೆ ತಂದಿದ್ದೇನೆ. ಹಾಕಲು ಬಟ್ಟೆ ತೆಗೆದುಕೊಂಡು ಬಂದಿದ್ದೇನೆ. ಆಚೆ ಈಚೆ ಹೋಗಲು ಕುದುರೆಯನ್ನು ತಂದಿದ್ದೇನೆ, ಮನೆಯಲ್ಲಿ ನಿಮಗೆ ಸಹಾಯ ಮಾಡಲು ಸೊಸೆಯನ್ನು ಕರೆದುಕೊಂಡು ಬಂದಿದ್ದೇನೆ ಎಂದು ಮಗನು ಹೇಳುತ್ತಾನೆ. ಹೀಗೆ ಈ ನಾಲ್ವರು ಅಜ್ಜಿ, ಅಗಸ, ಕುದುರೆ ಮೇಯಿಸುವವನು, ಅತ್ತೆ ಸೀದಾ ಒಂದು ಪಂಚಾಯತ್ ಕಟ್ಟೆಗೆ ಹೋಗುತ್ತಾರೆ. ಅಲ್ಲಿ ಅಜ್ಜಿ ಹೇಳುತ್ತಾಳೆ ನನ್ನ ದೋಸೆಯನ್ನು 'ಸುಳ್ಳು' ತೆಗೆದುಕೊಂಡು ಹೋಗಿದ್ದಾನೆ. ಇದನ್ನು ಕೇಳಿ ಪಂಚಾಯತಿಗೆದಾರನಿಗೆ ಕೋಪಬರುತ್ತದೆ. ಅಜ್ಜಿ ಎಲ್ಲಾ ಸುಳ್ಳು ಹೇಳುವುದು ಅಂತ ಅನಿಸಿಕೊಂಡು ಅವಳನ್ನು ಹೊರಗೆ ಹಾಕುತ್ತಾನೆ. ಎರಡನೆಯದಾಗಿ ಅಗಸ ಬಂದು ನನ್ನ ಬಟ್ಟೆಗಳನ್ನೆಲ್ಲ 'ಬಿರುಗಾಳಿ' ತೆಗೆದುಕೊಂಡು ಹೋದನು ಎಂದು ಹೇಳುತ್ತಾನೆ. ಅದಕ್ಕೆ ಪಂಚಾಯತ್ ಮಾಡುವವನು ಬಟ್ಟೆಗಳನ್ನು ಎಲ್ಲಾ ವಸ್ತುಗಳನ್ನು ಗಾಳಿ ತೆಗೆದುಕೊಂಡು ಹೋಗುತ್ತದೆ. ನಿನಗೇನು ತಲೆ ಸರಿಯಿಲ್ಲವಾ, ನೀನು ಏನು ಮಾತನಾಡುವುದು ಎಂದು ಹೇಳಿ ಅವನಿಗೆ ಹೊಡೆದು ಹೊರಗೆ ಕಳುಹಿಸುತ್ತಾನೆ. ಮೂರನೆಯಾಗಿ ಕುದುರೆ ಮೇಯಿಸುವವನು ಬರುತ್ತಾನೆ. ನನ್ನ ಕುದುರೆಯನ್ನು 'ಹಳೆಯ ಸಾಲ' ತೆಗೆದುಕೊಂಡು ಹೋಗಿದ್ದಾನೆ ಎಂದು ಹೇಳುತ್ತಾನೆ. ಅದಕ್ಕೆ ಪಂಚಾಯತಿಗೆದಾರ ನೀನು ಮತ್ತೆ ಮೊದಲು ಸಾಲ ಮಾಡಲು ಯಾಕೆ ಹೋದದ್ದು? ಈಗ ಅವನು ಅದನ್ನು ತೆಗೆದುಕೊಂಡ ಎಂದು ಹೇಳಿ ಅವನನ್ನು ಹೊರಗೆ ಹಾಕುತ್ತಾನೆ. ನಾಲ್ಕನೆಯದಾಗಿ ಅತ್ತೆ ಬಂದು ನನ್ನ ಮಗಳನ್ನು 'ಅಳಿಯ' ಕೊಂಡುಹೋಗಿದ್ದಾನೆ ಎಂದು ಹೇಳುತ್ತಾಳೆ. ಅದಕ್ಕೆ ಅವನು ಮತ್ತೆ ಅಳಿಯ ಅಲ್ಲದೆ ಮಾವ ಕೊಂಡುಹೋಗುತ್ತಾರ? ನಿನಗೆ ತಲೆ ಸರಿ ಇಲ್ಲವಾ ಎಂದು ಹೇಳಿ ಅವಳನ್ನು ಹೊಡೆದು ಹೊರಗೆ ಕಳುಹಿಸುತ್ತಾನೆ.

ಕಥೆ ಹೇಳಿದವರು: **ಅತಿಜಮ್ಮ ಬೋಗೊದಿ.**

### 8. ತಾಯಿಯ ಮಾತು

ಒಂದು ಊರಿನಲ್ಲಿ ಒಂದು ದೊಡ್ಡ ಕೆರೆ ಇತ್ತು. ಆ ಕೆರೆಯಲ್ಲಿ ವಿವಿಧ ತರಹದ ಮೀನುಗಳು ಸಂಸಾರವಿತ್ತು. ಅದರಲ್ಲಿ ಒಂದು ಸಾಧು ಮೀನು ಇತ್ತು. ಅದಕ್ಕೆ ಎರಡು ಮಕ್ಕಳಿದ್ದವು. ಅದರಲ್ಲಿ ದೊಡ್ಡ ಮಗ ಪಾಪ. ಅಮ್ಮ ಹೇಳಿದ

ಮಾತನ್ನು ಮೀರದೆ ತನ್ನ ತಾಯಿ ಹೇಳಿದ ಹಾಗೆ ಕೇಳುತ್ತಲಿತ್ತು. ಸಣ್ಣ ಮಗ ತುಂಬಾ ಜೋರು ತಾಯಿಯ ಯಾವುದೇ ಮಾತನ್ನು ಕೇಳಿಸದೆ ಅದಕ್ಕೆ ಬೇಕಾದ ಹಾಗೆ ಮಾಡುತ್ತಿತ್ತು.

ಹೀಗೆ ದಿನ ಕಳೆದುಹೋದ ಹಾಗೆ ಕೆರೆಯ ನೀರು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಬರುತ್ತದೆ. ಆಗ ಅಮ್ಮ ಮೀನು ಎರಡು ಮಕ್ಕಳನ್ನು ಕರೆದು ಹೇಳುತ್ತದೆ. ಮಕ್ಕಳೇ ಇನ್ನೂ ಕೆಲವು ದಿನ ಬಿಟ್ಟರೆ ಕೆರೆ ಬತ್ತಿ ಹೋಗಬಹುದು. ಅದಕ್ಕೆ ನಾವು ಈಗಲೇ ಹತ್ತಿರದ ಕೆರೆಗೆ ಹೋಗುವ. ಆಗ ದೊಡ್ಡ ಮೀನು ಅಮ್ಮನ ಮಾತಿಗೆ ಆಯಿತು ಎಂದು ಹೇಳುತ್ತದೆ. ಸಣ್ಣ ಮೀನು ಅಮ್ಮನ ಮಾತು ಕೇಳಿಸದೆ ಹೇಳುತ್ತದೆ. ನೀರು ಈಗಲೇ ಮುಗಿದಿಲ್ಲವಲ್ಲ. ಮುಗಿಯುವಾಗ ಹೋಗುವ. ಈಗ ನಾನು ಬರುವುದಿಲ್ಲ. ಬೇಕಾದರೆ ನೀವೇ ಹೋಗಿ ಅಂತ ಹೇಳುತ್ತದೆ. ಅಮ್ಮ ಎಷ್ಟು ಹೇಳಿದರೂ ಅದು ಕೇಳುವುದಿಲ್ಲ. ಹಾಗೆ ತಾಯಿ ಮತ್ತು ಹಿರಿಯ ಮಗ ಹತ್ತಿರದ ಕೆರೆಗೆ ಹೋಗುತ್ತಾರೆ. ಸ್ವಲ್ಪ ದಿನ ಕಳೆದ ಹಾಗೆ ಕೆರೆಯ ನೀರು ಖಾಲಿಯಾಗುತ್ತಾ ಬರುತ್ತದೆ. ಆಗ ಕಿರಿಯ ಮೀನಿಗೆ ಏನು ಮಾಡಬೇಕು ಎಂದು ಗೊತ್ತಾಗುವುದಿಲ್ಲ. ಆಗ ಅದಕ್ಕೆ ಅಂದು ಅಮ್ಮ ಹೇಳಿದ ಮಾತು ನೆನಪಾಗುತ್ತದೆ. ಅಮ್ಮನ ಮಾತು ಕೇಳಿದರೆ ಹೀಗೆ ಆಗುತ್ತಿರಲಿಲ್ಲಿ ಎಂದು ದುಃಖಿಸುತ್ತದೆ.

ಕಥೆ ಹೇಳಿದವರು: **ಸಾರಮ್ಮ ಅಲ್ಲಿಪಾದೆ**

### 9. ಯುವಕ ಮತ್ತು ಇಲಿ

ಒಂದು ಊರಿನಲ್ಲಿ ಒಬ್ಬ ತಂದೆ ಇದ್ದರು. ತಂದೆಗೆ ಒಬ್ಬನೇ ಮಗ ಇದ್ದ. ಅವನ ಬುದ್ದಿ ಒಳ್ಳೆಯದಿರಲಿಲ್ಲ. ಇಡೀ ಊರಿಗೇ ಅವನು ಜೋರಾಗಿದ್ದನು. ಅವನಿಗೆ ಮದುವೆಯಾಗುವ ವಯಸ್ಸಾಗುತ್ತದೆ. ಅವನು ತನ್ನ ತಂದೆಯ ಬಳಿ ಬಂದು ಹೇಳುತ್ತಾನೆ ಅಪ್ಪ ನನಗೆ ಮದುವೆಯಾಗಬೇಕು. ಅದಕ್ಕೆ ಅಪ್ಪ ಮಗನ ಬಳಿ ಹೇಳುತ್ತಾನೆ ನಿನ್ನ ಬುದ್ದಿ ನೋಡಿ ನಿನಗೆ ಯಾರು ಹುಡುಗಿ ಕೊಡಲಾರರು ಮಗನೇ. ಆದರೂ ಅವನು ಹಠ ಹಿಡಿಯುತ್ತಾನೆ. ಅಪ್ಪ ಮಗನಿಗೆ ಹುಡುಗಿಯನ್ನು ಹುಡುಕಿ ಒಂದು ಇಲಿಯನ್ನು ತೆಗದುಕೊಂಡು ಬರುತ್ತಾನೆ. ಬಂದು ಹೇಳುತ್ತಾನೆ, ಮಗ ನಿನಗೆ ಯಾರೂ ಹುಡುಗಿ ಕೊಡುವುದಿಲ್ಲ. ನೀನು ಈ ಇಲಿಯನ್ನೇ ಮದುವೆಯಾಗಬೇಕು. ಹಾಗೆ ಅವನು ಇಲಿಯನ್ನು ಮದುವೆಯಾಗುತ್ತಾನೆ.

ಮದುವೆಯಾಗಿ ಎರಡು ಮೂರು ದಿನ ಕಳೆಯುತ್ತದೆ. ಹಾಗೆ ದಿನ ಕಳೆದ ಹಾಗೆ ಒಂದು ದಿನ ಅವನು ಹೀಗೆ ಸುಮ್ಮನೆ ಕುಳಿತುಕೊಂಡಿದ್ದಾಗ ಹೇಳುತ್ತಾನೆ.

ನನಗೆ ಮದುವೆಯಾಗಲು ಒಂದು ಹುಡುಗಿ ಸಿಕ್ಕಿದ್ದಾಳೆ ಯಾವುದಕ್ಕೂ ಸಾಲದು. ನನಗೆ ಒಂದು ಊಟ ಮಾಡಿ ಕೊಡುವವರು ಯಾರು ಇಲ್ಲ. ಆಗ ಇಲಿ ಹೇಳುತ್ತದೆ. ನನಗೆ ಒಂದು ಕೊಡ ನೀರು ತೆಗೆದುಕೊಂಡು ಬಂದರೆ ನಾನು ಊಟ ಮಾಡಿ ಕೊಡುವುದಿಲ್ಲವೇ? ಪುನಃ ಹೇಳುತ್ತಾನೆ ನನಗೆ ಸ್ನಾನ ಮಾಡಲು ನೀರು ಬಿಸಿ ಮಾಡಿ ಕೊಡುವವರು ಯಾರೂ ಇಲ್ಲ. ಆಗ ಇಲಿ ಹೇಳುತ್ತದೆ. ಮಂಡೆ (ಸ್ನಾನ ಮಾಡುವಾಗ ನೀರು ಹಾಕುವ ಒಂದು ಪಾತ್ರೆ)ಗೆ ನೀರು ಹಾಕಿ ಕೊಟ್ಟರೆ ನಾನು ಬಿಸಿ ಮಾಡಿ ಕೊಡುವುದಿಲ್ಲವೇ. ಪನಃ ಹೇಳುತ್ತಾನೆ ನನ್ನ ಹತ್ತಿರ ಮಲಗುವವರು ಯಾರೂ ಇಲ್ಲವಲ್ಲ. ಆಗ ಇಲಿ ಹೇಳುತ್ತದೆ ಬಲ ಭಾಗಕ್ಕೆ ಸರಿದು ಮಲಗಿದರೆ ಶರೀರದ ಬದಿಯಲ್ಲಿ ಮಲಗುದಿಲ್ಲವೇ? ಇದರ ಮಾತು ಕೇಳಿ ಅವನು ಬೇಸರದಿಂದ ಮನೆಯ ಹೊರಗೆ ಹೋಗುತ್ತಾನೆ. ಹೋಗಿ ಹೋಗಿ ಆಯಾಸವಾದಾಗ ಒಂದು ಕಲ್ಲಿನ ಮೇಲೆ ಕುಳಿತುಕೊಳ್ಳುತ್ತಾನೆ. ಆಗಲೆ ದಾರಿಯಲ್ಲಿ ಒಂದು ಸನ್ಯಾಸಿ ಹೋಗುತ್ತಿರುತ್ತಾನೆ. ಇವನನ್ನು ನೋಡಿ ಹತ್ತಿರ ಬಂದು ಕೇಳುತ್ತಾನೆ. ನೀನು ಯಾಕೆ ಬೇಸರದಲ್ಲಿ ಒಬ್ಬನೇ ಕುಳಿತುಕೊಂಡಿದ್ದೀಯಾ? ಆಗ ಅವನು ತನ್ನ ಎಲ್ಲಾ ಸಂಕಟವನ್ನು ಹೇಳುತ್ತಾನೆ. ನನಗೆ ಒಂದು ಇಲಿಯನ್ನು ಮದುವೆ ಮಾಡಿ ಕೊಟ್ಟಿದ್ದಾರೆ ಎಂದು ಹೇಳುತ್ತಾನೆ. ಇದನ್ನೆಲ್ಲಾ ಕೇಳಿ ಸನ್ಯಾಸಿ ಹೇಳುತ್ತಾನೆ ನೀನು ಏನು ಬೇಸರಿಸಬೇಡ. ನಾನು ನಿನಗೆ ಒಂದು ಸಣ್ಣ ಡಬ್ಬ ಕೊಡುತ್ತೇನೆ ಎಂದು ಸನ್ಯಾಸಿಯ ಚೀಲದಲ್ಲಿ ಇದ್ದ ಒಂದು ಡಬ್ಬವನ್ನು ತೆಗೆದು ಕೊಡುತ್ತಾನೆ. ತೆಗೆದು ಈ ಡಬ್ಬದಲ್ಲಿ ಎರಡು ಕುಪ್ಪಿ (ಬಾಟಲಿ) ಇದೆ. ಅದರಲ್ಲಿ ಒಂದು ಕುಪ್ಪಿಯಲ್ಲಿ ನೀರು ಇನ್ನೊಂದು ಕುಪ್ಪಿಯಲ್ಲಿ ಹುಡಿ ಇದೆ. ಅದರಲ್ಲಿ ಇದ್ದ ನೀರನ್ನು ಇಲಿಯ ಮುಖಕ್ಕೆ ರಟ್ಟಿಸುತ್ತಾ. ಕುಪ್ಪಿಯಲ್ಲಿದ್ದ ಹುಡಿಯನ್ನು ಬಲ ಭಾಗದ ಕಿವಿಯ ಹಿಂದೆ ಒರಸು ಎಂದು ಹೇಳಿ ಕೊಟ್ಟು ಹೋಗುತ್ತಾನೆ.

ಹಾಗೆ ಇವನು ಸನ್ಯಾಸಿ ಕೊಟ್ಟ ಡಬ್ಬವನ್ನು ತೆಗೆದುಕೊಂಡು ಮನೆಗೆ ಹೋಗುತ್ತಾನೆ. ರಾತ್ರಿ ಆಗುತ್ತದೆ. ಇವನು ಮಲಗಲು ತಯಾರಿಯಾಗುತ್ತಾನೆ. ಹೆಂಡತಿ ಆದ ಇಲಿ ಕೂಡ ಮಲಗುತ್ತದೆ. ಇಲಿ ಮಲಗುವುದನ್ನು ನೋಡಿ ಇವನು ಸನ್ಯಾಸಿ ಕೊಟ್ಟ ಡಬ್ಬಿಯಿಂದ ಒಂದು ಕುಪ್ಪಿಯಲ್ಲಿ ಇದ್ದ ನೀರನ್ನು ಅದರ ಮುಖಕ್ಕೆ ರಟ್ಟಿಸುತ್ತಾನೆ. ಆಗ ಇಲಿಗೆ ಎಚ್ಚರವಾಗುತ್ತದೆ. ಅದು ಎದ್ದು ಗಂಡನನ್ನು ನೋಡಿ ಯಾಕೆ ನೀವು ನನಗೆ ನೀರು ರಟ್ಟಿಸಿದ್ದು ಎಂದು ಕೇಳುತ್ತದೆ. ಇವನು ಅದಕ್ಕೆ ಏನು ಹೇಳದೆ ಇನ್ನೊಂದು ಕುಪ್ಪಿಯಲ್ಲಿದ್ದ ಹುಡಿ ತೆಗೆದು ಇಲಿಯ ಬಲ ಕಿವಿಯ ಹಿಂದೆ ಒರಸುತ್ತಾನೆ. ಆಗ ಇಲಿ ಒಂದು ಸುಂದರಿಯಾದ

ಕನ್ಯೆ ಆಗಿ ಪಕ್ಕನೆ ಎದ್ದು ನಿಲ್ಲುತ್ತಾಳೆ. ಅದನ್ನು ನೋಡಿ ಇವನಿಗೆ ತುಂಬಾ ಸಂತೋಷವಾಗುತ್ತದೆ. ಇವರು ಇಬ್ಬರು ಸಂತೋಷದಿಂದ ಜೀವಿಸುತ್ತಾರೆ.

ಕಥೆ ಹೇಳಿದವರು: **ಆತಿಕ ಬೋಗೊಡು**

## 10. ಮಲತಾಯಿಯ ಅಸೂಯೆ

ಒಂದು ಊರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಸಡಗರದಿಂದ ಮದುವೆಯಾಗುತ್ತದೆ. ಮದುವೆ ಆಗಿ ಎರಡು ಮೂರು ವರ್ಷ ಬಿಟ್ಟು ಅವನಿಗೆ ಸುಂದರವಾದ ಒಂದು ಹೆಣ್ಣು ಮಗು ಆಗುತ್ತದೆ. ಹೆರಿಗೆಯ ಬಳಿಕ ರಾಜನ ಹೆಂಡತಿ ತೀರಿಹೋಗುತ್ತಾಳೆ. ಈ ಮಗುವನ್ನು ನೋಡಲಿಕ್ಕಾಗಿ ರಾಜ ಇನ್ನೊಂದು ಮದುವೆಯಾಗುತ್ತಾನೆ. ಎರಡನೆಯ ಹೆಂಡತಿ ಜೋರು. ಎರಡನೆಯ ಹೆಂಡತಿಗೂ ಗರ್ಭ ನಿಂತಿತು. ಅವಳಿಗೂ ಹೆಣ್ಣುಮಗು ಆಗುತ್ತದೆ. ಅವಳ ಮಗು ಅಂದವಾಗಿರುವುದಿಲ್ಲ. ಕಪ್ಪಾಗಿರುತ್ತದೆ. ವರ್ಷ ಕಳೆದ ಹಾಗೆ ಇಬ್ಬರು ವಯಸ್ಸಿಗೆ ಬರುತ್ತಾರೆ. ಮೊದಲ ಹೆಂಡತಿಯ ಮಗಳು ಅಂದದ ಕನ್ಯೆಯಾಗುತ್ತಾಳೆ. ಅವಳನ್ನು ನೋಡಿ ಈ ಮಲತಾಯಿಗೆ ಅಸೂಯೆ ಆಗುತ್ತದೆ. ಮಲತಾಯಿ ಅವಳಿಗೆ ಕಷ್ಟ ಕೊಡಲು ಪ್ರಾರಂಭಿಸುತ್ತಾಳೆ. ರಾಜನಿಗೆ ಇದನ್ನೆಲ್ಲಾ ನೋಡಿ ಬೇಸರವಾಗುತ್ತದೆ.

ಹಾಗೇ ರಾಜ ಬೇಸರದಿಂದ ಒಂದು ದಿನ ವಿಹಾರಕ್ಕೆ ಹೋಗುತ್ತಾನೆ. ಹೋಗುವಾಗ ಅವನಿಗೆ ಅಸ್ವಸ್ಥವಾಗುತ್ತದೆ. ರಾಜ ಮೂರ್ಛೆ ತಪ್ಪಿ ಬೀಳುತ್ತಾನೆ. ಆಗ ಒಂದು ಚೆಲುವಾದ ರಾಜಕುಮಾರ ಬಂದು ರಾಜನಿಗೆ ನೀರು ಕೊಡುತ್ತಾನೆ. ರಾಜನನ್ನು ಅವನ ಮನೆಗೆ ಕರೆದುಕೊಂಡು ಹೋಗಿ ಸತ್ಕರಿಸುತ್ತಾನೆ. ರಾಜನಿಗೆ ರಾಜಕುಮಾರನನ್ನು ನೋಡಿ ಸಂತೋಷವಾಗುತ್ತದೆ. ರಾಜನು ಹೋಗುವಾಗ ರಾಜಕುಮಾರನನ್ನು ಮನೆಗೆ ಒಮ್ಮೆ ಆಮಂತ್ರಿಸುತ್ತಾನೆ.

ಹಾಗೆ ಕೆಲವು ದಿನ ಕಳೆದ ಮೇಲೆ ರಾಜಕುಮಾರ ರಾಜನ ಮನೆಗೆ ಬರುತ್ತಾನೆ. ಆಗ ರಾಜನ ಮೊದಲ ಹೆಂಡತಿಯ ಮಗಳನ್ನು ನೋಡುತ್ತಾನೆ. ನೋಡಿ ಅವನಿಗೆ ಅವಳನ್ನು ವಿವಾಹವಾಗಲು ಬಯಸುತ್ತಾನೆ. ರಾಜನ ಬಳಿ ಕೇಳುತ್ತಾನೆ. ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡುತ್ತೀರಾ? ರಾಜನಿಗೆ ಸಂತೋಷವಾಗುತ್ತದೆ. ಅವನು ಒಪ್ಪುತ್ತಾನೆ. ರಾಜಕುಮಾರ ಹೋಗುತ್ತಾನೆ. ರಾಜಕುಮಾರ ಹೋದ ಮೇಲೆ ರಾಜನು ಹೆಂಡತಿಯ ಬಳಿ ಮದುವೆಯ ವಿಷಯ ಹೇಳುತ್ತಾನೆ. ಇದನ್ನು ಕೇಳಿ ಅವಳಿಗೆ ತುಂಬಾ ಅಸೂಯೆಯಾಗುತ್ತದೆ. ನನ್ನ ಮಗಳನ್ನು ಕೇಳಲಿಲ್ಲವಲ್ಲಾ ಎಂದು.

ಹಾಗೆ ಕೆಲವು ಸಮಯ ಬಿಟ್ಟು ರಾಜಕುಮಾರ ನಿಶ್ಚಯಕ್ಕೆ ಬರುತ್ತಾನೆ. ಈ ಮಲತಾಯಿ ಅಸೂಯೆಯಿಂದ ಹುಡುಗಿ ಸುಂದರವಾಗಿ ಕಾಣಬಾರದೆಂದು ಮೈ ತುಂಬಾ ಕರಿ(ಇದ್ದಲು) ಒರೆಸುತ್ತಾಳೆ. ರಾಜಕುಮಾರನ ಮುಂದೆ ಮಲತಾಯಿ ಅವಳ ಮಗಳನ್ನು ತಂದು ನಿಲ್ಲಿಸುತ್ತಾಳೆ. ಅಂದವಾದ ಹುಡುಗಿ ಮೂಲೆಯಲ್ಲಿ ನಿಂತು ನೋಡುತ್ತಿರುತ್ತಾಳೆ. ಈ ಮಲತಾಯಿಯ ಮಗಳನ್ನು ನೋಡಿ ರಾಜಕುಮಾರ ನಿಗೆ ಆಶ್ಚರ್ಯವಾಗುತ್ತದೆ. ನಾನು ಈ ಹುಡುಗಿಯನ್ನು ನೋಡಿದ್ದಲ್ಲವಲ್ಲಾ ಎಂದು ಮನಸ್ಸಿನಲ್ಲೆ ಹೇಳುತ್ತಾನೆ. ಹಾಗೆ ಅವನು ಚಿಂತಿಸುತ್ತಿರುವಾಗ ಅಂದವಾದ ಹುಡುಗಿಯ ಮೇಲೆ ಹಲ್ಲಿ ಬೀಳುತ್ತದೆ. ಅವಳು ಹೆದರಿ ಬೊಬ್ಬೆ ಹೊಡೆದು ಹೊರಗೆ ಓಡಿಕೊಂಡು ಬರುತ್ತಾಳೆ. ಓಡಿಬಂದು ರಾಜಕುಮಾರನ ಮುಂದೆ ನಿಲ್ಲುತ್ತಾಳೆ. ಆಗ ರಾಜಕುಮಾರನಿಗೆ ಈ ಹುಡುಗಿಯ ಹಣೆಯಲ್ಲಿ ಒಂದು ಕಡೆ ಇದ್ದಲು ಹೋಗಿ ಬಿಳಿಯಾಗಿ ಕಾಣತ್ತದೆ. ಇದನ್ನು ನೋಡಿ ರಾಜಕುಮಾರ ಆ ಹುಡುಗಿಯ ಬಳಿ ಮುಖ ತೊಳೆದುಕೊಂಡು ಬರಲು ಹೇಳುತ್ತಾನೆ. ಅವಳು ಹೋಗಿ ಮುಖ ತೊಳೆದು ಬರುತ್ತಾಳೆ. ರಾಜಕುಮಾರನಿಗೆ ಇವಳನ್ನು ನೋಡಿ ಸಂತೋಷವಾಗುತ್ತದೆ. ನಾನು ನೋಡಿದ ಹುಡುಗಿ ಇವಳೇ ಎಂದು ನಿರ್ಧರಿಸುತ್ತಾನೆ. ರಾಜಕುಮಾರನಿಗೆ ಮಲತಾಯಿಯ ಕುತಂತ್ರವೆಲ್ಲಾ ಗೊತ್ತಾಗುತ್ತದೆ. ರಾಜಕುಮಾರ ಸುಂದರವಾದ ಹುಡುಗಿಯನ್ನು ಮದುವೆಯಾಗುತ್ತಾನೆ. ಮದುವೆಯಾಗುವಾಗ ರಾಜನು ಮಗಳನ್ನು ಕರೆದು ಅವಳಿಗೆ ಬಂಗಾರದ ಪೆಟ್ಟಿಗೆ ಮತ್ತು ಅವನ ಆಸ್ತಿಗಳನ್ನೆಲ್ಲಾ ಕೊಡುತ್ತಾನೆ. ಅವನ ಎರಡನೆಯ ಹೆಂಡತಿ ಮತ್ತು ಮಗಳನ್ನು ಸೆರೆಮನೆಗೆ ಹಾಕುತ್ತಾರೆ. ಕೆಲವು ಸಮಯದ ನಂತರ ರಾಜನು ತೀರಿಹೋಗುತ್ತಾನೆ. ರಾಜಕುಮಾರ ಮತ್ತು ರಾಜನ ಮೊದಲ ಹೆಂಡತಿಯ ಮಗಳು ಸಂತೋಷದಿಂದ ಜೀವಿಸುತ್ತಾರೆ.

ಕಥೆ ಹೇಳಿದವರು: **ರಹ್ಮತ್ ಗುಡ್ಡೆ ಅಂಗಡಿ**

## 11. ಅಕ್ಬರ್ ಸದಕ

ಒಂದು ದಿನ ಮುಹಮ್ಮದ್ ಎಂಬ ಪ್ರವಾದಿ ಮತ್ತು ಪ್ರವಾದಿಯವರ ಸ್ವಹಾಬಿಗಳು ಮದೀನದ ಮಸೀದಿಯಲ್ಲಿ ಕುಳಿತುಕೊಂಡಿರುತ್ತಾರೆ. ಆಗ ಒಂದು ಪಕ್ಷಿ ಬಂದು ಪ್ರವಾದಿಯವರಿಗೆ ಸಲಾಮ್ ಮಾಡುತ್ತದೆ. ಪ್ರವಾದಿಯವರು ಸಲಾಂಗೆ ಪ್ರತಿಕ್ರಿಯಿಸಿ ಪಕ್ಷಿ, ನನಗೆ ನೀನು ಯಾಕೆ ಸಲಾಂ ಹೇಳಿದ್ದು ಎಂದು ಕೇಳುತ್ತಾರೆ. ಆಗ ಆ ಪಕ್ಷಿ, ನಾನು ಯಾಕೆ ಸಲಾಂ ಹೇಳೀದ್ದೆಂದರೆ ನಾನು

ಮತ್ತು ನನ್ನ ಹತ್ತಿರ ಇದ್ದ ಇನ್ನೊಂದು ಪಕ್ಷಿ ಹಲವಾರು ವರ್ಷಗಳಿಂದ ಒಟ್ಟಿಗೆ ಇದ್ದೆವು. ಅಂದಿನಿಂದ ಇಂದಿನವರೆಗೆ ನಮ್ಮಿಬ್ಬರ ನಡುವೆ ಒಂದೇ ಒಂದು ತಪ್ಪಾಗಲಿಲ್ಲ. ನಾವು ಒಟ್ಟಿಗೆ ಪ್ರೀತಿಯಿಂದ ಕಾಲಕಳೆಯುತ್ತಿದ್ದೆವು. ನನ್ನಿಂದ ಈಗ ಆದ ಒಂದೇ ಒಂದು ತಪ್ಪೇನೆಂದರೆ ನಾನು ಬೆಳಿಗ್ಗೆ ಒಂದು ಮೊಟ್ಟೆ ಮತ್ತು ಮಧ್ಯಾಹ್ನ ಒಂದು ಮೊಟ್ಟೆ ಹಾಕಿದೆ. ಹಾಗೆ ಮೊಟ್ಟೆ ಇಟ್ಟು ಹೊರಗೆ ಹೋಗಿ ಸಂಜೆ ಗೂಡಿಗೆ ಬರುವಾಗ ನನ್ನ ಜೊತೆ ಪಕ್ಷಿ ನನ್ನನ್ನು ಹೊರಗೆ ಹಾಕಿ ಕೇಳಿತು ನೀನು ಹಾಕಿದ ಮೊಟ್ಟೆ ಹರಾಮಾ ಹಲಾಲಾ ಎಂದು ಹೇಳಬೇಕೆಂದು. ನೀನು ಹೇಳದಿದ್ದರೆ ನೀನು ನನ್ನೊಟ್ಟಿಗೆ ಇದ್ದ ಪಕ್ಷಿ ಅಲ್ಲವೆಂದು ಹೇಳಿತು. ಆ ಮಾತು ಕೇಳಿ ನನಗೆ ಏನು ಉತ್ತರಿಸಬೇಕು ಎಂದು ಗೊತ್ತಾಗಲಿಲ್ಲ. ಹಾಗೆ ನಾನು ನಿಮ್ಮ ಬಳಿ ಬಂದದ್ದು. ನನ್ನ ಈ ಸಂಕಟವನ್ನು ನೀವೇ ನಿವಾರಿಸಬೇಕೆಂದು ಪ್ರವಾದಿಯವರ ಬಳಿ ಹೇಳುತ್ತದೆ.

ಆಗ ಪ್ರವಾದಿಯವರು ನೀನು ಹೋಗಿ ಪಕ್ಷಿಯನ್ನು ನನ್ನ ಬಳಿ ಕರೆದುಕೊಂಡು ಬಾ. ನಿನ್ನ ಸಂಕಟವನ್ನು ನಾನು ತೀರಿಸುತ್ತೇನೆ ಎಂದು ಹೇಳುತ್ತಾರೆ. ಆಗ ಪಕ್ಷಿ ನಾನು ಹೋದರೆ ಅದು ನನ್ನ ಬಳಿ ಬರುವುದಿಲ್ಲ. ನೀವು ನಿಮ್ಮೊಟ್ಟಿಗೆ ಇರುವ ಒಬ್ಬರನ್ನು ಕಳುಹಿಸಿ ಎಂದು ಹೇಳುತ್ತದೆ. ನಿನ್ನ ಪಕ್ಷಿ ಇರುವ ಸ್ಥಳ ಎಲ್ಲಿ ಎಂದು ಪ್ರವಾದಿಯವರು ಕೇಳುತ್ತಾರೆ. ತೂರಿಸಿನಾಮಲೆ ಎಂಬ ಪರ್ವತದಲ್ಲಿ ಇದೆ ಎಂದು ಪಕ್ಷಿ ಹೇಳುತ್ತದೆ. ಪ್ರವಾದಿಯವರು ಪಕ್ಷಿಯ ಹೆಸರು ಏನು ಎಂದು ಕೇಳುತ್ತದೆ. ಆಗ ಪಕ್ಷಿ ಅಕ್ಬರ್ ಸದಕ ಎಂದು ಹೇಳುತ್ತದೆ.

ಪ್ರವಾದಿಯವರು ಮಸೀದಿಯಲ್ಲಿ ಬಾಂಗ್ (ಪ್ರಾರ್ಥನೆಗೆ ಕರೆ) ಹೇಳುವ ಬಿಲಾಲನ್ನು ಕರೆದು, ನೀನು ತೂರಿಸಿನಾಮಲೆ ಎಂಬ ಪರ್ವತಕ್ಕೆ ಹೋಗಿ ಅಲ್ಲಿ ಅಕ್ಬರ್ ಸದಕ ಎಂಬ ಒಂದು ಪಕ್ಷಿ ಇದೆ. ಅದನ್ನು ನೀನು ಕರೆದುಕೊಂಡು ಬರಬೇಕು. ಆ ಪಕ್ಷಿಯನ್ನು ಕರೆದುಕೊಂಡು ಬಂದರೆ ಈ ಪಕ್ಷಿಯ ಸಂಕಟವನ್ನು ಮುಗಿಸಲು ಸಾಧ್ಯ ಎಂದು ಹೇಳುತ್ತಾರೆ. ಆಗ ಬಿಲಾಲ್ ಪ್ರವಾದಿಯವರೇ ನೀವು ನನಗೆ ಹೋಗಲು ಅನುಮತಿ ನೀಡಿದರೆ ನಾನು ಅದನ್ನು ಕರೆದುಕೊಂಡು ಬರುತ್ತೇನೆ. ಒಂದು ವೇಳೆ ಅದು ಬರಲು ಕೇಳದಿದ್ದರೆ ಅದನ್ನು ನಾನು ಕೊಂದಾದರೂ ಕರೆದುಕೊಂಡು ಬರುತ್ತೇನೆ ಎಂದು ಹೇಳುತ್ತಾರೆ. ಆಗ ಪ್ರವಾದಿಯವರು ಅಂತಹ ಮಾತು ಹೇಳಬೇಡ, ನೀನು ಆ ಪಕ್ಷಿಯನ್ನು ಕೊಂದರೆ ಈ ಪಕ್ಷಿಯ ಸಂಕಟವನ್ನು ನಾವು ಹೇಗೆ ಮುಗಿಸುವುದು? ಎಂದು ಕೇಳುತ್ತಾರೆ.

ಪ್ರವಾದಿಯವರು ಅನುಮತಿ ನೀಡಿದ ನಂತರ ಬಿಲಾಲ್ ತೂರಿಸಿನಾಮಲೆ

ಎಂಬ ಪರ್ವತಕ್ಕೆ ಹೋಗಿ ಅಕ್ಬರ್ ಸದಕ ಇದ್ದ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಹೋಗಿ ಅಕ್ಬರ್ ಸದಕ ಎಂದು ಒಂದು ಸಲ ಕರೆಯುತ್ತಾರೆ. ಆ ಕರೆಗೆ ಉತ್ತರಿಸಲಿಲ್ಲ ಎರಡನೆಯದಾಗಿ ಅಕ್ಬರ್ ಸದಕ ಎಂದು ಕರೆಯುತ್ತಾರೆ. ಅದಕ್ಕೂ ಉತ್ತರಿಸುವುದಿಲ್ಲ. ಮೂರನೆಯ ಸಲ ಜೋರಾಗಿ ಕರೆಯುತ್ತಾರೆ. ಆ ಕರೆಗೆ ಅಕ್ಬರ್ ಸದಕ ಕೊಕ್ಕು ಹೊರಗೆ ಹಾಕಿ ಯಾರು ನನ್ನನ್ನು ಕರೆದದ್ದು? ಯಾತಕ್ಕಾಗಿ ಕರೆದದ್ದು? ಎಂದು ಕೇಳುತ್ತದೆ. ಆಗ ಬಿಲಾಲ್ ಹೇಳುತ್ತಾರೆ, ನಿನ್ನನ್ನು ಪ್ರವಾದಿಯವರು ಕರೆಯುತ್ತಿದ್ದಾರೆ. ಆಗ ಪಕ್ಷಿ ಹೇಳುತ್ತದೆ, ನಿನ್ನ ಪ್ರವಾದಿ ಯಾರು ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ಜನಿಸಿದ್ದು? ಯಾರ ಮಗ? ಎಂದೆಲ್ಲಾ ಕೇಳುತ್ತದೆ. ಆಗ ಬಿಲಾಲ್ ಅಬ್ದುಲ್ಲನ ಮಗ ಎಂದು ಹೇಳುತ್ತಾರೆ. ಆಗ ಪಕ್ಷಿ ಹೇಳುತ್ತದೆ. ನೀನು ಇಲ್ಲಿಂದ ಹೋಗು ನನ್ನ ಬಳಿ ಸುಳ್ಳು ಏನೂ ಹೇಳಬೇಡ 312 ಪ್ರವಾದಿಯವರು ನನಗೆ ಗೊತ್ತುಂಟು ನೀ ಹೇಳುವ ಪ್ರವಾದಿಯವರು ಯಾರು ಎಂದು ಗೊತ್ತಿಲ್ಲ ಎಂದು ಹೇಳುತ್ತದೆ. ಇಷ್ಟು ವರ್ಷ ಆಯ್ತು ನಾನು ಇಲ್ಲಿದ್ದು. ನಾನು ನಿನ್ನ ಪ್ರವಾದಿಯವರನ್ನು ನೋಡಿಲ್ಲ. ಭೂಮಿಯನ್ನು ನಾನು ಐದು ಮಾದರಿಯಾಗಿ ನೋಡಿದ್ದೇನೆ. ಬಂಗಾರದ ಹಾಗೆ, ಬೆಳ್ಳಿಯ ಹಾಗೆ, ತಾಮ್ರದ ಹಾಗೆ, ಕಬ್ಬಿಣದ ಹಾಗೆ ಮಣ್ಣಿನ ಹಾಗೆ. ಹೀಗೆ ಆಗಿಯೂ ಕೂಡ ನಿನ್ನ ಪ್ರವಾದಿಯಾರೆಂದು ನಾನು ನೋಡಿಲ್ಲ. ನೀನು ಹೋಗಿ ನಿನ್ನ ಪ್ರವಾದಿಯವರಲ್ಲಿ ಹೇಳು ಅಕ್ಬರ್ ಕರೆಯುತ್ತಿದ್ದಾನೆಂದು. ಪಕ್ಷಿಯ ಮಾತು ಕೇಳಿ ಬಿಲಾಲ್ ಬೇಸರದಿಂದ ಪ್ರವಾದಿಯವರ ಬಳಿ ಮದೀನದ ಮಸೀದಿಗೆ ಹೋಗುತ್ತಾರೆ. ಅಲ್ಲಿ ಪ್ರವಾದಿಯವರು ಬಿಲಾಲನ್ನು ಕಾಯುತ್ತಿದ್ದರು. ಬಿಲಾಲ್ ಬರುವುದನ್ನು ನೋಡಿ ಪ್ರವಾದಿಯವರು ಕೇಳುತ್ತಾರೆ, ನೀನು ಹೋದ ಕೆಲಸ ಏನಾಯಿತು ಎಂದು. ಆಗ ಬಿಲಾಲ್ ಹೇಳುತ್ತಾರೆ. ಪಕ್ಷಿಯನ್ನು ನೋಡಬೇಕಾದರೆ ನೀವೇ ಅಲ್ಲಿಗೆ ಹೋಗಬೇಕಂತೆ. ಆ ಮಾತು ಕೇಳಿ ಪ್ರವಾದಿಯವರಿಗೆ ಬೇಸರವಾಗುತ್ತದೆ.

ಆಗ ಉಮರ್ ತಂಜಲ್ ಪ್ರವಾದಿಯವರ ಬಳಿ ಹೇಳುತ್ತಾರೆ. ನೀವು ನನಗೆ ಹೋಗಲು ಅನುಮತಿ ಕೊಡಿ ನಾನು ಅದನ್ನು ಹೋಗಿ ಕರೆದುಕೊಂಡು ಬರುತ್ತೇನೆ. ಅದು ಬರಲು ಕೇಳದಿದ್ದರೆ ಅದನ್ನು ನಾನು ಕೊಂದಾದರೂ ತರುತ್ತೇನೆ. ಆಗ ಪ್ರವಾದಿಯವರು ಉಮರ್ ತಂಜಲ್ ಅವರ ಬಳಿ ಹೇಳುತ್ತಾರೆ, ನೀನು ಎಂತಹ ಮಾತು ಹೇಳುತ್ತಿದ್ದೀಯಾ ಉಮರ್? ಆ ಪಕ್ಷಿಯನ್ನು ಕೊಂದರೆ ಈ ಪಕ್ಷಿಯ ಸಂಕಟವನ್ನು ನಾವು ಹೇಗೆ ಮುಗಿಸುವುದು? ಪ್ರವಾದಿಯವರ ಅನುಮತಿಯಿಂದ ಉಮರ ತಂಜಲ್ ತೂರಿಸಿನಾಮಲೆ ಪರ್ವತಕ್ಕೆ ಹೋಗಿ

ಅಕ್ಬರ್ ಸದಕನನ್ನು ಕರೆಯುತ್ತಾರೆ. ಒಂದು ಕರೆಗೆ ಉತ್ತರಿಸುವುದಿಲ್ಲ, ಎರಡನೆಯ ಕರೆಗೂ ಉತ್ತರಿಸುವುದಿಲ್ಲ, ಮೂರನೆಯದಾಗಿ ಗಟ್ಟಿಯಾಗಿ ಕರೆಯುತ್ತಾರೆ. ಆ ಕರೆಗೆ ಪಕ್ಷಿ ತನ್ನ ಕೊಕ್ಕನ್ನು (beak) ಹೊರಗೆ ಹಾಕಿ ಕೇಳುತ್ತದೆ. ನನ್ನ ಯಾಕೆ ಕರೆಯುತ್ತಿದ್ದೀರಿ? ಆಗ ಉಮರ್ ತಂಜಲ್ ಕೇಳುತ್ತಾರೆ. ಪ್ರವಾದಿಯವರು ನಿನ್ನನ್ನು ಕರೆಯುತ್ತಿದ್ದಾರೆ. ಆಗ ಪಕ್ಷಿಯು ಬಿಲಾಲ್‌ರೊಂದಿಗೆ ಹೇಳಿದ ಹಾಗೆಯೇ ಉಮರ್ ತಂಜಲ್‌ರವರೊಂದಿಗೂ ಹೇಳುತ್ತದೆ. ಆಗ ಉಮರ್ ತಂಜಲ್ ಹೇಳುತ್ತಾರೆ. ನಿನ್ನ ಈ ಮಾತು ನಾನು ಮಕ್ಕದ ಅಲಿಯಾರ್‌ರೊಂದಿಗೆ ಹೇಳಿದರೆ ಅವರು ನಿನ್ನನ್ನು ಕೊಲ್ಲಲು ಖಡ್ಗವನ್ನು ಆಗಲೇ ತೆಗೆಯುತ್ತಿದ್ದರು. ಆಗ ಪಕ್ಷಿಯು ಹೇಳುತ್ತದೆ. ನನಗೆ ನಿನ್ನನ್ನೂ ಗೊತ್ತು. ನಿನ್ನ ಅಲಿಯಾರ್‌ರನ್ನು ಗೊತ್ತು ಎಂದು. ಈ ಮಾತನ್ನು ಕೇಳಿ ಉಮರ್ ತಂಜಲ್ ಮದೀನದ ಮಸೀದಿಗೆ ಹಿಂದೆ ತೆರಳುತ್ತಾರೆ. ಅಲ್ಲಿ ಪ್ರವಾದಿಯವರು ಉಮರ್ ತಂಜಲ್ ಅವರನ್ನು ಕಾಯುತ್ತಲಿದ್ದರು. ಉಮರ್ ತಂಜಲ್ ಬಂದದ್ದನ್ನು ನೋಡಿ ಪ್ರವಾದಿಯವರು ನೀನು ಹೋದ ಕೆಲಸ ಏನಾಯಿತೆಂದು ಕೇಳುತ್ತಾರೆ. ಆಗ ಉಮರ್ ತಂಜಲ್ ಪಕ್ಷಿಯು ಹೇಳಿದ ವಿಷಯವನ್ನೆಲ್ಲಾ ಹೇಳುತ್ತಾರೆ. ಆ ವಿಷಯ ಕೇಳಿ ಪ್ರವಾದಿಯವರು ಇಲ್ಲಿ ಈಗ ಅಲಿಯಾರ್ ಇದ್ದರೆ ಆ ಪಕ್ಷಿಯನ್ನು ಹೋಗಿ ಕರೆದುಕೊಂಡು ಬರುತ್ತಿದ್ದರು. ಅಲಿ ಈಗ ಯುದ್ಧಕ್ಕೆ ಹೋಗಿದ್ದಾರೆ ಎಂದು ಹೇಳಿ ಪ್ರಾರ್ಥಿಸುತ್ತಾರೆ.

ಪ್ರವಾದಿಯವರು ಪ್ರಾರ್ಥಿಸುವಾಗ ಅಲಿಯಾರ್ ತಂಜಲ್ ಮಲಗಿದ್ದರು. ಆಗ ಅವರಿಗೆ ಒಮ್ಮೆಲೆ ಎಚ್ಚರವಾಗುತ್ತದೆ. ಅಲಿಯಾರ್ ತಂಜಲ್ ಎದ್ದು ದುಲ್ ದುಲ್ ಎಂಬ ಕುದುರೆಯ ಬಳಿ ಹೇಳುತ್ತಾರೆ. ಬೆಳಿಗ್ಗೆಯಾಗುವ ಮೊದಲು ನಾವು ಮದೀನಕ್ಕೆ ಹೋಗಿ ತಲುಪಬೇಕು. ತಲುಪದಿದ್ದರೆ ಅಲ್ಲಾಹುವಿನ ಪ್ರವಾದಿಯವರ ಮೇಲಾನೆ. ನಾನು ನಿನ್ನನ್ನು ಕೊಲ್ಲುತ್ತೇನೆಂದು, ಹಾಗೆ ಹೇಳಿ ಕುದುರೆಯ ಮೇಲೆ ಏರಿ ಕುಳಿತುಕೊಳ್ಳುತ್ತಾರೆ. ಬೆಳಿಗ್ಗೆಯಾಗುವ ಮೊದಲು ಮದೀನಕ್ಕೆ ಹೋಗಿ ತಲುಪುತ್ತಾರೆ. ಆಗ ಪ್ರವಾದಿಯವರು ನಮಾಝ್ ಮಾಡುತ್ತಿರುತ್ತಾರೆ. ನಮಾಝ್ ಮಾಡಿ ನೋಡುವಾಗ ಪ್ರವಾದಿಯವರಿಗೆ ಅಲಿಯಾರ್ ತಂಜಲ್ ಅವರನ್ನು ಕಾಣುತ್ತದೆ. ಪ್ರವಾದಿಯವರು ಅಲಿಯಾರ್‌ರನ್ನು ನೋಡಿ ನಗುತ್ತಾರೆ. ಅಲಿಯಾರ್ ತಂಜಲ್ ಪ್ರವಾದಿಯವರೊಂದಿಗೆ ಕೇಳುತ್ತಾರೆ. ನೀವು ಯಾಕೆ ನನ್ನ ಜೊತೆ ನಗುತ್ತಿದ್ದೀರಾ ಎಂದು. ಆಗ ಪ್ರವಾದಿಯವರು ಪಕ್ಷಿಯ ವಿಷಯವನ್ನೆಲ್ಲಾ ಹೇಳುತ್ತಾರೆ. ಆಗ ಅಲಿಯಾರ್ ತಂಜಲ್ ಹೇಳುತ್ತಾರೆ ನೀವು ನನಗೆ ಅನುಮತಿ ನೀಡಿದರೆ ನಾನು ತೂರಿಸಿನಮಾಲ್ ಪರ್ವತಕ್ಕೆ

ಹೋಗಿ ಆ ಪಕ್ಷಿಯನ್ನು ಕರೆದುಕೊಂಡು ಬರುತ್ತೇನೆ. ಪ್ರವಾದಿಯವರ ಅನುಮತಿಯೊಂದಿಗೆ ಅಲಿಯಾರ್ ತಂಜಲ್ ತೂರಿಸಿನಾಮಲೆ ಪರ್ವತಕ್ಕೆ ಹೋಗುತ್ತಾರೆ.

ತೂರಿಸಿನಾಮಲೆ ಪರ್ವತಕ್ಕೆ ಹೋಗಿ ಅಲಿಯಾರ್ ತಂಜಲ್ ಪಕ್ಷಿಯನ್ನು ಒಮ್ಮೆ ಕರೆಯುತ್ತಾರೆ, ಉತ್ತರಿಸುವುದಿಲ್ಲ. ಎರಡನೆಯ ಕರೆಗೂ ಉತ್ತರಿಸುವುದಿಲ್ಲ. ಮೂರನೆಯದಾಗಿ ಜೋರಾಗಿ ಬೊಬ್ಬೆಹಾಕಿ ಕರೆಯುತ್ತಾರೆ. ಆ ಕರೆಗೆ ಏಳೂ ಆಕಾಶ ಮತ್ತು ಭೂಮಿ ನಡುಗುತ್ತದೆ. ಆಗ ಪಕ್ಷಿಯು ಮೆಲ್ಲನೆ ತನ್ನ ಕೊಕ್ಕನ್ನು ಹೊರಗೆ ಹಾಕಿ ಕೇಳುತ್ತದೆ, ಯಾತಕ್ಕಾಗಿ ಅಲಿಯಾರ್‌ರವರೇ ನೀವು ನನ್ನನ್ನು ಕರೆದದ್ದು.

ಆಗ ಅಲಿಯಾರ್ ತಂಜಲ್ ಹೇಳುತ್ತಾರೆ. ನನ್ನ ಪ್ರವಾದಿಯವರು ನಿನ್ನನ್ನು ಕರೆಯುತ್ತಿದ್ದಾರೆ. ನೀನು ನನ್ನ ಜೊತೆ ಬಾ. ಆಗ ಪಕ್ಷಿಯು ಹೇಳುತ್ತದೆ. ನನಗೆ ನಿನ್ನ ಪ್ರವಾದಿಯವರು ಗೊತ್ತಿಲ್ಲ. 312 ಪ್ರವಾದಿಯವರು ಮಾತ್ರ ನನಗೆ ಗೊತ್ತಿರುವುದು. ಆಗ ಅಲಿಯಾರ್ ತಂಜಲ್ ಹೇಳುತ್ತಾರೆ. 313 ಪ್ರವಾದಿಯವರು ಇದ್ದಾರೆ. ಅದನ್ನು ಕೇಳಿ ಪಕ್ಷಿಯು ಹೇಳುತ್ತದೆ. 313 ಪ್ರವಾದಿಯವರಿದ್ದರೆ ಹೀಗೆ ಒಂದು ತಪ್ಪು ಕೆಲಸ ನಡೆಯುತ್ತಿರಲಿಲ್ಲ. ಆಲಿಯಾರ್ ತಂಜಲ್ ಕೇಳುತ್ತಾರೆ. ಅದು ಏನು ತಪ್ಪು ಕೆಲಸ ಆಗಿದೆ. ನೀನು ತಪ್ಪು ಏನು ಅಂತ ಹೇಳದಿದ್ದರೆ ನಿನ್ನನ್ನು ನಾನು ಝುಲ್‌ಫಿಕ್‌ರ್ ಎಂಬ ಖಡ್ಗದಲ್ಲಿ ಕೊಲ್ಲುತ್ತೇನೆಂದು ಪಕ್ಷಿಯು ಹೇಳುತ್ತದೆ. ನಾನು ಹೇಳಿದರೆ ಅದು ನಡೆಯುವುದಿಲ್ಲ. ಆಗ ಆಲಿಯಾರ್ ಕೇಳುತ್ತಾರೆ ಅದು ಯಾಕೆ ನಡೆಯುವುದಿಲ್ಲವೆಂದು. ಆಗ ಪಕ್ಷಿಯು ಹೇಳುತ್ತದೆ. ಇಬ್‌ನ್ ಉಬಯ್‌ದುಲ್ಲಾ ಎಂಬವರ ಹೆಂಡತಿ ಸೌಜತ್ ಎನ್ನುವವರ ಇಪ್ಪತ್ತಮೂರು ದಿವಸದ ಹೆಣ್ಣು ಹಸುಳೆಯನ್ನು ಇಫ್ರಿತ್ ಕರೆದುಕೊಂಡು ಹೋಗಿ ಜಿನ್ನ್ ಮಕ್ಕಳೊಂದಿಗೆ ಕೋಟೆಯಲ್ಲಿ ಸಾಕಲು ನೀಡಿದ್ದಾನೆ. ಈ ಹುಡುಗಿಗೆ ಹದಿನಾಲ್ಕು ವರ್ಷ ಆಗುತ್ತಾ ಬಂತು. ಇನ್ನು ಆ ಹುಡುಗಿ ಅನ್ಯ ಧರ್ಮವನ್ನು ಸೇರುತ್ತದೆ. ಹಾಗೆಯೆ ಒಂದು ಪ್ರವಾದಿಯವರಿದ್ದರೆ ಹೋಗಿ ಆ ಹುಡುಗಿಯನ್ನು ಕೋಟೆಯಿಂದ ಕರೆದುಕೊಂಡು ಬರುತ್ತಿದ್ದರಲ್ಲವೆ ಎಂದು ಹೇಳುತ್ತದೆ. ಆಗ ಅಲಿಯಾರ್ ತಂಜಲ್ ಇಫ್ರಿತ್ ರಾಜನು ಇರುವ ಕೋಟೆಗೆ ಹೋಗುತ್ತಾರೆ.

ಕೋಟೆಗೆ ಹೋದಾಗ ಅಲಿಯಾರ್ ಅವರಿಗೆ ಒಂದು ದೊಡ್ಡ ಜಿನ್ನು ಕಾಣುತ್ತದೆ. ಅದರ ಹತ್ತಿರ ಒಂದು ಕಲ್ಲಲ್ಲಿ ಬರೆದಿರುತ್ತದೆ. 'ಮನುಷ್ಯನು ಈ ಕೋಟೆಗೆ ಬಂದರೆ ಅವನನ್ನು ಬೆಂಕಿ ಹಚ್ಚಿ ಸಾಯಿಸಲಾಗುತ್ತದೆ' ಎಂದು.

ಹಾಗೆ ಅಲ್ಲಿ ಅಡ್ಡ ಇದ್ದ ಕಲ್ಲನ್ನು ದುಲ್ ದುಲ್ ಎಂಬ ಅಲಿಯಾರ್ ಅವರ ಕುದುರೆ ಒದೆಯುತ್ತದೆ. ಅಲಿಯಾರ್ ಬಿಸ್ಮಿ ಹೇಳಿ ಬಾಗಿಲು ತೆಗೆಯುತ್ತಾರೆ. ಕಲ್ಲನ್ನು ಒದೆದು ಒಳಗೆ ಹೋಗುವಾಗ ಅಲ್ಲಿ ಒಂದು ವಿಶಾಲವಾದ ಸಮುದ್ರ ಕಾಣುತ್ತದೆ. ಆ ಸಮುದ್ರವನ್ನು ಕಾಯಲು ಅಲ್ಲಿ ದೊಡ್ಡ ಗಾತ್ರದ ಹಾವುಗಳಿರುತ್ತವೆ. ಅಲ್ಲಿ ಇದ್ದ ಒಂದು ಹಾವು ಇನ್ನೊಂದು ಹಾವಿನೊಂದಿಗೆ ಹೇಳುತ್ತದೆ. ಅಲಿಯಾರ್ ತಂಙಲ್ ಬರುವ ಶಬ್ದ ಕೇಳುತ್ತದೆ. ನಾವು ಒರಟಾಗಿ ಮಾತನಾಡುವುದು ಬೇಡ. ಅಲಿಯಾರ್ ತಂಙಲ್ ಬಂದು ಹಾವಿನೊಂದಿಗೆ ಕೇಳುತ್ತಾರೆ. ನಾನು ಆಚೆ ಹೇಗೆ ದಾಟುವುದು ಹೇಗೆ ಎಂದು. ಆಗ ಹಾವು ಕೇಳುತ್ತದೆ, ಯಾಕೆ ಅಲಿಯಾರ್ ಅವರೆ ನಿಮಗೆ ಆಚೆದಾಟಬೇಕೆಂದು. ಆಗ ಅಲಿಯಾರ್ ಹೇಳುತ್ತಾರೆ. ನನಗೆ ಇಫ್ರಿತ್ ಇರುವ ಕೋಟೆಗೆ ಹೋಗಬೇಕೆಂದು. ಆಗ ಹಾವು ಹೇಳುತ್ತದೆ, ನೀವು ಕೋಟೆಗೆ ಹೋಗಬೇಡಿ. ಅಲ್ಲಿ ಇಫ್ರಿತ್ ಇಲ್ಲವೆಂದು ಅಲಿಯಾರ್ ಪುನಃ ಕೇಳುತ್ತಾರೆ. ನಾನು ಹೇಗೆ ಅತ್ತಕಡೆ ಹೋಗಲಿ ಎಂದು ಆಗ ಹಾವು ಹೇಳುತ್ತದೆ. ನೀವು ಹೋಗಬೇಡಿ. ಅಲ್ಲಿ ಅಚಾನಕ್ಕಾಗಿ ಕೊಲ್ಲುವ ಖಡ್ಗವಿದೆ ಮತ್ತು ಅಚಾನಕ್ಕಗಿ ಬೀಸುವ ಬಲೆ ಇದೆ. ಪುನಃ ಅಲಿಯಾರ್ ತಂಙಲ್ ಕೇಳುತ್ತಾರೆ ನಾನು ಹೇಗೆ ಅತ್ತಕಡೆ ಹೋಗಲೆಂದು. ಆಗ ಹಾವು ನಿಮ್ಮ ಪಾದವನ್ನು ಒದ್ದೆಯಾಗದೆ ಅತ್ತ ಕಡೆಗೆ ಕರೆದುಕೊಂಡು ಹೋಗುತ್ತೇನೆ. ಆದರೆ ಅದರ ಬದಲಿಗೆ ನನಗೆ ಏನು ಸಹಾಯ ಮಾಡುತ್ತೀರಾ? ಎಂದು ಕೇಳುತ್ತದೆ. ಆಗ ಅಲಿಯಾರ್ ಕೇಳುತ್ತಾರೆ, ನಾನು ನಿನಗೆ ಏನು ಸಹಾಯ ಮಾಡಬೇಕೆಂದು. ಆಗ ಹಾವು ಹೇಳುತ್ತದೆ. ಪ್ರವಾದಿಯವರ ಹಿಂಬಾಲಕರಿಗೆ ಪುನರುಜ್ಜೀವನಗೊಳಿಸುವ ದಿನದಂದು ಕೊಡುವಂತಹ ಚೀಟಿಯನ್ನು ನನಗೆ ಕೊಡಬೇಕೆಂದು. ಆಗ ಅಲಿಯಾರ್ ತಂಙಲ್ ಹೇಳುತ್ತಾರೆ. ಮೊದಲ ಚೀಟಿಯನ್ನು ನಾನು ನಿನಗೆ ಕೊಡುತ್ತೇನೆಂದು. ಆಗ ಇಬ್ನ್ ಉಮ್ಮೈರ ಎನ್ನುವ ಹಾವು ತಲೆ ಎತ್ತಿ ಅದರ ಮೇಲೆ ಅಲಿಯಾರ್ ತಂಙಲ್ ಅವರನ್ನು ಕುಳ್ಳಿರಿಸಿ ಪಾದ ಕಾಲು ಒದ್ದೆಯಾಗದ ಹಾಗೆ ಕೋಟೆಗೆ ತಲುಪಿಸುತ್ತದೆ.

ಅಲ್ಲಿಂದ ಸ್ವಲ್ಪ ಮುಂದೆ ಹೋಗುವಾಗ ಅಲಿಯಾರ್‌ರವರಿಗೆ ಒಂದು ದೊಡ್ಡದಾದ ಮರ ಕಾಣಿಸುತ್ತದೆ. ಅಲ್ಲಿದ್ದ ಮರಗಳೆಲ್ಲಾ ಅಲಿಯಾರ್ ತಂಙಲ್ ಅನ್ನು ಕಂಡು ಸಲಾಂ ಹೇಳುತ್ತದೆ. ಅಲಿಯಾರ್ ತಂಙಲ್ ಪ್ರತಿಕ್ರಿಯಿಸುತ್ತಾರೆ. ಆಗ ಮರ ಕೇಳುತ್ತದೆ, ನೀವು ಯಾಕೆ ಇಲ್ಲಿಗೆ ಬಂದದ್ದು. ಈ ಸ್ಥಳಕ್ಕೆ ಯಾರೂ ಬರುವುದಿಲ್ಲವೆಂದು. ಆಗ ಅಲಿಯಾರ್ ತಂಙಲ್ ಹೇಳುತ್ತಾರೆ. ನನಗೆ ಇಫ್ರಿತ್

ರಾಜನ ಕೋಟೆಗೆ ಹೊಗಬೇಕೆಂದು. ಆಗ ಸಜರ್ ಎನ್ನುವ ಮರ ಹೇಳುತ್ತದೆ, ಹೋಗಬೇಡಿ ಅಲಿಯಾರ್ ನೀವು ಅಲ್ಲಿಗೆ. ಆಗ ಆಲಿಯಾರ್ ಹೇಳುತ್ತಾರೆ, ನನಗೆ ಕೋಟೆಗೆ ಹೋಗಬೇಕೆಂದು. ಆಗ ಮರ ಹೇಳುತ್ತದೆ, ನೀವು ಅಲ್ಲಿಗೆ ಹೋಗಬೇಡಿ. ಅಲ್ಲಿ ಇಫ್ರಿತ್ ಇಲ್ಲ. ಬೇಟೆಯಾಡಲು ಹೋಗಿ ಮೂವತ್ತೊಂಬತ್ತು ದಿವಸವಾಯಿತು. ಆಗ ಅಲಿಯಾರ್ ಹೇಳುತ್ತಾರೆ. ನನ್ನನ್ನು ನೀನು ತಡೆಯಬೇಡ. ಆ ಕೋಟೆಗೆ ಹೇಗೆ ಹೋಗುವುದೆಂದು ಹೇಳಿ. ಆಗ ಹಾವು ಹೇಳಿದ ಹಾಗೆ ಮರವೂ ಹೇಳುತ್ತದೆ. ನೀವು ಅಲ್ಲಿಗೆ ಹೋಗಬೇಡಿ, ಹೋದರೆ ನಿಮ್ಮ ಶರೀರಕ್ಕೆ ಮಾರಕವಾಗುತ್ತದೆ. ಮೂವತ್ತೊಂಬತ್ತು ದಿವಸವಾಯಿತು ಇಫ್ರೀತ್ ಹೋಗಿ, ಕೋಟೆಯ ಬೀಗದ ಕೈ ನನ್ನ ಬಳಿ ಕೊಟ್ಟು ಹೋಗಿದ್ದಾರೆಂದು ಹೇಳುತ್ತದೆ. ನಾನು ನಿಮಗೆ ಬೀಗದ ಕೈ ಕೊಡುತ್ತೇನೆ. ಆದರೆ ಅದರ ಬದಲಿಗೆ ನೀವು ನನಗೆ ಸಹಾಯ ಮಾಡಬೇಕೆಂದು ಹೇಳುತ್ತದೆ. ಆಗ ಅಲಿಯಾರ್ ಕೇಳುತ್ತಾರೆ. ನಾನು ಏನು ಸಹಾಯ ಮಾಡಬೇಕೆಂದು. ಆಗ ಮರ ಹೇಳುತ್ತದೆ. ಪ್ರವಾದಿಯವರ ಹಿಂಬಾಲಕ ಹಲ್ಲುಜ್ಜುವ ಮರ ನಾನು ಆಗಬೇಕೆಂದು, ಆಗ ಅಲಿಯಾರ್ ಹೇಳುತ್ತಾರೆ. ಆಗಲಿ ಎಂದು. ಆಗ ಮರ ಅಲಿಯಾರ್‌ರವರ ಕೈಯಲ್ಲಿ ಬೀಗದ ಕೈ ಕೊಡುತ್ತಾರೆ. ಕೊಟ್ಟು ಹೇಳುತ್ತಾರೆ ಮೆಲ್ಲ ತೆರೆಯಿರಿ. ಒಳ್ಳೆಯ ಶರೀರಕ್ಕೆ ಬೇಗ ಮಾರಕವಾಗುತ್ತದೆಂದು ಅಲಿಯಾರ್ ತಂಜಲ್ ಬಿಸ್ಮಿ ಹೇಳಿ ಒಂದನೆಯ ಬಾಗಿಲು ತೆಗೆಯುತ್ತಾರೆ. ಒಂದನೆಯ ಕೋಟೆಯಲ್ಲಿ ಅಚಾನಕ್ಕಾಗಿ ಬೀಸುವ ಖಡ್ಗವಿರುತ್ತದೆ. ಅದು ಒಂದೊಂದು ಖಡ್ಗ ಐದೈದು ತೂಕವಿರುತ್ತದೆ. ಹಾಗೆಯೆ ನೂರು ಖಡ್ಗ ಅಲ್ಲಿರುತ್ತದೆ. ಅಲ್ಲಿಂದ ಮುಂದೆ ಹೋಗಿ ಎರಡನೆಯ ಬಾಗಿಲು ತೆರೆಯುತ್ತಾರೆ. ಎರಡನೆಯ ಕೋಟೆಯಲ್ಲಿ ವಿಶಾಲವಾದ ಸಮುದ್ರವಿರುತ್ತದೆ. ಅಲ್ಲಿಂದ ಮುಂದೆ ಹೋಗಿ ಬಿಸ್ಮಿ ಹೇಳಿ ಮೂರನೆಯ ಬಾಗಿಲು ತೆರೆಯುತ್ತಾರೆ. ಅಲ್ಲಿ ಅಚಾನಕ್ಕಾಗಿ ಬೀಸುವ ಕಬ್ಬಿಣವಿರುತ್ತದೆ. ಅಲ್ಲಿಂದ ಮುಂದೆ ಹೋಗಿ ನಾಲ್ಕನೆಯ ಬಾಗಿಲು ತೆರೆಯುತ್ತಾರೆ. ಅಲ್ಲಿ ಅಚಾನಕ್ಕಾಗಿ ಕೊಲ್ಲುವ ಖಡ್ಗವಿರುತ್ತದೆ. ಅಲ್ಲಿಂದ ಮುಂದೆ ಹೋಗಿ ಐದನೆಯ ಬಾಗಿಲು ತೆರೆಯುತ್ತಾರೆ. ಅಲ್ಲಿ ಒಂದು ಆಶ್ಚರ್ಯವಾಗುತ್ತದೆ. ಅಲ್ಲಿ ಹಲವಾರು ಜನರು ಇರುತ್ತಾರೆ. ಎಪ್ಪತ್ತು ಸಾವಿರ ಸಾಲುಗಳಿರುತ್ತವೆ. ಅಲ್ಲಿಂದ ಮುಂದೆ ಹೋಗಿ ಆರನೆಯ ಕೋಟೆ ತೆರೆಯುತ್ತಾರೆ. ಆ ಕೋಟೆಯಲ್ಲಿ ನಿಂತು ಮಲಗುವ 400 ಮಹಿಳೆಯರು, ಕುಳಿತು ಮಲಗುವ 400 ಮಹಿಳೆಯರು, ಮಲಗಿ ನಿದ್ರಿಸುವ 400 ಮಹಿಳೆಯರಿರುತ್ತಾರೆ. ಅಲ್ಲಿಂದ ಮುಂದೆ ಹೋಗಿ ಏಳನೆಯ ಕೋಟೆ ತೆರೆಯುತ್ತಾರೆ. ಅಲ್ಲಿ ಒಂದು ಅದ್ಭುತ

ಕಾಣಿಸುತ್ತದೆ. ಅಲ್ಲಿ ಎಲ್ಲಾ ಬಾಗಿಲು ತೆರೆದಿರುತ್ತದೆ. ಒಂದು ಬಾಗಿಲು ಮಾತ್ರ ಮುಚ್ಚಿರುತ್ತದೆ. ಆಗ ಅಲಿಯಾರ್ ತಂಜಲ್ ಅಲ್ಲಾಹುವಿನೊಂದಿಗೆ ನನಗೆ ಇಲ್ಲಿ ಯಾರೂ ಇಲ್ಲ. ನನಗೆ ನೀವೇ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಅಲ್ಲಿ ಒಂದು ಹುಡುಗಿ ಮಲಗಿದ್ದು ಕಾಣಿಸುತ್ತದೆ. ಆ ಹೆಣ್ಣಿನ ಹತ್ತಿರ ಬಲ ಭಾಗದಲ್ಲಿ ಎರಡು ಬಾಟಲಿಗಳಿರುತ್ತವೆ. ಅದರಲ್ಲಿ ನೀರಿರುತ್ತದೆ. ಆ ನೀರನ್ನು ತೆಗೆದು ಅಲಿಯಾರ್ ಹೆಣ್ಣಿನ ಮೇಲೆ ರಟ್ಟಿಸುತ್ತಾರೆ.

ಆಗ ಹುಡುಗಿ ಎದ್ದು ಕೇಳುತ್ತಾಳೆ ಯಾರು ಈ ಕೋಟೆಗೆ ಬಂದದ್ದು. ಮನುಷ್ಯನಾದವನು ಈ ಕೋಟೆಗೆ ಬರಲಾರನು. ಒಂದು ವೇಳೆ ಮನುಷ್ಯ ಬಂದರಾದರೆ ಅದು ಮಕ್ಕದ ಅಲಿಯಾರ್ ಮಾತ್ರ ಆಗಿರುತ್ತದೆ. ಆಗ ಅಲಿಯಾರ್ ಕೇಳುತ್ತಾರೆ ನಿನಗೆ ಮಕ್ಕದ ಅಲಿಯಾರನ್ನು ನೋಡಿ ಗೊತ್ತಿದೆಯಾ ಎಂದು. ಆಗ ಹುಡುಗಿ ಹೇಳುತ್ತಾಳೆ. ನೀವು  ಯಾರೆಂದು ಹೇಳಿ. ಆಗ ಅಲಿಯಾರ್ ಗಟ್ಟಿಯಾಗಿ ಒಂದು ಶಬ್ದ ಮಾಡುತ್ತಾರೆ. ಶಬ್ದವನ್ನು ಕೇಳಿ ಆ ಹುಡುಗಿ ಅಲಿಯಾರ್‌ರ ಕಾಲು ಹಿಡಿದು ಜೋರು ಅಳುತ್ತಾಳೆ. ನಾವು ಇಲ್ಲಿಂದ ಹೇಗೆ ಹೋಗುವುದೆಂದು ಕೇಳುತ್ತಾಳೆ. ಆಗ ಅಲಿಯಾರ್ ನಿನ್ನನ್ನು ನಾನು ಕರೆದುಕೊಂಡು ಹೋಗಲು ಬಂದಿರುವುದಲ್ಲ, ನಾನು ಇಫ್ರಿತ್ ರಾಜನನ್ನು ನೋಡಿ ಹೋಗಲು ಬಂದದ್ದು ಎಂದು ಹೇಳುವಾಗ ಕೋಟೆ ಗಡ–ಗಡ ನಡುಗುತ್ತದೆ. ಆಗ ಅಲಿಯಾರ್ ಹುಡುಗಿಯ ಬಳಿ ಕೇಳುತ್ತಾರೆ ಕೋಟೆ ನಡುಗುವುದೇಕೆ. ಆಗ ಹುಡುಗಿ ಹೇಳುತ್ತಾಳೆ ಇಫ್ರಿತ್ ಬಂದ ಹಾಗೆ, ಹುಡುಗಿ ಹೆದರಿ ಮಲಗಿದ ಹಾಗೆ ನಟಿಸುತ್ತಾಳೆ.

ಇಫ್ರಿತ್ ಬಂದು ನೋಡುವಾಗ ಮುಚ್ಚಿದ ಕೋಟೆಯ ಬಾಗಿಲುಗಳೆಲ್ಲ ತೆರೆದಿರುತ್ತದೆ. ಹೇಗೆ ತೆರೆದದ್ದೆಂದು ಬಂದು ಏಳನೆಯ ಕೋಟೆ ನೋಡುತ್ತಾನೆ. ಅಲ್ಲಿ ಹುಡುಗಿ ಮಲಗಿರುತ್ತಾಳೆ. ಅವಳಿಗೆ ಎಚ್ಚರವಾಗಲು ನೀರು ಚಿಮುಕಿಸಿ ಹುಡುಗಿಯ ಬಳಿ ಕೇಳುತ್ತಾನೆ,  ಕೋಟೆಯ ಒಳಗೆ ಯಾರು ಬಂದಿದ್ದರೆಂದು? ಹುಡುಗಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾಳೆ. ಆಗ ಇಫ್ರೀತ್ ಹೇಳುತ್ತಾನೆ ಈ ಕೋಟೆಯ ಒಳಗೆ ಮಾನವನ ವಾಸನೆ ಬರುತ್ತಿದೆ. ಆಗ ಅವಳು ಹೇಳುತ್ತಾಳೆ, ನಾನು ಮನುಷ್ಯನ ಮಗಳಲ್ಲವೇ? ನನ್ನ ವಾಸನೆ ಹೋಗಬಹುದಾ? ಎಂದು. ಇಫ್ರೀತ್ ಹೇಳುತ್ತಾನೆ 'ನನಗೆ ಅಲಿ ವಾಸನೆ ಬರುತ್ತಿದೆ' ಎಂದು. ಆಗ ಹುಡುಗಿ ಕೇಳುತ್ತಾಳೆ ಯಾಕೆ ಇಫ್ರೀತ್ ಸುಳ್ಳು ಹೇಳುತ್ತೀದ್ದೀಯಾ? ಮಕ್ಕದ ಅಲಿ ಬಂದರೆ ನಿನಗೆ ಅಡಗಿ ನಿಲ್ಲುವರಾ? ಆಗ ಇಫ್ರೀತ್ ಹೇಳುತ್ತಾನೆ, ಮಕ್ಕದ ಅಲಿಯಾರನ್ನು ಕಂಡರೆ ನಾನು ಕೊಂದು ಬೆಂಕಿಗೆ ಹಾಕುತ್ತೇನೆಂದು. ಆಗ ಅಲಿಯಾರ್ ತಂಜಲ್

ಎದುರು ಬಂದು ಹೇಳುತ್ತಾರೆ, ನಿಜ ಹೇಳು ಪ್ರವಾದಿಯವರ ಧರ್ಮದಲ್ಲಿ ಇರುವ ಹುಡುಗಿಯನ್ನು ನೀನು ಹದಿನಾರು ವರ್ಷದಿಂದ ಅಡಗಿಸಿ ಇಟ್ಟಿದ್ದೇಯಲ್ವಾ? ನಿನ್ನ ಅಂತಿಮ ಬಂತು. ಬೇಗ ನೀನು ಕಲಿಮ ಹೇಳು. ಇಲ್ಲದಿದ್ದರೆ ಈ ಝುಲ್‌ಫಿಕರ್ ಖಡ್ಗದಿಂದ ನಾನು ನಿನ್ನನ್ನು ಕೊಲ್ಲುತ್ತೇನೆಂದು. ಆಗ ಇಫ್ರಿತ್ ಹೇಳುತ್ತಾನೆ, ನೀನು ಈ ಕೋಟೆಗೆ ಹೆದರಿ ಬಂದ್ದಲ್ಲವೇ? ಇಲ್ಲಿ ಬಂದು ಅಹಂಕಾರ ತೋರಿಸಬೇಡ. ನೀನು ಇಲ್ಲಿಗೆ ಬಂದದ್ದು ಒಳ್ಳೆಯದಾಯಿತು ಎಂದು ಹೇಳಿ ಕೈಯಲ್ಲಿ ಖಡ್ಗವನ್ನು ಹಿಡಿದು ನಲ್ವತ್ತು ಒಂಟೆಯನ್ನು ಕರೆದು ಅದಕ್ಕೆ ಮಳೆಯ ಹಾಗೆ ಬೆಂಕಿ ಹಚ್ಚುತ್ತಾನೆ. ಮತ್ತೆ ಏಳು ಬಾಟಲಿ ನೀರು ತುಂಬಿಸಿ ಒಂಟೆಯನ್ನು ಸುಟ್ಟು ತಿನ್ನುತ್ತಾನೆ.

ಅದನ್ನು ಅಲಿಯಾರ್ ನೋಡಿ ಮುಗುಳ್ನಕ್ಕು ಹೇಳುತ್ತಾರೆ, ನಿನ್ನನ್ನು ಕಾದು ಕುಳಿತು ತುಂಬಾ ದಿವಸವಾಯಿತು. ನೀನು ಮುರ್ ಸಲ್ ಕಲೀಮ ಹೇಳು ಎಂದು ಹೇಳುತ್ತಾರೆ. ಆಗ ಇಫ್ರೀತ್ ಹೇಳುತ್ತಾನೆ, ನನ್ನ ಕಾಲಾವಧಿ ಇರುವವರೆಗೆ ನಾನು ಕಲಿಮ ಹೇಳುವುದಿಲ್ಲವೆಂದು. ಆಗ ಅಲಿಯಾರ್ ಇಫ್ರಿತ್‌ನ್ನು ಬಾಣದ ಹಾಗೆ ಮಾಡಿ ಬಿಸಾಡುತ್ತಾರೆ. ಬಿಸಾಡಿದ ರಭಸಕ್ಕೆ ಇಫ್ರೀತ್ ದೂರ ಹೋಗುತ್ತಾನೆ. ಆಗ ಇಫ್ರಿತ್ ಹೇಳುತ್ತಾನಿ, ನನ್ನನ್ನು ಹಿಡಿಯದಿದ್ದರೆ ನಾನು ಕಲಿಮ ಹೇಳದೇ ಬೀಳುತ್ತೇನೆಂದು. ಆಗ ಅಲಿಯಾರ್ ಹಿಡಿಯಲು ಕೈ ಮುಂದೆ ಮಾಡುತ್ತಾರೆ. ಆಗ ಜಿಬ್‌ರಿಲ್ ಬಂದು ಕೈಯನ್ನು ತಟ್ಟುತ್ತಾರೆ. ಆಗ ಇಫ್ರಿತ್ ಕೆಳಗೆ ಬೀಳುತ್ತಾನೆ. ಅಲಿಯಾರ್ ಜೀಬ್‌ರಿಲ್‌ನೊಂದಿಗೆ ಕೇಳುತ್ತಾರೆ. ಯಾಕೆ ಕೈಯನ್ನು ತಟ್ಟಿದ್ದು? ಆಗ ಜಿಬ್‌ರಿಲ್ ಹೇಳುತ್ತಾರೆ. ಇದೆಲ್ಲಾ ಇಫ್ರಿತ್‌ನ ಕುತಂತ್ರ. ಆಗ ಇಫ್ರಿತ್ ಹೇಳುವುದಿಲ್ಲವೆಂದು ಖಡ್ಗ ತೆಗೆದು ಹೊಡೆಯುವಾಗ ಅಲಿಯಾರ್ ಖಡ್ಗದಿಂದ ಬೀಸುತ್ತಾರೆ. ಆಗ ಇಫ್ರಿತ್ ಹೇಳುತ್ತಾನೆ ನನ್ನ ದೇಹಕ್ಕೆ ಮೊಳ(ಪೆಟ್ಟು) ಕೂಡ ತಾಗುವುದಿಲ್ಲ. ನನ್ನ ದೇಹ ನಾಲ್ವತ್ತು ಮೊಳ, ನನ್ನ ಮೀಸೆ ನಲ್ವತ್ತು ಮೊಳ ಇಂಚುವೆಂದು. ಅಲಿಯಾರ್ ಬೀಸುವಾಗ ಇಫ್ರೀತ್‌ನ ಕೆಳಭಾಗ (ಗುಹ್ಯಸ್ಥಾನ) ಎರಡು ಭಾಗವಾಗಿ ಕೆಳಗೆ ಬೀಳುತ್ತಾನೆ. ಇಫ್ರಿತ್ ಬೀಳುವಾಗ ಜೋರು ಶಬ್ದವಾಗುತ್ತದೆ. ಅಲಿಯಾರ್ ದುಲ್ ದುಲ್ ಎಂಬ ಕುದುರೆಯಲ್ಲಿ ಕುಳಿತು ಹಿಂದೆ ಹುಡುಗಿಯನ್ನು ಕುಳ್ಳಿರಿಸುತ್ತಾರೆ. ಮತ್ತೆ ಹೇಳುತ್ತಾರೆ ಈ ಕಾಪಿರನ್ನು ಇಲ್ಲಿ ಬಿಟ್ಟರೆ ಮಕ್ಕ ಮದೀನದಲ್ಲಿ ಗಲಾಟೆಯಾಗಬಹುದು ಎಂದು ಬಿಸ್ಮಿ ಹೇಳಿ ಖಡ್ಗ ತೆಗೆದು ಇಫ್ರಿತ್ ತಲೆ ಹಾರಿಸುತ್ತಾರೆ. ಇಫ್ರಿತ್ ಸಾಯುತ್ತಾನೆ.

ತಕ್ಬೀರ್ ಹೇಳಿ ಅಲಿಯಾರ್ ಆ ಹುಡುಗಿಯನ್ನು ಕರೆದುಕೊಂಡು ಅಕ್ಬರ್

ಸದಕ ಇರುವ ತೂರಿಸಿನಾಮಲೆ ಪರ್ವತಕ್ಕೆ ಹೋಗುತ್ತಾರೆ. ಒಂದು ಕರೆಗೆ ಅಕ್ಬರ್ ಸದಕ ಲಬ್ಬೈಕುಂ ಲಬ್ಬೈಕುಂ ಕೋಜಾವೇ ಎಂದು ಹೇಳುತ್ತದೆ. ಆಗ ಅಲಿಯಾರ್ ಕೇಳುತ್ತಾರೆ. ನೀನು ಯಾಕೆ ಒಂದೇ ಕರೆಗೆ ಬಂದದ್ದೆಂದು. ಆಗ ಅಕ್ಬರ್ ಸದಕ ಹೇಳುತ್ತದೆ. ಈಗ ನನಗೆ ಪ್ರವಾದಿಯವರು ಇದ್ದಾರೆಂದು ಗೊತ್ತಾಯಿತು. ನಾವು ಮದಿನದ ಮಸೀದಿಗೆ ಹೋಗೋಣ ಎಂದು ಅಲಿಯಾರ್‌ರವರೊಂದಿಗೆ ಮದೀನದ ಮಸೀದಿಗೆ ಹೋಗುತ್ತಾರೆ. ಆಗ ಪ್ರವಾದಿಯವರು ಕೇಳುತ್ತಾರೆ, ನೀವು ಯಾಕೆ ನಿನ್ನ ಜೊತೆ ಪಕ್ಷಿಯನ್ನು ಹೊರಗೆ ಹಾಕಿದ್ದೀ? ಆಗ ಅಕ್ಬರ್ ಸದಕ ಹೇಳುತ್ತದೆ. ನನಗೆ ಅದರ ಮೇಲೆ ಸಂಶಯವಾಯಿತು. ಒಂದು ದಿನಕ್ಕೆ ಎರಡು ಮೊಟ್ಟೆ ಯಾಕೆ ಹಾಕಿದೆಯೆಂದು. ಅದಕ್ಕೆ ನಾನು ಹೊರಗೆ ಹಾಕಿದ್ದೆಂದು ಹೇಳುತ್ತದೆ. ಆಗ ಪ್ರವಾದಿಯವರು ಮುಗುಳ್ನಕ್ಕು ಹೇಳುತ್ತಾರೆ ನಿನಗೆ ಸಂಶಯ ಬೇಡ. ಅದು ಅಲ್ಲಾಹುವಿನ ಪವಾಡ ವಾಗಿರುತ್ತದೆ. ಪ್ರವಾದಿಯವರ ಮಾತನ್ನು ಕೇಳಿ ಅಕ್ಬರ್ ಸದಕದ ಸಂಶಯ ನಿವಾರಣೆಯಾಗುತ್ತದೆ. ಅದರಿಂದಾದ ತಪ್ಪಿಗೆ ಕ್ಷಮೆ ಕೇಳುತ್ತದೆ. ಎಲ್ಲರಿಗೂ ಸಲಾಂ ಹೇಳಿ, ಅದರ ಜೊತೆ ಪಕ್ಷಿಯನ್ನು ಕರೆದುಕೊಂಡು ಹೋಗುತ್ತದೆ. ಆ ಹುಡುಗಿಯನ್ನು ಅಲಿಯಾರ್ ಅವಳ ಮನೆಗೆ ತಲುಪಿಸುತ್ತಾರೆ.

ಕಥೆ ಹೇಳಿದವರು: **ರಹ್ಮತ್, ಗುಡ್ಡೆ ಅಂಗಡಿ**

## 12. ಮೀನು – ನಾರಿ

ಒಂದು ಊರಿನಲ್ಲಿ ಮೀನು ಹಿಡಿಯುವವನು ಇದ್ದನು. ಅವನು ಮೀನು ಹಿಡಿದು ಅದನ್ನು ಮಾರಿ ಅವನ ದಿನವನ್ನು ಕಳೆಯುತ್ತಿದ್ದನು. ಒಂದು ದಿನ ಅವನಿಗೆ ಆರೋಗ್ಯ ಕೆಡುತ್ತದೆ. ಗುಣವಾಗುವುದೇ ಕಾಣುವುದಿಲ್ಲ. ಹಾಗೆ ಅವನು ಒಂದು ದಿನ ಹೆಂಡತಿಯನ್ನು ಕರೆದು ಹೇಳುತ್ತಾನೆ, ನಾನು ತೀರಿಹೋದ ಮೇಲೆ ನಮ್ಮ ಮಗನೊಂದಿಗೆ ನನ್ನ ಕೆಲಸ ಮೀನು ಮಾರುವುದೆಂದು ಹೇಳಬಾರದು ಎಂದು.

ಕೆಲವು ದಿನಗಳ ನಂತರ ಮೀನು ಮಾರುವವನು ತೀರಿಕೊಂಡನು. ಹಾಗೆಯೇ ದಿನ ಕಳೆಯುತ್ತದೆ. ಮಗನಿಗೆ ಕೆಲಸಕ್ಕೆ ಹೋಗುವ ವಯಸ್ಸಾಗುತ್ತದೆ. ಕೆಲಸಕ್ಕೆ ಹೋಗುತ್ತಾನೆ. ತುಂಬಾ ಕಡೆ ಕೆಲಸಕ್ಕೆ ಹೋಗುತ್ತಾನೆ. ಎಲ್ಲಿಯೂ ಅವನಿಗೆ ಕೆಲಸ ಹಿಡಿಸುವುದಿಲ್ಲ. ಕೆಲವು ದಿವಸಗಳ ನಂತರ ಅವನ ಅಮ್ಮ ತೀರಿಹೋಗುತ್ತಾರೆ. ಆದ ನಂತರ ಅವನು ಒಂಟಿಯಾಗುತ್ತಾನೆ. ತಿನ್ನಲೇನೂ ಇರುವುದಿಲ್ಲ. ಕೈಯಲ್ಲಿ

ಹಣವೂ ಇರುವುದಿಲ್ಲ. ಹಾಗೆ ಒಂದು ದಿನ ಅವನು ಏನಾದರೂ ಮಾರಲು ಸಾಮಾನು ಸಿಗುತ್ತದಾ ಎಂದು ನೋಡಲು ಅಟ್ಟಕ್ಕೆ ಹತ್ತುತ್ತಾನೆ.

ಅಟ್ಟದಲ್ಲಿ ಸಾಮಾನು ಹುಡುಕಿಕೊಂಡಿರುವಾಗ ಅವನಿಗೆ ಅವನ ಅಪ್ಪ ಮೀನು ಹಿಡಿಯುತ್ತಿದ್ದ ಗಾಳ ಸಿಗುತ್ತದೆ. ಮೀನು ಹಿಡಿಯುವ ಗಾಳ ನೋಡಿ ಅವನಿಗೆ ಗೊತ್ತಾಗುತ್ತದೆ. ಅವನ ಅಪ್ಪ ಮೀನು ಹಿಡಿಯುತ್ತಿದ್ದರೆಂದು. ಹಾಗೆ ಅವನು ಮೀನು ಹಿಡಿಯುವ ಗಾಳ ತೆಗೆದುಕೊಂಡು ಸಮುದ್ರಕ್ಕೆ ಮೀನು ಹಿಡಿಯಲು ಹೋಗುತ್ತಾನೆ. ಮೀನು ಹಿಡಿಯಲು ಗಾಳ ಹಾಕಿದಾಗ ಅದರಲ್ಲಿ ಅವನಿಗೆ ಎರಡು ಮೀನುಗಳು ಸಿಗುತ್ತದೆ. ಅದರಲ್ಲಿ ಒಂದನ್ನು ಮಾರಿ ಅಕ್ಕಿ ಮತ್ತು ಊಟ–ಪದಾರ್ಥ ಮಾಡಲು ಕಟ್ಟಿಗೆಯನ್ನು ತೆಗೆಯುತ್ತಾನೆ. ಇನ್ನೊಂದು ಮೀನನ್ನು ತಂದು ಕಟ್ಟಿಗೆಯಲ್ಲಿ ಸುಟ್ಟು ಪದಾರ್ಥ ಮಾಡಿ ತಿನ್ನುತ್ತಾನೆ. ಹಾಗೇ ಅವನು, ಇನ್ನು ಹೀಗೆಯೇ ಮೀನು ಹಿಡಿಯುವ ಕೆಲಸ ಮಾಡಬೇಕೆಂದು ದೃಢ ನಿಶ್ಚಯಿಸುತ್ತಾನೆ.

ಹೀಗೆ ಒಂದು ದಿನ ಮೀನು ಹಿಡಿಯುವಾಗ ಅವನು ಅಂದವಾದ ಒಂದು ಮೀನನ್ನು ಹಿಡಿಯುತ್ತಾನೆ. ಅದನ್ನು ನೋಡಿ ಅವನಿಗೆ ಸಂತೋಷವಾಗುತ್ತದೆ. ಅದನ್ನು ಅವನಿಗೆ ಮಾರಲು ಮನಸ್ಸು ಬರುವುದಿಲ್ಲ. ತಿನ್ನಲೂ ಮನಸ್ಸು ಬರುವುದಿಲ್ಲ. ಹಾಗೆ ಅದನ್ನು ಅವನು ಮನೆಗೆ ತಂದು ಮನೆಯ ಒಳಗೆ ಒಂದು ಸಣ್ಣ ಬಾವಿ ಮಾಡಿ ಮೀನನ್ನು ಅದರೊಳಗೆ ಹಾಕುತ್ತಾನೆ. ರಾತ್ರಿ ಏನು ತಿನ್ನದೆ ಮಲಗುತ್ತಾನೆ. ಬೆಳಿಗ್ಗೆ ಎದ್ದು ಮೀನು ಹಿಡಿಯಲು ಹೋಗುತ್ತಾನೆ.

ಮೀನು ಹಿಡಿದು ಸಂಜೆ ಮನೆಗೆ ಬರುವಾಗ ಅವನ ಮನೆ ಗುಡಿಸಿ ಶುಚಿಯಾಗಿರುತ್ತದೆ. ಇದನ್ನು ನೋಡಿ ಅವನಿಗೆ ಆಶ್ಚರ್ಯವಾಗುತ್ತದೆ. ಅವನು ಪಕ್ಕದ ಮನೆಯವರು ಅಚ್ಚುಕಟ್ಟಾಗಿಟ್ಟದ್ದು ಎಂದು ಅನಿಸಿ ಅವರಿಗೆ ದೇವರಲ್ಲಿ ಪ್ರಾರ್ಥಿಸುತ್ತಾನೆ.

ಮರುದಿನವೂ ಎಂದಿನಂತೆ ಎದ್ದು ಬಾವಿಯಲ್ಲಿದ್ದ ಮೀನನ್ನು ನೋಡಿ ಕೆಲಸಕ್ಕೆ ಹೋಗುತ್ತಾನೆ. ಕೆಲಸ ಮುಗಿದು ಸಂಜೆ ಮನೆಗೆ ಬರುವಾಗ ಹಾಗೆಯೇ ಅವನ ಮನೆ ಗುಡಿಸಿ, ಅಚ್ಚುಕಟ್ಟಾಗಿರುತ್ತದೆ. ಅವನಿಗೆ ಇದನ್ನು ನೋಡಿ ಪುನಃ ಆಶ್ಚರ್ಯವಾಗುತ್ತದೆ. ಮೀನನ್ನೇ ಕೆಲ ಸಮಯ ದಿಟ್ಟಿಸಿ, ಹೋಟೇಲಿಗೆ ಚಾಹ ಕುಡಿಯಲು ಹೋಗುತ್ತಾನೆ. ಅಲ್ಲಿ ಸುಮ್ಮನೆ ಕುಳಿತು ಯಾರಾಗಿರಬಹುದು ಮನೆಯನ್ನು ಅಚ್ಚುಕಟ್ಟಾಗಿ ಇಟ್ಟದ್ದು ಎಂದು ಅಲೋಚನೆ ಮಾಡುತ್ತಿರುತ್ತಾನೆ. ಇವನು ಆಲೋಚಿಸುವುದನ್ನು ಅವನ ಹತ್ತಿರ ಕುಳಿತುಕೊಂಡ ಒಬ್ಬ ವ್ಯಕ್ತಿಯು

ನೋಡಿ ಕೇಳುತ್ತಾರೆ. ನೀನು ಏನು ಆಲೋಚಿಸುತ್ತಿದ್ದೀಯಾ? ಹಾಗೆ ಅವನು ಎಲ್ಲಾ ವಿಷಯವನ್ನು ಹೇಳುತ್ತಾನೆ. ಅವರು ಅವನೊಟ್ಟಿಗೆ ಕೇಳುತ್ತಾರೆ. ನೀನು ಮನೆಯ ಬೀಗದ ಕೈಯನ್ನು ಎಲ್ಲಿ ಇಟ್ಟಿದ್ದೀ ಎಂದು. ಆಗ ಅವನು ಹೇಳುತ್ತಾನೆ, ನಾನು ಹೋಗುವಾಗ ಬೀಗದ ಕೈಯನ್ನು ನನ್ನ ಬಳಿಯೇ ತೆಗೆದುಕೊಂಡು ಹೋಗುತ್ತೇನೆ. ನಾನು ಹೋದ ನಂತರ ಮನೆಯಲ್ಲಿ ಮೀನನ್ನು ಬಿಟ್ಟು ಬೇರೆ ಯಾರು ಇರುವುದಿಲ್ಲವೆಂದು ಹೇಳುತ್ತಾನೆ. ಆಗ ಅವರು ಹೇಳುತ್ತಾರೆ ನಾಳೆ ನೀನು ಎಲ್ಲಿಗೂ ಹೋಗಬೇಡ ಮನೆಯ ಒಳಗೆ ಮೆಲ್ಲ ಅಡಗಿ ಕುಳಿತು ನೋಡು, ಯಾರು ಹಾಗೆ ಮಾಡುವುದೆಂದು.

ಹಾಗೆ ಅವರು ಹೇಳಿದ್ದನ್ನು ಕೇಳಿ ಅವನು ಮನೆಗೆ ಹೋಗುತ್ತಾನೆ. ಮರುದಿನ ಕೆಲಸಕ್ಕೆ ಹೋದ ಹಾಗೆ ಮಾಡಿ ಬಾಗಿಲು ತೆಗೆದು ಪುನಃ ಹಾಕಿ ಅಡಗಿ ಕುಳಿತುಕೊಳ್ಳುತ್ತಾನೆ. ಕೂಡಲೇ ಬಾವಿಯ ಒಳಗಿದ್ದ ಮೀನು ಹಾರಿ ಹೊರಗೆ ಬಂದು ಅದರ ಚರ್ಮವನ್ನು ಕದಲಿಸುತ್ತದೆ. ಆಗ ಮೀನು ಸುಂದರವಾದ ಹುಡುಗಿಯಾಗುತ್ತಾಳೆ. ಅವನು ಒಮ್ಮೆಲೆ ಮೀನು ಕೆಳಗೆ ಹಾಕಿದ ಚರ್ಮವನ್ನು ತೆಗೆದು ಬೆಂಕಿಗೆ ಹಾಕುತ್ತಾನೆ. ಆವಾಗ ಆ ಹುಡುಗಿ ಹೇಳುತ್ತಾಳೆ ನೀನು ಹೀಗೆ ಮಾಡಬಾರದಿತ್ತು. ಇನ್ನು ಏನೂ ಮಾಡಲಾಗುವುದಿಲ್ಲವೆಂದು ಹೇಳಿ ಆ ಹುಡುಗನ ಹೆಂಡತಿಯಾಗಲೂ ಒಪ್ಪುತ್ತಾಳೆ. ಮದುವೆಯ ತಯಾರಿ ಎಲ್ಲಾ ಆಗುತ್ತದೆ. ಹುಡುಗಿಯನ್ನು ನೋಡಿ ಎಲ್ಲರಿಗೂ ಅವಳ ಸೌಂದರ್ಯವನ್ನು ನೋಡಿ ಆಶ್ಚರ್ಯವಾಗುತ್ತದೆ. ಅವರು ಹೇಳುತ್ತಾರೆ ಈ ಹುಡುಗಿ ಸುಲ್ತಾನನ ಮಡದಿಯಾಗಲು ಹೇಳಿದ ಹುಡುಗಿ. ಸುಲ್ತಾನನಿಗೆ ಈ ಹುಡುಗಿಯ ವಿಷಯ ಗೊತ್ತಾಗಿ ಹೇಳುತ್ತಾನೆ. ಆ ಹುಡುಗಿಯನ್ನು ಅವನ ಮುಂದೆ ಕರೆದುಕೊಂಡು ಬರಬೇಕೆಂದು. ಆ ಹುಡುಗಿಯನ್ನು ಸುಲ್ತಾನನ ಮುಂದೆ ಕರೆದುಕೊಂಡು ಬರುತ್ತಾರೆ. ಹುಡುಗಿಯನ್ನು ನೋಡಿ ಅವನಿಗೂ ಅವಳ ಮೇಲೆ ಪ್ರೀತಿ ಹುಟ್ಟುತ್ತದೆ. ಅವಳನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಹುಡುಗಿ ಸತ್ಯ ಸಂಗತಿ ಬಹಿರಂಗ ಪಡಿಸುತ್ತಾಳೆ.

ಸುಲ್ತಾನ್ ಆ ಹುಡುಗನನ್ನು ಕರೆದು ಹೇಳುತ್ತಾನೆ, ನಲ್ವತ್ತು ದಿನದ ಒಳಗೆ ನೀನು ನನಗೆ ಸಮುದ್ರದ ಮಧ್ಯದಲ್ಲಿ ಚಿನ್ನದ ದೊಡ್ಡ ಅರಮನೆ ಕಟ್ಟಿ ಕೊಟ್ಟರೆ ಈ ಹುಡುಗಿಯನ್ನು ನಾನು ನಿನ್ನಿಂದ ಕಿತ್ತುಕೊಳ್ಳುವುದಿಲ್ಲ. ಒಂದು ವೇಳೆ ನೀನು ಸೋತರೆ ಅವಳನ್ನು ನಾನು ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತಾನೆ. ಹುಡುಗ ಅಳುತ್ತಾ ಬೇಸರದಲ್ಲಿ ಮನೆಗೆ ಹೋಗುತ್ತಾನೆ. ಅವನು ಅಳುವುದನ್ನು

ನೋಡಿ ಹುಡುಗಿ ಕೇಳುತ್ತಾಳೆ. ನೀನು ಯಾಕೆ ಅಳುತ್ತಿದ್ದೀಯಾ. ಅದಕ್ಕೆ ಅವನು ಸುಲ್ತಾನ್ ಹೇಳಿದ್ದನ್ನು ಹೇಳುತ್ತಾನೆ. ಆಗ ಹುಡುಗಿ ಸಂತೋಷದಿಂದಲೇ ಹೇಳುತ್ತಾಳೆ, ನೀನು ಅಳಬೇಡ, ನಾವು ಇದನ್ನು ಸರಿ ಮಾಡುವ ಎಂದು ಹೇಳುತ್ತಾಳೆ. ನಾನು ನಿನಗೆ ಮೀನಾಗಿ ಸಿಕ್ಕಿದ ಸ್ಥಳಕ್ಕೆ ಹೋಗಿ ನೀನು ಕಲ್ಲು ಬಿಸಾಡು. ಆಗ ಒಂದು ಅರಬಿ ಬಂದು ಕೇಳುತ್ತಾನೆ. ನಿನಗೆ ಏನು ಬೇಕೆಂದು. ಆಗ ನೀನು ನನ್ನನ್ನು ಒಂದು ಹುಡುಗಿ ಕಳುಹಿಸಿದ್ದು, ಅವಳಿಗೆ ನೀನು ಒಂದು ತಲೆದಿಂಬು ಕೊಡಬೇಕೆಂದು ಹೇಳು. ಆಗ ಅರಬಿ ನಿನಗೆ ಒಂದು ತಲೆದಿಂಬು ಕೊಡುತ್ತಾನೆ. ಅದನ್ನು ನೀನು ತೆಗೆದು ಸುಲ್ತಾನನಿಗೆ ಎಲ್ಲಿ ಅರಮನೆ ಬೇಕು ಆ ಸ್ಥಳಕ್ಕೆ ಎಸೆದು ಮನೆಗೆ ಬಾ ಎಂದು ಹೇಳುತ್ತಾಳೆ.

ಹುಡುಗ ಅವಳು ಹೇಳಿದ ಹಾಗೆ ತಲೆದಿಂಬು ಎಸೆದ ಸ್ಥಳದಲ್ಲಿ ನೋಡುವಾಗ ಅಲ್ಲಿ ಸುಲ್ತಾನ ಹೇಳಿದ್ದಕ್ಕಿಂತ ಸುಂದರವಾದ ಅರಮನೆ ಆಗಿರುತ್ತದೆ. ಹಾಗೆ ಅವನು ಸಂತೋಷದಿಂದ ಹೋಗಿ ಸುಲ್ತಾನನೊಂದಿಗೆ ಹೇಳುತ್ತಾನೆ ನಿನಗೆ ಬೇಕಾದ ಹಾಗೆ ಅರಮನೆ ಮಾಡಿದ್ದೇನೆಂದು.

ಆಗ ಸುಲ್ತಾನ್ ನನಗೆ ಅಲ್ಲಿಗೆ ಹೋಗಿ ಬರಲು ದೊಡ್ಡದೊಂದು ವಜ್ರದ ಸೇತುವೆ ಮಾಡಿಕೊಡಬೇಕೆಂದು ಹೇಳುತ್ತಾನೆ. ಹಾಗೆ ಹುಡುಗ ಮನೆಗೆ ಹೋಗಿ ಅಳುತ್ತಾನೆ. ಆಗ ಹುಡುಗಿ ಏನಾಯಿತೆಂದು ಕೇಳುತ್ತಾಳೆ. ಅವನು ಸುಲ್ತಾನನು ಹೇಳಿದ್ದನ್ನು ಹೇಳುತ್ತಾನೆ. ಆಗ ಅವಳು ಹೇಳುತ್ತಾಳೆ ನಿನ್ನೆ ಹೋದ ಹಾಗೆ ಅರಬಿಯೊಟ್ಟಿಗೆ ಹೋಗಿ ತಲೆದಿಂಬು ಕೇಳು, ಕೊಟ್ಟ ಮೇಲೆ ಅದನ್ನು ತೆಗೆದು ಅರಮನೆಯ ಮುಂದೆ ಬಿಸಾಡು. ಹಾಗೆಯೇ ಅವಳು ಹೇಳಿದ ಹಾಗೆ ಮಾಡುತ್ತಾನೆ. ಆದ ಮೇಲೆ ಸುತ್ತಮುತ್ತಲೂ ನೋಡುತ್ತಾನೆ. ನೋಡುವಾಗ ಸುಂದರವಾದ ದೊಡ್ಡ ಸೇತುವೆಯಾಗಿರುತ್ತದೆ. ಅವನು ಅಲ್ಲಿಂದ ಸುಲ್ತಾನನ ಬಳಿ ಹೋಗಿ ಹೇಳುತ್ತಾನೆ. ನೀನು ಹೇಳಿದ ಹಾಗೆಯೇ ಮಾಡಿದೆ ಎಂದು.

ಮೂರನೇಯದಾಗಿ ಸುಲ್ತಾನ್ ಹುಡುಗನೊಂದಿಗೆ ಹೇಳುತ್ತಾನೆ. ನೀನು ಊರಿನವರಿಗೆಲ್ಲಾ ಔತಣ ಮಾಡಬೇಕು. ಊರಿನವರೆಲ್ಲಾ ಹೊಟ್ಟೆತುಂಬಾ ತಿಂದು ತಿಂದೂ ಇನ್ನೂ ಉಳಿಯಬೇಕೆಂದು ಹೇಳುತ್ತಾನೆ. ಹುಡುಗ ಮನೆಗೆ ಹೋಗಿ ಅಲೋಚಿಸುತ್ತಿರುತ್ತಾನೆ. ಆಗ ಹುಡುಗಿ ಬಂದು ಏನಾಯಿತೆಂದು ಕೇಳುತ್ತಾಳೆ. ಆಗ ಅವನು ಸುಲ್ತಾನ್ ಹೇಳಿದ್ದನ್ನು ಹೇಳುತ್ತಾನೆ. ಅದನ್ನು ಕೇಳಿ ಅವಳು, ನೀನು ಅರಬಿಯ ಹತ್ತಿರ ಹೋಗಿ ಕಾಫಿ ಭರಣಿ ಕೇಳು. ಬರುವಾಗ ಜಾಗ್ರತೆ ಮಾಡು. ದಾರಿಯಲ್ಲಿ ಅದರ ಮುಚ್ಚಳವನ್ನು ತಿರುಗಿಸಬೇಡವೆಂದು ಹೇಳುತ್ತಾಳೆ.

ಹಾಗೆ ಅವನು ಹೋಗಿ ಅರಬಿಯೊಂದಿಗೆ ಕಾಫಿ ಭರಣಿ ತೆಗೆದುಕೊಂಡು ಬರುತ್ತಾನೆ. ಹಾಗೆ ಬರುವಾಗ ಅವನು ಮರೆತು ಕಾಫಿ ಭರಣಿ ಮುಚ್ಚಳವನ್ನು ತಿರುಗಿಸುತ್ತಾನೆ. ಆಗ ಏಳೆಂಟು ತಟ್ಟೆ ಊಟವೆಲ್ಲಾ ಕೆಳಗೆ ಬೀಳುತ್ತದೆ. ಅದನ್ನು ಹೆಕ್ಕಿ ಮನೆಗೆ ಬರುತ್ತಾನೆ.

ಹಾಗೆ ಔತಣ ಕೂಟದಂದು ಊರಿನವರೆಲ್ಲಾ ಸುಲ್ತಾನನ ಆಮಂತ್ರಣದಂತೆ ಮೀನು ಮಾರುವವನ ಹುಡುಗನ ಮನೆಗೆ ಹೋಗುತ್ತಾರೆ. ಬಂದ ಅತಿಥಿಗಳೆಲ್ಲ ಅವರಿಗೆ ಬೇಕಾದಷ್ಟು ತಿನ್ನುತ್ತಾರೆ. ಆದರೂ ಊಟ ಉಳಿದಿರುತ್ತದೆ.

ಸುಲ್ತಾನನಿಗೆ ಕೋಪ ಬರುತ್ತದೆ, ಅವನು ಹುಡುಗನ ಬಳಿ ಹೇಳುತ್ತಾನೆ ನೀನು ಮೊಟ್ಟೆಯ ಒಳಗಿನಿಂದ ಒಂದು ಕತ್ತೆಯನ್ನು ಕರೆದುಕೊಂಡು ಬರಬೇಕು. ಹಾಗೆ ಅವನು ಮನೆಗೆ ಹೋಗಿ ಹುಡುಗಿಯೊಂದಿಗೆ ಸುಲ್ತಾನ್ ಹೇಳಿದ್ದನ್ನು ಹೇಳುತ್ತಾನೆ. ಅವಳು ಹೇಳುತ್ತಾಳೆ, ಅರಬಿಯ ಹತ್ತಿರ ಹೋಗಿ ಮೂರು ಮೊಟ್ಟೆ ಬೀಳಿಸದೆ ತೆಗೆದುಕೊಂಡು ಬಾ. ಅವನು ಹೋಗಿ ಮೊಟ್ಟೆ ತೆಗೆದುಕೊಂಡು ಬರುತ್ತಾನೆ. ಅರ್ಧದಾರಿಯಲ್ಲಿ ಒಂದು ಮೊಟ್ಟೆ ಅವನ ಕೈಯ ಕೆಳಗೆ ಬೀಳುತ್ತದೆ. ಆಗ ಅದರ ಒಳಗಿನಿಂದ ಒಂದು ಕತ್ತೆ ಹೊರಗೆ ಬಂದು ಆಚೆ ಈಚೆ ಓಡಿ ಸಮುದ್ರದ ಒಳಗೆ ಮುಳುಗಿ, ಕಾಣೆಯಾಗುತ್ತದೆ.

ಹಾಗೆ ಉಳಿದ ಎರಡು ಮೊಟ್ಟೆಗಳನ್ನು ಹುಡುಗ ಎಚ್ಚರಿಕೆಯಿಂದ ಮನೆಗೆ ತೆಗೆದುಕೊಂಡು ಬರುತ್ತಾನೆ. ಹುಡುಗಿ ಕೇಳುತ್ತಾಳೆ ಮೂರನೆಯ ಮೊಟ್ಟೆ ಎಲ್ಲಿದೆಯೆಂದು. ಅದು ಕೆಳಗೆ ಬಿತ್ತು ಎಂದು ಹೇಳುತ್ತಾನೆ. ಆಗ ಅವಳು ಹೇಳುತ್ತಾಳೆ ನೀನು ಎಚ್ಚರಿಕೆಯಿಂದ ತೆಗೆದುಕೊಂಡು ಬರಬೇಕಿತ್ತು. ಈಗ ಕೆಳಗೆ ಬಿದ್ದದ್ದನ್ನು ಏನು ಮಾಡಲಾಗುವುದಿಲ್ಲ ಎಂದು ಹೇಳುತ್ತಾಳೆ. ಹಾಗೆ ಹುಡುಗ ಮೊಟ್ಟೆಯನ್ನು ತೆಗೆದುಕೊಂಡು ಸುಲ್ತಾನನ ಹತ್ತಿರ ಹೋಗುತ್ತಾನೆ. ಹೋಗಿ ಸುಲ್ತಾನನೊಂದಿಗೆ ಬೆಂಚಿಯ ಮೇಲೆ ನಿಲ್ಲಲಾ ಎಂದು ಕೇಳುತ್ತಾನೆ. ಸುಲ್ತಾನ್ ಸಮ್ಮತಿಸುತ್ತಾನೆ. ಅವನು ಬೆಂಚಿಯ ಮೇಲೆ ಹತ್ತಿ ಮೊಟ್ಟೆಯನ್ನು ಎಸೆಯುತ್ತಾನೆ. ತಟ್ಟನೆ ಕತ್ತೆ ಹಾರಿ ಬಂದು ಸುಲ್ತಾನನ ಮೇಲೆ ಬಿದ್ದು ಅವನನ್ನು ತಿನ್ನಲು ಹೋಗುತ್ತದೆ. ಆಗ ಹುಡುಗ ಸುಲ್ತಾನನ್ನು ಕಾಪಾಡುತ್ತಾನೆ. ಕತ್ತೆ ಓಡಿ ಹೋಗಿ ಸಮುದ್ರಕ್ಕೆ ಬಿದ್ದು ಕಾಣೆಯಾಗುತ್ತದೆ.

ಅವನು ಬೇಸರದಿಂದ ಹುಡುಗನನ್ನು ಸೋಲಿಸಲಾಗದೆ ಅವನು ಇನ್ನೊಂದು ಕಷ್ಟದ ಕೆಲಸ ಕೊಡುತ್ತಾನೆ. ಸುಲ್ತಾನ್ ಹುಡುಗನೊಂದಿಗೆ ಹೇಳುತ್ತಾನೆ ಒಂದು ದಿವಸವೂ ಆಗದ ಹಸುಳೆಯನ್ನು ನೀನು ಕರೆದುಕೊಂಡು ಬರಬೇಕು. ಆ

ಹಸುಳೆಗೆ ಮಾತನಾಡಲು ಗೊತ್ತಿರಬೇಕು, ನಡೆಯಲೂ ಗೊತ್ತಿರಬೇಕು ಎಂದು ಹೇಳುತ್ತಾನೆ. ಆದರು ಸೋಲದೆ ಹುಡುಗಿ ಧೈರ್ಯದಿಂದ ಹುಡುಗನೊಂದಿಗೆ ಹೇಳುತ್ತಾಳೆ, ನೀನು ಹೋಗಿ ಅರಬಿಗೆ ಕೃತಜ್ಞತೆಗಳನ್ನು ಹೇಳಿ ಅರಬಿಯೊಂದಿಗೆ ಹೇಳು ಆ ಹುಡುಗಿಗೆ ನಿನ್ನ ತಮ್ಮನ ಮಗನನ್ನು ನೋಡಬೇಕಂತೆ. ಹಾಗೆ ಅವನು ಅರಬಿಯ ಬಳಿ ಹೋಗಿ ಹೇಳುತ್ತಾನೆ. ಆಗ ಅರಬಿ ಹೇಳುತ್ತಾನೆ, ಅವನು ಹುಟ್ಟಿ ಅರ್ಧಗಂಟೆ ಆಗಿದ್ದಷ್ಟೆ. ಅವನ ಅಮ್ಮ ಕಳುಹಿಸಲಾರಲು. ಸ್ವಲ್ಪ ಸಮಯ ನಿಲ್ಲು. ನಾನು ಕರೆದುಕೊಂಡು ಬರಲಾಗುತ್ತಾ ಎಂದು ನೋಡುತ್ತೇನೆ ಎಂದು ಹೇಳುತ್ತಾನೆ.

ಹಾಗೇ ಅರಬಿ ಹೋಗಿ ಹೆತ್ತ ಹಸುಳೆಯನ್ನು ಕರೆದುಕೊಂಡು ಬರುತ್ತಾನೆ. ಆ ಮಗು ಮೀನು ಮಾರುವವನನ್ನು ನೋಡಿ ಅವನ ಹತ್ತಿರ ಓಡಿಕೊಂಡು ಹೋಗಿ ಸಂತೋಷದಿಂದ ಹೇಳುತ್ತದೆ. ನಾವು ಚಿಕ್ಕಮ್ಮನ ಮನೆಗೆ ಹೋಗುವುದಲ್ಲವೇ? ಹಾಗೆ ಮಗುವನ್ನು ಅವನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಮಗು ಆ ಹುಡುಗಿಯನ್ನು ನೋಡಿ ಚಿಕ್ಕಮ್ಮ ಎಂದು ತಬ್ಬಿಕೊಳ್ಳುತ್ತದೆ. ಹುಡುಗ ಅದನ್ನು ಕರೆದುಕೊಂಡು ಸುಲ್ತಾನನ ಬಳಿ ಹೋಗುತ್ತಾನೆ.

ಮಗುವನ್ನು ಸುಲ್ತಾನನ ಮುಂದೆ ಕರೆದುಕೊಂಡು ಹೋದಾಗ ಮಗು ಸುಲ್ತಾನನ ಮೇಲೆ ಹತ್ತಿ ಅವನ ಕೆನ್ನೆಗೆ ಹೊಡೆದು ಕೇಳುತ್ತದೆ. 'ನಲ್ವತ್ತು ದಿವಸದಲ್ಲಿ ಹೇಗೆ ಚಿನ್ನದ ಅರಮನೆಯನ್ನು ಕಟ್ಟಲು ಸಾಧ್ಯ? ಅದು ಕೂಡ ಆಗಲೆ ವಜ್ರದ ಸೇತುವೆಯನ್ನು ಹೇಗೆ ಕಟ್ಟುವುದು? ಒಬ್ಬನಿಗೆ ಇಡಿ ಊರಿನವರಿಗೆ ಔತಣಕೂಟ ಮಾಡಲು ಹೇಗೆ ಸಾಧ್ಯ? ಮೊಟ್ಟೆಯ ಒಳಗಿನಿಂದ ಕತ್ತೆ ಹೇಗೆ ಹೊರಗೆ ಬರುತ್ತದೆ? ಹಾಗೆ ಒಂದೊಂದನ್ನು ಕೇಳಿ ಸುಲ್ತಾನನಿಗೆ ಸರೀ ಹೊಡೆಯುತ್ತದೆ. ಸುಲ್ತಾನ್ ಹುಡುಗನೊಂದಿಗೆ ಅಳುತ್ತಾ ಹೇಳುತ್ತಾನೆ. ನಿನ್ನ ಹುಡುಗಿಯನ್ನು ನಿನ್ನ ಹತ್ತಿರವೇ ಇಟ್ಟುಕೊಳ್ಳು. ಈ ಮಗುವಿನಿಂದ ನನ್ನನ್ನು ಕಾಪಾಡು ಎಂದು ಹೇಳುತ್ತಾನೆ. ಹಾಗೆ ಹುಡುಗ ಮಗುವನ್ನು ಮನೆಗೆ ಕರೆದುಕೊಂಡು ಹೋಗಿ ಆ ಹುಡುಗಿಯನ್ನು ಮದುವೆಯಾಗಿ ಸಂತೋಷದಿಂದಿರುತ್ತಾನೆ.

ಕಥೆ ಹೇಳಿದವರು : **ಬಿಫಾತಿಮಾ, ಅಕ್ಕರಂಗಡಿ**

## ಒಗಟುಗಳು

ಬ್ಯಾರಿ ಒಗಟುಗಳಿಗೂ ಭಾಷೆ, ಸಂಸ್ಕೃತಿ, ಜಾನಪದ ಸಾಹಿತ್ಯದಷ್ಟು ಇತಿಹಾಸ ವಿದೆ. ಹಿಂದೆ ಮಕ್ಕಳು ಆಟವಾಡುವಾಗ ಒಗಟುಗಳನ್ನು ಕೇಳಿ ಆಟವಾಡುತ್ತಿದ್ದರು. ಇಂದಿನ ಜನಾಂಗಕ್ಕೆ ಬ್ಯಾರಿ ಒಗಟುಗಳ ಬಗ್ಗೆ ಪರಿಚಯವಿಲ್ಲ. ಒಗಟುಗಳೆಂದರೆ ವಸ್ತು, ಸನ್ನಿವೇಶ ಇತ್ಯಾದಿಗಳನ್ನು ಅಲಂಕಾರಭರಿತವಾಗಿ ಉಲ್ಲೇಖಿಸುವುದು. ಸನ್ನಿವೇಶಗಳಿಗೆ ಅನುಗುಣವಾಗಿ ಒಗಟುಗಳನ್ನು ಹೇಳುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ ಮರಗಳನ್ನು, ಪಕ್ಷಿಗಳನ್ನು, ಪ್ರಾಣಿಗಳನ್ನು ಇತ್ಯಾದಿಗಳನ್ನು ಕಂಡರೆ ಇದನ್ನು ಒಂದು ಪ್ರಶ್ನೆಗಳನ್ನಾಗಿ ಬಳಸಿ ಉತ್ತರವನ್ನು ಕೇಳುವುದೇ ಒಗಟುಗಳಾಗಿದ್ದವು. ನಮ್ಮ ಹಿರಿಯರು ದೈನಂದಿನ ಜೀವನದಲ್ಲಿ ಅವರು ಮಾತನಾಡುವಾಗ ಅತೀ ಹೆಚ್ಚಾಗಿ ಒಗಟುಗಳನ್ನು ಪ್ರಸ್ತಾಪಿಸುತ್ತಿದ್ದರು. ಹಿಂದಿನ ಕಾಲದ ಒಗಟುಗಳನ್ನು ಕೇಳುವ ಒಂದು ಸಂತೋಷವೇ ಬೇರೆಯಾಗಿತ್ತು. ಒಗಟುಗಳೂ ಇಂದಿಗೂ ಪ್ರಚಲಿತದಲ್ಲಿವೆ.

1. ಪಟ್ಟತ್ತೆ ರಾಜಾವು ಕೈಬುಟ್ಟ – ತಾಲಿಪಲ
   ಪಟ್ಟದ ರಾಜ ಕೈ ಬಿಟ್ಟನು – ತಾಳೆ ಹಣ್ಣು
2. ಒರು ಪೆಟ್ಟಿ ನೊರೋಡಿ ಪೊಲೀಸ್ – ತೀಪೆಟ್ಟಿ
   ಒಂದು ಪೊಟ್ಟನ ತುಂಬಾ ಪೊಲೀಸ್ – ಬೆಂಕಿಪೊಟ್ಟಣ
3. ಯಾಕೆಲ್ ನೊರೋಡಿ ಮಂಞಲ್ ಪಕ್ಕಿ – ಅಲಿಕಾತ್
   ಬಟ್ಟೆ ಒಣಗಿಸುವ ಹಗ್ಗ ತುಂಬಾ ಹಳದಿ ಹಕ್ಕಿ – ಅಲಿಕಾತ್
4. ಚಲ ಚಲ ತನ್ನಿಲ್ ಚಲ್ಲರನೆ – ನಾವು
   ಚಲ ಚಲ ನೀರಲ್ಲಿ ಚಲ್ಲರಣೆ – ನಾಲಗೆ
5. ಒರು ಮೂಡೆ ಅರಿಕ್ಕ್ ಚುತ್ತು ಮುತ್ತು ಬೇಲಿ – ಕನ್ನ್
   ಒಂದು ಮೂಟೆ ಅಕ್ಕಿಗೆ ಸುತ್ತ ಮುತ್ತಲೂ ಬೇಲಿ – ಕಣ್ಣು
6. ಅಡ್ಡ ಮರತ್ತ್‌ಲ್ ಸೈಕಲ್ ಪೋಂಡೆ – ಚೆನಿಲ್
   ಅಡ್ಡ ಮರದಲ್ಲಿ ಸೈಕಲ್ ಹೋಗುತ್ತದೆ. – ಅಳಿಲು
7. ಗುಡು ಗುಡಾವುಡು ಚೆಡ್‌ಲಲ್ಲ, ಪಾರ್‌ಡ್ ಪಕ್ಕಿ ಅಲ್ಲ,
   ನೀಂದ್‌ರ್ ಮೀನಲ್ಲ, ನಾನ್ ಆರ್? – ವಿಮಾನ
   ಗುಡು ಗುಡಾಗುತ್ತದೆ ಸಿಡಿಲಲ್ಲ, ಹಾರುತ್ತದೆ ಹಕ್ಕಿ ಅಲ್ಲ,
   ಈಜುತ್ತದೆ ಮೀನಲ್ಲ, ನಾನು ಯಾರು? – ವಿಮಾನ

8. ಅಡಕ್ ಚಕ್ಕನ, ಮೇಲ್ ಚಕ್ಕನ,
ಚಕ್ಂತೋಲ್ ಗಿಜಿ ಗಿಜಿ – ಮೊಲವು
ಅಡುಗೆಗೆ ಮುನ್ನ ಒಲೆಯಲ್ಲಿ ಮೆಣಸನ್ನು
ಕಾಯಿಸುವುದಕ್ಕಾಗಿ ಹೀಗೆ ಬಳಸಲಾಗುತ್ತದೆ. – ಮೆಣಸು
9. ಆಯಿ ಊಯಿ ಮನ್ನ್ ರಡಿಲ್ – ಇಂಜಿ
ಆಯಿ ಊಯಿ ಮನ್ನಿನಡಿಯಲ್ಲಿ – ಶುಂಠಿ
10. ಬಂಗಾರೆ ಬಟ್ಟಂಜೆಮನ್ನ್ ರಡಿಲ್ – ಮಂಜಲ್
ಚಿನ್ನದ ಬಟ್ಟಲು ಮನ್ನಿನಡಿಯಲ್ಲಿ – ಅರಶಿನ
11. ಪೋಂಬೊ ಇರತ್ತಂಜಾಲ್,
ಬರುಂಬೊ ಇರತ್ನಾಲ್ ಆಲ್ – ಮಯತ್
ಹೋಗುವಾಗ ಇಪ್ಪತ್ತೈದು, ಬರುವಾಗ ಇಪ್ಪತ್ತನಾಲ್ಕು – ಹೆಣ
12. ಒರಾಯಿರ ಮಕ್ಕಗ್ ಒರು ಆರ್ ನೂಲು – ಮಾಚಿಲ್
ಒಂದು ಸಾವಿರ ಮಕ್ಕಳಿಗೆ ಒಂದೇ ಸೊಂಟದ ದಾರ – ಇಡುಸೂಡಿ
13. ಇರಿಯತ್ತಂಜಾಲ್‌ಗ್ ಒರು ಅರ್‌ನೂಲು – ಬೀಡಿ
ಇಪ್ಪತ್ತೈದು ಜನರಿಗೆ ಒಂದೇ ಸೊಂಡದ ದಾರ – ಬೀಡಿ
14. ಬಂಗಾರ್ ತಿನ್ನೊರೆ, ಬೆಲ್ಲಿ ತುಪ್ಪುರೆ – ಚಕ್ಕೆ
ಚಿನ್ನ ತಿನ್ನುವುದು, ಬೆಳ್ಳಿ ಉಗುಳುವುದು – ಹಲಸಿನ ಹಣ್ಣು
15. ಬೆಲ್ಲಿ ತಿನ್ನೊರ್, ಬಂಗಾರ್‌ಪುಪ್ಪುರೆ – ಬಾಲೆ
ಬೆಳ್ಳಿ ತಿನ್ನುವುದು, ಚಿನ್ನ ಉಗುಳುವುದು – ಬಾಳೆಹಣ್ಣು
16. ಬೊಂಬಾಯಿ ಸೂಲೆಗ್ ಕಿಚಿ ಕಿಚಿ ರವಕೆ – ಫರಂಕಿ ಚಕ್ಕೆ
ಬೊಂಬಾಯಿ ಸೂಳೆಗೆ ಕಿಚಿ ಕಿಚಿ ರವಕೆ – ಫರಂಗಿ ಹಣ್ಣು
17. ಒರ್‌ತ ತನ್ನಿ ಕಂಡವುಡ ಮೌತ್ ಆವುರ – ಕಡ್ಲಾಸ್
ಒಬ್ಬ ನೀರು ಕಂಡಲ್ಲಿ ಸಾಯುತ್ತಾನೆ. – ಕಾಗದ
18. ಒರು ಚೆರ್‌ಕ ಚಟ್ಟೆ ಮಾತಿಟ್ಟ್ ಕೆಂತ್‌ಗ್ ತುಲ್ಲುರ – ಬಾಲೆ
ಒಬ್ಬ ಹುಡುಗ ಬಟ್ಟೆ ಬಿಚ್ಚಿ ಬಾವಿಗೆ ಹಾರುತ್ತಾನೆ. – ಬಾಳೆ ಹಣ್ಣು
19. ಬೆಲ್ತೆ ಬಟಂಜೆಲ್ ಕರ್ತೆ ಮುಂದ್ರಿಜೆ – ಕನ್ನ್
ಬಿಳಿ ಬಟ್ಟಲಲ್ಲಿ ಕಪ್ಪು ದ್ರಾಕ್ಷಿ – ಕಣ್ಣು
20. ಒರು ಪೈಪ್‌ಗ್ ಜಂಡ್ ಒಟ್ಟೆ – ಮೂಕು
ಒಂದು ಪೈಪಿಗೆ ಎರಡು ತೂತು – ಮೂಗು

21. ಪಾಯಿ ಬುಡುಪಾಟಿ ಬೆಚ್ಚಿರ್ ಮಡ್‌ಕ್‌ರೆ ಇಲ್ಲೆ – ಬೂಮಿ
ಚಾಪೆ ಬಿಡಿಸಿಟ್ಟಿದೆ ಮಡಚಲಾಗುವುದಿಲ್ಲ – ಭೂಮಿ

22. ಅಹ್‌ಮದಾಯ ಮರ್‌ತ್‌ಲ್ ಮೊಹಮ್ಮದಾಯ ಪೂ – ಕನ್ನ್
ಅಹ್‌ಮದಾಯ ಮರದಲ್ಲಿ ಮೊಹಮ್ಮದಾದ ಹೂ – ಕಣ್ಣು

23. ಅಬ್ಬ ಉಮ್ಮ ಕರ್‌ತ್‌ಟ್ ಮೋಲು ಬೆಲ್‌ತ್‌ಟ್ – ಪೋಲೆ
ಅಪ್ಪ–ಅಮ್ಮ ಕಪ್ಪು, ಮಗಳು ಬಿಳಿ – ದೋಸೆ

24. ಬೆಲಿಯುಮ್ಮ ನಿಂಡ್ ಪೆರ್‌ಡೆ,
ಚೆರಿಯುಮ್ಮ ದೆಚ್ಚಿ ಪೆರ್‌ಡೆ – ಬಾಲೆಮರ
ದೊಡ್ಡಮ್ಮ ನಿಂತು ಹೆರುತ್ತಾರೆ,
ಚಿಕ್ಕಮ್ಮ ಕೂತು ಹೆರುತ್ತಾರೆ – ಬಾಳೆಮರ

25. ಅಬ್ಬ ಉದ್ದ, ಉಮ್ಮ ಪರ್‌ಕ್, ಮೋಲ್ ಉರುಂಟು – ತೆಂಜ್‌ಡ್ರೆ ಮರ
ಅಪ್ಪ ಉದ್ದ ಅಮ್ಮ ಮಗಳು ಉರುಂಟು – ತೆಂಗಿನಕಾಯಿ

26. ಎಲ್ಲಾ ಮರ್‌ತ್‌ಲ್ ಕಾಕೆ ದೈಕ್‌ರ್
ಕಂಬ ಮರ್‌ತ್‌ಲ್ ಕಾಕೆ ದೈಕ್‌ಲ್ಲೆ – ನೇಜಿ
ಎಲ್ಲಾ ಮರದಲ್ಲಿ ಕಾಗೆ ಕೂರುತ್ತದೆ,
ತಂಬ ಮರದಲ್ಲಿ ಕಾಗೆ ಕೂರುವುದಿಲ್ಲ – ನೇಜಿ

27. ತನ್ನಿ ಆರಿತ್ತ್, ಪಾಲ ಪತ್ತಿತ್ತ್ ಪಕ್ಕಿ ಪಾರಿತ್ತ್ – ಚಿಮಿನಿ
ನೀರು ಆರಿತು, ಕೆರೆ ಬತ್ತಿತು, ಹಕ್ಕಿ ಹಾರಿತು – ಚಿಮಿನಿ

28. ಬೆಲ್ತೆ ಬೆಲ್ತೆ ಮಕ್ಕಗ್ ಬೆಲ್ತೆ ಬೆಲ್ತೆ ಕುಪ್ಪಾಯಿ – ಬೆಲ್ಲುಲ್ಲಿ
ಬಿಳಿ ಬಿಳಿ ಮಕ್ಕಳಿಗೆ ಬಿಳಿ ಬಿಳಿ ರವಕೆ – ಬೆಳ್ಳುಳ್ಳಿ

29. ಆಚಾರಿ ಆಚಾರೊ ಟಕ್–ಟಕ್–
ಅದ್‌ರೆ ಉಲ್ಲಾ ಗಿಜಿ ಗಿಜಿ – ಮೊಲವ್
ಆಚಾರಿ ಆಚಾರಿ ಟಕ್ ಟಕ್, ಅದರೊಳಗೆ ಗಿಜಿ ಗಿಜಿ – ಮೆಣಸು

30. ತನ್ನಿರೆ ಮೇಲ್ ನೇರ ನೇಕ್‌ಡ – ಮುಟ್ಟೆ
ನೀರಿನ ಮೇಲೆ ಸೂರ್ಯ ತೇಲುತ್ತದೆ. – ಮೊಟ್ಟೆ

31. ಉದ್ದ ಮರ್‌ತ್‌ಲ್ ಚೋಪು ಸನ್ಯಾಸಿ – ಅಡಕೆ
ಉದ್ದ ಮರದಲ್ಲಿ ಕೆಂಪು ಸನ್ಯಾಸಿ – ಅಡಿಕೆ

32. ಜುಟ್ಟುಂಡ್ ಪೆನ್ನಲ್ಲ, ಆಕಾಶ ಉಂಡು
ನಕ್‌ಸತ್ರ ಇಲ್ಲೆ ತನ್ನಿ ಉಂಡು ಮೀನಿಲ್ಲ – ತ್ಯಾಂಜೆ

ಜುಟ್ಟುಂಟು ಹುಡುಗಿ ಅಲ್ಲ, ಆಕಾಶ ಉಂಟು
ನಕ್ಷತ್ರ ಇಲ್ಲ, ನೀರುಂಟು ಮೀನಿಲ್ಲ – ತೆಂಗಿನಕಾಯಿ

33. ಪೈಸ ಕೊಡ್ತುಟ್ಟು ಕೊನಂಡೆ ಮುರಿಕೊಂಬೊ ಬುಲ್ಪಿಡ್ರ – ನೀರುಲ್ಲಿ
ಹಣ ಕೊಟ್ಟು ತರುತ್ತಾರೆ, ಕತ್ತರಿಸುವಾಗ ಅಳುತ್ತಾರೆ – ಈರುಳ್ಳಿ

34. ಮುಲ್ಲಮ್ಮರೆ ಬಯ್ತೆ ಉಲ್ಲ ಮುನ್ನೂರು ಮಕ್ಕ – ಚಕ್ಕೆ
ಮುಲ್ಲಮ್ಮನ ಹೊಟ್ಟೆಯೊಳಗೆ ಮುನ್ನೂರು ಮಕ್ಕಳು – ಹಲಸಿನಕಾಯಿ

35. ನೋಕೊಗ್ ತರತರತೆ ಬನ್ನ
ಉಜ್ಜುಂಬೊ ಕೊರೇ ಮನ್ನ್ – ಸಾಬೂನ್
ನೋಡಲು ತರತರದ ಬಣ್ಣ ಒರಸುವಾಗ ಮಣ್ಣು – ಸಾಬೂನು

36. ಚಂದತ್ತೆ ದಾದ ಮುಲ್ಲುಲ್ ಕಿಟ್ಟಿಯೋಂಡ್ರಾಲ್ – ಗುಲಾಬಿ
ಸುಂದರವಾದ ಅಕ್ಕ ಮುಳ್ಳಿನಲ್ಲಿ ಸಿಕ್ಕಿಕೊಂಡಿದ್ದಾಳೆ – ಗುಲಾಬಿ

37. ಮುಲ್ಲುಡೆ ಮರ್ತ್ತ್ಲ್ ಬಂಗಾರ್‌ಡೆ ಮುಟ್ಟೆ – ಲಿಂಬೆ
ಮುಳ್ಳಿನ ಮರದಲ್ಲಿ ಚಿನ್ನದ ಮೊಟ್ಟೆ – ನಿಂಬೆಹಣ್ಣು

38. ದಾದರೆ ಅವುತು ಎಲವುಲ್ ಪೊಂಡಾಲ್, – ಸೇರ್
ಎವುಲ್‌ಡೆ ಅವುತುಗು ದಾದ ಪೋಂಡಿಲ್ಲೆ ಪಿನ್ನೆ ಪಾವ್
ಅಕ್ಕನ ಮನೆಗೆ ತಂಗಿ ಹೋಗುತ್ತಾಳೆ, – ಸೇರು ಮತ್ತು
ತಂಗಿಯ ಮನೆಗೆ ಅಕ್ಕ ಹೋಗುವುದಿಲ್ಲ ಪಾವು

39. ಬಂಗಾರೆ ಮೀನ್ ಬೆಲ್ಲತ್ತ್ಲ್ ದೆಚ್ಚಿತ್ತ್ ತನ್ನಿ ಕುಡಿಕ್‌ರ್ – ಚಿಮನಿ
ಚಿನ್ನದ ಮೀನು ನೆರೆಯಲ್ಲಿ ಕೂತು ನೀರು ಕುಡಿಯುತ್ತದೆ– ದೀಪ

40. ತಲೆ ಉಂಡು ನಡು ಇಲ್ಲ, ಕೈ ಇನ್ನೆಂಗ್ ಬೆರ್‌ಲಿಲ್ಲೆ – ಕೋಟುಚಟ್ಟೆ
ತಲೆ ಇದೆ, ಸೊಂಟವಿಲ್ಲ, ಕೈ ಇದ್ದರೆ ಬೆರಳಿಲ್ಲ – ಕೋಟು ಬಟ್ಟೆ

41. ಚೆರಿಯೆ ಗುಲಿಲ್ ಬಂಗಾರ್ರೆ ಉಚ್ಚಿ – ಮೂಕುತ್ತಿ
ಸಣ್ಣ ಹೊಂಡದಲ್ಲಿ ಚಿನ್ನದ ಹಾವು – ಮೂಗುತ್ತಿ

42. ಪಟ್ಟಕಾಡ್, ಅದ್ರೆಉಲ್ಗ ಬೆಲ್ತೆಕಾಡ್, ಅದ್ರೆಉಲ್ಗ
ಚೋಂದೆಕಾಡ್, ಅದ್ರೆಉಲ್ಗ ಕರ್ತೆ ಸೈನಿಕಮಾರ್ – ಬಚ್ಚಂಕಾಯಿ
ಹಸಿರು ಕಾಡು, ಅದರೊಳಗೆ ಬಿಳಿ ಕಾಡು, ಅದರೊಳಗೆ
ಕೆಂಪು ಕಾಡು ಅದರೊಳಗೆ ಕಪ್ಪು ಸೈನಿಕರು -ಕಲ್ಲಂಗಡಿ ಹಣ್ಣು

43. ಅನ್ನಪ್ಪರೆ ತೋಟತ್ತ್ಲ್ ನುಪ್ಪತ್ನಾಲ್ ಕನ್ನ್ – ಪಲ್ಲ್
ಅನ್ನಪ್ಪನ ತೋಟದಲ್ಲಿ ಮೂವತ್ನಾಲ್ಕು ಕಣ್ಣು – ಹಲ್ಲು

44. ಅವ ಚುತ್ತು ಮನಿಮುತ್ತ್ – ಮಲೆ
ಮನೆ ಸುತ್ತು ಮಣಿ ಮುತ್ತು – ಮಳೆ

45. ತಿರಿಂಞಿ ತಿರ್ಂಞಿ ತಿನ್ನೊರವುನುಗು
ಚೋಂದೆ ಕೈಡೆ ಮುಂಡಾಸ್ – ಚೇಗಲ್
ತಿರುಗಿ ತಿರುಗಿ ತಿನ್ನುವವನಿಗೆ
ಕೆಂಪು ಬಣ್ಣದ ಮುಂಡಾಸ್ – ಹುಂಜ

46. ಆಗಾಸೆ ಕಾಲಿ ಜುಂ ಜಂ ಕಾಯಿ – ಕಾಂಜರ್ತೆ ಕಾಯಿ
ಬಾನೆಲ್ಲ ಖಾಲಿ ಜುಂ ಜುಂ ಕಾಯಿ –

47. ಪುಲ್ಲು ಇಲ್ಲತವುಡೆ ಎರ್ಮೆ ಮೇಯಿರ್ – ಪೇನ್
ಹುಲ್ಲು ಇಲ್ಲದ ಕಡೆ ಎಮ್ಮೆ ಮೇಯುತ್ತದೆ – ಹೇನು

48. ಉಮ್ಮ ದೈಕ್ರೆ ಮೋಲ್ ಬಲಿಬಂಡೆ – ಕಾಯರಿಕ್ರೆ ಕಲ್ಲ್
ಅಮ್ಮ ಕುಳಿತುಕೊಳ್ಳುವುದು, ಮಗಳು ತಿರುಗುವುದು – ಬೀಸುವ ಕಲ್ಲು

49. ನ್ಞಂಡೆ ಅಜ್ಜಿ ಸುಬ್ಬೈಕ್ ಎನಿಕ್ರೆ ಪೊತ್ತು ಕೈ ಇಡ್ರೆ – ಬೆತ್ತಲೆ
ನನ್ನ ಅಜ್ಜಿ ಬೆಳಿಗ್ಗೆ ಎದ್ದು ಹುತ್ತಕ್ಕೆ ಕೈ ಹಾಕುತ್ತಾರೆ. – ವೀಳ್ಯದೆಲೆ

50. ನ್ಞಂಡೆ ಅಬ್ಬ ಒರುಗೋನಿ ಪಂತರ ಕೊನ್ನ್ರ್,
ಕೊಡ್ತ್ತ ಕೊಡ್ತ್ತ ತೀರ್ಲ್ಲ – ತೀಡೆ ಕನಲ್
ನನ್ನ ಅಪ್ಪ ಒಂದು ಮೂಟೆ ಸಕ್ಕರೆ ತಂದಿದ್ದಾರೆ, – ಬೆಂಕಿಯ ಕೆಂಡ
ಕೊಟ್ಟು ಕೊಟ್ಟು ಮುಗಿಯುವುದಿಲ್ಲ

51. ನ್ಞಂಡೆ ಅಬ್ಬ ಬಲ್ಲಿ ಕೊನನ್ರ್ ಗೋರುಂತೊಲ್
ಅರ್ತ್ತ ಅರ್ತ್ತ ಬೂಲ್ರ್ – ಪಿ
ನನ್ನಪ್ಪ ಹಗ್ಗ ತಂದನು.
ಎತ್ತುವಾಗ ಮುರಿದು ಮುರಿದು ಬೀಳುತ್ತದೆ. – ಹೇಲು

52. ನ್ಞಂಡೆ ಅಬ್ಬ ಎಲ್ಸರ ಕೊನನ್ನ್ರ್, – ಚೋಂಬುರೆ ಎಲೆ
ತನ್ನಿಗ್ ಇಡೊಂಬೊ ನೆನಯಿಲ್ಲೆ
ನನ್ನಪ್ಪ ರುಮಾಲು ತಂದಿದ್ದಾರೆ,
ನೀರಿಗೆ ಹಾಕಿದರೆ ನೆನೆಯುವುದಿಲ್ಲ. – ಕೆಸುವಿನ ಎಲೆ

53. ಒರು ಅವುತ್ ಪೆತ್ತ್ರ ಎಲ್ಲಾ ಅವುತ್ಗ್ ನಾರ್ಡ್ – ಚಕ್ಕೆ

ಒಂದು ಮನೆಯಲ್ಲಿ ಹೆರಿಗೆಯಾದರೆ
ಎಲ್ಲಾ ಮನೆ ವಾಸನೆ ಬರುತ್ತದೆ – ಹಲಸಿನ ಹಣ್ಣು

54. ಒರ್ತ್ ಓಡಿ ಬಂಡ ಕಲ್ತ್ಗ್ ಬಲ್ಲಿ ಇಡ
ಕೆಂತ್ಗ್ ತುಲ್ಲುರ – ಕೊಡ್ ಪಾನ
ಒಬ್ಬ ಓಡಿ ಬಂದು ಕುತ್ತಿಗೆಗೆ ಹಗ್ಗ ಹಾಕಿ
ಬಾವಿಗೆ ಹಾರುತ್ತಾನೆ – ಕೊಡಪಾನ

55. ಬಂಗಾರ್ರೆ ಪೆಟ್ಟಿಲ್ ಕಸ್ತೂರಿ ಕಮನೆ – ಚಕ್ಕೆ
ಚಿನ್ನದ ಪೆಟ್ಟಿಗೆಯಲ್ಲಿ ಕಸ್ತೂರಿಪರಿಮಳ – ಹಲಸಿನ ಹಣ್ಣು

56. ನಂಡೆಟ್ಟೊರು ಕೊಡೆ ಉಂಡು – ಚೋಂಬರೆ
ಮಲೆ ಬರುಂಬೊ ಚೆಂಡಿ ಆವುಲ್ಲೆ ಎಲೆ
ನನ್ನ ಹತ್ತಿರ ಒಂದು ಛತ್ರಿ ಇದೆ,
ಮಳೆ ಬರುವಾಗ ಒದ್ದೆಯಾಗುವುದಿಲ್ಲ – ಕೆಸುವಿನ ಎಲೆ

57. ಬೆಲ್ತೆ ಎಡ್ತ್ಲ್ ಕರ್ತೆ ಮುತ್ತು – ಕನ್ನ್
ಬಿಳಿ ಬಟ್ಟಲಲ್ಲಿ ಕಪ್ಪು ಮುತ್ತು – ಕಣ್ಣು

58. ಚುತ್ತು ಮುತ್ತು ಕೋಟೆ ನುಡುಲೊರು ಪಾತೆ – ನಾವು
ಸುತ್ತ ಮುತ್ತಲೂ ಕೋಟೆ ನಡುವಿನಲ್ಲೊಂದು ಜಿರಳೆ – ನಾಲಗೆ

59. ಒರು ಉಮ್ಮಗ್ ಒರೇ ಮೋನು – ಬಾಲೆರೆ ಮರ
ಒಂದು ತಾಯಿಗೆ ಒಂದೇ ಮಗ – ಬಾಳೆ ಗಿಡ

60. ಉಮ್ಮಡೆ ಪಾಯಿ ಮಡ್ಕೊಗಾವುಲ್ಲ, – ಮಾರ್ಗ
ಅಬ್ಬರೆ ಕಾಸ ಎನ್ನೊಗಾವುಲ್ಲ ನಕ್ಸತ್ರ
ಅಮ್ಮನ ಚಾಪೆ ಮಡಚಲಾಗುವುದಿಲ್ಲ, – ಮಾರ್ಗ,
ಅಪ್ಪನ ಹಣ ಲೆಕ್ಕಿಸಲಾಗುವುದಿಲ್ಲ ನಕ್ಷತ್ರ.

61. ತಯ್ಡೆ ಮೇಲ್ ಫಲ, ಫಲತ್ತೆ ಮೇಲ್ ತಯ್ – ಪರಂ ಚಕ್ಕೆ
ಗಿಡದ ಮೇಲೆ ಹಣ್ಣು ಹಣ್ಣಿನ ಮೇಲೆ ಗಿಡ – ಫರಂಗಿ ಹಣ್ಣು

62. ಒರು ಕುಪ್ಪಿಲ್ ಜಂಡ್ ತರತ್ತೆ ಎಣ್ಣೆ – ಮುಟ್ಟೆ
ಒಂದು ಬಾಟಲಿಯಲ್ಲಿ ಎರಡು ತರದ ಎಣ್ಣೆ – ಮೊಟ್ಟೆ

63. ತಿನ್ನ್ಡೆ ಮುಟ್ಟೆ ತೂರುಡೆ ಪೂ – ಸೇಮೆ
ತಿನ್ನುವುದು ಮೊಟ್ಟೆ ಮಲವಿಸರ್ಜಿಸುವುದು – ಸೇವಿಗೆ

64. ದಾದ ದಾದ ಕೆನ ನೋಕೊರು,

ಕೆಂತೆ ಉಲ್ಲ ಬತ್ತೆ ನೋಕೊರು,
ಬತ್ತಿರೆ ಮೇಲೆ ಪೂ ನೋಕೊರು – ಚಿಮನಿ

ಅಕ್ಕ ಅಕ್ಕ ಬಾವಿ ನೋಡು ಬಾವಿಯೊಳಗೆ
ಬತ್ತಿ ನೋಡು ಬತ್ತಿ ಮೇಲೆ ಹೂ ನೋಡು – ಚಿಮಣಿ

65. ಎದ್‌ರ್ ಎದ್‌ರ್ ಅಂಗಡಿ, ಬೆದ್‌ರಾ ಮುಂಡಲ್, – ಕಾಂಜರತ್ತೆ
ಕೊಯೊಗುಂಡು ತಿನ್ನೊಗಿಲ್ಲ ಕಾಯಿ

ಎದುರೆದುರು ಅಂಗಡಿ, ಬಿದಿರಿನ ಹಿಂಡು, – ಕಾಸರಕನ
ಕೊಯ್ಯೊಕ್ಕಾಗುತ್ತೆ ತಿನ್ನಲಿಕ್ಕಿಲ್ಲ. ಕಾಯಿ.

66. ಬಲ್ಲಿ ಬುಡುಪಾಟಿ ಬೆಚ್ಚಿರ್, ಪೈ ಕೆಡನ್‌ರ್ – ಕುಂಬುಲಿಜ್ಜಿ
ಬಳ್ಳಿ ಬಿಡಿಸಿಟ್ಟಿದೆ, ದನ ಮಲಗಿದೆ – ಕುಂಬಳಕಾಯಿ

67. ಪಚ್ಚೆ ಕೊಡ್‌ಪಾನ ನೊರೋಡಿ ಮದ್‌ರ್ತೆ ತನ್ನಿ – ಬೊಂಡ
ಹಸಿರು ಕೊಡಪಾನ ತುಂಬಾ ಸಿಹಿಯಾದ ನೀರು – ಬೊಂಡ

68. ನೋಕುರಜ ಜಂಡಾಲ್, ಆಕ್‌ರೆಜ ಅಂಜಾಲ್, – ಕನ್ನ್, ಬೆರ್ಲ್,
ತಿನ್ನ್ ರೆಜ ನುಪ್ಪತ್ತಂಜಾಲ್ ಪಲ್ಲ್

ನೋಡುವವರು ಇಬ್ಬರು, ಮಾಡುವವರು ಐವರು, – ಕಣ್ಣು, ಬೆರಳು,
ತಿನ್ನುವವರು ಮೂವತ್ನಾಲ್ಕು ಮಂದಿ ಹಲ್ಲು

69. ಬರುಂಬೊ ಕೊಸಿಲ್ ಬಂಡೆ, ಪೋಂಬೊ – ಪೊರಪ್ಪು
ಬೇಜಾರ್‌ಲ್ ಪೋಂಡೆ ಮರಿಪು

ಬರುವಾಗ ಸಂತೋಷದಿಂದ ಬರುವುದು,
ಹೋಗುವಾಗ ಬೇಸರದಿಂದ ಹೋಗುವುದು – ಜನನ, ಮರಣ

70. ಪಲಕ ಕೇಕ್‌ರೆಂಗುಂ ಮೊಗ ಕಾಂಡಿಲ್ಲೆ, ಕಾದ್‌ಗ್ ಮುಟ್ಟ
ಆಯೆಂಗುಂ ಬಾಯಿಗ್ ದೂರ ನಾನಾರ್ – ಟೆಲಿಫೋನ್

ಮಾತು ಕೇಳಿದರೂ ಮುಖ ಕಾಣುವುದಿಲ್ಲ,
ಕಿವಿಗೆ ಹತ್ತಿರವಾದರೂ ಬಾಯಿಗೆ ದೂರ – ದೂರವಾಣಿ

71. ಮಂಡೆ ಕರ್ತ್‌ಟ್ಟ್ ಚಂಗೆ ಇಲ್ಲೆ,
ಮೇಲ್ ಬೆಲ್ತ್‌ಟ್ಟ್ ಅಹಂಕಾರ ಇಲ್ಲೆ – ತೀಬೆಟ್ಟಿರ ಕಡ್ಡಿ

ತಲೆ ಕಪ್ಪು ನಾಚಿಕೆ ಇಲ್ಲ, ಮೈ ಬಿಳಿ ಅಹಂಕಾರ ಇಲ್ಲ – ಬೆಂಕಿ ಕಡ್ಡಿ

72. ತಲಂಕೈರತ್ತರೆ ಬೆಲಿಯೆ ಕಂಡ, ಮುತ್ತುರೆ ರಾಸಿ, – ಸಾನ್, ಚೋರು,
ಅಂಜಾಲ್ ಕಲಿಕ್‌ರಾರ್ ಜಂಡಾಲ್ ನೋಕುರಾರ್ ಬೆರ್ಲ್, ಚುಂದು

ಅಂಗಯಷ್ಟು ಅಗಲವಾದ ಗದ್ದೆ, ಮುತ್ತಿನ ರಾಶಿ, – ಬಟ್ಟಲು,
ಐದು ಮಂದಿ ಆಟವಾಡುತ್ತಾರೆ, ಇಬ್ಬರು ನೋಡುತ್ತಾರೆ –ಊಟ, ಬೆರಳು, ತುಟಿ

73. ಪೊಯೆ ಪಿನ್ನೆ ಪೆರವು ಬಂಡ್ಲೆ ನಾನಾರ್? – ಪಡಿಪು
ಹೋದ ನಂತರ ಹಿಂದೆ ಬರುವುದಿಲ್ಲ, ನಾನು ಯಾರು – ವಿದ್ಯೆ

74. ಅಬ್ಬ ಆಕಾಶತ್ತ್ ಪೋಯಿರ, ಉಮ್ಮ ಪಾತಾಲ್‌ತ್‌ಗ್
ಪೋಯಿರ್, ಮೋನು ಪ್ಯಾಂಟೆಗ್ ಪೋಯಿರ್ – ಅಡಕೆರೆ ಮರ
ಅಪ್ಪ ಆಕಾಶಕ್ಕೆ ಹೋಗಿದ್ದಾರೆ, ಅಮ್ಮ ಪಾತಾಳಕ್ಕೆ
ಹೋಗಿದ್ದಾರೆ, ಮಗ ಪೇಟೆಗೆ ಹೋಗಿದ್ದಾನೆ – ಅಡಿಕೆ ಮರ

75. ಬೆಲ್ತೆ ಜಾಲ್‌ಲ್ ಕರ್ತೆ ಚೆಂಡ್ – ಕನ್ನ್
ಬಿಳಿ ಅಂಗಳದಲ್ಲಿ ಕಪ್ಪು ಚೆಂಡು – ಕಣ್ಣು

76. ಜುಟ್ಟುಂಡು ಋಷಿ ಅಲ್ಲ, ಮೂನು ಕನ್ನ್ ಉಂಡು
ಶಿವ ಅಲ್ಲ, ತನ್ನಿ ಉಂಡು ಕಡಲಲ್ಲ ನಾನಾರ್ – ತ್ಯಾಂಜೆ
ಜುಟ್ಟುಂಟು ಋಷಿಯಲ್ಲ, ಮೂರು ಕಣ್ಣುಂಟು
ಶಿವ ಅಲ್ಲ, ನೀರು ಉಂಟು ಸಮುದ್ರ ಅಲ್ಲ -ತೆಂಗಿನ ಕಾಯಿ

77. ಕರ್ತೆ ತಲೆಡವುನುಗ್ ಬೆಲ್ತೆ ಕಾಲ್ – ತೀಬೆಟ್ಟಿರೆ ಕಡ್ಡಿ
ಕಪ್ಪು ತಲೆಯವನಿಗೆ ಬಿಳಿ ಕಾಲು – ಬೆಂಕಿ ಕಡ್ಡಿ

78. ಅಂಜಿ ಔತುಗು ಒರೇ ಜಾಲ್ – ತಲಂಕೈ
ಐದು ಮನೆಗೆ ಒಂದೇ ಅಂಗಳ – ಅಂಗೈ

79. ಕಾಕ ಚೊಲ್ಲುಂಬೊ ಮುಚ್ಚುಲ್ಲೆ,
ಅಬ್ಬ ಚೊಲ್ಲುಂಬೊ ಮುಚ್ಚುರು – ಚುಂದು
ಅಣ್ಣ ಹೇಳುವಾಗ ಮುಚ್ಚುವುದಿಲ್ಲ,
ಅಪ್ಪ ಹೇಳುವಾಗ ಮುಚ್ಚುತ್ತದೆ – ತುಟಿ.

80. ಜಾವುಂ ವೋಲು ನಡ್ ನೋಂಟೆ
ಇಕ್ಕ್‌ರ್ ಓಡ್ರೆಮೇ ಇಲ್ಲ – ಗೆಂಟೆ
ಹಗಲು ರಾತ್ರಿ ನಡೆಯುತ್ತಲೇ ಇರುತ್ತವೆ,
ಓಡುವುದೇ ಇಲ್ಲ – ಗಡಿಯಾರ

81. ಚೋಟುದ್ದತ್ತೆ ಪೆನ್ನ್‌ಗ್ ಮೂನುದ್ದತ್ತೆ ಲಂಗ – ತೂಸಿ ನೂಲ್
ಚೋಟುದ್ದದ ಹುಡುಗಿಗೆ ಮಾರುದ್ದದ ಲಂಗ – ಸೂಜಿ ದಾರ

82. ಕರ್‌ತೆ ಕಾಡ್‌ಲ್‌ ಕರ್‌ತೆ ಕುರಿ ಮೇಯಿರ್‌ – ಪೇನ್‌
ಕಪ್ಪು ಅರಣ್ಯದಲ್ಲಿ ಕಪ್ಪು ಕುರಿ ಮೇಯುತ್ತದೆ – ಹೇನು

83. ಅವನೊರೊಡಿ ಆಲ್‌ಮಾರ್‌,
ಒರೋರ್ತನೆ ಪರ್ತ್‌ ಬನ್ನ್‌ ಚಾವುಡಾರ್‌ – ತೀಬೆಟ್ಟಿರೆ ಕಡ್ಡಿ
ಮನೆತುಂಬಾ ಜನರು,
ಒಬ್ಬೊಬ್ಬರೆ ಹೊರಗೆ ಬಂದು ಸಾಯುತ್ತಾರೆ – ಬೆಂಕಿ ಪೊಟ್ಟಣ

84. ಕೀಲ್ಲೆ ಕಂಡತ್ತ್‌ಲ್‌ ತನ್ನಿ ಉಂಡು,
ಮೇಲ್ತೆ ಕಂಡತ್ತ್‌ಲ್‌ ಬೆಲೆ ಆವುರು – ಇಡ್ಲಿ ಬೇವುರೆ
ಕೆಳಗಿನ ಗದ್ದೆಯಲ್ಲಿ ನೀರು ಇದೆ, – ಇಡ್ಲಿ
ಮೇಲಿನ ಗದ್ದೆಯಲ್ಲಿ ಬೆಳೆಗಳಾಗುತ್ತವೆ ಬೇಯಿಸುವುದು

85. ಬೆಲ್ತೆ ಪೊಲೀಸ್‌ಗ್‌ ಕರ್ತೆ ಟೊಪ್ಪಿ – ತೇಬೆಟ್ಟಿರೆಕಡ್ಡಿ
ಬಿಳಿ ಪೊಲೀಸ್‌ಗೆ ಕಪ್ಪು ಟೊಪ್ಪಿ – ಬೆಂಕಿ ಕಡ್ಡಿ

86. ಜಟ್‌ ಪಟ್‌ ಲೇಡಿಗ್‌ ಒರೇ ಕನ್ನ್‌ – ತೂಸಿ
ಜಟ್‌ ಪಟ್‌ ಲೇಡಿಗೆ ಒಂದೇ ಕಣ್ಣು – ಸೂಜಿ

87. ಬಲೆ ನೈಇಂಟೇ ಪೋಂಡಾರ್‌ ಮೀನ್‌ ಪಿಡಿಕ್‌ಲ್ಲೆ – ಬನ್ನಾತೆ
ಬಲೆ ನೆಯುತ್ತಾ ಹೋಗುತ್ತಾರೆ, ಮೀನು ಹಿಡಿಯುವುದಿಲ್ಲ – ಜೇಡ

88. ಪಚ್ಚೆ ಪಚ್ಚೆ ತೋಟತ್ತ್‌ಲ್‌ ಬೆಲ್ಲಿರೆ ಗೂಂಟ – ಮೂಲಂಗಿ
ಹಸಿರು ಹಸಿರು ತೋಟದಲ್ಲಿ ಬೆಳ್ಳಿಯ ಗೂಂಟ – ಮೂಲಂಗಿ

89. ಒರು ಅಜ್ಜಿಗ್‌ ಆಯಿರ ಕನ್ನ್‌ – ಪೋಲೆ
ಒಂದು ಅಜ್ಜಿಗೆ ಸಾವಿರಾರು ಕಣ್ಣು – ದೋಸೆ

90. ಕರ್ತೆ ಕಂಡತ್ತ್‌ಲ್‌ ತೂಸಿ ಬೂನುರು – ಬೋತಲೆ
ಕಪ್ಪು ಗದ್ದೆಯಲ್ಲಿ ಸೂಜಿ ಬಿದ್ದಿದೆ – ಬೌತಲೆ

91. ಪಿಡ್ಚೆಂಗ್‌ ಕೈ ನೊರೋಡಿ ಬುಟ್ಟೆಂಗ್‌ ಅವ ನೊರೋಡಿ– ಚಿಮನಿ
ಹಿಡಿದರೆ ಕೈ ತುಂಬಾ ಬಿಟ್ಟರೆ ಮನೆ ತುಂಬಾ – ದೀಪ

92. ಸುರುಕು ಕೈಪೆ ಪಿನ್ನೆ ಮದ್‌ರ – ನೆಲ್ಲಿಕಾಯಿ
ಮೊದಲು ಕಹಿ ನಂತರ ಸಿಹಿ – ನೆಲ್ಲಿಕಾಯಿ

93. ಒರು ಅಜ್ಜಿ ಅವ ಚುತ್ತು ಬನ್ನ್‌ಟ್ಟ್‌
ಮೂಲೆಲ್‌ ಪೋಯಿ ನಿಕ್ಕ್‌ರಾಲ್‌ – ಮಾಚಿಲ್‌
ಒಂದು ಅಜ್ಜಿ ಮನೆಸುತ್ತಲೂ ಬಂದು

ಮೂಲೆಯಲ್ಲಿ ನಿಲ್ಲುತ್ತಾಳೆ – ಇಡುಸೂಡಿ

94. ಒರು ಪೂ ಉಂಡು ಅದ್ ಕಾನೋ ಕಿಟ್ಟೆಲ್ಲೆ – ಅರ್‌ತಿರೆ ಪೂ
ಒಂದು ಹೂವು ಇದೆ, ಅದು ಕಾಣಲು ಸಿಗುವುದಿಲ್ಲ – ಅತ್ತಿ ಹೂ

95. ಬೆಲಿಯೋನು ಪೋಂಬೊ ಚೆರಿಯೊನು ನಿಪ್ಪಾಟಿ ಬೆಚ್ಚಿರ – ಮುಲ್ಲು
ಹಿರಿಯವನು ಹೋಗುವಾಗ ಕಿರಿಯವನು ನಿಲ್ಲಿಸಿದ್ದಾನೆ – ಮುಳ್ಳು

96. ಬೆಲಿಯೆ ಮಂಡೆ ಮುಚ್ಚೊಗಾವುಲ್ಲೆ – ಕೆನ
ದೊಡ್ಡ ಹಂಡೆ ಮುಚ್ಚಲಾಗುವುದಿಲ್ಲ – ಬಾವಿ

97. ಕೈ ಕಾಲಿಲ್ಲೆ ಇಡೀ ರಾಯ ಚುತ್ತುರ – ಪೈಸ
ಕೈ ಕಾಲಿಲ್ಲ, ಊರೆಲ್ಲಾ ಸುತ್ತುತ್ತಾನೆ – ಹಣ

98. ಅಕ್ಷರ ಉಂಡು ಬೂಕ್ಕು ಅಲ್ಲ, ಸಿಂಹ ಉಂಡು ಕಾಡಲ್ಲ,
ಉರುಂಟುರುಂಟು ಉಂಡು ಚಕ್ರ ಅಲ್ಲ,
ಆಯೆಂಗಾ ಕಾಂಡ್ಲೆ – ಪಾವಲಿ
ಅಕ್ಷರವುಂಟು ಪುಸ್ತಕ ಅಲ್ಲ, ಸಿಂಹವುಂಟು ಕಾಡಲ್ಲ,
ಗೋಳಾಕಾರದಲ್ಲಿದೆ ಚಕ್ರವಲ್ಲ, ಆದರೂ ಕಾಣುವುದಿಲ್ಲ– ಪಾವಲಿ

99. ಜಂಡಾಲ್ ಚೋರು ಉಣ್ಣೊಗು ದೆಚ್ಚಿಡಾರ್,
ಒತ್ತೋಗು ಯಾರ ಇಟ್ಟೆಂಗ್ ಇನ್ನೊರ್ತ
ಅರ್ಸತ್ತ್‌ಲ್ ಎಂಚಿ ನಿಕ್ಕ್‌ರ – ತಿರಾಸ್
ಇಬ್ಬರು ಊಟಮಾಡಲು ಕೂತಿದ್ದಾರೆ, ಒಬ್ಬನಿಗೆ ಜಾಸ್ತಿ
ಹಾಕಿದರೆ ಇನ್ನೊಬ್ಬ ಕೋಪದಿಂದ ಎದ್ದು ನಿಲ್ಲುತ್ತಾನೆ – ತಕ್ಕಡಿ

100. ಚೆರೆ ಚೆರೆ ಮಕ್ಕೊಗು ಬೆಲಿಯೆ ಬೆಲಿಯೆ ಮುಟ್ಟಾಲೆ – ತೀಬೆಟ್ಟಿರೆ ಕಡ್ಡಿ
ಸಣ್ಣ ಸಣ್ಣ ಮಕ್ಕಳಿಗೆ ದೊಡ್ಡ ದೊಡ್ಡ ಮುಟ್ಟಾಳೆ – ಬೆಂಕಿ ಕಡ್ಡಿ

101. ತನ್ನಿಲೆ ಉಂಡಾವುರು ತನ್ನಿಲೇ ಚಾವುರು – ಉಪ್ಪು
ನೀರಲ್ಲೆ ಹುಟ್ಟುತ್ತದೆ, ನೀರಲ್ಲೆ ಸಾಯುತ್ತದೆ. – ಉಪ್ಪು

102. ಪಿಡ್ಚಪ್ಪ ಚೋಪು, ಆರಿಯಪ್ಪ ಕರ್ಪು – ತೀಬೆಟ್ಟಿರೆ ಕಡ್ಡಿ
ಹಿಡಿದಾಗ ಕೆಂಪು, ಬತ್ತಿದಾಗ ಕಪ್ಪು – ಬೆಂಕಿ ಕಡ್ಡಿ

103. ಸುಬಯ್‌ಗ್ ಪೋಂಡೆ, ಜಾವುಗು ಬಂಡೆ ನಾನಾರ್? – ನಕ್‌ಸತ್ರ
ಬೆಳಿಗ್ಗೆ ಹೋಗುವುದು, ರಾತ್ರಿ ಬರುವುದು ನಾನು ಯಾರು? – ನಕ್ಷತ್ರ

104. ಅಜ್ಜಿ ಕುತ್ತಿಯೆಂಗ್ ರಾಯ ಎಲ್ಲಾ ಮಕ್ಕ – ಬೆಳ್ಳುಳ್ಳಿ
ಅಜ್ಜಿ ಗುದ್ದಿದರೆ ಊರೆಲ್ಲಾ ಮಕ್ಕಳು – ಬೆಳ್ಳುಳ್ಳಿ

105. ಬೆಲ್ತೆ ಕುದುರೆಗ್ ಪಚ್ಚೆ ಬೀಲ – ಮೂಲಂಗಿ
ಬಿಳಿ ಕುದುರೆಗೆ ಹಸಿರು ಬಾಲ – ಮೂಲಂಗಿ

106. ಔತೆ ಮೇಲ್ ಮಲ್ಲಿಗೆ ಪೂ – ಮಂಜಿ
ಮನೆಯ ಮೇಲೆ ಮಲ್ಲಿಗೆ ಹೂವು – ಮಂಜು

107. ಬೆಲ್ಪು ರಾಯತ್ತ್‌ಲ್ ಕರ್ತೆ ಆಲ್‌ಮಾಲ್ – ಸೀತಪಲ
ಬಳಿ ಊರಲ್ಲಿ ಕಪ್ಪು ಜನರು – ಸೀತಫಲ

108. ಮೂತೋನು ಬುಲ್ಪಿಟ್ಟೆಂಗ್ ಎಲವುನುಂ ಬುಲ್ಪಿಡ್ರ – ಕನ್ನ್
ಅಣ್ಣ ಅತ್ತರೆ ತಮ್ಮನೂ ಅಳುತ್ತಾನೆ – ಕಣ್ಣು

109. ಕಣ್ಣ್‌ಗ್ ಮುಟ್ಟ ಕಾಲ್‌ಗ್ ದೂರ – ಪರ್ವತ
ಕಣ್ಣಿಗೆ ಹತ್ತಿರ ಕಾಲಿಗೆ ದೂರ – ಪರ್ವತ

110. ಕಣ್ಣ್‌ಗ್ ಕಾಂಡ್ಲೆ ಕೈಕ್ ಕಿಟ್ಪಲ್ಲೆ – ಕಾತ್
ಕಣ್ಣಿಗೆ ಕಾಣಲ್ಲ, ಕೈಗೆ ಸಿಕ್ಕಲ್ಲ – ಗಾಳಿ

111. ಒರು ಬತ್ತಿ ರಾಯತ್ತ್‌ಗ್ ಎಲ್ಲಾ ಬೆಲ್ಚ – ನೇರ
ಒಂದು ಬತ್ತಿ ಊರಿಗೆಲ್ಲಾ ಬೆಳಕು – ಸೂರ್ಯ

112. ರಾಯತ್ತ್‌ಗೆಲ್ಲಾ ಒರೇ ಒಲ್ಲಿ – ಆಕಾಸ
ಊರಿಗೆಲ್ಲಾ ಒಂದೇ ಕಂಬಳಿ – ಆಕಾಶ

113. ಪೆರುಂಬೊತ್ತುಗೆ ಒರ್‌ತರೆ ತಲೆಲ್ ಟೊಪ್ಪಿ ಇಕ್ಕ್‌ಡ್ – ಬದನೆ
ಜನಿಸುವಾಗ ಒಬ್ಬನ ತಲೆಯಲ್ಲಿ ಟೋಪಿ ಇರುತ್ತದೆ – ಬದನೆಕಾಯಿ

114. ಕಾತ್ ಬೀಞೇಂಗ್ ಚೆಯಿಕ್‌ಡ್,
ತನ್ನಿಗ್ ಇಟ್ಟೆಂಗ್ ಚಾವುಡು – ತೀ
ಗಾಳಿ ಬೀಸಿದರೆ ಜೀವಿಸುತ್ತದೆ.
ನೀರು ಚೆಲ್ಲಿದರೆ ಸಾಯುತ್ತದೆ – ಬೆಂಕಿ

115. ಉಮ್ಮರವುತು ಪೋಂಬೊ ಬೇಗ ಪೋಂಡಾಲ್,
ಮಾಪ್ಲೆಡೆ ಔತು ಪೋಂಬೊ ಮೆಲ್ಲ ಬಂಡಾಲ್ – ಕೊಡಪಾನ
ಅಮ್ಮನ ಮನೆಗೆ ಹೋಗುವಾಗ ಬೇಗ ಹೋಗುತ್ತಾಳೆ,
ಗಂಡನ ಮನೆಗೆ ಹೋಗುವಾಗ ಮೆಲ್ಲ ಬರುತ್ತಾಳೆ – ಕೊಡಪಾನ.

116. ಚೆರಿಯೆ ಚೆರಿಯೆ ಮಕ್ಕೊಗು ಚೆರಿಯೆ ಚೆರಿಯೆ ಟೊಪ್ಪಿ – ಉಗುರು
ಸಣ್ಣ ಸಣ್ಣ ಮಕ್ಕಳಿಗೆ ಸಣ್ಣ ಸಣ್ಣ ಟೊಪ್ಪಿ – ಉಗುರು

117. ಕಾಲಿಲ್ಲೆ ಓಡುರು, ತೋಲಿಲ್ಲೆ ನೀಂಡ್‌ರ್,

ಬಟ್ಟೆ ಬಲ್ಚಿ ಎರಿಡ್ – ಪಾಂಬು
ಕಾಲಿಲ್ಲ ಓಡುತ್ತದೆ, ಚರ್ಮವಿಲ್ಲ ಈಜುತ್ತದೆ,
ಬಟ್ಟೆ ಬಿಸಾಡುತ್ತದೆ – ಹಾವು

118. ಬಿರಿಯಿಡ್ ಪೂ ಅಲ್ಲ, ಬೈಲಿಗ್ ಬಾಡ್‌ಲ್ಲೆ – ಕೊಡೆ
ಅರಳುತ್ತದೆ ಹೂ ಅಲ್ಲ, ಬಿಸಿಲಿಗೆ ಬಾಡಲ್ಲ – ಛತ್ರಿ

119. ತನ್ನಿರೆ ಚುತ್ತು ಬೆಲ್ತೆ ಕಲ್ಲ್‌ರೆ ಕೋಟೆ – ತ್ಯಾಂಜೆ
ನೀರಿನ ಸುತ್ತಲೂ ಬಿಳಿ ಕಲ್ಲಿನ ಕೋಟೆ – ತೆಂಗಿನಕಾಯಿ

120. ಬಂಗಾರ್‌ಡೆ ಗುಬ್ಬಿ ಬೀಲತ್ತ್‌ಲ್ ತನ್ನಿ ಕುಡಿಕ್‌ರ್ – ಚಿಮಿನಿ
ಚಿನ್ನದ ಗುಬ್ಬಚ್ಚಿ ಬಾಲದಲ್ಲೇ ನೀರು ಕುಡಿಯುತ್ತದೆ – ಚಿಮನಿ ದೀಪ

121. ಕಿರೀಟ ಉಂಡು ರಾಜ ಅಲ್ಲ,
ನೇರ ಚೊಲ್ಡು ಗೆಂಟೆ ಅಲ್ಲ – ಕೋಲಿ
ಕಿರೀಟ ಉಂಟು ರಾಜನಲ್ಲ, ಸಮಯ ಹೇಳುತ್ತದೆ,
ಗಡಿಯಾರವಲ್ಲ – ಕೋಳಿ

122. ಒರು ಕಾಲ್‌ಡೆ ಚೊಟ್ಟೆ ನಾನಾರ್? – ಬೊಗರಿ
ಒಂದು ಕಾಲಿನ ಕುಂಟ ನಾನು ಯಾರು? – ಬೊಗರಿ

123. ಬುಡ್ ಪಾಟಿಯೆಂಗ್ ಪೂ, ಮಡ್ ಕೆಂಗ್ ಮುಗ್ಗು – ಕೊಡೆ
ಬಿಡಿಸಿದೆರೆ ಹೂವು, ಮಡಚಿದರೆ ಮೊಗ್ಗು – ಛತ್ರಿ

124. ಒರು ಕೈಕ್ ನೊರೋಡಿ ಬೆರ್ಲ್ – ಬಾಲೆಡೆ ಕೊಲ
ಒಂದು ಕೈ ತುಂಬಾ ಬೆರಳು – ಬಾಳೆ ಗೊಂಚಲು

125. ಎಲವುನುಗು ಮೂನು ಕನ್ನ್, ಉಮ್ಮಗ್ ಒರೇ ಕನ್ನ್ – ತ್ಯಾಂಜೇ
ತಮ್ಮನಿಗೆ ಮೂರು ಕಣ್ಣು, ಅಮ್ಮನಿಗೆ ಒಂದೇ ಕಣ್ಣು – ತೆಂಗಿನಕಾಯಿ

126. ಬಾ ಚೊನ್ನೆಂಗ್ ಬಂಡ್ಲೆ, ಪೋ ಚೊನ್ನೆಂಗ್ ಪೋಂಡ್ಲೆ – ಮಲೆ
ಬಾ ಅಂದರೆ ಬರುವುದಿಲ್ಲ, ಹೋಗು ಅಂದರೆ ಹೋಗುವುದಿಲ್ಲ –ಮಳೆ

127. ಪಲ್ಲಿಲ್ಲಾತೆ ಪಕ್ಕಿಗ್ ಗೂಡು ನೊರೋಡಿ ಕುಂಞ – ಕೋಳಿ
ಹಲ್ಲಿಲ್ಲದ ಹಕ್ಕಿಗೆ ಗೂಡು ತುಂಬಾ ಮರಿಗಳು – ಕೋಳಿ

128. ಆಯಿರ ಪಕ್ಕಿ ಒರ್ಕತ್‌ಲ್ ತನ್ನಿಗ್ ಇಲಿಯಿಡ್ – ಅರಿ
ಸಾವಿರ ಮಕ್ಕಳು ಒಮ್ಮೆಲೆ ನೀರಿಗಿಳಿಯುತ್ತಾರೆ – ಅಕ್ಕಿ

## ಬ್ಯಾರಿ ಗಾದೆಗಳು

ಇನ್ನು ನಾವು ಬ್ಯಾರಿ ಗಾದೆಗಳ ಕಡೆಗೆ ಗಮನ ಹರಿಸುವುದಾದರೆ ನಮಗೆ ಹಲವು ರೀತಿಯ ಅರ್ಥಪೂರ್ಣವಾದ ಗಾದೆಗಳನ್ನು ಕಾಣಬಹುದು. ಗಾದೆಗಳು ನಮಗೆ ನಮ್ಮ ಪೂರ್ವಿಕರು ಬಿಟ್ಟು ಹೋದ ದಾರಿದೀಪವಾಗಿದೆ. ಗಾದೆಗಳೆಂದರೆ ಅನುಭವವನ್ನು ತಿಳಿಸುವ ಮೂಲಕ ಜೀವನಕ್ಕೆ ಪ್ರೇರಣೆಯಾಗುವುದು. ನಮ್ಮ ಪೂರ್ವಿಕರು ಬರೆಯಲು ಕಲಿತವರಲ್ಲ. ಆದ್ದರಿಂದ ಅವರ ಸಾಹಿತ್ಯ ಕೇವಲ ಬಾಯಲ್ಲಿ ಹೇಳುವ ಮಾತುಗಳಾಗಿ ಪ್ರಚಾರವಾಯಿತು. ಪೂರ್ವಿಕರು ಮೊದಲು ಬೈಯ್ಯುವಾಗ, ಮಾತನಾಡುವಾಗ, ಬುದ್ಧಿ ಹೇಳುವಾಗ, ತಮಾಷೆ ಮಾತಾಡುವಾಗ ಲೆಲ್ಲ ಗಾದೆಗಳನ್ನು ಹೇಳುತ್ತಿದ್ದರು. ಹೆಚ್ಚಾಗಿ ಗಾದೆಗಳನ್ನು ಬಳಸಿಕೊಂಡು ಬುದ್ಧಿ ಹೇಳುತ್ತಿದ್ದರು. ಇದು ಪ್ರಸ್ತುತ ಸಮಾಜಕ್ಕೆ ತುಂಬಾ ರೀತಿಯ ಬೇಡಿಕೆಯಿರುವಂತಹ ಅಂಶವಾಗಿದೆ.

1. ಅಜಲಜಲೆ ತಲೆಕ್ಕ್ ಅಜಲ್‌ದೇ ಕೈ
   ಅವರವರ ತಲೆಗೆ ಅವರದ್ದೇ ಕೈ
2. ಅಂಡೆಡೆ ಬಾಯಿ ಕೆಟ್ಟ ದೊಂಡೆಡೆ ಬಾಯಿ ಕೆಟ್ಟೊಗಾವುಲ್ಲ.
   ಹಂಡೆಯ ಬಾಯಿ ಕಟ್ಟಬಹುದು, ದೊಂಡೆಯ ಬಾಯಿ ಕಟ್ಟಲಾಗದು.
3. ಅಂಡಿ ಕುಂಡಿ ತೆರಿಯಾತಜಲೊಟ್ಟಿಗೆ ತಲೆ ಮಂಡೆ ಒಡಚ್ಚೊಲನತ್ತರೆ.
   ಅಂಡೆ ಕುಂಡೆ ಗೊತ್ತಿಲ್ಲದವರೊಂದಿಗೆ ತಲೆ ಮಂಡೆ ಒಡೆದುಕೊಳ್ಳಬೇಕಷ್ಟೆ
4. ಪೈಸ ಕಂಡೆಂಗ್ ಚಗ ಬಾಯಿ ಬುಡ್ರ್
   ಹಣ ಕಂಡರೆ ಹೆಣವು ಬಾಯಿ ಬಿಡುತ್ತದೆ.
5. ಆರ್ರಾರೆ ಪಲ್ಲ್‌ರೆ ಕಾನ ನ್ಗಂಡೆ ನೆಂಞಿಯೇ ಗಟ್ಟಿ
   ಯಾರದೊ ಹಲ್ಲಿಗಿಂತ ನನ್ನ ಎದೆಯೇ ಗಟ್ಟಿ
6. ಕೆಡಕಿನ್ನತ್ರೆಮೆ ಕಾಲ್ ನೀಟ್
   ಹಾಸಿಗೆ ಇದ್ದಷ್ಟು ಕಾಲು ಚಾಚು
7. ಪಿ ಬರೊಂಬೊ ಪಿತ್ತ್‌ಲ್ ತೇಡ್ರೆ
   ಹೇಲು ಬಂದಾಗ ಹಿತ್ತಲು ಹುಡುಕುವುದು.
8. ಅಜ್ಜಿಗ್ ಪುಲ್ಲಿಡೆ ತಲೆಬೆಚ್ಚ ಪುಲ್ಲಿಗೆ ಮಿಂಡರೆ ತಲೆಬೆಚ್ಚ
   ಅಜ್ಜಿಗೆ ಮೊಮ್ಮಗಳ ತಲೆಬಿಸಿ, ಮೊಮ್ಮಗಳಿಗೆ ಮಿಂಡನ ತಲೆಬಿಸಿ

9. ಮೆಲ್ಲೆ ತಿಂಡೆಂಗ್ ಮುಲ್ಲುಂ ತಿನ್ನ
ಮೆಲ್ಲ ತಿಂದರೆ ಮುಳ್ಳು ತಿನ್ನಬಹುದು.
10. ಮಿನ್ನ್ಡೆದೆಲ್ಲ ಬಂಗಾರಲ್ಲ
ಮಿನುಗುವುದೆಲ್ಲ ಚಿನ್ನವಲ್ಲ
11. ತೇಡಿಯೋಂಟಿನ್ನೆ ಬಲ್ಲಿ ಕಾಲಿಗ್ ಚುತ್ತಿಯೆ ಪೊಲೆ
ಹುಡುಕುತ್ತಿರುವ ಹಗ್ಗ ಕಾಲಿಗೆ ಸುತ್ತಿಕೊಂಡ ಹಾಗೆ
12. ಕಡಲ್ ಪೊಯೆಂಗುಂ ನಾಯಿ ನಕ್ಕಿಟ್ಟೇ ಕುಡಿಕೊನು
ಸಮುದ್ರಕ್ಕೆ ಹೋದರೂ ನಾಯಿ ನೆಕ್ಕಿಯೇ ಕುಡಿಯಬೇಕು
13. ಪಾಯಿ ಇನ್ನತ್ತರೆಮೆ ಕಾಲ್ ನೀಟೊನು
ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು.
14. ಕೈ ಚೇರಾಯೆಂಗ್ ಬಾಯಿ ತಯರ್
ಕೈ ಕೆಸರಾದರೆ ಬಾಯಿ ಮೊಸರು
15. ಪೆಣ್ಣ್ ಪೆಣ್ಣಾಂಬೊ ತಗರೆ ತೆಂಜಾವು
ಹೆಣ್ಣು ಹೆಣ್ಣಾಗುವಾಗ ತಗರೆ ತೆಂಗಾಗಬಹುದು
16. ಕೊರಕ್ಡೆ ನಾಯಿ ಕಡಿಕ್ಲ್ಲೆ
ಬೊಗಳುವ ನಾಯಿ ಕಚ್ಚುವುದಿಲ್ಲ.
17. ಅನೆಕಟ್ಟೆಂಗು ಕಲ್ಲ ಅಡಕೆ ಕಟ್ಟೆಂಗುಂ ಕಲ್ಲ
ಆನೆ ಕದ್ದರೂ ಕಳ್ಳನೇ ಅಡಕೆ ಕದ್ದರೂ ಕಳ್ಳ
18. ನಾಯಿಡೆ ಬೀಲೆ ವಾಂಟೆಲಿಟ್ಟೆ ಪೋಲೆ
ನಾಯಿಯ ಬಾಲ ಕೊಳವೆಯಲ್ಲಿ ಹಾಕಿದ ಹಾಗೆ
19. ಒರ್ಮತ್ತಿನ್ನೆಂಗ್ ಒಲಕೆಲ್ ಕೆಡಕ
ಒಲುಮೆಯಿಂದಿದ್ದರೆ ಒನಕೆಯಲ್ಲೂ ಮಲಗಬಹುದು.
20. ರಾಯ ಓಡುಂಬೊ ನಡುಲೆ ಓಡೊನು
ಊರು ಓಡುವಾಗ ನಡುವಿನಲ್ಲಿಯೇ ಓಡಬೇಕು
21. ಕೈಕ್ ಎಕ್ಕಾತೆ ಮುಂದಿರಿಜೆ ಬೆರುಂ ಪುಲಿ
ಕೈಗೆ ತಲುಪದ ದ್ರಾಕ್ಷಿ ಬರೀ ಹುಳಿ
22. ಕೊರೊಡಿ ತಿಂಡೆಂಗ್ ಯಾರ ಮಿಂಜ
ಸ್ವಲ್ಪ ತಿಂದರೆ ತುಂಬಾ ಬದುಕಬಹುದು
23. ಎಕ್ಕೆಡ್ ಮದ್ರ, ಎಕ್ಕಾತೆದ್ ಕೈಪೆ
ಎಟಕುವುದು ಸಿಹಿ, ಎಡಕದ್ದು ಕಹಿ

24. ಮಲೆ ಬನ್ನೆ ಪಿತ್ಯಾಂಡ್ ಪಲ್ಲತ್ ತನ್ನಿ ಕಾಟ್‌ರ
ಮಳೆ ಬಂದ ಮುಂದಿನ ದಿನ ಹೊಂಡದಲ್ಲಿ ನೀರು ತೋರಿಸುತ್ತಾರೆ
25. ಪೆರಾಂಟ್ ಪೆತ್ತೆಂಗ್ ರಾಯೆಲ್ಲ ನಾರ್ಡ್
ಹೆರಿಗೆಯಾಗದೆ ಹೆರಿಗೆಯಾದರೆ ಊರೆಲ್ಲ ವಾಸನೆ ಬರುತ್ತದೆ.
26. ಪತ್ತ್ ಬೆರಲ್‌ಲ್ ನೈಚಿತ್ತ್ ಅಂಜಿ ಬೆರಲ್‌ಲ್ ತಿನ್ನ್‌ರೆ
ಹತ್ತು ಬೆರಳಲ್ಲಿ ದುಡಿದು ಐದು ಬೆರಳಲ್ಲಿ ತಿನ್ನುವುದು.
27. ಚತ್ತೆದ್ ಅಡ್ಜಿಟ್ ಮದ್‌ಲ್ ಆದ್‌ರ್‌ಪಾಟಂಡ
ಸತ್ತದ್ದನ್ನು ಹೊಡೆದು ಗೋಡೆ ಅದುರಿಸಬೇಡ.
28. ಕಲಿಕೊ ತೆರಿಯಾತೋನು ಜಾಲ್ ಸಮ ಇಲ್ಲ ಚೊನ್ನೆಪೊಲ
ಆಟವಾಡಲು ಗೊತ್ತಿಲ್ಲದವನು ಅಂಗಳ ಸರಿಯಿಲ್ಲ ಅಂದಹಾಗೆ
29. ಕನ್ನ್ ಕೈ ಇಟ್ಟಂಕೆತ್ತೆ ಪಲ್ಕ ಚೊಲ್ಲಂಡ
ಕಣ್ಣಿಗೆ ಕೈ ಹಾಕಿದಂತಹ ಮಾತು ಹೇಳಬೇಡ
30. ಎಡ್ತೆ ಕೈ ಕುಂಡಿಗ್ ಮುಟ್ಟ
ಎಡ ಕೈ ನಿತಂಬಕ್ಕೆ ಹತ್ತಿರ
31. ಕಾಲ ಬನ್ನೆಂಕೆಮೆ ಕೋಲ ಕೆಟ್ಟೊನು
ಕಾಲ ಬಂದ ಹಾಗೆ ವೇಷ ಕಟ್ಟಬೇಕು
32. ಅರ್‌ಕತುಮ್ ಇಲ್ಲೆ ಬರ್‌ಕತುಮ್ ಇಲ್ಲೆ
ಅಳಿವುಗೂ ಇಲ್ಲ, ಒಳಿತಿಗೂ ಇಲ್ಲ
33. ಬ್ರಾಹ್ಮಣರೆ ಪೀಕ್ಕ್ ನಾಯಿ ಕಾತಂಕೆ
ಬ್ರಾಹ್ಮಣನ ಮಲವಿಸರ್ಜನೆಗೆ ನಾಯಿ ಕಾದಹಾಗೆ
34. ಎಂಕು ಪಣಂಬೂರು ಪೋಯಿ ಬನ್ನಂಕೆ
ಎಂಕು ಪಣಂಬೂರಿಗೆ ಹೋಗಿ ಬಂದಹಾಗೆ
35. ಬೀಲ ಒಯ್ತಿಟ್ಟ್ ಚಾಜನ ಇಡೊಂಗುಂ ತೀರ್ಲೆ
ಬಾಲ ಎತ್ತಿ ಸೆಗಣಿ ಹಾಕಲೂ ಆಗುವುದಿಲ್ಲ
36. ಗೋವೆಲ್ ಪರಂಗಿಕ್ಕಲ್
ಗೋವಾದಲ್ಲಿ ಬ್ರಿಟಿಷರಿರಲಿಕ್ಕಿಲ್ಲ
37. ಅದ್‌ಲೆಲ್ಲ ಆನೆ ಕುದುರೆ ಆವೊಗಿಲ್ಲ
ಅದರಲ್ಲೆಲ್ಲ ಆನೆ ಕುದುರೆ ಆಗಲಿಕ್ಕಿಲ್ಲ
38. ಮಾಮಿಗೊರು  ಕಾಲ ಮರ್‌ಮೋಲ್‌ಗ್ ಒರು ಕಾಲ
ಅತ್ತೆಗೆ ಒಂದು ಕಾಲ ಸೊಸೆಗೊಂದು ಕಾಲ

39. ಪಾಲ್‌ಗ್ ಬನ್ನವುನುಗು ಎರ್ಮೆರೆ ಬೆಲೆ ಎಂದಿಗ್
ಹಾಲಿಗೆ ಬಂದವನಿಗೆ ಎಮ್ಮೆಯ ಬೆಲೆ ಯಾಕೆ
40. ಒರು ಕನ್ನ್‌ಗ್ ಮನ್ನ್ ಒರು ಕನ್ನ್‌ಗ್ ಬೆಣ್ಣೆ
ಒಂದು ಕಣ್ಣಿಗೆ ಮಣ್ಣು, ಒಂದು ಕಣ್ಣಿಗೆ ಬೆಣ್ಣೆ
41. ಕೈ ಕೈ ಕೂಡಿಯೆಂಗ್ ತಾಯಿಕೊಟ್ಟೆರೆ
ಕೈ ಕೈ ಕೂಡಿದರೆ ಚಪ್ಪಾಲೆ
42. ಸ್ವರಮೆ ಸ್ವರ್ಗ
ಕಾಯಕವೆ ಕೈಲಾಸ
43. ಕಾತ್ ಬರಾಂಟ್ ಎಲೆ ಪಂದ್‌ರ
ಗಾಳಿ ಬರದೆ ಎಲೆ ಅಲುಗಾಡುತ್ತಾ
44. ಒರ್‌ಕ್ ಬನ್ನವುಂಡೆ ಕೆಡಕೆಗ್ ಊಂದಿಟ್ಟೆ ಪೊಲೆ ಆಯ್ತ್
ನಿದ್ದೆ ಬಂದವನನ್ನು ಹಾಸಿಗೆಗೆ ತಳ್ಳಿದ ಹಾಗೆ ಆಯಿತು
45. ಆನ್ ನೋಕಿಟ್ಟ್ ಪೆನ್ನ್ ಕೊಡ್ಕೊನು, ಮರ ನೋಕಿಟ್ಟ್ ಬಲ್ಲಿ ಕೆಟ್ಟೊನು
ಗಂಡು ನೋಡಿ ಹೆಣ್ಣು ಕೊಡಬೇಕು, ಮರನೋಡಿ ಹಗ್ಗ ಹಾಕಬೇಕು.
46. ಆನ್ ಇನ್ನೆ ಪೆನ್ನ್‌ಗ್ ಆನೆಡೆ ಬಲ ಬಂಡೂಲ
ಗಂಡು ಇದ್ದ ಹಡುಗಿಗೆ ಆನೆಯ ಬಲ ಬರುತ್ತದೆ.
47. ಆಕುಂಬೊ ಒರು ತೆರು, ಪೋಂಬೊತ್ತುಗ್ ಪತ್ತ್ ತೆರು
ಮಾಡುವಾಗ ಒಂದು ದಾರಿ, ಹೋಗುವಾಗ ಒಂದು ದಾರಿ
48. ಆನೆ ಪೋಯೆ ತೆರುಲ್ ಆಡ್ ಪೋವು,
ಆಡ್ ಪೋಯೆ ತೆರುಲ್ ಆನೆ ಪೋವಲೆ
ಆನೆ ಹೋದ ದಾರಿಯಲ್ಲಿ ಆಡು ಹೋಗಬಹುದು,
ಆಡು ಹೋದ ದಾರಿಯಲ್ಲಿ ಆನೆ ಹೋಗದು.
49. ಎಲಿ ಬನ್ನೆಂಗ್ ಪಿಲಿ ಬನ್ನೆಪೊಲ ಆಕ್‌ದಾರ್.
ಇಲಿ ಬಂದರೆ ಹುಲಿ ಬಂದಹಾಗೆ ಮಾಡುತ್ತಾರೆ.
50. ಆಪತ್ತ್‌ಗ್ ಪತ್ತ್ ಬಾಯಿಲ್ ಉಂಡು
ಆಪತ್ತಿಗೆ ಹತ್ತು ಬಾಗಿಲು ಉಂಟು
51. ಆಯೆದ್ ಎಲ್ಲಾ ಒಲಿಯಲೆ, ಕಂಡದೆಲ್ಲಾ ಕಿಟ್ಟಲೆ
ಆದದೆಲ್ಲ ಉಳಿಯಲಾರವು  ನೋಡಿದ್ದೆಲ್ಲಾ ಸಿಗಲಾರವು
52. ಆಸೆರೆ ಕೊಡಿಮೇಲ್, ಮೀಸೆರೆ ಕೊಡಿ ಕೀಲ್
ಆಸೆಯ ತುದಿ ಮೇಲೆ, ಮೀಸೆಯ ತುದಿ ಕೆಳಗೆ

53. ಅವ  ಕಾಲಿಯಾಯೆ ಪಿನ್ನೆ ಕಂಡಿ ಬಾಯಿಲ್ ಇಟ್ಟೆವುಲ
ಮನೆ ಕಾಲಿಯಾದ ನಂತರ ಕಿಟಕಿ ಬಾಗಿಲು ಹಾಕಿದ ಹಾಗೆ

54. ಸೈಂತ ಚೊನ್ನುರೂಲ ಜಂಡ್ ಇಕ್ಕೊ ಬುಡಲೆ, ಒನ್ನು ತಪ್ಪೊ ಬುಡಲಾಂಟ್
ದೆವ್ವ ಹೇಳಿದೆಯಂತ ಎರಡು ಇರಲು ಬಿಡಲಾರೆನು, ಒಂದು ತಪ್ಪಲು ಬಿಡಲಾರೆನು

55. ಕಷ್ಟ ಬರುಂಬೊ ಪಡಚೋಂಡೆ ನೆನಪು
ಕಷ್ಟ ಬರುವಾಗ ದೇವನ ನೆನಪು

56. ಅವುನ್‌ಡೆ ಮುದು ಅವುನುಗ್ ಕಾಂಡಾ
ಅವನ ಬೆನ್ನು ಅವನಿಗೆ ಕಾಣುತ್ತದಾ

57. ಎದ್‌ರ್ ಪಲ್ಲ್‌ಡವುಂಡೆ ಬೇಜಾರ್ ತೀರ್‌ಲ್ಲೆ, ಬೆಲಿಯ ಬಯತವುಂಡೆ ಪಸಿ ತೀರ್‌ಲ್ಲೆ
ಎದುರು ಹಲ್ಲಿನವನ ಬೇಸರ ಮುಗಿಯುವುದಿಲ್ಲ, ಡೊಳ್ಳು ಹೊಟ್ಟೆಯವರ ಹಸಿವು ಮುಗಿಯುವುದಿಲ್ಲ.

58. ಔತುಗ್ ತಿರಿಬೆಚ್ಚಿ ರಾಯತ್ತ್‌ಗ್ ತಿರಿ ಬೈ ಮೋನೆ
ಮನೆಗೆ ದೀಪ ಹಚ್ಚಿ ಊರಿಗೆ ದೀಪ ಹಚ್ಚು ಮಗನೆ

59. ಮುನ್ನೊಲ್ತೆ ಎರ್ಮೆ ಪೋಂಬೊ ಪೆರಗತ್ತೆ ಎರ್ಮೆ ಚಿರಿಚೆ ಪೋಲ
ಮುಂದಿನ ಎಮ್ಮೆ ಹೋಗುವಾಗ ಹಿಂದೆಯಿದ್ದ ಎಮ್ಮೆ ನಕ್ಕ ಹಾಗೆ

60. ಇಪ್ಪಿನ್ನೆ ಮನಿಸ ಪಿನ್ನಿಲ್ಲೆ
ಈಗಿದ್ದ ಮನುಷ್ಯ ಮತ್ತೆ ಇಲ್ಲ

61. ಪೊಟ್ಟಟ್ಟ ಪೊಡಿ ಮರಂದ್
ಮೂಗನಲ್ಲಿದೆ ಹುಡಿ ಮದ್ದು

62. ಬೆಡ್ಯಾಯೆಲ್ ಪಿನ್ನ ಬುದ್ದಿ ಬಂತ್
ಕೆಟ್ಟ ಮೇಲೆ ಬುದ್ಧಿ ಬಂತು

63. ಒನಕ್ಕ್ ಪೀಕ್ಕ್  ಮಲೆ ಬನ್ನಂಕೆ
ಒಣ ಮಲಕ್ಕೆ ಮಳೆ ಬಂದ ಹಾಗೆ

64. ಉಪ್ಪು ತಿಂಡೋನು ತನ್ನಿ ಕುಡಿಕು
ಉಪ್ಪು ತಿಂದವನು ನೀರು ಕುಡಿಯಲೇಬೇಕು

65. ತನ್ನಿಲ್ ತೂರಿಯೆದ್ ನೇಕ್‌ಡ
ನೀರಿನಲ್ಲಿ ಮಲವಿಸರ್ಜನೆ ಮಾಡಿದ್ದು ತೇಲುತ್ತದೆಯೇ

66. ಪೂಚೆ ಕನ್ನ್ ಮುಚ್ಚಿ ಪಾಲ್ ಕುಡ್ಚಂಕೆ
ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಹಾಗೆ
67. ತೂರಿಟ್ಟ್ ತಿರಿಗಿ ನೋಕಿಯೊ ಪೊಲೆ
ಮಲವಿಸರ್ಜನೆ ಮಾಡಿ ಹಿಂದೆ ತಿರುಗಿದ ಹಾಗೆ
68. ಅವುಂಡವುಂಡೆ ಕಾಲ್‌ಲ್ ಅವುನು ನಿಕ್ಕೊನು
ಅವನವನ ಕಾಲಲ್ಲಿ ಅವನು ನಿಲ್ಲಬೇಕು.
69. ಕುಂಟಗ್ ಎಟ್ಟ್ ಬುದ್ದಿ
ಕುಂಟನಿಗೆ ಎಂಟು ಬುದ್ದಿ
70. ತೂರೊಂಬೊ ಬೆರ್‌ಲ್ ಬೆಚ್ಚಂಕೆ
ಮಲ ವಿಸರ್ಜನೆ ಮಾಡುವಾಗ ಬೆರಳು ಇಟ್ಟಹಾಗೆ
71. ಕುಂಡಿ ಕುಪ್ಪೆಲ್ ಕಿನಾವು ಮಾದತ್ತ್
ಕುಂಡೆ ಕುಪ್ಪೆಯಲ್ಲಿ ಕನಸು ಚಂದ್ರನಲ್ಲಿ
72. ಚಮ್ಮೆ ಪಡ್ಚೆ ಮುಕ್ರಿಗ್ ಕುಲ್‌ಹುವಲ್ಲಾಹು ಅಹದ್ ಪಾಡ ಇಲ್ಲಾತೆ ಪೊಲೆ
ತುಂಬಾ ಕಲಿತ ಗುರುಗಳಿಗೆ ಕುಲ್‌ಹುವಲ್ಲಾಹು ಅಹದ್ ಪಠನವಿಲ್ಲದ ಹಾಗೆ
73. ಮುನ್ನೊಲು ಬನ್ನೆ ಕಾದ್‌ರೆಕಾಂಟ ಇಪ್ಪ ಬನ್ನೆ ಕೊಂಬು ಗಟ್ಟಿ
ಮೊದಲು ಬಂದ ಕಿವಿಗಿಂತ ಈಗ ಬಂದ ಕೊಂಬು ಗಟ್ಟಿ
74. ಅರ್‌ಕತ್‌ಲುಂ ಇಲ್ಲ ಬರ್ಕತ್‌ಲುಂ ಇಲ್ಲ
ಹರಕತ್ತಿನಲ್ಲೂ ಇಲ್ಲ ಬರಕತ್ತಿನಲ್ಲೂ ಇಲ್ಲ
75. ಆವೊಗುಂ ಇಲ್ಲೆ ಪೋವೊಗುಂ ಇಲ್ಲೆ
ಆಗಲಿಕ್ಕೂ ಇಲ್ಲ ಹೋಗಲಿಕ್ಕೂ ಇಲ್ಲ
76. ಮಂಞಲ್ ಕಾಂಡೆದೆಲ್ಲ ಕಾಮಲೆ ಅಲ್ಲ
ಹಳದಿ ಕಾಣುವುದೆಲ್ಲ ಕಾಮಾಲೆ ಅಲ್ಲ
77. ತಲೆಕ್ಕ್ ಬೀತಿಯೆ ತನ್ನಿ ಕಾಲ್‌ಗ್ ಬರು
ತಲೆಗೆ ಸುರಿಸಿದ ನೀರು ಕಾಲಿಗೆ ಬರಬಹುದು.
78. ತಂಡೆ ಮರ್ಯಾದಿ ತರು ಮಾಮಿ ನಾನ್ ಒರ್ಕ ಪೋಯೊಲ್ಲೆ
ಕೊಡುವ ಮರ್ಯಾದಿ ಕೊಡಿ ಅತ್ತೆ, ನಾನು ಒಮ್ಮೆ ಹೋಗುತ್ತೇನೆ
79. ಅಡಿ ತಪ್ಪೆಂಗ್ ಆನೆಂ ಬೂಲು, ಕುದುರೆಂ ಬೂಲು
ಆಯ ತಪ್ಪಿದರೆ ಆನೆಯೂ ಬೀಳುತ್ತದೆ, ಕುದುರೆಯು ಬೀಳುತ್ತದೆ.

80. ಅವಾತೆ ಪೋವಾತೆ ಬಿಸಯ ಆಕಂಡ
ಆಗದ ಹೋಗದ ವಿಷಯವಾಡಬೇಡ
81. ಅರೆಪಡಿಪು ಆಲೆ ಕೊಲ್ಲು
ಅರ್ಧ ಜ್ಞಾನ ಮನುಷ್ಯರನ್ನು ಕೊಲ್ಲಬಹುದು
82. ಬ್ಯಾರಿ ಲಾಬ ಇಲ್ಲಾಂಟ್ ಬೆಲ್ಲತ್ತ್ ಪೋಂಡ್ಲೆವುಲ
ಬ್ಯಾರಿ ಲಾಭವಿಲ್ಲದೆ ನೆರೆಯಲ್ಲಿ ಹೋಗಲಾರನಂತೆ
83. ಅವುತು ಎಲಿ, ಪರ್‌ತ್ ಪಿಲಿ
ಮನೆಯಲ್ಲಿ ಇಲಿ, ಹೊರಗೆ ಹುಲಿ
84. ಬಯತ್ತ್‌ಗ್ ಬೋರಿಲ್ಲೆಂಗುಂ ಜುಟ್ಟುಗು ಮಲ್ಲಿಗೆ ಪೂ
ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು
85. ಮಾಮಿಗ್ ಒರು ಕಾಲ ಮರ್ಮೋಲುಗು ಒರು ಕಾಲ
ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
86. ಮಾಪ್ಲೆ ಪೆಂಞಾಯಿಡೆ ಗಲಾಟೆ ಉಂಡ್ ತಿಂಡ್ ಕೆಡ್‌ಕ್‌ರೆತೋಲು ಮಾತ್ರ
ಗಂಡ ಹೆಂಡತಿಯ ಜಗಳ ತಿಂದು ಮಲಗುವವರೆಗೆ ಮಾತ್ರ
87. ಆಯಿರ ಕಲವು ಚೊನ್ನುತ್ತು ಒರು ಮಂಜಿಲ ಆಕ
ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಬಹುದು.
88. ಜಂಡಾಲ್‌ಡೆ ಗಲಾಟೆ ಮೂನಾಮತ್ತೋನುಗ್ ಲಾಬ
ಇಬ್ಬರ ಗಲಾಟೆ ಮೂರನೆಯವನಿಗೆ ಲಾಭ
89. ಪುಣ್ಣು ಪೋಯೆಂಗುಂ ಕಡಿಕೆ ಪೋಂಡ್ಲೆ
ಹುಣ್ಣು ಹೋದರೂ ತುರಿಕೆ ಹೋಗುವುದಿಲ್ಲ
90. ಎಲ್ಲಾರೆ ಔತೆ ಪೊಲೆಂ ಒಟ್ಟೆಮೆ
ಎಲ್ಲರ ಮನೆಯ ದೋಸೆ ಕೂಡ ತೂತೇ
91. ಬಡಿ ಕೊತ್ತಿಯೆಂಗ್ ಪುಲಾವ್ವು ತನ್ನಿ ಕೊತ್ತಿಯೆಂಗ್ ಪೂಲಾವಲೆ
ಬೆತ್ತ ಕಡಿದರೆ ತುಂಡಾಗಬಹುದು, ನೀರು ಕಡಿದರೆ ತುಂಡಾಗದು.
92. ಮೇಲ್ ನೋಕಿ ತುಪ್ಪಿಯೆಂಗುಂ ಬೂಲ್ದೆ ಮೊಗತ್ತ್‌ಗೆ
ಮೇಲೆ ನೋಡಿ ಉಗುಳಿದರೆ ಬೀಳುವುದು ಮುಖಕ್ಕೆ
93. ಮಂಞಲ್ ಸೀಕ್‌ಡೌನುಗು ದುನಿಯಾವು ಎಲ್ಲಾ ಕಾಂಡೆ ಮಂಞಲ್
ಹಳದಿ ರೋಗದವನಿಗೆ ದೇಶವೆಲ್ಲಾ ಹಳದಿ ಕಾಣುತ್ತದೆಯಂತೆ
94. ಮೀಸೆ ಬನ್ನೆ  ಪಿನ್ನ ದೇಸ ಕಾಂಡ್ಲೆ, ಮೊಲೆ ಬನ್ನೆ ಪಿನ್ನೆ ನೆಲ ಕಾಂಡ್ಲೆ

ಮೀಸೆ ಬಂದ ಮೇಲೆ ದೇಶ ಕಾಣುವುದಿಲ್ಲ, ಮೊಲೆ ಬಂದ ಮೇಲೆ ನೆಲ ಕಾಣುವುದಿಲ್ಲ

95. ಮುತ್ತು ವಡೆಇಂಗ್ ಪೋಯಿತ್, ಪಲಕ ಬೂನೆಂಗ್ ಪೋಯಿತ್
ಮುತ್ತು ಒಡೆದರೆ ಹೋಯಿತು, ಮಾತು ಆಡಿದರೆ ಹೋಯಿತು

96. ಮಂಗಡೆ ಕೈಲ್ ಮಾಣಿಕ್ಯ ಕೊಡ್ತೆ ಪೊಲ
ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ

97. ಮಿನಿ ಮಿಡಿ ಲಂಗ ಮಾನತ್ತ್‌ಗ್ ಭಂಗ
ಮಿನಿ ಮಿಡಿ ಲಂಗ ಮಾನಕ್ಕೆ ಭಂಗ

98. ಪಾವತ್ತವುನು ತಿಂಡೆಂಗ್ ಪಸಿಕ್ಕ್, ಕಾಸಿನ್ನವುನು ತಿಂಡೆಂಗ್ ಮರಂದ್‌ಗ್
ಬಡವನು ತಿಂದರೆ ಹಸಿವೆಗೆ, ಶ್ರಿಮಂತನು ತಿಂದರೆ ಮದ್ದಿಗೆ

99. ರಾಯತ್ತೆ ಕಲ್ಲ ಆಯೆಂಗುಂ ಆವು, ಪರ್ರಾಯತ್ತೆ ಸೊಬಗ ಅಲ್ಲ
ಊರಿನ ಕಳ್ಳನಾದರೂ ಆಗಬಹುದು, ಹೊರನಾಡಿನ ಸೊಬಗ ಅಲ್ಲ

100. ಅಡ್ಪು ಕೋಲಿ ಒಕ್ಕಿಲ್ಲೆಂಗ್ ಪೋಟ್, ಗತ್ತ್ ಎತ್ತರ ಉಂಡು
ಒಲೆಯನ್ನು ಕೋಳಿ ಒಕ್ಕದಿದ್ದರೂ ಹೋಗಲಿ ಜಂಬವೆಷ್ಟಿದೆ.

101. ಚೇಂಬುರೆ ಕಾಲ್‌ಗ್ ಕಡ್ಡಿ ಕೆಟ್ಪ್ ಬನ್ನಂಕೆ
ಕೆಸುವಿನ ಕಾಲಿಗೆ ಕಡ್ಡಿ ಕಟ್ಟಿ ಬಂದಂತೆ

102. ಮರಿ ಕಡ್ಚೆಂಗ್ ಮರ್‌ಂದ್ ಉಂಡು, ಅರಿ ಕಡ್ಚೆಂಗ್ ಮರ್‌ಂದ್ ಇಲ್ಲೆ
ಹಾವು ಕಚ್ಚಿದರೆ ಮದ್ದುಂಟು, ಅಕ್ಕಿ ಕಚ್ಚಿದರೆ ಮದ್ದಿಲ್ಲ

103. ಬಾಯಿಜೋರಿನ್ನೋಂಡೆ ಮೋನ್ ಮಿಂಜ
ಬಾಯಿ ಜೋರಿದ್ದವನ ಮಗ ಬದುಕಿ ಉಳಿದ

104. ತಿಂಡೋನ್‌ಗ್ ಕೊದಿ ಯಾರ
ತಿಂದವನಿಗೆ ಆಸೆ ಹೆಚ್ಚು

105. ಅಜ್ಜಿ ಇಲ್ಲಾತೆ ಅವ್ ತಯ್‌ರ್ ಇಲ್ಲಾತೆ ಚೋರು ಪೊಲೆ
ಅಜ್ಜಿ ಇಲ್ಲದ ಮನೆ ಮೊಸರಿಲ್ಲದ ಊಟದ ಹಾಗೆ

106. ಅಜ್ಜಿ ಬಲ್‌ತಿಯೆ ಮೋಲು ಎಂದ್‌ರ್‌ತುಗುಂ ಆವಲ
ಅಜ್ಜಿ ಸಾಕಿದ ಮಗಳು ಯಾವುದಕ್ಕೂ ಸಾಲದು

107. ತಿಂಡ್‌ಟ್ ಪೋಯ, ಎಡ್ತೊಂಟುಂ ಪೋಯ
ತಿಂದೂ ಹೋದ, ಕೊಂಡೂ ಹೋದ

108. ಕೈಕ್ ಬನ್ನೆದ್ ಬಾಯಿಗ್ ಇಲ್ಲಾತೆ ಪೋಲೆ
ಕೈಗೆ ಬಂದ ತುತ್ತು ಬಾಯಿಗಿಲ್ಲ

109. ನಾಯಿಗ್ ಚೊನ್ನೆಂಗ್, ನಾಯಿ ಅದ್ರೆ ಬೀಲತ್ತ್ ಚೊನ್ನೆ ಪೋಲ
ನಾಯಿಗೆ ಹೇಳಿದರೆ ನಾಯಿ ಅದರ ಬಾಲಕ್ಕೆ ಹೇಳಿದ ಹಾಗೆ
110. ಕಾಲ್‌ಡೆದ್ ಕಾಲ್‌ಗ್ ತಲೆರೆದ್ ತಲೆಕ್ಕ್
ಕಾಲಿದ್ದು ಕಾಲಿಗೆ ತಲೆಯದ್ದು ತಲೆಗೆ
111. ನಾಯಿಡೆ ಬಾಲ ಎಪ್ಪೊಂ ಡೊಂಕೆ
ನಾಯಿಯ ಬಾಲ ಯಾವಾಗಲೂ ಡೊಂಕೆ
112. ಚೋರ್ ಪೋಯಿಟ್ಟ್ ಕಂಞಿ ಆಯಿಡ್
ಊಟ ಹೋಗಿ ಗಂಜಿ ಆಗಿದೆ.
113. ಪೋಲೆಡೆ ಪತ್ತ್‌ರ್ ಆಕೊಗುಂ ತೆರಿಡ್, ಪತ್ತ್‌ರ್‌ಡೆ ಪೋಲೆ ಆಕೊಗುಂ ತೆರಿಡ್
ದೋಸೆಯನ್ನು ರೊಟ್ಟಿ ಮಾಡಲು ಗೊತ್ತು, ರೊಟ್ಟಿಯನ್ನು ದೋಸೆ ಮಾಡಲು ಗೊತ್ತು
114. ಬೆಚ್ಚೋಲು ಇಕ್ಕ್‌ರೋಡ್ತೋಲು, ಮಂಜೆಲ ಆಯೋಲು ಮರಿಕ್‌ರೌಡ್ತೋಲು
ಇಟ್ಟವಳು ಇರುವವರೆಗೆ, ಕಟ್ಟಿದವಳು ಸಾಯುವವರೆಗೆ
115. ಅವುಲ್ ಡಾನ ಬೆಲಿಯೆಗತ್ತ್ ಅವುಲುಗ್
ಅವಳಿಂತ ದೊಡ್ಡ ಜಂಬ ಅವಳಿಗೆ
116. ಮೂಲೆಲ್ ಇನ್ನೆ ಮುಲ್ಲು ಎಡ್ತ್ತ್ಟ್ಟ ಕಾಲ್‌ಗ್ ಬಲ್ಚಿಟ್ಟಂಕೆ
ಮೂಲೆಯಲ್ಲಿ ಇದ್ದ ಮುಳ್ಳು ತೆಗೆದು ಕಾಲಿಗೆ ಎಳೆದುಕೊಂಡ ಹಾಗೆ
117. ಬೆಲ್ತೆದೆಲ್ಲಾ ಪಾಲಲ್ಲ
ಬೆಳ್ಳಗಿರುವುದೆಲ್ಲಾ ಹಾಲಲ್ಲ
118. ಪಾಂಬು ಚಾವೊನು, ಕೋಲು ಪೂಲಾವೊತೀರ
ಹಾವು ಸಾಯಬಾರದು ಕೋಲು ಮುರಿಯಬಾರದು.
119. ದೆಚ್ಚಿ ತಿನ್ನ್‌ರವುನುಗು ಇನ್ನತ್ತರೆ ಮೈ ಆವುಲ್ಲ
ಕುಳಿತು ತಿನ್ನುವವನಿಗೆ ಇದ್ದಷ್ಟು ಸಾಕಾಗುವುದಿಲ್ಲ.
120. ರಾಯತ್ತ್ ಬನ್ನೋಲು ತನ್ನಿಗ್ ಬರಾಂಟ್ ಇಕ್ಕುವಾಲಾ?
ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯ?
121. ಬಂಡೆ ಕಲ್ಲ್‌ರೆ ಮೇಲ್ ತನ್ನಿ ಬೀತಿಯೆ ಪೊಲೆ
ಬಂಡೆಕಲ್ಲಿನ ಮೇಲೆ ನೀರು ಸುರಿಸಿದ ಹಾಗೆ
122. ನೀ ಬೊಂಡು ತಿಂಡ್‌ಟ್ಟ್ ಪನಿರಾಲ್‌ಗ್ ತೋಲು ಕೊಡ್ತೆಂಗುಂ ನ್ಯಾರ ಬೆಲಕ್‌ರ್

ನೀನು ಬೊಂಡು ತಿಂದು ಕೆಲಸದವರಿಗೆ ಸಿಪ್ಪೆ ಕೊಟ್ಟರೂ ಸೂರ್ಯ ಉದಯಿಸುತ್ತಾನೆ.

123. ತಾನೆ ಕಂಡತ್ತ್‌ಗ್ ಮೂನು ಬೆಲೆ
ತಗ್ಗಿದ ಹೊಲದಲ್ಲಿ ಮೂರು ಬೆಳೆ

124. ಪಿರಾಂದರೆ ಕೈಲ್ ದೊಣ್ಣೆ ಕಿಟ್ಟಿಯಂಕೆ
ಹುಚ್ಚನ ಕೈಯಲ್ಲಿ ದೊಣ್ಣೆ ಸಿಕ್ಕಿದ ಹಾಗೆ

125. ಪರಿಬುಟ್ಟು ಕೋಮನ ಕೆಟ್ಟಿಯೆಪೊಲ
ಹರಿದುಬಿಟ್ಟು ಕೋಮನ ಕಟ್ಟಿದಂತೆ

126. ಕೈಲ್ ಇನ್ನೆದ್‌ರೆ ಬುಟ್ಟುಟ್ಟು ಪಾರ್ರೆದ್ ಪಿಡಿಕೊ ಪೋಯೆ ಪೊಲೆ
ಕೈಯಲ್ಲಿ ಇದ್ದದ್ದನ್ನು ಬಿಟ್ಟು ಹಾರುತ್ತಿರುವುದನ್ನು ಹಿಡಿಯಲಿಕ್ಕೆ ಹೋದಹಾಗೆ

127. ಕುಂಡಿ ತಕ್ಕಂತೆ ಮನೆ ಬೆಚ್ಚಿತ್ತ್ ದೈಕೊನು
ಕುಂಡೆಗೆ ತಕ್ಕ ಮಣೆ ಇಟ್ಟು ಕುಳಿತುಕೊಳ್ಳಬೇಕು

128. ಮೂಕು ತೋಲು ಮುಂಜಿಯವುನುಗ್ ಮುಂಡಾಸ್‌ರೆ ಆಸೆ ಎಂದಿಗ್
ಮೂಗಿನವರೆಗೆ ಮುಳುಗಿದವನಿಗೆ ಮುಂಡಾಸಿನ ಆಸೆ ಯಾತಕ್ಕೆ

129. ಎರ್ಮೆರೆ ನೊಂಬಲ ಕಾಕೆಗ್ ಎಂದ್ ಗೊಂತು
ಎಮ್ಮೆಯ ನೋವು ಕಾಗೆಗೆ ಏನು ಗೊತ್ತು.

## ಪ್ರಸ್ತುತ ಸ್ಥಿತಿಗತಿಗಳು ಮತ್ತು ಸವಾಲುಗಳು

ಎಲ್ಲಾ ಭಾಷೆಗೂ ಅದರದ್ದೇ ಆದ ಸಾಹಿತ್ಯ ಇದ್ದ ಹಾಗೆ ಬ್ಯಾರಿ ಭಾಷಿಗರಿಗೂ ಬ್ಯಾರಿ ಸಾಹಿತ್ಯವಿದೆ. ಅದರ ಮೇಲೆ ಪ್ರೀತಿ ಹುಟ್ಟಿದೆ. ಬ್ಯಾರಿ ಭಾಷೆಯ ಕಥೆ, ಕವನ, ಒಗಟುಗಳು, ಗಾದೆಗಳು ಈ ಎಲ್ಲಾ ವಿಷಯದಲ್ಲೂ ಬರೆದ ಪುಸ್ತಕ ಮತ್ತು ಬ್ಯಾರಿ ಭಾಷೆಯಲ್ಲಿ ಬರೆದು ಕಾದಂಬರಿಗಳನ್ನು ಕಾಣಲು ಸಿಗುತ್ತವೆ. ಇದು ಸಂತೋಷದ ವಿಷಯವೇ ಆದರೂ ಬ್ಯಾರಿ ಭಾಷೆಗೆ ಅದರದ್ದೇ ಆದ ಲಿಪಿ ಇಲ್ಲದ್ದು ಬೇಸರದ ಸಂಗತಿ.

ಯಾವುದೇ ಒಂದು ಕೆಲಸವನ್ನು ಸಾಧಿಸಬೇಕಾದರೆ ಅದಕ್ಕೆ ಪ್ರೋತ್ಸಾಹ ಗುರಿ ಬೇಕು. ಬ್ಯಾರಿ ಭಾಷೆಯ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಬೇಕಾದ ಪ್ರೋತ್ಸಾಹ ಸಿಗಬೇಕು. ಬ್ಯಾರಿ ಸಾಹಿತ್ಯವು ಅಭಿವೃದ್ಧಿಯ ಮಾರ್ಗದಲ್ಲಿ

ಸಾಗಬೇಕಾದರೆ ಬ್ಯಾರಿ ಮಕ್ಕಳಿಗೆ ಈಗಲೇ ಬ್ಯಾರಿ ಭಾಷೆಯ ಮೇಲೆ ಪ್ರೀತಿ ಬೆಳೆಸಬೇಕು ಮತ್ತು ಅದರ ಮಹತ್ವದ ಬಗ್ಗೆ ಹೇಳಿಕೊಡಬೇಕು.

ಮಕ್ಕಳಿಗೆ ಕಥೆ, ಕವನಗಳನ್ನೆಲ್ಲಾ ಬರೆಯಲು ತುಂಬಾ ಆಸಕ್ತಿ ಇರುತ್ತದೆ. ಬ್ಯಾರಿ ಭಾಷೆಗೆ ಸಂಬಂಧವಿರುವ ಬ್ಯಾರಿ ಭಾಷೆಯ ಬೇರೆ ಬೇರೆ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳು ತುಂಬಾ ಸಂಖ್ಯೆಯಲ್ಲಿ ಅದಕ್ಕೆ ಸೇರುವ ಹಾಗೆ ಮಾಡಿ ಅವರಿಗೆ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಬೇಕು. ಮಕ್ಕಳಿಗೆ ಮೊಬೈಲ್ ಟ್ಯಾಬ್‌ಗಳು ಬಂದ ನಂತರ ಬರೆಯಲು ಸಾಹಿತ್ಯದಲ್ಲಿ ಆಸಕ್ತಿ ಕಡಿಮೆಯಾಗಿದೆ. ಈಗಿನ ಪರಿಸ್ಥಿತಿಯನ್ನು ಅವಲೋಕಿಸುವಾಗ ಬ್ಯಾರಿ ಭಾಷೆಯು ದಿನ ಕಳೆದ ಹಾಗೆ ತನ್ನ ಒಂದು ಹಿನ್ನೆಲೆಯನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆಲ್ಲಾ ಕಾರಣ ಇಂಗ್ಲೀಷ್ ಭಾಷೆಯಾಗಿರುತ್ತದೆ. ಹೀಗೆಯ ಈ ಸಂದರ್ಭದಲ್ಲಿ ಈ ಭಾಷೆಯ ಬೆಳವಣಿಗೆ ಮಾಡುವುದು ನಮ್ಮ ಕರ್ತವ್ಯವಾಗಿವೆ. ಬ್ಯಾರಿ ಭಾಷೆಯಲ್ಲಿ ಇಂದು ಹಲವಾರು ಇಂಗ್ಲೀಷ್ ಪದಗಳಿವೆ. ಆ ಕಾರಣದಿಂದ ಈಗಿನ ಪೀಳಿಗೆಗೆ ಇಂಗ್ಲಿಷ್ ಪದದಲ್ಲಿ ಇರುವ ಬ್ಯಾರಿ ಭಾಷೆಯ ಪದ ಏನೆಂದು ತಿಳಿದಿಲ್ಲ. ಈ ಪದಗಳಿಗೆಲ್ಲಾ ಬ್ಯಾರಿ ಪದ ಕಂಡುಹಿಡಿದು ಅದಕ್ಕೆ ಬ್ಯಾರಿ– ಕನ್ನಡ–ಇಂಗ್ಲೀಷ್ ನಿಘಂಟು ಹೊರತರಬೇಕು.

ಹಿಂದೆ ಮದುವೆ ಎಂದು ಹೇಳುವಾಗ ಆ ಮನೆಯಲ್ಲಿ ತುಂಬಾ ಆನಂದ, ಸಡಗರ. ಅದಕ್ಕೆ ಮೂಲ ನಮ್ಮ ಅಜ್ಜಿಯಂದಿರು ಕಿವಿಯಲ್ಲಿ ಅಲಿಕಾತ್, ಧರಿಸಿದ ಕುಪ್ಪಾಯ, ತಲೆಯಲ್ಲಿ ಎಲ್‌ಸರ ಕಟ್ಟಿದ ಅಜ್ಜಿಯಂದಿರು ಮೈಲಾಂಜಿ ಪಾಟ್, ಮಂಜಿಲ ಪಾಟ್ ಹಾಡಿಕೊಂಡು ಆ ಮದುವೆಯ ಸಡಗರಕ್ಕೆ ಕಾರಣರಾಗಿದ್ದರು. ಆದರೆ ಈಗ ನಮಗೆ ಇದೆಲ್ಲಾ ಕಾಣಲು ಸಿಗುವುದಿಲ್ಲ.

ಹಿಂದೆ ಮಕ್ಕಳಿಗೆ ಅಜ್ಜಿ–ಅಜ್ಜಂದಿರು ಸುತ್ತ ಮುತ್ತಲೂ ಕುಳ್ಳಿರಿಸಿ ಒಳ್ಳೆ–ಒಳ್ಳೆಯ ಕಥೆಗಳನ್ನು ಹೇಳುತ್ತಿದ್ದರು. ಈಗಿನ ಮಕ್ಕಳಿಗೆ ಇದು ಏನೆಂದು ತಿಳಿದಿಲ್ಲ. ಟ್ಯಾಬ್, ಗೇಮ್ಸ್, ಮೊಬೈಲ್ ಅಂತ ಅದರಲ್ಲಿಯೇ ಇರುತ್ತಾರೆ. ಹೀಗೆ ಸಾಹಿತ್ಯ ಕಳೆದು ಹೋಗಿದೆ. ಅಜ್ಜಿ–ಮಕ್ಕಳ ನಡುವಿನ ಪ್ರೀತಿಯು ಕಡಿಮೆಯಾಗುತ್ತಾ ಬಂದಿದೆ.

ಕೆಲವು ವರ್ಷಗಳ ಹಿಂದೆ ಮನೆಯಲ್ಲಿ ಅಜ್ಜ–ಅಜ್ಜಿಯಂದಿರು ಮಕ್ಕಳು ಸೊಸೆಯಂದಿರು–ಅಳಿಯಂದಿರು, ಮರಿಮಕ್ಕಳು ಎಲ್ಲರೂ ಒಟ್ಟಿಗೆ ಕುಳಿತು ಮಾತನಾಡುತ್ತಾ ಜೀವನ ಕಳೆಯುತ್ತಿದ್ದರು. ಕಥೆಗಳು, ಒಗಟುಗಳು, ಹಾಡು, ಗಾದೆಗಳನ್ನು ಹೇಳುತ್ತಾ ಕೆಲಸ ಮಾಡುತ್ತಿದ್ದರು. ಮಾತನಾಡದಿದ್ದರೆ ಅವರಿಗೆ ನಿದ್ದೆಯೇ ಹತ್ತುತ್ತಿರಲಿಲ್ಲ. ಈಗ ನೋಡಿದರೆ ಮಕ್ಕಳೆಲ್ಲ ಪರದೇಶಕ್ಕೆ ಹೋಗಿದ್ದಾರೆ.

ಮನೆಯಲ್ಲಿ ಹೆಂಗಸರು ಮಕ್ಕಳು ಅವರು ಇಪ್ಪತ್ನಾಲ್ಕು ಗಂಟೆ ದೂರದರ್ಶನ, ವಾಟ್ಸ್‌ಅಪ್ ನೋಡಿಕೊಂಡು ಇರುತ್ತಾರೆ. ಎಲ್ಲಾ ಕೆಲಸಗಳನ್ನು ದೂರದರ್ಶನವನ್ನು ನೋಡುತ್ತಲೆ ಮಾಡುತ್ತಾರೆ. ಮಾತಾಡಲು ಅವರಿಗೆ ಸಮಯವಿಲ್ಲ, ಇದರಿಂದಾಗಿ ಹಿಂದಿನ ಅಜ್ಜ – ಅಜ್ಜಿಯಂದಿರು ಹೇಳುತ್ತಿದ್ದ ಕಥೆಗಳು, ಒಗಟುಗಳು ಎಲ್ಲವೂ ಕಾಣೆಯಾಗುತ್ತಾ ಬಂದಿದೆ.

ಬ್ಯಾರಿ ಭಾಷೆಗೆ ತನ್ನದೇ ಆದ ಸ್ವಂತ ಲಿಪಿ ಇಲ್ಲ. ಅದೂ ಅಲ್ಲದೆ ನಮ್ಮ ಪೂರ್ವಿಕರು ಓದು ಬರೆಯಲು ಕಲಿತವರಲ್ಲ ಆದ್ದರಿಂದ ಸಾಹಿತ್ಯ ಕೇವಲ ಬಾಯಿಯಲ್ಲಿ ಹೇಳುವ ಮಾತುಗಳಾಗಿ ಮಾತ್ರ ಪ್ರಚಾರವಾಗಿದೆ. ಹೀಗೆಯೆ ಅನೇಕ ಮಾತುಗಳು (ಗಾದೆಗಳು) ಕಣ್ಮರೆಯಾಗುತ್ತಾ ಬಂದಿವೆ. ಅದನ್ನು ಈಗ ಅನೇಕ ಲೇಖಕರು ಅದನ್ನು ಹೊರಗೆ ತರುವ ಕೆಲಸವನ್ನು ಮಾಡುತ್ತಾರೆ.

ಬ್ಯಾರಿ ಭಾಷೆಯ ಸಾಹಿತ್ಯದ ಪ್ರಸ್ತುತ ಸ್ಥಿತಿಗತಿ ತೀರಾ ಶೋಚನೀಯವಾಗಿದೆ. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಈ ನಿಟ್ಟಿನಲ್ಲಿ ಅವಿರತ ಪ್ರಯತ್ನ ನಡೆಸುತ್ತಿದ್ದರೂ ಕೂಡಾ ಅದನ್ನು ಬ್ಯಾರಿಗಳು ಗಂಭೀರವಾಗಿ ಪರಿಹಣಿಸಿದಂತಿಲ್ಲ. ಬ್ಯಾರಿ ಸಾಹಿತ್ಯ ಉಳಿಯಬೇಕಾದರೆ ಬ್ಯಾರಿಗಳು ಬ್ಯಾರಿ ಸಾಹಿತ್ಯದ ಉಳಿವೆಗೆ ಸ್ವ–ಇಚ್ಛೆಯಿಂದ ಆಸಕ್ತಿ ವಹಿಸಬೇಕು. ಅಕಾಡೆಮಿ ಮಾಡುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು.

ಕನಿಷ್ಠ ತಮ್ಮ ಭಾಷೆಯ ಮೇಲೆ ಪ್ರೀತಿ ವಿಶ್ವಾಸವಿಲ್ಲ. ಭಾಷೆಯ ಮಹತ್ವದ ಬಗ್ಗೆ ತಿಳಿದಿಲ್ಲ. ಅದನ್ನು ಉಳಿಸಿದರೆ ಆಗುವ ಪ್ರಯೋಗದ ಬಗ್ಗೆ ಅರಿತುಕೊಂಡಿಲ್ಲ. ಮಾತೃ ಭಾಷೆ ನಶಿಸಿ ಹೋದರೆ ಅದರಿಂದಾಗುವ ಅಪಾಯದ ಬಗ್ಗೆಯೂ ತಿಳಿದಿಲ್ಲ. ಭಾಷೆ ಅಳಿದರೆ ಸಂಸ್ಕೃತಿ ಅಳಿಯುತ್ತದೆ ಎಂಬ ಕನಿಷ್ಠ ಜ್ಞಾನವೂ ಇಲ್ಲದಂತೆ ಯುವ ಜನಾಂಗ ವರ್ತಿಸುತ್ತಿದೆ.

ಬ್ಯಾರಿ ಭಾಷೆಯನ್ನು ಜನರ ಮುಂದೆ ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಬ್ಯಾರಿ ಸಮುದಾಯದಲ್ಲಿ ಆತ್ಮ ವಿಶ್ವಾಸದ ಕೊರತೆ ಇದೆ. ಇಂದು ಎಲ್ಲರೂ ಆಂಗ್ಲ ಮಾಧ್ಯಮದ ಬಗ್ಗೆ ಗಮನ ಹರಿಸುವ ಮೂಲಕ 'ಕನ್ನಡ'ವನ್ನು ಮರೆತು ಬಿಡುತ್ತಿದ್ದಾರೆ. ಕನ್ನಡ ಮರೆತರೆ ಅದರ ಸೊದರ ಭಾಷೆಯಾದ 'ಬ್ಯಾರಿ'ಯನ್ನು ಮರೆತಂತೆ.

'ಆಂಗ್ಲ' ಮಾಧ್ಯಮದ ವ್ಯಾಮೋಹ ಹೆಚ್ಚಾದರೆ ಅದರ ನೇರ ಪರಿಣಾಮ ಮಾತೃ ಭಾಷೆಯ ಮೇಲಾಗುತ್ತದೆ. ಈಗಿನ ಯುವ ಪೀಳಿಗೆ ಬ್ಯಾರಿ ಭಾಷೆ ಮರೆತು 'ಆಂಗ್ಲ' ಭಾಷೆಯಲ್ಲೆ ವ್ಯವಹಾರ ನಡೆಸಿದರೆ ಅದರ ನಷ್ಟ ಅಪಾರ.

ಇನ್ನು ಮುಂದಿನ ಪೀಳಿಗೆ ಮಾತೃ ಭಾಷೆಯನ್ನು ಕೀಳಾಗಿ ಕಾಣುವ ಸಾಧ್ಯತೆ ಇದೆ.

ಬ್ಯಾರಿ ಭಾಷೆಗೆ ತನ್ನದೇ ಆದ ವ್ಯಾಕರಣ, ಲಿಪಿ ಇತ್ಯಾದಿ ಇಲ್ಲ. ಹಾಗಾಗಿ ಮುಂದುವರಿಯುತ್ತಿರುವ ಈ ಸಮಾಜವು ಇದನ್ನು ಅಸ್ಥಿತ್ವಕ್ಕೆ ತರಬೇಕು. ಇದರ ಬಗ್ಗೆ ಇನ್ನೂ ಅಧ್ಯಯನ ನಡೆಸಬೇಕು. ಬ್ಯಾರಿ ಭಾಷೆಗೆ ಬೇಕಾದ ಲಿಪಿ, ವ್ಯಾಕರಣ, ಸಾಹಿತ್ಯ ರಚಿಸಬೇಕು. ಆಗ ಬ್ಯಾರಿ ಭಾಷೆಯು ಉದ್ದಾರವಾಗುತ್ತದೆ.

ಬ್ಯಾರಿ ಅಕಾಡೆಮಿ ಸಂಘಟಿತ ರೂಪದಲ್ಲಿ ರಾಜ್ಯದ ಪ್ರತೀ ಜಿಲ್ಲೆ, ತಾಲೂಕು, ಮಟ್ಟದಲ್ಲಿ ತಳವೂರಿ ಬ್ಯಾರಿ ಭಾಷೆಯ ಬಗ್ಗೆ ಜನರಲ್ಲಿ ಹೆಮ್ಮೆಯ ಮನಸ್ಥಿತಿಯನ್ನು ಉಂಟು ಮಾಡಬೇಕು. ಬ್ಯಾರಿ ಸಮುದಾಯದಲ್ಲಿ ಹಲವಾರು ಕವಿಗಳು, ಬರಹಗಾರರು, ಚಿಂತಕರು, ವಿದ್ಯಾರ್ಥಿಗಳನ್ನು ಬ್ಯಾರಿ ಭಾಷೆಯ ಸ್ಥಿತಿಗತಿ ಬಗ್ಗೆ ಚರ್ಚಿಸಿ ಅದರ ಬೆಳವಣಿಗೆಗೆ ಪ್ರಯತ್ನಿಸಬೇಕು.

ಇವರೆಲ್ಲರಲ್ಲಿರುವ ಕಲೆಯನ್ನು ಸ್ಪರ್ಧೆಯ ಮುಖಾಂತರ ವಿಶೇಷ ಶಿಬಿರದ ಮುಖಾಂತರ, ಅಭಿವೃದ್ಧಿಪಡಿಸಬೇಕು. ವಿಶೇಷವಾಗಿ ಕೆಲವು ತಂಡಗಳನ್ನು ವ್ಯವಸ್ಥಿತವಾಗಿ ರಚಿಸಿ, ಈ ಕಲಾಕಾರರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಬ್ಯಾರಿ ಭಾಷೆಯಲ್ಲೂ ಕೆಲವು ಪುಸ್ತಕಗಳನ್ನು ದೈನಂದಿನ ಪತ್ರಿಕೆ, ಚಾನೆಲ್‌ಗಳನ್ನು ಸ್ಥಾಪಿಸಬೇಕು.

ಬ್ಯಾರಿ ಬಾಸೆ ತುಳು, ಕನ್ನಡ, ಇಂಗ್ಲಿಷ್ ಭಾಷೆಯ ಹಾಗೆ ಅಭಿವೃದ್ಧಿಯಾಗ ಬೇಕು ಈಗಿನ ಪರಿಸ್ಥಿತಿ ನೋಡಿದರೆ ಬ್ಯಾರಿ ಭಾಷೆಯು ಅವನತಿಯ ದಾರಿಯಲ್ಲಿದೆ. ಬ್ಯಾರಿ ಭಾಷೆಯನ್ನು ನಾವು ಕೇವಲ ಬಾಯಿ ಮಾತಾಗಿ ಕಾಣುತ್ತಿದ್ದೇವೆ.

ಬ್ಯಾರಿ ಭಾಷೆಯ ಅಭಿವೃದ್ಧಿಯಾಗಬೇಕಾದರೆ ಜನರಲ್ಲಿ ಬ್ಯಾರಿ ಭಾಷೆಯ ಮಹತ್ವ, ಪ್ರಾಚೀನತೆ ಹೀಗೆ ಕೆಲವು ವಿಷಯಗಳ ಬಗ್ಗೆ ಗೊತ್ತಿರಬೇಕಾಗುತದೆ. ಬ್ಯಾರಿ ಭಾಷೆಯ ಅಭಿವೃದ್ದಿಯಾಗಬೇಕಾದರೆ ಮೊದಲು ಬ್ಯಾರಿ ಭಾಷೆಯಲ್ಲಿದ್ದ ಸಾಹಿತ್ಯ ಹೊರಗೆ ಬರಬೇಕು. ಅದನ್ನು ಸಂಗ್ರಹಿಸಲು ಬ್ಯಾರಿಗಳಾದ ನಾವು ಮನಸ್ಸು ಮಾಡಬೇಕು.

# ಆಕರ ಗ್ರಂಥ


1. ಬ್ಯಾರಿ ಭಾಷೆ : ಡಾ. ಸುಶೀಲಾ ಪಿ. ಉಪಾಧ್ಯಾಯ
2. ತುಳುನಾಡಿನ ಬ್ಯಾರಿಗಳು: ಇಂಗ್ಲಿಷ್ ಮೂಲ: ಪ್ರೊ.ಬಿ.ಎಂ. ಇಚ್ಲಂಗೋಡು. ಕನ್ನಡಕ್ಕೆ : ತುಫೈಲ್ ಮುಹಮ್ಮದ್
3. ಪೆರಿಮೆ ಸಂಶೋಧನ ಗ್ರಂಥ:
   * ಬ್ಯಾರಿಗಳಲ್ಲಿ ಪಾಟ್ ಒಂದು ವಿಮೋಚನೆ–ಪ್ರೊ ಮುಹಮ್ಮದ್ ಇಸಾಕ್ ಅಗ್ನಾಡಿ
   * ಬ್ಯಾರಿ ಸಾಹಿತ್ಯದ ಬೆಳವಣಿಗೆ – ಹಂಝ ಮಲಾರ್
   * ಬ್ಯಾರಿ ಹಾಗೂ ಪತ್ರಿಕಾ ಮಾಧ್ಯಮಳ ಪಾತ್ರ – ರಹೀಂ ಉಚ್ಚಿಲ್
4. ಮಂಗಳೂರು ದರ್ಶನ (ಸಂಪುಟ–2)
   ಅಧ್ಯಾಯ 2 ಬ್ಯಾರಿ ಸಾಹಿತ್ಯದ ಇತಿಹಾಸ – ಬಿ.ಎ. ಮಹಮ್ಮದ್ ಅಲಿ.
5. ತುಳುನಾಡಿನ ಮುಸ್ಲಿಮರು – ಡಾ. ವಹಾಬ್ ದೊಡ್ಡಮನೆ
6. ಬ್ಯಾರಿ ಅಧ್ಯಯನ 2008 – ಬ್ಯಾರಿ ರಿಸರ್ಚ್ ಸೆಂಟರ್
7. ಬ್ಯಾರಿ ಆಂದೋಲನದ ಹೆಜ್ಜೆಗಳು – ಬ್ಯಾರಿ ರಿಸರ್ಚ್ ಸೆಂಟರ್
8. ಪಾಲುಂ ತೇನು – ಹಂಝ ಮಲಾರ್
9. ಬ್ಯಾರಿ ಚೆಲ್ತ್ – ಮುಹಮ್ಮದ್ ತಣ್ಣೀರುಬಾವಿ
10. ಬ್ಯಾರಿ ಮುಸ್ಲಿಮರು ( ಒಂದು ಅಧ್ಯಯನ) – ಹಂಝ ಮಲಾರ್
11. ಸುವಾದ್ (ಬ್ಯಾರಿ ಮಸಲೆ,ಚಿರಿ, ಅಂಕಣ ಎಲ್ತ್ಜಲೆ ಜೊಂಕೆ)– ಹಂಝ ಮಲಾರ್
12. ಬೆಲ್ಕರಿ ತ್ರೈಮಾಸಿಕ ಸಂಚಿಕೆ (ಅಕ್ಟೋಬರ್ – ನವೆಂಬರ್ –ಡಿಸೆಂಬರ್)
13. ಬೆಲ್ಕರಿ ತ್ರೈಮಾಸಿಕ ಸಂಚಿಕೆ (ಅಕ್ಟೋಬರ್ – ಡಿಸೆಂಬರ್–2010)
14. ಬೆಲ್ಕರಿ ತ್ರೈಮಾಸಿಕ ಸಂಚಿಕೆ (ಅಗಸ್ಟ್ – ಸೆಪ್ಟೆಂಬರ್– ಅಕ್ಟೋಬರ್ 2011)
15. ಬೆಲ್ಕರಿ ತ್ರೈಮಾಸಿಕ ಸಂಚಿಕೆ (ಮೇ – ಜೂನ್ – ಜುಲಾಯಿ 2011)
16. ಬೆಲ್ಕರಿ ವಿಶೇಷಾಂಕ (ಅಗಸ್ಟ್ 2014– ಮಾರ್ಚ್ 2015)
17. ಬೆಲ್ಕರಿ ಸಂಗಮ ಸಂಭ್ರಮ ವಿಶೇಷಾಂಕ (ಜೂನ್ – ಸೆಪ್ಟೆಂಬರ್ 2015)
18. ಬೆಲ್ಕರಿ ಬ್ಯಾರಿ ಬಾಸೆರೊ ಬೆಲೆಚಲ್ – ವಿಶೇಷಾಂಕ (2015 ಅಕ್ಟೋಬರ್– ಡಿಸೆಂಬರ್–ಜನವರಿ –2016)
19. ಬೆಲ್ಕರಿ ದ್ವೈಮಾಸಿಕ ಸಂಚಿಕೆ (ಎಪ್ರಿಲ್, ಮೇ –2016)
20. ಬೆಲ್ಕರಿ ವಿಶೇಷಾಂಕ (ಜೂನ್ – ಅಗಸ್ಟ್ 2016)
21. ಮಾಹಿತಿ ಬೂಕು – ನಾಲ್ಕನೇ ಬ್ಯಾರಿ ಸಾಹಿತ್ಯ ಸಮ್ಮೇಳನ
22. ಮಾಹಿತಿ ಬೂಕು – ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನ

23. ಮಾಹಿತಿ ಬೂಕು – ಬಂಟ್ವಾಳ ತಾಲೂಕು ಬ್ಯಾರಿ ಸಾಹಿತ್ಯ ಸಮ್ಮೇಳನ
24. ಬ್ಯಾರಿ ಸಮ್ಮೇಳನ – 2011 (ಬ್ಯಾರಿ ಬದುಕಿನ ತಲ್ಲಣಗಳು)
25. ಬ್ಯಾರಿ ಲ್ಯಾಂಗ್ವೇಜ್ – ಡಾ. ಸುಶೀಲ ಪಿ. ಉಪಾಧ್ಯಾಯ
26. ದಿ. ಬ್ಯಾರೀಸ್ ಆಫ್ ತುಳುನಾಡ್ (ಇಂಗ್ಲಿಷ್ ಅಧ್ಯಯನ ಗ್ರಂಥ)– ಪ್ರೊ.ಬಿ.ಎಂ. ಇಚ್ಲಂಗೋಡು.
27. ಫ್ರೆಂಡ್ಸ್ ಅಸೋಸಿಯೇಶನ್ ದಶಮಾನೋತ್ಸವ ಸಂಚಿಕೆ – ಆಲಡ್ಕ, ಪಾಣೆಮಂಗಳೂರು–2006–2016

# ಪ್ರಾದೇಶಿಕ ಬಾಸೆ ಆಯಿಟ್
# ಬ್ಯಾರಿ ಬಳಕೆ, ಬಾನಿಯ,
# ಕಚ್ಚೋಡತ್‌ಲ್ ಪಿನ್ನೆ
# ಸಾಹಿತ್ಯಲ್ ಬಾಸೆಡೆ ಬಳಕೆ –
# ಬ್ಯಾರಿ ಬಾಸೆಡೆ ಭವಿಷ್ಯ


**ಫಾಹಿಮ**

ಎಮ್.ಎ ವಿದ್ಯಾರ್ಥಿನಿ

ಫೀಲ್ಡ್ ಮಾರ್ಶಲ್ ಕೆ.ಎಂ. ಕಾರ್ಯಪ್ಪ ಕಾಲೇಜು

ಮಡಿಕೇರಿ

ಬಾಸೆ ಚೆನ್ನೆಂಗ್ ಎಂದ್ರೆನ್ಪ್ ಚೊಲ್ಲೊಗು ಸುಲಭ. ಅಯೆಂಗ್ ಅದ್ರೆ ವ್ಯಾಖ್ಯಾನಿಕ್ಕೊಗು ಚೊನ್ನಪ್ಪ ಕಷ್ಟ ಆವುಡು. ಸರಳ ಆಯಿಟ್ ಚೊಲ್ಲೊನಾವೆಂಗ್ ಇದ್ ಜಂಡ್ ಜೀವಿಜಲೆ ನಡುಲು ಸಂಪರ್ಕ ಸಾಧನ. ಬಾಸೆ ಚೊಲ್ಲುಡೆದ್ ಕೇವಲ ಮನಿಸೊಗು ಮಾತ್ರ ಸೀಮಿತ ಅಯಿಟಿಲ್ಲೆ. ಚೊಲ್ಲುಡೆದ್ ಇಂಡ್ ವೈಜ್ಞಾನಿಕ ಅಯಿಟ್ ತೆರಿಞ, ಮನ್ಸಡೆ ಬಾಸೆ ಬೇರೆ ಏದುಂ ಜೀವಿ ಸಮುದಾಯತೆ ಭಾಸೆಡೆಕಾಂಟಿ ವಿಶೇಷಮಾಯಿಡ್. ಸಂಕೀರ್ಣಮಾಯೆ ಬಾಸೆ ಪಿನ್ನೆ ವಿಭಿನ್ನಮಾಯೆ ಬಾಸೆಂಟ್ ಚೊಲ್ಲ. ಬಾಸೆಡೆ ನೀತ ಇಂಡ್ ಮನ್ಸಮಾರ್ರೆ ಸಾಮಾಜಿಕ ಜೀವನ, ಅಭಿವೃದ್ಧಿ ಪಿನ್ನೆ ಪ್ರಗತಿ ಸಾಧ್ಯ ಆಯಿಡ್.

ಸಂಪರ್ಕ ಪಿನ್ನ ಸಂವಹನ ಅಲ್ಲಾಂಟ್ ಇದ್ ನಜಲೆ ಸಂಸ್ಕೃತಿಡೆ ವಾಹಕ ಆಯಿಡ್. ಆಯೆದ್ಕೊಂಡು ಈ ಬಾಸೆ ಚೊಲ್ಲುಡೆದ್ ಮನ್ಸಮಾರ್ಗ್ ಮುಖ್ಯಮಾಯಿಡ್. ಎಡ್ವರ್ಡ್ ಸಫೀರ್ ಚೊಲ್ಲು ನಜಲೆ ವಿಚಾರಜಲೆ, ಭಾವನೆಡೆ ಪಿನ್ನೆ ಅಪೇಕ್ಷೆಡೆ ಸಂವಹನ ಅಕೊಗುಲ್ಲೆ ಸ್ವಭಾವ ಸಿದ್ದ ಅಲ್ಲಾತೆ ಪಿನ್ನೆ ಮನ್ಸ ಮಾತ್ರ ಸೀಮಿತ ಆಯೆ ಸ್ವಪ್ರೇರಿತ ಉಚ್ಚಾರತ್ತೆ ಸಂಕೇತ ವ್ಯವಸ್ಥಿಡೆ ಬಾಸೆ ಚೊಲ್ಲುಡಾರ್.

ಬ್ಯಾರಿ ಸಮುದಾಯತ್ಗ್ ತಂಡೆದೆ ಆಯೆ ಭಾಷೆ ಸಂಪ್ರದಾಯ ಪಿನ್ನ 1200 ವರ್ಷತ್ಗುಂ ಜಾಸ್ತಿ ಇತಿಹಾಸ ಉಂಡು. ಬ್ಯಾರಿ ಬಾಸೆ ಮೈಕಾಲ ಪಿನ್ನ ಚುತ್ತುಮುತ್ತು ಪ್ರದೇಶತ್ತೆ ಮುಸ್ಲಿಂಮಾರ್ರೆ ಭಾಸೆ ಆಯಿಡ್, ಬ್ಯಾರಿ ಬಾಸೆ, ತುಳು, ಹಿಂದಿ ಮಲೆಯಾಳಂ, ತುಳು ಬಾಸೆಡೆ ಪ್ರಭಾವತ್ತೆ ನೀತ ಉಂಡು. ಬ್ಯಾರಿ ಬಾಸೆ ಪ್ರಾದೇಶಿಕ ಬಾಸೆಯಾಯಿಟ್ ವಿಭಿನ್ನ ರೀತಿಲ್ ಬಳಕೆ ಉಂಡು. ಬಾನಿಯ, ಕಚೋಡತಲ್ ಬ್ಯಾರಿ ಬಾಸೆ ಉನ್ನತ ಸ್ಥಾನಮಾನ ಹೊಂದಿಡ್ ಬ್ಯಾರಿ ಸಾಹಿತ್ಯತ್ ಪಿನ್ನ ಪ್ರಸ್ತುತ ಸಮಾಜತ್ಲ್ ಅಭಿವೃದ್ಧಿ ಹೊಂದಿಡ್. ಸುಮಾರ್ ಸಾಹಿತ್ಯ ಕೂಡ ಇಂಡತ್ತೆ ನಾಲ್ಲ್ ಜಾರಿಲ್ ಉಂಡು. ಬ್ಯಾರಿ ಬಾಸೆಲ್ ಕನ್ನಡ ಲಿಪಿಡೆ ಬಳಕೆ ಆಕ್ಡಾರ್ ಪಿನ್ನೆ ವ್ಯಾಕರಣತ್ಲ್ ತುಳು ಬಾಸೆಡೆ ಸಾಮ್ಯತೆ ಉಂಡು. ಬ್ಯಾರಿ ಮುಸ್ಲಿಮಿಜ, ಪಡಿಪು, ಬಾನಿಯ ಸೇರಿಯೇ ಪೊಲೆ ಸುಮಾರ್ ಕ್ಷೇತ್ರಲ್ ತಂಡೆ ಅಸ್ತಿತ್ವ ಕಾಡಿಡಾರ್.

ಬಾಸೆಗ್, ಅದ್ರೆ ಪಲಕ ಬರಿಡೆ ಆಲ್ಮಾರ್, ಸಂಸ್ಕೃತಿಗ್ ಒರ್ ಸಂಬಂಧ ಇಕ್ಕ್ಡ್. ಬಾಸೆಡೆ ಸ್ಥೂಲಮಾಯಿಟ್ ಪರಿಶೀಲನೆ ಅಕ್ಕಪ್ಪ, ಆ ಆಲ್ಮಾರೆ ಪರಂಪರೆ, ಸಂಸ್ಕೃತಿ, ಇತಿಹಾಸ ಎಲ್ಲಾ ಬೆಲ್ಚೆಗ್ ಬಂಡ್. ಅಜಲೆ ಆಚಾರ, ವಿಚಾರ ನಂಬಿಕೆ, ಪಿನ್ನೆ ವ್ಯವಹಾರ ಬಾಸೆಡೆ ಮೂಲಕ ಬಿಂಬಿಸಲ್ಪಡ್ರ್. ಬ್ಯಾರಿ

ಬಾಸೆಗ್ ತಂಡೆದೆ ಆಯ ಇತಿಹಾಸ, ಸಂಸ್ಕೃತಿ ಉಂಡು. ಸಾಮಾನ್ಯ ಎಲ್ಲಾ ಬಾಸೆಲು ಆಡುನುಡಿಲ್ ವೈವಿಧ್ಯ ಇಕ್ಕ್‌ಡ್. ಪ್ರಾದೇಶಿಕ ಆಯಿಟ್, ಜನಾಂಗೀಯ ಆಯಿಟ್, ಇತಿಹಾಸತ್‌ಲ್ ಕಾಲೋಚಿತ ಬದಲಾವಣೆಯಾಯಿ ಆಡುವ ಬಾಸೆ ಬದಲಾವಣೆ ಆವುಡು. ಮೂಲತಃ ಒರ್ ಪಂಗಡ ಅಲ್ಲೆಂಗ್ ಜನಾಂಗತ್ತೆ ಬಾಸೆಯಾಯಿಟ್, ಕಾಲಾಂತರತೆ ಕಾಲೋಚಿತ ಬದಲಾವಣೆಗ್ ಒಳಗಾಯಿತ್ ಸಾಹಿತ್ಯ ಬನ್ನಿಟ್ಲೆಂಗುಂ, ಜೀವಂತ ಆಯಿಟ್ ಇಂಡ್ ದ.ಕ. ಜಿಲ್ಲೆಡೆ ಬ್ಯಾರಿ ಸಮುದಾಯತ್‌ಲ್ ಉಳಿಡೆ, ಪಲಕ ಬರಿಡೆ ಬಾಸೆಮೇ 'ಬ್ಯಾರಿ ಬಾಸೆ'.

ಬ್ಯಾರಿ ಚೊಲ್ಲುಡೆ ಒರ್ ಪದ ತುಳುಡೆ ಬ್ಯಾರ ಚೊಲ್ಲುಡೆ ಶಬ್ದತ್‌ಲ್ ಉದ್ಭವ ಆಯಿಡ್. ಬಾನಿಯ ವಹಿವಾಟು ಇದ್‌ರೆ ಅರ್ಥ. ಪಂಡಂತೆ ಕಾಲತ್‌ಲ್ ಈ ಜನಾಂಗತ್ತೆ ಆಲ್‌ಮಾರ್ ಜಾಸ್ತಿಯಾಯಿಟ್ ಚಟುವಟಿಕೆಲ್ ತೊಡಜಿನ್ನಾರ್. ಆಯೆಕೊಂಡ್ ಅವುಡ ಇನ್ನೆ ಸ್ಥಳೀಯ ತುಳುಮಾರ್ ಇಜಲೆ ಬ್ಯಾರಿಜಂಟ್ ಚೊನ್ನೊಂಟಿನ್ನಾರ್.

ಕ್ರಿ.ಶ. 1891ರ ಜನಗಣತಿಡೆ ಪ್ರಕಾರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಡೆ ಆ ಕಾಲತ್‌ಲ್ 90,345 ಬ್ಯಾರಿ ಬಾನಿಯಕ್ಕಾರ್ ಇನ್ನಾರ್. ಪಿನ್ನೆ ಇದ್ ಒಟ್ಟು ವರ್ತಕರ ಪ್ರಮಾನತ್‌ಗ್ ಹೋಲಿಸಿಯೆಂಗ್ ಸುಮಾರ್ ಶೇ. 97 ರತ್ತೆ ಇಕ್ಕ್‌ಡ್. ಅಯೆಕೊಂಡೇ ಅಜಲೆ ಬ್ಯಾರಿಜಂಟ್ ಚೊನ್ನೊಂಟಿನ್ನಾರ್, ಪಿನ್ನೆ ಇದ್ ಅನ್ವರ್ಥಕ ನಾಮ ಅಯಿಟಿಂತ್. ಬ್ಯಾರಿಜ ಪಂಡತ್ತೆ ಅವಿಭಜಿತ ದಕ್ಷಿಣ ಕನ್ನಡತ್ತೆ ಭಾಗ. ಆಯೆ, ಮೈಕಾಲ, ಉಡುಪಿ ಪಿನ್ನೆ ಕಾಸರಗೋಡುಗು ಬನ್ನೆ ಪ್ರಾಚೀನ ಅರಬ್ ವರ್ತಕರ್ ಪಿನ್ನೆ ಸ್ಥಳೀಯ ಮೂಲನಿವಾಸಿಯಾಯೆ ಸಂತಾನತಜ. ಒರ್ ವರ್ತಕ ಸಮುದಾಯತ್ತಜ ಆಯೆ ಕಾರಣ ಇಜ ಪೊಲೆಡೆ ಅರ್ಗ್‌ಲ್ ನೆಲೆಸಿಯೋಂಟಿನ್ನಾರ್.

ಉಳ್ಳಾಲತ್ತೆ ಮುಲ್ಕಿಡೆ ತೋಲು ದೋಣಿಲ್ ಸಂಚರಿಕ್ಕೊಗು ಸಾದ್ಯ ಉಳ್ಳೆ 15 ಕಿ.ಮಿ. ವ್ಯಾಪ್ತಿಲ್ ಈ ಜನಾಂಗತ್ತೇ ಅಲ್‌ಮಾರ್ ನೆಲೆಸಿರಾರ್. ಇನ್ನೊರು ಮೋತು ಕಾಸರ್‌ಗೋಡುರೆ ಮಂಜೇಶ್ವರತ್ತೋಲು ತೀರ ಪ್ರದೇಶತ್ತ್‌ಲುಂ ಇಜ ಠಿಕಾಣಿ ಹೂಡಿರಾರ್. ಇದ್ ಬ್ಯಾರಿಜಲೆ ಪ್ರಾಚೀನ ವಸತಿ ಪ್ರದೇಶ ಆಯಿಡ್. ಪಿನ್ನೆ ಇಜ ಕ್ರಿ.ಶ. 7ನೇ ಶತಮಾನತ್ತೆ ಮುನ್ನೊಲೆ ಊಡೇ ಇನ್ನಾರ್. ಕ್ರಮೇಣ ಬ್ಯಾರಿಜ ಕೊಡಗು, ಚಿಕ್ಕಮಗಳೂರು, ಹಾಸನ ಪಿನ್ನೆ ಶಿವಮೊಗ್ಗ ಜಿಲ್ಲೆಲ್. ಕ್ರಿ.ಶ. 1950ರ ಪಿನ್ನೆ ಇಜ ಭಾರತತ್ಲ್ ಮಾತ್ರ ಅಲ್ಲ, ಗಲ್ಫ್, ಅಮೇರಿಕಾಲ್ ನೆಲೆಸಿರಾರ್. ಮೂಲತಃ ಒರ್ ಪಂಗಡ ಅಥವಾ ಜನಾಂಗತ್ತೆ ಬಾಸೆಯಾಯಿಟ್, ಕಾಲಾಂತರತೆ

ಬದಲಾವಣೆಗ್ ಒಳಗಾಯಿತ್ ಸಾಹಿತ್ಯ ಬನ್ನ್ಟ್ಲೆಂಗುಂ, ಜೀವಂತ ಅಯಿಟ್ ಇಂಡ್ ದ.ಕ. ಜಿಲ್ಲೆಡೆ ಬ್ಯಾರಿ ಸಮುದಾಯತ್ಲ್ ಉಳಿಜಿಡೆ ಪಲಕ ಬರಿಡೆ ಬಾಸೆಮೇ 'ಬ್ಯಾರಿ ಬಾಸೆ'.

ಕ್ರಿ.ಶ. 1860ಲು ಇದ್ರೆ ಕೆನರಾ ಜಿಲ್ಲೆಂಟ್ ಬಿಲ್ಟೊಂಟು ಇನ್ನಾರ್. ಪಿನ್ನೆಯ ಕಾಸರಗೋಡು, ಮೈಕಾಲ, ಬಾರಕೂರು ಪಿನ್ನೆಯ ಉತ್ತರ ಕೆನರಾ ಜಿಲ್ಲೆ ಉಲ್ಲೊಂಡುಂತು.

ತುಳುನಾಡ್ಲ್ ಮುಸ್ಲಿಂ ಜನ ಸಂಖ್ಯೆಲ್ ಜಾಸ್ತಿ ಬ್ಯಾರಿಮಾರ್ ಆಯಿಟ್ಳ್ಳಾರ್. ಇಜ ಈ ಪ್ರದೇಶತ್ತೆ ಅತೀ ಪಲೆಯೇ ಕಾಲತ್ತೆ ಮುಸ್ಲಿಂಮಾರ್. ಇಜ ಆರಂಭತ್ತೆ ಶತಮಾನತ್ತ್ಲ್ ಇವುಡೆ ನೆಲೆಸಿನ್ನೆ ಅರಬಿಗಳೆಕೊಂಡು ನೇರ ಪ್ರಭಾವತ್ತ್ಗ್ ಒಳಗೊಂಡುರಾರ್. ಪುದಿಯೆ ಧರ್ಮ ಜಾತಿ ವಿರೋಧಿ, ಸಮಾನತೆ ಆಶಯತ್ಗ್, ಕೀಳ್ ಜಾತಿಡೆ ಆಲ್ಮಾರ್ ನ್ಹೊಕಿಟ್ಟ್ ಮುಸ್ಲಿಂ ಆವೊಗು ಆಸೆಪಟ್ಟಿಟ್ ಮಾರ್ಪಾಡು ಆಯಾರ್, ಆಯೆಂಗೂ ಅಜ ಅಜಲೆ ಸಂಪ್ರದಾಯ ಒಲಿಚೋಂಟು ಬನ್ನಾರ್.

ಕೊಂಕಣಿ ಮುಂಡುರೆ ಕೊಂಕಣಿ ತೀರತ್ತೆ ಮುಸ್ಲಿಮಾರ್, ತಮಿಳ್ ಮುಂಡರೆ ತಮಿಳ್ನಾಡ್ರೆ ಲಬ್ಬೆಯಿಮಾರ್ ಈ ವಿಭಾಗತ್ತ್ಗ್ ಸೇರಿಯಜ.

ತುಳು ಮಿಸ್ರ ಮಲಯಾಳ ಬಾಸೆಡೆ ಪೋಲೆ ಉಲ್ಲೆ ಸ್ಥಳೀಯ ಬ್ಯಾರಿ ಬಾಸೆ ಮುಂಡುರೊ ತುಳುನಾಡ್ರೆ ಬ್ಯಾರಿಜ ಈ ಪ್ರದೇಶತ್ತೆ ಅತ್ಯಂತ ಮಹತ್ವ ಆಯೆ ಜನಾಂಗ ಆಯಿಟ್ಟ್ ಬೆಲೆಜಿ ಬನ್ನಾರ್. ಈ ಎಲ್ಲ ವಿಭಾಗಜ ಅರಬ್ ಸಂಪರ್ಕತ್ತೆ ನೀತ ಪರನ್ನ್ ಬನ್ನೆಕೊಂಡು ಪಿನ್ನೆ ಅರಬ್ ವರ್ತಕ ಮಾರ್ ಶಾಫಿಜ ಆಯೆಕೊಂಡು ಈ ಎಲ್ಲ ಮುಸ್ಲಿಮಾರ್ ಶಾಪಿಜ ಆಯಾರ್.

ಬ್ಯಾರಿಜ ವರ್ತಕ ಸಮುದಾಯತ್ತೆಜ ಆಯಿಕೊಂಡು ಪೊಲೆಡೆ ಅರ್ಗ್ಲ್ ಉಲ್ಲೆ ಕರಾವಳಿ ಪ್ರದೇಶತ್ತ್ಲ್ ನೆಲೆಸಿನ್ನಾರ್. ಉಳ್ಳಾಲತ್ತೆ ಮೂಲ್ಕಿತೋಲೊ ಕಾಸರಗೋಡು ಕರಾವಳಿಲ್ ಕಾಸರಗೋಡುಡೆ ಮಂಜೇಶ್ವರ ತೋಲೆ ಇಜ ನೆಲೆಸಿಟ್ಟಿನ್ನಾರ್.

ಪೊಲೆಡೆ ಅರ್ಗ್ಲ್ 15 ಕಿ. ಮೀ ತೋಲೊ ಇಜಲೆ ನೆಲಪ್ಪಾಡ್ ಇಂತ್. ಇತ್ತರೆ ದೂರತ್ತ್ಗ್ ದೋಣಿಲ್ ಪೋಯೋಂಟಿನ್ನಾರ್ ಮೈಕಾಲ ಪಿನ್ನೆ ಕಾಸರಗೋಡು ವಿಭಾಗ ಬ್ಯಾರಿಜಲ್ ಭದ್ರ ಕೋಟೆಯಾಯಿತ್ತ್. ಏಳನೆ ಶತಮಾನತ್ತ್ಲ್ ಮುಹಮ್ಮದ್ ನೆಬಿ ಇಸ್ಲಾಂ ಧರ್ಮತ್ತೆ ಪ್ರಚಾರ ಆಕ್ಕೊಂಗು ಇನ್ನೆ ಸಂದರ್ಭತ್ತ್ಲ್ ಈ ಪ್ರದೇಶತ್ತ್ಗ್ ಇಸ್ಲಾಮುಡೆ ಆಗಮನ ಆಯಿತ್ತ್.

ತುಳುನಾಡ್ರೆ ಶೇ. 80ಡೆ ಕಾಂಟಿ ಜಾಸ್ತಿ ಮುಸ್ಲಿಮಾರ್ ಬ್ಯಾರಿಜ ಆಯಿಟ್ಟಿನ್ನಾರ್

ಆಯೆಂಗುಂ ಇತಿಹಾಸ ಪಿನ್ನೆ ಇತಿಹಾಸ್ ಕಾರ್‌ಮಾರ್ ಬ್ಯಾರಿಜಲೆ ಮಾಪಿಳ್ಳೆಜಂಟ್ ಗುರುತು ಪಿಡಿಚಿಡಾರ್. 27 ಮತ್ತೆ ಶತಮಾನತ್ತೆ ಆರಂಭತ್ತ್‌ಲ್ ಬ್ಯಾರಿಜ ಅಜಲೆ ಪೇರ್‌ಡೆ ಮುನೊಲು ಅಭಿಮಾನತೆಲ್ ಬ್ಯಾರಿಜಂಟ್ ಎಲ್ದಿಯೋಂಟು ಇನ್ನಾರ್. ಸರಕಾರಿ ದಾಖಲೆಲ್ ಅಜಲೆ ಬ್ಯಾರಿಜಂಟ್ ಗುರುತು ಪಿಡ್ಚೊ ಇನ್ನಾರ್. ಸಂಸ್ಕೃತಿ ಪಿನ್ನೆ ಸಂಪ್ರದಾಯತ್ತೆ ಬಿಸ್ಯತ್ತ್‌ಲ್ ಇಜ ಮಾಪಿಳ್ಳೆಜ ಕಾಂಟಿ ಬ್ಯಾರೆ ತರತ್ತ್‌ಲ್ ಉಲ್ಲಾರ್.

ಇತಿಹಾಸಕಾರಮಾರ್ ಈ ವಾಸ್ತವತ್ತೆ ಕಡೆಗಣಿಸಿಯಾರ್. ಪಿನ್ನೆ ಧಾರ್ಮಿಕ, ಮದ್ರಸಾತ್ತೆ ಬಿಸಯತ್‌ಲ್ ಆಯ ಅವಲಂಬನೆ ಕಾರಣ ಬ್ಯಾರಿಜಲೆ ಮಲಬಾರ್‌ಡೆ ಮಾಪಿಳ್ಳೆಗಳೊಟ್ಟಿಗೆ ಸಾಮ್ಯತೆ ಇನ್ನೆಕೊಂಡು ಅಜಲೆ ಅದೇ ಗುಂಪುಗು ಸೇರಿಸಿಯಾರ್. ಇದ್‌ರೆ ಪರಿಣಾಮ ಆಯಿಟ್ಟ್ ಮುಖ್ಯ ಆಲ್‌ಮಾರ್ ಆಯೆ ಬ್ಯಾರಿಜ ತುಳುನಾಡ್‌ರೆ ಭವ್ಯ ಚರಿತ್ರೆಡೆ ಪರ್ತ್ ಉಲಿಯೊನಾಯ್ಟ್ ಬಂತ್. ಕರಾವಳಿ ಕರ್ನಾಟಕತ್ತೆ ಬ್ಯಾರಿ ಮುಸ್ಲಿಮ್ ಆಲ್‌ಮಾರ್‌ಗ್ ಅಜಲೆದೇ ಆಯೇ ಜನಾಂಗೀಯ ಪಿನ್ನೆ ಭಾಷಿಕ–ಸಾಂಸ್ಕೃತಿಕ ಪರಂಪರೆ ಉಂಡು.

ಇತರ ಮುಸ್ಲಿಮಾರ್‌ಡೆಕಾಂಟಿ ಭಿನ್ನ ಆಯೆ ಜೀವನ ರೂಪಿಸಿಕೊಂಡುರಾರ್, ಭಾರತತ್ತ್‌ಲ್ ನೆಲೆಸಿಟ್ಟುಳೆ ಮುಸ್ಲಿಮಾರ್‌ಡೆ ಮೂರು ವಿಧತ್ತ್‌ಲ್ ವರ್ಗೀಕರಣ ಕೊಗಾವುಡು.

1. ಬೇರ ಬೇರೆ ಕಾಲ ಘಟ್ಟತ್ತ್‌ಲ್ ಭಾರತತ್ತ್‌ಗ್ ವಲಸೆ ಬನ್ನೆ ಮೊಘಲ್, ಸೈಯ್ಯದಕ್‌ಮಾರ್, ಪಠಾಣಮಾರ್, ಶೇಖ್‌ಮಾರ್, ಇಜನತೆ ವಂಶತ್ತೆ ಬೆಳೆಞಿಟ್ ಬನ್ನೆಜ.

2. ಅರಬ್, ಪರ್ಷಿಯ ಪ್ರದೇಶತ್ತೆ ಬಾನಿಯತ್ತ್‌ಗಾಯಿಟ್ಟ್ ಪಶ್ಚಿಮ ಪಿನ್ನೆ ಪೂರ್ವ ಕರಾವಳಿಗ್ ಬಂತ್ ಆ ಪ್ರದೇಶತ್ತೆ ಪೆನ್ನಿಜಲೆ ಮಜಿಲಾಯಿಟ್ಟ್ ಅದ್‌ನೀತ ಪೊರನ್ನ್ ಬನ್ನೆಜ.

3. ಇಸ್ಲಾಂ ದೀನ್‌ಗ್ ಬನ್ನೆ ಭಾರತತ್ತೆಂಜಲ್ ಜನವರ್ಗ. ದಕ್ಷಿಣ ಭಾರತತ್ತ್‌ಗ್ ಮುಸ್ಲಿಮಾರ್ಲ್ ಜಾಸ್ತಿಯಾಯಿಟ್ಟ್ ಜಂಡಾಮತ್ತೆ ಪಿನ್ನೆ ಮೂನಾಮತ್ತೆ ವರ್ಗತ್ತ್‌ಗ್ ಸೇರಿಯಜ. ಇಜನೆ ಇಸ್ಲಾಂ ದೀನ್ ಅನುಯಾಯಿ ಆಯಿಟ್ಟ್ ಇನ್ನೆಂಗುಂ ಊಡ್ರೆ ಮುಸ್ಲಿಮಾರ್ ಅಜಲೆ ಜಾಗತ್ತೆ, ಸಂಸ್ಕೃತಿಡೆ ಅಂಶ ಒಲಿಚೋಂತ್ ಬನ್ನ್‌ಡಾರ್.

ಭಾರತತ್ತ್‌ಲೆ ಮುನ್ನೊಲು ಇಸ್ಲಾಂ ಧರ್ಮತ್ತೆ ಪ್ರಭಾವತ್ತ್‌ಗ್ ಒಳಗಾಯೆ ಪ್ರದೇಶ ಚೊನ್ನೆಂಗ್ ಪಶ್ಚಿಮ ಕರಾವಳಿ ಆಯಿಟ್ಟ್‌ಕ್ಕ್‌ಡ್. ಉತ್ತರ ಭಾರತತ್ತೆ

ಭೂಭಾಗ ಮುಸ್ಲಿಮಾರ್‌ಡೆ ಸಂಪರ್ಕ ಇಕ್ಕ್‌ಡೆ ಕಾಂಟಿ ಸುಮಾರ್ ವರ್ಸತ್ತ್‌ಗ್ ಮುನ್ನೊಲೆ ಊಡೆ ಮುಸ್ಲಿಮಾರ್‌ಡೆ ಅವಕಲ ಇಂತ್.

ದಕ್ಷಿಣಕನ್ನಡಮ ಉಡುಪಿ–ಕಾಸರಗೋಡು ಪ್ರದೇಶತ್ತೆ ಮುಸ್ಲಿಮಾರ್ ಜಾಸ್ತಿ ಆಲ್‌ಮಾರ್ 'ಬ್ಯಾರಿ' ಪಂಗಡತ್ತ್‌ಗ್ ಸೇರಿಯಜ ಅಯಿಟ್ಟುಳ್ಳಾರ್ ಮಲಬಾರ್ ಪ್ರದೇಶತ್ತೆ ಮುಸ್ಲಿಮಾರ್‌ಡೆ ಸಂಪರ್ಕತ್ತೆ ಪ್ರಭಾವತ್ತೆಕೊಂಡು ಇಜಲೆ ಮಾಪಿಳ್ಳೆ ಅಲ್ಲೆಂಗ್ ಮಾಪ್ಳ ಮುಸ್ಲಿಮಾರಾಂಟ್ ಬಿಲಿಕಿಡೆ ವಾಡಿಕೆ ಬನ್ನಿಟ್ಟಿಕ್ಕು. ಈ ಪ್ರದೇಶತ್ತಾಲ್ ತೆಲ್ಲ್ ನಯಾಯಿತಮಾರ್, ಡೆಕ್ಕನ್‌ಮಾರ್, ಉಲ್ಲಾರ್ ಗುಜರಾತ್ತ್‌ಡೆ ಬನ್ನೆ ಮೆಮೋನ್‌ಮಾರ್, ತಮಿಳ್‌ನಾಡ್‌ರೆ ಬನ್ನೆ ಲಬ್ಬಿಯಿಮಾರ್‌ಸ ಉಲ್ಲಾರ್. ದೀನ್ ವಿಸ್ಪಸಿಚಿಟ್ಟ್ ಬನ್ನೆ ತೆಲ್ ಆಲ್‌ಮಾರ್‌ಡೆ ಪುಸಲರುಂಟು ಬಿಲಿಕಿಡಾರ್.

ಮಾಪಿಳ್ಳ ಪ್ರಭಾವತ್ತೆ ಕಾರಣ ಇತಿಹಾಸಕಾರರ್ ಪಿನ್ನೆ ಎಲ್ತ್‌ಕಾರ್‌ಮಾರ್ ಬ್ಯಾರಿಜಲೆ ಮಾಪಿಳ್ಳ ಮಾರ್‌ಂಟ್ ಉಲ್ಲೇಖ ಆಕ್‌ಡಾರ್. ಅದೇ ಪೋಲೆ ಜಾತಿ ಉಲ್ಲೇಖತ್ತೆ ನಮೂದು ಆಕಿಯದ್ ನಜಗು ಕಾಣಗು ಕಿಟ್ಟ್‌ರ್.

ಆಯಂಗ್ ಪ್ರೊ. ಬಿ.ಎಂ. ಇಚ್ಲಂಗೋಡು ಬ್ಯಾರಿಜ ಮಾಪಿಳ್ಳೆ ಮಾರಲ್ಲ ಚೊಲ್ಲುಡೆದ್ ''ಮುಸ್ಲಿಮ್ಸ್ ಆಫ್ ತುಳುನಾಡ್'' ಚೊಲ್ಲುಡೆ ಕೃತಿಲ್ ವಾದಿಸಿರ್.

1. ಬ್ಯಾರಿಜ ಅಜಲೆ ಪೇರ್‌ಲ್ ಬ್ಯಾರಿ ಚೊಲ್ಲುಡೆ ಒಕ್ಕಣೆಡೆ ಚೊಮ್ಮೆ ಹೆಮ್ಮೆಲ್ ಸೇರಿಸಿರಾರ್. ಅಜಲೆ ಸ್ವತಂತ್ರ ಸಾಮಾಜಿಕ ಸ್ಥಾನಮಾನತೆ ಬಗ್ಗೆ ಚೊಲ್ಲುಡೆದ್ ಅಂಡತೆ, ತುಳುನಾಡ್‌ರೆ ಸಾಮಾನ್ಯ ಸಂಪ್ರದಾಯ ಆಯಿಟಿಂತ್– ಶೆಟ್ಟಿ, ಹೆಗ್ಡೆ, ಆಳ್ವ, ಕಾಮತ್ ಇತ್ಯಾದಿ. ಆಯೆಂಗ್ ಮಾಪಿಳ್ಳೆಮಾರ್‌ಗ್ ಈ ಬಗೆಡೆ ಒಕ್ಕಣೆ ಬಳಸಿಡೆದ್ ಕಂಡ್ ಬನ್ನಿಟ್ಟ್‌ಯಿಲ್ಲೆ ಮಲಬಾರ್ ದಾಖಲೆಂ ಸಹ ಇದ್ ಕಂಡ್‌ಬನ್ನಿಟ್ಲೆ.

2. ಬ್ಯಾರಿ ಬಾಸೆಡೆ ಮಾಪಿಳ್ಳ ಬಾಸೆಂಟ್ ಗುರುತಿಸಿಯೆದ್ ಕಂಡ್ ಬನ್ನ್‌ರ್. ಡಾ. ಸುಶೀಲಾ ಉಪಾಧ್ಯಾಯ ತಂಡೊ ಪಿಎಚ್.ಡಿ. ಪ್ರಬಂಧ 'ಮಾಪಿಳ್ಳೆ ಮಲಯಾಳಂ'ಲ್ ಬ್ಯಾರಿ ಬಾಸೆಲ್ ವಿಶಿಷ್ಟ ಗುಣಲಕ್ಷಣ ಈ ಪೋಲೆ ಗುರುತಿಸಿಡ್.

* ಈ ಬಾಸೆ ತುಳುಡೆ ವ್ಯಾಕರಣ ಹೊಂದಿಡ್, ಇದ್ ಮಲಯಾಳಂರೆ ಕಾಂಟಿ ಭಿನ್ನ ಉಂಡು.

* ಬ್ಯಾರಿ ಭಾಷೆಯಲ್ಲೂ ಮಲಯಾಳಂನ ಪದಗಳಿವೆ. ಆದರೆ ಹೆಚ್ಚಾಗಿ ಬಳಕೆಯಾಗುವ ಮಲಯಾಳಂ ಪದಗಳು ಕೂಡಾ ಈ ಭಾಷೆಯಲ್ಲಿ ಸೇರ್ಪಡೆಯಾಗಿಲ್ಲ. ಸಂಸ್ಕೃತ ಪದಗಳು ಕೂಡಾ ಈ ಭಾಷೆಯಲ್ಲಿ ಕಂಡುಬರುವುದಿಲ್ಲ.

* ಅರಬಿ ಮತ್ತು ಪರ್ಶಿಯನ್ ಭಾಷೆಯ ಪದಗಳು ಸಾಮಾನ್ಯವಾಗಿ ಉಳಿಕೆಯಲ್ಲಿವೆ.

* ಭಾಷೆಯ ಉಚ್ಚಾರ ಮತ್ತು ಧ್ವನಿಯು ಮಲಯಾಳಂಗಿಂತ ತೀರಾ ಭಿನ್ನವಾಗಿದೆ. ಈ ವಿಶೇಷತೆಗಳಿಂದಾಗಿ ಬ್ಯಾರಿಭಾಷೆಯು ಮಲಯಾಳಂಗಿಂತ ಭಿನ್ನ ಎಂಬುದು ಸ್ಪಷ್ಟವಾಗುತ್ತದೆ.

3. ಬ್ಯಾರಿಗೆ ಲಿಪಿಯಿಲ್ಲ.

ಕೆಲವು ಮೂಲಗಳ ಪ್ರಕಾರ ಬಟ್ಟೆಬರಹ ಎಂಬ ಲಿಪಿ ಬಳಕೆಯಲ್ಲಿತ್ತು ಎಂದು ಹೇಳಲಾಗುತ್ತದೆ. ಈ ಲಿಪಿಯನ್ನು ಬಡ್ಡೆಳುತು ಎಂದು ಗುರುತಿಸಲಾಗಿದ್ದು, ಇದು ಪ್ರಾಚೀನ ತುಳು ಲಿಪಿಯಾಗಿದೆ. ಬಳಕೆ ಮತ್ತು ಆಕಾರದಲ್ಲಿಯೂ ಹಲವು ಬದಲಾವಣೆಗಳಿವೆ. ಇದು ಮಲಯಾಳಂನಲ್ಲಿ ಕಂಡುಬರುವುದಿಲ್ಲ. ಆಧುನಿಕ

ಮಲಯಾಳಂ ಲಿಪಿಯು ಇದರಿಂದಲೇ ಉದ್ಭವವಾಯಿತು ಎಂದೂ ಹೇಳಲಾಗುತ್ತದೆ.

4. ಜೈನ ಬೀಡುಗಳು ಮತ್ತು ಗುತ್ತುಗಳು ಎಂಬ ಉಳಿಗಮಾನ್ಯ ಕುಟುಂಬಗಳಲ್ಲಿ ಸೇವಕರಾಗಿ ಬ್ಯಾರಿಗಳು ಕೆಲಸ ಮಾಡುತ್ತಿದ್ದರು. ತುಳುನಾಡಿನಲ್ಲಿ ಆಗ ಇನ್ನೂರಕ್ಕೂ ಹೆಚ್ಚು ಜೈನ ಬೀಡುಗಳು ಮತ್ತು ಬಹಳ ಸಂಖ್ಯೆಯ ಗುತ್ತುಗಳು ಅಸ್ತಿತ್ವದಲ್ಲಿದ್ದವು. ಬ್ಯಾರಿಗಳಿಗೆ ತುಳು ಭಾಷೆಯೂ ಅತ್ಯಂತ ಪರಿಚಿತ ಭಾಷೆಯಾಗಿತ್ತು. ಇದರಿಂದಾಗಿ ಅವರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದು ಸುಲಭವಾಗಿತ್ತು. ಆದರೆ ಮಾಪಿಳ್ಳೆಗಳು ಈ ಕುಟುಂಬಗಳ ಆಳುಗಳಾಗಿ ನೌಕರಿ ಮಾಡಿರುವುದು ಕಂಡುಬರುವುದಿಲ್ಲ. ಆದರೆ ಕೆಲವು ಬರಹಗಾರರು ಬ್ಯಾರಿಗಳನ್ನೇ ಮಾಪಿಳ್ಳೆಗಳೆಂದು ಉಲ್ಲೇಖಿಸಿರುವುದು ಕಂಡುಬರುತ್ತದೆ.

5. ಅಂದಿನ ಉಳಿಗಮಾನ್ಯ ವ್ಯಾಪಾರಿ ಸಂಘಟನೆಗಳಿಗೆ ಕೂಡಬಹುದಾದ ಅತ್ಯುತ್ತಮ ಉದಾಹರಣೆಯೆಂದರೆ ಜೈನ ವರ್ತಕ ಸಂಘಗಳು ಎಂಟು ಅಥವಾ 16 ಮಂದಿ ಮಾತ್ರ ಈ ಸಂಘಗಳಲ್ಲಿ ಸದಸ್ಯರಾಗಿರಬಹುದಾಗಿತ್ತು. ಬ್ಯಾರಿಗಳ ಉಳಿಗಮಾನ್ಯ ವ್ಯವಸ್ಥೆ 'ಪದಿನಾರಗ'ವನ್ನು ಇದಕ್ಕೆ ಹೋಲಿಸಬಹುದಾಗಿದೆ. ಹಂಜುಮಾನ್ (ಅಂಜುಮಾನ್)ಗಳು ಕೂಡಾ ಇದರಿಂದಲೇ ಪ್ರೇರಿತವಾಗಿವೆ ಮತ್ತು ಹೆಚ್ಚಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೂಡಾ ಜೈನರ ಪ್ರಭಾವವನ್ನು ಗುರುತಿಸಬಹುದಾಗಿದೆ. ಮಾಪಿಳ್ಳೆಗಳಲ್ಲಿ ಸ್ಥಳೀಯ ಅಥವಾ ಜೈನ ಪ್ರಭಾವ ಕಂಡು ಬರುವುದಿಲ್ಲ.

6. ಪ್ರಾಚೀನ ಕಾಲದ ಬ್ಯಾರಿಗಳ ಹೆಸರಿನಲ್ಲೂ ಸ್ಥಳೀಯ ತುಳುವರ ಪ್ರಭಾವ ಬಹಳಷ್ಟಿತ್ತು. ಉದಾಹರಣೆ ಬಪ್ಪ, ಸಾಧುರಿ, ಕಾಯಿರಿ, ಉಮ್ಮಾತು, ಭೀಪಮ್ಮ ಇತ್ಯಾದಿ. ಮಾಪಿಳ್ಳೆಗಳಲ್ಲಿ ಈ ಬಗೆಯ ಹೆಸರುಗಳಿಲ್ಲ.

7. ಆರಂಭ ಕಾಲದ ಬ್ಯಾರಿಗಳಲ್ಲಿ ಪ್ರಚಲಿತವಿದ್ದ ಇಲ್ಲಂ ಪದ್ಧತಿಯು ಬಂಟ ಸಮುದಾಯದ ಬ್ಯಾರಿ (ಬಲಿ) ಪದ್ದತಿಯನ್ನು ಹೋಲುತ್ತದೆ. ಇದು ಸ್ತ್ರೀ ಪ್ರಧಾನ ಆಚರಣೆಯಾಗಿದ್ದು ಮಾಪಿಳ್ಳಗಳಲ್ಲಿ ಕಂಡು ಬರುವುದಿಲ್ಲ.

8. ಪ್ರಾಚೀನ ಬ್ಯಾರಿಗಳಲ್ಲಿ ಊಳಿಗಮಾನ್ಯ ಪ್ರಬಾವ ಎದ್ದು ಕಾಣುತ್ತದೆ. ಕೆಲವರನ್ನು ಕೆಳದರ್ಜೆಯವರೆಂದು ಪರಿಗಣಿಸಲಾಗುತ್ತಿತ್ತು. ವೃತ್ತಿಪರ ಕಸಾಯಿಗಳು ಮತ್ತು ಮುಂಜಿ ಮಾಡುವವರನ್ನು ವಸನ್‌ಗಳೆಂದು ಕರೆಯಲಾಗುತ್ತಿತ್ತು ಮತ್ತು ಗುಲಾಮರಿಗೆ ಸಮಾನವಾದ ಬಡುವಾಗಳನ್ನು ಕೂಡಾ ಇದೇ ವರ್ಗ ಸೇರಿಸಲಾಗಿತ್ತು. ಅವರನ್ನು ಒಪ್ಪನ, ತಾಳ ಮೊದಲಾದ ಸಮಾರಂಭಗಳಲ್ಲಿ

ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಮಾಪಿಳ್ಳೆಗಳಲ್ಲಿ ಈ ರೀತಿಯ ಯಾವುದೇ ಪದ್ಧತಿಯಿಲ್ಲ.

9. ಈ ವಿಶಿಷ್ಟ ಲಕ್ಷಣಗಳು ಹಾಗೂ ಈ ರೀತಿಯ ಇತರ ಅಂಶಗಳು ಬ್ಯಾರಿಗಳು ಮಾಪಿಳ್ಳಗಳಿಗಿಂತ ಭಿನ್ನ ಎಂಬುದನ್ನು ಎತ್ತಿ ತೋರಿಸುತ್ತದೆ. ತುಳುನಾಡಿನ ಮುಸ್ಲಿಮರ ಪೈಕಿ ಅತ್ಯಂತ ದೊಡ್ಡ ಸಮುದಾಯವಾಗಿರುವ ಹಿನ್ನೆಲೆಯಲ್ಲಿ ಅವರ ಸಂಸ್ಕೃತಿಕ ಕೊಡುಗೆಗಳೂ ಗಮನಾರ್ಹವಾಗಿದೆ.

**ಬ್ಯಾರಿ ಭಾಷೆಯ ಕೆಲವು ಲಕ್ಷಣಗಳು**

1. ತುಳು ಪದಗಳ ಉಚ್ಚಾರಕ್ಕೂ, ಬ್ಯಾರಿ ಭಾಷೆಗೂ ಹತ್ತಿರದ ಸಂಬಂಧವಿದೆ, ಮಲೆಯಾಳದಲ್ಲಿರುವ ಹಲವಾರು ಮುಖ್ಯ ಉಚ್ಚಾರಗಳೇ ಈ ಭಾಷೆಯಲ್ಲಿಲ್ಲ. ರ,ಟಣ ಉಚ್ಚಾರಗಳು ಬಹಳಷ್ಟು ಭಿನ್ನವಾಗಿದೆ. 'ಏ' ಉಚ್ಚಾರವೂ 'ಬ' ಅಗಿಯೂ 'ಆ' 'ಇ' ಆಗಿಯೂ ಬದಲಾವಣೆಗೊಂಡಿದೆ. ಅಲ್ಲದೆ ಅನುನಾಸಿಕ ಮಾದರಿಯೂ ಈ ಭಾಷೆಯಲ್ಲಿಲ್ಲ.

2. ಅರಬಿ ಉಚ್ಚಾರಗಳ ಪ್ರಭಾವವು ಕಾಣಿಸಿಕೊಳ್ಳುವಷ್ಟಿದೆ. 'ಫ', 'ಜ' ಉಚ್ಚಾರ ಬಳಕೆಗಳಿವೆ.

3. ವ್ಯಾಕರಣದಲ್ಲಿ ಗಮನಾರ್ಹ ವ್ಯತ್ಯಾಸವಿದೆ. ಮಲೆಯಾಳದ ವ್ಯಾಕರಣ ವಿಧಾನ ಇದರಲ್ಲಿಲ್ಲ. ಸಂಸ್ಕೃತ ಪದಗಳ ಬಳಕೆ ತೀರಾ ಕಡಿಮೆ. ಮಲೆಯಾಳದಲ್ಲಿ ಶೇ. 90% ಕ್ಕಿಂತ ಹೆಚ್ಚು ಸಂಸ್ಕೃತ ಪುರುಷ, ಲಿಂಗ, ವಚನಗಳಲ್ಲಿ ಸ್ಪಷ್ಟವಾದ ವ್ಯತ್ಯಾಸಗಳನ್ನು ಗುರುತಿಸಬಹುದು. ಬ್ಯಾರಿಯಲ್ಲಿ ಮಲೆಯಾಳಕ್ಕಿಂತ ಭಿನ್ನ ರೂಪಗಳೇ ಹೆಚ್ಚು.

4. ಇದರಲ್ಲಿ ಸೇರ್ಪಡೆಗೊಳ್ಳುವ ವ್ಯತ್ಯಯಾಕ್ಷರಗಳು ಮತ್ತು ಪದಗಳು, ತುಳುವಿನಂತಿದೆಯೇ ಹೊರತು ಮಲೆಯಾಳದಂತಿಲ್ಲ.

5. ಮಲೆಯಾಳದಲ್ಲಿ ಪೋರ, ಪೋಡ ಇತ್ಯಾದಿ ಬಳಕೆಯಲ್ಲಿದೆ, ಋಣಾತ್ಮಕ ಸೂಚ್ಯ ಪದಗಳ ಬಳಕೆ ಮಲೆಯಾಳದಲ್ಲಿ ಕಮ್ಮಿ. ಉದಾ:ಪೊವಾಂತೆ(ಹೋಗುತ್ತಿದ್ದೆ – ಆದರೆ ಹೋಗಿಲ್ಲ) ಬರಾಂತೆ (ಬರುತ್ತಿದ್ದೆ – ಆದರೆ ಬರಲಿಲ್ಲ) ಬ್ಯಾರಿ ಭಾಷೆಯಲ್ಲಿ ಬಳಕೆಯಲ್ಲಿರುವ ಅನೇಕ ಶಬ್ದಗಳು ಮಲೆಯಾಳದಲ್ಲಿಲ್ಲ. ಇದ್ದರೂ ಅದರ ಅರ್ಥವೇ ಬೇರೆ ಇರುತ್ತದೆ. ಉದಾ: ಚೆಮ್ಮೆ (ಹೆಚ್ಚು) ಪೆಂಞಾಯಿ (ಹೆಂಡತಿ) ಚೇಗಲ್ (ಪುಂಜ) ದೆಯ್ (ಕುಳಿತುಕೋ) ಅಗ (ಮನೆ) ಅದಿಸ (ಆಶ್ಚರ್ಯ) ಲಾಯಿಕರೆ ( ಹಾರುವುದು) ಪತ್ತ್ (ಏರು) ಇತ್ಯಾದಿ.

6. ವ್ಯಾಕರಣ ಹೊಸ ರೀತಯಲ್ಲಿ ಸಂಯೋಜಿಸಲ್ಪಟ್ಟಿದೆ. ಕ್ರೀಯಾ ಪದವು ವೈವಿಧ್ಯಪೂರ್ಣವಾಗಿ ಬಳಸಲ್ಪಡುತ್ತದೆ.

| **ಬ್ಯಾರಿ** | | **ಕನ್ನಡ** |
|---|---|---|
| ಉದಾ: ಚೊಲ್ಲು – ಹೇಳು | | |
| 1) ಚೊಲ್ಲುರೆ (ಡೆ) | – | ಹೇಳುತ್ತಾನೆ |
| 2) ಚೊನ್ನೆ | – | ಹೇಳಿದೆ |
| 3) ಚೊಲ್ಲುವೆ | – | ಹೇಳುವೆ |
| 4) ಚೊಲ್ಲಾತೆ | – | ಹೇಳಬಹುದಿತ್ತು |
| 5) ಚೊಲ್ಲು | – | ಹೇಳು |
| 6) ಚೊಲ್ಲೊನು | – | ಹೇಳಬೇಕು |
| 7) ಚೊಲ್ಲಂಡ | – | ಹೇಳಬೇಡ |
| 8) ಚೊನ್ನೆಂಗ್ | – | ಹೇಳಿದರೆ |
| 9) ಚೊಲ್ಲೊ | – | ಹೇಳಲು |
| 10) ಚೊಲ್ಲಾಂತೆ | – | ಹೇಳುತ್ತಿದ್ದೆ |
| 11) ಚೊಲ್ಲುಡಾರಾ (ಬಹು) | – | ಹೇಳುತ್ತೀರಾ? |
| 12) ಚೊನ್ನಾರಾ? (ಬಹು) | – | ಹೇಳಿದ್ದೀರಾ? |
| 13) ಚೊಲ್ಲುವಾರ್ (ಬಹು) | – | ಹೇಳುವರು |
| 14) ಚೊಲ್ಲುರು (ಬಹು) | – | ಹೇಳಿ |
| 15) ಚೊಲ್ಲುನು | – | ಹೇಳಬೇಕು |

7. ಕೆಲವು ಸರಳ ಉಪಯೋಗಗಳನ್ನು ಗಮನಿಸಬಹುದು.

| **ಬ್ಯಾರಿ** | | **ತುಳು** |
|---|---|---|
| 1) ಬೇನು | – | ಬೋಡು (ಬೇಕು) |
| 2) ತೀರು | – | ತೀರು (ಸಾಧ್ಯ) |
| 3) ಒಕ್ಕು | – | ಅಂದ್ (ಹೌದು) |
| 4) ಉಲ್ಲೆ | – | ಉಳ್ಳೆ (ಇದ್ದೇನೆ) |
| 5) ಉಲ್ಲಾಲಾ? | – | ಉಳ್ಳಾಲಾ (ಇದ್ದಾಳಾ) |
| 6) ಬೇಂಡಾ | – | ಬೊಡ್ಚಿ (ಬೇಡ) |

7) ತೀರ – ತೀರ (ಅಸಾಧ್ಯ)
8) ಅಲ್ಲೇ – ಅತ್ತಾ (ಅಲ್ಲವಾ?)
9) ಉಲ್ಲಾರಾ – ಉಳ್ಳೇರಾ (ಇದ್ದಾರಾ?)
10) ಉಂಡಾ – ಉಂಡಾ (ಇದೆಯಾ)

8. ಕೆಲವು ವಾಕ್ಯಗಳಿವು:

1) ಈ ಔತುರೆ ಬಾಯಿಲ್ ಚೆರಿಯೆ – ಬ್ಯಾರಿ
ಈ ಇಲ್ಲ್‌ದ ಬಾಕಿಲ್ ಎಲ್ಯ – ತುಳು
ಈ ಮನೆಯ ಬಾಗಿಲು ಚಿಕ್ಕದು. – ಕನ್ನಡ
2) ನಿಜ ಅಬ್ಬಡೆ ಮುಟ್ಟ ಚೊಲ್ಲುರು – ಬ್ಯಾರಿ
ಈರ್ ಅಪ್ಪಡ ಮುಟ್ಟ ಪನ್ಲೆ – ತುಳು
ನೀವು ಅಪ್ಪನ ಬಳಿ ಹೇಳಿ – ಕನ್ನಡ
3) ತಲಂಕೈ ಪುಣ್ಣುಕ್ ಕನ್ನಡಿ ಬೇಂಡ – ಬ್ಯಾರಿ
ಅಂಗೈ ಪುಣ್ಣುಗ್ ಕನ್ನಡಿ ಬೊಡ್ಚಿ – ತುಳು
ಅಂಗೈ ಹುಣ್ಣಿಗೆ ಕನ್ನಡಿ ಬೇಡ – ಕನ್ನಡ

9. ತುಳುವಿನಲ್ಲಿರುವಂತೆಯೇ ಅನೇಕ ಇತರ ಭಾಷಾ ಪದಗಳು ಬ್ಯಾರಿ ಭಾಷೆಯಲ್ಲಿವೆ. ಉದಾ:

| | | |
|---|---|---|
| ಅಂದಾಜ್ | – | ಅಂದಾಜು |
| ಅಕಲ್ | – | ವಿವೇಕ |
| ಅಜನ | – | ಶಬ್ಧ |
| ಅಬರು | – | ಎಚ್ಚರ |
| ಅರಾಮು | – | ಹೇಳಿಕೆ |
| ಅಲಾಕ್ | – | ನಾಶ |
| ಇಲಾಳ್ | – | ಅರ್ಧಚಂದ್ರ |
| ಆಣ್ | – | ಗಂಡು |
| ಇಮ್ಮತ್ | – | ಶಕ್ತಿ |
| ಕಂಜೂಸು | – | ಲೋಬಿ |

10. ಬ್ಯಾರಿ–ತುಳುವಿನ ಕೆಲವು ಪದಗಳು ಒಂದೇ ಆಗಿದೆ. ಬ್ಯಾರಿ–ತುಳು ಭಾಷೆಯಲ್ಲಿ ಬಳಕೆಯಲ್ಲಿರುವ ಕೆಲವು ಪದಗಳ ಅರ್ಥವನ್ನು ಕನ್ನಡದಲ್ಲಿ ಕೊಡಲಾಗಿದೆ.

1. ಆಯನ – ಜಾತ್ರೆ
2. ಅಮಸರ (ಅಮಸರೋ) – ಅವಸರ
3. ಅಂಗಳ್ಪು – ಅಭಿಲಾಷೆ
4. ಅಮುಕು – ಅಮುಕುವುದು
5. ಅಂಜಲ್ – ಮೀನಿನ ಹೆಸರು
6. ಆಯಿಂಬೋ (ಅಯಿವೊ) – ಅಯಿವತ್ತು
7. ಅಂಟ್ ಮಣ್ಣ್ – ಅಂಟು ಮಣ್ಣು
8. ಅರವುಲೆ – ಬೊಬ್ಬೆ
9. ಅಂಡಪಿರ್ಕಿ – ಅರೆಹುಚ್ಚ
10. ಅರಮೆ – ಸರ್ವಥಾ
11. ಅಂಡಿಕುಂಡಿ – ತಲೆಬುಡ
12. ಅರಿಪೊಡಿ – ಅರಿಪುಡಿ
13. ಅಂಬಟೆ ಕೊರಂಟಿ – ಅಂಬಟೆ ಬೀಜ
14. ಅವಕಾಸೇ – ಅವಕಾಶ
15. ಅಂಬಟೆ ಚೂಡಿ – ತಲೆಗೂದಲ ಗಂಟು
16. ಆಂಡ್ – ವರ್ಷ
17. ಅಂಬರ್ಮ – ಅವಸರ
18. ಅಚಾರಿ – ಆಚಾರಿ
19. ಅಂಸಾನಿ – ಅಹಂ, ದುರಭಿಮಾನ
20. ಆಣ್ – ಗಂಡಸು
21. ಅಕಳ ಜಾತ – ಬುದ್ದಿವಂತಿಕೆ
22. ಇರಿವೊ – ಇಪ್ಪತ್ತು
23. ಅಜಕ – ಹರಟೆ
24. ಇಬ್ಬಾಯಿ – ಎರಡು ಬಾಯಿ
25. ಅಜ್ಜ–ಅಜ್ಜಿ – ಅಜ್ಜ–ಅಜ್ಜಿ
26. ಈಸ್ – ಮೆಲ್ಲನೆ ಜಾರು

27. ಅಜ್ಜಂಬಿಲ್ಲ್ – ಕಾಮನಬಿಲ್ಲು
28. ಅಮೊಡ ಪೊನ್ನು – ಪುತ್ತಳಿ ಚಿನ್ನ
29. ಅಡಂಗ್ – ಅಡಗಿಕೂತುಕೋ
30. ಅಲಂಬು – ಅಣಂಬೆ
31. ಅಡಿಪೊಡಿ – ಪೆಟ್ಟು ಜಗಳ
32. ಇಚಿತ್ರೋ – ವಿಚಿತ್ರ
33. ಅಡ್ಪು – ಒಲೆ
34. ಇಡಪೊಡಿ – ಜಗಳ
35. ಇಸ್ಮಯ – ವಿಸ್ಮಯ
36. ಕುಚ್ಚಿ – ತಲೆಗೂದಲು
37. ಈಂದ್ – ಈಜು
38. ಕಜುಂಬು – ಮಕ್ಕಳ ತಲೆಗೂದಲು
39. ಈರ್ – ಸಿಗಿಯು
40. ಕುತ್ತು – ಚುಚ್ಚು
41. ಉಂಡು – ಇದೆ
42. ಕೆಡಂಬಿಲ್ – ಗೊರಟೆ
43. ಉಜುಂಬು – ಚೀಪು
44. ಕೆಪ್ಪ – ಕಿವುಡು
45. ಉಗುರುಬೆಪ್ಪು – ಉಗುರುಬಿಸಿ
46. ಕೈಪಲಿಪು – ಕೈಗುಣ
47. ಉಡುಂಬ – ಉಡು
48. ಕೈಮಾಸ್ – ಮಾಟಮದ್ದು
49. ಉಪ್ಪುಡೊಕಲ್ಲ್ – ಉಪ್ಪಿನ ಹರಳು
50. ಗಪ್ಲಾಸ್ – ಪೊಳ್ಳುಮಾತು
51. ಉರಿ – ಪಾತ್ರೆಯಿಡಲು ಮಾಡಿದ ನೇತಾಡುವ ಸಾಧನ
52. ಗಾಯೋ/ಗಾಯ – ಗಾಯ
53. ಉರುಂಟು – ಉರುಟು
54. ಗುಡ್ಡೆ – ಗುಡ್ಡ

55. ಉರ್ಕು – ತಾಯಿತ, ಆಭರಣ
56. ಗುರ್ಬಿ – ಗುಬ್ಬಿ
57. ಉಳ್ಕು – ಉಳುಕುವುದು
58. ಗೋಸ್ಪಿ – ಗೊಡವೆ
59. ಉಳ್ಳಿ – ನೀರುಳ್ಳಿ
60. ಚಂಡಿಪುಡ್ಕ – ಪುಕ್ಕ
61. ಊಂಚಿ – ಮೇಲಿರದ
62. ಚದಿ – ಮೋಸ
63. ಊದುಬತ್ತಿ – ಅಗರಬತ್ತಿ
64. ಚೂಡು – ತಲೆಬಿಸಿ
65. ಅಡಕತ್ತರಿ – ಅಡಕೆ ಕತ್ತರಿಸುವ ಕತ್ತರಿ
66. ಜೋಸು – ಉತ್ಸಾಹ
67. ಎಡಬಿಡಾರೊ – ತಾತ್ಕಲಿಕ ಬಿಡಾರ
68. ಡೋಂಗಿ – ಡೊಂಗಿ
69. ಎಡವಟ್ಟ್ – ತೊಂದರೆ
70. ತಲುವಾರ್ – ಬಾಳ್‌ಕತ್ತಿ
71. ಎರಂದ್ – ಒತ್ತಾಯಿಸು
72. ತಿಂಬಟ್ಟು – ತಿಂಡಿಪೋಕ
73. ಎರ್ಮೆ – ಎಮ್ಮೆ
74. ತಿರ್ಪಾ – ಮದ್ದು ಲೇಪ
75. ಎರ್ದ್ – ಕೋಣ
76. ತೇಜಿ – ಚುರುಕು
77. ಎಳಮ – ಎಳೆಯದು
78. ತೋಕ್ – ಕೋವಿ
79. ಒಟ್ಟಾರೊ – ದಷ್ಟಪುಷ್ಟ
80. ದಡಿಕೆ – ತುರಿಕೆಯಿಂದ ಚರ್ಮ ಉಬ್ಬು
81. ಎಪ್ಪೊ – ಯಾವಾಗ
82. ದಮ್ಮು – ಉಬ್ಬಸ
83. ಐಸಿರೊ – ಶ್ರೀಮಂತಿಕೆ

84. ದೀಪ – ಬೆಳಕು
85. ಒಟ್ಟೆ – ತೂತು
86. ದೊಣ್ಣಪ್ಪ – ಅಧಿಕಾರ ನಡೆಸುವಾತ
87. ಒಟ್ಟೆ ಓಡು – ತೂತಾದ ಮಡಕೆ
88. ನಂಜಿನರಕಾ – ಅಸೂಯೆ
89. ಒಟ್ಟೆಕಿಚ್ಚಿ – ಅಸೂಯೆ
90. ನೈಪು – ದುಡಿಮೆ
91. ಓಂತಿ – ಓತಿ
92. ನಾರಾಸ್ – ದಬ್ಬಳ (ಸೂಜಿ)
93. ಕಂಟಪೂಚೆ – ಗಂಡುಬೆಕ್ಕು
94. ಪಟ್ಲಾಮು – ಸೇನೆ
95. ಕಂಡಾ ಬಟ್ಟೆ – ಸಿಕ್ಕಾಪಟ್ಟೆ
96. ಪರ್ತಿ – ಹತ್ತಿ
97. ಕಟ್ಟಪುಣಿ – ಗದ್ದೆಯ ಅಂಚಿನ ದಾರಿ
98. ಪಿಂಡಿ – ಕಡುಬು
99. ಕರುಂಬು – ಕಬ್ಬು
100. ಪಿಂಡ್ – ಒಂದು ಗುಂಪು
101. ಕಲ್ಲೆಂಬಿ – ಮರದ ಪೆಟ್ಟಿಗೆ
102. ಪಿರಾಂದ್ – ಭ್ರಾಂತಿ
103. ಕುಂಬಟ್ಟ್ – ಕುಂಬಾದ
104. ಪೊಡಿ – ನಶ್ಯ
105. ಲಂಡ್ ಪುಸ್ಕ – ಅಪ್ರಯೋಜಕ
106. ಪೊಟ್ಟ – ಮೂಕ
107. ಲಗಾಡಿ – ಸರ್ವನಾಶ
108. ಬಂಜಳ – ಹೊಟ್ಟೆಬಾಕ
109. ಲಟಾರಿ – ಗುಜರಿ
110. ಬೀಲ – ಬಾಲ
111. ಲಡಾಯಿ – ಜಗಳ
112. ಬೊಂಡು – ತಿರುಳು, ಮೆದುಳು

113. ಲಾಟ್ ಪೋಟ್ – ಕ್ಷುಲ್ಲಕ ಹರಟೆ
114. ಬೊಂದ್ಯ – ಬೆಂಕಿ
115. ಬೊಂತೆ ಲಚಾರ್ – ದೈಹಿಕ ಸವೆತ
116. ಮಂಕ್ ಮರ್ಲ್ – ಹುಚ್ಚು ಹುಚ್ಚಾಗಿ
117. ವದರ್ಮ – ಮುಖ ಬೀಗುವಿಕೆ
118. ಮಂಡೆಕುತ್ತು – ತಲೆನೋವು
119. ಸೀಂತ್ರಿ – ಮೋಸತಂತ್ರ
120. ಮಚ್ಚಿನ – ಮೈದುನ
121. ಸೊಯೊ – ಸೋಯ (ಸ್ವಂತ ಬುದ್ದಿ)
122. ಮಿಲಾವು – ಉಕ್ಕು
123. ಮುಂಡಾಸ್ – ಮುಂಡಾಸು
124. ಅರೆಮಡಲ್ – ತೆಂಗಿನ ಓಲೆ ಮಡಲು
125. ಯೇಸ – ವೇಷ
126. ಉಪ್ಪಾಡ್ ಪಚ್ಚಿಳ – ಹಲಸಿನತೊಳೆ ಉಪ್ಪಿನಲ್ಲಿ ಹಾಕಿದ್ದು
127. ಯತೆ – ವ್ಯಥೆ
128. ಕುಡು – ಹುರುಳಿ
129. ರವುಸ – ರಭಸ
130. ಅಡರ್ – ಮರದ ಕೊಂಬೆ
131. ರಾವು – ಅತಿ ತಿನ್ನುವುದು
132. ಕುಪ್ಪಳು – ಕೆಂಬೂತ
133. ರೋಂದು – ಸುತ್ತಾಟ

ಈ ಪದಗಳಾವುವು ಮಲೆಯಾಳದಲ್ಲಿಲ್ಲ.

**ಬ್ಯಾರಿ ಭಾಷೆಯಲ್ಲಿ ಪ್ರಾದೇಶಿಕ ಭಿನ್ನತೆ**

1. ಸುರತ್ಕಲ್, ಬಜಪೆ ಮತ್ತು ಉತ್ತರಭಾಗ, 2. ಮಂಗಳೂರು, ಬಂಟ್ವಾಳ ಪ್ರದೇಶ 3. ಪುತ್ತೂರು ಸುಳ್ಯ ಮತ್ತು 4. ಕಾಸರಗೋಡು ಪ್ರದೇಶದ ಬ್ಯಾರಿ ಭಾಷೆಯಲ್ಲಿ ಗಮನೀಯ ಉಚ್ಚಾರ ಮತ್ತು ಪದಗಳಲ್ಲಿ ವ್ಯತ್ಯಾಸಗಳಿವೆ. ಇವುಗಳಲ್ಲಿ ತುಳು ಭಾಷೆಯ ಕೇಂದ್ರಿಯ ಭಾಗ ಮಂಗಳೂರು ಮತ್ತು ಸುತ್ತ ವಲಯವೆಂದು ಹಲವರು ಸಮರ್ಥಿಸಿದ್ದಾರೆ. ಬ್ಯಾರಿ ಭಾಷೆಯ ತವರೂರೆಂದೇ ಕರೆಯಬಹುದಾದ

ಪ್ರದೇಶ ಮಂಗಳೂರು ಮತ್ತು ಸುತ್ತಮುತ್ತವೆಂಬುದನ್ನೂ ಸ್ಪಷ್ಟವಾಗಿ ಹೇಳಬಹುದು ಹಾಗಾಗಿ ಬ್ಯಾರಿ ಸಾಹಿತ್ಯವೂ ಇಲ್ಲಿಂದಲೇ ಬೆಳೆಯತೊಡಗಿದೆ.

**ಪ್ರಾದೇಶಿಕ ಭಾಷೆಯಾಗಿ ಬ್ಯಾರಿ ಭಾಷೆ ಬಳಕೆ**

ಪ್ರಸ್ತುತ ಬ್ಯಾರಿಗಳು ಒಂದು ಸ್ವಾತಂತ್ರವಾದ ಪ್ರಾದೇಶಿಕ ಜನಾಂಗವಾಗಿದ್ದಾರೆ ಮತ್ತು ತಮ್ಮದೆ ಆದ ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗಳ ದಾಖಲೆಗಳು (ಸರ್ವೆ) ಜಿಲ್ಲೆಯಲ್ಲಿ ಭಾರಿ ಸಂಖ್ಯೆಯ ಬ್ಯಾರಿಗಳ ಆಸ್ತಿತ್ವದ ಬಗ್ಗೆ ಉಲ್ಲೇಖಿಸುತ್ತದೆ. ಆರಂಭ ಕಾಲದ ಇನ್ನೂ ಹಲವು ಖಾಸಗಿ ಕಡತಗಳು ಮತ್ತು ದಾಖಲೆಗಳು ಅವರನ್ನೇ ಬ್ಯಾರಿಗಳೆಂದೇ ಗುರುತಿಸಿದೆ.

ಅಜಿಲ ಮೊಗರುವಿನ ಸಾಧುರಿ ಬ್ಯಾರಿ ಹತ್ತೊಂಬತ್ತನೇ ಶತಮಾನದ ಆರಂಭ ಕಾಲದಲ್ಲಿದ್ದ ಒಬ್ಬ ಮುಸ್ಲಿಂ ನಾಯಕ. ಅದೇ ರೀತಿ ಮುಲ್ಕಿಯ ಬಪ್ಪ ಬ್ಯಾರಿ ಮತ್ತು ಮಂಜೇಶ್ವರದ ಮಮ್ಮಿ ಸೂಪಿ ಬ್ಯಾರಿ ಹತ್ತೊಂಬತ್ತನೇ ಶತಮಾನದಲ್ಲಿ ಬದುಕಿದ್ದ ಬ್ಯಾರಿಗಳ ಪ್ರಮುಖ ನಾಯಕರು.

ಬ್ಯಾರಿ ಭಾಷೆಯು ತುಳುನಾಡಿನ ಬ್ಯಾರಿಗಳು ಆಡುವ ಪ್ರಾದೇಶಿಕ ಭಾಷೆಯಾಗಿದೆ. ಆರಬ್ಬರೊಂದಿಗಿನ ಸಂಪರ್ಕದಿಂದಾಗಿ ಅದರಲ್ಲಿ ಪರ್ಷಿಯ–ಅರೆಬಿಕ್ ಶಬ್ದಗಳು ಸೇರ್ಪಡೆಯಾದವು. ಅದರ ಮೂಲ ತುಳು ಆದ ಕಾರಣ ತುಳು ವ್ಯಾಕರಣ ಮತ್ತು ಹಿನ್ನೆಲೆ ಬ್ಯಾರಿ ಭಾಷೆಗೆ ಮೂಲ ಆದವು. ಕಾಸರಗೋಡಿನಿಂದ ಮಂಗಳೂರಿನ ಉತ್ತರಕ್ಕಿರುವ ಮೂಲ್ಕಿಯವರೆಗಿನ ಕರಾವಳಿಯಲ್ಲಿ ತುಳು ಭಾಷೆಯು ಪ್ರಭಾವಶಾಲಿಯಾಗಿದೆ. ಇದರ ಜತೆಯಾಗಿಯೇ ಬ್ಯಾರಿ, ಮೋಯ, ಕೊಂಕಣಿ ಭಾಷೆಗಳೂ ಇವೆ. ಇದರಲ್ಲಿ ಬ್ಯಾರಿಗಳು ಆಡುವ ಭಾಷೆಗೆ ಅತಿ ಸಮೀಪವಾಗಿರುವ ಭಾಷೆ ಮೋಯ ಭಾಷೆ. ತೀಯರು, ಬಾಲ್ಯಾಯರು, ಮೋಯರು ಮುಂತಾದ ಜನವರ್ಗಗಳೂ ಮಲೆಯಾಳದ ಉಪ ಭಾಷೆಗಳನ್ನೇ ತಮ್ಮದಾಗಿಸಿಕೊಂಡಿದ್ದಾರೆ. ಇವರ ಆಡುನುಡಿಗಳು ಮಲೆಯಾಳಕ್ಕೆ ಸಮೀಪವಾಗಿದ್ದು ತುಳು ಭಾಷೆಗೆ ದೂರವಾಗಿರುತ್ತದೆ. ಉಚ್ಚಾರಗಳಲ್ಲಿ ಕೂಡ ಭಿನ್ನತೆ ಎದ್ದು ಕಾಣುತ್ತದೆ.

ಬ್ಯಾರಿ ಭಾಷೆಯನ್ನಾಡುವ 'ಬ್ಯಾರಿ ಜನಾಂಗ' ಈ ಮಲೆಯಾಳಿಗಳಂತೆ ವಿಸ್ತಾರವಾಗಿ ಹಬ್ಬಿಕೊಂಡಿದೆ. ಬೆಂಗಳೂರು ನಗರದ್ದಲ್ಲೂ ಸಾಕಷ್ಟು ಜನ ಬ್ಯಾರಿಗಳಿದ್ದಾರೆ. ಆದರೆ, ಅವರ ಮೂಲ ಕೇಂದ್ರ ಸ್ಥಾನ ತುಳುನಾಡು, ಅರ್ಥಾತ್ ದಕ್ಷಿಣಕನ್ನಡ ಜಿಲ್ಲೆ, ಕಾಸರಗೋಡು, ಉಡುಪಿ.

ಬ್ಯಾರಿ ಭಾಷಾ ಕ್ಷೇತ್ರದಲ್ಲಿ ಒಂದೇ ಭಾಷೆಯನ್ನು ಆಡುವ ಸಮುದಾಯದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಾಷೆಯ ಬಳಕೆಯಲ್ಲಿ ವ್ಯತ್ಯಾಸ ಇದೆ. ಇದು ಸೂಕ್ಷ್ಮ ವ್ಯತ್ಯಾಸವಾಗಿದ್ದು ಮೇಲ್ನೋಟಕ್ಕೆ ಕಂಡುಬರುವುದಿಲ್ಲ ಪರಸ್ಪರ ಹೆಚ್ಚು ಸಂಪರ್ಕ ಹಾಗೂ ಸಂವಹನ ಹೊಂದಿರುವ ಮುಸ್ಲಿಂ ಸಮುದಾಯದಲ್ಲಿ ಈ ಭಾಷೆಯು ಹೆಚ್ಚು ಸಾಮ್ಯತೆಯನ್ನು ಹೊಂದಿರುತ್ತದೆ.

ಬ್ಯಾರಿ ಭಾಷೆಯಲ್ಲಿ ಹಲವು ಉಪಭಾಷೆಯನ್ನು ಕಾಣಬಹುದು. ಉಪಭಾಷೆಗಳು ಮೂಲ ಭಾಷೆಯನ್ನೇ ಆಧರಿಸಿದ್ದು ಪದ ಬಳಕೆಯಲ್ಲೊ ಉಚ್ಚಾರಣೆಯಲ್ಲೋ ಅಥವಾ ಅನ್ಯ ಭಾಷೆಯ ಪ್ರಭಾವದಿಂದಲೋ ಸ್ವಲ್ಪ ಭಿನ್ನತೆಯನ್ನು ಹೊಂದಿರುತ್ತದೆ. ಅಲ್ಲದೆ ಭೌಗೋಳಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕಾರಣಗಳು ಕೂಡ ಉಪಭಾಷೆಗಳ ಸೃಷ್ಟಿಗೆ ಕಾರಣವಾಗುತ್ತದೆ.

ಭೌಗೋಳಿಕ ಅಂದರೆ ವಿಸ್ತಾರವಾದ ಭಾಷಾಕ್ಷೇತ್ರ ಸಮುದ್ರ, ನದಿ, ಬೆಟ್ಟ ಸಾಲುಗಳ ಮತ್ತು ಕಾಡು ಅಡೆತಡೆಗಳು ಕೂಡ ಸಂಪರ್ಕವನ್ನು ಹಾಗೂ ಸಂವಹನವನ್ನು ಕಡಿಮೆ ಮಾಡಿ ಉಪಭಾಷೆಯ ಸೃಷ್ಟಿಗೆ ಕಾರಣವಾಗುತ್ತದೆ.

ಹಾಗೆಯೇ ರಾಜಕೀಯ ಕಾರಣಗಳು ಕೂಡ. ಒಂದು ಭಾಷೆಯ ಪ್ರದೇಶವು ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟಾಗ ಆ ಆಡಳಿತ ಭಾಷೆಯ ಪ್ರಭಾವಕ್ಕೆ ಒಳಗಾಗಿ ಅಲ್ಲಿನ ಭಾಷೆಯಲ್ಲಿ ವ್ಯತ್ಯಾಸಗಳು ಕಂಡುಬರುತ್ತದೆ. ಉದಾಹರಣೆಗೆ ಬ್ಯಾರಿ ಮಾತನಾಡುವ ಪ್ರದೇಶಗಳು ತುಳು, ತಮಿಳು ಅರಬಿ, ಪರ್ಶಿಯನ್, ಮಲೆಯಾಳಂ ಭಾಷೆಗಳ ಪ್ರಭಾವಕ್ಕೆ ಒಳಪಟ್ಟಿದೆ.

ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರಣಗಳು ಬ್ಯಾರಿ ಭಾಷೆಯು ಸಾಂಸ್ಕೃತಿಕವಾಗಿ ಅರಬಿಕ್‌ನಿಂದ ಅದರ ಸಾಹಿತ್ಯ ಭಂಡಾರದಿಂದ ಪ್ರಭಾವಿತ ಗೊಂಡಿದೆ. ಹಾಗೆಯೇ ಗಡಿ ಪ್ರದೇಶಗಳು ಕೊಡುಕೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಅನ್ಯ ಭಾಷೆಯ ಪ್ರಭಾವಕ್ಕೆ ಒಳಪಡುವುದು ಸಾಮಾನ್ಯ. ಒಂದೆ ಸಮುದಾಯದ ಜನರು ಪರಸ್ಪರ ಸಂವಹನ ನಡೆಸುತ್ತಾ ಬೇರೆ ಸಮುದಾಯದೊಂದಿಗೆ ಸಂಪರ್ಕ ಕಡಿತಗೊಂಡಾಗಲೂ ಆ ಸಮುದಾಯದ ಭಾಷೆಯೇ ಉಪಭಾಷೆಯಾಗಿ ರೂಪುಗೊಳ್ಳುತ್ತದೆ.

ಬ್ಯಾರಿ ಭಾಷೆಯಲ್ಲಿಯೂ ಈ ಪ್ರಾದೇಶಿಕ ವ್ಯತ್ಯಾಸವನ್ನು ಕಾಣಬಹುದಾಗಿದೆ. ಬ್ಯಾರಿ ಭಾಷೆಯನ್ನು ಪ್ರಾದೇಶಿಕ ಭಾಷೆಯಾಗಿ ಬಳಸುವುದನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

1) ಮಂಗಳೂರು ಬ್ಯಾರಿ
2) ಕಾಸರಗೋಡು ಬ್ಯಾರಿ
3) ಕೊಡಗು ಬ್ಯಾರಿ

**ಮಂಗಳೂರು ಬ್ಯಾರಿ**

ಮಂಗಳೂರು ಬ್ಯಾರಿಗಳ ಅತ್ಯಂತ ಪ್ರಮುಖ ಕೇಂದ್ರಗಳಲ್ಲೊಂದು. ತುಳುವರು ಅದನ್ನು ಕುಡ್ಲ ಎಂಬ ಹೆಸರಿನಿಂದ ಕರೆಯುತ್ತಿದ್ದರೆ. ಆದರೆ ಬ್ಯಾರಿಗಳು ಅದನ್ನು ಮೈಕಾಲ ಎಂದು ಕರೆಯುತ್ತಿದ್ದರು.

ಮಂಗಳೂರು ಬ್ಯಾರಿಯೂ ಭೌಗೋಳಿಕ ಕಾರಣಗಳಿಂದ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಇಲ್ಲಿನ ಭಾಷೆಯ ಉಚ್ಚಾರಣೆಯೇ ವಿಶೇಷವಾದುದು. ಉಚ್ಚಾರದಲ್ಲಿ ನಾಸಿಕತೆ ಹೆಚ್ಚು. ಬ್ಯಾರಿ ಭಾಷೆಯಲ್ಲಿ ತುಳುವಿನ ಪ್ರಭಾವನ್ನು ಕಾಣಬಹುದು.

ಈ ಭಾಷೆಯಲ್ಲಿ ಬಹಳಷ್ಟು ತುಳು ಪದಗಳು ಬಳಕೆಯಾಗಿದೆ. ತುಳು ಭಾಷೆಯ ಪ್ರಭಾವ ಎದ್ದು ಕಾಣುತ್ತದೆ. ಇದರಲ್ಲಿ ತುಳು ಭಾಷೆಯ ಉಚ್ಚಾರ, ವ್ಯಾಕರಣ ಮತ್ತು ಪದಗಳು ಬಳಕೆಯಾಗಿದೆ.

ಈ ಕೆಳಕಂಡ ಉದಾಹರಣೆಗಳು ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತದೆ.

1. ಬ್ಯಾರಿ : ನಾನ್ ಔತುರೆ ಬಂಡೆ
   ತುಳು : ಯಾನ್ ಇಲ್ಲಡ್ದ್ ಬರ್ಪಿನಿ
2. ಬ್ಯಾರಿ : ಕಿಡಾವು ಲಾಯ್ಟೋಂ ಲಾಯ್ಟೊಂ ಬೀದಿಗ್ ಬಂತ್
   ತುಳು : ಬಾಲೆ ಲಾಯಿತ್ದ್ ಲಾಯಿತ್ದ್ ಬೀದೀಗ್ ಬತ್ತ್ಂಡ್

ಮಂಗಳೂರಿನ ಬ್ಯಾರಿ ಭಾಷೆಯ ಮೇಲೆ ತುಳು ಭಾಷೆಯ ಪ್ರಭಾವವಿದೆ. ಮಂಗಳೂರು ಬ್ಯಾರಿಗೂ ಕೊಡಗಿನ ಬ್ಯಾರಿಗೂ ಸ್ವಲ್ಪ ವ್ಯತ್ಯಾಸ ಕಾಣಬಹುದು. ಮಂಗಳೂರಿನ ಬ್ಯಾರಿಗಳ ಉಚ್ಚಾರ ದೀರ್ಘವಾಗಿರುತ್ತದೆ.

**ಕಾಸರಗೋಡು ಬ್ಯಾರಿ**

ಬ್ಯಾರಿ ಭಾಷೆಯು ಮಾಪಿಳ್ಳೆ ಭಾಷೆಯಲ್ಲ. ಮಾಪಿಳ್ಳೆ ಭಾಷಾ ಕೇರಳದಲ್ಲಿ ಸಮಗ್ರವಾಗಿ ಅಭಿವೃದ್ಧಿ ಹೊಂದಿರುವ ಭಾಷೆಯಾಗಿದೆ. ಮಲಬಾರಿನಲ್ಲಿ ಬಳಕೆಯಲ್ಲಿರುವ ಮಾಪಿಳ್ಳ ಮಲಯಾಳಂ ಸ್ವರವೊಂದನ್ನು ಬಿಟ್ಟರೆ ಮಲಯಾಳ ಭಾಷೆಗಿಂತ ಹೆಚ್ಚು ಭಿನ್ನವಾಗಿಲ್ಲ. ಅದರ ವ್ಯಾಕರಣ ಮತ್ತು ರಚನೆ ಮಲಯಾಳ

ಭಾಷೆಯೇ ಆಗಿದೆ. ಇಡೀ ಮಲಬಾರ್ ಪ್ರದೇಶದಲ್ಲಿ ಹರಡಿರುವ ಮಾಪಿಳ್ಳಗಳ ಪ್ರಾದೇಶಿಕ ಭಾಷೆಯಾಗಿ ಗುರುತಿಸಿಕೊಳ್ಳುತ್ತಾರೆ.

ಕೊಡವ ಭಾಷೆಯಲ್ಲಿ ಇರುವಂತೆ ಬ್ಯಾರಿಯಲ್ಲೂ ಹಲವು ಮಲಯಾಳಂ ಶಬ್ದಗಳು ಇವೆ. ಧಾರ್ಮಿಕ ಕಾರಣಗಳಿಗಾಗಿ ಮಾಪಿಳ್ಳಗಳೊಂದಿಗೆ ಇದ್ದ ನಿಕಟ ಸಂಪರ್ಕ ಇದಕ್ಕೆ ಮುಖ್ಯ ಕಾರಣ. ಇಂದಿಗೂ ಕೂಡ ಮದರಸದಲ್ಲಿ ಅರಬಿಯನ್ನು ಮಲೆಯಾಳಂ ಭಾಷೆಯಲ್ಲಿ ಕಲಿಸುತ್ತಾರೆ. ಹೆಚ್ಚಿನ ಬ್ಯಾರಿ ವಿದ್ಯಾರ್ಥಿಗಳು ತಮ್ಮ ಧಾರ್ಮಿಕ ಶಿಕ್ಷಣವನ್ನು ಕೇರಳದ ಶಿಕ್ಷಕರಿಂದ ಪಡೆಯುತ್ತಿದ್ದಾರೆ. ಇದು ಬ್ಯಾರಿ ಭಾಷೆಯ ಅಭಿವೃದ್ಧಿಗೆ ತೊಡಕು ಉಂಟುಮಾಡುತ್ತಿದೆ. ಕಾಸರಗೋಡು ಪ್ರದೇಶದಲ್ಲಿ ಶೇ. 80ಕ್ಕಿಂತ ಅಧಿಕ ಶಬ್ದಗಳು ಮಲಯಾಳಂ ಆಗಿದ್ದು, ಮೂಲ ಬ್ಯಾರಿ ಭಾಷೆ ಸ್ವರೂಪ ಬಹುತೇಕ ಅಳಿವಿನ ಅಂಚಿನಲ್ಲಿರುವುದನ್ನು ಕಾಣಬಹುದು. ಅದಲ್ಲದೆ ಬ್ಯಾರಿಗಳ ಸಂಪ್ರದಾಯವೂ ಮಾಪಿಳ್ಳಗಳಿಗಿಂತ ಭಿನ್ನ. ಅಂದರೆ ಜನನ, ಮರಣ, ಮದುವೆ ಇತ್ಯಾದಿ ಸಾಮಾಜಿಕ ಸಮಾರಂಭಗಳು ಭಿನ್ನವಾಗಿದೆ.

**ಕೊಡಗು ಬ್ಯಾರಿ**

ಕೊಡಗಿನ ಬ್ಯಾರಿಗಳ ಸಂಪ್ರದಾಯವು ಕೊಡವರ ಸಂಪ್ರದಾಯವನ್ನು ಹೋಲುತ್ತದೆ. ಭಾರತೀಯ ಲೇಖಕ ರಾಜ ರಾವ್ ಹೇಳಿರುವಂತೆ, ಭಾರತೀಯರು ವೇಗವಾಗಿ ಯೋಚಿಸುತ್ತಾರೆ. ಯೋಚನೆ ಮಾಡುತ್ತಾನೆ, ಮಾತನಾಡುತ್ತಾರೆ. ಅಂತೆಯೇ ಕೊಡಗಿನ ಬ್ಯಾರಿಯವರು ವೇಗವಾಗಿ ಮಾತನಾಡುತ್ತಾರೆ. ಇವರ ಬ್ಯಾರಿ ಭಾಷೆ ಮಂಗಳೂರಿನ ಬ್ಯಾರಿಗಳಿಗೆ ಹೋಲಿಸಿದರೆ ವ್ಯತ್ಯಾಸ ಕಾಣಬಹುದು. ಉದಾಹರಣೆಗೆ,

| **ಕೊಡಗು** | **ಮಂಗಳೂರು** |
|---|---|
| ಚೊಲ್ಲು | ಚೆಲ್ಲ್ |
| ಎಂದ್ರೆ | ಎಂದ್ರೊ |

ಇದಲ್ಲದೆ ಕೊಡವ ಭಾಷೆ ಹಲವು ರೀತಿಯಲ್ಲಿ ಬ್ಯಾರಿ ಭಾಷೆಯನ್ನು ಹೋಲುತ್ತದೆ. ಉಚ್ಚಾರ ಮಾತ್ರವಲ್ಲ ಹಲವು ಶಬ್ದಗಳು ಎರಡು ಭಾಷೆಗಳಲ್ಲಿ ಸಾಮಾನ್ಯವಾಗಿದೆ. ಉದಾಹರಣೆಗೆ ಕಟ್, ಪಿರಾಂದ್, ಪೆಂಞಯಿ.

| ಕನ್ನಡ | ಕೊಡವ | ಬ್ಯಾರಿ |
|---|---|---|
| ಮದುವೆ | ಮಂಗಿಲ | ಮಂಜಿಲ |
| ಕಬ್ಬು | ಪುಂಡಿ | ಪಿಂಡಿ |
| ನೋಡು | ನೋಟ್ | ನೋಕ್ |
| ಹೌದು | ಅಕ್ಕು | ಒಕ್ಕು |
| ದನ | ಪಯ್ಯ | ಪಯ್ |
| ಬೇಡ | ಬೋಂಡ | ಬೇಂಡ |
| ಬಾಲ | ಬಾಲ್ | ಬೀಲ |
| ದೂರದ | ದೂರತ್ | ದೂರತ್ತೆ |
| ಒಪ್ಪಬೇಡ | ಒಕಂಡ | ಒಕ್ಕಂಡ |
| ಒಂದು | ಒರು | ಒರು/ಒನ್ನು |
| ಮತ್ತೆ | ಪಿನ್ನೆ | ಪಿನ್ನೆ |

ಇದಲ್ಲದೆ, ಬ್ಯಾರಿ ಭಾಷೆಯಲ್ಲಿ ಅರೆಬಿ ಭಾಷೆಯ ಪ್ರಭಾವವನ್ನು ಕಾಣಬಹುದು. ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ ಬ್ಯಾರಿಗಳು ಕೆಲವು ಅರೆಬಿಕ್ ಪದವನ್ನು ಬಳಸುತ್ತಾರೆ. ಉದಾಹರಣೆಗೆ ಸಾನ್, ರಕ್ಕಸಿ, ಶೈತಾನ್, ಕಾಯಿನ್.

ಹಿಂದಿನ ಕಾಲದಲ್ಲಿ ಪಿಂಞಾನಕ್ಕೆ ಗುಲುಂಬು ಎನ್ನಲಾಗುತ್ತಿತ್ತು. ಗಂಟೆಯನ್ನು ನೆರಳಿನ ಆಧಾರದ ಮೇಲೆ ನೋಡಿ ಹೇಳುತ್ತಿದ್ದರು. ಬ್ಯಾರಿ ಭಾಷೆಗೆ ತಮಿಳು ಭಾಷೆಯ ಪ್ರಭಾವ ಸಹ ಇದೆ. ತಮಿಳು ಮತ್ತು ಮಲಯಾಳಂ ಮಾತನಾಡುವವರಿಗೆ ಶೇ. 75 ರಷ್ಟು ಬ್ಯಾರಿ ಅರ್ಥವಾಗುತ್ತದೆ.

**ವ್ಯಾಪಾರದಲ್ಲಿ ಭಾಷೆಯ ಬಳಕೆ**

ಏಳನೇ ಶತಮಾನದಲ್ಲಿ ಇಸ್ಲಾಂ ಧರ್ಮ ಹುಟ್ಟಿಕೊಳ್ಳುವುದಕ್ಕೆ ಮೊದಲೇ ಭಾರತದ ಕರಾವಳಿ ಹಾಗೂ ಮಧ್ಯ ಏಷಿಯಾ ಪ್ರದೇಶಗಳ ಮಧ್ಯೆ ವ್ಯಾಪಾರ ಸಂಬಂಧವಿತ್ತು. ಪ್ಲಿನಿ ಎಂಬವನು ಕ್ರಿ.ಶ. ಒಂದನೆಯ ಶತಮಾನದಲ್ಲಿ ಮಲಬಾರ್ ತೀರದಲ್ಲಿ ಅರಬರ ವಸಾಹತುಗಳಿದ್ದವು ಎಂದು ಬರೆದಿದ್ದಾನೆ. ಈ ವ್ಯಾಪಾರ ಸಂಪರ್ಕ ಮುಂದುವರಿದಾಗ ಆ ಅರಬರೆಲ್ಲ ಇಸ್ಲಾಂ ಧರ್ಮ ಸ್ವೀಕರಿಸಿದರು. ಅವರೊಂದಿಗೆ ಮುಂದಿನ ಶತಮಾನಗಳಲ್ಲಿ ಬಂದ ಅರಬರೂ ಸೇರಿಕೊಂಡರು. ಸುಮಾರು ಹದಿನೈದನೆಯ ಶತಮಾನದವರೆಗೆ ಕಡಲ ತೀರದ ವ್ಯಾಪಾರ, ಆಮದು ರಫ್ತು ಮುಸಲ್ಮಾನರ ಕೈಯಲ್ಲಿಯೇ ಇತ್ತು.

ಹೀಗೆ ವ್ಯಾಪಾರಕ್ಕೆ ಬಂದ ಅರಬರು ಇಲ್ಲಿಯ ಹೆಣ್ಣು ಮಕ್ಕಳನ್ನು ಮದುವೆಯಾಗಿ ಇಲ್ಲಿಯೇ ವಾಸ ಮಾಡತೊಡಗಿದರು. ಮಾಪಿಳ್ಳ ಎಂಬುದು ಮದುಮಗ, ಗಂಡ, ಅಳಿಯ, ಅತ್ತೆಯ ಮಗ ಎಂಬರ್ಥದಲ್ಲಿ ಬಳಸುವ ಪದ. ಹೀಗೆ ಹೊರಗಿನಿಂದ ಬಂದ ಅಳಿಯಂದಿರ ಹಾಗೂ ಊರಿನ ವಧುಗಳ ಸಮಾಗಮಕ್ಕೆ ಮಾತ್ರ ಮದುವೆ ಎನ್ನುತ್ತಿದ್ದರು. ಮೂತ ಮದುವೆ ಎಂದರೆ ತಾತ್ಕಾಲಿಕ ಮದುವೆ ಎಂದರ್ಥ. ಇದು ಅರಬ್ ವರ್ತಕರು ತಾತ್ಕಾಲಿಕವಾಗಿ ಸ್ಥಳೀಯ ಹುಡುಗಿಯರೊಂದಿಗೆ ಮಾಡಿಕೊಳ್ಳುವ ಮದುವೆ. ಈ ಮೂತ ಮದುವೆಯಿಂದ ಹುಟ್ಟಿದ ವಂಶದವರನ್ನು ಮುಬಾರು ಪ್ರದೇಶದಲ್ಲಿ ಮಾಪಿಳ್ಳೆಗಳೆಂದು, ದಕ್ಷಿಣ ಕನ್ನಡ, ಉಡುಪಿ ಪ್ರದೇಶಗಳಲ್ಲಿ ಬ್ಯಾರಿಗಳೆಂದು ನಿರ್ದೇಶಿಸುವ ಪರಂಪರೆ ಬೆಳೆದುಬಂತು. ಬ್ಯಾರಿ ಎಂಬ ಪದ ತುಳುವಿನ ಬ್ಯಾರ 'ವ್ಯಾಪಾರ' ಎಂಬ ಶಬ್ದದಿಂದ ಬೆಳೆದು ಬಂದಿದೆ. ಇದನ್ನು ಅರಬ್ ಶಬ್ದ ಬಹರಿ 'ಸಮುದ್ರಕ್ಕೆ ಸಂಬಂಧಿಸಿದ' ಎಂಬುದರಿಂದ ಬಂದಿದೆ ಎಂದು ಕೆಲವರು ಊಹಿಸುತ್ತಾರೆ.

ಈ ಸಮುದ್ರ ವ್ಯಾಪಾರದ ಜನವರ್ಗದವರಿಂದ ಬೆಳೆದು ಬಂದವರು ಮುಂದೆ ಸಮುದ್ರ ಕರಾವಳಿ ಪ್ರದೇಶದಲ್ಲಿ ಸಾಮಾನುಗಳನ್ನು ಮನೆಮನೆಗಳಿಗೆ ಹೊತ್ತುಕೊಂಡು ಹೋಗಿ ಮಾರುವ ಉದ್ಯೋಗವನ್ನು ಮಾಡಿಕೊಂಡರು. ಸಾಮಾನ್ಯವಾಗಿ ತೆಂಗಿನಕಾಯಿ, ಹುರಿಹಗ್ಗ, ಗೆಣಸು, ಋತುಮಾನದಲ್ಲಿ ದೊರಕುವ ಹಣ್ಣುಗಳು ಮುಂತಾದವುಗಳ ವ್ಯಾಪಾರದಲ್ಲಿ ಇವರು ತಮ್ಮನ್ನು ತೊಡಗಿಸಿಕೊಂಡರು. ಆ ಮೇಲೆ ಚಿಕ್ಕ ಪುಟ್ಟ ಅಂಗಡಿಗಳು, ಚಾ ಹೋಟೇಲುಗಲು ಮುಂತಾದವುಗಳನ್ನು ಮಾಡಿಕೊಂಡು ವ್ಯಾಪಾರ ಅಭಿವೃದ್ಧಿ ಮಾಡತೊಡಗಿದರು.

ತುಳು ಜನಪದ ಸಾಹಿತ್ಯ 'ಪಾಡ್ದನ'ದಲ್ಲಿ ಅವರು ಸಮುದ್ರ ಬದಿಯಲ್ಲಿ ತೆಂಗಿನ ಒಣ ಸೋಗೆ ಹೊದಿಸಿ ಮಾಡಿದ ಚಿಕ್ಕ ಅಂಗಡಿಯಲ್ಲಿ ವ್ಯಾಪಾರ ಮಾಡಿಕೊಂಡಿದ್ದ ವರ್ಣನೆ ಬರುತ್ತದೆ. ಈಗಲೂ ಅವರು ಮೀನುಗಾರಿಕೆ ಹಾಗೂ ಮೀನು ವ್ಯಾಪಾರಕ್ಕೆ ಪ್ರಸಿದ್ದರಾಗಿದ್ದಾರೆ. ಇದಲ್ಲದೆ ಕಲ್ಲು ಕಡಿಯುವುದು, ಕಲ್ಲು ನಯ ಮಾಡುವುದು, ಮೇಸ್ತ್ರಿ ಕೆಲಸ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜನರು ನದಿಗಳನ್ನು ದೋಣಿಗಳ ಮೂಲಕ ದಾಟುವ ಸಂದರ್ಭದಲ್ಲಿ ಅಂಬಿಗನ ಕೆಲಸವು ಇವರ ಪಾಲಿಗೆ ಬರುತ್ತಿತ್ತು. ಮೀನುಗಾರಿಕೆಯಲ್ಲಿ ಇಂದಿಗೂ ಬ್ಯಾರಿಗಳು ಪಾಣೆಮಂಗಳೂರಿನ ಬಂಗರಸರ ಆಸ್ಥಾನದಲ್ಲಿ ಉನ್ನತ ಹುದ್ದೆಗಳನ್ನು ನಿರ್ವಹಿಸುತ್ತಿದ್ದರು.

ಇಕ್ಕೇರಿ ಅರಸರ ಅಧಿಪತ್ಯದಲ್ಲಿಯೂ ಬ್ಯಾರಿಗಳಿಗೆ ಪ್ರಮುಖ ಸ್ಥಾನವಿತ್ತು. ಸಾಮಂತ ರಾಜರುಗಳು ಕಪ್ಪ ಕಾಣಿಕೆಗಳನ್ನು ಕೊಡದಾಗ ಅದನ್ನು ವಸೂಲಿ ಮಾಡಲು ಇವರುಗಳ ಸಹಾಯ ಕೋರಲಗುತ್ತಿತ್ತು. ಜೈನ ತುಂಡರಸರ ಜೊತೆಯೂ ಇವರ ಸಂಬಂಧ ಚೆನ್ನಾಗಿಯೇ ಇತ್ತು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಪೋರ್ಚುಗೀಸರ ಪ್ರಾಬಲ್ಯ ತಗ್ಗಿದಾಗ ಬ್ಯಾರಿ ವರ್ತಕರು ಕರಾವಳಿ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಿಕೊಂಡರು. ಸ್ಥಳೀಯ ಅರಸರ ಸರಕಾರದಲ್ಲಿಯೂ ಉತ್ತಮ ಸ್ಥಾನಗಳಿಸಿ ತೊಡಗಿದರು. ಬ್ಯಾರಿಗಳು ಮತ್ತು ಹನಫಿಗಳು ಸೇರಿದಂತೆ ಎಲ್ಲ ಮುಸ್ಲಿಮರು ವ್ಯಾಪಾರವನ್ನು ಮುಖ್ಯ ಕಸುಬಾಗಿ ಮಾಡಿಕೊಂಡಿದ್ದರು. ಇಸ್ಲಾಮ್ ಧರ್ಮವು ವ್ಯಾಪಾರ ಮತ್ತು ವೈಯಕ್ತಿಕ ಸಂಪಾದನೆಗೆ ಹೆಚ್ಚಿನ ಒತ್ತು ನೀಡಿದ್ದೇ ಇದಕ್ಕೆ ಕಾರಣ. ಇಸ್ಲಾಮ್ ಎಲ್ಲ ರೀತಿಯ ದುಡಿಮೆ, ವೃತ್ತಿ ಮತ್ತು ಕೆಲಸಕ್ಕೆ ಗೌರವ ಕೊಡುತ್ತದೆ. ಶೇಂದಿ, ಹಂದಿ ಮಾಂಸ, ಅಮಲು ಪದಾರ್ಥ, ಮಹಿಳೆಯರ ಸಾಗಾಟ ಇತ್ಯಾದಿಗಳು ಧರ್ಮ ನಿಷಿದ್ಧ (ಹರಾಮ್) ವ್ಯಾಪಾರವಾಗಿದ್ದವು. ಇವುಗಳ ಬಳಕೆ ಕೂಡಾ ಮುಸ್ಲಿಮರಿಗೆ ನಿಷಿದ್ಧವಾಗಿತ್ತು. ಆದರೆ ಜಿಲ್ಲೆಯಲ್ಲಿ ನಡೆಯುತ್ತಿದ್ದ ವ್ಯಾಪಾರದಲ್ಲಿ ಯಾವುದೇ ಧರ್ಮ ನಿಷಿದ್ಧವಾದ ವಸ್ತುಗಳು ಇರಲಿಲ್ಲ.

ಸೇಂದಿ ಮತ್ತು ಶರಾಬು ಮಾತ್ರ ಇದಕ್ಕೆ ಅಪವಾದವಾಗಿತ್ತು. ಇವೆರಡೂ ಬಿಲ್ಲವರ ಕಸುಬಾಗಿದ್ದವು. ಇತರ ಮೇಲ್ಜಾತಿಯವರಿಗೆ ಇದ್ದಂತೆ ವ್ಯಾಪಾರದಲ್ಲಿ ಸ್ಥಾನಮಾನ ಅಥವಾ ಘನತೆಯ ಯಾವುದೇ ನಿಯಂತ್ರಣ ಇರಲಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಸಮಾನ ಅವಕಾಶವಿತ್ತು ಮತ್ತು ಉದ್ಯಮ ನಡೆಸುವ ಸ್ವಾತಂತ್ರ್ಯವನ್ನೂ ಆತ ಪಡೆದಿದ್ದ. ಒಬ್ಬ ಸಂಪ್ರದಾಯವಾದಿ ಮುಸ್ಲಿಮನಂತೆಯೇ ಹೊಸದಾಗಿ ಇಸ್ಲಾಮ್ ಸ್ವೀಕರಿಸಿದ ಕೆಳಜಾತಿಯ ವ್ಯಕ್ತಿ ಕೂಡಾ ತನಗಿಷ್ಟವಾದ ಯಾವುದೇ ವ್ಯಾಪಾರವನ್ನು ಕೈಗೆತ್ತಿಕೊಳ್ಳಬಹುದಾಗಿತ್ತು. ಹೆಚ್ಚಿನ ಸಂದರ್ಭಗಳಲ್ಲಿ ಉದ್ಯಮಶೀಲತೆಯ ಈ ಸ್ವಾತಂತ್ರ್ಯ ಉದ್ಯಮಿಯಾಗಿ ಬೆಳೆದು ಬರುವಂತಾಯಿತು. ವೈಯಕ್ತಿಕ ಗಳಿಕೆಯನ್ನು ಇಸ್ಲಾಮ್ ಅತ್ಯಂತ ಅಮೂಲ್ಯವಾದ ಸಂಪತ್ತು ಎಂದು ಪರಿಗಣಿಸುತ್ತದೆ.

ವ್ಯಾಪಾರಕ್ಕೆ ಸಂಬಂಧಿಸಿದಂತೆ ಇಸ್ಲಾಮಿನ ಈ ತತ್ವದ ಪರಿಣಾಮವಾಗಿ ತನ್ನ ನ್ಯಾಯೋಚಿತ ಮತ್ತು ಪ್ರಾಮಾಣಿಕ ಜೀವನೋಪಾಯಕ್ಕಾಗಿ ವ್ಯಾಪಾರ ಕ್ಷೇತ್ರ ಪ್ರವೇಶಿಸುವುದು ತನ್ನ ಧಾರ್ಮಿಕ ಕರ್ತವ್ಯ ಎಂದು ಮುಸ್ಲಿಮರು ಪರಿಗಣಿಸತೊಡಗಿದರು. ಪ್ರತಿಯೊಬ್ಬ ಕಾರ್ಮಿಕನಿಗೂ ನ್ಯಾಯಬದ್ಧವಾದ ವೇತನ

ಪಡೆಯುವ ಹಕ್ಕೂ ಇದೆ. ನ್ಯಾಯೋಚಿತವಾದ ವೇತನವನ್ನು ಕೊಡದೇ ಇರುವುದು ಅಲ್ಲಾಹನ ಕಾನೂನು (ಷರಿಯತ್) ಪ್ರಕಾರ ಘೋರ ಅಪರಾಧ. ಇಸ್ಲಾಮ್ ಮುಸ್ಲಿಮರಿಗೆ ಎರಡು ಪ್ರಮುಖ ಹಕ್ಕುಗಳನ್ನು ನೀಡಿದೆ. ಮೊದಲನೆಯದು ವ್ಯಾಪಾರದ ಹಕ್ಕು ಮತ್ತು ಸ್ವತಂತ್ರ ಹಾಗೂ ಪ್ರಾಮಾಣಿಕ ಜೀವನ ಸಾಗಿಸುವ ಹಕ್ಕು. ಎರಡನೆಯದು ಕೆಲಸದ ಹಕ್ಕು ಮತ್ತು ಮಾಡಿದ ಕೆಲಸಕ್ಕಾಗಿ ವೇತನ ಕೇಳುವ ಹಕ್ಕು. ಎರಡರಲ್ಲೂ ಇಸ್ಲಾಮ್ ಸಮಾನತೆ ಮತ್ತು ಭಾತೃತ್ವದ ತತ್ವವನ್ನು ನೆಚ್ಚಿಕೊಂಡಿದೆ. ಇದರ ಪರಿಣಾಮವಾಗಿ ಜಗತ್ತಿನಾದ್ಯಂತ ಪ್ರತಿಯೊಬ್ಬ ಮುಸ್ಲಿಮನೂ ಶ್ರಮಜೀವಿಯಾಗಿರುತ್ತಾನೆ ಅಥವಾ ವರ್ತಕನೋ ಪ್ರಾಮಾಣಿಕ ಸೇವಕನೋ ಆಗಿರುತ್ತಾನೆ. ಇಸ್ಲಾಮ್ ವ್ಯಾಪಾರದಲ್ಲಿ ಪ್ರಾಮಾಣಿಕತೆಯನ್ನು ಅಪೇಕ್ಷಿಸುತ್ತದೆ. ವಂಚಕನಿಗೆ ಎಚ್ಚರಿಕೆ ನೀಡುತ್ತದೆ. ಸಭ್ಯ ಕೆಲಸವನ್ನು ಪ್ರೋತ್ಸಾಹಿಸುತ್ತದೆ ಮತ್ತು ಅಪೇಕ್ಷಿತನಿಗೆ ಹಣ ನೀಡಿದ್ದಕ್ಕೆ ಪ್ರತಿಯಾಗಿ ಬಡ್ಡಿ ಪಡೆಯುವುದನ್ನು ನಿಷೇಧಿಸುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ. "ದೇವರು ನಿಮಗೆ ವ್ಯಾಪಾರವನ್ನು ಧರ್ಮಸಮ್ಮತಿಗೊಳಿಸಿದ್ದಾನೆ ಮತ್ತು ಬಡ್ಡಿಯನ್ನು ನಿಷಿದ್ಧಗೊಳಿಸಿದ್ದಾನೆ". ವ್ಯಾಪಾರಕ್ಕೆ ಸಂಬಂಧಿಸಿದಂತೆ ಇರುವ ಧಾರ್ಮಿಕ ಆದೇಶವು ಮುಸ್ಲಿಮರನ್ನು ವ್ಯಾಪಾರ ಕ್ಷೇತ್ರಕ್ಕೆ ಪ್ರವೇಶಿಸುವಂತೆ ಮಾಡಿತು. ವ್ಯಾಪಾರಕ್ಕೆ ಸಂಬಂಧಿಸಿದ ಈ ನಂಟಿನಿಂದಾಗಿ ಅದು ಮುಸ್ಲಿಮರ ಏಕಸೌಮ್ಯವಾಗಿ ಮಾರ್ಪಟ್ಟಿತು. ಅದಲ್ಲದೆ, ಇಸ್ಲಾಮ್‌ಗೆ ಹೊರತಾಗಿ ಬೇರಾವ ಧರ್ಮವೂ ವ್ಯಾಪಾರಕ್ಕೆ ಇಷ್ಟೊಂದು ಮಹತ್ವವನ್ನು ನೀಡಿಲ್ಲ.

ತುಳುನಾಡಿನಲ್ಲಿ ಮೀನುಗಾರಿಕೆಯಂತಹ ಕೆಲವು ವ್ಯಾಪಾರಗಳು ಕೆಳಜಾತಿಯವರಿಗೆ ಮೀಸಲಾಗಿದ್ದವು. ಇಂತಹ ವ್ಯಾಪಾರಗಳನ್ನು ಮುಸ್ಲಿಮರು ಕೈಗೆತ್ತಿಕೊಂಡಾಗ ಹೆಚ್ಚಿನ ಆಕರ್ಷಣೆ ಪಡೆಯಿತು. ಇದು ಅವರಿಗೆ ಬ್ಯಾರಿಗಳೆಂಬ ಅರ್ಥಾತ್ ವ್ಯಾಪಾರಿಗಳು ಎಂಬ ಸಮಾನ ಹೆಸರನ್ನೂ ತಂದು ಕೊಟ್ಟಿತು. ಬ್ಯಾರಿಗಳು ಎಂಬ ಹೆಸರು ವ್ಯಾಪಾರವನ್ನು ವೃತ್ತಿಯಾಗಿ ಕೈಗೆತ್ತಿಕೊಂಡ ಎಲ್ಲರಿಗೂ ಅನ್ವಯವಾಗಿತ್ತು. ಜೀವನೋಪಾಯಕ್ಕೆ ಇತರ ಮಾರ್ಗಗಳನ್ನು ಆಯ್ದುಕೊಂಡ ವ್ಯಕ್ತಿಗಳು ಮತ್ತು ಗುಂಪುಗಳು ಇದ್ದವು. ಬ್ರಿಟಿಷ್ ವಾಣಿಜ್ಯ ನೀತಿಯಿಂದಾಗಿ ಹಲವಾರು ವಾಣಿಜ್ಯವನ್ನು ತಮ್ಮ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಇದರ ಪರಿಣಾಮವಾಗಿ ಕ್ರಮೇಣ ಮುಸ್ಲಿಮರಿಗೆ ವ್ಯಾಪಾರದ ಮೇಲೆ ಇದ್ದ ವಿಶೇಷ ಆಸಕ್ತಿ ಕಡಿಮೆಯಾಗುತ್ತಾ ಹೋಯಿತು. ಮುಸ್ಲಿಮ್ ಕುಟುಂಬಗಳಲ್ಲಿ ಮಹಿಳೆಯರು ಮನೆಯೊಳಗೆ ಏಕಾಂತದಲ್ಲಿ ಇರುತ್ತಿದ್ದರು. ಕುಟುಂಬವನ್ನು ಪೋಷಿಸುವ

ಜವಾಬ್ದಾರಿ ಕುಟುಂಬದ ಮುಖ್ಯಸ್ಥನ ಮೇಲೆ ಬೀಳುತ್ತಿತ್ತು. ಮಾರುಕಟ್ಟೆ ಸ್ಪರ್ಧೆಯಿಂದಾಗಿ ವ್ಯಾಪಾರವೂ ತನ್ನ ಆಕರ್ಷಣೆಯನ್ನು ಕಳೆದುಕೊಂಡಾಗ ಮುಸ್ಲಿಮರ ಮಧ್ಯೆ ಬಡತನ ಹೆಚ್ಚಾಗಿ ಕಾಣಿಸಿಕೊಂಡಿತು. ಜನಸಂಖ್ಯೆ ಹೆಚ್ಚಾದಂತೆ ಬ್ಯಾರಿಗಳ ಪೈಕಿ ಬಡ ಕುಟುಂಬಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಹಳ್ಳಿಗಳಲ್ಲಿ ಹೆಚ್ಚಿನ ಮುಸ್ಲಿಮರು ದಿನಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಹಲವು ವ್ಯಾಪಾರಿಗಳು ಜಮೀನನ್ನು ಖರೀದಿಸುವ ಮೂಲಕ ಅಥವಾ ಭೂಮಾಲಿಕರಿಂದ ಜಮೀನನ್ನು ಭೋಗ್ಯಕ್ಕೆ ತೆಗೆದುಕೊಳ್ಳುವ ಮೂಲಕ ಬೆಳೆಗಾರರಾಗಿಯೂ ರೈತರಾಗಿಯೂ ಮಾರ್ಪಟ್ಟರು.

ಮುಸ್ಲಿಮರು ಪ್ರಾಮಾಣಿಕರೂ ಶ್ರಮಜೀವಿಗಳೂ ಆಗಿದ್ದರಿಂದ ಸ್ಥಳೀಯ ಭೂಮಾಲೀಕರು ಜಮೀನನ್ನು ಗೇಣಿಗೆ ನೀಡುವ ವಿಚಾರದಲ್ಲಿ ಅವರಿಗೆ ಆದ್ಯತೆ ನೀಡಿದರು. ಒಂದು ದೊಡ್ಡ ಸಂಖ್ಯೆಯ ಮುಸ್ಲಿಮರು ಸಾಂಪ್ರದಾಯಿಕವಾಗಿ ದೋಣಿಗಾರರಾಗಿ ಕೆಲಸ ಮಾಡುತ್ತಿದ್ದರು. ಆರಂಭದ ಶತಮಾನಗಳಲ್ಲಿ ನದಿ ಮತ್ತು ಹಿನ್ನೀರೇ ಸಂಪರ್ಕದ ಜಾಲಗಳಾಗಿದ್ದವು. ದೋಣಿಗಾರರು ಸಾಮಾನ್ಯವಾಗಿ ಬ್ಯಾರಿಗಳು ಅಥವಾ ಮಾಪಿಳ್ಳಗಳಾಗಿರುತ್ತಿದ್ದರು. ಅವರು ಸರಕನ್ನು ಹಳ್ಳಿಗಳಿಂದ ಪಟ್ಟಣಗಳಿಗೆ ಒಯ್ಯುತ್ತಿದ್ದರು. ಪಟ್ಟಣಗಳು ಹೆಚ್ಚಾಗಿ ನದಿ ದಂಡೆಯ ಮೇಲೆ ಇರುತ್ತಿದ್ದವು. ಆರಂಭದ ಶತಮಾನಗಳಿಂದಲೂ ನೇತ್ರಾವತಿ ನದಿ ತಟ ಬಂಟ್ವಾಳ ಮತ್ತು ಪಾಣೆಮಂಗಳೂರುವರೆಗೆ ಹಾಗೂ ಫಲ್ಗುಣಿ ನದಿ ತಟದಲ್ಲಿ ಗುರುಪುರದವರೆಗೆ ಹೆಚ್ಚಾಗಿ ಮುಸ್ಲಿಮರೇ ವಾಸವಾಗಿದ್ದರು. ದೋಣಿಗಳು ಸರಕಿನೊಂದಿಗೆ ಹಳ್ಳಿಗಳಿಗೆ ತೆರಳುತ್ತಿದ್ದವು ಮತ್ತು ಅಲ್ಲಿಂದ ಸರಕನ್ನು ತುಂಬಿಸಿ ಮಂಗಳೂರು ಬಂದರಿಗೆ ವಾಪಸ್ ಬರುತ್ತಿದ್ದರು. ಇದೇ ರೀತಿ ಕುಂಬಳ ಮತ್ತು ಸಿರಿಯ ನದಿಯ ಹಲವು ಹಳ್ಳಿಗಳು, ಮಾರುಕಟ್ಟೆಗಳು ಮತ್ತು ಸಾಗಣೆ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಿದವು.

ಕುಂಬಳೆ ಒಂದು ಒಳ್ಳೆಯ ಬಂದರಾಗಿ ಬೆಳೆದು ಬಂತು. ಸೀತಾ, ಸುವರ್ಣ ಮತ್ತು ಗಂಗೋಳ್ಳಿ ನದಿಗಳು ಬಸ್ರೂರು ಮತ್ತು ಬಾರ್ಕೂರಿನವರೆಗೂ ವ್ಯಾಪಾರಕ್ಕೆ ಮಾರುಕಟ್ಟೆಗಳನ್ನು ಒದಗಿಸಿದವು. ಹಂಗರಕಟ್ಟೆ, ಕುಂದಾಪುರ ಮತ್ತು ಗಂಗೋಳ್ಳಿಯ ಮೂಲಕ ಈ ವಹಿವಾಟು ನಡೆಯುತ್ತಿತ್ತು. ದೋಣಿಗಳು ದಿನನಿತ್ಯದ ಬಳಕೆಗಾಗಿ ಹಳ್ಳಿಗಳಿಂದ ಅಕ್ಕಿ ಮತ್ತು ಒಣ ತೆಂಗಿನ ಕಾಯಿಯನ್ನು ಪಟ್ಟಣಗಳಿಗೆ ಸಾಗಿಸುತ್ತಿದ್ದವು. ದೊಡ್ಡ ಸಂಖ್ಯೆಯ ಬ್ಯಾರಿಗಳು ದೋಣಿಗಾರರಾಗಿ ಕೆಲಸ ಮಾಡುತ್ತಿದ್ದರು. ಈ ಪೈಕಿ ಹೆಚ್ಚಿನವರು ದೋಣಿಯ ಮಾಲಕರು ಆಗಿದ್ದರು. ದೋಣಿಗಳು ಜನರನ್ನು ಮಂಗಳೂರಿನಿಂದ ಅಥವಾ ಬೇರೆ ಪಟ್ಟಣಗಳಿಂದ ಹಳ್ಳಿಗಳಿಗೆ ಒಯ್ಯಲಿಕ್ಕೂ

ಬಳಕೆಯಾಗುತ್ತಿದ್ದವು. ದೋಣಿ ಪ್ರಯಾಣವು ಹತ್ತೊಂಬತ್ತನೇ ಶತಮಾನದಲ್ಲಿ ಜಾರಿಯಲ್ಲಿದ್ದ ಏಕೈಕ ಸಾರಿಗೆ ಸಾಧನವಾಗಿತ್ತು. ಅಂದು ರಸ್ತೆಗಳಾಗಲಿ, ಸೇತುವೆ ಗಳಾಗಲಿ ಇರಲಿಲ್ಲ. ಇದು ಎಲ್ಲ ನದಿಗಳು ಮತ್ತು ಹಿನ್ನೀರಿನಲ್ಲಿ ಸಾಮಾನ್ಯವಾಗಿತ್ತು. ಇಪ್ಪತ್ತನೇ ಶತಮಾನದಲ್ಲಿ ರಸ್ತೆಗಳು ಮತ್ತು ಸೇತುವೆಗಳು ನಿರ್ಮಾಣವಾದವು. ಎತ್ತಿನಗಾಡಿ ಮತ್ತು ಟಾಂಗಾಗಳ ಮೂಲಕ ಕೆಲವು ಸೌಕರ್ಯಗಳು ಪಟ್ಟಣಗಳಲ್ಲಿ ಬಳಕೆಗೆ ಬಂದವು. ಹತ್ತೊಂಬತ್ತನೇಯ ಶತಮಾನದಲ್ಲಿ ಮಣ್ಣಿನ ರಸ್ತೆಗಳು ತಲೆಯೆತ್ತಿದವು ಮತ್ತು ಎತ್ತಿನ ಗಾಡಿಗಳು ಜನಪ್ರಿಯವಾದವು. ಆದರೆ ನದಿಗಳನ್ನು ದಾಟಬೇಕಾಗಿ ಬಂದಾಗ ಫೆರ್ರಿಗಳನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. ಕ್ರಿ.ಶ. 1920ರಲ್ಲಿ ಬಸ್ ಸಾರಿಗೆ ಪ್ರಾರಂಭಗೊಂಡಾಗಲೂ ನದಿ ದಾಟಲು ದೋಣಿಗಳನ್ನೇ ಅವಲಂಬಿಸಬೇಕಾಗಿತ್ತು. ಕುಂಬಳ, ಉಪ್ಪಲ, ಮಂಗಳೂರು, ಮುಲ್ಕಿ, ಉದ್ಯಾವರ ಮತ್ತು ಗಂಗೋಳ್ಳಿಗಳಲ್ಲಿ ಇಂತಹ ದೋಣಿ ಸೇವೆ ಆರಂಭ ಗೊಂಡಿತು. ಬ್ಯಾರಿಗಳೆ ಎಲ್ಲೆಡೆ ದೋಣಿಗಾರರಾಗಿದ್ದಾರೆ. ಹೀಗೆ ದೋಣಿಗಳೇ ಸಾರಿಗೆಯ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು ಹೊಂದಿದ್ದವು. ಗಣ್ಯ ಸಂಖ್ಯೆಯ ಮುಸ್ಲಿಮರು ಇದನ್ನೇ ತಮ್ಮ ವೃತ್ತಿಯಾಗಿ ನೆಚ್ಚಿಕೊಂಡಿದ್ದರು. ದೋಣಿಗಳನ್ನು ಮೀನುಗಾರಿಕೆಗೂ ಬಳಸಲಾಗುತ್ತಿತ್ತು. ಪುಸಲಾರ್‌ಗಳು ಹೆಚ್ಚಾಗಿ ಮೀನುಗಾರಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೊಗವೀರರೂ, ಖಾರ್ವಿಗಳು ಮತ್ತು ಮರಕಲರಂತೆ ಪುಸಲಾರ್‌ಗಳು ಕೂಡಾ ಸಮುದ್ರದ ಮಕ್ಕಳಂತೆ ಜೀವಿಸಿದರು. ಅವರು ಮುಸ್ಲಿಮರ ಮಧ್ಯೆ ಪ್ರತ್ಯೇಕ ಗುಂಪನ್ನು ಕಟ್ಟಿಕೊಂಡರು. ಆದರೂ ಅವರಿಗೆ ಬೇರೆ ಮುಸ್ಲಿಮರಂತೆ ಸಮಾನವಾದ ಹಕ್ಕುಗಳಿದ್ದವು. ತಮ್ಮದೇ ವೃತ್ತಿಯಲ್ಲಿ ತೊಡಗಿರುವ ಇತರ ಜಾತಿಗಳ ಜನರೊಂದಿಗೆ ಅವರು ಬೇರೆತು ಜೀವಿಸುತ್ತಿದ್ದರು. ಕುಂಬಳ ಪುಸಲಾರ್‌ಗಳು ಈಗಲೂ ಮುಸ್ಲಿಂ ಮೀನುಗಾರರ ಒಂದು ಪ್ರಮುಖ ಕೇಂದ್ರವಾಗಿದೆ. ಹೆಚ್ಚಾಗಿ ಅವರು ವ್ಯಾಪಾರಕ್ಕಾಗಿ ಅಥವಾ ಮನೋರಂಜನೆಗಾಗಿ ಸ್ಥಳೀಯ ನದಿಗಳಲ್ಲಿ ಮೀನು ಹಿಡಿಯುತ್ತಿದ್ದರು.

ಪ್ರತಿಯೊಂದು ಕುಟುಂಬವು ಒಂದು ಮೀನು ಹಿಡಿಯುವ ಬಲೆ, ಕೊಕ್ಕೆ ಮತ್ತು ಬೋನು (ಕುಜೆ) ಹೊಂದಿರುತ್ತಿದ್ದವು. ಕೆಲವೊಮ್ಮೆ ಅವರು ರಾತ್ರಿಯ ವೇಳೆ ಪಂಜು ಹಿಡಿದು ನದಿಯ ತೀರದಲ್ಲಿ ಮೀನು ಹಿಡಿಯುತ್ತಿದ್ದರು. ಪಂಜಿನ ಬೆಳಕಿಗೆ ಆಕರ್ಷಿತವಾಗಿ ಕೆಲವು ಮೀನುಗಳು ಆಳವಿಲ್ಲದ ನೀರಿನಲ್ಲಿ ಬಂದು ಸೇರುತ್ತಿದ್ದವು. ಮೀನುಗಾರರು ತಮ್ಮ ಖಡ್ಗ ಮತ್ತು ಕತ್ತಿಯಿಂದ ಅವುಗಳನ್ನು ಸೀಳಿ ತಮಗೆ ದೊರೆತ ಮೀನನ್ನು ಬುಟ್ಟಿಗೆ ಹಾಕುತ್ತಿದ್ದರು. ಇಪ್ಪತ್ತನೆ ಶತಮಾನದ

ಹೊತ್ತಿಗೆ ನದಿಗಳಲ್ಲಿ ಮೀನು ಹಿಡಿಯಲು ಡೈನಮೈಟ್ ಬಳಕೆ ಮಾಡುವ ಪ್ರವೃತ್ತಿ ಆರಂಭಗೊಂಡಿತು. ಸಣ್ಣ ಗಾತ್ರದ ಡೈನಮೈಟನ್ನು ನೀರಿನೊಂದಿಗೆ ಸ್ಫೋಟಿಸುವ ಮೂಲಕ ಭಾರಿ ಸಂಖ್ಯೆಯ ಮೀನುಗಳು ಸತ್ತು ಹೋಗುತ್ತಿದ್ದವು. ನೀರಿಗೆ ಹಾರಿ ಈ ಮೀನುಗಳನ್ನು ಹಿಡಿಯಲಾಗುತ್ತಿತ್ತು. ಮಂಗಳೂರು ಮತ್ತು ಕಾಸರಗೋಡು ತಾಲೂಕುಗಳ ಬ್ಯಾರಿಗಳಲ್ಲಿ ಈ ಮೀನುಗಾರಿಕಾ ಹವ್ಯಾಸವೂ ಹೆಚ್ಚಾಗಿ ಕಂಡು ಬರುತ್ತದೆ. ನಗರ ಪ್ರದೇಶಗಳಲ್ಲಿ ಇಂತಹ ಅಭ್ಯಾಸಗಳು ಅಷ್ಟಾಗಿ ಕಂಡು ಬರುತ್ತಿರಲಿಲ್ಲ. ಮುಸ್ಲಿಮರ ಮಟ್ಟಿಗೆ ಮೀನು ವ್ಯಾಪಾರವು ಅತ್ಯಂತ ಜನಪ್ರಿಯ ವಾಣಿಜ್ಯ ಚಟುವಟಿಕೆಯಾಗಿತ್ತು. ದೋಣಿ ತುಂಬಾ ಮೀನುಗಳನ್ನು ತುಂಬಿ ದೂರದ ಹಳ್ಳಿ ಮತ್ತು ಪಟ್ಟಣಗಳಿಗೆ ಸಾಗಿಸಿ ಮಾರಾಟ ಮಾಡುವುದು ಒಂದು ಸಾಮಾನ್ಯ ದೃಶ್ಯವಾಗಿತ್ತು. ನದಿ ತಟದಲ್ಲಿರುವ ಪ್ರತಿಯೊಂದು ಹಳ್ಳಿಯಲ್ಲೂ ಮಸೀದಿಯ ಪಕ್ಕ ಸಾಮಾನ್ಯವಾಗಿ ಒಂದು ಮಾರುಕಟ್ಟೆ ಇರುತ್ತದೆ. ಅವರು ಅಲ್ಲಿ ಮೀನುಗಳನ್ನು ಮಾರುತ್ತಿದ್ದರು. ಇದಕ್ಕೆ ಪ್ರತಿಯಾಗಿ ಅವರು ಅಕ್ಕಿ ಮತ್ತು ಇತರ ವಸ್ತುಗಳನ್ನು ಪಟ್ಟಣಗಳಿಗೆ ಒಯ್ಯುತ್ತಿದ್ದರು. ಸಾಮಾನ್ಯವಾಗಿ ಮೀನನ್ನು ಅಕ್ಕಿ ಮತ್ತು ತೆಂಗಿನಕಾಯಿಯ ಬದಲಾಗಿ ವಿನಿಮಯ ಮಾಡಲಾಗುತ್ತಿತ್ತು. ಇದನ್ನು ಅವರು ಪಟ್ಟಣಗಳಲ್ಲಿ ಮಾರಾಟ ಮಾಡುತ್ತಿದ್ದರು. ಹಳ್ಳಿಯಲ್ಲಿ ಮೀನಿನ ಮಾರಾಟ ಮತ್ತು ಪಟ್ಟಣದಲ್ಲಿ ಅಕ್ಕಿ ಮತ್ತು ತೆಂಗಿನಕಾಯಿಯ ಮಾರಾಟ, ಹೀಗೆ ಎರಡೆರಡು ವ್ಯಾಪಾರಗಳು ಏಕಕಾಲಕಕೆ ನಡೆಯುಯತ್ತಿದ್ದುದರಿಂದ ಈ ವ್ಯಾಪಾರದ ಮೂಲಕ ಅವರು ದುಪ್ಪಟ್ಟು ಲಾಭ ಸಂಪಾದಿಸುತ್ತಿದ್ದರು. ದೋಣಿಯಲ್ಲಿ ಜಾಗ ಉಳಿದಿದ್ದರೆ ಕೆಲವೊಮ್ಮೆ ಪಟ್ಟಣಗಳಿಗೆ ಪ್ರಯಾಣಿಕರನ್ನೂ ಕೊಂಡೊಯ್ಯುತ್ತಿದ್ದರು. ಇಂತಹ ಪ್ರತಿಯೊಬ್ಬ ಮೀನು ವ್ಯಾಪಾರಿಯೂ ಒಳ್ಳೆಯ ವರಮಾನ ಹೊಂದಿದ್ದ ಹಿನ್ನೀರಿನಲ್ಲಿಯೂ ದೋಣಿಗಳು ಸಂಚರಿಸುತ್ತಿದ್ದುದರಿಂದ ಇದೇ ರೀತಿಯ ವ್ಯಾಪಾರ ಅಲ್ಲೂ ನಡೆಯುತ್ತಿತ್ತು. ಆರಂಭದ ಶತಮಾನದಲ್ಲಿ ಅಕ್ಕಿಯು ಪ್ರಮುಖ ವ್ಯಾಪಾರದ ಸರಕು ಆಗಿತ್ತು. ಅದನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಲಬಾರ್, ಮೂಲ್ಕಿ ಮುಂಬೈ, ಕುಂಬಳ, ಮಂಜೇಶ್ವರ, ಮಂಗಳೂರು, ಹಂಗರಕಟ್ಟೆ ಮತ್ತು ಬಸ್ರೂರು ಪ್ರಮುಖ ಬಂದರುಗಳಾಗಿದ್ದವು.

ಜಿಲ್ಲೆಯೊಳಗೆ ಬಾರಿ ಸಂಖ್ಯೆಯ ಜನರು ಅಕ್ಕಿಯ ವ್ಯಾಪಾರದಲ್ಲಿ ತೊಡಗಿದರು. ಪ್ರತಿಯೊಂದು ಜಿನಸು ಅಂಗಡಿಯಲ್ಲೂ ಅಕ್ಕಿಯ ವ್ಯಾಪಾರ ನಡೆಯುತ್ತಿತ್ತು. ಹಲವಾರು ಮುಸ್ಲಿಮರು ಅಕ್ಕಿ ವ್ಯಾಪಾರಿಗಳಾಗಿ ಬೆಳೆದು ಬಂದರು. ಅಕ್ಕಿಯನ್ನು ಹಳ್ಳಿಗಳಿಂದ ಸಂಗ್ರಹಿಸಿ ಬಂಡಸಾಲೆಗಳಲ್ಲಿ ದಾಸ್ತಾನು ಇಡಲಾಗುತ್ತಿತ್ತು. ಹಲವು

ಶ್ರೀಮಂತ ಮುಸ್ಲಿಂ ವ್ಯಾಪಾರಿಗಳು ದೊಡ್ಡ ದೊಡ್ಡ ಬಂಡಸಾಲೆಗಳನ್ನು ಹೊಂದಿದ್ದರು. ಹಲವು ಮುಸ್ಲಿಮರು ಬಂಡಸಾಲೆಯೆಂಬ ಅಡ್ಡ ಹೆಸರನ್ನು ಹೊಂದಿದ್ದರು.

ಉದಾ: ಬಂಡಸಾಲೆ ಕಾದ್ರಿ ಬ್ಯಾರಿ, ಬಂಡಸಾಲೆ ಇಬ್ರಾಹಿಂ ಬ್ಯಾರಿ ಇತ್ಯಾದಿ. ಬಂದರಿಗೆ ಬಂದ ಸರಕುಗಳನ್ನು ಹಡಗುಗಳಿಗೆ ತುಂಬಿಸಲು ಸಜ್ಜಾಗಿ ಇಡಲಾಗುತ್ತಿತ್ತು. ಇಂತಹ ಲೋಡಿಂಗ್ ಜಾಗಗಳನ್ನು ಪಾಂಡ್ಯಾಲ್‌ಗಳು ಎಂದು ಕರೆಯಲಾಗುತ್ತಿತ್ತು. ಹೆಚ್ಚಿನ ಬಂದರುಗಳು ಇಂತಹ ಪಾಂಡ್ಯಾಲ್‌ಗಳನ್ನು ಹೊಂದಿದ್ದವು. ಇವು ವರ್ತಕರ ವೈಯಕ್ತಿಕ ಮಾಲಕತ್ವಕ್ಕೆ ಒಳಪಟ್ಟಿತ್ತು. ಮೊಗ್ರಾಲ್ ಕುಂಞಿಪಕ್ಕಿಗೆ ಕುಂಬಳೆಯಲ್ಲಿ ಪಾಂಡ್ಯಾಲ್‌ಗಳಿದ್ದವು. ಮಮ್ಮಿ ಸೂಫಿ ಬ್ಯಾರಿಗೆ ಮಂಜೇಶ್ವರದಲ್ಲಿ ಪಾಂಡ್ಯಾಲ್ ಇತ್ತು. ಇತರೆಡೆಗಳಲ್ಲೂ ಇಂತಹ ಪಾಂಡ್ಯಾಲ್ ಗಳಿದ್ದವು. ಆದರೆ ಆಧುನಿಕ ಕಾಲದಲ್ಲಿ ಪಾಂಡ್ಯಾಲುಗಳು ಮತ್ತು ಬಂಡಸಾಲೆಗಳು ತಮ್ಮ ಮಹತ್ವವನ್ನು ಕಳೆದುಕೊಂಡಿವೆ.

ತೆಂಗು ಇನ್ನೊಂದು ವ್ಯಾಪಾರದ ಸರಕಾಗಿತ್ತು. ಮಲಬಾರ್‌ನಂತೆಯೇ ತುಳುನಾಡು ಜಿಲ್ಲೆಯಲ್ಲೂ ತುಂಬಾ ತೆಂಗಿನ ತೋಪುಗಳಿದ್ದವು ಮತ್ತು ಇದರಿಂದಾಗಿ ಇಡೀ ಜಿಲ್ಲೆಯೇ ಒಂದು ಉದ್ಯಾನ ತೀರದಂತೆ ಕಾಣುತ್ತಿತ್ತು. ಮರಳು ಮಣ್ಣು ಈ ಬೆಳೆಗೆ ಅತ್ಯಂತ ಸೂಕ್ತವಾಗಿದ್ದು, ನದಿ ನೀರು ಸಮಂಜಸ ನೆಲವನ್ನು ಒದಗಿಸಿತ್ತು. ತೆಂಗಿನ ತೋಪಿನ ಬಹುಪಯೋಗಿ ಗುಣದಿಂದಾಗಿ ಅದನ್ನು ಕಲ್ಪವೃಕ್ಷ ವೆಂದೂ ಕರೆಯಲಾಗುತ್ತಿತ್ತು. ತೆಂಗಿನ ಮರವು ಮನೆ ನಿರ್ಮಾಣಕ್ಕೆ ಅಗತ್ಯವಿರುವ ಅಡ್ಡಗ ಮತ್ತು ಪಕ್ಕಾಸಿಗೆ ಬಳಕೆಯಾಗುತ್ತಿದೆ. ಜೊತೆಗೆ ಮನೆಯ ಹಂಚಾಗಿ, ಉರುವಲಾಗಿ, ಖಾದ್ಯ ತೈಲವಾಗಿ, ಲೇಪನವಾಗಿ ಮತ್ತು ಸಿಹಿ ತಿನಿಸಿನಲ್ಲೂ ಸೇಂದಿ ಮತ್ತು ಮದ್ಯದ ತಯಾರಿಕೆಯಲ್ಲೂ ಇದು ಬಳಕೆಯಾಗುತ್ತಿದೆ. ತೆಂಗು ಅತ್ಯಮೂಲ್ಯವಾದ ಮರ. ಹೆಚ್ಚಿನ ಹಳ್ಳಿಗಳಲ್ಲಿ ಎತ್ತನ್ನು ಬಳಸಿ ಎಣ್ಣೆಯ ಗಾಣಗಳನ್ನು ನಡೆಸಲಾಗುತ್ತಿತ್ತು. ಎಣ್ಣೆಗೆ ಸ್ಥಳೀಯ ಮಟ್ಟದಲ್ಲಿ ಮಾರುಕಟ್ಟೆ ಇತ್ತು. ಒಣಗಿದ ಕೊಬ್ಬರಿಯನ್ನು ಕೊಪ್ಪರ ಎಂದು ಕರೆಯಲಾಗುತ್ತಿತ್ತು. ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಇದು ಅತ್ಯಂತ ಮುಖ್ಯ ರಫ್ತು ಪದಾರ್ಥವಾಗಿತ್ತು. ಮುಂಬೈ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಒಣ ಕೊಬ್ಬರಿಗೆ ಒಳ್ಳೆಯ ಮಾರುಕಟ್ಟೆ ಇತ್ತು.

ಕಬ್ಬು ಜಿಲ್ಲೆಯ ಇನ್ನೊಂದು ಸಾಮಾನ್ಯ ಬೆಳೆಯಾಗಿತ್ತು. ಅದನ್ನು ಹೆಚ್ಚಾಗಿ ಬೆಲ್ಲದ ಉತ್ಪಾದನೆಗಾಗಿ ಬೆಳೆಯಲಾಗುತ್ತಿತ್ತು. ಬೆಲ್ಲ ಅಂದು ಚಹಾ ಕಾಫಿಗಳಿಗೆ ಬೆಲ್ಲ ಬಳಸಲಾಗುತ್ತಿತ್ತು. ಉಳ್ಳಾಲ, ಕೂಳೂರು ಮತ್ತು ಉಡುಪಿಯಲ್ಲಿ ಅದನ್ನು

ಬೆಳೆಸಲಾಗುತ್ತಿತ್ತು. ಇದಲ್ಲದೆ ತರಕಾರಿಗಳು, ಧಾನ್ಯ, ಬೇಳೆ ಮತ್ತಿತರ ಸ್ಥಳೀಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿದ್ದವು. ಮೂಡಬಿದ್ರೆ, ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರಗಳಲ್ಲಿ ವಾರದ ಸಂತೆ ನಡೆಯುತ್ತಿತ್ತು. ಬ್ಯಾರಿಗಳು ಈ ಸಂತೆಗಳಲ್ಲಿ ಭಾಗವಹಿಸುತ್ತಿದ್ದರು. ಸಾಮಾನ್ಯವಾಗಿ ಈ ಸಂತೆಗಳಲ್ಲಿ ತೆಂಗಿನಕಾಯಿ, ಮೆಣಸು, ಅಕ್ಕಿ ಮತ್ತು ತರಕಾರಿ ಮಾರಾಟವಾಗುತ್ತಿತ್ತು. ದರ್ಗಾಗಳಲ್ಲಿ ನಡೆಯುತ್ತಿದ್ದ ಉರೂಸು ಹಾಗೂ ಭೂತ ಸ್ಥಾನಗಳಲ್ಲಿ ನಡೆಯುತ್ತಿದ್ದ ನೇಮಗಳ ಸಂದರ್ಭದಲ್ಲೂ ಹೆಚ್ಚುವರಿಯಾಗಿ ಸಂತೆಗಳು ನಡೆಯುತ್ತಿದ್ದವು. ಇಪ್ಪತ್ತನೇ ಶತಮಾನದ ಆರಂಭದ 1930 ಘಟ್ಟದಲ್ಲಿ ಈ ಪ್ರವೃತ್ತಿ ಸಾಮಾನ್ಯವಾಗಿತ್ತು. ಮುಸ್ಲಿಂ ವರ್ತಕರು ಜಾತ್ರೆಗಳಲ್ಲು ನಿರಂತರವಾಗಿ ಭಾಗವಹಿಸುತ್ತಿದ್ದರು. ಜಾನುವಾರು ಮೇಳಗಳನ್ನು ಆಯೋಜಿಸಲಾಗುತ್ತಿತ್ತು. ಸುಬ್ರಹ್ಮಣ್ಯದ ಬಳಿಯ ಕುಲ್ಕುಂದಾದಲ್ಲಿ ನಡೆಯುತ್ತಿದ್ದ ಸೀತಾನದಿ ಜಾನುವಾರು ಜಾತ್ರೆ ತುಂಬಾ ಪ್ರಸಿದ್ಧವಾಗಿತ್ತು. ಬ್ಯಾರಿಗಳು ಭಾರಿ ಸಂಖ್ಯೆಯ ಜಾನುವಾರುಗಳನ್ನು ಖರೀದಿಸಿ ಊರೂರು ಅಲೆದಾಡುತ್ತಿದ್ದರು. ಅವರು ಹಳ್ಳಿಗರಿಂದಲೂ ಜಾನುವಾರುಗಳನ್ನು ಖರೀದಿಸುತ್ತಿದ್ದರು. ಆಡುಗಳಿಗೆ ಭಾರಿ ಬೇಡಿಕೆಯಿತ್ತು. ಹೆಚ್ಚಾಗಿ ಬ್ಯಾರಿಗಳು ಜಾನುವಾರುಗಳ ವ್ಯಾಪಾರ ಮಾಡುತ್ತಿದ್ದರು.

**ಟೇಬಲ್ 5. ಮಾರುಕಟ್ಟೆಯ ನೋಟ (1800–1945)**

| | | | | |
|---|---|---|---|---|
| 1. | ಅಕ್ಕಿ | ರಫ್ತು | ಮುಂಬೈ ಅರೇಬಿಯಾ | ಮಾಲ್ದೀವ್ಸ್ ಮತ್ತು ಯುರೋಪ್ |
| 2. | ಕೊಬ್ಬರಿ | ಮೇಲಿನಂತೆಯೇ | ಮೇಲಿನಂತೆಯೇ | ಮೇಲಿನಂತೆಯೇ |
| 3. | ಸಾಂಬಾರ ಪದಾರ್ಥಗಳು | ಮೇಲಿನಂತೆಯೇ | – | ಮೇಲಿನಂತೆಯೇ |
| 4. | ಮೀನು | ಮೇಲಿನಂತೆಯೇ | ಮುಂಬೈ | ಮೇಲಿನಂತೆಯೇ ಮತ್ತು ಸಿಲೋನ್ |
| 5. | ಚಿನ್ನ, ಬಟ್ಟೆ ಇತ್ಯಾದಿ | ಆಮದು | ಮುಂಬೈ | ಅರೇಬಿಯಾ ಮತ್ತು ಯುರೋಪ್ |
| 6. | ಕಬ್ಬು | – | ಸ್ಥಳೀಯ ಮಾರುಕಟ್ಟೆ | – |
| 7. | ಖರ್ಜೂರ | ಆಮದು | – | ಅರೇಬಿಯಾ |

ಮುಸ್ಲಿಮರು ಒಳ್ಳೆಯ ಉದ್ಯಮಿಗಳಾಗಿರುವಂತೆಯೇ ಬುದ್ಧಿವಂತ ವ್ಯಾಪಾರಿಗಳೂ ಹೌದು. ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಅವರು ಜಿನಸಿ ಅಂಗಡಿಗಳನ್ನು ತೆರೆದರು.

ಇದು ಮುಸ್ಲಿಮರ ಪ್ರಮುಖ ವ್ಯಾಪಾರವಾಗಿತ್ತು. ಅಕ್ಕಿ, ಬೇಳೆ ಮತ್ತು ಬೆಲ್ಲ ಈ ಅಂಗಡಿಗಳಲ್ಲಿ ಮಾರಾಟಕ್ಕಿರುತ್ತಿದ್ದವು. ಹಳ್ಳಿಗಳಲ್ಲಿದ್ದ ಜಮೀನ್ದಾರರೂ ಕೂಡಾ ಬಿಡುವಿನ ವೇಳೆಯಲ್ಲಿ ಈ ವ್ಯಾಪಾರವನ್ನು ಆರಂಭಿಸಿದರು. ಈ ವ್ಯಾಪಾರಿಗಳು ಕೇವಲ ಸರಕುಗಳನ್ನು ಮಾರಾಟ ಮಾಡುವುದರ ಜೊತೆಗೆ ತಮ್ಮ ಪ್ರದೇಶದಲ್ಲಿ ದೊರೆಯುವ ಉತ್ಪನ್ನಗಳಾದ ಅಕ್ಕಿ, ತೆಂಗಿನಕಾಯಿ, ಅಡಿಕೆ ಮತ್ತು ಗೋಡಂಬಿಯನ್ನು ಖರೀದಿಸುತ್ತಲೂ ಇದ್ದರು. ಒಂದು ರೀತಿಯಲ್ಲಿ ಈ ಅಂಗಡಿಗಳು ಮಾರಾಟ ಮತ್ತು ಖರೀದಿಗಳೆರಡರ ಕೇಂದ್ರವೂ ಆಗಿದ್ದವು. ಸರಕಿನ ವಿನಿಮಯ ಕೂಡಾ ಇಲ್ಲಿ ಸಾಮಾನ್ಯವಾಗಿತ್ತು. 19ನೇ ಶತಮಾನದಲ್ಲಿ ಈ ಬಗೆಯ ವ್ಯಾಪಾರ ಬ್ಯಾರಿಗಳ ಏಕಸ್ವಾಮ್ಯದಲ್ಲಿತ್ತು. ನಂತರ ಇತರ ಸಮುದಾಯದವರೂ ಈ ಬಗೆಯ ವ್ಯಾಪಾರಗಳನ್ನು ಆರಂಭಿಸಿದರು.

ಬಟ್ಟೆ ವ್ಯಾಪಾರ 19ನೇ ಶತಮಾನದಲ್ಲಿ ನವಾಯತರು ಮತ್ತು ಮೇಮನ್‌ಗಳ ಏಕಸ್ವಾಮ್ಯದಲ್ಲಿತ್ತು. ಮಂಗಳೂರಿನಲ್ಲಿ ಅವರೇ ಮುಖ್ಯ ಬಟ್ಟೆ ವ್ಯಾಪಾರಿಗಳು. ದಾದಾ ಹಾಜಿ ಇವರಲ್ಲಿ ಪ್ರಖ್ಯಾತರು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಕೊಂಕಣಿಗಳು ಮತ್ತು ಇತರ ಸಮುದಾಯದವರು ಈ ವ್ಯಾಪಾರಕ್ಕೆ ಪ್ರವೇಶ ಪಡೆದರು. ಆದರೆ ಹಳ್ಳಿಗಳಲ್ಲಿ ಈಗಲೂ ಮುಸ್ಲಿಂ (ಬ್ಯಾರಿ) ಬಟ್ಟೆ ವ್ಯಾಪಾರಿಗಳದ್ದೇ ಪಾರಮ್ಯ.

ಹೊಟೇಲುಗಳು ಮುಸ್ಲಿಮರು ನಡೆಸುತ್ತಿದ್ದ ಮತ್ತೊಂದು ಮುಖ್ಯ ಉದ್ಯಮ. ಪಟ್ಟಣ ಮತ್ತು ಗ್ರಾಮೀಣ ಭಾಗಗಳೆರಡಲ್ಲೂ ಮುಸ್ಲಿಮರು ನಡೆಸುವ ಹೊಟೇಲುಗಳು ವ್ಯಾಪಕವಾಗಿವೆ. ಆದರೂ ಈ ಉದ್ಯಮ ಬ್ರಾಹ್ಮಣರ ಏಕಸಾಮ್ಯದಲ್ಲಿದೆ. ಸಣ್ಣ ಟೀ ಅಂಗಡಿಗಳು ಮತ್ತು ಮೀನು ಊಟದ ಹೊಟೇಲುಗಳನ್ನು ಮುಸ್ಲಿಮರು ನಡೆಸುತ್ತಾರೆ. ಮಂಗಳೂರಿನಲ್ಲಿರುವ ಭಟ್ಕಳೀ ಹೋಟೇಲುಗಳು ತಮ್ಮ ರುಚಿಕರ ಬಿರಿಯಾನಿಯಾಗೆ ಪ್ರಸಿದ್ಧವಾಗಿದೆ.

1930ರಲ್ಲಿ ಬೀಡಿ ಉದ್ಯಮ ವ್ಯಾಪಕವಾಯಿತು. ಬೀಡಿಗೆ ಬಂದ ಬೇಡಿಕೆಯಿಂದಾಗಿ ಈ ಉದ್ಯಮ ಬಹುವೇಗವಾಗಿ ಅಭಿವೃದ್ಧಿ ಹೊಂದಿತು. ಬೀಡಿ ಉದ್ಯಮದಲ್ಲಿ ಕಾರ್ಮಿಕರಾಗಿ ದುಡಿಯುವುದು ಮುಸ್ಲಿಮರಿಗೆ ಅನಿವಾರ್ಯವಾಯಿತು. ಇದಕ್ಕೆ ಹಲವು ಕಾರಣಗಳಿವೆ. ವ್ಯಾಪಾರ ಮತ್ತು ಉದ್ದಿಮೆಗಳಲ್ಲಿ

ಕಾರ್ಖಾನೆಗಳು ಮತ್ತು ಮರದ ನಾಟಾ ವ್ಯಾಪಾರ ಆ ಕಾಲದಲ್ಲಿ ಅಷ್ಟೇನೂ ಮಹತ್ವ ಪಡೆದಿರಲಿಲ್ಲ. ಹಂಚು ತಯಾರಿಕಾ ಉದ್ಯಮವನ್ನು ಪರಿಚಯಿಸಿದ್ದು ಪಶ್ಚಿಮದ ದೇಶಗಳು. ಈ ಉದ್ಯಮದಲ್ಲಿ ಕ್ರೈಸ್ತರು ಮುಂಚೂಣಿಯಲ್ಲಿದ್ದರು. 20ನೇ ಶತಮಾನದಲ್ಲಿ ಕೆಲವು ಶ್ರೀಮಂತ ಮುಸ್ಲಿಮರು ಈ ಕ್ಷೇತ್ರಕ್ಕೆ ಪ್ರವೇಶ ಪಡೆದು ಯಶಸ್ವಿಯಾದರು. ಇಟ್ಟಿಗೆ ತಯಾರಿಕೆ ಎಲ್ಲಾ ನದಿ ತಟಗಳನ್ನೂ ವ್ಯಾಪಿಸಿತ್ತು.

ಕ್ರಮೇಣ ಇದು ಬ್ಯಾರಿಗಳ ಉದ್ದಿಮೆಯಾಯಿತು. 19 ಮತ್ತು 20ನೇ ಶತಮಾನ ದಲ್ಲಿ ಅಡ್ಯಾರ್ ಕಣ್ಣೂರು, ಗುರುಪುರ ನದಿ ದಂಡೆಗಳಲ್ಲಿ ಇಟ್ಟಿಗೆ ತಯಾರಿಕಾ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದ ಅನೇಕ ಬ್ಯಾರಿಗಳಿದ್ದರು. 20ನೇ ಶತಮಾನದಲ್ಲಿ ಮರದ ನಾಟಾದ ವ್ಯಾಪಾರ ಬ್ಯಾರಿಗಳನ್ನು ಆಕರ್ಷಿಸಿತು. ಕೆಲವು ನಾಟಾ ವ್ಯಾಪಾರಿಗಳು ದೊಡ್ಡ ಉದ್ಯಮಿಗಳಾಗಿ ಬೆಳೆದರು. ನಾಟಾದ ವ್ಯಾಪಾರ ಅಥವಾ ಹಂಚು ತಯಾರಿಕೆಯ ಜೊತೆಗೆ ಮುಸ್ಲಿಮರಿಗೆ ಯಾವುದೇ ಪಾರಂಪರಿಕ ಸಂಬಂಧಗಳಿರಲಿಲ್ಲ.

ಗಮನಾರ್ಹ ಸಂಖ್ಯೆಯ ಮುಸ್ಲಿಮರು ಹೊರಗೆ ಹೋಗಿ ಉದ್ಯೋಗ ಮತ್ತು ವ್ಯಾಪಾರಗಳನ್ನು ಹುಡುಕಿಕೊಳ್ಳಲು ಆರಂಭಿಸಿದರು. 19ನೆ ಶತಮಾನದಲ್ಲಿ ಮುಸ್ಲಿಮ್ ಯುವಕರು ಉದ್ಯೋಗ ಅರಸಿ ಮುಂಬೈಗೆ ಪ್ರಯಾಣ ಬೆಳೆಸಲಾರಂಭಿಸಿದರು. ಗಮನಾರ್ಹ ಸಂಖ್ಯೆಯ ಯುವಕರು ಮುಂಬೈ ಮಲೆನಾಡು ಮತ್ತು ಕೊಡಗುಗಳಲ್ಲಿ ತಮ್ಮ ಬದುಕು ಕಂಡುಕೊಂಡರು. ಮುಂಬೈಗೆ ಹೋದವರು ಹೊಟೇಲ್‌ಗಳು ಮತ್ತು ಅಂಗಡಿಗಳಲ್ಲಿ ಉದ್ಯೋಗ ಕಂಡುಕೊಂಡರೆ, ಮಲೆನಾಡು ಮತ್ತು ಕೊಡಗಿಗೆ ಹೋದವರು ತೋಟ ಕಾರ್ಮಿಕರಾಗಿ ಬದುಕು ಆರಂಭಿಸಿದರು.

ಕಾಸರಗೋಡಿನಿಂದ ಉಡುಪಿಯ ತನಕದ ಕರಾವಳಿಯ ಅನೇಕರು ಹಡಗು ಗಳಲ್ಲಿ ನಾವಿಕರಾಗಿ ಉದ್ಯೋಗ ಪಡೆದರು. 20ನೆ ಶತಮಾನದ ಪೂರ್ವಾರ್ಧದಲ್ಲಿ ಹಡಗಿನಲ್ಲಿ ನಾವಿಕರಾಗಿ ದುಡಿಯುವುದು ಮುಸ್ಲಿಮರ ಸಾಮಾನ್ಯ ಉದ್ಯೋಗ ವಾಗಿತ್ತು. ಈ ಉದ್ಯೋಗದಲ್ಲಿ ಬ್ಯಾರಿಗಳು ಮತ್ತು ಹನಫಿಗಳಿಬ್ಬರೂ ಸಮಾನ ಆಸಕ್ತಿಯಲ್ಲಿ ತೊಡಗಿಸಿಕೊಂಡಿದ್ದರು. ಈ ಕಾಲಘಟ್ಟದಲ್ಲಿ ಹೆಚ್ಚಿನ ಮುಸ್ಲಿಂ ಯುವಕರು ನಾವಿಕರಾಗಿ ದುಡಿಯುವುದು ಇಲ್ಲವೇ ಮುಂಬೈಯಲ್ಲಿ ಉದ್ಯೋಗ ಕಂಡುಕೊಳ್ಳುವುದನ್ನು ಅದ್ಯತೆಗಾಗಿ ಪರಿಗಣಿಸಿದ್ದರು.

ಸಾಮಾನ್ಯವಾಗಿ ವ್ಯಾಪಾರ ವಹಿವಾಟಿನಲ್ಲಿ ಕಲೆಯ ಜೊತೆಗೆ ಭಾಷೆಯು ಕೂಡಾ ಮಹತ್ವವಾದ ಸ್ಥಾನಮಾನವನ್ನು ಒಳಗೊಂಡಿದೆ. ಬ್ಯಾರಿ ಜನರು ತಮ್ಮ

ಭಾಷೆಯ ಮೂಲಕ ಜನರನ್ನು ಆಕರ್ಷಿಸುತ್ತಿದ್ದರು. ಇವರು ಇನ್ನಿತರ ಭಾಷೆ ಬಲ್ಲವರಾದ ಕಾರಣ, ವ್ಯಾಪಾರವನ್ನು ಸುಲಭವಾಗಿ ನಿಭಾಯಿಸುತ್ತಿದ್ದರು. ಭಾಷೆ ಇವರಿಗೆ ಒಂದು ಆಯುಧ, ಬ್ಯಾರಿ ಭಾಷೆಯ ಸೌಂದರ್ಯದಿಂದಾಗಿ ಜನರನ್ನು ಅವರೆಡೆಗೆ ಸೆಳೆಯುವ ಕಲೆ ಈ ಬ್ಯಾರಿಗಳಲ್ಲಿವೆ. ಇಂದಿಗೂ ಕೂಡ ವ್ಯಾಪಾರದಲ್ಲಿ ಬ್ಯಾರಿಗಳು ತಮ್ಮ ಸ್ಥಾನಮಾನವನ್ನು ಒಳಗೊಂಡಿದ್ದಾರೆ. ಹಿಂದಿನ ಶತಮಾನದಲ್ಲಿ ವ್ಯಾಪಾರವನ್ನು ಬಟ್ಟೆ ಬರಹದ ಮೂಲಕವೇ ನಡೆಸುತ್ತಿದ್ದರು. ಆದರೆ ಇತಿಹಾಸಕಾರರು ಕ್ರಿ.ಶ. 9ನೇ ಶತಮಾನದಿಂದ 12ನೇ ಶತಮಾನದ ತನಕ ಬ್ಯಾರಿಗಳು ಈ ಬಟ್ಟೆಬರಹ ಲಿಪಿಯನ್ನೇ ತಮ್ಮ ದಿನಚರಿ ಪಟ್ಟಿಲಯಲ್ಲಿ ಮತ್ತು ವ್ಯಾಪಾರ ವಹಿವಾಟಿನಲ್ಲಿ ಬಳಸುತ್ತಿದ್ದಾರೆಂಬುದನ್ನು ಎಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ.

1937ರಲ್ಲಿ ಬಟ್ಟೆಬರಹ ಲಿಪಿಯನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಈ ಬಟ್ಟೆ ಬರಹ ಅರಬಿ–ಬ್ಯಾರಿ ಅಥವಾ ಅರಬಿ–ಮಲಯಾಳ ಭಾಷೆಯಾಗಿರಬಹುದೆಂದು ಅಭಿಪ್ರಾಯವಿದೆ.

ಪ್ರಸ್ತುತ ಬ್ಯಾರಿಗಳು ರಾಜಕೀಯದಲ್ಲೂ ತಮ್ಮ ಸ್ಥಾನಮಾನ ಪಡೆದು ಕೊಂಡಿದ್ದಾರೆ. ಹಲವು ಸಂಘಟನೆಗಳನ್ನೂ ಸಹ ಕಾಣಬಹುದಾಗಿದೆ. ಸಮಾಜ ಸೇವೆ ಶೋಷಣೆಯ ವಿರುದ್ಧ, ಭ್ರಷ್ಟಾಚಾರ ನಿರ್ಮೂಲನೆಯ ವಿರುದ್ಧ, ಸಮಾಜದಲ್ಲಿ ನಡೆಯುವ ಹಲವು ತೊಂದರೆ, ಶೋಷಣೆಯ ವಿರುದ್ಧ ಹೋರಾಡುವ ಹಲವು ಜನಪರ ಸಂಘಟನೆಗಳಿದ್ದು, ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬ್ಯಾರಿಗಳನ್ನು ಕಾಣಬಹುದು.

ಇನ್ನೂ ಈವತ್ತಿಗೂ ಕೂಡ ಬ್ಯಾರಿಗಳು ಮೀನುಗಾರಿಕೆಯಲ್ಲಿ ತಮ್ಮ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾರೆ. ಕೊಡಗಿನಲ್ಲಂತೂ ಮಂಗಳೂರು ಮೀನಿಗೆ ತುಂಬಾ ಬೇಡಿಕೆ ಇದೆ. ಮಂಗಳೂರುನವರು ಮುಖ್ಯವಾದ ಪೇಟೆಗಳಿಗೆ ಹೋಗಿ ಸಂತೆ ಮಾಡುತ್ತಾರೆ.

ಇದಕ್ಕೆ ಮುಖ್ಯ ಕಾರಣ ಹೊಳೆಗಳಿಗೆ ಅವರು ಹತ್ತಿರ ಇರುವುದಾಗಿದೆ. ಇಲ್ಲಿಯೂ ಬ್ಯಾರಿಗಳು ಬ್ಯಾರಿ ಭಾಷೆಯಲ್ಲೇ ತಮ್ಮ ಗ್ರಾಹಕರ ಜೊತೆಗೆ ಮಾತನಾಡುತ್ತಾರೆ. ಜನರಿಗೆ ಈ ಮೂಲಕ ಬ್ಯಾರಿ ಭಾಷೆಯ ಬಗ್ಗೆ ತಿಳುವಳಿಕೆ ಮೂಡಿಸಲಾಗುತ್ತದೆ. ಬ್ಯಾರಿ ಭಾಷೆಗೆ ಇತರ ಭಾಷೆಯ ಸಾಮ್ಯತೆ ಇದ್ದ ಕಾರಣ ಜನರಿಗೆ ಬ್ಯಾರಿ ಭಾಷೆ ಸುಲಭವಾಗಿ ಅರ್ಥವಾಗುತ್ತದೆ.

ಭಾಷೆ ಅಂದ ಅದನ್ನು ಬಳಕೆ ಮಾಡಿದರೆ ಮಾತ್ರ ಉಳಿಯಬಹುದು,

ಇನ್ನೂ ದಿನಸಿ ಅಂಗಡಿಗಳಲ್ಲಿ ಬಟ್ಟೆ ಅಂಗಡಿಗಳಲ್ಲಿ ಇನ್ನಿತರ ಉದ್ಯೋಗದಲ್ಲಿ ಬ್ಯಾರಿ ಜನರು ತಮ್ಮ ವ್ಯಾಪಾರಕ್ಕೆ ಭಾಷೆಯ ಅಗತ್ಯ ಹೆಚ್ಚಿನ ಪ್ರಮಾಣದಲ್ಲಿದೆ. ಭಾಷೆ ಇಲ್ಲವಾದಲ್ಲಿ ಸಂಪರ್ಕ ಮಾಡಲು ಕಷ್ಟಕರ. ವ್ಯಾಪಾರಕ್ಕಾಗಿ ಯಾವ ಮೂಲೆಗೆ ಬೇಕಾದರೂ ಸಂಚರಿಸಬಲ್ಲ, ನೆಲೆಯೂರಬಲ್ಲ ಸ್ವಭಾವವನ್ನು ಬ್ಯಾರಿ ಸಮುದಾಯ ಹೊಂದಿದೆ. ಆದ್ದರಿಂದ ವ್ಯಾಪಾರ ವಿನಿಮಯದಲ್ಲಿ ಭಾಷೆ ಪ್ರಮುಖ ಸ್ಥಾನ ಹೊಂದುತ್ತದೆ. ಭಾಷೆಯ ಬಳಕೆಯಿಲ್ಲದೆ ಯಾವುದೇ ವ್ಯಾಪಾರ ವಹಿವಾಟು ಮಾಡಲು ಕಷ್ಟ. ಬೇರೆ ಬೇರೆ ಸ್ಥಳಗಳಿಂದ ಬಂದಿರುವ ವರ್ತಕರಿಗೆ ವ್ಯಾಪಾರ ನಡೆಸಲು ಭಾಷೆಯ ಅವಶ್ಯಕತೆ ಇದೆ. ಇದಕ್ಕೆ ಇಂಗ್ಲಿಷ್‌ನಲ್ಲಿ ಪಿಜಿನ್ ಲ್ಯಾಂಗ್ವೇಜ್ ಎನ್ನಲಾಗಿದೆ.

ಅಂತೆಯೇ 7ನೇ ಶತಮಾನದ ತುಳುನಾಡು ಮತ್ತು ಮಲಬಾರ್‌ನೊಂದಿಗೆ ಅರಬ್ ಮುಸ್ಲಿಮರ ನಂಟನ್ನು ಈಗ ಲಭ್ಯವಿರುವ ಹಲವು ಆಕರ ಗ್ರಂಥಗಳಲ್ಲಿ ಕಾಣಬಹುದು. ಹೆನ್ರಿ ಮಯರ್ಸ್, ಈಲಿಯೆಟ್, ಹೆಚ್.ಜಿ ರೋವಿಲ್ಸನ್ ಮೊದಲಾದವರು ಕೂಡಾ ಈ ಅಭಿಪ್ರಾಯಕ್ಕೆ ಮನ್ನಣೆ ನೀಡಿದ್ದಾರೆ.

**ಸಾಹಿತ್ಯದಲ್ಲಿ ಬ್ಯಾರಿ ಭಾಷೆಯ ಬಳಕೆ**

ಸಾಹಿತ್ಯ ಎನ್ನುವ ಪದದ ಅರ್ಥ ಹೇಳುವುದೇ ಕಷ್ಟ. ತುಂಬಾ ಸರಳವಾಗಿ ಹೇಳಬೇಕೆಂದರೆ ಸಾಹಿತ್ಯ ಒಂದು ಅಭಿವ್ಯಕ್ತಿ ಮಾಧ್ಯಮ. ಪ್ರತಿ ಮನುಷ್ಯನೊಳಗೂ ಭಾವನೆಗಳು, ಸಂಘರ್ಷಗಳು, ಪ್ರಶ್ನೆಗಳು, ಗೊಂದಲಗಳು, ತಲ್ಲಣಗಳು ನಡೆಯುತ್ತಲೇ ಇರುತ್ತದೆ. ಅಂತಹ ಭಾವನೆಗಳನ್ನು ಅತ್ಯಂತ ಯಶಸ್ವಿಯಾಗಿ ಭಾಷೆಯನ್ನು ಉಪಯೋಗಿಸಿಕೊಂಡು ಮತ್ತೊಬ್ಬರಿಗೆ ದಾಟಿಸುವುದೇ ಸಾಹಿತ್ಯ. ಆದರೆ ಸಾಹಿತ್ಯವೆಂದರೆ ಬರೀ ವಾಸ್ತವ ಚಿತ್ರಣವಲ್ಲ. ಅದರಲ್ಲೊಂದಿಷ್ಟು ಕಲ್ಪನೆಯೂ ಉಂಟು.

ಸಾಹಿತ್ಯ ನಮ್ಮ ಸುತ್ತಮುತ್ತಲಿನ ಜಗತ್ತಿನ ಬಗ್ಗೆ, ನಮ್ಮ ಬಗ್ಗೆ ಅರಿವು ಮೂಡಿಸುವುದು. ನಮ್ಮೊಳಗೆ ಹೊಸ ಚಿಂತನೆಯನ್ನು ಹುಟ್ಟಿಸಬಹುದು. ಆದರೆ ಬ್ಯಾರಿ ಭಾಷೆಯ ಲಿಖಿತ ರೂಪದಲ್ಲಿ ಇಲ್ಲದಿದ್ದರೂ ಇತರೆ ಭಾಷೆಯ ಲಿಪಿಯ ಆಶ್ರಯ ಪಡೆದು ಇತ್ತೀಚೆಗೆ ತನ್ನ ಶ್ರೀಮಂತಿಕೆಯನ್ನು ಹೊಂದಿದೆ. ಸೃಜನಶೀಲ ವಾದುದನ್ನು ಸೃಷ್ಟಿಸುವ ಬರಹಗಾರನಾಗಬೇಕೆಂಬ ಹಂಬಲವಿರುವವನಿಗೆ ಇದರ ಅರಿವು ಮತ್ತು ತಿಳುವಳಿಕೆ ಇರಬೇಕಾದದ್ದು ಅತ್ಯವಶ್ಯಕವಾಗಿದೆ. ಮುಸ್ಲಿಂ ಲಿಪಿ ರಹಿತ ಬ್ಯಾರಿ ಭಾಷೆಯು ಸಾಹಿತ್ಯದ ಉಗಮ ಕಾಣುವುದು 30–40 ವರ್ಷಗಳಿಗೂ

ಮುನ್ನ ಕನಸಿನ ಮಾತಾಗಿತ್ತು. ಸಾಹಿತ್ಯ ರಚನೆಯ ಬಗ್ಗೆ ಕಲ್ಪನೆಯೂ ಇರಲಿಲ್ಲ. ಇದಕ್ಕೆ ಮೂಲ ಕಾರಣ ಅನಕ್ಷರತೆ. ಆದರೆ ನಂತರದ ದಿನಗಳಲ್ಲಿ ಈ ಸಮುದಾಯ ಹೆಚ್ಚಿನ ಜನರು ಸಾಕ್ಷರಸ್ಥರಾಗಿ ಕನಸು ಕಂಡಿದ್ದಾರೆ. ಬ್ಯಾರಿ ಭಾಷೆಯ ಸಾಹಿತಿಗಳು ಕನ್ನಡ ಲಿಪಿಯ ಬಳಕೆ ಮಾಡಿದರು. ಕನ್ನಡ ಲಿಪಿಯ ಸಹಾಯದಿಂದ ಬ್ಯಾರಿ ಭಾಷೆಯು ಸಾಹಿತ್ಯದೆಡೆಗೆ ಹಬ್ಬಿತ್ತು.. ಬ್ಯಾರಿ ಭಾಷೆಯು ಸಾಹಿತಿಗಳು ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯ ಆಸರೆಯನ್ನು ಪಡೆದು ಬ್ಯಾರಿ ಭಾಷೆಯಲ್ಲಿಯೂ ಸಾಹಿತ್ಯ ರಚನೆ ಸೃಷ್ಟಿಯಾಯಿತು.

ಬ್ಯಾರಿ ಭಾಷೆಗೆ ಸಾಹಿತಿಗರ ಕೊಡುಗೆಯಾಗಿ ಬ್ಯಾರಿ ಪದ್ಯಗಳು, ಪ್ರಬಂಧಗಳು, ಕಥೆಗಳು, ಬ್ಯಾರಿಗಳ ಬಗ್ಗೆ ಸಂಶೋಧನೆಯ ಲೇಖನ, ದಕ್ಷಿಣ ಕನ್ನಡ ಮುಸ್ಲಿಮರ ಕುರಿತು ಐತಿಹಾಸಿಕ ವಿಶ್ಲೇಷಣೆ ಮುಂತಾದವುಗಳು ಮೂಡಿ ಬಂದಿವೆ. ಇವುಗಳಲ್ಲದೆ ಇಂಗ್ಲೀಷ್, ಬ್ಯಾರಿ ಶಬ್ದಕೋಶಗಳು ಸಹ ಲಭ್ಯವಿದೆ. ಇದು ಡಾ. ವಹಾಬ್ ದೊಡ್ಡಮನೆ ಬ್ಯಾರಿ ಭಾಷೆಗೆ ನೀಡಿದ ಕೊಡುಗೆಯಾಗಿದೆ.

ಬ್ಯಾರಿ ಭಾಷೆ ಲಿಪಿ ಹೊಂದದಿದ್ದರೂ ಸಾಹಿತ್ಯವನ್ನು ಬೆಲೆಸಬೆಕೆಂಬ ದೃಷ್ಟಿಯಿಂದ ಸಮುದಾಯವು ಹರಸಾಹಸ ಪಡುತ್ತಿದ್ದು, ಹಲವಾರು ಪದ್ಯ ಪ್ರಬಂಧ ಪುಸ್ತಕಗಳನ್ನು ಪರಿಚಯಿಸುವುದರ ಮೂಲಕ ಬ್ಯಾರಿ ಸಾಹಿತ್ಯ ಆಂದೋಲನಕ್ಕೆ ಕೈ ಜೋಡಿಸಿದೆ. ಇಂದು ಬ್ಯಾರಿ ಭಾಷೆಯಲ್ಲಿ ಹಲವಾರು ಸಾಹಿತ್ಯ ರಚನೆಯಾಗಿದೆ. ಅವುಗಳಲ್ಲಿ ಕೆಲವು ಪ್ರಾಮುಖ್ಯವನ್ನು ಪಡೆದು ಶ್ರೀಮಂತಗೊಂಡರೆ ಮತ್ತೆ ಕೆಲವು ಕಡೆಗಣಿಸಿ ನಾಶವಾಗಿವೆ. ಉದಾ:– ಗೀತೆಗಳು, ಚುಟುಕುಗಳು ಇತ್ಯಾದಿ. ಬ್ಯಾರಿ ಭಾಷೆ ಸಾಹಿತ್ಯಕ್ಕೆ ಕಾಲಿಟ್ಟು ನೂರಕ್ಕಿಂತ ಹೆಚ್ಚು ಪುಸ್ತಕಗಳು, ನಾನೂರಕ್ಕಿಂತಲೂ ಹೆಚ್ಚು ಆಡಿಯೋ ಆಲ್ಬಂಗಳು ಸಹ ಇದ್ದು, ಇನ್ನೂ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿರುವವರ ಪ್ರಯತ್ನ ಮುಂದುವರೆಯುತ್ತಲೇ ಇದೆ.

**ಸಾಹಿತ್ಯ ಕ್ಷೇತ್ರಕ್ಕೆ 'ಬ್ಯಾರಿ' ಭಾಷೆಯ ಕೊಡುಗೆಯ ಬಗ್ಗೆ ಮೇಲ್ನೋಟ**

ಬ್ಯಾರಿ ಭಾಷೆ ಲಿಪಿ ರಹಿತ ಭಾಷೆಯಾಗಿದ್ದರೂ ಕೂಡ ಸಾಹಿತ್ಯದಲ್ಲಿ ಈ ಭಾಷೆಗೆ ಭವಿಷ್ಯ ಇದೆ ಎಂದು ತೋರಿಸಿಕೊಟ್ಟು ಪದ್ಯಗಳು, ಕವನಗಳು ಕಥೆ ಲೇಖನ ಮುಂತಾದವುಗಳು ಸೃಷ್ಟಿಯಾಗಿವೆ.

ಜಾನಪದ ಪದ್ಯ, ಗೀತೆಗಳು ಬ್ಯಾರಿ ಸಾಹಿತ್ಯದ ಉಗಮಕ್ಕೆ ಮೂಲ ಆಕರವಾಗಿದೆ. ಕನ್ನಡ ಲಿಪಿಯ ಆಶ್ರಯದಿಂದ ಬರವಣಿಗೆ ಅಥವಾ ಲೇಖನಗಳು

ಮತ್ತು ಆಡಿಯೋ, ವೀಡಿಯೋ ಕ್ಯಾಸೆಟ್‌ಗಳ ಸೃಷ್ಟಿಗೆ ಮುನ್ನ ಜಾನಪದ ಗೀತೆಗಳು ಹಿಂದಿನ ಪೀಳಿಗೆಯವರಿಂದ ಹಾಡಲ್ಪಡುತ್ತಿದ್ದು, ಇದು ಸಾಹಿತ್ಯದ ಉಗಮಕ್ಕೆ ನಾಂದಿ ಹಾಡಿದೆ ಎನ್ನಬಹುದು.

ನಂತರದ ದಿನಗಳಲ್ಲಿ ಕೆಲವೊಂದು ಪದ್ಯ, ಗೀತೆಗಳನ್ನು ಕನ್ನಡ ಲಿಪಿ ಬಳಕೆಯಿಂದ ಲಿಖಿತರೂಪದಲ್ಲಿಯೂ, ಕ್ಯಾಸೆಟ್‌ಗಳ ರೂಪದಲ್ಲಿಯೂ ದಾಖಲೆ ಗಳಾಗಿ ಸೃಷ್ಟಿಸಿ, ಬ್ಯಾರಿ ಸಾಹಿತ್ಯಕ್ಕೆ ಕೊಡುಗೆಯಾಯಿತು. ತನ್ನದೇ ಅದ ವೈಶಿಷ್ಟ್ಯವಾದ ಶೈಲಿಯನ್ನು ಹೊಂದಿರುವ ಬ್ಯಾರಿಗಳು ಜನಪದ ಪದ್ಯ ಮತ್ತು ಗೀತೆಗಳು ಮಳಯಾಲಂ ಮಾಪಿಳ್ಳೆ ಶೈಲಿಯಿಂದ ಪ್ರಜ್ವಲಿಸುತ್ತದೆ. ವಿವಾಹ ಸಮಾರಂಭಗಳಲ್ಲಿ ಇಂತಹ ಗೀತೆಗಳು ಮಹತ್ವದ ಸ್ಥಾನ ಪಡೆದುಕೊಂಡಿದೆ. ಕೋಲಾಟ, ಉಂಜಾಲ್ ಪಾಟ್ ಮುಂತದವುಗಳು ಪ್ರಾಮುಖ್ಯವನ್ನು ಪಡೆದಿದೆ. ಉಂಜಾಲ್ ಪಾಟ್ ಮಗುವಿನ ನಾಮಕರಣದ ವೇಳೆ ಅಥವಾ ತೊಟ್ಟಿಲು ತೂಗುವ ಸಮಾರಂಭಗಳಲ್ಲಿ ಹಾಡಲಾಗುತ್ತದೆ. ಮೌಲಾಂಜಿ ಪಾಟ್ ವಿವಾಹ ಸಮಾರಂಭಗಳಲ್ಲಿ ಮದರಂಗಿ ಹಾಕುವ ವೇಳೆ ಹೆಂಗಸರಿಂದ ಹಾಡಲ್ಪಡುವುದು.

ಇವುಗಳಲ್ಲದೆ ಅನೇಕ ಜನಪದ ಗೀತೆಗಳೂ ಇವೆ. ಉದಾ:– ಯಾವುದೇ ಕುಟುಂಬ ಸಮಾರಂಭಗಳು ಅಥವಾ ಮನೆಗಳಲ್ಲಿ ಮಗುವನ್ನು ಮಲಗಿಸುವ ವೇಳೆ ಅಜ್ಜಿಯರಿಂದ ಜನಪದ ಹಾಡುಗಳು ಪ್ರತ್ಯಕ್ಷಗೊಳ್ಳುತ್ತದೆ. ಬ್ಯಾರಿ ಸಮುದಾಯದಲ್ಲಿ ಜನಪದ ಗೀತೆಗಳ ಅರಿವು ಕಾಲಕ್ರಮೇಣ ಕಡಿಮೆಯಾಗ ತೊಡಗಿತು. ಇಂದಿನ ದಿನಗಳಲ್ಲಿ ಬ್ಯಾರಿ ಗೀತೆಗಳನ್ನು ಆಲಿಸುವ ಸಂದರ್ಭ ದೊರೆಯುವುದು ಕಷ್ಟಕರ. ಕೆಲವು ಮಂದಿ ವಯಸ್ಸಿನವರಿಗೆ ಮಾತ್ರ ತಿಳಿದಿರುವ ಸಾಧ್ಯತೆ ಇದೆ. ಇದನ್ನು ಮನಗಂಡು ಬ್ಯಾರಿಗೀತೆಗಳು ಆಳಿಸಿ ಹೋಗಬಾರದೆಂಬ ನಿಟ್ಟಿನಲ್ಲಿ ಅದನ್ನು ರಕ್ಷಿಸಬೇಕೆಂದು ಕೆಲವು ಗೀತೆಗಳು ಬ್ಯಾರಿ ಸಮುದಾಯತದಿಂದ ಆಡಿಯೋ ಕ್ಯಾಸೆಟ್‌ಗಳಾಗಿ ಹೊರ ಹೊಮ್ಮಿತು.

ಹೀಗೆ ಬ್ಯಾರಿ ಸಾಹಿತ್ಯದಲ್ಲಿ ಹಾಡುಗಳು, ಕ್ಯಾಸೆಟ್‌ಗಳಾಗಿ ಬೆಳವಣಿಗೆ ಹೊಂದಿತು. ನಂತರ ಅನೇಕ ಹಾಡುಗಳು ಸೃಷ್ಟಿಯಾಗಿ ಬ್ಯಾರಿ ಭಾಷೆಯ ಹಾಡಿನ ಪರಿಚಯ ಜನರಲ್ಲಿ ಮೂಡಿಸಿ, ಅಭಿವೃದ್ಧಿಯತ್ತ ಸಾಗುವ ಪ್ರಯತ್ನ ಮಾಡುತ್ತಿವೆ. ಜನಪದ ಗೀತೆಯಾಗಿ ಪ್ರಖ್ಯಾತಿ ಹೊಂದಿರುವ ಪ್ರಮುಖ ಗೀತೆಯ ಪೈಕಿ 'ಅಪ್ಪ ಚುಡು ಚುಡು ಫಾತಿಮ' ಮತ್ತಿತರ ಅನೇಕ ಬ್ಯಾರಿ ಹಾಡುಗಳು ಸೃಷ್ಟಿಯಾಯಿತು. ಇಂದಿನ ದಿನಗಳಲ್ಲಿ ಬ್ಯಾರಿ ಹಾಡುಗಳ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತಿವೆ.

ಬ್ಯಾರಿ ಸಾಹಿತಿಗಳು, ಹಾಡುಗಾರರು ಮುಂತಾದವರು ಉತ್ತಮ ಕೊಡುಗೆ ನೀಡುವುದರ ಮೂಲಕ ಬ್ಯಾರಿ ಸಾಹಿತ್ಯವನ್ನು ಬೆಳವಣಿಗೆಯತ್ತ ಸಾಗಿಸಲು ಸಾಧ್ಯ.

**ಬ್ಯಾರಿ ಸಾಹಿತ್ಯದಲ್ಲಿ ಬರಹಗಳು**

ಲಿಪಿ ಹೊಂದಿರದಿದ್ದರೂ ಇತರ ಭಾಷೆಗಳಿಂದ ಎರವಲು ಪಡೆದುಕೊಂಡು, ಬ್ಯಾರಿ ಭಾಷೆಯಲ್ಲಿ ಸಾಹಿತ್ಯ ಬರಹದ ಕನಸು ನನಸಾಗಿಸುವಲ್ಲಿ ಅನೇಕ ಸಾಹಿತಿಗರ ಕೊಡುಗೆ ಗುರುತಿಸಲ್ಪಡುತ್ತದೆ.

ಇಪ್ಪತ್ತು ವರ್ಷಗಳಿಗೂ ಮುಂಚೆ ಸಾಹಿತ್ಯ ಬರಹ ಕನಸಿನ ಮಾತಾಗಿದ್ದರೂ, ಸತತ ಪ್ರಯತ್ನದ ಮೂಲಕ ಇಂದಿನ ದಿನಗಳಲ್ಲಿ ಬ್ಯಾರಿ ಭಾಷೆಯಲ್ಲಿ ಲೇಖನ ಕಥೆ ಕವನ ಸಂಕಲನ, ಕಥಾಸಂಕಲನ ಮುಂತಾದವುಗಳನ್ನು ಕಾಣಬಹುದು. 'ಮಾಪ್ಲಾ ಮಲೆಯಾಲ" ಭಾಷೆ ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

ಮಾಪ್ಲಾ ಬ್ಯಾರಿಗಳು ಮುಸ್ಲಿಮರೇ ಆಗಿದ್ದು, ಬ್ಯಾರಿಗಳಿಗೆ ಧಾರ್ಮಿಕ ಆಶ್ರಯ ಮಳೆಯಾಲಂನಿಂದಲೇ ಬಂದಿರುವುದರಿಂದ ಮಿಶ್ರ ಭಾಷೆ ಹುಟ್ಟಿಕೊಂಡಿತು.

ಮಾಪ್ಲಾ ಪಾಟುಗಳು, ಮಾಲೆ ಕಿಸ್ಸೆ ಪಾಟುಗಳಲ್ಲಿ ಮಾಪ್ಲೆಗಳಿರುವ ಆಯಾಮ ವಾಗಿದೆ. ಅರಬಿ ಲಿಪಿಯಲ್ಲಿ ಬರೆಯಲಾಗುತ್ತಿರುವ ಅರಬ್ಬಿ ಮಲಯಾಳಂ ಎಂಬ ಮಿಶ್ರ ಭಾಷೆ ಬ್ಯಾರಿಗಳಲ್ಲೂ ಪ್ರಚಾರದಲ್ಲಿತ್ತು. ಇದರಲ್ಲಿ ಬ್ಯಾರಿ, ತುಳು, ಅರಬಿ ಮಳೆಯಾಳಂನ ಪದಗಳ ಮಿಶ್ರಣವಾಗಿ ಬಳಕೆಯಾಗಿತ್ತು. ಬ್ಯಾರಿ ಭಾಷಾ ಬೆಳವಣಿಗೆಗೆ ಇವು ಪೂರಕವಾಗಿರಲಿಲ್ಲ.

ಡಾ. ಸುಶೀಲಾ ಉಪಾಧ್ಯಾಯ, ವಹಾಬ್ ದೊಡ್ಡಮನೆಯಂತಹ ಅನೇಕ ಸಂಶೋಧಕರ ಕೊಡುಗೆ ಬ್ಯಾರಿ ಸಾಹಿತ್ಯವನ್ನು ಶ್ರೀಮಂತಗೊಳಿಸಿತು.

ಡಾ. ವಹಾಬ್ ದೊಡ್ಡಮನೆಯವರು ಇಂಗ್ಲೀಷ್–ಬ್ಯಾರಿ ಶಬ್ದಕೋಶವನ್ನು ಪರಿಚಯಿಸಿದ್ದಲ್ಲದೆ 'ದಕ್ಷಿಣ ಕನ್ನಡದ ಮುಸ್ಲಿಮರು (The muslims in D.K.) ಎಂಬ ಶೀರ್ಷಿಕೆಯುಳ್ಳ ಗ್ರಂಥವನ್ನು ಹೊರತಂದರು. ಇವುಗಳಲ್ಲದೆ ಅನೇಕರಿಂದ 75ಕ್ಕು ಅಧಿಕ ಪುಸ್ತಕಗಳು ಪ್ರಕಟಗೊಂಡಿವೆ.

**ನಾಟಕರಂಗದಲ್ಲಿ ಕೊಡುಗೆ**

ಬ್ಯಾರಿ ಭಾಷೆ ಲಿಪಿರಹಿತವಾಗಿದ್ದರೂ ಸಾಹಿತ್ಯ, ಬರಹ ಸಂಗೀತಗಳಲ್ಲಿ ಮಾತ್ರವಲ್ಲದೆ ನಾಟಕ ರಂಗದಲ್ಲಿಯೂ ತನ್ನ ಕೊಡುಗೆಯನ್ನು ಗುರುತಿಸಲ್ಪಡುತ್ತದೆ.

ಲಿಪಿಯೇ ಇಲ್ಲದ ಒಂದು ನಿರ್ದಿಷ್ಟ ಜನಾಂಗದವರು ಮಾತ್ರ ಆಡುವ ಸಾಕಷ್ಟು ಕಥೆ ಕಾದಂಬರಿಗಳಲ್ಲದೆ ಒಂದು ಭಾಷೆಯ ಸಂಭಾಷಣೆಯನ್ನು ಮತ್ತು ಆ ಜನಾಂಗದ ಬದುಕನ್ನು 'ಸುವೀರನ್' ಹೊಕ್ಕು ಪರಿಣಾಮಕಾರಿಯಾಗಿ ಬಿಡಿಸಿಟ್ಟಿದ್ದಾರೆ. ಇದರಿಂದ 'ಬ್ಯಾರಿ ಭಾಷೆ' ಮತ್ತು ಜನಾಂಗದವರನ್ನು ದೇಶ ತಿಳಿಯುವಂತಾಗಿದೆ. ಕರ್ನಾಟಕ ಮತ್ತು ಕೇರಳದ ಸಂಗಮ ನಾಡಾಗಿರುವ ದಕ್ಷಿಣ ಕನ್ನಡದ ಕರಾವಳಿ ಪ್ರದೇಶದ ಭಾಷೆಯೊಂದರಲ್ಲಿ ಸಿನಿಮಾ ಮಾಡಲು ಹೊರಟಿದ್ದೆ ಒಂದು ಸಂತಸದ ವಿಷಯವಾಗಿದೆ.

ಸುವೀರನ್ ನಾಟಕ ಲೋಕಕ್ಕೆ ಕಾಲಿಟ್ಟಿದ್ದು 'ಎನ್ನುಂ ಪ್ರಿಯಪೆಟ್ಟ ಅಮ್ಮ' ಪಿ.ಎಂ. ತಾಜುರವರ ನಾಟಕ ಕೃತಿಯ ಮೃತ್ಯುಂಜಯ ಎಂಬ ಪತ್ರದ ಮೂಲಕ ನಾಟಕ ರಂಗದಲ್ಲಿ ಸುವಿರನ್ ಸಾಕಷ್ಟು ಏಳುಬೀಳು ಕಂಡಿದ್ದಾರೆ.

ನಮ್ಮ ದೇಶದಲ್ಲಿ ಚೊಚ್ಚಲ ಸಿನಿಮಾಕ್ಕೆ ಪುರಸ್ಕಾರ ಲಭಿಸಿದ ಬೆರಳೆಣಿಕೆಯ ನಿರ್ದೇಶಕರಲ್ಲಿ ಸುವೀರನ್ ಒಬ್ಬ ಈ ಚೊಚ್ಚಲ ಸಿನಿಮಾದ ಬಗ್ಗೆ ದೇಶಾಭಿಮಾನ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಸುವೀರನ್ ತನ್ನ ಮನದಾಳದ ಮಾತುಗಳನ್ನು ಬಿಚ್ಚಿಡುತ್ತಾರೆ. ಬ್ಯಾರಿ ಭಾಷೆಯಲ್ಲಿಯೂ ನಾಟಕ ಮತ್ತು ಕಿರುಚಿತ್ರಗಳು ಹೊರಬಂದು ಬ್ಯಾರಿ ಸಾಹಿತ್ಯವನ್ನು ಕೂಡ ಶ್ರೀಮಂತಗೊಳಿಸಿತು ಎನ್ನಬಹುದು. ಬ್ಯಾರಿ ಸಮುದಾಯ ಭಾಷೆ, ಗೀತೆಗಳು ಅಳಿದು ಹೋಗುವುದನ್ನು ಮನಗಂಡು ಸಂಘಟಣಗಳು ಬರಹಗಳನ್ನು, ಲೇಖನಗಳು, ಕಥೆ ಕಾದಂಬರಿ, ಗೀತೆಗಳನ್ನು ಸೃಷ್ಟಿಸುವಲ್ಲಿ ಒತ್ತು ಕೊಡಲು ಪ್ರಾರಂಭಿಸಿತು. ಬ್ಯಾರಿ ಸಾಹಿತ್ಯ ರಚನೆ ಮತ್ತು ಬೆಳವಣಿಗೆಗೆ ಪ್ರತ್ಯೇಕ ಸಂಘ ಸಂಸ್ಥೆಯು ಉಗಮಗೊಂಡಿತು. ಈ ಗುಂಪಿನ ಜನರು ಬ್ಯಾರಿ ಸಾಹಿತ್ಯಕ್ಕೆ ಪ್ರತ್ಯೇಕ ಸ್ಥಾನ ಲಭಿಸಿಕೊಡುವಲ್ಲಿ ಶ್ರಮ ವಹಿಸುತ್ತಿದ್ದಾರೆ. ಬ್ಯಾರಿ ಸಾಹಿತ್ಯ ಅಕಾಡೆಮಿ ಕೂಡ ಸಾಹಿತ್ಯದ ರಚನೆ, ಸಂಗ್ರಹ ಮಾಡುವಲ್ಲಿ ಯಶಸ್ವಿ ಕಾರ್ಯ ವಹಿಸುತ್ತಿದೆ.

**ಬ್ಯಾರಿ ಭಾಷೆಯ ಭವಿಷ್ಯ**

ಬ್ಯಾರಿ ಭಾಷೆ ಮಲಯಾಳಂ, ತಮಿಳು, ತುಳು, ಕೊಡವ, ಕನ್ನಡ ಭಾಷೆಯ ಪ್ರಭಾವದಿಂದ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ನಮಗೆ ನಮ್ಮ ಭಾಷೆಯತ್ತ ಪ್ರೀತಿ ಇದ್ದಲ್ಲಿ, ಭಾಷೆಯ ಬೆಳವಣಿಗೆ ಸಾಧ್ಯವಾಗುತ್ತದೆ. ಬ್ಯಾರಿ ಭಾಷೆಯನ್ನು ಹೆಚ್ಚಾಗಿ ಉಪಯೋಗಿಸಬೇಕು. ಬ್ಯಾರಿ ಸಮುದಾಯಕ್ಕೆ ಬ್ಯಾರಿ ಭಾಷೆಯ ಮೇಲೆ ಹೆಚ್ಚು ಅಭಿಮಾನ ಇದ್ದಲ್ಲಿ ಭಾಷೆ ಅಭಿವೃದ್ಧಿ ಆಗುತ್ತದೆ. ಧಾರ್ಮಿಕ ಶಿಕ್ಷಣವನ್ನು

ಬ್ಯಾರಿ ಭಾಷೆಯ ಮೂಲಕ ಮಕ್ಕಳಿಗೆ ಕಲಿಸಬೇಕು. ಅಂತಲ್ಲಿ ಭಾಷೆಯ ಬೆಳವಣಿಗೆ ಸಾಧ್ಯ. ಅಂತೆಯೇ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತನ್ನು ಪೋಷಕರು ನೀಡಬೇಕು.

ಶಿಕ್ಷಣ ಸಿಕ್ಕಿದ್ದಲ್ಲಿ ಜನರಲ್ಲಿ ತನ್ನ ಭಾಷೆಯ ಬಗ್ಗೆ ತಿಳುವಳಿಕೆ ಮೂಡುತ್ತದೆ. ಬ್ಯಾರಿ ಭಾಷೆಯಲ್ಲಿ ಹೆಚ್ಚು ಸಾಹಿತ್ಯ ಮೂಡುವಂತೆ ಜನರಲ್ಲಿ ತಿಳುವಳಿಕೆ ಮೂಡಿಸಬೇಕು. ಬ್ಯಾರಿ ಜನರು ಹೆಚ್ಚಾಗಿ ತಮ್ಮ ಭಾಷೆಯಲ್ಲಿಯೇ ಸಂವಹನ ನಡೆಸಬೇಕು. ಮಕ್ಕಳಿಗೆ ತಮ್ಮ ಬಾಲ್ಯದ್ಲಲಿಯೇ ತಮ್ಮ ಮಾತೃ ಭಾಷೆಯ ಬಗ್ಗೆ ಅರಿವು ಮೂಡಿಸಬೇಕು. ಬ್ಯಾರಿ ಭಾಷೆಯಲ್ಲಿ ಹೆಚ್ಚಿನ ಅಧ್ಯಯನ ಮತ್ತು ಸಾಹಿತ್ಯ ಮೂಡಬೇಕು. ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಭಾಷೆಯ ಅಭಿವೃದ್ದಿಗೆ ಸಹಕರಿಸಬೇಕು. ಕೇರಳದ ಮಲಪ್ಪಂ ಮತ್ತಿತರೆಡೆ ಬ್ರಿಟಿಷರ ವಿರುದ್ದದ ಹೋರಾಟದಲ್ಲಿ ದಫ್ ಹಾಗೂ ಮಾಪಿಳ್ಳ ಪಾಟ್ ಜನರನ್ನು ಬಡಿದೆಬ್ಬಿಸಿತು. ಅಂಥ ಹಾಡು ಸಂಸ್ಕೃತಿ ನೀಡಿದ್ದ ಬ್ಯಾರಿ ಭಾಷೆ ಅವನತಿಯತ್ತ ಸಾಗುತ್ತಿದೆ.

ಮಂಜೇಶ್ವರ ಮತ್ತು ಕಾಸರಗೋಡು ತಾಲೂಕಿನಲ್ಲಿ ಬ್ಯಾರಿ ಭಾಷಿಗರಿದ್ದರೂ. ಎಲ್ಲರೂ ಮಲೆಯಾಳ ಭಾಷೆಯತ್ತ ಹೊರಳುತ್ತಿದ್ದು ಅಲ್ಲಿ

ಭಾಷೆ ನಾಶವಾಗುತ್ತಿದೆ. ಆದರೂ ಇತ್ತೀಚೆಗೆ ಹೆಚ್ಚಿನ ಬ್ಯಾರಿ ಹಾಡುಗಳು ತನ್ನ ಜನಪ್ರಿಯತೆ ಹೊಂದುತ್ತಿದೆ.

ಭಾಷೆಯ ಮೂಲಕವೇ ಪರಸ್ಪರ ಸಂವಹನ ಸಾಧ್ಯವಾಗುತ್ತದೆ. ಅದರಿಂದ ಸಾಮಾಜಿಕ ಜೀವನ  ಸಾಧ್ಯವಾಗುತ್ತದೆ. ಭಾಷೆ ಹಾಗೂ ಸಮಾಜದ ನಡುವೆ ಅಂತರಿಕ ಸಂಬಂಧವಿದ್ದು ತಮ್ಮ ಅಸ್ತಿತ್ವಕ್ಕೆ ಪರಸ್ಪರ ಅವಲಂಬಿತವಾಗಿದೆ. ಸಮಾಜದಲ್ಲಿ ಭಾಷೆಯನ್ನು ಬೆಳೆಸಲು ಭಾಷಿಕರು ಶ್ರಮಪಡಬೇಕಾಗಿದೆ. ಇಲ್ಲದಿದ್ದರೆ ಆ ಭಾಷೆಯು ಕಣ್ಮರೆಯಾಗುತ್ತದೆ. ಬ್ಯಾರಿ ಭಾಷೆ ಒಂದು ಸಾಮಾಜಿಕ ಕ್ರಿಯೆ ಭಾಷೆಯ ಅಳಿವು ಉಳಿವು ಆ ಸಮಾಜವನ್ನು ಅವಲಂಬಿಸಿರುತ್ತದೆ. ಇಂದು ಬ್ಯಾರಿ ಜಾಗೃತಿಯ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಮೂಡಿರುವ ಹೊಸ ನಾಯಕತ್ವವು ಸಮುದಾಯವನ್ನು ಸಮೃದ್ಧಿಯ ಹಾದಿಯತ್ತ ಮುನ್ನಡೆಸುತ್ತಿದೆ.

## ಆಕರ ಗ್ರಂಥಗಳು

ಪ್ರೊ. ಬಿ.ಎಂ.ಇಚ್ಲಂಗೋಡು, 'ತುಳುನಾಡಿನ ಬ್ಯಾರಿಗಳು' ಮಂಗಳೂರು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ 2011

ಪಿ. ಸುಶೀಲಾ ಉಪಾಧ್ಯಾಯ 'ಬ್ಯಾರಿ ಭಾಷೆ' ಮಂಗಳೂರು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ 2011

ಗುರುಪುರ ಝುಬೇರಾ 'ಕಾಲಡಿರೆ ಸ್ವರ್ಗ' ಮಂಗಳೂರು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ 2010

# ಬ್ಯಾರಿ ಭಾಷೆ
# ಉಗಮ,
# ಪ್ರಾಚೀನತೆ
# ವ್ಯಾಪ್ತಿ
# ಪಿನ್ನೆ
# ಅಳವಡಿಕೆ


**ಆಯಿಶಾ**

ಬಿ.ಎ. ವಿದ್ಯಾರ್ಥಿನಿ

ಏಮ್ಸ್ ಪ್ರಥಮ ದರ್ಜೆ ಕಾಲೇಜು, ಕಡಬ

# ಬ್ಯಾರಿ ಭಾಷೆರೊ ಪೊರಪ್ಪು ಪಿನ್ನೆ ಚರಿತ್ರೆ

ಬ್ಯಾರಿ ಸಮುದಾಯತ್ತ್‌ಗ್ ತಂಡೆದೆ ಆಯಾ ಒರು ಪಲೆ ಚರಿತ್ರೆ ಉಂಡು. ಬ್ಯಾರಿ ಭಾಷೆರೊ ಸಂಶೋಧಕರ ಪ್ರಕಾರ ಸುಮಾರ್ ಮೂನು ಆಯಿರಾ ವರ್ಷತ್ತೆ ಚರಿತ್ರೆ ಉಂಡು. ಪವುನಂಜಿ ಲಾಕ್ ಅವುತ್ತೆಜ ಪಲಕ ಪರಯಿಡೆ ಭಾಷೆ ಆಯಿಟ್ಟ್‌ಕ್‌ಡ್. ಕನ್ನಡತ್ತೊ ವ್ಯಾಪಾರ ತುಳುಡೆ 'ಬ್ಯಾರ' ಬೊನ್ನೆ ಪದತ್ತ್‌ಡೆ ಬನ್ನ್‌ಕಿಂತ್ ಚೊಲ್ದಾರ್. ವ್ಯಾಪಾರ– ಬ್ಯಾರ, ವ್ಯಾಪಾರಿ–ಬ್ಯಾರಿ ಆಯಿಟ್ಟ್ ಬಾನಿಯಾತ್ತ್‌ಗ್ ಬ್ಯಾರಿಜ ಒರ್ ನಿಕಟಮಾಯ ಸಂಬಂಧ ಉಂಡು.

ಇತಿಹಾಸತ್ತೆ ಪ್ರಕಾರ 7ನೇ ಶತಮಾನತ್ತ್ ಕರಾವಳಿಯ ಬ್ಯಾರಿಜ ಅರಬಿಳೊಟ್ಟಿಗೆ ಬಾನಿಯಾತ್ತೆ ಸಂಬಂಧ ಇಂತ್ತ್. ಖ್ಯಾತ ಇತಿಹಾಸ ತಜ್ಞ ಥಾಮಸ್ ಆನಾಲ್ಡ್ ದಕ್ಷಿಣ ಭಾರತ್‌ಗ್ ಇಸ್ಲಾಮ್‌ರೆ ಆಗಮನ 8ನೇ ಶತಮಾನತ್ತೆ ಮುನ್ನೊಲ್ ಇಂತ್ತ್‌ಂತ್ ಚೊಲ್ಲುಡು. ಚರಿತ್ರೆಕಾರ ಇಲ್ಯಾಸ್ (ಭಾರತ ಚರಿತ್ರೆ) ಭಾಗ 1ಲ್ ಪಸ್ಟ್ ಮುಸ್ಲಿಂ ನೌಕೆ (ಕಪ್ಪೊಲ್) ಬನ್ನ್‌ಡೆ ಕ್ರಿ.ಶ. 630ಲ್ ಆಯಿಟ್ಟ್‌ಕ್ಕ್‌ಡ್. ಪಿನ್ನೆ ಒರ್ ಚರಿತ್ರೆಕಾರ ರೂಲೆಂಟ್ಸ್ ಅರಬ್ ಬ್ಯಾರಿಜ ಮಲಬಾರ್ ಪಸ್ವಾ ಕಾನೋ ಕಿಟ್ಟಿಡೆ. ಚೊನ್ನೆಂಗ್ ಕ್ರಿ.ಶ. 7ನೇ ಶತಮಾನತ್ತೆ ಮುನ್ನೊಲ್ ಪಾರ್ಸಿ – ಅರಬಿ ಬಾನಿಯಾತಜ ಬೆಲಿಯ ಕನಕ್‌ಲ್ ಪಶ್ಚಿಮ ಕರಾವಳಿಡೆ ಬಂದರ್‌ಗ್ ಬನ್ನಟ್ಟ್. ಮುಸ್ಲಿಂ ಪೆನ್ನಿಂಜಲೆ ಮಂಜಿಲಾ ಆಯೊಂಡರ್‌ಂಟ್ ಸ್ಟ್ರರಕ್ ಸೌತ್ ಕೆನರಾ ಮಾನುವೆಲ್‌ಡೆ ಚೊನ್ನುಡ್. ಅರಬಿಯಾ ಭಾರತತ್ತೆ ಪಶ್ಚಿಮ ಕರಾವಳಿರೊಟ್ಟಿಗೆ ಕೊರೆ 3000 ಆಯಿರ ವರ್ಷತ್ತ್‌ಗ್ ಮುನ್ನೊಲ್ ಕಡಲ್ ಸಂಬಂಧ ಇತ್ತ್‌ಂಟ್ ಕೆ. ಎಂ. ಫಣಿಕ್ಕರ್ ಅಭಿಪ್ರಾಯ ಪಟ್ಟ್‌ರ್.

ಅರಬ್ ಪ್ರವಾಸಿ 10ನೇ ಶತಮಾನತ್ತ್ ಅಲ್ ಬರೂನಿ 13ನೇ ಶತಮಾನತ್ತೆ ಅಬೂಲ್ ಐದಾ ಮುಹಮ್ಮದ್ ಇಬ್ನು ಅಬ್ದುಲ್ಲಾ ತುಳುನಾಡ್‌ರೆ ಸಿಂಧೂಲುರ್ (ಕುಂದಾಪುರ) ಫಾಕನೂರ್ ಬಾರ್ಕೂರು (ಬಸ್ರೂರು), ಮಂಜಲಾರು (ಮಂಗಳೂರು) ಬಗ್ಗೆ ಉಲ್ಲೇಖ ಆಕಿಡಾರ್. ಈ ಉಲ್ಲೇಖಿತ್ತ್‌ಲ್ ಬ್ಯಾರಿಜ ಬಾನಿಯಾತ್ತಂಜ ಚೊನ್ನುಟ್ಟ ಗೊಂತ್ತಾವುಡ್. ಪಿನ್ನೆ ಬ್ಯಾರಿ ಸಮುದಾಯ ತೊಡಕ ಆವೊಗು ಇಸ್ಲಾಮುಡೆ ಧರ್ಮ ಪ್ರಚಾರಕ ಚೊಲ್ದೆನಿಕೆ ಇಸ್ಲಾಂ ಅರಬಿಯಾತ್ತಲ್ ತೊಡಕ ಆಯಿಟ್ಟ್ 6ನೇ ಶತಮಾನತ್ತೆ ಭಾರತ್ತ ಬನ್ನ್‌ಟ್ಟ್ ಅಪ್ಪ ಕೇರಳತ್ತ್‌ಲ್ ಅರೆಕ್ಕಲ್ ರಾಜವಂಶ ಅಧಿಕಾರತ್ತ್ ಇಂತ್ತ್. ಅಂಞೆಮೆ ಈ ರಾಯತ್ತ್ ಇಸ್ಲಾಂ ಧರ್ಮ ಪ್ರಚಾರತ್ತ್‌ಗ್ ಸಹಾಯ ಆಕಿಡಾರ್.

ಅ ಕಾಲತ್ತೆ ಭಾರತತ್ಗ್ ಬನ್ನೆ ಅರಬಿಯಾತ್ತೆ ಪ್ರಮುಖ ಒರು ದೀನ್ ಪಂಡಿತ ಮಾಲಿಕ್ ಬಿನ್ ದಿನಾರ್ ಒರಾಲ್. ಆಯಾಲ್ ಕಾಸರಗೋಡಲ್ ದೀನ್ ಪ್ರಚಾರ ಕಾರ್ಯ ನ್ಡಪ್ಪಾಟಿಯೋ ಇಂತ್ತ್.

ಅರಕ್ಕಲ್ ರಾಜ ವಂಶತ್ತ್ಗ್ ಮುಟ್ಟತ್ತೆಜ ಆಯಿ ಮಿಶನರಿ ಸಂಘ ಪ್ರಚಾರ ಆಕಿ ಕೊರೆ ಪಲ್ಲಿ ಕೆಟ್ಟಿಯಾರ್. ಮಲಬಾರ್ಡೆ ತುಳುನಾಡ್ಗ್ (ದ.ಕ.) ಜಿಲ್ಲೆಗ್ ಬನ್ನ್ಟ್ಟ್ ಬಾರ್ಕೂರ್, ಮೈಕಾಲ, ಕಾಸರಗೋಡ್ ಪಲ್ಲಿ ಕೆಟ್ಟ್ ಬಾಟಿಯಾರ್. ಮಾಲಿಕ್ ಬಿನ್ ಹಬೀಬ್ಡೆ ಮಕ್ಕಾಲಾಯ ಇಬ್ರಾಹಿಂ, ಮೂಸಾ ಮುಹಮ್ಮದ್ ಅದೆ ಪಕ್ಕಲ್ ಖಾಝಿಯಾಯಿಟ್ಟ್ ನೇಮಕ ಆಕ್ಡಾರ್.

ಟಿಪ್ಪು ಸುಲ್ತಾನತ್ತೆ ಕಾಲತ್ತ್ ಪುದಿಯೆ ಕೆಟ್ಟಿಯೆ ಮೈಕಾಲತ್ತೆ ಝೀನತ್ಭಕ್ಷ್ ಪಲ್ಲಿ ಅಯಾಲ್ ಕಾಲ್ತ್ತ್ ಆಯಿಡೆ ಚೊಲ್ಲೊಡ ಪ್ರತೀತಿ ಉಂಡು. ದೀನ ಪ್ರಚಾರತ್ತ್ಗ್ ಬನ್ನೆ ಅರಬ್ ವಿದ್ವಾಂಸರೆ ಪ್ರಭಾವತ್ತ್ಲ್ ಆಲ್ಜ ಇಸ್ಲಾಂ ದೀನ್ ಸ್ವೀಕರಿಚ್ಚಿ ಪರಸ್ಪರ ಒಟ್ಟಗೆ ಸಂಬಂಧ ಬೆಲಿಯಾಟ್ಟ್ ಸಂಸ್ಕೃತಿ ಎಲ್ಲಾ ಒಟ್ಟಿಗೆ ಆಯಿಟ್ಟ್ ಪುದಿಯ ಒರ್ ಭಾಷೆ ಉಗಮಾ ಆವುಡು. ಅದೇ ಬ್ಯಾರಿ ಭಾಷೆ.

**ಭಾಷೆ**

ನಂಜಲೆ ಚುತ್ತು – ಮುತ್ತು ಫಲಕ ಪರಯೋಗು ಬಿಸಯಾ ಆಕೊಗು ಉಲ್ಲೆ ಒರ್ ಸಾಧನೆ ಆಯಿಟ್ಟಕ್ಡ್ನ ಭಾಷೆ. ನಂಜಲ್ ದೇಶತ್ತ್ಲ್ ಕೊರೇ ಬಾಷೆಜಳೆ ಉಂಡು. ಈ ಎಲ್ಲಾ ಭಾಷೆಡೊಟ್ಟಗೆ ಬ್ಯಾರಿ ಭಾಷೆ ಒನ್ನ' ಆಯಿಡ್.

ಬ್ಯಾರಿ ಭಾಷೆಲ್ ಪರ್ಷಿಯಾ–ಅರಬಿ ಶಬ್ದ ಸೇರ್ಪಡೆ ಆಯಿತ್ತ್. ಬ್ಯಾರಿ ಭಾಷೆಡೆ ಮೂಲ ತುಳು ಆಯೊ ಕಾರಣ ತುಳು ವ್ಯಾಕರಣ ಪಿನ್ನೆ ಹಿನ್ನಲೆ ಬ್ಯಾರಿ ಭಾಷೆ ತೊಡಕ್ತ್ತ್ಗ್ ಕಾರಣಾವುಡು. ಇಜನೆ ಬ್ಯಾರಿ ಭಾಷೆಡೆ ಉಗಮ ಆವುಡು. ದ. ಕ. ಜಿಲ್ಲೆ ಪಿನ್ನೆ ಕಾಸರಗೋಡು ಆಲ್ಮಾರ್ ಫಲಕ ಪರಯಿಡೆ ಭಾಷೆ ಕಂಡುಬಂತ್ತ್. ಬ್ಯಾರಿ ಭಾಷೆಡೆ ವೈಜ್ಞಾನಿಕ ತೌಲನಿಕ ಅಧ್ಯಯನ ಆಕಿಯೆ ಕೀರ್ತಿ ಡಾ. ಸುಶೀಲಾ ಉಪಾಧ್ಯಾಯ ಈಮಾಗ್ ಸಲ್ಲ್ಡ್. ಈಮಾ ವರ್ಗಾತ್ಮಕ ವ್ಯಾಕರಣ ತೌಲನಿಕ ಅಧ್ಯಯನ ಆಕಿಡ್. ಬ್ಯಾರಿ ಭಾಷೆಡೆ ಬಗ್ಗೆ ಬೆಳ್ಚ ಆಕಿಡ್. ತೌಲನಿಕ ಅಧ್ಯಯನ ಆಕಿಯೆ ಈ ಭಾಷೆ ತುಳು ಭಾಷೆಗ್ ಎತ್ತರೆ ಮುಟ್ಟ ಉಂಡು ಚೊನ್ನ್ಟ್ಟ್ ಕಾಟಿ ತನ್ನ್ರ್.

ತುಳುನಾಡ್ ಉತ್ತರ ಭಾಗತ್ತ್ (ಪಣಂಬೂರು) ಕಾಪು ಪ್ರದೇಶತ್ತ್ ಆಡುನುಡಿ ಫಲಕತ್ತ್ ವಿಶ್ಲೇಷಣೆ ಆಕಿಟ್ಟ್ ಬ್ಯಾರಿ ಭಾಷೆಗ್ ಚೊಮ್ಮೆ ಉಪ ಭಾಷೆ ಉಂಡು.

ಭಾಷೆ ಪ್ರಕಟನೆ ಆವುಡೆ ಉಪ ಭಾಷೆರೊ ಒಟ್ಟಿಗೆ ಆಯಿಟ್‌ಕ್ಕ್‌ಡ್ ಎಲ್ಲಾ ಉಪಭಾಷೆಡೆ ಒಟ್ಟು ಪರಿಕಲ್ಪನೆ. ಬ್ಯಾರಿ ಭಾಷೆ ತುಳುನಾಡ್‌ರೆ ಮುಸ್ಲಿಂ ಜನಾಂಗತ್ತೆ ಪ್ರಾದೇಶಿಕ ಭಾಷೆ. ಈ ಭಾಷೆಲ್ ಮಾಪಿಳ್ಳೆ ಮಲಯಾಳಂ ಮಿಶ್ರ ಆಯಿಡ್. ಆಯೆಂಗ್ ತಂಡೆ ವಿಭಿನ್ನತೆ ಹೊಂದಿಡ್. ಡಾ. ಸುಶೀಲಾ ಉಪಾಧ್ಯಾಯ ಈ ಭಾಷೆಡೆ ನಿಕ್ ಪೋಕ್‌ಡೆ ವಿವರಣೆ ಆಕಿಡ್. ಬ್ಯಾರಿ ಭಾಷೆಲ್ ಕೊರೆ ತುಳುಡೆ ಪ್ರಭಾವ ಕಾಂಡ್. ಬ್ಯಾರಿ ಭಾಷೆಡೆ ಮೈಕಾಲ ಭಾಗತ್ತೆ ಬ್ಯಾರಿಜ ಕಾಸರಗೋಡು ಪ್ರದೇಶತ್ತೆ ಬ್ಯಾರಿಜ ಬೆರೆಕೆ ಆಯೆ ಪೊಲೆ ಫಲಕ ಪರಯಿಡಾರ್. ಆಯೆಂಗ್ ಅರಬಿ, ಪರ್ಷಿಯಾ ಕೊರೆ ಪರಕಿ ಎಡತ್ತೆ ಕಾರಣ. ಇದ್ ಇತರ ಭಾಷೆಡೆ ಕಾಟಿ ಬೇರೆಯಾಟಿಕ್ಕ್‌ಡ್. ತುಳು ಬಾಹುಳ್ಯ ಪ್ರದೇಶತ್ತ್ ಇದ್‌ಡೆ ಉಪಯೋಗ ಆಕ್‌ಡೆದ್ ಇದಕ್ಕ್ ಕಾರಣ. ಬ್ಯಾರಿ ಭಾಷೆಲ್ ತುಳುರೆ ಶಬ್ದ ಬಳಕೆ ಪಿನ್ನೆ ವ್ಯಾಕರಣೆತ್ತೆ ಪ್ರಭಾವ ಕಾಂಡ್. ಈ ಭಾಷೆ ಪ್ರಾಂತೀಯ ಭಾಷೆಡೆ ರಚನೆಲ್ ಮಾಪಿಳ್ಳೆ ಮಲಯಾಳತ್ತೆ ಕಾಂಟ ತುಳು ಭಾಷೆಡೆ ಮೇಲ್ ಚೊಮ್ಮೆ ಅವಲಂಬನೆಯಾಯೆದ್ ಕಾಂಡ್.

1. ಬ್ಯಾರಿ ಭಾಷೆಡೆ ಧ್ವನಿಶಾಸ್ತ್ರ ತುಳು ಭಾಷೆಗ್ ಕೊರೆ ಸಾಮ್ಯತೆ ಕಾಂಡ್. ಈ ಬಾಷೆಲ್ ಮಲಯಾಳತ್ತೆ ಕಾಂಡೆ. ಆರ್, ರ್,ಟ ಪೋಲ್‌ತ್ತೆ ಶಬ್ದ ಕಾಣೊಗು ಕಿಟ್ಟಲ್ಲೆ.

2. ವ ಬದಲ್ ಬ, ಅ ಬದಲ್ ಇ ಪಿನ್ನೆ ಪರಗ್‌ಡೆ ಅನುನಾಸಿಕ ಬುಟ್ಟು ಬುಡ್ರೆ ಬದಲಾವಣೆ ಕಾಂಡ್

3. ಆಲ್, ಕನಕ್, ಲಿಂಗ, ಕ್ರಿಯಾಕಾಲತ್ ಕಾಟೊಂಬೊ ಕಾಂಡೆ ಅಂತ್ಯ ಪ್ರತ್ಯಯ ಬ್ಯಾರಿ ಭಾಷೆಡೆ ಪ್ರಮುಖ ಅಂಶ ಅಯಿಟ್ಟಿಕ್ಕ್‌ಡ್. ಇದ್ ಮಲಯಾಳತ್ತೆ ಏದ್ ಪ್ರಾಂತೀಯ ಭಾಷೆಲ್ ಕಾಣೋಗ್ ಕಿಟ್ಟಲ್ಲೆ.

ಬ್ಯಾರಿ ಭಾಷೆಲ್ ವೈಯಕ್ತಿಕ ಅಂತ್ಯ, ಪ್ರತ್ಯಯ, ತುಳು ಭಾಷೆಲ್ ಬಳಕೆಯಾಯೆ ಅಂತ್ಯ ಪ್ರತ್ಯಯತ್ತ್‌ಗ್ ಹೋಲಿಕೆ ಉಂಡು. ವೈಯಕ್ತಿಕ ಅಂತ್ಯ ಪ್ರ ತ್ಯಯ ಉದಾ: ಲಾ. ಅ. ಮರ್ಯಾದೆ ಇಲ್ಲಾಂಟ್ ಮುಂಡ್ರೆದ್ ಕಾಟ್ರ್. ಉದಾ: ಮೈಕಾಲತ್ತೆ ಪೋ, ಕಾಸರಗೋಡು ಸುಳ್ಯ ಪ್ರದೇಶತ್ತ್‌ಲ್ ಪೋಡಾ, ಇದೇ ರೀತಿಲ್ ಬಾಲ, ತಾಳ. ಭಾವಕ್ರಿಯಾ ರೂಪಾ ಅಂತ್ಯ ಪ್ರತ್ಯಯ ಅಂತೆ. ಉದಾಹರಣೆಗ್ ಪೋವಾಂತೆ ಬರಾಂತೆ ಇದೆಲ್ಲಾ ಬ್ಯಾರಿಲ್ ಕಾನೊಗೊ ಕಿಟ್ಟಯೊ ಇಂತ್ತ್. ಬ್ಯಾರಿ ಭಾಷೆ ಕೊಡವ – ತುಳು ಇಜಂತೆ ಎಲ್ಲಾ ಭಾಷೆಡೆ ಪದಜ ಕಡ ಎಡ್‌ತ್ತೊಂಡು. ಅರಬಿ, ಕನ್ನಡ, ತುಳು, ಮಲಯಾಳ, ಕೊಡವ ಪದ

ಬ್ಯಾರಿಲ್ ಕಾಣೊಗು ಕಿಟ್ಟ್, ಕೊರೆ ತಮಿಳು ಪದಂ ಬ್ಯಾರಿ ಭಾಷೆಲ್ ಸೇರಿಯೊಂಡ್ರು.

ದ.ಕ. ಜಿಲ್ಲೆ ಬ್ಯಾರಿ ಭಾಷೆಡೆ ಮೂಲ ಆಯೆ ಕಾರಣ ತಮಿಳು ಪಿನ್ನೆ ಕನ್ನಡತ್ತೆ ಪ್ರಭಾವ ಬ್ಯಾರಿ ಭಾಷೆಡೆ ಮೇಲೆ ಉಲ್ಲೆದ್ ಅರ್ಥ ಆಕಿಯೋಲಾನಾವುಡು. ತಮಿಳು ಭಾಷೆಡೆ ಪದ (ಉದಾ: ತನ್ನಿ) ಬ್ಯಾರಿ ಭಾಷೆಲ್ ಸೇರಿಯೋಂಡೆದ್ ಇದ್‌ಕ್ ಕಾರಣ ಬ್ರಿಟಿಷ್ ಕಾಲತ್ತ್ ಅವಿಭಜಿತ ಜಿಲ್ಲೆ ಮದ್ರಾಸ್ ಪ್ರೆಸಿಡೆನ್ಸಿಗ್ ಸೇರಿಯೆದ್ ಚೊಲ್ಲ ಅಜಂತೆ ಭಾಷೆ ಪ್ರಬೇದ ಸೇರಿಯೇ ಕರುಹು ಮಾತ್ರ ಕಿಟ್ಟಲ್ಲೆ.

ಬ್ಯಾರಿ ಭಾಷೆಡೆ ಸ್ವತಂತ್ರ ದ್ರಾವಿಡ ಭಾಷೆಯಾಯಿಟ್ಟ್, ತುಳುಭಾಷೆ ನಡು ದ್ರಾವಿಡ ಗುಂಪುಡೆ ಭಾಷೆ ಚೊನ್ನುತ್ತು ದಕ್ಷಿಣ ದ್ರಾವಿಡ ಭಾಷ ಶಬ್ದ ಬರೆಕೆಯಾಯಿಟ್ಟ್ ಬೆಲಿಯೆ ಆಯೆ ಭಾಷೆ ಚೊಲ್ಡೆ ವಾದ ಉಂಡು. ಆಯೆಂಗ್ ದ್ರಾವಿಡ ಜನಾಂಗತ್ತೆ ಮೇಲೆ ಮಧ್ಯ ದ್ರಾವೀಡ ಭಾಷೆ ಚೊನ್ನೆಗ್ ತಮಿಲ್‌ಂತ್. ಸಾಮಾನ್ಯ ಆಯಿಟ್ಟ್ ಮೂಲ ದ್ರಾವಿಡ ಭಾಷೆ ಚೋಲ್ದಾರ್. ಈ ಭಾಷಾ ಮೂಲತ್ತ್ ಕವಲೊಡೆಞೆದ್ ಭಾಷೆ ಗುರುತು ಆಕಿಡಾರ್. ಆರಂಭತ್ತ್‌ಲ್ ಬ್ರಹ್ಮೀ ಲಿಪಿ ಪೋಲ್ತೆ ಸುಧಾರಣೆ ಆಕಿಯೇ ಬಟ್ಟೆಳ್ತೆ ಬಳಕೆಯಾಕಿಯೆ ಇಂತ್. ಅದ್ ಕ್ರಮೇಣ ಆವಿಷ್ಕಾರ ಆಯೆ ಪಿನ್ನೆ ತಮಿಳು ಲಿಪಿರೂಪಿತ ಆಯಿಟ್ಟ್ ಚೊಲ್ಡೊ ತಜ್ಞರೇ ಅಭಿಪ್ರಾಯ. ಕವಲೊಡೆಞೆದ ತುಳು, ಬ್ಯಾರಿ, ಕೊಡವ, ಮಲಯಾಳಂ ಈ ಎಲ್ಲಾ ಭಾಷೆ ಉಂಡಾಯಿಡ್. ಚೋಲ್ದಾರ್. ಇಜನೆ ಕವೆಲೊಡೆಞೆ ಭಾಷೆರೊ ಮೇಲ್ ಆಧ್ಯಾತ್ಮಿಕ ಸಾಹಿತ್ಯಗಳ ಮೂಲಕ ಬೆಲಿಯೆ ಆಯಿಟ್ಟ್ ವ್ಯಾಪಕ ಆಯಿಟ್. ಸಂಸ್ಕೃತ ಭಾಷೆಡೆ ಪ್ರಭಾವ ಉಂಡು. ಸ್ವತಂತ್ರ ಭಾಷಾರೂಪ ಎಡೊತೊಂಡ್ರು. ದ್ರಾವಿಡಾ ಭಾಷೆಡೆ ಬಳಕೆ ಪ್ರಯೋಗ ಸ್ವಷ್ಟ ಆಯಿಟ್ಟ್ ಬೆಲಿಯೆ ಅವಾಂಟ್ ಇಕ್ಕೊಗು ಕಾರಣ ಸಂಸ್ಕೃತ ವ್ಯಾಕರಣ ಅನುಕೂಲ ಆಯಿಟ್ಟ್. ಭಾಷೆಡೆ ರೂಪತ್ತಡೆಮೆ ಬದಲಾವಣೆ ಆಕಿತ್ತ್. ಉತ್ತರತ್ತೆ ಪಿಡಿಚ್ಚೆ ದಕ್ಷಿಣತ್ತ್‌ಗ್ ದೀನ್‌ಡೆ ಆಧಾರ ಆಯಿಟ್ಟ್ ಬೆಳಞೆ ಸಾಹಿತ್ಯ ಪಿನ್ನೆ ಬ್ರಾಹ್ಮಣ ಪಾಂಡಿತ್ಯತ್ತೆ ಪ್ರಚಾರ ತುಳು ಸಮೇತ ಕೊರೆ ಭಾಷೆ ವ್ಯಾಕರಣತ್ತ್‌ಗ್ ರೂಪು ತನ್ನತ್ತ್. ಆಯೆಂಗ್ ತಮಿಳು ಮಾತ್ರ ತಂಡೆ ದ್ರಾವಿಡ ಮೂಲತ್ತೆ ಸ್ವಂತತೆ ಒಲಿಪಾಟಡ್. ಅಜನೆ ಬ್ಯಾರಿ ಭಾಷೆಂ ಸ್ವತಂತ್ರ ಪ್ರಯೋಗ ವಿಧಾನತ್ತೆ ಉಳಿಪಾಟಡ್. ತಮಿಳು ಇಪ್ಪಂ ಚೆಂದೂಳು ಚೊನ್ನೆಗ್ ಶುದ್ಧ ತಮಿಳ್ ಚೋಲ್ಡೊ ಹಿರಿಮೆ ಉಳಿಪಾಟಿಡ್. ಮಿಶ್ರ ಭಾಷೆಯಾಯಿಟ್ಟ್ ಬೆಳಞೆ ಬ್ಯಾರಿ ಭಾಷೆಂ ತಂಡೆ ವಿಶಿಷ್ಟ ಪ್ರಯೋಗ ವಿಧಾನತ್ತೆ ಮೂಲಕ ಸ್ವಂತಿಕೆ ಉಳಿಪಾಟಡ್.

ತುಳುನಾಡ್ ಜನಸಾಮಾನ್ಯ ಆಲ್‌ಮಾರ್ ಈ ತುಳು ಭಾಷೆ ಎಪ್ಪಲ್‌ಪಿನ್ನೆ ಬಳಕೆಯೇ ಆಕಿಯೋ ಇನ್ನಾರ್. ಚೋಲ್ಡೊ ಬಗ್ಗೆ ಇನ್ನೂಂ ಸ್ಪಷ್ಟ ದಾಖಲೆ ಇಲ್ಲೆ. ತುಳು ಭಾಷೆಲ್ ದ್ರಾವೀಡ ಪದಮೇ ಬಳಕೆಯೆಲ್ ಉಲ್ಲೆ. ಈ ಪ್ರದೇಶತ್ತ್ ಕನ್ನಡ ಭಾಷೆ ಪ್ರಚಾರತ್ತ್‌ಗೆ ಬಂಡೆ ಮುನ್ನೋಲು ತುಳು ಭಾಷೆ ಇಕ್ಕೊಗು ಸಾಧ್ಯ. ತುಳುನಾಡ್‌ರೆ ಪಾಂಡ್ಯರಾಜಡೆ ಕಾಲತ್ತ್‌ಳುಂ ತುಳು ಸಂಸ್ಕೃತಿ ಉಂಡು ಚೋಲ್ಡೊ ನಂದಳಿಕೆ ಅಮ್ಮುಂಜೆ ಗುತ್ತು ಶೀನಪ್ಪ ಹೆಗ್ಡೆ ಎಲ್ದಿಯೋ ದಕ್ಷಿಣ ಕನ್ನಡ ಜಿಲ್ಲೆಡೆ ಚರಿತ್ರೆ ಪಿನ್ನೆ ಭೂತಾಳ ಪಾಂಡ್ಯರಾಯನ (ಅಳಿಯಕಟ್ಟು) ಚೊಲ್ಡೊ ಬುಕ್‌ಲ್ ಗೊಂತಾಕ್‌ಪಾಟ್‌ರ್.

ಬ್ಯಾರಿ ಭಾಷೆಡೆ ಮೇಲ್ ಅರಬಿರೆ ಪ್ರಭಾವ ಆಯಿಟ್ಲೆ ಧರ್ಮಾಧಾರಿತ ಆಯಿಟ್ಟ್ ಸಂಸ್ಕೃತಿಡೆ ಭಾಗ ಆಯಿಟ್ಟ ಅರಬಿ ಪದ ಬ್ಯಾರಿ ಭಾಷೆಗ್ ಬಾನಿಯಾತ್ತೆ ಮಾರ್ಗ ಆಯಿಟ್ಟ ಅರಬ್ಬರೆ ವ್ಯವಹಾರಿಕಮಾಯೆ ಸಂಪರ್ಕ ಬೆಳೆಞಿ ಬಂತ್. ಆಯೆಂಗ್ ಅದ್‌ಲ್ ಒರು ಪುದಿಯೆ ಭಾಷೆ ಆಯಿಟ್ಲ್, ಬ್ಯಾರಿ ಸಂಸ್ಕೃತಿಡೆಮೇ ಬದಲಾವಣೆ ಆಕಿಯೆ ಅರಬ್ ಸಂಪರ್ಕ ಬ್ಯಾರಿಜಲೆ ಭಾಷೆ ತಂಡೇ ಚೊಲ್ಡೆ ಸಮರ್ಥನಿಯ ಅಲ್ಲ, ಕನ್ನಡ ಭಾಷೆಡೆ ಮೇಲ್ ಆರ್ಯ ಧರ್ಮ ಸಂಸ್ಕೃತಿ ಸಾಹಿತ್ಯತ್ತೆ ಪ್ರಭಾವ ಬೀರಿಯೆ ಪೋಲೆ ಬ್ಯಾರಿ ಭಾಷೆಡೆ ಮೇಲುಂ ಇಸ್ಲಾಂ (ಧರ್ಮಾದಾರಿತ) ಪದತ್ತೆ ಪ್ರಭಾವ ಉಂಡಾಯಿಡ್. ಭಾಷಾ ಪ್ರಯೋಗತ್ತೆ ಅರಬಿಡೆ ಪ್ರಭಾವ ಆಯಿಟ್ಲೆ. ಗ್ರಂಥ ಭಾಷೆಡೆ ಪ್ರಭಾವ ಆಯಿಟ್ಲೆ (ಗ್ರಂಥಭಾಷೆ–ಸಂಸ್ಕೃತ) ದ್ರಾವಿಡ ಮೂಲತ್ತೆ (ಬಟ್ಟೆಳತ್ತು) ಲಿಪಿ ಪಿನ್ನೆ ಬಳಕೆ ಪಿನ್ನೆ ಅರಬಿ ಲಿಪಿ ಬಳಕೆ ಆಯೆಂಗ್ ಭಾಷೆಡೆ ರೂಪತ್ತ್ ಎದೋರ್ ಬದಲಾವಣೆ ಆಯಿಟ್ಲೆ. ತುಳು ಅವರಣತ್ತ್ ಇಸ್ಲಾಂ ಧಮಾ ಆಧಾರಿತಮಾಯಿಟ್ಟ್ ಅರಬಿ, ತಮಿಳು ತುಳು ಮಲಯಾಲಂ ಪದಂ ಮಿಶ್ರ ಭಾಷೆಯಾಯಿಟ್ಟ್ ಬ್ಯಾರಿ ಭಾಷೆ ಬೆಳೆಞಿಯೊ ಪೋಯಿಡ್. ಅಜನೆ ತುಳುಡೆ ಉಪಭಾಷೆ ಅಲ್ಲೆಂಗ್ ಮಲಯಾಳತ್ತೆ ಉಪಭಾಷೆಲಾಯಿಟ್ಟ್ ಚೊಲ್ಲೊಂ ಪೋಲೆಯಿಲ್ಲೆ. ಬ್ಯಾರಿ ಭಾಷೆ ಸ್ವತಂತ್ರ ದ್ರಾವಿಡ ಭಾಷೆ ಚೋಲ್ಡೆ ಅದಕ್ಕ್ ಕೊರೆ ದಾಖಲೆ ಉಂಡು. ಭಾಷೆ ಮುಂಡೊಬೋ ಧ್ವನಿಜ, ಆಧಾರ, ಸ್ವರ ಉಚ್ಚಾರತ್ತ್‌ಗ್ ಅನುಗುಣಮಾಯಿಟ್ಟ್ ವರ್ಗಾ ಆರಂಭ ಆವುಡು. ಆದಲ್ ಆಯಿಟ್ಟ್ ಭಾಷೆ ಪ್ರಭಾವ ಆವುಡು.

ಸೇಡಿಯಾಪು ಕೃಷ್ಣಭಟ್ಟಡೆ ಅಭಿಪ್ರಾಯ ಪೋಲೆ ಕನ್ನಡ ವರ್ಗಾ ಆಕ್ಷರತ್ತ್ (ಐ, ಔ) ತುಳು ಭಾಷೆಲುಂ ಇಲ್ಲೆ. 'ಐ' ಬದಲ್ 'ಅಯಿ' ಔ ಬದಲ್ ಅವು ಬಲಾಸಿಯೊ ಇನ್ನಾರ್. ಮೂಲ ತಮಿಲುಂ ಪತ್ತ್ ಸ್ವರ ಅಕ್ಷರ ಇಂತ್. ಕ್ರಮೇಣ

ಐ, ಔ, ಸೇರಿಯೊಂಡೆ. ಬ್ಯಾರಿ ಭಾಷೆಲುಂ ಪತ್ತ್ ಸ್ವರ ಅಕ್ಷರತ್ತೆ ಬಳಕೆಯಾಯಿಡ್.

**ಮೊಗ್ರಾಲ್ ಕುಂಞಿಪಕ್ಕಿ ಎಲ್ದಿಯೆ ಆದಂ ನೆಬಿಯುಡೆ ಸ್ವರ್ಗ ನಿಷ್ಕಾಶನಂ**

ಆದಿ ಪಡಚ್ಚವನ್ ಆದಂ ನಬಿಕ್ಕುಂ ಮುಂಬು ಅಹಮ್ಮದ್
ಅಹ್ಮದ್ ಮುಹಿಬ್ಬಿನಾಲ್ ಆಲಂ ನಬಿಯಾಲ್ ಅಹ್ಮದ್
ಅಹ್ಮದ್ ಮುಹಮ್ಮದಿಯಾ ಮಹಮುದಾಕಿನ್ ಹಮ್ದಿನೆ
ಹಮ್ದಿನಾಮ್ಯೆತುಲ್ಲಾ ಎಲ್ಲಾ ಶೈಶ್‌ಲಿಲ್ ಇನ್‌ಸಾಗ್
ಇನ್ಸಾನ್ ಮುಹಮ್ಮದಿಯಾಯಿ ಅದರವ್ ಅಂಬಿಯಾ ಮುಸಷಾರಿಲಾಯಿ
ಮನುಷ್ಯರ್ ವಾಪ್ಪಾಕಿ ಸ್ವರ್ಗಮಿಲ್ ಆದಮೆ ಉಂಡಾಕಿ
ಉಂಡಾಕ್ಕಿ ಉಮ್ಮಾಯಾಯಿ ಆದಂ ಪಿದಾಮಿನ್ ಬಾರ್ಯಯಾಯಿ
ಬಾರ್ಯಯುಂ ಬರ್ತಾವು ಬಾನು ಸ್ವರ್ಗಂ ಬುಸ್ತಾನುಮ್
ಬುಸ್ತಾನ್ ಪಿಟುತ್ತಿಲಿಟ್ಟ್ , ಪರಂತು ಕೊಲಪ್ಪೊ ಮರಕುಲಟ್ಟ
ಮರಕುಲಟ್ಟ್ ಇಂಚಿಡ್ತ್ ಮಾರ್ತ್ ಅಡೆಗ್ ಪೋವ್ಡೊಡ್ಡಿ
ಪೋವ್ಡೊಡ್ಡಿ ಎಂದ್ ದೇವರ ಅಪ್ಪಣ ಆತೋನಾತೋ
ಬಂತೇಳಿ ಹವ್ವಮ್ಮ ಭಗವಾನ್ ಹೇಳಿದ್ದು ನಿಮ್ಮ
ನಿಮ್ಮ ಶಿವಾರಿಸ್ ನೋಡೊಗೋಸ್ಕರ ಹಾರಿಸಿ
ಹಾರಿಸಿ ಈ ಹಣ್ಣು ಹೆದರದೆ ಕೊಯ್ದು ಇಬ್ಬರು ತಿನ್ನು
ತಿನ್ನು ಎಂಬ ಮಾತು ತಾಯಿಗೆ ಕೇಳಿ ತಿಳಿಸಿತು
ತಿಳಿಕೊಂಡ ಬಳಿಕ ತರಲಿಕ್ಕೊಗಿ ಕೊಯ್ಯಕೆ
ಶಿಕ್ಷಕಮಾರ್‌ಲ್ಲ್ ಶಿಕ್ಷಣ ಪಡಇಾರ್. ಈ ಮಾಪಿಳ್ಳ ಸಂಸ್ಕೃತಿ ಕ್ರಮೇಣ ಬ್ಯಾರಿ ಸಂಸ್ಕೃತಿರೊಟ್ಟುಗು ಸೇರಿಟ್ಟ್ ಬ್ಯಾರಿಜಲೊ ಧಾರ್ಮಿಕ ವಿಧಿ, ಆಚಾರ, ಸಾಹಿತ್ಯ, ದೀನ್ ಬೋಧನೆ ಎಲ್ಲಂ ಮಾಪಿಳ್ಳ ಶೈಲಿ ಆಯಿತ್ತ್.

**ಸಂಸ್ಕೃತಿಯ ಕೊಡುಗೆ**

**ಸಾಹಿತ್ಯ:**–ಬ್ಯಾರಿ ಜನಾಂಗತ್ತೊ ಅಭಿವೃದ್ಧಿಗ್ ಸಂಸ್ಕೃತಿಡೊ ಕೊಡುಗೆ ಬೆಲಿಯೆದಾಯಿಟ್ಟಿಕ್ಕ್‌ಡ್. ಮುಖ್ಯಮಾಯಿಟ್ಟ್ ಸಾಹಿತ್ಯ, ಕಲೆ, ಸಂಪ್ರದಾಯ, ಆಚರಣೆಜ ಬ್ಯಾರಿ ಸಂಸ್ಕೃತಿಡೊ ಒಲಿಚಿತ್ತ್ ಕೊರಿಯ ಸಂಸ್ಕೃತಿರೊ ಇತರ ಮೂಲತ್ತೊ ಅಳವಡಿಸಿಯಾರ್.

**ಮಾಪಿಳ್ಳೆಪ್ಪಾಟ್ಟು** : ಇದ್ ಬ್ಯಾರಿ ಸಂಸ್ಕೃತಿಡೊ ಭಾಗ ಆಯಿಟ್ಟ್ ಸ್ವೀಕರಿಚ್ಚೆ ಒರು ಸಾಹಿತ್ಯ ಸರಣಿ ಆಯಿಟ್ಟಿಕ್ಕ್‌ಡ್. ಇದ್ ಮಾಪಿಳ್ಳೆ ಭಾಷೆಲ್ ಅಲ್ಲೆಂಗ್ ಬ್ಯಾರಿ ಭಾಷೆ, ತುಳು, ಕನ್ನಡ, ಅರೆಬಿಕ್, ಹಿಂದುಸ್ಥಾನಿ ಪೋಲೊತೆ ಮಿಶ್ರ ಭಾಷೆಲ್ ಉಲ್ಲೊ ಆಕರ್ಷಕ ಪಾಟ್ ಆಯಿಟ್ಟಿಕ್ಕ್‌ಡ್. ಇದ್‌ಲ್ ಮುಖ್ಯಮಾಯಿಟ್ಟ್ ಕಿಸ್ಸಾಪಾಟ್ಟು, ಮಾಲ ಪ್ಪಾಟು, ಒಪ್ಪನಪ್ಪಾಟ್ಟು, ಮೈಲಾಂಜಿಪ್ಪಾಟ್ಟು, ಅಮ್ಮಾಯಿಪ್ಪಾಟ್ಟು ಪಿನ್ನೆ ತಾಲೇಲೆ ಪಾಟ್.

**ಕಿಸ್ಸಾ ಪಾಟ್** : ಇದ್ ನೆಬಿ (ಸ.ಅ.) ತಂಜಲೆ ಪಿನ್ನೆ ಸ್ವಹಾಬಿಜಳೆ ಶೌರ್ಯ ಸಾಧನೆಡೊ ವರ್ಣನೆ ಪಾಟ್. ಮ್ಯೊಯಿನ್ ಕುಟ್ಟಿ ವೈದ್ಯರ್, ಇಯಾಲೊ ಕಿಸ್ಸಾ ಪಾಟ್‌ರೊ ರಾಜಾವು ಚೊಂತು ಬಿಲಿಕ್‌ಡಾರ್. ಇಯಾಲೊ ಬದ್ರುಲ್ ಮುನೀರ್, ಹಸನುಲ್ ಜಮಾಲ್ ಪೇರ್ ಪೋಯೊ ಸಾಹಿತ್ಯ ಆಯಿಟ್ಟಿಕ್ಕ್‌ಡ್. ಕಿಸ್ಸಾ ಪಾಟ್‌ಲ್ ಬದ್ರುಲ ಕಿಸ್ಸಾಪಾಟ್ ಜಾಸ್ತಿ ಜನಪ್ರಿಯ ಆಯೊ ಸಾಹಿತ್ಯ ಆಯಿಟ್ಟಿಕ್ಕ್‌ಡ್. ಅದ್ ಬ್ಯಾರಿಜಲೆಲು ಒರು ಮುಖ್ಯ ಬಾಗ ಆಯಿಟ್ಟ್ ನಿಂಡ್‌ಡ್. ಇದ್‌ರೊಟ್ಟುಗು ಚೆಲೆ ಸಂದರ್ಭತ್ತ್‌ಲ್ ಉಹ್‌ದ್, ಹುನೈನ್, ಕರ್ಬಲಾ, ಮದೀನತ್ ಮಾಲಾ, ಮಲಪ್ಪುರಂ ಮಾಲಾ ಪಾಡ್‌ರಾರ್.

**ಮಾಲಪ್ಪಾಟ್** : ಮಾಲಪ್ಪಾಟ್ ಇದ್ ಅರಬಿ ಮಳಯಾಲತ್ತ್‌ಲ್ ಉಲ್ಲೊ ಇನ್ನೊರು ಸಾಹಿತ್ಯ ಸರಣಿ. ಈ ಮೌಲಿದ್ ಪಲೆ ಸಂತಮಾರೊ ಸಾಧನೆಡೊ ಪಿನ್ನೆ ಪ್ರಾಮುಖ್ಯತೆಡೊ ವಿವರಣೆ ಆಕ್‌ಡ್. ಪಲೇ ಮಾಲ ಪಾಟ್ ಚೊನ್ನೆಂಗ್

ಬಹುಶಃ ಕುಂಞಿ ಮುಸ್ಲಿಯಾರ್ (1151) ಅಯಾಲೊ ನೂಲ್‌ಮಾಲ. ಇನ್ನೊರು ಮುಖ್ಯ ಮಾಲಾ ಚೊನ್ನೆಂಗ್ ಮೊಹಿಯುದ್ದೀನ್ ಮಾಲ, ಇದ್ ಬ್ಯಾರಿಜಲೆ ನಡುಲು ದೀನ್‌ಡೊ ಕಾರ್ಯತ್ತೊ ಸ್ಥಾನ ಪಡಞಿಡ್. ಇದ್ ಖಾಳಿ ಮುಹಮ್ಮದ್ ಚೊಂತು ಪರಿಚಯ ಉಲ್ಲೊ ಮೊಹಮ್ಮದಿಬ್‌ನು ಅಬ್ದುಲ್ ಅಜೀಜ್ (ಖ.ಸ.) ಎಲ್ದಿಯೆದ್. ಇದರೊಟ್ಟಿಗು ಬದ್ರ್ ಮಾಲೆ, ನಫೀಸತ್ ಮಾಲೆ ಕೂಡಾ ಬ್ಯಾರಿಜಲೆಲು ಜನಪ್ರಿಯಮಾಯೆದ್. ಖಾಳಿ ಬಾಪಕುಂಞಿ ಮುಸ್ಲಿಯಾರ್ ಎಲ್ದಿಯೊ ಸೈಯದ್ ಮದನಿ ಮಾಲೆ ಕೂಡ ಜನಪ್ರಿಯಮಾಯೆದ್. ಈ ಎಲ್ಲಾ ಮಾಲೆಂ ಅರಬ್ಬಿ ಮಲಯಾಳಂ ಭಾಷೆಲ್ ಇನ್ನೊಂಗುಂ ಇದ್ ಬ್ಯಾರಿಜಗು ಒರು ಮುಖ್ಯ ದೀನ್‌ಡೊ ವಿಧಿಡೊ ಭಾಗ ಆಯಿಟ್ಟ್ ಮಾರ್ಪಟ್ಟಿಡ್.

**ಮೈಲಾಂಜಿ ಪಾಟ್ :** ಇದ್ ಮಂಜೆಲತ್ತೊ ಸಂದರ್ಭತ್ತ್‌ಲ್ ಪಾಡ್‌ರೊ ಇನ್ನೊರು ನಮುನತ್ತೊ ಪಾಟ್. ಮಂಜಿಲ್ತೆ ಅರಕ್ಕಿಡಲ್, ಮೆರವಣಿಗೆ ಒಪ್ಪಣತ್ತೊ ಸಮಯತ್ತ್‌ಲು ಬ್ಯಾರಿಜ ಈ ಪಾಟ್ ಪಾಡುವಾರ್. ಪುದಿಯಾಂಪುಲೆ ಪಿನ್ನೆ ಪುದಿಯೆಪೆನ್ನ್‌ಗ್ ಮಾಮಿ ಕೊಡುಕ್ಕುಡೆ ಗಮ್ಮತ್ತ್‌ಡೊ ವರ್ಣಣೆ ಅಮ್ಮಾಯಿ ಪಾಟ್ ಮಂಜಿಲ್ತೆ ಲೇಸ್‌ಗ್ ಒರು ಕಲೆ ಉಂಡಾಕಿಯೋಂಟಿಂತ್.

**ತಾಲೋಲಿ ಪಾಟ್** : ಇದ್ ಕಿಡಾವುಗು ತೊಟ್ಟಿಲ್ ಕೆಟ್ಟುಂಬೊ ಪಾಡಿಯೋಂಟಿನ್ನಾರ್. ಇದ್ ಕಿಡಾವುಡೊ ವರಕ್‌ಡೊ ಪಾಟ್ ಅಯಿಟ್ಟಿಂತ್. ಈ ಎಲ್ಲಾ ಪಾಟ್‌ರೊ ಓತುಪಲ್ಲಿ ಇಲ್ಲೆಂಗ್ ಮದ್ರಸತ್ತ್‌ಲು ಪಡಿಪಾಟಿಯೋಂಟು ಇನ್ನಾರ್. ಕೊರಿಯ ಸಂದರ್ಭತ್ತ್‌ಲು ಬಾಲಕರಮಾರ್ ಇದ್‌ರೊ ತರಬೇತಿ ಗಾಯಿಟ್ಟ್ 'ಪಾಟ್ಟುಮಾಲಿಕ' ಏರ್ಪಾಡು ಆಕಿಯೋಂಟಿನ್ನಾರ್. ಮೈಕಾಲತ್ತ್ 1916ಲು ಅಂಜುಮಾನ್ ಇತ್ತಿಹಾದುಲ್ ಇಸ್ಲಾಮ್ ಪಿನ್ನೆ ಅಂಜುಮಾನ್ ಕುವ್ವತ್ತುಲ್ ಇಸ್ಲಾಮ್ ಇಜನೆತ್ತೊ ಪಾಟ್ಟು ಮಾಲಿಕಾ ಉಂಡಾಕಿಯೋಂಟಿನ್ನಾರ್.

ತುಳುನಾಡ್‌ರೊ ಖ್ಯಾತ ಮಾಪಿಳ್ಳೆಪಾಟುಕಾರೆ ಮಾಹಿತಿ ಲಭ್ಯ ಇಲ್ಲೆ. ಸೈಯದ್ ಮದನಿ ಮಾಲೆ ಎಲ್ದಿರೊ ಬಾಪಕುಂಞಿ ಮುಸ್ಲಿಯಾರ್ ಇನ್ನುಂ ಕೊರಿಯ ಮಾಲೆ ಎಲ್ದಿಡ್. ಮೈಕಾಲತತ್ತೊ ಉಂಞಿ ಮುಸ್ಲಿಯಾರ್ ಇಜನತ್ತೊ ಕಾರ್ಯ ಆಕಿಡ್. ಆಯೆಂಗ್ ಅಯಾಲೊ ರಚನೆರೆ ಬಗ್ಗೆ ನಿಖರ ಮಾಹಿತಿ ಇಲ್ಲೆ.

ಮೊಗ್ರಾಲ್‌ಡೊ ಕುಂಞಿಪಕ್ಕಿ, ಟಿ. ಉಬೈದ್ ಕಾಸರಗೋಡು, ಹೈದರ್ ಗುರುವಾಯನಕೆರೆ, ಟಿ.ಕೆ ಹುಸೇನ್, ಬಿ. ಎಂ.ಎ. ರಫೀಕ್, ಅಬ್ದುಲ್ ಹಕೀಂ

ಅಹ್ಮದ್, ಎಫ್.ಎಚ್.ಒಡೆಯಾರ್ ಇಜ ಸಾಹಿತ್ಯತ್ತ್ಗ್ ಚೊಮ್ಮೆ ಕೊಡುಗೆ ಕೊಡುತುರ್.

ಇದಲ್ಲಾಂಟ್ ಧಫ್ ಕೋಲುಕಲಿ, ಕವಾಲಿ ಇಂಡ್ ಬ್ಯಾರಿ ಜನಾಂಗತ್ತ್ಲು ಒರು ಸಾಂಸ್ಕೃತಿಕ ಚಿನ್ನೆ ಆಯಿಟ್ಟ್ ಉಂಡು.

**ಭವಿಷ್ಯ**

ಬ್ಯಾರಿ ಜನಾಂಗತ್ತೊ ಇತಿಹಾಸ ಪಿನ್ನೆ ಸಂಪ್ರದಾಯ ಮುನ್ನೊಲ್ತೊ ತಲೆಮಾರ್‌ಗ್ ಎತ್ತ್‌ಬಾಟ್‌ರೊ ಸಬೂಲ್ಲು ಬ್ಯಾರಿ ಸಾಹಿತ್ಯ ಅಕಾಡೆಮಿಯ ಹೆಜ್ಜೆ ಶ್ಲಾಘನೀಯಮಾಯೆದ್. ಬ್ಯಾರಿ ಸಂಸ್ಕೃತಿರೊ ಬಗ್ಗೆ ಬ್ಯಾರಿ ಜನಾಂಗತ್ತ್‌ಗುಂ ತೆರಿಪಾಟ್‌ರೊ ಉದ್ದೇಶತ್ತ್‌ಲು ಬ್ಯಾರಿ ಅಕಾಡೆಮಿಡೊ ಕನಕ್‌ಲು ದಫ್, ಕೋಲುಕಲಿ, ಒಪ್ಪನೆ ಪೋಲೋತೊ ಸ್ಪರ್ಧೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡ್‌ಕ್‌ಡ್. ಬ್ಯಾರಿ ಸಮುದಾಯತ್ತ್‌ಲು ಬ್ಯಾರಿ ಸಂಸ್ಕೃತಿ, ಸಂಪ್ರದಾಯತ್ತೊ ಸಂಸ್ಕೃತಿರೆ ಪ್ರಜ್ಞೆ ಉಂಡಾಕ್‌ಡೊ ಸಬುಲ್ಲು ಒರುಪಾಡ್ ಕಾರ್ಯಕ್ರಮ ಆಕಿಯೋಂಟುಂಡು. ಸಂದೋಲ, ಕಲೋತ್ಸವ, ಕಾರ್ಯಗಾರ, ಕಮ್ಮಟಜ, ವಿಚಾರಗೋಷ್ಠಿ ಪೋಲೊತೊ ಕಾರ್ಯಕ್ರಮ ಆಯೋಂಟುಂಡು. ಈ ಕಾಲತ್ತ್‌ಲ್ ಪಾಶ್ಚಿಮಾತ್ಯ ಸಂಸ್ಕೃತಿಡೊ ಮುನ್ನೊಲ್ತೊ ತಲೆಮಾರ್‌ಗುಂ ಎತ್ತ್‌ಪಾಟ್‌ರೆದ್ ಪ್ರತಿ ಒರ್ತರೊ ಕರ್ತವ್ಯ ಆಯಿಟ್ಟಿಕ್ಕ್‌ಡ್. ಬ್ಯಾರಿ ಜನಾಂಗತ್ತೆ ಸಂಸ್ಕೃತಿ, ಸಂಪ್ರದಾಯ, ಆಚರಣೆ ಪದ್ಧತಿಡೊ ಮುನ್ನೊಲ್ತೊ ತಲೆಮಾರ್‌ಗ್ ಎತ್ತ್‌ಪಾಟ್ತೊ ನಿಟ್ಟ್‌ಲು ಎಲ್ಲಾರುಂ ಸಹಕಾರ ಆಕ್‌ಡೊದು ಅನಿವಾರ್ಯ ಅಯಿಟ್ಟಿಕ್ಕ್‌ಡ್.

**ಪೂರಕ ಅಂಶಗಳು**

**ಬ್ಯಾರಿಜ ಪಿನ್ನೆ ಕೊಡವ – ಸಾಮ್ಯತೆ**

ಬ್ಯಾರಿಜ ಪಿನ್ನೆ ಕೊಡವಮಾರೆ ಸಂಸ್ಕೃತಿಡೊ ನಡುಲು ಸಾಮ್ಯತೆ ಉಲ್ಲೆದ್ ಕಾಣೊಗು ಸಾಧ್ಯ ಆವುಡು. ಕೊಡವ ಭಾಷೆ ಪಲೆ ರೀತಿಲುಂ ಬ್ಯಾರಿ ಭಾಷೆಡೊ ಮಾದರಿಲ್ ಉಂಡು. ಉಚ್ಚಾರ ಮಾತ್ರ ಅಲ್ಲ. ಕೊರಿಯ ಪದ ಜಂಡ್ ಭಾಸೆಲುಂ ಸಾಮಾನ್ಯ ಆಯಿಟ್ಟುಂಡು. ಉದಾಹರಣೆಗ್: ಕೆಟ್ಟ್, ಪೆಂಞಯಿ ಪೋಲ್ತೆ ಪದಜಲೆ ಸಾಮ್ಯತೆ ಕಾಣೊ ಕಿಟ್ಟ್‌ಡ್.

| ಸಂಸ್ಕೃತಿ | ಬ್ಯಾರಿ | ಕೊಡವ |
|---|---|---|
| ಮದುವೆ | | ಮಂಜೆಲ |
| ಮಂಗಿಲ | | |
| ನಿಶ್ಚಿತಾರ್ಥ | ಉರಪ್ಪು | ಮೌರ್ತ |
| ಋತುಮತಿ ಕಾರ್ಯಕ್ರಮ | ಬುಲೂಕು ಮಂಜಿಲ | ಪೊಲಿಕೊಂಡ್ ಮಂಜೆಲ |
| ಚೊಚ್ಚಲ ಗರ್ಭಿಣಿ | ಅಪ್ಪತ್ತೊ ಮಂಜಿಲ | ಕುಲಿಯಾಮೆ ಮಂಜಿಲ |

ಮಂಗಿಲ, ಮೌರ್ತ, ಪೊಲಿಕೊಂಡ ಮಂಗಿಲ, ಪೊಲಿಯಮೆ ಮಂಗಿಲ, ಪೈಂತಲ್ ಮಂಗಿಲ (ಕಿಡಾವು ಪೆತ್ತ್‌ತ್ತ್ ಪೋವುನೊನ್ನಾಮತ್ತೆನಾಲ್) ಇದ್ ಬ್ಯಾರಿ ಆಚರಣೆರೊ ಹೋಲಿಕೆ ಆವುಡು. ಅನಿಜ ಪಿನ್ನೆ ಪೆನ್ನಿಜ ಉಪಯೋಗಿಕ್ಕ್‌ಡೆ ತುನಿಮುರಿಡೊ ಕುಪ್ಪಾಯ ಚೊನ್ನೋಂಟಿನ್ನಾರ್. ಪಿನ್ನೆ ಜಾಸ್ತಿ ಆಭರಣ ಸಾಮಾನ್ಯಮಾಯಿಟ್ಟಿಂತ್. ಮಂಜೆಲತ್ತ್ ಮುನ್ನೊಲು ಪೆನ್ನ್‌ಡೊ ಕುಲಿಪಲಾಟ್‌ಡೊ. ಬ್ಯಾರಿ ಪಿನ್ನೆ ಕೊಡವಮಾರ್‌ಲು ಸಾಮಾನ್ಯ ಮೆಟಲ್, ಲ್ಯಾಂಪ್ ಬಳಕೆಲ್. ಬ್ಯಾಂಡ್ ಪಿನ್ನೆ ಮ್ಯೂಸಿಕ್ ಬಳಕೆ ಜಂಡಾಲ್ಲೆಂ ಇಂತ್.

**ಬ್ಯಾರಿಂಜಲೆ ಉಡುಪು**

ಬ್ಯಾರಿಜ ಸರಳ ಉಡುಪು ಇಟ್ಟೊಂಟಿನ್ನಾರ್. ಒರು ಮುಂಡು ಅಲ್ಲೆಂಗ್ ಸಾದಾ ಡ್ರೆಸ್. ನಡುಪಟ್ಟಿಡೊಟ್ಟುಗು ಇಟ್ಟೊಂಟಿನ್ನಾರ್. ಮಕ್ಕ ಮಾತ್ರ ಅಲ್ಲಾಂಟ್ ಬೆಲಿಯಜ ಸಹ ಮುಂಡು ರಂಗ್‌ಡೆದ್ ಉಡ್ತೊಂಟಿನ್ನಾರ್. ಶರ್ಟ್‌ರೊ ಕುಪ್ಪಾಯ ಚೊನ್ನೊಂಟಿನ್ನಾರ್. ಪೆನ್ನಿಜ ಎದುರುಲು ಕುಸುರಿ ಸೊರ ಆಕಿಯೊ ಕುಪ್ಪಾಯ ಇಟ್ಟೊಂಟಿನ್ನಾರ್. ಬ್ಯಾರಿಜ ತಲೆ ಬೋಲು ಆಕಿತ್ತ್ ಮುಂಡಾಸ್ ಕೆಟ್ಟಿಯೋಂಟಿನ್ನಾರ್. ಬೆಲಿಯೊ ತೊಪ್ಪಿ ಇಡ್ಡೆದ್ ರೂಢಿ. ಪೆನ್ನಿಜ ಸಾಧಾರಣ ಈ ಜಾವುಲು ಡ್ರೆಸ್ 'ಕಾಚೆ–ಮುಂಡು'ಡೊ ರೀತಿಲು ಇಟ್ಟೊಂಟಿನ್ನಾರ್. ಅಜ ಬಂಗಾರ್‌ಡೊ ಕುಸುರಿ ಉಲ್ಲೊ ಕಲರ್‌ಡೊ ಪಟ್ಟ್ ತುನಿ ಉಡ್ತೊಂಟಿನ್ನಾರ್. ಪೆನ್ನಿಜ ಆಭರಣ ಬಾರಿ ಇಷ್ಟಪ್ಪೆಟ್ಟೊ ಇನ್ನಾರ್. ಬಂಗಾರ ಪಾವಲಿಡೊ ಚಾವಡ, ಬಂಗಾರಡೊ ಎಸಲ್, ಬಲೆ ಪಿನ್ನೆ ಮೊದರ ಸಾಮಾನ್ಯ ಆಯಿಟ್ಟ್ ಇಟ್ಟೊಂಟಿನ್ನಾರ್.

ಅಗತ್ತ್‌ಲ್ ಚೊಮ್ಮೆ ಪ್ರಮಾಣತ್ತ್‌ಲು ಆಭರಣ ಇಂತ್. ಅದ್‌ರೊ ಜಾಸ್ತಿ ಆಯಿಟ್ಟ್ ಕುಸುರಿ ಆಭರಣತ್ತ್‌ಲ್ ಆಕಿಯೋಂಟಿನ್ನಾರ್. ಬಂಗಾರಡೊ ಸೊರ ತರಜ ಜಾಸ್ತಿ ಆಯಿಟ್ಟ್ ಅಮುಸ್ಲಿಮಿಜ ಆಯೆದ್ ಕೊಂಡುಟ್ಟು ಬ್ಯಾರಿಜ ಅಜಲೆ ಬೇನಾಯೆ ಆಭರಣ ಆಕ್‌ವಾಟಿಯೋಂಟಿನ್ನಾರ್. 19 ಮತ್ತೆ ಶತಮಾನತ್ತ್‌ಲು

ಬ್ಯಾರಿಜ ಪೈಸಕ್ಕಾರ್ ಅಯಾರ್.

**ಬ್ಯಾರಿಂಜಲೊ ಸಾಮಾನ್ಯ ಆಭರಣಜ**

| ಕೈ | ಕಾದ್ | ತಲೆ | ಕಲ್ತ್‌ಗ್ | ಕಾಲ್/ನಡು |
|---|---|---|---|---|
| ಬಳೆ | ಅಲಿಕತ್ | ತಲೆ ಸಿಂಗಾರ | ತಾಳಿಮಾಲೆ | ಕಾಲ್ ಪಟ್ಟಿ |
| ಎಳಬಳೆ | ಕಾಯಿಲಂ | ಕೂಕಟ್ಟ್ | ಗೆಜ್ಜೆತಿಕ್ | ಸರಪಳಿ |
| ಸುರ್ಗಿತಿರಿ | ಕೊಪ್ಪು | ಕೇದೆಗೆ | ಚಾವಡ | ನಡುಪಟ್ಟಿ |
| ಮುರ್ಗಿತಿರಿ | ಸರಪಳಿ | ಜಡೆಪೊಳ್ಳ | ಉರುಕುಲೇಸ್ | ಅರಪಟ್ಟಿ |
| ಎಡೆಬಳೆ | ಕುಡುಕ್ಕ | ಕುರಿ | ಮಿಸ್ರಿಮಾಲೆ | ಅರಂಞಾನ |
| ತಟ್ಟಬಳೆ | ಅರುಲಿ | ಚೌರಿ | ಒಟ್ಟ ಉರುಕು | ನೂಲು |
| ಕಾದುಬಳೆ | ಬೆಂಡೋಲೆ | ತಿರ್ಪು | ಪೂಮಾಲೆ | |

**ತಾಲಕ್ಕಾರ್/ಇಲ್ಲಮ್**

ಬ್ಯಾರಿಜಲ್ಲೆ ಬ್ಯೇರೆ ಬ್ಯೇರೆ ಇಲ್ಲಮ್ ಇಂತ್. ಪ್ರತಿಯೊರು ಇಲ್ಲಮ್‌ಗು ಒರೊರು ದರ್ಜೆ ಇಂತ್. ಇಲ್ಲಮ್‌ಡೊ ದರ್ಜೆ ಅಲಕೊಗು ಮಾನ ಬೊನ್ನೆಂಗ್ ಮಂಜೆಲ್ತೆ ಸಂದರ್ಭತ್ತ್‌ಲು ತಂಡೆ ಮೋಲುಗು ಎತ್ತರೆ ಮಹ್‌ರ ನಿಗದಿ ಆಕಿಡಾರ್ ಚೆಲ್ಡೆ ಬಿಸಯತ್ತೆ ಮೇಲ್ ಆಯಿಟ್ಟಿಂತ್. ಕುಟುಂಬತ್ತೊ ಘನತೆಗ್ ತಕ್ಕಾಯಲಿಟ್ ಅಜಲೊ ಮಕ್ಕಲೆ ಮಂಜೆಲ್ತೊ ಮಹ್‌ರ ನಿರ್ಧಾರ ಆಕ್‌ಡಾರ್. ಈ ಇಲ್ಲಮ್ ಪದ್ಧತಿ ಮೈಕಾಲ ಪಿನ್ನೆ ಕಾಸರಗೋಡು ಪ್ರಾಂತ್ಯತ್ತೆ ಇಲ್ಲಮ್‌ಡೊ ನಡುಲು ಪೇರ್‌ಡೊ ಭಿನ್ನತೆ ಕಾಣೋಗು ಸಾಧ್ಯ ಆವುಡು.

**ಮೈಕಾಲ ಪ್ರಾಂತ್ಯತ್ತೆ ಇಲ್ಲಮ್** : ಕೈಸರ್ ಇಲ್ಲಂ, ಸುಲ್ತಾನ್ ಬೆಲಿಯೆ, ಅಕ್ಕಬೆಲಿಯೆ, ಚಮಕ್ ಬೆಲಿಯೆ, ಪಟಿಲ್ಲಮ್ ಅಂಜಿಲ್ಲಮ್, ಚಂದವಲ್ಲಿ, ಕಡಿಂಗರ ಪಿನ್ನೆ 21 ಪಿನ್ನೆ 11 ಅಮಾಡ ಪೊನ್ನು (ಸವರಿನ್) ಮಹ್‌ರ್.

**ಕಾಸರಗೋಡು ಪ್ರಾಂತ್ಯತ್ತೊ ಇಲ್ಲಮ್** : ಬಿರಾನ್ ಇಲ್ಲಂ, ಮಿಯಾನ್ ಇಲ್ಲಂ, ತಲ ಇಲ್ಲಮ, ಮುತುಲ್ ಇಲ್ಲಮ್, ಕುಂಚಿಲ್ಲಮ್ ಅಂಜಿಲ್ಲಮ್, ಪಾಟ್ಟಿಲ್ಲಮ್, ಅಪಾಟ್ಟಿಲ್ಲಮ್ ಪಿನ್ನೆ 21 ಪಿನ್ನೆ 11 ಅಮಾಡ ಪೊನ್ನು (ಸವರಿನ್) ಮಹ್‌ರ್.

ಇದ್ ಮುಖ್ಯ ಇಲ್ಲಮ್ ಆಯಿಟ್ಟಿಂತ್. ಇದಲ್ಲಾಂಟ್ ಬೇರೆ ಇಲ್ಲಮ್ ಉಂಡು. ಆಯೆಂಗ್ ಅದ್‌ರೊ ಗುರುತು ಕಾನೊಗು ಸಾಧ್ಯ ಆವುಲ್ಲೆ. ಇಪ್ಪಲುಂ ಚೆಲೆ ಆಲ್‌ಮಾರೆ ಅಜಲೆ ಇಲ್ಲಮ್‌ಡೆ ಬಗೆಲು ಚಮ್ಮೆ ಅಭಿಮಾನತ್ತ್‌ಲು ಚೊಲ್ದಾರ್. ಅಂಜಿಲ್ಲಮ್‌ಡೆ ಡಾ. ಮಹಮ್ಮದ್ ಶರೀಫ್ ಚಮಕ್, ಬೆಲ್ಲತ್ತೆ ಡಾ. ಝಕರಿಯ್ಯಬ್ಬ ಪಿನ್ನೆ ಮಿಯಾನ್ ಇಲ್ಲಮ್‌ಡೆ ಬಾಪು ಬ್ಯಾರಿ. ಇಲ್ಲಮ್ ವ್ಯವಸ್ಥೆ ಕೊರಿಯೆ ಉದಾಹರಣೆಜ.

**ಇಲ್ಲಮ್‌ಡೊ ಗುಣ ಲಕ್ಷಣಜ :**

- ಇಲ್ಲಮ್ ಸರಂಜಾಮಿ (ಊಳಿಗಮಾನ್ಯ) ಪದ್ದತಿಪೋಲೆ ಕಾಣೋಗು ಸಾಧ್ಯ ಆಯೊಂಟಿಂತ್. ಇದ್ ಕುಟುಂಬತ್ತೊ ಆರ್ಥಿಕ ಅಂತಸ್ತ್‌ಗ್ ತಕ್ಕಮಾಯಿಟ್ಟ್ ರೂಪಿತಗೊಂಡೋಂತಿಂತ್. ಈ ಘನತೆಡೊ ಎಲ್ಲಾ ಸಾಮಾಜಿಕ ಸಂಬಂಧತ್ತ್‌ಲು ಒಲಿಪಾಟಿಡಾರ್.
- ಇಲ್ಲಮ್ ಉಮ್ಮಡೊ ಸಂದಾನತ್ತ್‌ಲು ಬಂಡೆದ್. ಉಮ್ಮಡೊ ಇಲ್ಲಮ್ ಮಕ್ಕ ಅನುಸರಿಚ್ಚೊ ಇನ್ನಾರ್. ಅದ್ ಉಮ್ಮಡೊ ಗೌರವ ಜಾಸತಿ ಅಕಿಯೋಂಟಿಂತ್.
- ಒರೇ ಇಲ್ಲಮ್‌ಡೊ ಆಲ್‌ಮಾರ್ ನಡುಲು ಮಂಜಿಲ್ತೆ ಸಂಬಂಧ ಆಕಿಯೊಂಟಿಲ್ಲಾಂತ್. ಇಲ್ಲಮ್ ಚೊಲ್ದೆದ್ ಭಾರತತ್ತೆ ಪದ್ಧತಿ ಪೋಲೆ ಒರು ಗೋತ್ರತ್ತ್‌ಗ್ ಸಮಾನ. ಈ ಪದ್ಧತಿ ತುಳುವರ್‌ಲು ಉಲ್ಲೊ 'ಬರಿ' ಪದ್ಧತಿಡೊ ಉಗಮ ಆಯಿಡ್ ಚೊಲ್ದೆದ್‌ಗ್ ನಲ್ಲೊರು ಉದಾಹರಣೆ. ಪುಟ್ಟಿ 'ಬರಿ'ರೊ ಪ್ರಕಾರ ಪೆತ್ತೆ ಗೋತ್ರ ಪಿನ್ನೆ ಮಂಜಿಲ್ತೆ ಸಂಬಂಧ ಬೆಲೆಪಾಟಿಯೆ ಗೋತ್ರ ಜಂಡುಂ ಒನ್ನು ಅವೊಗು ಸಾಧ್ಯ ಇಲ್ಲೆ. 20 ಮತ್ತೆ ಶತಮಾನತ್ತೆ ನಡುತೋಲೊ ಈ ಭಿನ್ನ ಗೋತ್ರತ್ತೊ ಮಂಜಿಲ್ತೆ ಪದ್ಧತಿ ಬ್ಯಾರಿಜಲೆಲು ಚಾಲ್ತಿಲ್ ಇಂತ್.
- ಮಂಜಿಲ್ತೆ ಸಂದರ್ಭತ್ತ್‌ಲು ಈ ಇಲ್ಲಮ್‌ಡೊ ಮಹತ್ವ ಆಯಿಟ್ಟಿಕ್ಕ್‌ಡ್. ಇಲ್ಲಮ್‌ಡೊ ಆಧಾರತ್ತ್‌ಲು ಪುದಿಲಯಾಂಪುಲೆಡೊ ಕಡೆರೆ ಪುದಿಯೆ ಪೆನ್ನ್‌ಗುಂ ಮಹ್‌ರ ನಿರ್ಧಾರ ಆಕಿಯೋಂಟಿನ್ನಾರ್. 21 ಅಮಾಡ ಪೊನ್ನು (ಸವರಿನ್) ಪಿನ್ನೆ 11 ಅಮಾಡ ಪೊನ್ನು (ಸವರಿನ್) ಚೊಲ್ದೆ ಇಲ್ಲಮ್ ಇಂತ್. ಮಹ್‌ರ್ ಪೂರ್ವ ನಿರ್ಧಾರ ಆಯಿಟ್ಟಿಂತ್. ಏದೊರು ರೀತಿಲುಂ ರಿಯಾಯಿತಿಗ್ ಅವಕಾಶ ಇಲ್ಲಾಂತ್. ಇಲ್ಲಮ್‌ಡೊ ಮಹ್‌ರ್ ಅನುಸರಿಚ್ಚಿಟ್ಟ್

ಮಂಜಿಲ್ತ್ ಕಾರ್ಯ ನಿದಿ ಆಕಿಯೋಂಟಿನ್ನರ್. ಅದ್‌ಕೊಂಡುಟ್ಟು ಜಾಸ್ತಿ ಮಹ್‌ರ್ ಕೊಡುಕ್ಕುಡಜ ಪಿನ್ನೆ ಕೊರೊಡಿ ಮಹ್‌ರ್ ಕೊಡುಕ್ಕುಡಜ ವರ್ಗ ಚೊಂತು ಜಂಡ್ ವರ್ಗ ರೂಪಿತ ಆಯಿತ್. ಪಿನ್ನೆ ಮಂಜಿಲ್ತೆ ನಿಯಮ ಕ್ಲಿಷ್ಟ ಆಯಿತ್ತ್. ಪುದಿಯಾಂಪುಲೆಗು ಅಂತಸ್ತ್‌ಗ್ ತಕ್ಕ ಮಹ್‌ರ್ ಕೊಡ್ಕೊಗು ಆಯಿಲ್ಲೆಂಗ್ 11 ಪಿನ್ನೆ 21 ಮಹ್ರ್ ವರ್ಗತ್ತೊ ನಡುಲು ಮಂಜಿಲ ಆವುಡೆದ್‌ಲು ಯಾದೊರು ನಿರ್ಭಂದ ಇಲ್ಲಾಂತ್.

- ಉತ್ತರದಾಯಿತ್ವ ಪಿನ್ನೆ ಆಸ್ತಿಗ್ ವಾರಿಸುದಾರ ಆರ್ ಚೊಲ್ಡೆ ಬಿಸಯತ್ತ್‌ಲು ಇಲ್ಲಮ್‌ಡೊ ಪಾತ್ರ ಇಲ್ಲೆ. ಮಾತೃ ವಂಶಸ್ಥ ಪದ್ಧತಿಡೊ ಈ ಉತ್ತರಾದಾಯಿತ್ವತ್ತೆ ನಿಯಮ ಪಿನ್ನೆ ಆಸ್ತಿಡೆ ಬಿಸಯತ್ತ್‌ಲುಂ ಪಾಲಿಚ್ಚೊಂಟು ಇಲ್ಲಾಂತ್. ಈ ನಿಯಮ ಬ್ಯಾರಿಜಳೆ ಮಾಪಿಳ್ಳಮಾರ್‌ಡೊ ರಿವಾಜ್‌ಡೊ ಬದಲಾಕ್‌ಡ್.
- ಬ್ಯಾರಿಜಲೆ ಇಲ್ಲಮ್‌ಲು ಒರೇತೋಲೆ ಉಲೊ ಅಂಶಜ ಕಾನೊ ಸಾಧ್ಯದ ಆವುಡು. ಎಲ್ಲಾ ಬ್ಯಾರಿಜ ನಜಲೊ ಇಲ್ಲಮ್ ಉನ್ನತ ವರ್ಗ ಅಲ್ಲೆಂಗ್ ಕೀಲ್‌ಡೆ ವರ್ಗ ಆಯೆಂಗುಂ ಅಜಲೆ ತಾಲಕ್ಕಾರ್ ಚೊಂತು ಗುರುತಿಸಿ ಯೋಂಟಿನ್ನಾರ್. 'ತಾಲ' ಚೆನ್ನೆಂಗ್ ಅಂತಸ್ತ್ ಅಜ ಎಲ್ಲಾ ಲೇಸ್‌ಗ್ ಆಹ್ವಾನಿತಮಾರ್ ಪಿನ್ನೆ ಅಜಲೊ ಆದರತ್ತ್‌ಲ್ ತಕ್ಕಾರ ಆಕಿಯೋಂಟಿನ್ನಾರ್. ಈ ಪದ್ಧತಿ ಮೈಕಾಲ ಪಿನ್ನೆ ಕಾಸರಗೋಡುಲು ಕಾನೊಗು ಸಾಧ್ಯ ಆಯೋಂಟಿಂತ್.
- ಚೆಲೆ ಬ್ಯಾರಿಜ ಯಾದೊರು ಇಲ್ಲಮ್‌ಗ್ ಸೇರಾತ್ತಜ ಇನ್ನಾರ್. ಇಜನೆತ್ತೊ ಮುಸ್ಲಿಮಜಲೆ 'ತಾಲ' ಇಲ್ಲಾತ್ತೊರು ಚೊಂತು ಕನಕ್ಕಾಕಿಯೊಂಟಿನ್ನಾರ್. ಇಜ ಸಾಮಾಜಿಕ ಅಂತಸ್ತುಡೆ ಆಧಾರತ್ತ್‌ಲ್ ಕೀಲ್ ವರ್ಗತ್ತಜ ಆಯಿಟ್ಟಿನ್ನಾರ್. 19ಮತ್ತೆ ಶತಮಾನತ್ತ್‌ಲುಂ ಅಜಲೊ ಕೀಲ್ ಜಾತಿಡೊ ಆಲ್‌ಮಾರೊಟ್ಟುಗು ವ್ಯವಹಾರ ಆಕ್‌ಡೊ ರೀತಿಲು ಕಂಡೊಂಟಿಂತ್. ಇದಲ್ಲಾಂಟ್ ಮೈಕಾಲತ್ತೆ ಮುಸ್ಲಿಮಿಜಲೆ ಪೌನಾರಗ ಒರು ಭಿನ್ನ ವರ್ಗ ಆಯಿಟ್ಟಿಂತ್. ಈ ಪೌನಾರಗತ್ತೆ ಉಲ್ಲ ಮಂಜಿಲ ಏರ್ಪಡ್ ಕೊರೊಡಿ ಆಯಿಟ್ಟಿಂತ್. 19ಮತ್ತೆ ಶತಮಾನ 'ಅಗ'ತ್ತೊ ಶತಮಾನ ಆಯೆದ್‌ಕೊಂಡು ಇಜನತ್ತೊ ಸಂಬಂಧ ಇಲ್ಲಾಂತ್.

**ಇಲ್ಲಮ್ ವರ್ಗತ್ತ್‌ಗ್ ಸೇರಾತ್ತಜ – ತಾಲ–ಇಲ್ಲಾತ್ತಜ**

ಇಲ್ಲಮ್ ವರ್ಗತ್ತ್‌ಗ್ ಸೇರಾತೊ ಬ್ಯಾರಿಜಲೆ ಗುಂಪು ಒರು ಮುಖ್ಯ

ವರ್ಗ ಆಯಿಟ್ಟಿಂತ್. ಏದೊರು ಇಲ್ಲಮ್‌ಗು ಸೇರ್‌ಡೊ ಅರ್ಹತೆ ಇಲ್ಲಾತೊ ಅಲ್ಲೆಂಗ್ ತಂಡೊ ಅಂತಸ್ತ್‌ಡೆ ಲೆಕ್ಕಾಚಾರತ್ತ್‌ಲ್ ಬ್ಯಾರೆ ವರ್ಗತ್ತೊಲ್ ಭಿನ್ನ ಆಯೆ ಗುಂಪು ಈ 'ತಾಲ–ಇಲ್ಲತ್ತೋರು'

ಈ ಕೀಲ್ ಉಲ್ಲೊ ವರ್ಗತ್ತಜ ಇಲ್ಲಮ್ ವರ್ಗತ್ತ್‌ಗುಂ ಸೇರಾತ್ತಂಜ

1. ಬಡವರ್/ಬಡುಗರ್
2. ಚೀನಿಕ್ಕಾರ್
3. ಪುದಿಯೆ ಇಸ್ಲಾ
4. ವಸಜ
5. ತಾಲ ಇಲ್ಲತೋರು

ಬಡುವಜ ಅಲ್ಲೆಂಗ್ ಬಡುಗರ್ ಬಾರಿ ಪಾವತ್ತೊ ವರ್ಗತ್ತೊ ಆಲ್ ಆಯಿಟ್ಟಿನ್ನಾರ್. ಇಜ ಜಾಸ್ತಿ 19ಮತ್ತೆ ಶತಮಾನತ್ತ್‌ಲು ಕೂಲಿ ಪನಿಡಜ ಆಯಿಟ್ಟಿನ್ನಾರ್. ಇಜ ಬ್ಯಾರಿ ಬಾನಿಯಾತ್ತಜಲೊ ಅಲ್ಲೆಂಗ್ ಜಮೀನ್ದಾರೊ ಕೈಡೆ ಕೀಲ್ ಪನಿ ಆಕಿಯೋಂಟಿನ್ನಾರ್. ಜೀವನತ್ತ್‌ಗ್ ಆಯಿಟ್ಟ್ ಮೇಲ್ವರ್ಗತ್ತೊ ಆಶ್ರಯಿಚ್ಚಿಟ್ಟಿನ್ನಾರ್. ಇಸ್ಲಾಮ್ ದೀನ್ ಗುಲಾಮಗಿರಿಡೊ ವಿಮೋಚನ ಒರು ಬೆಲಿಯೊ ಪುಣ್ಯ ಕರ್ಮ ಆಯಿಟ್ಟ್‌ಕಾಂಡ್. ಆಯೆಂಗ್ 19ಮತ್ತೆ ಶತಮಾನತ್ತೆ ಆರಂಭತ್ತ್‌ಲ್ ಬ್ಯಾರಿ ಸಮುದಾಯತ್ತ್‌ಲುಂ ಒರು ವಿಧತ್ತೆ ಗುಲಾಮಗಿರಿ ಪದ್ಧತಿ ಇನ್ನೆ ಕನಿಕ್ ಇಂತ್. ಕೀಲ್ ವರ್ಗತ್ತೊ ಬಾಲಕರ, ಬಾಲಕಾರ್ತಿರೊ ಉನ್ನತ ವರ್ಗತ್ತೊ ವ್ಯಾಪಾರಿಮಾರ್‌ಗ್ ಅಜಲೆ ಸೇವೆ ಆಕೊಗು ಬಾನಿಯ ಆಕಿಯೋಂಟಿ ನ್ನಾರ್. ಈ ವ್ಯಾಪಾರಿಜ ಅಜಲೊ ಅಡಿಮಡೆ ಪೊಲೆ ಉಪಯೋಗ ಆಕಿಯೋಂಟಿ ನ್ನಾರ್. ಈ ಗುಲಾಮರೆ ಏದೊರು ನಲ್ಲೊ ಕಾರ್ಯಕ್ರಮತ್ತ್‌ಲು ಮುಕ್ತ ಆಯೋ ಇನ್ನಾರ್. ಪಿನ್ನೆ ಸಮಾಜತ್ತೊ ಒರು ಸ್ವತಂತ್ರ ಅಭ್ಯರ್ಥಿ ಆಯಿಟ್ಟ್‌ಬನ್ನೊ ಇನ್ನಾರ್. ಈ ವರ್ಗತ್ತೊಮೇ ಬಡುಗರ ಚೊಲ್ದಾರ್. ಇಜ ಪಿನ್ನೆ ಒರು ಇಲ್ಲಮ್‌ಡೊ ಆಲ್‌ಮಾರ್ ಆಯಾರ್. 20ಮತ್ತೆ ಶತಮಾನತ್ತ್‌ಲು ಗುಲಾಮಗಿರಿ ಪೂರ್ಣ ಮಾಯಿಟ್ಟ್ ನಿರ್ಮೂಲನೆ ಆಯೆಂಗುಂ ಈ ಬಡುಗರೆ ಕೀಲ್ ವರ್ಗತ್ತಜ ಆಯಿಟ್ಟ್ ಕಂಡೊಂಟಿನ್ನಾರ್. 1940ಲು ಈ ಇಲ್ಲಮ್ ಪದ್ಧತಿ ಮಾಯ ಆಯೊಲ್ವಿನ್ನೆ ಈ ಸಾಮಾಜಿಕ ಅಸಮತೋಲನ ನಿರ್ಮೂಲನೆ ಆಯಿತ್ತ್.

**ಚೀನಿಕ್ಕಾರ್**: ಚೊಲ್ದೆದ್ ಇನ್ನೊರು ಇಲ್ಲಮ್ ವರ್ಗತ್ತ್‌ಗ್ ಸೇರಿಯೊ ಪಂಗಡ ಆಯಿಟ್ಟಿಂತ್. ಸಂಗೀತ(ಪಾಟ್) ಈ ವರ್ಗತ್ತೊ ಸಂಪ್ರದಾಯ ಆಯಿಟ್ಟಿಂತ್.

ಬ್ಯಾಂಡ್, ಡ್ರಮ್, ಚೀನಿ ಇಜನೆಲು ಕಂಡೊಂಟಿಂತ್. ಕೊಟ್ಟು ಮುರ್ಸೆ, ಪಿನ್ನೆ ಚೀನಿ ಪಂಗಡ ಮುಸ್ಲಿಮಿಜಲೆಲ್ ಪ್ರಸಿದ್ಧ ಆಯಿಟ್ಟಿಂತ್. ಅದ್‌ಕೊಂಡ್ ಬ್ಯಾರಿಜ ಈ ವರ್ಗತ್ತೊ ಕೀಲ್‌ವರ್ಗ ಆಯಿಟ್ಟ್ ಕೊಂಡೊಂಟಿನ್ನಾರ್. ಬ್ರಾಹ್ಮಣರ್ ಪಿನ್ನೆ ಜೈನರ್ ಸಂಗೀತ ಉಂಡಾಕುಡೊ ವರ್ಗತ್ತೊ ಕೀಲ್‌ವರ್ಗ ಆಯಿಟ್ಟ್ ಕಂಡೊಂಟಿಂತ್. ಜೈನ ಸಂಸ್ಕೃತಿಡೊ ಪ್ರಭಾವ ಮುಸ್ಲಿಮಿಜಲ್ ಜಾಸ್ತಿ ಇಂತ್. ಅದ್ ಕಾರಣ ಬ್ಯಾರಿಜ ಚೀನಿಕ್ಕಾರೆ ಇಲ್ಲಮ್ ವರ್ಗತ್ತ್‌ಗ್ ಸೇರಾತ್ತಜ ಚೊಂತು ಕನಕ್ಕಾಕ್ಕಿಟ್ಟಿನ್ನಾರ್.

**ಪುದಿಯ ಇಸ್ಲಾಂ:** ಚೊಲ್ದೆದ್ ಇನ್ನೊರು ವರ್ಗ ಕೀಲ್‌ಜಾತಿಡೊ ಆಲ್ ಮತಾಂತರ ಆಯಿಟ್ಟ್ ಇಸ್ಲಾಂ ಸ್ವೀಕರಿಚ್ಚಜ. 19ಮತ್ತೆ ಶತಮಾನತ್ತ್‌ಲ್ ಇಸ್ಲಾಂ ದೀನ್‌ಗ್ ಮತಾಂತರ ಆಯೊ ಆಲ್‌ಮಾರೊ ಸಂಖ್ಯೆ ಬಾರಿ ಕೊರೊಡಿ ಆಯಿಂತ್. ಇದ್‌ಕ್ಕ್ ಕಾರಣ ಕ್ರಿಶ್ಚಿಯನ್ ಮಿಷನರಿಡೊ ಪ್ರಭಾವ ಸಫಲ ಆಯಿಟ್ಟಿಂತ್. ಆಯೆಂಗುಂ ಕೀಲ್ ವರ್ಗತ್ತೊ ಆಲ್‌ಮಾರ್ ಅಜಲೊ ಸ್ಥಾನ ಉತ್ತಮ ಆಕ್‌ಡೊ ಉದ್ದೇಶತ್ತ್‌ಲ್ ಇಸ್ಲಾಮ್‌ಗು ಕಡನ್ನ್ ಬನ್ನೊಂಟಿನ್ನಾರ್. ಪುದಿಯೆ–ಇಸ್ಲಾಮ್ ವರ್ಗತ್ತೊ ಆಲ್‌ಗ್ ಎಲ್ಲಾ ರೀತಿಡೆ ಸಹಕಾರ ಆಕಿಯೋಂಟಿನ್ನಾರ್. ಉದ್ಯೋಗತ್ತೊ ತೆರು ಕಾಟಿಯೋಂಟಿನ್ನಾರ್.

**'ವಸಜ'** ಸುನ್ನತ್ ಆಕ್‌ಡೊ ಕಾರ್ಯತ್ತ್‌ಲ್ ಪರಿಣಿತಮಾರ್. ಸುನ್ನತ್ ಒರು ದೀನ್‌ಡೊ ಕಾರ್ಯ. ಈ ವಸ ಸುನ್ನತ್‌ಡೊ ಎಲ್ಲಾ ಕಾರ್ಯ ನೋಕಿಯೋಂಟಿನ್ನಾರ್. ಅದ್‌ಕೊಂಡು ವಸಮ್ಮಾರೆ ಬಂಧಾರಿ ಆಯಿಟ್ಟ್ ಕಂಡೋಂಟಿನ್ನಾರ್. ಬ್ಯಾರಿಜ ಇಜಲೊ ಇಲ್ಲಮ್ ಗುಂಪುಗು ಸೇರಾತ್ರಜ ಚೊಂತು ಕನ್ನಕ್ಕಾಕಿಯೋಂಟಿನ್ನಾರ್. ಬಹಿಷ್ಕಾರತ್ತ್‌ಗ್ ಆಯೊ ವರ್ಗತ್ತೊ ಸಮಾನ್ ಅಯಿಟ್ಟ್ ಅಪರಾಧಿ ಚೊಂತು ಪರಿಗಣನೆ ಆಕಿಯೋಂಟಿನ್ನಾರ್.

ಇಸ್ಲಾಮ್ ದೀನ್‌ಲು ದೀನ್‌ಡೊ ಬಹಿಷ್ಕಾರ ಆಯಜ ಚೊಲ್ಡೆ ಕಲ್ಪನೆ ಇಲ್ಲೆ. ಅತ್ಯಾಚಾರ, ವ್ಯಭಿಚಾರ ಮಾನಭಂಗ ಪೊಲೊತೆ ಗುರುತರ ಅಪರಾಧತ್ತ್‌ಗು ಮರಣದಂಡನೆ ಕೊಡುಕ್ಕುಡು. ಭಾರತೀಯ ಕಾನೂನುಲು ಇದ್‌ಕ್ಕ್ ಅನುಮತಿ ಇಲ್ಲೆ. ಅಜನತ್ತೊ ಆಲ್‌ಮಾರ್‌ಗ್ ಬ್ಯಾರಿ ಜನಾಂಗತ್ತ್‌ಲು ಯಾದೊರು ಸ್ಥಾನ ಇಲ್ಲಾಂತ್.

**'ತಾಲ ಇಲ್ಲಾತೋರು'** ತಾಲ ಇಲ್ಲಾತಜ ಚೊಲ್ಡೆದ್ ಒರು ಭಿನ್ನ ವರ್ಗ ಆಯಿಟ್ಟಿಂತ್. ಇಜ ಇಸ್ಲಾಮ್ ಕೊಡುತ್ತೆ ಎಲ್ಲಾ ಬಾದ್ಯತೆ/ಹಕ್ಕ್ ಪಡಇಡಾರ್. ಅಯೆಂಗ್ ಇಜ ತಾಲಕ್ಕಾರ್‌ಗ್ ಸಮಾನ ಅಲ್ಲಾಂತ್. ಇದ್ ಧಾರ್ಮಿಕ ವಿಂಗಡನೆ ಆವಾಂಟ್ ಸಾಮಾಜಿಕ ವ್ಯವಸ್ಥೆಡೆ ಆಧಾರತ್ತ್‌ಲು ಉಂಡಾಯೆ ಭಿನ್ನತೆ ಆಯಿಟ್ಟಿಂತ್. ಇಲ್ಲಮ್ ಪದ್ಧತಿ ಏದೊರು ಮಹತ್ವ ಇಲ್ಲಾಂಟ್ ಕನಕ್ಕ್‌ಗ್ ಇಲ್ಲಾಂಟ್ ಬದಲಾಯ್ತ್.

**ಸಂದರ್ಶನ ಮೂಲಕ ಸಂಪರ್ಕ ಆಕಿಯ ವ್ಯಕ್ತಿಜ**

ಪ್ರೊ: ಬಿ. ಎಂ. ಇಚ್ಲಂಗೋಡು
ಮುಹಮ್ಮದ್ ಬಡ್ಡೂರು
ರಫೀಕ್ ಮೌಲವಿ ಕಡಂಬು
ಸಿದ್ದೀಕ್ ಅಬ್ದುಲ್ ಖಾದರ್
ಸಂಶುದ್ದೀನ್ ಅಶ್ರಫಿ ಮಾಚಾರ್

**ಆಕಾರ ಗ್ರಂಥಜ**

ದಿ. ಬ್ಯಾರೀಸ್ ಆಫ್ ತುಳುನಾಡು –ಪ್ರೊ: ಬಿ. ಎಂ. ಇಚ್ಲಂಗೋಡು
ನಂಡೊ ರಾಯ ನಂಡೊ ಸಂಸ್ಕೃತಿ – ಟಿ. ಎ. ಆಲಿಯಬ್ಬ ಜೋಕಟ್ಟೆ.

* * *

# ಬ್ಯಾರಿ ಜನಾಂಗದ ವೈಶಿಷ್ಟ್ಯಗಳು
# ವ್ಯಾಪ್ತಿ
# ಪ್ರಾದೇಶಿಕ ಧರ್ಮಗಳ ಪ್ರಭಾವ
# ವೈವಿಧ್ಯತೆಗಳು,
# ಜನಾಂಗದ ಅಭಿವೃದ್ಧಿಗೆ
# ಸಂಸ್ಕೃತಿಯ ಕೊಡುಗೆ ಮತ್ತು
# ಭವಿಷ್ಯ
# ಪೂರಕವಾದ ಅಂಶಗಳು

---

ಬದ್ರುದ್ದೀನ್
ಎಲ್.ಎಲ್.ಬಿ. ವಿದ್ಯಾರ್ಥಿ
ಎಸ್.ಡಿ.ಎಂ. ಲಾ ಕಾಲೇಜು, ಮಂಗಳೂರು

# ಬ್ಯಾರಿ ಜನಾಂಗದ ಉಗಮ ಮತ್ತು ಪ್ರಾಚೀನತೆ

ಬ್ಯಾರಿ ಎಂಬ ಪದವು ತುಳು ಭಾಷೆಯ ಬ್ಯಾರ ಎಂಬ ಪದದಿಂದ ಹುಟ್ಟಿಕೊಂಡಿದೆ ಎಂಬುದು ಸಾಮಾನ್ಯ ಗ್ರಹಿಕೆ. ಬ್ಯಾರ ಎಂದರೆ ವ್ಯಾಪಾರ ಎಂದರ್ಥ. ಹೆಚ್ಚಾಗಿ ಬ್ಯಾರಿಗಳು ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವರು. 1891ನೇ ಜನಗಣತಿಯ ಪಕಾರ ದಕ್ಷಿಣ ಕನ್ನಡದಲ್ಲಿ 92,449 ವ್ಯಾಪಾರಿಗಳಿದ್ದು ಇದರಲ್ಲಿ 90,345 ಬ್ಯಾರಿಗಳಾಗಿದ್ದರು ಎಂಬುದನ್ನು ವಿಶ್ಲೇಷಿಸಿದೆ. 19ನೇ ಶತಮಾನದಲ್ಲಿ ಕೊನೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮುಸ್ಲಿಂ ವ್ಯಾಪಾರಸ್ಥರು ಹೆಚ್ಚು ಅಂದರೆ ಶೇ. 97.35 ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದರು. ಇದನ್ನು ತುಳುವರು ಬ್ಯಾರಿ ಎಂದು ಸಂಭೋದಿಸತೊಡಗಿದರು. ಆರಂಭದ ಶತಮಾನದಲ್ಲಿ ಸಾಗರೋದ್ಯಮದಿಂದ ಹಿಡಿದು ಗೂಡಂಗಡಿಯವರೆಗೆ ಎಲ್ಲಾ ಬಗೆಯ ವ್ಯಾಪಾರವನ್ನು ಬ್ಯಾರಿಗಳೇ ನೋಡಿಕೊಳ್ಳುತ್ತಿದ್ದರು. ಆರಂಭದ ಕಾಲದಲ್ಲಿ ಇನ್ನೂ ಹಲವು ಖಾಸಗಿ ಕಡತಗಳು ಮತ್ತು ದಾಖಲೆಗಳು ಬ್ಯಾರಿಗಳೆಂದೇ ಗುರುತಿಸಿದೆ. ಇದು ಸ್ಥಳೀಯ ತುಳು ಭಾಷೆಯಲ್ಲಿ ವ್ಯಾಪರ ಎಂಬುದಕ್ಕೆ ಸಂವಾದಿಯಾಗಿ ಇರುವ ಬ್ಯಾರಿ ಎಂಬ ಪದದಿಂದ ಉಗಮಗೊಂಡಂತೆ ಭಾಸವಾಗುತ್ತಿದೆ.

ಬ್ಯಾರಿ ಎಂಬ ಪದವು ಅರಬಿ ಭಾಷೆಯ 'ಬಹರ್' ಎಂದ ಪದದಿಂದ ಹುಟ್ಟಿಕೊಂಡಿದೆ ಎಂಬ ಅಭಿಪ್ರಾಯವಿದೆ. ಬಹರ್ ಎಂದರೆ ಸಮುದ್ರ ಎಂದರ್ಥ ಮತ್ತು ಬಹಾರಿ ಎಂದರೆ 'ನಾವಿಕ' ಎಂದರ್ಥ. ಬ್ಯಾರಿ ಸಮುದಾಯವು ಅರಬಿ ವ್ಯಾಪಾರಸ್ಥರೊಂದಿಗೆ ಸಂಬಂಧ ಕಲ್ಪಿಸಿದ್ದರು. ಆದ್ದರಿಂದ ಬ್ಯಾರಿ ಎಂಬ ಪದ ಹುಟ್ಟಿಕೊಂಡಿದೆ ಎಂಬ ಅಭಿಪ್ರಾಯವಿದೆ.

ಇನ್ನೊಂದು ಅಭಿಪ್ರಾಯದಂತೆ ಬ್ಯಾರಿ ಎಂಬ ಪದವು 'ಮಲಬಾರ್' ಎಂಬ ಪದದಿಂದ ಹುಟ್ಟಿಕೊಂಡಿದೆ ಎಂದು ಹೇಳಲಾಗುತ್ತಿದೆ. ಮಲಬಾರಿನಲ್ಲಿ ಇಸ್ಲಾಮನ್ನು ಪ್ರಥಮವಾಗಿ ಪ್ರಚಾರಪಡಿಸಿದ ಮಾಲಿಕಿಬ್‌ನು ದೀನಾರ್ (ರ) ಮಲಬಾರಿನ ಕರಾವಳಿ ತೀರಕ್ಕೆ ಆಗಮಿಸಿದ್ದರು. 7ನೇ ಶತಮಾನದಲ್ಲಿ ಇವರ ತಂಡದಲ್ಲಿದ್ದ ಹಬೀಬ್ ಇಬ್ನು ಮಾಲಿಕ್ (ರ) ಮತ್ತು ಸಂಗಡಿಗರು ತುಳುನಾಡಿ ನಾದ್ಯಂತ ಸಂಚರಿಸಿದ್ದರು.

ಬ್ಯಾರಿ ಮಳಯಾಲಂನ ಉಪಭಾಷೆ ಎಂಬ ಕಲ್ಪನೆ ಇತ್ತು. ಡಾ. ಸುಶೀಲ ಪಿ. ಉಪಧ್ಯಾಯ ತಮ್ಮ ಮಾಪಿಳ್ಳೆ ಮಳಿಯಾಳಂ ಭಾಷೆಯ ಪಿ.ಎಚ್.ಡಿ. ಪ್ರಬಂಧದಲ್ಲಿ ಬ್ಯಾರಿ ಭಾಷೆಗೆ ಸಂಬಂಧಿಸಿ ಈ ವಿಚಾರ ಮಂಡಿಸಿದ್ದರು. ಪ್ರೊ.

ಬಿ.ಎಂ. ಇಚ್ಲಂಗೋಡು ಮತ್ತು ವಹಾಬ್ ದೊಡ್ಡಮನೆ ಬ್ಯಾರಿ ಭಾಷೆಗೆ ತುಳುವಿನ ವ್ಯಾಕರಣವಿದ್ದು, ಇದು ಮಳಯಾಳಂಗಿಂತ ಸಂಪೂರ್ಣ ಭಿನ್ನವಾಗಿದೆ ಎಂದಿದ್ದಾರೆ. ಶೇ. 50ಕ್ಕು ಹೆಚ್ಚು ಪದಗಳು ತುಳುವಿನಿಂದ ಬಂದಿದೆ. ಉಳಿದ ಪದಗಳು ಅರಬಿ ಮತ್ತು ಮಳಯಾಲಂ ಮೂಲದ್ದು ಎಂದಿದ್ದಾರೆ.

ಈ ಮೇಲಿನ ಪದಗಳು ಮತ್ತು ಇಂತಹದ್ದೆ ಕೆಲವು ಇತರ ಸಂಶೋಧನೆಗಳಿಂದ ಈ ಭಾಷೆಯು ತುಳು (ಮೂಲದ್ದು) ಎಂದು ಹೇಳಬಹುದು. ಬ್ಯಾರಿಗಳು ಮುಸ್ಲಿಮಾರಾಗುವುದಕ್ಕೆ ಮುಂಚೆ ಸ್ಥಳೀಯರ ಮಧ್ಯೆ ಚಾಲ್ತಿಯಲ್ಲಿತ್ತು ಎಂಬ ಅಭಿಪ್ರಾಯವಿದೆ. ಇಂದಿಗೂ ಮಲಯಾಳಂನ್ನು ಹೋಲುವ ಉಪಭಾಷೆಗಳನ್ನು ಬಿಲ್ಲವರು, ಬೋವಿಗಳು, ಮರಕಲರು, ಹಾಗು ತುಳುನಾಡಿನ ಇತರ ಮುಸ್ಲಿಮೇತರರು ಬಳಸುತ್ತಿದ್ದಾರೆ. ಅಲ್ಲದೆ ಬ್ಯಾರಿಗಳು ಆಡುವ ಭಾಷೆಯಲ್ಲೂ ಕೇರಳದ ಮುಸ್ಲಿಮರಲ್ಲಿ ಚಾಲ್ತಿಯಲ್ಲಿರುವ ಕೆಲವು ಭಾಷಾ ಪ್ರಭೇದಗಳಿಗಿಂತ ಭಿನ್ನವಾಗಿದೆ. ಬ್ಯಾರಿ ಭಾಷೆಯು ತುಳು ಹೆಚ್ಚಿನ ಪ್ರದೇಶದಲ್ಲಿ ಆಡಲ್ಪಡುತ್ತಿರುವುದೇ ಇದಕ್ಕೆ ಕಾರಣ. ಬ್ಯಾರಿಗಳು ಧಾರ್ಮಿಕ ಶಿಕ್ಷಣಕ್ಕಾಗಿ ಮಾಪಿಳ್ಳೆಯರನ್ನೇ ಆಶ್ರಯಿಸಿದ್ದರಿಂದ ಅವರ ಭಾಷೆಯ ಪ್ರಭಾವವು ಬ್ಯಾರಿ ಭಾಷಿಕ ಸಮುದಾಯದ ಮೇಲಾಯಿತು. ಆದರೂ ಬ್ಯಾರಿ ಬರಹಗಾರರು ತಮ್ಮ ಬರಹಗಳಲ್ಲಿ ಒಂದು ಬಗೆಯ ಮಿಶ್ರ ಭಾಷೆಯನ್ನು ಬಳಸಿದರು. ಮೊಗ್ರಾಲ್‌ನ ಕುಂಞಿಪಕ್ಕಿ ತುಳುನಾಡಿನ 'ಓಬೇಲೆ' ಎಂಬ ಜನಪದ ಹಾಡನ್ನು ಆಧರಿಸಿದ ತಮ್ಮ ಒಂದು ಕವನದಲ್ಲಿ ತುಳು ಪದಗಳನ್ನು ಧಾರಾಳವಾಗಿ ಬಳಸಿದ್ದಾರೆ.

ಬ್ಯಾರಿಭಾಷೆಗೆ ಸಮರ್ಪಕವಾದ ಲಿಪಿಯಿಲ್ಲ. ಆರಂಭದ ಶತಮಾನಗಳಲ್ಲಿ ಬ್ಯಾರಿಗಳು ಬಟ್ಟೆ ಬರಹ ಎಂಬ ಲಿಪಿಯನ್ನು ಬಳಸುತ್ತಿದ್ದರು ಎನ್ನಲಾಗಿದೆ. ಆದರೆ ಇದು ಸಂಪೂರ್ಣವಾಗಿ ಅಳಿದುಹೋಯಿತು. ಇದು ಮಳಯಾಲಂಗಿಂತ ಭಿನ್ನವಾಗಿದ್ದು ತುಳುಲಿಪಿಯನ್ನು ಹೋಲುತ್ತದೆ. ಆದರೆ ಕೇರಳದ ಮಾಪಿಳ್ಳೆಯರು ಅರಬಿ ಮಳಯಾಲಂ ಲಿಪಿಯನ್ನು ಮಾತ್ರ ಬಳಸುತ್ತಿದ್ದರು. ತುಳುನಾಡಿನ ಬ್ಯಾರಿಗಳು ಕನ್ನಡ ಲಿಪಿ ಬಳಸುತ್ತಿದ್ದರು.

ಬ್ಯಾರಿಗಳ ಹೆಸರು ಮಾಪಿಳ್ಳೆಗಳಲ್ಲಿ ಸಾಮಾನ್ಯವಾಗಿ ಪ್ರಚಲಿತವಿದ್ದ ಹೆಸರುಗಳಿಗಿಂತ ಭಿನ್ನವಾಗಿದೆ. ಬ್ಯಾರಿಗಳು ತಮ್ಮ ಹೆಸರಿನ ಮುಂದೆ ಬ್ಯಾರಿ ಅಥವಾ ಬ್ಯಾರ್ದಿ ಎಂದು ಬಳಸಲು ಹೆಮ್ಮೆಪಡುತ್ತಿದ್ದರು. ಹಲವಾರು ಹೆಸರುಗಳು ಮುಸ್ಲಿಮೇತರರ ಸಮುದಾಯದಲ್ಲೂ ಬಳಕೆಯಲ್ಲಿದ್ದವು. ಉದಾಹರಣೆಗೆ: ಮಾಯಬ್ಬ, ಸಾಯಿರಿ, ಕಾಯಿರಿ, ಇಜ್ಜಬ್ಬ, ಬಪ್ಪ, ಕುಂಞಪ್ಪ, ಬಿಮ್ಮಾತು,

ಬೀಪಾತುಮ್ಮ, ಕುಂಞಮ್ಮ ಇತ್ಯಾದಿ. ಮಾಪಿಳ್ಳೆಗಳ ಹೆಸರುಗಳಿಗೂ ಈ ಹೆಸರುಗಳಿಗೂ ಯಾವುದೇ ಸಾಮ್ಯತೆ ಕಂಡುಬರುವುದಿಲ್ಲ.

**ಬ್ಯಾರಿ ಮತ್ತು ಮಾಪಿಳ್ಳೆ ಸಂಸ್ಕೃತಿಯ ನಡುವಿನ ಕೆಲವೊಂದು ಭಿನ್ನತೆಗಳು**

* ಬ್ಯಾರಿಗಳಲ್ಲಿ ಇಲ್ಲಂ ಎಂಬ ಒಂದು ಪದ್ಧತಿಯಿತು, ಮತ್ತು ಇದು ಬಂಟರ 'ಬರಿ' ಪದ್ಧತಿಯನ್ನು ಹೋಲುತ್ತಿತ್ತು. ಇದೊಂದು ಮಾತ್ರ ಪ್ರಧಾನ ಪದ್ಧತಿಯಾಗಿದ್ದು ಮುಸ್ಲಿಮರಲ್ಲಿ ಕಂಡುಬರುವುದಿಲ್ಲ. ಹೆಸರುಗಳು ಸ್ಥಳೀಯ ಮೂಲವನ್ನು ಹೊಂದಿದೆ. ಉದಾಹರಣೆಗೆ: ಮುಸ್ತಾನ್ ಬೆಲಿಯೆ, ಚಮಕ್ ಬೆಲಿಯೆ, ಕಯಸರ್, ಪತ್ತಿಲ್ಲ ಅಂಜಿಲ್ಲಂ ಇತ್ಯಾದಿ. ಮಂಗಳೂರು ಮತ್ತು ಕಾಸರಗೋಡು ಮಧ್ಯೆ ಈ ಹೆಸರುಗಳಲ್ಲಿ ಸಣ್ಣ ವ್ಯತ್ಯಾಸವಿದೆ. ಇಲ್ಲಂಗಳ ಒಳಗೆ ಮದುವೆಯಾಗುವುದಕ್ಕೆ ಕಟ್ಟುಪಾಡುಗಳಿದ್ದವು. ಪ್ರತಿಯೊಂದು ಇಲ್ಲಂಗೂ ಒಂದೊಂದು ಸ್ಥಾನಮಾನವಿತ್ತು. ತಮ್ಮ ಮಕ್ಕಳಿಗೆ ಸಿಗುವ ಮಹ್ರ್ ಆಧಾರದಲ್ಲಿ ಅದು ನಿರ್ಧಾರವಾಗುತ್ತಿತ್ತು. ಮಾಪಿಳ್ಳೆಗಳಲ್ಲಿ ಇಂತಹ ಆಚರಣೆಗಳು ಕಂಡು ಬರುವುದಿಲ್ಲ.

* ಹತ್ತೊಂಬತ್ತನೇ ಶತಮಾನದ ಹದಿನಾರು ಮನೆ ಪರಿಕಲ್ಪನೆಯು ಮೂಲಭೂತವಾಗಿ ಒಂದು ಊಳಿಗಮಾನ್ಯ ಪದ್ಧತಿ. ಆ ಮನೆಗಳ ಪಳೆಯುಳಿಕೆಗಳು ಇಂದಿಗೂ ಕಂಡುಬರುತ್ತದೆ. ಈ ಪೈಕಿ ಹೆಚ್ಚಿನ ಕುಟುಂಬಗಳು ಆ ಕಾಲದ ಪ್ರಮುಖ ವರ್ತಕರು ಮತ್ತು ಕುಲೀನರಾಗಿದ್ದರು. ಅವರು ಕೆಳವರ್ಗದ ಜನರನ್ನು ತಮ್ಮ ಬಳಿಗೆ ಬಿಟ್ಟು ಕೊಡುತ್ತಿರಲಿಲ್ಲ. ಮತ್ತು ಉಳಿಗಮಾನ್ಯ ವ್ಯವಸ್ಥೆ ಪಾಲಿಸುತ್ತಿದ್ದರು. ಇಂತಹ ಪದ್ಧತಿ ಮಾಪಿಳ್ಳೆಗಳಲ್ಲಿ ಕಂಡುಬರುವುದಿಲ್ಲ.

* ಇಲ್ಲಂ ಮತ್ತು ಹದಿನಾರು ಮನೆಗಳು, ಅಲ್ಲದೆ ತಾಳ ಇಲ್ಲದವರು, ಅರ್ಥಾತ್ ಸ್ಥಾನಮಾನ ಇಲ್ಲದವರು ಎಂಬ ಇನ್ನೊಂದ ವರ್ಗವು ಅಸ್ತಿತ್ವದಲ್ಲಿತ್ತು. ಇದು ಕೆಳ ಜಾತಿಗಳಿಂದ ಮತ್ತು ಬಹಿಷ್ಕೃತ ಸಮಾಜದಿಂದ ಮತಾಂತರಗೊಂಡು ಮುಸ್ಲಿಮರಾದವರ ವರ್ಗ. ಸಂಗೀತಗಾರರು, ಮುಂಜಿ ಮಾಡುವವರು, ಗುಲಾಮರು ಕೆಳವರ್ಗದ ಕಾರ್ಮಿಕರು ಕೂಡಾ ಈ ಗುಂಪಿಗೆ ಸೇರಿದವರಾಗಿದ್ದರು. ಅವರಿಗೆ ಇತರರೊಂದಿಗೆ ಸಹಭೋಜನ ಮಾಡುವ ಅಥವಾ ಕುಳಿತುಕೊಳ್ಳುವ ಅವಕಾಶವು ಇರಲಿಲ್ಲ. ಅವರು ಅಸ್ಪೃಶ್ಯರಲ್ಲದಿದ್ದರೂ ಸ್ಥಾನಮಾನವುಳ್ಳ ಮುಸ್ಲಿಮರೊಂದಿಗೆ ಸಾಮಾಜಿಕ ವ್ಯವಹಾರ ನಡೆಸುವುದರಿಂದ ಅವರನ್ನು ದೂರವಿರಿಸಲಾಗಿತ್ತು. ನಿಜವಾಗಿ ಇದು ಒಂದು ಇಸ್ಲಾಮೀ ಆಚರಣೆಯಾಗಿರಲಿಲ್ಲ. ಬದಲಾಗಿ

ತುಳುನಾಡಿನ ಸ್ಥಳೀಯ ಕಟ್ಟಳೆಗಳಿಂದ ಬಂದ ಪದ್ದತಿಯಾಗಿತ್ತು. ಮಾಪಿಳ್ಳೆಗಳಲ್ಲಿ ಈ ರೀತಿಯ ಆಚರಣೆ ಕಂಡುಬರುವುದಿಲ್ಲ. ಜನನ, ಮುಂಜಿ ಋತುಮತಿಯಾಗುವುದು ಮೈಲಾಂಜ್, ಮದುವೆ, ಮರಣ ಇತ್ಯಾದಿ ಸಾಮಾಜಿಕ ಸಮಾರಂಭಗಳಿಗೆ ಸಂಬಂಧಿಸಿ ಬ್ಯಾರಿಗಳು ನಿರ್ದಿಷ್ಟ ಆಚರಣೆಯನ್ನು ಹೊಂದಿದ್ದರು. ಇವು ಕೊಡಗಿನ ಕೊಡವ ಸಂಪ್ರದಾಯವನ್ನು ಹೋಲುತ್ತದೆ. ಈ ಸಮಾರಂಭಗಳ ಹೆಸರು ಕೂಡಾ ಕೊಡವರ ಹೆಸರಿನೊಂದಿಗೆ ಸಾಮ್ಯತೆ ಹೊಂದಿವೆ. ತಮ್ಮ ಉಡುಗೆ ಮತ್ತು ಆಭರಣಗಳ ವಿಚಾರದಲ್ಲೂ ಬ್ಯಾರಿಗಳಿಗೆ ಮಾಪಿಳ್ಳೆಗಳೊಂದಿಗೆ ಬಹಳಷ್ಟು ಸಾಂಸ್ಕೃತಿಕ ಭಿನ್ನತೆಗಳಿವೆ.

ಮೇಲೆ ತಿಳಿಸಿದಂತಹ ಇನ್ನಷ್ಟು ಸಾಕ್ಷಾಧಾರಗಳು ಬ್ಯಾರಿಗಳು ಮಾಪಿಳ್ಳರಲ್ಲ ಎಂಬುದನ್ನು ಸಾರಿ ಹೇಳುತ್ತದೆ. ಪ್ರಸ್ತುತ ಬ್ಯಾರಿಗಳು ತುಳುನಾಡಿನ ಒಂದು ಸ್ವತಂತ್ರವಾದ ಪ್ರಾದೇಶಿಕ ಜನಾಂಗವಾಗಿದ್ದಾರೆ ಮತ್ತು ಅದು ಸ್ವತಂತ್ರ ಮುಸ್ಲಿಂ ಸಂಸ್ಕೃತಿಯನ್ನು ಬೆಳೆಸಿಕೊಂಡಿದೆ.

**ಬ್ಯಾರಿಗಳು ಮಾಪಿಳ್ಳಾಗಳಲ್ಲ**

ಬ್ಯಾರಿಗಳು ವರ್ತಕ ಸಮುದಾಯವಾಗಿದ್ದರಿಂದ ನದೀ ತೀರದಲ್ಲಿ ಹಾಗೂ ಹಿನ್ನೀರಿಗೆ ಅಂಟಿಕೊಂಡಂತೆ ಇರುವ ಕರಾವಳಿಯಲ್ಲಿ ನೆಲೆಸಿದವರು. ಮಂಗಳೂರು ಕರಾವಳಿಯಲ್ಲಿ ಉಳ್ಳಾಲದಿಂದ ಮುಲ್ಕಿಯವರೆಗೆ, ಕಾಸರಗೋಡು ಕರಾವಳಿಯಲ್ಲಿ ಕಾಸರಗೋಡಿನಿಂದ ಮಂಜೇಶ್ವರದವರೆಗೆ ಇವರು ನೆಲೆಸಿದರು. ನದಿ ತೀರದಿಂದ ಹದಿನೈದು ಕಿ.ಮೀವರೆಗೆ ಇವರ ಹರವು ಇತ್ತು. ಅಲ್ಲದೆ ಇಷ್ಟೇ ಅಂತರವನ್ನು ದೋಣಿಗಳ ಮೂಲಕ ಇವರು ಕ್ರಮಿಸುತ್ತಿದ್ದರು. ಮಂಗಳೂರು ಮತ್ತು ಕಾಸರಗೋಡು ವಿಭಾಗವು ಬ್ಯಾರಿಗಳ ಭದ್ರ ಕೋಟೆಯಾಗಿತ್ತು. ಏಳನೇ ಶತಮಾನದಲ್ಲಿ ಪ್ರವಾದಿ (ಸ.ಅ)ರವರು ಇಸ್ಲಾಮ್ ಪ್ರಚಾರಪಡಿಸುತ್ತಿದ್ದ ಸಂದರ್ಭದಲ್ಲೆ ಈ ಪ್ರದೇಶಕ್ಕೂ ಇಸ್ಲಾಂಮಿನ ಆಗಮನವಾಯಿತು. ಕರಾವಳಿಗೆ ಬಂದ ಬಹುತೇಕ ಅರಬರು ಶಾಫೀಗಳಾಗಿದ್ದರಿಂದ ಇಲ್ಲಿನ ಮುಸ್ಲಿಮರೂ ಅದೇ ಕರ್ಮಶಾಸ್ತ್ರದ ಅನುಯಾಯಿಗಳಾಗಿ ಮಾರ್ಪಟ್ಟರು.

ತುಳುನಾಡಿನ ಶೇ 80%ಕ್ಕೂ ಹೆಚ್ಚು ಮುಸ್ಲಿಮರು ಬ್ಯಾರಿಗಳಾಗಿದ್ದಾರೆ. ಆದರೆ ಇತಿಹಾಸಕಾರರು ಮತ್ತು ಲೇಖಕರು ಈ ಮುಸ್ಲಿಮರನ್ನು ತಪ್ಪಾಗಿ ಮಾಪಿಳ್ಳೆಗಳೆಂದು ಗುರುತಿಸಿದ್ದಾರೆ. ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳವರೆಗೂ ಬ್ಯಾರಿಗಳು ತಮ್ಮ ಹೆಸರಿನ ಮುಂದೆ ಅಭಿಮಾನ ಪೂರ್ವಕವಾಗಿ ಬ್ಯಾರಿಗಳು ಎಂದು

ಬರೆಯುತ್ತಿದ್ದರು. ಸರಕಾರಿ ದಾಖಲೆಗಳು ಕೂಡಾ ಇವರನ್ನು ಬ್ಯಾರಿಗಳೆಂದೇ ಗುರುತಿಸಿದೆ. ಸಂಸ್ಕೃತಿ ಮತ್ತು ಸಂಪ್ರದಾಯದ ವಿಚಾರದಲ್ಲಿ ಇವರು ಮಾಪಿಳ್ಳೆಗಳಿಗಿಂತ ಭಿನ್ನ ಇತಿಹಾಸಕಾರರು ಧಾರ್ಮಿಕ ಮದ್ರಸಾಗಳ ಮೇಲಿನ ಅವಲಂಬನೆಯ ಕಾರಣ ಬ್ಯಾರಿಗಳಿಗೆ ಮಲಬಾರಿನ ಮಾಪಿಳ್ಳೆಗಳೊಂದಿಗೆ ಸಾಮ್ಯತೆ ಇದ್ದುದರಿಂದ ಅವರನ್ನು ಅದೇ ಗುಂಪಿಗೆ ಸೇರಿಸಿಬಿಟ್ಟರು. ವಾಸ್ತವದಲ್ಲಿ ಬ್ಯಾರಿಗಳನ್ನು ಮಾಪಿಳ್ಳೆಗಳಿಂದ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿದೆ ಎಂದು ಪ್ರೊ.ಬಿ.ಎಂ. ಇಚ್ಲಂಗೋಡು ಬ್ಯಾರೀಸ್ ಆಫ್ ತುಳುನಾಡು ಅಧ್ಯಯನ ಗ್ರಂಥದಲ್ಲಿ ವಿವರಿಸಿದ್ದಾರೆ.

ಕೊಚ್‌ಮೆನ್ ಸಮಿಕ್ಷೆಯ ವರದಿಯಲ್ಲಿ ಕೆಲವೊಂದು ಉದಾಹರಣೆಗಳು ಕಾಣಸಿಗುತ್ತದೆ. ಶೇಖೆ, ಚೇಯ, ಕೋಯ್ಸ, ಐತಮ್ಮ, ಪಚ್ಚಮ್ಮ, ಪಾಪಮ್ಮ, ವೆನ್ನಮ್ಮ, ಚೆಮ್ಮ, ಬಡುವ ಉಮಾಮ, ಅಲಿಯಮ್ಮ ಇತ್ಯಾದಿ ಹೆಸರುಗಳು ಇಲ್ಲಿನ ಸ್ಥಳೀಯ ಹಿಂದು ಮತಾನುಯಾಯಿಗಳಲ್ಲಿಯೂ ಕಾಣಸಿಗುತ್ತದೆ. ಬ್ಯಾರಿಗಳು ಅದರಲ್ಲೂ ಮುಖ್ಯವಾಗಿ ಬ್ಯಾರಿ ಮಹಿಳೆಯರು ತಮ್ಮ ಹೆಸರಿನ ಹಿಂದೆ ಬ್ಯಾರಿ ಅಥವಾ ಬ್ಯಾರ್ದಿ ಎಂಬ ಉಪನಾಮವನ್ನು ಹೆಮ್ಮೆಯಿಂದ ಸೇರಿಸಿಕೊಳ್ಳುವುದು ಸಾಮಾನ್ಯ ರೂಢಿಯಾಗಿತ್ತು. ತಮ್ಮ ಸಹಿಯಲ್ಲಿಯೂ ಇದನ್ನು ಸೇರಿಸಿಕೊಳ್ಳುತ್ತಿದ್ದರು. ಹತ್ತೊಂಬತ್ತನೇ ಶತಮಾನದಲ್ಲಿ ಬ್ಯಾರಿ ಎಂಬ ಈ ಉಪನಾಮವನ್ನು ಬ್ಯಾರಿಯೋರ್ವನು ತನ್ನ ಹೆಸರಿನ ಹಿಂದೆ ಸೇರಿಸಿಕೊಳ್ಳದಿದ್ದರೆ ಅದು ಅವನ ಜನಾಂಗಕ್ಕೊಂದು ಅಪಮಾನವಾಗಿತ್ತು. ಬ್ಯಾರಿಗಳು ತಮ್ಮನ್ನು ಬ್ಯಾರಿ ಎಂದು ಕರೆಸಿಕೊಳ್ಳುವುದು ಗೌರವದ ಸಂಕೇತ ಎಂದು ಭಾವಿಸುತ್ತಿದ್ದರು. ಇದು ಅವರಿಗೆ ಹೆಮ್ಮೆಯ ವಿಚಾರವಾಗಿತ್ತು. ಇಲ್ಲಿನ ಸ್ಥಳೀಯ ಹಿಂದೂಗಳಾದ ಬಂಟರು, ಕೊಂಕಣರು ತಮ್ಮ ಉಪನಾಮಗಳಾದ ಶೆಟ್ಟಿ, ಆಳ್ವ, ಹೆಗ್ಡೆ, ಪ್ರಭು, ಕಾಮತ್ ಇತ್ಯಾದಿಗಳನ್ನು ತಮ್ಮ ಹೆಸರಿನ ಹಿಂದೆ ಸೇರಿಸಿಕೊಳ್ಳುತ್ತಿದ್ದುದರಿಂದ ಬ್ಯಾರಿಗಳೂ ತಮ್ಮ ಉಪನಾಮದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

ದಕ್ಷಿಣ ಕನ್ನಡದಲ್ಲಿ ಹಿಂದುಗಳು ತಮ್ಮ ಕುಟುಂಬ ಮತ್ತು ಜನಾಂಗದ ಹೆಸರನ್ನೂ ಎರಡು ಉಪನಾಮಗಳ ರೂಪದಲ್ಲಿ ಸೇರಿಸಿ ಇಟ್ಟುಕೊಳ್ಳುವುದು ರೂಢಿಯಲ್ಲಿತ್ತು. ಉದಾಹರಣೆಗೆ ಬ್ರಾಹ್ಮಣರಲ್ಲಿ ಭಟ್ಟ, ತಂತ್ರಿ, ರಾವ್ ಇತ್ಯಾದಿ ಹೆಸರುಗಳು ಕಾಣಸಿಗುತ್ತದೆ. ಬ್ಯಾರಿಗಳೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಬ್ಯಾರಿ ಎಂಬ ಪದವು ಉಪನಾಮವಾಗಿ (15ನೇ ಮತ್ತು 16ನೇ) ಶತಮಾನದಲ್ಲಿ ಹೆಚ್ಚಾಗಿ ಬಳಕೆಯಲ್ಲಿತ್ತು. ಪ್ರಥಮ ಭೂ ಸರ್ವೆ ದಾಖಲೆಗಳಲ್ಲಿ ಇದು ದಾಖಲಿಸಿದೆ. ಈ ರಿವಾಜು ತುಳುವರ ಪಾಡ್ದನದಲ್ಲಿ ಕಾಣ ಸಿಗುತ್ತದೆ. ಬ್ಯಾರಿಗಳು ಮೂಲತಃ

ಸ್ಥಳೀಯರೇ ಆದ್ದರಿಂದ ಬ್ಯಾರಿಗಳಿಗೆ ಜಾತಿ ನೀತಿ ಬ್ಯಾರಿಗಳು ಎಂಬ ಬಿರುದನ್ನು ಹಿಂದಿನ ಕಾಲದಲ್ಲಿ ಇತರ ಜನಾಂಗದ ಜನರು ನೀಡಿದ್ದರು. ಈ ಬಿರುದಿನ ಬಗ್ಗೆ ಇಪ್ಪತ್ತನೇ ಶತಮಾನದಲ್ಲೂ ಬ್ಯಾರಿಗಳು ಹೆಮ್ಮೆ ಪಡುತ್ತಿದ್ದರು. ಆದ್ದರಿಂದ ಇಂತಹ ಬ್ಯಾರಿಗಳನ್ನು ಮಾಪಿಳ್ಳರು ಎಂದು ಹೇಳುವುದು ಪುರಾವೆಗಳಿಲ್ಲದ ವಾದವಾಗಿದೆ.

## II. ವ್ಯಾಪ್ತಿ: ತುಳುನಾಡು – ಮೈಕಾಲ

ಮಂಗಳೂರು ಪಶ್ಚಿಮ ಕರಾವಳಿಯ ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಅದು ಪ್ರಾಂತ್ಯದ ಮುಖ್ಯ ಪಟ್ಟಣವೂ ಆಗಿತ್ತು. ನೇತ್ರಾವತಿ ನದಿಯು ಬಂಟ್ವಾಳದವರೆಗೆ ದೋಣಿ ಸಂಪರ್ಕ ಕಲ್ಪಿಸುತ್ತದೆ. ಮತ್ತು ಉಪ್ಪಿನಂಗಡಿಗೂ ಇಲ್ಲಿ ಜಲ ಸಾರಿಗೆ ಸಾಧ್ಯವಿದೆ. ನೇತ್ರಾವತಿ ಜಿಲ್ಲೆಯ ಅತ್ಯಂತ ದೊಡ್ಡ ನದಿಯಾಗಿದ್ದು, ಫಲ್ಗುಣಿ (ಗುರುಪುರ), ಶಾಂಭವಿ (ಮೂಲ್ಕಿ) ಜಿಲ್ಲೆಯ ಇನ್ನೆರಡು ಪ್ರಮುಖ ನದಿಗಳಾಗಿವೆ. ಹಿನ್ನೀರು ಸೇರಿದಂತೆ ಅವು ನದಿ ದ್ವಾರದಿಂದ ತುಸು ದೂರ ದವರೆಗಷ್ಟೇ ಸಾರಿಗೆ ಸಂಪರ್ಕ ಸಾಧ್ಯವಿರುವ ನದಿಗಳಾಗಿದೆ. ಮಂಗಳೂರಿನಿಂದ ಬಂಟ್ವಾಳದವರೆಗೆ ಹಾಗೂ ಪಾಣೆಮಂಗಳೂರಿನವರೆಗೆ ಸುಮಾರು 25 ಕಿ.ಮೀ ವ್ಯಾಪ್ತಿಯವರೆಗೆ ಜಲಸಾರಿಗೆ ಸಾಧ್ಯವಿತ್ತು. ಮಂಗಳೂರಿನಿಂದ ದ್ವಾರದಿಂದ ಸುಮಾರು 15 ಕಿ.ಮೀ ವರೆಗೆ ಸಂಪರ್ಕ ಸಾಧ್ಯವಿತ್ತು. ಮತ್ತು ಮಂಗಳೂರಿನಿಂದ ಪಣಂಬೂರಿಗೆ ಹಾಗೂ ಮುಕ್ಕಾದಿಂದ ಮೂಲ್ಕಿಗೆ ಮತ್ತು ಹೆಜಮಾಡಿಗೆ ಹಿನ್ನೀರಿನ ಸಾರಿಗೆ ಸಂಪರ್ಕ ಸಾಧ್ಯವಿತ್ತು.

ಮಂಗಳೂರು ಕೊಡಿಯಾಲ್ ಬಂದರ್ ಎಂದು ಸ್ಥಳೀಯರಿಂದ ಕರೆಯಲ್ಪಡುತ್ತಿತ್ತು. ಮತ್ತು ಅದು ಅತ್ಯಂತ ಪ್ರಮುಖ ಬಂದರಾಗಿತ್ತು. ಅದು ತುಳುನಾಡಿನ ರಾಜಕೀಯ ರಾಜಧಾನಿಗಿಂತಲೂ ವಾಣಿಜ್ಯ ರಾಜಧಾನಿಯಾಗಿತ್ತು. 1542ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಇಬ್ನುಬತೂತ, ಬಾರ್ಬೋಸ ಹಾಗೂ ಪರ್ಶಿಯಾ, ಯಮನ್‌ನ ವ್ಯಾಪಾರಿಗಳು ಈ ನಗರಕ್ಕೆ 1514ರಲ್ಲಿ ಭೇಟಿ ನೀಡಿದ್ದರು ಎಂದು ಬರೆದಿದ್ದಾನೆ. ಆತ ಇದನ್ನು ಅತ್ಯಂತ ದೊಡ್ಡ ಪಟ್ಟಣವೆಂದೂ ಬ್ಯಾರಿಗಳಿಂದ ಮತ್ತು ಜೈಂಟೈಲ್‌ಗಳಿಂದ ತುಂಬಿತ್ತೆಂದು ಅವರು ಭತ್ತ ಮತ್ತು ಕರಿಮೆಣಸು ರಫ್ತು ಮಾಡುತ್ತಿದ್ದರೆಂದೂ ಬರೆದಿದ್ದಾನೆ. ಮಂಗಳೂರು ತೆಂಗಿನ ತೋಟಗಳ ಮಧ್ಯೆ ಕಂಗೊಳಿಸುತ್ತಿರುವ ಸುಂದರ ನಗರ. ಅದು ಗುರುಪುರ ಮತ್ತು ನೇತ್ರಾವತಿ ನದಿಯ ಸಂಗಮದ ಮೇಲೆ ನಿಂತಿದೆ. ಸ್ಥಳೀಯ ಮುಸ್ಲಿಮರ

ಮಟ್ಟಿಗೆ ಅದು ಮೈಕಾಲವಾಗಿದ್ದು, ಮಲಬಾರಿಗಳು ಅದನ್ನು ಮಂಗಳಾಪುರ ಎಂದು ಕರೆಯುತ್ತಾರೆ.

ಉಳ್ಳಾಲವು ನೇತ್ರಾವತಿಯ ದಕ್ಷಿಣ ದಂಡೆಯ ಮೇಲೆ ಮಂಗಳೂರಿಗೆ ಎದುರಾಗಿ ನಿಂತಿದೆ. ಅದು ಜೈನ ರಾಜ ಮನೆತನದ ಚೌಟರಿಗೆ ಸೇರಿದೆ. ಅದು ಮೀನುಗಾರಿಕೆ ಮತ್ತು ವ್ಯಾಪರಕ್ಕೆ ಹೆಸರಾಗಿದೆ. ಮುಲ್ಕಿ ಇನ್ನೊಂದು ಪಟ್ಟಣ ಮತ್ತು ಬಂದರು. ಅದು ಬಪ್ಪನಾಡು, ಕಸ್ಬಾ ಬಜಾರ್ ಮತ್ತು ಮನಂಬಾಡಿ ಗ್ರಾಮದ ಒಂದು ಭಾಗವನ್ನು ಒಳಗೊಂಡಿದೆ. ಶಾಂಭವಿ ನದಿಯ ನೀರು ಸಮುದ್ರ ಸೇರುವ ಭಾಗದಲ್ಲಿ ಈ ಬಂದರು ನಿಂತಿದೆ.

**ಆ. ಕಾಸರಗೋಡು**

ಕಾಸರಗೋಡು ದಕ್ಷಿಣದ ತುತ್ತ ತುದಿಯಲ್ಲಿರುವ ವಿಭಾಗವಾಗಿದ್ದು, ದಕ್ಷಿಣದಲ್ಲಿ ಮಲಬಾರ್ ಜಿಲ್ಲೆಯೊಂದಿಗೆ ಗಡಿಯನ್ನು ಹೊಂದಿದೆ. ಅದು ಕಾಸರಗೋಡು ಮತ್ತು ಉಪ್ಪಿನಂಗಡಿ ಎಂಬ ಎರಡು ತಾಲೂಕುಗಳನ್ನು ಒಳಗೊಂಡಿತ್ತು. ಉಪ್ಪಿನಂಗಡಿ ತಾಲೂಕು ಕ್ರಮೇಣ ಪುತ್ತೂರು ತಾಲೂಕು ಎಂದು ಹೆಸರು ಪಡೆಯಿತು. ಈ ಭಾಗದಲ್ಲಿ ಆರು ನದಿಗಳಿದ್ದು ಪ್ರತಿಯೊಂದು ಕೂಡಾ ಆರಂಭಕಾಲದಲ್ಲಿ ಕೇವಲ ಅಲ್ಪ ದೂರಕ್ಕೆ ಮಾತ್ರ ಸಾರಿಗೆ ಸಾಧ್ಯವುಳ್ಳವುಗಳಾಗಿದ್ದವು. ಮಂಜೇಶ್ವರದ ದಕ್ಷಿಣಕ್ಕಿರುವ ಉಪ್ಪಳ ನದಿಯ ಮೂಲಕ ಪೈವಳೀಕೆ ಎಂಬಲ್ಲಿಯವರೆಗೆ ಸಂಚಾರ ಸಾಧ್ಯವಿತ್ತು. ಕಿರಿಯ ನದಿಯೂ ಮೇಲೆ ಬಾಡೂರು ವರೆಗೆ ಸಂಚರಿಸಬಹುದಾಗಿತ್ತು. ಮೊಗ್ರಾಲ್ ನದಿಯು ಅದರ ಉಗಮ ಸ್ಥಾನದಿಂದ ಹತ್ತು ಕಿ.ಮೀ. ಸಂಚಾರ ಕಲ್ಪಿಸಿತ್ತು. ಚಂದ್ರಗಿರಿ ಮತ್ತು ಪಯಸ್ವಿನಿ ನದಿಗಳ ಮೇಲೆ ಹದಿನೈದು ಕಿಲೊ ಮೀಟರ್ ದೂರದವರೆಗೆ ಸಂಚರಿಸಬಹುದಾಗಿತ್ತು.

ಕನ್ನಾರೊಟ್ಟು ಎಂದು ಸ್ಥಳೀಯರಿಂದ ಕರೆಯಲ್ಪಡುವ ಕಾಸರಗೋಡು ಚಂದ್ರಗಿರಿಯ ತೀರದಲ್ಲಿರುವ ಪ್ರಾಚೀನ ಪಟ್ಟಣ ಮತ್ತು ಬಂದರು. ಅದು ಕದಂಬರ ಪ್ರಸಿದ್ದ ಬಂದರುಗಳ ಪೈಕಿ ಒಂದಾಗಿತ್ತು ಮತ್ತು ತುಳುನಾಡಿನ ದಕ್ಷಿಣದ ತುದಿಯಲ್ಲಿರುವ ಪಟ್ಟಣವು ಆಗಿತ್ತು. ಮಾಲಿಕ್ ದೀನಾರ್ ಮಸೀದಿಯು 9ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು ಅದು ದೀನಾರ್ ಧರ್ಮ ಪ್ರಚಾರಕರ ಚಟುವಟಿಕೆಗಳ ಕೇಂದ್ರವು ಆಗಿತ್ತು. ಕುಂಬಳೆ ಇನ್ನೊಂದು ಪ್ರಾಚೀನ ಬಂದರಾಗಿತ್ತು. ಇದನ್ನು ಕನ್ನಾರ ಅಥಮಾ ಕನ್ನಿಪುರಂ ಎಂದು ಕರೆಯಲ್ಪಡುತ್ತಿತ್ತು. ಅದು ಸ್ಥಳೀಯ ರಾಜಮನೆತನದ ಕೇಂದ್ರವಾಗಿದ್ದು, ಮಾಲ್ಡೀವ್ಸ್‌ಗೆ ಆರಂಭ ಕಾಲದಲ್ಲಿ

ಅಕ್ಕಿ ರಫ್ತು ಮಾಡುವ ಮೂಲಕ ಹೆಸರು ಪಡೆದಿತ್ತು.

ಮಂಜೇಶ್ವರವು ಒಂದು ಸಣ್ಣ ತೊರೆಯ ಸಾಗರವನ್ನು ಸೇರುವಲ್ಲಿ ಇರುವ ಇನ್ನೊಂದು ಸಾಂಪ್ರದಾಯಿಕ ಬಂದರಾಗಿದೆ. ಉದ್ಯಾವರ ಮಂಜೇಶ್ವರಕ್ಕೆ ಸೇರ್ಪಡೆಗೊಂಡ ಬ್ಯಾರಿ ಪಟ್ಟಣ.

### ಇ. ಬಾರ್ಕೂರು ವಿಭಾಗ

ಬಾರ್ಕೂರು ಪ್ರದೇಶವು ಎರಡು ತಾಲೂಕುಗಳನ್ನು ಒಳಗೊಂಡಿದೆ. ಕುಂದಾಪುರ ಮತ್ತು ಉಡುಪಿ. ಈ ಪ್ರದೇಶದಲ್ಲಿ ಗಂಗೋಳ್ಳಿ, ಸೀತಾನದಿ, ಸುವರ್ಣ ಮತ್ತು ಉದ್ಯಾವರ ಹೊಳೆ ಎಂಬ ನಾಲ್ಕು ನದಿಗಳಿದ್ದು, ಗಂಗೋಳ್ಳಿ ನದಿಯು ರಮಣೀಯವಾದ ಸಮುದ್ರ ಕೊಲ್ಲಿಯನ್ನು ಹೊಂದಿದೆ. ಕೊಲ್ಲೂರು, ಹಾಲಾಡಿ ಮತ್ತು ಚಕ್ರಾ ನದಿಯು ಉತ್ತರ ಕುಂದಾಪುರದ ಹಿನ್ನೀರಾಗಿದೆ. ಹಾಲಾಡಿಯು ಸುಮಾರು 18 ಕಿ.ಮಿ. ದೂರದವರೆಗೆ ಸಂಚಾರಯೋಗ್ಯವಾಗಿದ್ದು ಚಕ್ರಾ ನದಿಯು ವಂಡ್ಸೆಗೆ–ದೋಣಿಯ ಮೂಲಕ ಸಂಪರ್ಕ ಕಲ್ಪಿಸಿತ್ತು. ಈ ಹಿನ್ನೀರು ಮತ್ತು ಅಳಿವೆಯಿಂದಾಗಿ ಇಲ್ಲಿ ಫಲವತ್ತಾದ ಉಸುಕು ಮರಳಿನಿಂದ ಕೂಡಿದ ಮೆಕ್ಕಲು ಭೂಮಿ ನಿರ್ಮಾಣವಾಗಿದ್ದು, ಇದು ಈ ರೇವು ಜಿಲ್ಲೆಯ ಅತ್ಯಂತ ದೊಡ್ಡ ವಿಶೇಷತೆಯಾಗಿದೆ. ಇದು ತೆಂಗು, ಕಬ್ಬು, ಕೃಷಿ ಹಾಗೂ ಸಾಮಾನ್ಯ ಬೆಳೆಯಾಗಿರುವ ಭತ್ತಕ್ಕೆ ಅತ್ಯಂತ ಯೋಗ್ಯವಾದ ಭೂಮಿಯಾಗಿದೆ. ಈ ನದಿಗಳು ಮತ್ತು ಹಿನ್ನೀರು ಸೇತುವೆ ನಿರ್ಮಿಸಲು ಸಾಧ್ಯವಾಗುವಷ್ಟು ದೊಡ್ಡದಾಗಿರುವುದರಿಂದ ರಸ್ತೆ ಸಂಕಲ್ಪವು ಕಡೆಗಣಿಸಲ್ಪಟ್ಟಿತ್ತು. ಮತ್ತು ರಸ್ತೆಗಳಿಗೆ ವಾಣಿಜ್ಯಾತ್ಮಕ ಮೌಲ್ಯ ಇರಲಿಲ್ಲ. ಕುಂದಾಪುರ–ವಂಡ್ಸೆ, ಕುಂದಾಪುರ–ಹಾಲಾಡಿ, ಕಾಪು – ಉದ್ಯಾವರ ಹಾಗೂ ಹಿನ್ನೀರಿನ ಮೂಲಕ ಕಲ್ಯಾಣಪುರ, ಹಂಗಾರಕಟ್ಟೆ ಮತ್ತು ಮಾನೂರು ಇವು ಆ ಕಾಲದ ಪ್ರಮುಖ ಸಂಪರ್ಕ ಮಾರ್ಗಗಳಾಗಿದ್ದವು. ಮುಸ್ಲಿಮರು ವ್ಯಾಪಾರ ಮತ್ತು ಸಾಗಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಈ ಪ್ರದೇಶಗಳು ಬಹುತೇಕ ಮುಸ್ಲಿಮರಿಂದಲೇ ತುಂಬಿಕೊಂಡಿತ್ತು.

ಕರಾವಳಿ ಪ್ರದೇಶವು ಅವರ ವ್ಯಾಪಾರದ ಹೆಬ್ಬಾಗಿಲಾಗಿತ್ತು. ಶಿರೂರು ಆಗ ಉತ್ತರ ಗಡಿಯ ಒಂದು ಸಣ್ಣ ಬಂದರಾಗಿತ್ತು. ಕುಂದಾಪುರವು ಐದು ನದಿಗಳು ಸೇರುವ ಅಳಿವೆಯ ಮೇಲೆ ನಿಂತಿದೆ. ಅದೊಂದು ಸಾಂಪ್ರದಾಯಿಕ ಬಂದರಾಗಿತ್ತು. ಬಸ್ರೂರು ಆರಂಭ ಕಾಲದ ಅತ್ಯಂತ ಮುಖ್ಯ ವಾಣಿಜ್ಯ ಕೇಂದ್ರವಾಗಿತ್ತು. ಕ್ರಿ.ಶ 1514ರಲ್ಲಿ ಡ್ವಾರ್ಟ್ ಬರ್ಬೋಸ ಹೇಳುವ ಪ್ರಕಾರ ಬಸ್ರೂರಿಗೆ ಹಲವು ಹಡಗುಗಳು

ಮಲಬಾರ್‌ನಿಂದಲೂ ಅರ್ಮೆಜ್, ಏಡಾನ್ ಮತ್ತು ಜುಬೇರ್‌ನಿಂದಲೂ ಆಗಮಿಸುತ್ತಿದ್ದವು. ಕೋಡಿಯ ಗಂಗೋಳ್ಳಿಯ ಹಿನ್ನೀರು ಮತ್ತು ನದಿದ್ವಾರದ ಎದುರಿಗಿದೆ. ಇದೊಂದು ಸಾಂಪ್ರದಾಯಿಕ ಮೀನುಗಾರಿಕಾ ಕೇಂದ್ರ. ಗಂಗೋಳ್ಳಿ ಎಂಬುದು ನದಿಯ ದಕ್ಷಿಣದಲ್ಲಿರುವ ಭಾಗ. ಹಂಗಾರಕಟ್ಟೆಯೆಂಬ ಸಣ್ಣ ಬಂದರು ಬಾರ್ಕೂರು ಬಂದರು ಎಂದು ಕರೆಯಲ್ಪಡುತ್ತದೆ. ಬಾರ್ಕೂರು ಅಂದಿನ ಸಾಮ್ರಾಜ್ಯದ ಕೇಂದ್ರವೂ, ವ್ಯಾಪಾರ ಕೇಂದ್ರವೂ ಆಗಿತ್ತು. ಅದು ವಿಜಯನಗರ ಆಡಳಿತಗಾರರ ಕೇಂದ್ರವಾಗಿತ್ತು ಅದು ಮುಸ್ಲಿಮರ ಕೇಂದ್ರವೂ ಆಗಿತ್ತು.

ಅತ್ಯಂತ ಪುರಾತನವಾದ ದೀನಾರ್ ಪಳ್ಳಿ ಇಲ್ಲಿ ನಿರ್ಮಾಣಗೊಂಡಿತ್ತು ಎನ್ನಲಾಗಿದೆ. ಮಲ್ಪೆಯು ಜಿಲ್ಲೆಯ ಅತ್ಯುತ್ತಮ ಬಂದರಾಗಿದ್ದು, ಅದನ್ನು ಉಡುಪಿ ಬಂದರು ಎಂದೂ ಕರೆಯಲಾಗುತ್ತಿತ್ತು. ಹಡಗುಗಳನ್ನು ನಿಲ್ಲಿಸುವ ಸ್ಥಾನವು ದರಿಯಾ ಬಹದೂರ್ ಘಡ್ (ಸೈಂಟ್ ಮೇರೀಸ್ ದ್ವೀಪ) ನಿಂದ ಆಶ್ರಿತವಾಗಿದ್ದು ಇದು ನದಿದ್ವಾರದ ಮೇಲೆ ನಿಂತಿದೆ.

**ಈ. ಇತರ ಸ್ಥಳಗಳು**

ಇಂದು ಬ್ಯಾರಿ ಭಾಷೆ ಸಂಸ್ಕೃತಿಯು ಕೇವಲ ಕರಾವಳಿ ಜಿಲ್ಲೆಗೆ ಸೀಮಿತಗೊಳ್ಳದೆ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಹಾಸನ, ಬೆಂಗಳೂರು ಭಾಗಗಳಿಗೆ ಪಸರಿಸಿದೆ. ಬ್ಯಾರಿಭಾಷೆಯ ಮತ್ತು ಸಂಸ್ಕೃತಿಯು ಇಂದು ಕರಾವಳಿ ಜಿಲ್ಲೆಯ ಹೊರಭಾಗದಲ್ಲಿಯೂ ಕಾಣಬಹುದು.

**III. ಪ್ರಾದೇಶಿಕ ಧರ್ಮಗಳ ಪ್ರಭಾವ**

**ಎ. ಇಸ್ಲಾಂ ಧರ್ಮದ ಪ್ರಭಾವ**

**ಅ. ಶಾಫೀ ಮದ್‌ಹಬ್**

ತುಳುನಾಡಿನ ಮುಸ್ಲಿಮರ ಪೈಕಿ ಜನಸಂಖ್ಯೆಯಲ್ಲಿ ಅತ್ಯಂತ ಮುಂಚೂಣಿಯಲ್ಲಿರುವವರು ಬ್ಯಾರಿಗಳು. ಅವರು ಈ ಪ್ರದೇಶ ಅತ್ಯಂತ ಪ್ರಾಚೀನ ಮುಸ್ಲಿಮರಾಗಿದ್ದು ಆರಂಭದ ಶತಮಾನಮದಲ್ಲಿ ಇಲ್ಲಿ ನೆಲೆಸಿದ್ದ ಅರಬಿಗಳಿಂದ ನೇರ ಪ್ರಭಾವಕ್ಕೊಳಗಾದವರು. ಹೊಸ ಧರ್ಮದ ಜಾತಿ ವಿರೋಧ, ಸಮಾನತೆಯ ಆಶಯಗಳಿಗೆ ಕೆಳ ಜಾತಿಯ ಜನರು ಮಾರು ಹೋದರು ಮತ್ತು ಮುಸ್ಲಿಮರಾಗಿ ಮಾರ್ಪಟ್ಟರು. ಆದರೂ ಅವರು ತಮ್ಮ ಪ್ರಾದೇಶಿಕ ಸಂಪ್ರದಾಯವನ್ನು ಉಳಿಸಿಕೊಂಡರು. ಕೊಂಕಣಿ ಮಾತನಾಡುವ ಕೊಂಕಣಿ ತೀರದ ಮುಸ್ಲಿಮರು,

ತಮಿಳು ಮಾತನಾಡುವ ತಮಿಳುನಾಡಿನ ಲಬ್ಬೈಗಳು ಈ ವಿಭಾಗಕ್ಕೆ ಸೇರಿದವರು. ತುಳು ಮಿಶ್ರಿತ ಮಳಯಾಳ ಭಾಷೆಯನ್ನು ಹೋಲುವ ಸ್ಥಳೀಯ ಉಪಭಾಷೆಯಾದ ಬ್ಯಾರಿ ಭಾಷೆಯ ತುಳುನಾಡಿನ ಬ್ಯಾರಿಗಳು ಈ ಪ್ರದೇಶದ ಅತ್ಯಂತ ಮಹತ್ವದ ಜನಾಂಗವಾಗಿ ಬೆಳೆದುಬಂದಿದೆ. ಈ ವಿಭಾಗಗಳು ಅರಬ್ ಸಂಪರ್ಕದಿಂದ ಹುಟ್ಟಿದ್ದರಿಂದಾಗಿ ಹಾಗೂ ಅರಬ್ ವರ್ತಕರು ಶಾಫಿಗಳಾಗಿದ್ದರಿಂದ ಹೆಚ್ಚಿನ ಮುಸ್ಲಿಮರು ಶಾಫಿಗಳಾಗಿರುವರು.

ಮಲಬಾರ್ ಮತ್ತು ತುಳುನಾಡಿನಲ್ಲಿ ಇಸ್ಲಾಂನ ಪ್ರಚಾರದ ಕೀರ್ತಿಯನ್ನು ಸಾಮಾನ್ಯವಾಗಿ ದೀನಾರ್ ಮಿಷನರಿಗೆ ಸಲ್ಲಿಸಲಾಗುತ್ತದೆ. ಮಾಲಿಕ್ ಬಿನ್ ದೀನಾರ್ ಮತ್ತು ಪರಿವಾರ ಮಲಬಾರ್‌ಗೆ ಬಂದಾಗ ಕೊಡುಂಗಲ್ಲೂರು ಅರಸರು ಅವರನ್ನು ಬರಮಾಡಿಕೊಂಡು ಅವರನ್ನು ಗೌರವಿಸಿ ಮಸೀದಿಗಳನ್ನು ನಿರ್ಮಿಸಲು ಸ್ಥಳವನ್ನು ಒದಗಿಸಿದ ಬಗ್ಗೆ ದಾಖಲೆಗಳಿವೆ. ಅವರೊಂದಿಗೆ ಇಸ್ಲಾಂ ಧರ್ಮದ ಪ್ರಚಾರಕ್ಕೆ ಪ್ರೋತ್ಸಾಹವನ್ನೂ ನೀಡಿದರು. ಮಾಲಿಕ್ ಬಿನ್ ದೀನಾರ್ ಅಲ್ಲಿನ ಮೊಟ್ಟಮೊದಲ ಖಾಝಿಯಾಗಿದ್ದರು. ಧರ್ಮ ಪ್ರಚಾರದ ತಂಡದಲ್ಲಿ ಮಾಲಿಕ್ ಬಿನ್ ದೀನಾರ್, ಹಬಿಬ್ ಬಿನ್ ಮಾಲಿಕ್, ಶಫೀ ಬಿನ್ ಮಾಲಿಕ್, ಮಾಲಿಕ್ ಬಿನ್ ಹಬೀಬ್ ಮತ್ತು ಅವರ ಪತ್ನಿ ಕಮರಿಯತ್ ಮತ್ತು ಅವರ ಹತ್ತು ಪುತ್ರರಾದ ಹಬಿಬ್, ಮೊಹಮ್ಮದ್, ಅಲಿ, ಹುಸೇನ್, ತರೆಯುದ್ದೀನ್, ಅಬ್ದುಲ್ ರಹ್ಮಾನ್, ಇಬ್ರಾಹಿಂ ಮೂಸಾ, ಉಮರ್ ಮತ್ತು ಹುಸೇನ್ ಹಾಗೂ ಐದು ಹೆಣ್ಮಕ್ಕಳು, ಫಾತಿಮ, ಆಯಿಷ, ಝೈನಬ, ತಾಹಿರಾತ್ ಹಲೀಮ ಇದ್ದರು. ಬಳಿಕ ದೀನಾರ್ ಮಿಷನರಿ ಕರಾವಳಿಯ ಮೂರು ಸ್ಥಳಗಳಿಂದ ಮಂಗಳೂರಿನ ಬಂದರು, ಕಾಸರಗೋಡು ಮತ್ತು ಬಾರ್ಕೂರಿನಲ್ಲಿ ಮಸೀದಿಗಳನ್ನು ನಿರ್ಮಿಸಿದರು. ಕೇರಳದ ಪಯಂಗಡಿಯಲ್ಲಿ ಕಂಡು ಬಂದ ಮರದ ಹಲಗೆಯ ಫಲಕವೊಂದು ಅಲ್ಲಿನ ಮಸೀದಿಯ ಹಿಜರಿ ಶಕದ ಅಥವಾ ಕ್ರಿಸ್ತ ಶಕ 627ರಲ್ಲಿ ನಿರ್ಮಾಣಗೊಂಡಿತ್ತೆಂದು ಹೇಳುತ್ತದೆ. ಕಾಸರಗೋಡಿನ ಮಾಲಿಕ್ ಬಿನ್ ದೀನಾರ್ ಮಸೀದಿಯ ಹಿ. ಶಕ 20ರಲ್ಲಿ ನಿರ್ಮಿಸಲಾಗಿದೆ ಎಂಬ ಅಭಿಪ್ರಾಯವಿದೆ. ದೀನಾರ್ ಮಿಷನರಿಗಳ ಮಸೀದಿಗಳನ್ನು ಸಾಮಾನ್ಯವಾಗಿ ತೇರುಮಾನ್ ಪಳ್ಳಿ ಎಂದು ಕರೆಯಲಾಗುತ್ತದೆ. ಜೋಗನ್ ಮ್ಯಾನುವೆಲ್, ಹತ್ತು ಕಡೆ ಮಸೀದಿ ನಿರ್ಮಿಸಿದ್ದನ್ನು ಉಲ್ಲೇಖಿಸುತ್ತದೆ. ಕೊಡುಂಗಲ್ಲೂರು, ಕೊಲ್ಲಂ, ಮಾಡಾಯಿ, ಬಾರ್ಕೂರು, ಮಂಗಳೂರು, ಕಾಸರಗೋಡು, ಜಾಫತನ್, ಧರ್ಮ ಪಟನ್, ಫೌದಿನ ಹಾಗೂ ಷಾಲಿಯಾತ್‌ಗಳಲ್ಲಿ ದೀನಾರ್ ಮಸೀದಿಗಳಿವೆ. ಮಾಲಿಕ್ ಬಿನ್ ದೀನಾರ್‌ರವರ ನಿಧನ ಖಮರೈನ್

ಎಂಬಲ್ಲಾಯಿತು ಎಂದು ತುಹ್‌ಪತ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ ರಿಹ್ಲತುಲ್ ಮಲಿಕ್‌ನ ಕರ್ತೃ ಉಮರ್ ಸುಹ್ರವರ್ದಿಯ ಪ್ರಕಾರ ಮಾಲಿಕ್ ಬಿನ್ ದೀನಾರ್ ಕಾಸರಗೋಡಿನಲ್ಲಿ ಹಿಜರಿ ಶಕ 137ರಲ್ಲಿ ನಿಧನ ಹೊಂದಿದರು ಎಂದು ಉಲ್ಲೇಖಿಸಲಾಗಿದೆ.

**೮) ಸೂಫಿ ಸಂತ ಪ್ರಭಾವ**

ಮಾಲಿಕ್ ಬಿನ್ ದೀನಾರ್ ಮತ್ತು ಸಂಗಡಿಗರು ಇಸ್ಲಾಂನ ಪ್ರಚಾರಕರಾಗಿ ಸೂಫೀ ಪ್ರಭಾವನ್ನು ಭದ್ರಗೊಳಿಸಿದರು. ದಕ್ಷಿಣ ಭಾರತದಲ್ಲಿ ಇಸ್ಲಾಂ ಧರ್ಮದ ಪ್ರಭಾವ ಬೀರಿದ ಪ್ರಮುಖ ಸೂಫಿಗಳಲ್ಲಿ ಕೆಲವು ಪ್ರಮುಖರೆಂದರೆ, ತಿರುಚನಾಪಳ್ಳಿಯ ಸೈಯ್ಯದ್ ನತಾದ ವಲೀ ಷಾ, ಏರ್ವಾಡಿಯ ಸೈಯ್ಯದ್ ಇಬ್ರಾಹಿಂ ಷಾಹಿದ್, ನಾಗೂರಿನ ಸೈಯದ್ ಹಮೀದ್, ನಾಗೋರಿನ ಸೈಯದ್ ಮೀರೇನ್ ಷಾ ವಲಿ, ಮುತ್ತುಪೇಟೆಯ ದಾವೂದುಲ್ ಹಕೀಂ ವಲಿ, ಪೆನುಕೊಂಡದ ಬಾಬಾ ಫಕ್ರುದ್ದೀನ್ ವಲಿ, ಗುಲ್ಬರ್ಗದ ಸೈಯದ್ ಮುಹಮ್ಮದ್ ಗೇಸುದರಾಸ್, ಬಿಜಾಪುರದ ಫೀರ್ ಮಹಾಬೀರ್ ಖಂಡಿಯಾತ ಮತ್ತು ಶೈಖ್ ಫರೀದ್ ಮಸೂದ್ ಗಂಜ್ ಸರ್ಕಾರ್. ಇವರು ಇಸ್ಲಾಂ ದೀನ್ ಪ್ರಚಾರ ಪಡಿಸಿದವರು ಎಂದು ತಹ್‌ಫತುಲ್ ಮುಜಾಹಿದೀನ್‌ನ ಕರ್ತೃ ಝೈನುದ್ದೀನ್ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಮತ್ತು ಫೆನ್ನಾನಿಯ ಝೈನುದೆ ದೀನ್ ಬಿನ್ ಅಲಿ ಮತ್ತು ಕಣ್ಣೂರಿನ ಸೈಯದ್ ಮೌಲ ಪ್ರಮುಖರಾಗಿದ್ದರು. ಇವರ ಪ್ರಭಾವದಿಂದಾಗಿ ಹಲವಾರು ಪಟ್ಟಣಗಲು ಮುಸ್ಲಿಂ ಬಾಹುಳ್ಯವುಳ್ಳ ಪ್ರದೇಶಗಳಾಗಿ ಮಾರ್ಪಟ್ಟವು. ಮಲಪ್ಪುರಂನ ಪೊನ್ನಾನಿಯು ಮುಸ್ಲಿಂ ಜ್ಞಾನದ ಕೇಂದ್ರವಾಗಿ ಮಾರ್ಪಟ್ಟಿತು.

ಈ ಸೂಫಿಗಳ ಪೈಕಿ ಪೆನುಕೊಂಡದ ಬಾಬಾ ಫಕ್ರುದ್ದೀನ್ ಕೆನರಾ ಪ್ರದೇಶದ ಮೇಲೆ ಪ್ರಭಾವನ್ನು ಬೀರಿದರು. ಕರಾವಳಿ ಜಿಲ್ಲೆಯ ಸರೋಪಾಡಿ ಗ್ರಾಮದ ಅಜಿಲಮೊಗರು ಮಾಲಿದಾ ಉರೂಸ್‌ನ 710ನೇ ಮಾಲಿದಾ ಉರೂಸ್ 1984ರ ಸಂದರ್ಭದಲ್ಲಿ ಜಮಾತ ಅಧ್ಯಕ್ಷ ಪಿ.ಬಿ. ಹುಸೈನ್ ಕುಂಞಿ ಪ್ರಕಟಿಸಿದ ಕರಪತ್ರದ ಪ್ರಕಾರ ಬಾಬಾ ಅಜಿಲಮೊಗರಿನಲ್ಲಿ ಸಂದೇಶ ಪ್ರಚಾರ ನಡೆಸಿದ್ದು ಝಕರಿಯ್ಯ ಎಂಬವರನ್ನು ಖಾಝಿಯನ್ನಾಗಿ ನೇಮಿಸಿದ್ದರು. ಅವರು ನಂತರ ಪೆನಕೊಂಡಕ್ಕೆ ತೆರಳಿ ಹಿ.ಶ. 694ರಲ್ಲಿ ಅಲ್ಲೆ ನಿಧನರಾದರು ಎಂದು ಕರಪತ್ರ ಖಚಿತಪಡಿಸುತ್ತದೆ.

ತುಂಬೆಯ ವಳಚ್ಚಿಲ್ ಗ್ರಾಮದ ಜಮಾಅತ್ ಸಮಿತಿ ಬಾಬಾ ಫಕ್ರುದ್ದೀನ್ ಅವರು ವಳಚ್ಚಿಲ್ ಪ್ರದೇಶದಲ್ಲಿ ಇಸ್ಲಾಂ ಧರ್ಮ ಪ್ರಚಾರ ಮಾಡಿದ್ದಾರೆ ಎಂದು

ದೃಢಪಡಿಸಿದ್ದಾರೆ. ಅಜಿಲಮೊಗರು ಮತ್ತು ವಳಚ್ಚಿಲ್ ಮಸೀದಿಗಳು ಇತರ ಕಡೆಗಳಲ್ಲಿರುವ ದೀನಾರ್ ಮಸೀದಿಗಳ ವಿನ್ಯಾಸವನ್ನು ಹೋಲುತ್ತದೆ. ಬಾಬಾ ಫಕ್ರುದ್ದೀನ್ ಅವರು ಕಾಸರಗೋಡು, ಕುಂಬ್ಳೆ, ಉದ್ಯಾವರ, ಮಂಜನಾಡಿ, ಉಳ್ಳಾಲ, ಮಂಗಳೂರು, ವಳಚ್ಚಿಲ್ ಮತ್ತು ಅಜಿಲಮೊಗರು ಕಡೆಗಳಲ್ಲಿ ಸ್ವಲ್ಪ ಕಾಲ ತಂಗಿ ಧರ್ಮ ಪ್ರಚಾರ ನಡೆಸಿದ್ದಾರೆ ಎಂಬುದು ಉಲ್ಲೇಖಿಗೊಂಡಿದೆ.

ಈ ಪ್ರದೇಶದ ಮೇಲೆ ಗಮನಾರ್ಹ ಪ್ರಭಾವ ಬೀರಿದ ಸೂಫಿ ಸಂತರೆಂದರೆ ಉಳ್ಳಾಲದ ಸೈಯ್ಯದ್ ಮಹಮ್ಮದ್ ಶರೀಫುಲ್ ಮದನಿ ದರ್ಗಾದವರು ಹೊರಡಿಸಿದ ಕಿರು ಹೊತ್ತಿಗೆ ಪ್ರಕಾರ ಇವರು 16ನೇ ಶತಮಾನದಲ್ಲಿ ಜೀವಿಸಿದ್ದರು, ಮದೀನಾದಿಂದ ಆಗಮಿಸಿ ಉಳ್ಳಾಲದ ಮೇಲಂಗಡಿಯಲ್ಲಿ ವಾಸವಾಗಿದ್ದರು. ಅಲ್ಲೇ ಉಳ್ಳಾಲದ ಪ್ರಥಮ ಮಸೀದಿ ನಿರ್ಮಾಣವಾಯಿತು. ಅದು ಉಳ್ಳಾಲ, ಪೆರ್ಮನ್ನೂರು, ಮುನ್ನೂರು, ಜೆಪ್ಪಿನಮೊಗರು, ಸೋಮೇಶ್ವರ ವ್ಯಾಪ್ತಿಯಲ್ಲಿದ್ದವರಿಗೆ ಮಸೀದಿಯಾಗಿತ್ತು. ಸೈಯ್ಯಿದರ ಪವಾಡಗಳಿಂದ ಪ್ರಭಾವಿತರಾಗಿ ಮಂದಿರಕ್ಕೆ ಸೇರಿದ 0.7 ಸೆಂಟ್ ಜಾಗವನ್ನು ಮಸೀದಿಗಾಗಿ ನೀಡಲಾಗಿದೆ. ತಮ್ಮ ಪವಾಡಗಳ ಮೂಲಕ ಅವರು ಜನರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸಿದರು. ಮತ್ತು ಉಳ್ಳಾಲದಲ್ಲೇ ನಿಧನರಾದರು. ಕ್ರಿ.ಶ 1920ರಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಅವರ ಗೌರವಾರ್ಥ ಉಳ್ಳಾಲದಲ್ಲಿ ಉರೂಸ್ ನಡೆಸಲಾಗುತ್ತದೆ. ಸೈಯದ್ ಮದನಿಯವರು ಜನರ ಮೇಲೆ ಅಗಾಧ ಮತ್ತು ಗಮನಾರ್ಹ ಪ್ರಭಾವ ಹೊಂದಿದ್ದು, ಮುಸ್ಲಿಮರ ಜನಸಂಖ್ಯೆಯು ಅವರ ಪ್ರಭಾವದಿಂದ ಬಹಳಷ್ಟು ವೃದ್ಧಿಯಾಯಿತು. ಇಂದು ಸೈಯ್ಯದ್ ಮದನಿ ದರ್ಗಾ ಶರೀಫ್‌ನಲ್ಲಿ ನಡೆಯುವ ಉರೂಸ್ ಕಾರ್ಯಕ್ರಮವು ಅತೀ ವಿಜೃಂಭಣೆಯಿಂದ ನಡೆಯುವ ಉರೂಸ್ ಆಗಿದೆ.

ಮಂಗಳೂರಿನ ಅಡ್ಯಾರ್ ಕಣ್ಣೂರು ಪ್ರದೇಶದ ಶೈಖ್ ಸಿದ್ದೀಕ್ ಯೂಸುಫ್ ವಲಿಯವರು 20ನೇದ ಶತಮಾನದ ಆರಂಭದಲ್ಲಿ ಸ್ಥಳೀಯ ಜನರನ್ನು ಇಸ್ಲಾಮಿನ ಕಡೆಗೆ ಆಕರ್ಷಿಸಿ ಸೂಫಿ ಸಂತರಾಗಿದ್ದಾರೆ. ಅಂದ್ರೋತ್ ದ್ವೀಪದವರಾಗಿದ್ದ ಇವರು ಪೊನ್ನಾನಿಯಲ್ಲಿ ವಿದ್ಯಾರ್ಜನೆಗೈದು. ನಂತರ ಕರಾವಳಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿದರು. ಅರ್ಕುಳ, ವಳಚ್ಚಿಲ್ ಮತ್ತು ಇನ್ನಿತರ ಪ್ರದೇಶಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಇವರ ಸಮಾಧಿಯು ಅಡ್ಯಾರ್ ಕಣ್ಣೂರಿನಲ್ಲಿದೆ. ಮಂಗಳೂರಿನ ಡೊಂಗರೆಕೇರಿಯಲ್ಲಿ ಸೈಯದ್ ಷಾಮಿರ್ ವಲಿ ಮತ್ತೊರ್ವ ಪ್ರಸಿದ್ಧ ಧರ್ಮ ಪ್ರಚಾರಕರಾಗಿದ್ದರು. ಇವರು ಕುದ್ರೋಳಿಯಲ್ಲಿ ಮಸೀದಿ ಸ್ಥಾಪಿಸಿ ಸುತ್ತಮುತ್ತಲಿನ ಪ್ರದೇಶದಲ್ಲಿ ಅಗಾಧ ಪ್ರಭಾವ ಬೀರಿದರು. ಟಿಪ್ಪು ಸುಲ್ತಾನ್

ಇವರನ್ನು ಭೇಟಿ ಮಾಡುತ್ತಿದ್ದರು ಮತ್ತು ಅವರ ಮರಣದ ಬಳಿಕ ಸಮಾಧಿಯನ್ನು ಸ್ಥಾಪಿಸಲು ಆದೇಶಿಸಿದ್ದರು. ಇದಲ್ಲದೆ ಜಿಲ್ಲೆಯಲ್ಲಿ ಇನ್ನೂ ಹಲವು ಸಮಾಧಿಗಳಿದ್ದು ಎಲ್ಲಾ ಸಮಾಧಿಗಳಲ್ಲಿ ಉರೂಸ್ ಆಚರಣೆಯು ನಡೆಯುತ್ತದೆ. ಸೂಫಿಗಳ ಜಿಲ್ಲೆಯಾದ್ಯಂತ ಸಂಚರಿಸಿ ತಮ್ಮ ಪವಾಡಗಳ ಮೂಲಕ ಇಸ್ಲಾಮಿನ ಕಡೆಗೆ ಕೆಳಜಾತಿಯ ಹತಾಶರನ್ನು ಆಕರ್ಷಿಸಿ ಅವರಿಗೆ ಧರ್ಮಭೋದನೆ ಮಾಡಿದರು.

**ಬಂದರು ಮಸ್ಜಿದ್ – ಝೀನತ್ ಭಕ್ಷ್**

ಕರಾವಳಿ ಜಿಲ್ಲೆಯ ಬಂದರು ಮಸೀದಿಯನ್ನು ಏಳನೇ ಶತಮಾನದಲ್ಲಿ ನಿರ್ಮಿಸಲಾಯಿತು. ಕ್ರಿ.ಶ. 644ರಲ್ಲಿ ಮಂಗಳೂರಿನ ಕೇಂದ್ರ ಭಾಗವಾದ ಬಂದರು ಎಂಬಲ್ಲಿ ಹಬೀಬ್ ಇಬ್ನು ಮಾಲೀಕ್ ಅವರಿಂದ ನಿರ್ಮಿಸಲಾಯಿತು. ಹಿಜರಿ –22 ಜಮಾದಿಲ್ ಅವ್ವಲ್ 22ನೇ ಶುಕ್ರವಾರದಂದು ಮಸೀದಿಯನ್ನು ಉದ್ಘಾಟಿಸಲಾಯಿತು. ಮತ್ತು ಹಝ್ರಾತ್ ಮೂಸಾ – ಬಿನ್ –ಮಾಲಿಕ್ ಅವರನ್ನು ಮೊದಲನೇ ಖಾಝಿಯಾಗಿ ನೇಮಕಮಾಡಲಾಯಿತು.

17ನೇ ಶತಮಾನದಲ್ಲಿ ಮೈಸುರಿನ ರಾಜನಾಗಿದ್ದ ಟಿಪ್ಪು ಸುಲ್ತಾನ್ ಮಂಗಳೂರನ್ನು ಆಳ್ವಿಕೆ ನಡೆಸುತ್ತಿರುವಾಗ ಈ ಮಸೀದಿಯನ್ನು ನವೀಕರಿಸಿದರು. ಅಲ್ಲದೇ 2 ಕಿ.ಮೀ. ದೂರದಲ್ಲಿ ಟಿಪ್ಪು ಸುಲ್ತಾನ್ ಈದ್ಗಾ ಮಸೀದಿಯನ್ನು ನಿರ್ಮಿಸಿದರು. 18ನೇ ಶತಮಾನದಲ್ಲಿ ಬಂದರು ಮಸೀದಿಗೆ ಝೀನತ್ ಭಕ್ಷ್ ಎಂಬ ಹೆಸರನ್ನು ಇಡಲಾಯಿತು.

ನಂತರದಲ್ಲಿ ಮಂಗಳೂರಿನ ಪಟ್ಟಣಗಳ ಬೆಳವಣಿಗೆಯೊಂದಿಗೆ ಮಸೀದಿಯನ್ನು ನವೀಕರಿಸತೊಡಗಿದರು. ಶುಕ್ರವಾರದ ಜುಮಾ ನಮಾಝಿನ ಕೇಂದ್ರವಾಗಿದ್ದು, ಜುಮಾದಲ್ಲಿ ಭಾಗಿಯಾದ ಜನರ ಸಾಲುಗಳು ರಸ್ತೆಯವರೆಗೂ ಇರುತ್ತದೆ.

ಲಕ್ಷ ದ್ವೀಪದ ಸಂತರಾದ ಮುಹಮ್ಮದ್ ಜಲಾಲ್ ಮೌಲಾ (ಖ.ಸಿ.)ರವರು ಅಂತ್ಯ ವಿಕ್ರಮಗೊಳ್ಳುವ ಸ್ಥಳವಾಗಿದೆ. ಬಂದರು ಮಸೀದಿ ಅಲ್ಲದೆ ಹಲವಾರು ಸಂತರುಗಳ ಮಖೆಬರಗಳು ಇಲ್ಲಿ ಕಾಣಬಹುದು.

ಇ) **ಮುಸ್ಲಿಂ ವ್ಯಾಪಾರದ ಪ್ರಭಾವ**

ಕ್ರಿ. ಶ. 1891ರ ಜನಗಣತಿಯ ಪ್ರಕಾರ ಕರಾವಳಿ ಜಿಲ್ಲೆಯಲ್ಲಿದ್ದ ವ್ಯಾಪಾರಿಗಳ ಸಂಖ್ಯೆ 95,000. ಈ ಪೈಕಿ 90,345 ಮಂದಿ ಬ್ಯಾರಿಗಳು ಮತ್ತು 2104 ನವಾಯಿತಿಗಳು ವ್ಯಾಪಾರಿಗಳಾಗಿದ್ದರೆಂದು, ಸ್ಟರ್ರಕ್ ದ. ಡಿಸ್ಟ್ರಿಕ್ ಮ್ಯಾನುವಲ್,

ಸೌತ್ ಕೆನರಾ ಡಿಸ್ಟ್ರಿಕ್ ಸಂಪುಟ ಒಂದರ 155ನೇ ಪುಟದಲ್ಲಿ ಉಲ್ಲೇಖಿಸಿದೆ. ಇದರಿಂದ ಕರಾವಳಿ ಜಿಲ್ಲೆಗಳಲ್ಲಿ ವ್ಯಾಪಾರವು ಬ್ಯಾರಿಗಳ ಏಕಸ್ವಾಮ್ಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಸ್ಥಳೀಯ ಉಪಭಾಷೆಯಾದ ತುಳುವಿನಲ್ಲಿ ಬ್ಯಾರಿ ಎಂದರೆ ವ್ಯಾಪಾರ ಎಂದರ್ಥವಿದೆ. ಹೆಚ್ಚಿನ ವ್ಯಾಪಾರಿಗಳು ಬ್ಯಾರಿಗಳಾಗಿದ್ದ ಕಾರಣ ಇಡೀ ಸಮುದಾಯಕ್ಕೆ ಬ್ಯಾರಿ ಎಂದು ಹೆಸರು ಬಂತು ಎಂಬುದು ಸಾಮಾನ್ಯ ಗ್ರಹಿಕೆ. ಮುಸ್ಲಿಂ ವರ್ತಕರ ಸಂಘವನ್ನು ಹಂಜುಮಾನ್ ಎಂದು ಕರೆಯಲಾಗುತ್ತಿತ್ತು. ಬಾರ್ಕೂರು ಮತ್ತು ಮಂಗಳೂರಿನಲ್ಲಿ ಎರಡು ಮುಖ್ಯ ವರ್ತಕ ಸಂಘವಿತ್ತು. ಶಿಲಾಫಲಕಗಳಲ್ಲಿ ಹಂಜುಮಾನ್‌ಗಳನ್ನು ನಖರಾ ಹಂಜುಮಾನ್‌ಗಳೆಂದು ಉಲ್ಲೇಖಿಸಲಾಗಿದೆ.

ಸೆಟ್ಟಿಗರ ಸಂಘದಂತೆಯೇ ಹಂಜುಮಾನ್‌ಗಳು ಕೂಡಾ ವಾಣಿಜ್ಯ ಚಟುವಟಿಕೆಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಮುಸ್ಲಿಂ ವರ್ತಕರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿದ್ದರಿಂದ, ಜಾತಿವಾದಿ ಬ್ರಾಹ್ಮಣರು ಮತ್ತು ಜೈನರಿಂದ ದಾರಿದ್ರ್ಯಕ್ಕೆ ತಳ್ಳಲ್ಪಟ್ಟ ಕೆಳಜಾತಿಯ ಜನರು ಸಹಜವಾಗಿಯೇ ಮುಸ್ಲಿಂ ವರ್ತಕರ ಕಡೆಗೆ ಸಹಾಯಕ್ಕೆ ಹಸ್ತವನ್ನು ಚಾಚಿದರು.

ಮುಸ್ಲಿಂ ಮತ್ತು ಹಿಂದೂ ವರ್ತಕರ ನಡುವೆ ಮತ್ತು ಆಡಳಿತಗಾರರ ನಡುವೆ ಅತ್ಯಂತ ಸುಂದರ ಸಂಬಂಧವಿದ್ದಂತೆ ಕಂಡು ಬರುತ್ತದೆ. ಹಿಂದೂ ಆಡಳಿತಗಾರರು ಹೆಚ್ಚುತ್ತಿರುವ ವ್ಯಾಪಾರ ಚಟುವಟಿಕೆಗಳ ಹಾಗೂ ಅದರಿಂದ ಉಂಟಾದ ಸುಭಿಕ್ಷೆಯ ಕಾರಣಕ್ಕಾಗಿ ಮುಸ್ಲಿಂ ವರ್ತಕರಿಗೆ ರಕ್ಷಣೆ ಮತ್ತು ಆಶ್ರಯವನ್ನು ಒದಗಿಸಿದ್ದರು. ಮಾತ್ರವಲ್ಲದೆ ವರ್ತಕರಿಗೆ ಸ್ಥಳೀಯರನ್ನು ಮತಾಂತರಗೊಳಿಸುವ ಹಾದಿಯಲ್ಲಿ ಯಾವುದೇ ಅಡೆತಡೆಗಳು ಎದುರಾಗಲಿಲ್ಲ. ಅರಬ್, ಪರ್ಷಿಯಾ ಹಾಗೂ ಭಾರತದ ಗುಜರಾತ್ ಮತ್ತು ದಖ್ಖನ್‌ನಿಂದ ಆಗಮಿಸಿದ ಮುಸ್ಲಿಂ ವರ್ತಕರು ಎಂತಹ ಪ್ರಭಾವ ಬೀರಿದ್ದರೆಂದರೆ, ಪೋರ್ಚುಗೀಸರ ಆಗಮನ ಆಗದೇ ಇರುತ್ತಿದ್ದರೆ ಕರಾವಳಿಯು ಸಂಪೂರ್ಣ ಮಹಮ್ಮದೀಯರ ಪಾಲಾಗುತ್ತಿತ್ತು ಎಂದು ಅರ್ನಾಲ್ಡ್, ದಿ ಪ್ರೀಚಿಂಗ್ ಆಫ್ ಇಸ್ಲಾಂನಲ್ಲಿ ಉಲ್ಲೇಖಿಸಿದೆ. ಆರಂಭದ ಶತಮಾನದಲ್ಲಿ ವಾಣಿಜ್ಯ ಕ್ಷೇತ್ರದ ಮೇಲೆ ಮುಸ್ಲಿಮರಿಗಿದ್ದ ಏಕಸ್ವಾಮ್ಯ ಮತ್ತು ಸ್ಥಳೀಯ ಕೆಳಜಾತಿಯ ವರ್ಗಗಳ ದಾರಿದ್ರ್ಯ ಹಾಗೂ ಅವರು ಎದುರಿಸುತ್ತಿರುವ ಅಸ್ಪೃಶ್ಯತೆಗಳಿಂದಾಗಿ ಸಹಜವಾಗಿಯೆ ಮುಸ್ಲಿಂ ಜನಸಂಖ್ಯೆ ವೃದ್ಧಿಸುತ್ತಲೇ ಹೋಯಿತು.

## ಬಿ. ಜೈನ ಧರ್ಮದ ಪ್ರಭಾವ

### ಅ) ಪದಿನಾರಗದ ಯುಗ

ಹತ್ತೊಂಭತ್ತನೇ ಶತಮಾನವನ್ನು ಪದಿನಾರಗ ಅಥವಾ ಹದಿನಾರು ಮನೆಗಳ ಕಾಲ ಎಂದೂ ಕರೆಯಬಹುದು. ಮಂಗಳೂರಿನಲ್ಲಿ ಹದಿನಾರು ಪ್ರತಿಷ್ಠಾಪಿತ ಪರಿವಾರಗಳು ಅಥವಾ ಅಗಗಳಿದ್ದವು. ಹಲವು ವಿಧದಲ್ಲಿ ಇವು ಜೈನ ಸೆಟ್ಟಿಕಾರ ಸಂಘದಂತಹ ಜೈನ ಸಂಪ್ರದಾಯಗಳನ್ನು ಹೋಲುತ್ತಿದ್ದುವು. ಹದಿನಾರು ಎಂಬ ಸಂಖ್ಯೆ ಕೂಡಾ ಜೈನರ ಪ್ರಭಾವವನ್ನು ಸೂಚಿಸುತ್ತದೆ. ಜೈನವರ್ತಕರು ಬೆಳೆದು ಬಂದ ಎಂಟೋ ಹದಿನಾರೋ ಪರಿವಾರಗಳು ಆಗ ಪಟ್ಟಣದಲ್ಲಿದ್ದವು. ಇಸ್ಲಾಮೀ ಸಂಪ್ರದಾಯದ ಪ್ರಕಾರ ಈ ಹದಿನಾರು ಎಂಬ ಅಂಕೆಗೆ ಬೇರಾವುದೇ ಮಹತ್ವವಿಲ್ಲ. ಮುಸ್ಲಿಮರು ಮತ್ತು ಜೈನರ ನಡುವಿನ ಹಲವು ಶತಮಾನಗಳ ಆತ್ಮೀಯ ಒಡನಾಟವು ಹದಿನಾರು ಮನೆಗಳು ಎಂಬು ಒಂದ ಜಾಗೀರ್ದಾರಿ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಟ್ಟಿರುವ ಸಾಧ್ಯತೆಯಿದೆ. ಅವರ ಹೆಣ್ಣುಮಕ್ಕಳು ಧರಿಸುತ್ತಿದ್ದ ಆಭರಣ, ಮನೆಯ ವಿನ್ಯಾಸ, ಸಂಜೆಯ ವೇಳೆಗೆ ಬೇಗನೆ ಭೋಜನ ಸೇವಿಸುವ ಕ್ರಮ ಇತ್ಯಾದಿಗಳು ಜೈನರಲ್ಲಿ ಕಂಡುಬರುವ ಆಚರಣೆಗಳೇ ಆಗಿದ್ದವು. ಈ ಮನೆಗಳ ಜಾಗಿರ್ದಾರಿ ಸ್ವರೂಪವೂ ಈ ಪ್ರಭಾವವನ್ನು ಎತ್ತಿ ತೋರಿಸುತ್ತದೆ.

**ಹದಿನಾರು ಕುಟುಂಬಗಳು/ಪದಿನಾರಗಗಳ ಯಾದಿ**

1. ಕಲ್ಲಗ ಅಗ
2. ಬೆಲಿಯ ಬಲ್ಲಾಳ ಅಗ
3. ಚೆರಿಯೋ ಬಲ್ಲಾಳ ಅಗ
4. ಬೀಡಿನ ಬಲ್ಲಾಳ ಅಗ
5. ಚೆಟ್ರ ಅಗ (ಪಾಂಡ್ಯನ್ ಅಗ)
6. ಚೆಟ್ರ ಬಂಡಸಾಲ ಅಗ
7. ಕೋಸಿಕಾನ್ ಅಗ
8. ಕಚಮಾನ್ ಅಗ
9. ಮೂಸರಿಕಾನ ಅಗ
10. ಬೆಲಿಯ ಮಬ್ಬಾಕ ಅಗ
11. ಸಾಯಿರ್ ಕಾನ್ ಅಗ
12. ಕಾಯಿರ್ ಕಾನ್ ಅಗ

13. ಬೂಬಕಾನ ಅಗ

14. ಐನಕಾನ ಆಗ

15. ಸಿಯಾಲಿಕಾನ ಅಗ

16. ಗೇಟ್ರೋ ಅಗ

ಜೈನ ಹೆಸರುಗಳಾದ ಬಲ್ಲಾಳ ಮತ್ತು ಸೆಟ್ಟಿಗಳ ಪ್ರಭಾವದಿಂದ ಬಂದ ಹೆಸರುಗಳಾಗಿರುವುದರಿಂದ ಈ ಹೆಸರುಗಳು ತುಸು ವಿಚಿತ್ರವಾಗಿದೆ. ಈ ಕುಟುಂಬಗಳು ತಮ್ಮದೇ ಆದ ಸಂಪ್ರದಾಯ ಕಟ್ಟಳೆಗಳನ್ನು ಕಾಲಾನುಕ್ರಮದಲ್ಲಿ ಬೆಳೆಸಿಕೊಂಡು ಬಂದಿದೆ. ತಾವು ಮುಸ್ಲಿಮರ ಪೈಕಿ ಅತ್ಯಂತ ಮೇಲಿನ ವರ್ಗ ಎಂಬುದು ಅವರ ನಂಬಿಕೆಯಾಗಿತ್ತು. ಎಲ್ಲರೂ ಶ್ರೀಮಂತ ವರ್ತಕ ವರ್ಗಕ್ಕೆ ಸೇರಿದ್ದರಿಂದ ಇತರರನ್ನು ಕೆಳವರ್ಗದವರಂತೆ ಕಾಣುತ್ತಿದ್ದರು. ತಮ್ಮೊಳಗೆ ಮಾತ್ರ ಕುಟುಂಬ ಸಂಬಂಧವನ್ನು ಬೆಳೆಸುತ್ತಿದ್ದರು. ಅವರ ಹೆಣ್ಣಕ್ಕಳು ಕುಟುಂಬದೊಳಗೆಯೇ ಮದುವೆಯಾಗುತ್ತಿದ್ದರು ಮತ್ತು ಹುಡುಗರಿಗೂ ಹೊರಗಿನ ವಿವಾಹ ಸಂಬಂಧ ಬೆಳೆಸುವ ಅವಕಾಶವಿರಲಿಲ್ಲ. ಸಂಪ್ರದಾಯವನ್ನು ಮುರಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿತ್ತು. ಕೆಲವೊಮ್ಮೆ ವ್ಯವಸ್ಥೆಯಿಂದಲೇ ಬಹಿಷ್ಕರಿಸಲಾಗುತ್ತಿತ್ತು. ತಥಾಕಥಿತ ಸಾಮಾಜಿಕ ಸ್ಥಾನಮಾನವನ್ನು ಬೆಳೆಸಿಕೊಂಡಿದ್ದ ಅವರು ಇತರರೊಂದಿಗೆ ಮುಕ್ತವಾಗಿ ಬೆರೆಯುತ್ತಿರಲಿಲ್ಲ. ಬ್ಯಾಹ್ಮಣರಂತೆಯೇ ಕೆಳವರ್ಗದ ಮತ್ತು ಬಹಿಷ್ಕೃತ ವರ್ಗದ ಜನರು ತಮ್ಮ ಪ್ರದೇಶಗಳಿಗೆ ಪ್ರವೇಶಿಸಲು ಇವರು ಅವಕಾಶ ನೀಡುತ್ತಿರಲಿಲ್ಲ. ಹಬ್ಬದ ಸಂದರ್ಭದಲ್ಲೂ ಬಡ ವರ್ಗದವರನ್ನು ದೂರವಿಡಲಾಗುತ್ತಿತ್ತು. ಈ ಸಂಪ್ರದಾಯಗಳು ಹೆಚ್ಚಾಗಿ ಇಸ್ಲಾಮಿಗೆ ಹೊರತಾಗಿದ್ದವು. ಇಸ್ಲಾಂ ಸಾಮಾನ್ಯವಾಗಿ ಜಾಗಿರ್ದಾರಿ ವ್ಯವಸ್ಥೆಯನ್ನು ಸ್ಥಾನಮಾನದ ಆಧಾರದಲ್ಲಿ ಜನರ ಮಧ್ಯೆ ತಾರತಮ್ಯ ಮಾಡುವುದನ್ನು ವಿರೋಧಿಸುತ್ತದೆ. ಆದರೆ ಮಂಗಳೂರಿನಲ್ಲಿ ಪದಿನಾರಗದ ಪ್ರಭುಗಳು ಈ ಜಾಗಿರ್ದಾರಿ ವ್ಯವಸ್ಥೆಯನ್ನು ಕಟ್ಟುನಿಟ್ಟಿನಿಂದ ಅನುಷ್ಠಾನಗೊಳಿಸಿದ್ದರು.

**ಹಂಜುಮನ್‌ಗಳು (ಅಂಜುಮನ್‌ಗಳು)**

ತುಳುನಾಡಿನ ಪರಂಪರೆಯಲ್ಲಿ ಜೈನ ಬಳ್ಳಾಲರು ಮತ್ತು ಹೆಗ್ಗಡೆಗಳು ದಖ್ಖನ್‌ದಿಂದ ಕರಾವಳಿಯವರೆಗೆ ಹಬ್ಬಿಕೊಂಡಿರುವ ಬಗ್ಗೆ ಪ್ರಸ್ತಾಪವಿದೆ. ಒಂದು ಸಾವಿರನೇ ಇಸವಿಯ ವೇಳೆಗೆ ಜೈನರು ದಖ್ಖನಿನಿಂದ ಕರಾವಳಿ ಪ್ರವೇಶಕ್ಕೆ ವಲಸೆ ಬಂದರು. ಅವರು ಒಂದು ರೀತಿಯ ಜಹಗೀರ್ದಾರಿ ಪ್ರವೃತ್ತಿಯವರಾಗಿ

ದ್ದರು. ಮಣ್ಣಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಸ್ಥಾಪಿಸಿದರು. ಪ್ರತಿ ಕುಟುಂಬವೂ ಬಲ್ಲಾಳ ಅಥವಾ ಹೆಗಡೆ ಎಂದು ಕರೆಯಲ್ಪಡುತ್ತಿತ್ತು ಮತ್ತು ಅವರು ಮಾಗಣೆಯ ದಣಿಗಳಾಗಿದ್ದರು. ಪ್ರತಿ ಕುಟುಂಬಕ್ಕೆ ಸಹಾಯ ಮಾಡಲು ಒಬ್ಬ ಬಾವಾ, ಮೂರು ಬಾಲಿಕೆ ಮತ್ತು ನಾಲ್ಕು ಪರಿವಾರಗಳಿದ್ದರು. ಚಾಲುಕ್ಯರ ಆಡಳಿತ ಕಾಲದಲ್ಲಿ ಭೂಮಿಯನ್ನು ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯಾಗಿ ಪರಿವರ್ತಿಸಲು ಬಳಸಲಾಗುತ್ತಿತ್ತು. ಬಾರಕೂರು ವಿಭಾಗದಲ್ಲಿ ಹಾನೆಹಳ್ಳಿ, ದೊಡ್ಡಮನೆ, ಮತ್ತು ಪಡುಮನೆ, ಮಂಗಳೂರಿನಲ್ಲಿ ಕೊಡಿಯಾಲ್ ಗುತ್ತು, ಗುಡ್ಡೆಗುತ್ತು ಮತ್ತು ಬಡಗಗುತ್ತು ಪ್ರಮುಖ ಜೈನ ವಸತಿ ಕೇಂದ್ರಗಳಾಗಿದ್ದವು. ಪ್ರತಿಯೊಂದು ತಾಲೂಕಿನಲ್ಲೂ ಹಲವು ಕುಟುಂಬಗಳು ನೆಲೆಯೂರಿದ್ದವು. ಮತ್ತು ಮಾಗಣೆಯ ಪ್ರಭುಗಳಾಗಿ ಅಧಿಕಾರ ವಹಿಸಿಕೊಂಡಿದ್ದರು.

ಮಂಗಳೂರು ಮತ್ತು ಉಪ್ಪಿನಂಗಡಿ ತಾಲೂಕಿನಲ್ಲಿ ತಲಾ 11, ಕಾಸರಗೋಡಿ ನಲ್ಲಿ ನಾಲ್ಕು ಮನೆಗಳಿದ್ದವು. ಕಾಸರಗೋಡಿನಲ್ಲಿ ವರ್ಕಾಡಿ ಬಲ್ಲಾಳರು, ಮಂಜೇಶ್ವರ ಬಲ್ಲಾಳರು, ತೆಂಕುಂಬಾಳೆ ಅಡ್ಕ ಹೆಗ್ಗಡೆಗಳು ಪ್ರಭುಗಳಾಗಿದ್ದರು. ಉಡುಪಿ ತಾಲೂಕಿನ ಚಿತ್ಪಾಡಿ ಬಲ್ಲಾಳ ಎಂಬ ಬ್ರಾಹ್ಮಣ ಬಲ್ಲಾಳ ಇದ್ದನು. ಅಧಿಕಾರಿಗಳು, ಬಾವಾಗಳು ಮತ್ತು ಪರಾರಿಗಳನ್ನು ಬಂಟರು ಮತ್ತು ಬ್ಯಾರಿಗಳ ಪೈಕಿಯಿಂದ ಆಯ್ದುಕೊಳ್ಳಲಾಗುತ್ತಿತ್ತು. ಈ ಜಹಗಿರ್ದಾರಿ ವ್ಯವಸ್ಥೆಯ ಬೆಳವಣಿಗೆಯಿಂದಾಗಿ ಪಾಶ್ಚಾತ್ಯ ಸಮಾಜದಲ್ಲಿ ನಡೆದಂತೆ ಇಲ್ಲಿಯೂ ಆಡಳಿತ ವರ್ಗವು ಇವರನ್ನು ನೆಚ್ಚಿಕೊಳ್ಳುವಂತಾಯಿತು.

ಜೈನ ಕುಟುಂಬಗಳ ಈ ಸಕ್ರಿಯ ವೃತ್ತಿಯಿಂದಾಗಿ ತುಳುನಾಡಿನಲ್ಲಿ ಭಾರಿ ಸಂಖ್ಯೆಯ ಪಟ್ಟಣಗಳು ನಿರ್ಮಾಣಗೊಂಡವು. ಬಾರ್ಕೂರು ನಗರ ಮತ್ತು ಮಂಗಳೂರು ನಗರದಲ್ಲಿ ತಲಾ 16 ಪಟ್ಟಣಗಳಿದ್ದವು. ಜೈನರಿಗೆ ನಗರಗಳೆಂದರೆ ಒಂದು ಸಾಮ್ರಾಜ್ಯವಿದ್ದಂತೆ.

ಬಾರ್ಕೂರು ವಿಭಾಗದ ಪ್ರಮುಖ ಪಟ್ಟಣಗಳೆಂದರೆ, ಬಾರ್ಕೂರು, ಬಸ್ರೂರು, ಮುದ್ರಾಡಿ, ಸುರಲ್, ಉಡುಪಿ, ಕಾರ್ಕಳ ಮೂಡಬಿದ್ರೆ, ಪಡುಬಿದ್ರೆ, ಕಾಪು ನಾರಾವಿ, ನೆಲಿಕಾರ್ ಬಂಗಾಡಿ, ಎರ್ಮಾಳ್, ಬೈಲಂಗಡಿ, ವೇಣೂರು, ಮುಂಡ್ಕೂರು.

ಮಂಗಳೂರು ನಗರದಲ್ಲಿದ್ದ ಪಟ್ಟಣಗಳೆಂದರೆ, ಮೂಲ್ಕಿ ಒಳಲಂಕೆ, ಪಣಂಬೂರು, ಅಳಪೆ, ಮಣೇಲ್, ಮಂಗಳೂರು ಬಂಟ್ವಾಳ, ಪಾಣೆಮಂಗಳೂರು,

ವಿಟ್ಲ, ನೆರಾಂಕಿ, ಮಾರ್ದಲ, ಕಡಬ, ಸುಳ್ಯ, ಮಂಜೇಶ್ವರ, ಕಾಸರಗೋಡು, ಉಳ್ಳಾಲ.

ಈ ಪಟ್ಟಣಗಳಲ್ಲದೆ ಕಾಲಾನುಕ್ರಮದಲ್ಲಿ ಪಂಜ, ಬೆಳ್ಳಾರೆ, ಉಪ್ಪಿನಂಗಡಿ, ಕಬಕ, ಕುಂಬಳೆ ಮತ್ತಿತರ ಕಡೆಗಳಲ್ಲಿ ಹೊಸ ಬಡಾವಣೆಗಳು ಅಸ್ತಿತ್ವಕ್ಕೆ ಬಂದವು. ಜೈನರ ಜಹಗೀರ್ದಾರಿ ವ್ಯವಸ್ಥೆಯು ಈ ಮುಸ್ಲಿಂ ವಸತಿ ತಾಣಗಳಿಗೆ ನೇರವಾಗಿ ಸಹಕಾರಿಯಾಯಿತು. ವರ್ತಕರೂ ಆಗಿದ್ದ ಜೈನರು ಬಂಗಾರ, ರತ್ನ, ವಜ್ರ ಮತ್ತಿತರ ಅಮೂಲ್ಯ ವಸ್ತುಗಳ ವ್ಯಾಪಾರ ನಡೆಸುತ್ತಿದ್ದರು. ಹೀಗಾಗಿ ಅರಬರಿಗೆ ಈ ಜೈನ ಸೆಟ್ಟಿ ಮತ್ತು ಬಲ್ಲಾಳರೊಂದಿಗೆ ನಿಕಟ ಸಂಪರ್ಕ ಇತ್ತು. ಕರಾವಳಿ ಜಿಲ್ಲೆಯಲ್ಲಿ ಒಂದು ವರ್ತಕ ಸಮುದಾಯವಾಗಿ ಇಸ್ಲಾಂ ಪ್ರವೇಶಿಸುವುದರೊಂದಿಗೆ ಜೈನರು ಮತ್ತು ಮುಸ್ಲಿಮರು ಸಹಜವಾಗಿಯೇ ವ್ಯಾಪಾರ ದತ್ತ ಆಕರ್ಷಿತರಾದರು. ಅರಬ್ ವರ್ತಕರು ಮತ್ತು ಜೈನ ವ್ಯಾಪಾರಿಗಳ ನಡುವೆ ಬ್ಯಾರಿಗಳು ಮಧ್ಯವರ್ತಿಗಳಾಗಿ ಕೆಲಸ ನಿರ್ವಹಿಸಿದರು. ಬ್ಯಾರಿಗಳು ಒಂದು ವರ್ತಕ ಸಮುದಾಯವಾಗಿ ಅಭಿವೃದ್ಧಿ ಹೊಂದಿದ್ದೂ ಕೂಡಾ ಜೈನರಿಗೆ ಅನುಕೂಲ ವಾಯಿತು. ಕೆಳಜಾತಿಯ ಜನರು ಅಸ್ಪೃಶ್ಯರಾಗಿದ್ದರಿಂದ ಜೈನ ಪ್ರಭುಗಳಿಗೆ ಅಗತ್ಯ ಮಾನವ ಸಂಪನ್ಮೂಲವು ದೊರೆಯಿತು.

ಜೈನ ವರ್ತಕರ ವ್ಯಾಪಾರಿ ಒಕ್ಕೂಟಗಳು ಹಂಜುಮಾನದ ಮುಸ್ಲಿಮರ ಮಧ್ಯೆ ವ್ಯಾಪಾರಿ ಸಂಘಗಳು ಅಸ್ತತ್ವಕ್ಕೆ ಬರಲು ಕಾರಣವಾಯಿತು. ಜೈನ ವರ್ತಕರ ಒಕ್ಕೂಟಗಳು ಸೆಟ್ಟಿಕಾರ ಸಂಘಗಳೆಂದು ಹೆಸರಾಗಿದ್ದವು. ಬಾರ್ಕೂರು, ಮೂಡಬಿದ್ರೆ ವೇಣೂರು ಮತ್ತಿತರ ಪಟ್ಟಣಗಳಲ್ಲಿ ವರ್ತಕರ ಸಂಘಗಳು ಅಸ್ತಿತ್ವದಲ್ಲಿದ್ದವು. ಸೆಟ್ಟಿಕಾರ ಸಂಘಗಳಂತೆಯೇ ಮುಸ್ಲಿಮರ ಹಂಜುಮಾನ್‌ಗಳು ಕೂಡಾ ಸ್ಥಳೀಯ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. ಜೈನ ಸೆಟ್ಟಿಕಾರ ಸಂಘ ಗಳಂತೆಯೇ ಹಂಜುಮಾನ್‌ಗಳೂ ಮಂಗಳೂರು ಬಾರ್ಕೂರು ಮತ್ತು ಬಸ್ರೂರುಗಳ ಮೇಲೆ ನಿಯಂತ್ರಣ ಹೊಂದಿದ್ದರು. ಪೋರ್ಚುಗಿಸರ ಆಗಮನದವರೆಗೂ ಅದು ಅತ್ಯಂತ ಶಕ್ತಿಶಾಲಿ ವರ್ತಕರ ಒಕ್ಕೂಟವಾಗಿದ್ದವು.

**ಆ) ಅಗಕ್ಕಾರ್**

ಅಗ ಪದ್ದತಿಯ ಉಗಮವು ಅಸ್ಪಷ್ಟವಾಗಿದೆ. ಇಲ್ಲಂ ಪಂಗಡ ಮತ್ತು ಅಗ ಪದ್ದತಿಯ ನಡುವಿನ ಸಂಬಂಧದ ಬಗ್ಗೆಯೂ ಸರಿಯಾದ ಮಾಹಿತಿಗಳು ಲಭ್ಯವಾಗಿಲ್ಲ. ಆದರೂ 'ಅಗ' ಪದ್ದತಿಯು ಮಂಗಳೂರಿನಲ್ಲಿ ಮಾತ್ರವಿದ್ದು,

ಇದು ಕೇವಲ 16 ಕುಟುಂಬಗಳಿಗೆ ಸೀಮಿತವಾಗಿತ್ತು. ಹಿಂದೆ ಈ ಅಗ ಪದ್ದತಿಯು ಮಂಗಳೂರಿನಲ್ಲಿ ವ್ಯಾಪಾರಿಗಳ ಹೊಸ ವರ್ಗವಾಗಿದ್ದು, ಇದು ಬಹಳ ಪ್ರಭಾವಿ ಊಳಿಗಮಾನ್ಯ ವ್ಯವಸ್ಥೆಯಾಗಿ ಪರಿಣಮಿಸಿತ್ತು. ಪೋರ್ಚುಗೀಸರು ಉಳ್ಳಾಲದ ಜೈನ ರಾಣಿಯೊಂದಿಗೆ ಮತ್ತು ಮಂಗಳೂರಿನ ಬಂಗ ರಾಜರುಗಳೊಂದಿಗೆ ನಡೆಸಿದ ರಾಜಕೀಯ ಯುದ್ದದ ಪ್ರಭಾವದಿಂದ ಈ ಪ್ರದೇಶದ ವ್ಯಾಪಾರ ಸ್ಥಿತಿಯಲ್ಲಿ ಹಲವು ಬದಲಾವಣೆಗಳುಂಟಾದವು. ಇನ್ನೂರು ವರ್ಷಗಳಲ್ಲಿ (1600 ರಿಂದ 1800) ಹಂಜುಮಾನ್‌ಗಳು ಒಮ್ಮಿಂದೊಮ್ಮೆಲೆ ಇಲ್ಲವಾಗಿ ಹೊಸ ಹಾಗೂ ಅಷ್ಟೇ ಪ್ರಭಾವ ಪೂರ್ಣವಾದ ಒಂದು ವ್ಯಾಪಾರಿ ವರ್ಗವು ಬೆಳೆದುಬಂತು. ಹಂಜುಮಾನಗಳು ಕಾಲಕ್ರಮೇಣ ಜಹಗೀರು ಪದ್ದತಿಯಾಗಿ ಪರಿಣಮಿಸಿ ಮಂಗಳೂರಿನಲ್ಲಿ ಹದಿನಾರು ಅಗಗಳಾಗಿ ಪರಿಣಮಿಸಿರಬಹುದು.

ಹದಿನಾರು ಮನೆಗಳು ಯಾಕಾಗಿ? ಇವರು ಭಿನ್ನ ವ್ಯಾಪಾರಿ ವರ್ಗದವರೇ? ಎಂಬ ಪ್ರಶ್ನೆಗಳೂ ಸಾಮಾನ್ಯವಾಗಿ ಉದ್ಭವಿಸುತ್ತದೆ. ಹದಿನಾರು ಸಂಖ್ಯೆಯ ಕಲ್ಪನೆ ಈ ಅಗ ಪದ್ದತಿಯಿಂದುಂಟಾದದ್ದಲ್ಲ. ವಿಜಯನಗರ ಮತ್ತು ಅಲುಪ್ಪರ ಆಳ್ವಿಕೆಯ ಕಾಲದಲ್ಲಿ ನಗರ ಹಂಜುಮಾನ್ ಮತ್ತು ಸೆಟ್ಟಿಕಾರ ಸಂಘಗಳು ಸಮಾಜದಲ್ಲಿ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದವು ಎಂಬುದು ಹಂಜುಮಾನ್‌ರ ಇತಿಹಾಸದಿಂದ ತಿಳಿದುಬರುತ್ತಿದೆ. ಶಿಲಾ ಲೇಖನಗಳ ಪ್ರಕಾರ ಹಂಜುಮಾನ್ ಮತ್ತು ಸೆಟ್ಟಿಕಾರ ಸಂಘಗಳು ಬಾರ್ಕೂರು ಮತ್ತು ಮಂಗಳೂರಿನಲ್ಲಿ ತುಂಬಾ ಪ್ರಸಿದ್ದಿ ಪಡೆದಿದ್ದರು ಎಂದು ತಿಳಿದು ಬರುತ್ತದೆ.

ಹಿಂದಿನ ಶತಮಾನದಲ್ಲಿ ಜೈನರು ಮತ್ತು ಮುಸ್ಲಿಮರ ನಡುವೆ ವ್ಯಾಪಾರಿ ಸಂಬಂಧವು ಬಹಳ ನಿಕಟವಾಗಿತ್ತು. ಜೈನ ಸೆಟ್ಟಿಕಾರ ಸಂಘಗಳು 16 ಕುಟುಂಬ ಗಳನ್ನು ನಗರಗಳಲ್ಲೂ 8 ಕುಟುಂಬವನ್ನು ಪಟ್ಟಣದಲ್ಲೂ ಹೊಂದಿತ್ತು. ಬಾರ್ಕೂರು ಮತ್ತು ಮಂಗಳೂರು ಎರಡು ನಗರಗಳಾಗಿದ್ದು ಇಲ್ಲಿ ಹಂಜುಮಾನ್‌ಗಳು ಮತ್ತು ಸೆಟ್ಟಿಕಾರ ಸಂಘಗಳು ಇದ್ದವು. ಸೆಟ್ಟಿಕಾರ ಸಂಘದಲ್ಲಿ 16 ಕುಟುಂಬಗಳಿದ್ದವು. ಜೈನ ಧರ್ಮದಿಂದ ಮತಾಂತರಗೊಂಡ ಮುಸ್ಲಿಮರಲ್ಲಿ ಜೈನರದ್ದೇ ಆದ ವ್ಯಾಪಾರಿ ವಿಧಾನಗಳ ಪ್ರಭಾವ ಬಹಳವಾಗಿದ್ದು ಕಂಡುಬರುತ್ತದೆ. ಹಂಜುಮಾನ್‌ಗಳು ಸೆಟ್ಟಿಕಾರರ ಸಂಘದಂತೆಯೇ ಒಂದು ವರ್ಗವಾಗಿದ್ದು, ಇಲ್ಲಿಯೂ ಸೆಟ್ಟಿಕಾರ ಸಂಘದಂತೆ ಹದಿನಾರು ಕುಟುಂಬಗಳ ಒಂದು ಗುಂಪಿತ್ತು. ಇದೇ ಹದಿನಾರು ಕುಟುಂಬಗಳ ಕಲ್ಪನೆಯು 18ನೇ ಶತಮಾನದಲ್ಲಿ ಅಗ (ಮನೆ)ವಾಗಿ ಮಾರ್ಪಟ್ಟಿತ್ತು.

**'ಅಗ' ಪದ್ಧತಿಯು ಮುಖ್ಯ ಗುಣಲಕ್ಷಣಗಳು ಈ ರೀತಿ ಇವೆ.**

1. 'ಅಗ'ಗಳವರು ಮತ್ತು ಜೈನರಲ್ಲಿ ಹಲವು ಸಾಮ್ಯತೆ ಕಾಣಸಿಗುತ್ತದೆ. ಪೋರ್ಚುಗೀಸರ ಆಕ್ರಮಣಕ್ಕಿಂತ ಮುಂಚೆ ಮಂಗಳೂರು ಜೈನರ ನೆಲೆವೀಡಾಗಿತ್ತು. ಭಂಗ ದೊರೆ ಲಕ್ಷ್ಮಪ್ಪರಸ ಮಂಗಳೂರಿನಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದನು. ಇಲ್ಲಿ ಜೈನ ಬಸದಿ, ಮಂದಿರ, ಜೈನ ಮಠ ಮತ್ತು ಅರಮನೆ (ಉರ್ವದಲ್ಲಿ)ಗಳಿದ್ದು ಇವೆಲ್ಲವೂ ಬಂದರು ಪ್ರದೇಶಗಳಲ್ಲಿತ್ತು. ಪೋರ್ಚುಗೀಸರ ದಾಳಿಯಿಂದ ಜೈನರ ಆಳ್ವಿಕೆ ಕೊನೆಗೊಂಡಿತು. ವ್ಯಾಪಾರ ವಹಿವಾಟುಗಳನ್ನು ಮುಸ್ಲಿಮರು ನಿಭಾಯಿಸುತ್ತಿದ್ದರು. ಚೆಟ್ಟಿ ಎಂಬ ವ್ಯಾಪಾರಿ ಮಲಬಾರಿನ ರಾಜರೊಂದಿಗೆ ನಿಕಟ ಸಂಬಂಧ ಹೊಂದಿದ್ದರು ಎನ್ನಲಾಗಿದೆ. ಪೋರ್ಚುಗೀಸರು ಆತನ ಮೇಲೆ ದಾಳಿ ನಡೆಸಿದಾಗ ತಪ್ಪಿಸಿಕೊಳ್ಳಲಾಗದೆ ಆತ ಮೃತಪಟ್ಟನು ಎಂಬ ಪ್ರತೀತಿ ಇದೆ. ಚೆಟ್ಟಿ ಮುಸ್ಲಿಮನಾಗಿದ್ದು ಅವನ ಮನೆತನವನ್ನು ಚೆಟ್ಟಿ ಅಗ ಎಂದು ಕರೆಯಲಾಗುತ್ತಿತ್ತು. ಈ ಜೈನ ಮುಸ್ಲಿಂ ಸಂಬಂಧವು ಮಂಗಳೂರಿನಲ್ಲಿ ಅಧಿಕವಾಗಿ 16 ಮನೆಗಳವರೂ ಮುಸ್ಲಿಂ ಮತಾನುಯಾಯಿಗಳಾಗಿ ಮಾರ್ಪಟ್ಟು ಜೈನ ವ್ಯಾಪಾರಿ ಮನೆತನದವರೇ ಆಗಿದ್ದರು. ಈ ಮನೆಗಳಿರುವ ಹೆಸರುಗಳು ಚೆಟ್ರ ಅಗ, ಬಲ್ಲಾಳ ಅಗ, ಪಾಂಡ್ಯಲ್ ಅಗ (ಚೆರಿಯ ಬಲ್ಲಾಳ) ಇತ್ಯಾದಿಗಳೂ ಜೈನರ ಪ್ರಭಾವವನ್ನು ತೋರಿಸುತ್ತದೆ.

2. ಅಗ ಎಂದರೆ ಮನೆ, ಇಸ್ಲಾಮಿನಲ್ಲಿ ಮನೆ ಅಥವಾ ಮನೆತನಕ್ಕೆ ಹೆಚ್ಚಿನ ಮಹತ್ವ ಇಲ್ಲ. ಆದರೆ ಜೈನ ಸಂಸ್ಕೃತಿಯಲ್ಲಿ ಬೀಡು ಎಂದರೆ ಮನೆಗೆ ಹೆಚ್ಚಿನ ಮಹತ್ವವಿದೆ. ದಕ್ಷಿಣಕನ್ನಡದಲ್ಲಿ ಹಲವಾರು ಜೈನ ಬೀಡುಗಳಿದ್ದು, ಈ ಬೀಡುಗಳಲ್ಲಿ ಜಹಗೀರು ಪದ್ಧತಿಯ ವ್ಯವಸ್ಥೆ ಕಾಣುತ್ತಿತ್ತು. ಅಗವೂ ಈ ಬೀಡುಗಳಲ್ಲಾಗಿದ್ದು ಇವು ಜಹಗೀರು ಪದ್ದತಿಯನ್ನು ಅವಲಂಬಿಸಿ ರೂಪುಗೊಂಡಿತ್ತು. ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಜೈನರು, ಈ ಮನೆತನದ ಹೆಸರುಗಳನ್ನು ಬೀಡಿನಿಂದ ಅಗಕ್ಕೆ ಪರಿವರ್ತಿಸಿದರು. ಈ ಅಗ ಎಂಬುದು ಬೀಡು ಎಂಬ ಪದದ ಬ್ಯಾರಿ ಭಾಷಾಂತರವಾಗಿದೆ.

3. ಜೈನ ಸೆಟ್ಟಿಕಾರ ಸಂಘಗಳೊಂದಿಗೆ ಗುರುತಿಸಿಕೊಂಡಿದ್ದ ಹದಿನಾರನೇ ಸಂಖ್ಯೆಯನ್ನು ಜೈನರಿಂದ ಪಡೆದುಕೊಂಡರು. ಜಮೀನ್ದಾರಿ ಸಂಪರ್ಕ ಮತ್ತು 16 ಸೀಟುಗಳ ಸಮಾಜದಲ್ಲಿ ಅವರನ್ನು ಇತರರಿಂದ ಪ್ರತ್ಯೇಕಿಸಿತು. 16 ಅಗ ಅಥವಾ ಮನೆಗಳಲ್ಲಿ ಜೈನರ ಎಲ್ಲ ಗುಣಲಕ್ಷಣಗಳು ಇದ್ದವು.

4. 19ನೇ ಶತಮಾನದಲ್ಲಿ ಈ ಅಗಗಳು ಇಡೀ ಬಂದರು ಪ್ರದೇಶಗಳನ್ನು ಅಗ ಮಾಯವನ್ನಾಗಿಸಿತು. ಕೆಳಜಾತಿ ಜನರು ಹಾಗೂ ಬಡವರು ಈ ಪ್ರದೇಶಕ್ಕೆ

ಭೇಟಿ ನೀಡುವ ಧೈರ್ಯ ತೋರುತ್ತಿರಲಿಲ್ಲ. ಅಗದ ಜನರ ಎದುರು ಬಡವರು ಚಪ್ಪಲಿ ಧರಿಸಿ ಅಥವಾ ನೆರಳಿಗಾಗಿ ಕೊಡೆ ಹಿಡಿದು ನಡೆಯುತ್ತಿರಲಿಲ್ಲ. ಈ ರೀತಿಯ ಜಮೀನ್ದಾರಿ ಪದ್ಧತಿ ಇಲ್ಲಿ ಜಾರಿಯಲ್ಲಿತ್ತು.

5. ಮನೆಗಳ ನಿರ್ಮಾಣ ಯೋಜನೆ ಮತ್ತು ಸ್ವರೂಪ ಜೈನರ ಮನೆಗಳನ್ನು ಹೋಲುತ್ತಿತ್ತು. ಒಳಾಂಗಣದ ಕೋಣೆಗಳು ಸಹ ಜೈನರ ಮನೆಯ ಮಾದರಿಯದ್ದಾಗಿತ್ತು.

6. ಬ್ಯಾರಿಗಳು ಧರಿಸುತ್ತಿದ್ದ ಆಭರಣಗಳು ಸಹ ಜೈನರ ಆಭರಣಗಳನ್ನು ಬಹುಮಟ್ಟಿಗೆ ಹೋಲುತ್ತಿತ್ತು. ಗೆಜ್ಜೆಟಿಕ್ಕಿ ಮಾಲೆ, ಸಿರಿಮಾಲೆ, ಎಳೆಬಲೆ, ಪೆರಬಲೆ, ಮಿಸ್ರಿಮಾಲೆ, ಜಕ್ಕೆಟ್ಟ್, ಸಿಂಗಾರ, ಚೌರಿ, ಜಡೆಸಾಲೆ, ಆರೋಪಟ್ಟಿ, ಅರಞಾನ, ಮಾತ್ರವಲ್ಲ ಆಭರಣ ಪೆಟ್ಟಿಗೆ ಖಿರ್‌ಜಾನ ಎಲ್ಲವೂ ಜೈನ ಪದಕೋಶದಲ್ಲಿನ ಶಬ್ದಗಳೇ ಆಗಿದ್ದವು. ಬಹುತೇಕ ಈ ಆಭರಣಗಳನ್ನು ಇಂದು ಜೈನ ಅಥವಾ ಮುಸ್ಲಿಮರು ಬಳಸುತ್ತಿರಲಿಲ್ಲ.

7. ಅಗಕ್ಕಾರ್ (ಜನರು) 19ನೇ ಶತಮಾನದ ಮಧ್ಯ ಭಾಗದವರೆಗೂ ಸೂರ್ಯಸ್ತಮಾನಕ್ಕಿಂತ ಮೊದಲೇ ಅಥವಾ ಆದ ತಕ್ಷಣ ಊಟ ಮಾಡುತ್ತಿದ್ದರು. ಆದರೆ ಬ್ರಿಟಿಷ್ ಅಧಿಕಾರಿಗಳ ಪ್ರಭಾವದಿಂದಾಗಿ ರಾತ್ರಿ ಊಟ ಅಭ್ಯಾಸವಾಗಿ ಸೂರ್ಯಸ್ತ ಸಂದರ್ಭದ ರಾತ್ರಿ ಆಹಾರ ಸೇವನೆ ಪದ್ದತಿ ಕಣ್ಮರೆಯಾಯಿತು.

ಜೈನರ ಮತಾಂತರದಿಂದ ಇಂತಹ ಅಗಗಳು ರೂಪುಗೊಂಡಿರುವುದನ್ನು ಮತ್ತು ಅಗಗಳ ಮೇಲೆ ಜೈನರ ಪ್ರಭಾವ ಇರುವುದನ್ನು ಈ ಎಲ್ಲಾ ಹೋಲಿಕೆಗಳು ಸ್ಪಷ್ಟಪಡಿಸುತ್ತದೆ.

## ಸಿ. ಹಿಂದೂ ಧರ್ಮದ ಪ್ರಭಾವ

### ಸಾಮರಸ್ಯ

ತುಳುನಾಡಿನ ಮುಸ್ಲಿಮರ ಪೈಕಿ ಜನಸಂಖ್ಯೆಯಲ್ಲಿ ಅತ್ಯಂತ ಮುಂಚೂಣಿಯಲ್ಲಿರುವವರು ಬ್ಯಾರಿಗಳು. ಅವರು ಈ ಪ್ರದೇಶದ ಅತ್ಯಂತ ಪ್ರಾಚೀನ ಮುಸ್ಲಿಮರಾಗಿದ್ದು, ಆರಂಭದ ಶತಮಾನದಲ್ಲಿ ಇಲ್ಲಿ ನೆಲೆಸಿದ್ದ ಅರಬಿಗಳಿಂದ ನೇರ ಪ್ರಭಾವಕ್ಕೊಳಗಾದರು. ಹೊಸ ಧರ್ಮದ ಜಾತಿ ವಿರೋಧ ಸಮಾನತೆಯ ಆಶಯಗಳಿಗೆ ಕೆಳಜಾತಿಯ ಜನರು ಮಾರು ಹೋದರು. ಮತ್ತು ಮುಸ್ಲಿಮರಾಗಿ ಮಾರ್ಪಟ್ಟರು. ಆದರೂ ಅವರು ತಮ್ಮ ಪ್ರಾದೇಶಿಕ ಸಂಪ್ರದಾಯವನ್ನು ಉಳಿಸಿಕೊಂಡರು.

ಆರಂಭದ ಕಾಲದಲ್ಲಿ ಮುಸ್ಲಿಮರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರಿಂದ ಪ್ರದೇಶದ ಇತರ ಜನರೊಂದಿಗೆ ಉತ್ತಮ ಸಂಬಂಧವನ್ನು ಉಳಿಸಿಕೊಂಡರು. ಬ್ರಾಹ್ಮಣ ಜಾತಿ ವ್ಯವಸ್ಥೆಯಿಂದ ನಲುಗಿದ ಕೆಳ ವರ್ಗದ ಜನರು ಬೇರೆ ಧರ್ಮಗಳನ್ನು ಅಪ್ಪಿಕೊಳ್ಳಲು ಭಾರಿ ಸಂಖ್ಯೆಯಲ್ಲಿ ಮುಂದೆ ಬಂದರು. ನಿಜವಾಗಿ ಬಹಿಷ್ಕೃತ ಸಮಾಜದ ಜನರಿಗೆ ಇಸ್ಲಾಂ ಧರ್ಮದ ತತ್ವಗಳು ಜೀವನ ಶೈಲಿ, ಒಂದು ದೊಡ್ಡ ಆಸರೆಯಾಗಿ ಕಂಡಿತು. ಲೋಗಾನ್‌ರ ಪ್ರಕಾರ ಇಸ್ಲಾಂ ಸ್ವೀಕರಿಸುವುದೆಂದರೆ ಮಲಬಾರಿನ ಗುಲಾಮ ಜಾತಿಯನ್ನು ಅವರ ಹಳೆಯ ಬುರ್ತಾನ್‌ಗಳಿಂದ ಮುಕ್ತಗೊಳಿಸುವಲ್ಲಿ ಮುಖ್ಯ ಪಾತ್ರವಹಿಸಿತು. ಕೆಳ ಜಾತಿಯವರಿಗೆ ಬಹಿಷ್ಕರಿಸಲ್ಪಟ್ಟವರಿಗೆ ಮತ್ತು ಅಸ್ಪೃಶ್ಯರಿಗೆ ಸಮಾನ ನಾಗರಿಕರೆಂಬ ಸಾಮಾಜಿಕ ಸ್ಥಾನದ ಕೊಡುಗೆ ನೀಡಿದ್ದು ಕರಾವಳಿ ಜಿಲ್ಲೆಗೆ ಇಸ್ಲಾಂ ಧರ್ಮ ನೀಡಿದ ದೊಡ್ಡ ಕಾಣಿಕೆಯೆಂದು ಭಾವಿಸಬಹುದು ಅಲ್ಲದೆ ಜಾತಿವಾದಿ ಬ್ರಾಹ್ಮಣರು ಮತ್ತು ಜೈನರಿಂದ ದಾರಿದ್ರ್ಯಕ್ಕೆ ತಳ್ಳಲ್ಪಟ್ಟಿದ್ದ ಕೆಳಜಾತಿಯ ಜನರು ಸಹಜವಾಗಿಯೇ ಮುಸ್ಲಿಂ ವರ್ತಕರ ಕಡೆಗೆ ಸಹಾಯಕ್ಕಾಗಿ ನೋಡುವಂತಾಯಿತು.

ಆದರೆ ಈ ಮುಸ್ಲಿಂ ಮತ್ತು ಹಿಂದು ಆಡಳಿತಗಾರರ ಮಧ್ಯೆ ಅತ್ಯಂತ ಸುಮಧುರ ಸಂಬಂಧವಿರುವಂತೆ ಕಂಡು ಬರುತ್ತಿತ್ತು. ಹಿಂದೂ ಆಡಳಿತಗಾರರು ಹೆಚ್ಚುತ್ತಿರುವ ವ್ಯಾಪಾರ ಚಟುವಟಿಕೆಗಳ ಹಾಗೂ ಆದರಿಂದ ಉಂಟಾದ ಸುಭಿಕ್ಷೆಯ ಕಾರಣಕ್ಕಾಗಿ ಮುಸ್ಲಿಂ ವರ್ತಕರಿಗೆ ರಕ್ಷಣೆ ಮತ್ತು ಆಶ್ರಯವನ್ನು ಒದಗಿಸಿದ್ದರು. ಅಷ್ಟೇ ಅಲ್ಲ ವರ್ತಕರಿಗೆ ಸ್ಥಳೀಯರನ್ನು ಮತಾಂತರಗೊಳ್ಳುವುದಕ್ಕೆ ಮೊದಲು ಈ ವರ್ತಕರು ಸಮಾಜದ ಅತ್ಯಂತ ಕೆಳವರ್ಗದವರಾಗಿದ್ದರೂ ವಿದೇಶಗಳಿಂದ ಅವರಿಗೆ ದೊರೆಯುವ ಗೌರವ ಸನ್ಮಾರ್ಗದಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುತ್ತಿರಲಿಲ್ಲ. ಅರಬ್ ವ್ಯಾಪಾರದ ಮುಖ್ಯ ಪೋಷಕನಾಗಿದ್ದ ಕಲ್ಲಿಕೋಟೆಯ ಝಮೋರಿನ್ ಅರಸ ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಬೆಂಬಲ ನೀಡಿದ್ದ. ಆತನ ಶ್ರೀಮಂತಿಕೆಯು ಅರಬ್ ಹಡಗುಗಳ ಸಂಚಾರದ ಮೇಲೆ ಅವಲಂಬಿಸಿದ್ದರಿಂದ ಹೀಗೆ ಮಾಡುವುದು ಅನಿವಾರ್ಯವಾಗಿತ್ತು ಎಂದು ಅರ್ನಾಲ್ಡ್ ತನ್ನ ದಿ. ಪ್ರೀಚಿಂಗ್ ಆಫ್ ಇಸ್ಲಾಂನಲ್ಲಿ ಉಲ್ಲೇಖಿಸಿದ್ದಾನೆ.

ಆರಂಭದ ಕಾಲದಲ್ಲಿ ಮುಸ್ಲಿಮರು ಕೆಳಜಾತಿಯಿಂದ ಮತಾಂತರಗೊಂಡವರಾಗಿದ್ದರಿಂದ ಪ್ರದೇಶದ ಇತರ ಜನರೊಂದಿಗೆ ಉತ್ತಮ ಸಂಬಂಧವನ್ನು ಉಳಿಸಿಕೊಂಡಿದ್ದರು. ಸ್ಥಳೀಯರೊಂದಿಗೆ ಬ್ಯಾರಿಗಳು ಹೊಂದಿದ್ದ ಸಂಬಂಧದ ಬಗ್ಗೆ ಪಾಡ್ದನಗಳಲ್ಲಿ ಉಲ್ಲೇಖವಿದೆ.

ಸುಲಿಕಲ್ಲು ಮಾಧವ (ಮಹಮ್ಮದ)ಬ್ಯಾರಿ ಎಂಬ ವರ್ತಕ ವಿವಾಹ ಆಗುವ ಅವಕಾಶವನ್ನೇ ಕಳೆದುಕೊಂಡಿದ್ದ ಮತ್ತು ಶೆಡ್ತಿ ಎಂಬ ಮಹಿಳೆಯನ್ನು ವಿವಾಹ ಆದನು. ಆಕೆಯೊಂದಿಗೆ ವಿವಾಹ ಪ್ರಸ್ತಾಪವಿಡುತ್ತಿದ್ದ ಪುರುಷರೆಲ್ಲರು ಮದುವೆಯ ರಾತ್ರಿಯಲ್ಲೇ ತೀರಿಹೋಗುತ್ತಿದ್ದರು. ಮಾಧವ ಬ್ಯಾರಿ ಅವಳನ್ನು ವಿವಾಹವಾದ ಮೂವತ್ತನೆ ಪುರುಷನಾಗಿದ್ದ. ತನ್ನ ಜೀವವನ್ನೇ ಅಪಾಯಕ್ಕೊಡ್ಡಿದ್ದ ಆತ ಈ ನಿಗೂಢ ಸಾವುಗಳ ಹಿಂದಿನ ಕಾರಣ ಸರ್ಪ ಕಡಿತ ಎಂಬುದನ್ನು ಪತ್ತೆ ಹಚ್ಚಿದ. ಆತ ಆ ಹಾವನ್ನು ಕೊಂಡು ಆ ಹೆಣ್ಣನ್ನು ಮದುವೆಯಾದ. ಆದ್ದರಿಂದ ರತ್ನಾ ಸೆಟ್ಟಿಯ ಸೋದರಿಯಾಗಿದ್ದ ಮುತ್ತು ಶೆಡ್ತಿ ಫಾತಿಮಾ ಆಗಿ ಬಪ್ಪನಿಗೆ ಜನ್ಮ ನೀಡಿದಳು. ಈ ಬಪ್ಪನೇ ಮುಂದೆ ಬಬ್ಬರ್ಯನೆಂದು ಪ್ರಸಿದ್ಧನಾದ ಎಂದು ಡಾ. ಸುಶೀಲ ಉಪಾಧ್ಯಾಯ ಪಾಡ್ದನದ ಅವತರಣಿಕೆಯನ್ನು ಮುಂದಿಡುತ್ತಾರೆ.

ಸ್ಥಳೀಯರು ಜಾತಿ–ನೀತಿ ಬ್ಯಾರಿಗಳು ಮತ್ತು ಜಾತಿ –ಸೆಟ್ಟಿ ಬ್ಯಾರಿಗಳೆಂದು ಗುರುತಿಸಲ್ಪಡುತ್ತಿದ್ದರು. ಜಾತಿ ನೀತಿ ಬ್ಯಾರಿಗಳು ಕಟ್ಟಳೆಗಳನ್ನು ಆಚರಣೆಯಲ್ಲಿ ಪಾಲಿಸುತ್ತಿದ್ದರು. ಆದರೆ ಜಾತಿ ಸೆಟ್ಟಿ ಬ್ಯಾರಿಗಳು ಆಚರಣೆಯ ವಿಷಯದಲ್ಲಿ ಅಷ್ಟಕಷ್ಟೇ.

ನಡವಳಿಕೆಗಳ ಸಂಗ್ರಹದಲ್ಲಿ ಬೊಬ್ಬರ್ಯ ಪಾಡ್ದನವು ಬ್ಯಾರಿಗಳ ಇತರ ಜಾತಿಗಳೊಂದಿಗಿದ್ದ ಅನ್ಯೋನ್ಯತೆಯನ್ನು ಹೀಗೆ ವಿವರಿಸುತ್ತದೆ. ಏಳು ಪಟ್ಟಣದ ಮರಕಲರು ಮತ್ತು ಏಳು ಕಡೆಯ ಬ್ಯಾರಿಗಳು ಒಟ್ಟು ಸೇರಿ ಕಲಂಜಾರ್ ಎಂಬಲ್ಲಿಗೆ ತೆರಳಿದರು. ನೀವು ಜಾತಿ–ನೀತಿ ಬ್ಯಾರಿಗಳೋ ಅಥವಾ ಜಾತಿ–ಸೆಟ್ಟಿ ಬ್ಯಾರಿಗಳೋ ಎಂದು ಅವರನ್ನು ಅಲ್ಲಿಯವರು ಕೇಳಿದರು. ತಾವು ಜಾತಿ ಬ್ಯಾರಿ ಗಳೆಂದು ಬ್ಯಾರಿಗಳು ಉತ್ತರಿಸಿದರು. ನೀವು ಜಾತಿ–ನೀತಿ ಬ್ಯಾರಿಗಳಾಗಿದ್ದರೆ ಅವರಣದೊಳಕ್ಕೆ ಬನ್ನಿ ಎಂಬ ಆಹ್ವಾನ ಅಲ್ಲಿನವರಿಂದ ಬಂತು. ಅವರಿಗೆ ಒಳ್ಳೆಯ ಅಥಿತ್ಯವೂ ದೊರೆಯಿತು.

ಇನ್ನೊಂದು ಪಾಡ್ದನದಲ್ಲೂ ಇದೇ ಬಗೆಯ ಉಲ್ಲೇಖ ಕಂಡುಬರುತ್ತದೆ. ‘ಯೆಡ್ಡೋಡಿ ಸೊತ್ತು ಮರಕಲನ ಕತೆ’ ಎಂಬುದು ಅದರ ಶೀರ್ಷಿಕೆ. ಮೂವರು ಬ್ಯಾರಿಗಳು ಕಲಂಜಾರ್ ಎಂಬಲ್ಲಿನ ದೇವಸ್ಥಾನಕ್ಕೆ ಹೋದರು. ಗುತ್ತುವಿನ ಜನರು ಈ ಹಿಂದಿನ ಪಾಡ್ದನದಲ್ಲಿ ಕೇಳಿದ್ದ ಪ್ರಶ್ನೆಗಳನ್ನೇ ಕೇಳಿದರು. ತಾವು ಜಾತಿ–ನೀತಿ ಬ್ಯಾರಿಗಳೆಂದು ಅವರು ಉತ್ತರಿಸಿದರು. ನಂತರ ಗುತ್ತುವಿನವರು ಬ್ಯಾರಿಗಳನ್ನು ಆವರಣದೊಳಕ್ಕೆ ಬರಮಾಡಿಕೊಂಡರು. ಜನಸಾಮಾನ್ಯರ ನಡುವೆ ಬ್ಯಾರಿಗಳಿಗೆ ವಿಶೇಶವಾದ ಗೌರವವಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಬ್ಯಾರಿಗಳ ಹೆಸರುಗಳು

ಕೂಡಾ ಸ್ಥಳೀಯ ಹೆಸರುಗಳನ್ನು ಹೋಲುತ್ತಿತ್ತು.

## ಡಿ. ವೈವಿಧ್ಯತೆಗಳು

### ಮುಸ್ಲಿಂ ಹಬ್ಬಗಳು

ದಕ್ಷಿಣಕನ್ನಡ ಮತ್ತು ಸುತ್ತಮುತ್ತಲಿನ ಪರಿಸರಗಳಲ್ಲಿ ಮುಸ್ಲಿಮರು ಹಲವಾರು ಹಬ್ಬಗಳನ್ನು ಬಹಳ ವಿಜೃಂಭನೆಯಿಂದ ಆಚರಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳು ಎಂದರೆ, ಮೊಹರ್ರಂ, ಈದ್ ಮಿಲಾದ್, ರಬೀಉಲ್ ಅವ್ವಲ್ ಹನ್ನೆರಡರಂದು ಪ್ರವಾದಿ (ಸ.ಅ)ರವರ ಜನ್ಮ ದಿನದ ಅಂಗವಾಗಿ ಆಚರಿಸುತ್ತಾರೆ. ರಬೀಉಲ್ ಆಖರ್ ಹನ್ನೊಂದರಂದು ರಾತೀಬ್ ಅಂದರೆ ಸೂಫಿ ಸಂತ ಶೈಖ್ ಅಬ್ದುಲ್ ಖಾದರ್ ಜೀಲಾನಿ (ಖ.ನ)ರವರ ಅನುಸ್ಮರಣೆಯಾಗಿ ಆಚರಿಸುತ್ತಾರೆ. ಶಾಬಾನ್ ಹದಿನೈದರಂದು ಶಬೆ ಬರಾಅತ ಆಗಿ, ಶವ್ವಾಲ್ ಒಂದರಂದು ರಂಝಾನ್, ಅಥವಾ ಈದುಲ್ ಫಿತ್ರ್ ಹಬ್ಬವನ್ನು ಬಹಳ ವಿಜೃಂಭನೆಯಿಂದ ಆಚರಿಸುತ್ತಾರೆ. ಮತ್ತು ದುಲ್‌ಹಜ್ಜ್ 10ರಂದು ಈದುಲ್ ಅಝ್ಹಾ ಅಥವಾ ಬೆಲೊ ಪೆರ್ನಾಲ್ ಹಬ್ಬವನ್ನು ಆಚರಿಸುತ್ತಾರೆ.

### 1. ಮೊಹರ್ರಂ

ಮೊಹರ್ರಂ ತಿಂಗಳು ಹಿಜರಿ ತಿಂಗಳುಗಳಲ್ಲಿ ಮೊದಲನೇ ತಿಂಗಳಾಗಿದೆ. ಹಿಜರಿ ವರ್ಷದ ಆರಂಭ ಮೊಹರ್ರಂ ಒಂದರಿಂದ ಆರಂಭಗೊಳ್ಳುತ್ತದೆ. ಈ ತಿಂಗಳಲ್ಲಿ ಮೊಹರ್ರಂನ್ನು ಮುಖ್ಯವಾಗಿ ಬಿಜಾಪುರದಲ್ಲಿ ಆಚರಿಸಲಾಗುವುದು. ಶಾಹಿ ಸುಲ್ತಾನರ ಮೂಲಕ ಮೊಹರ್ರಂ ದಿನದ ಆಚರಣೆಯು ಪ್ರಸಿದ್ಧಿಗೆ ಬಂತು. ಹಲವಾರು ಪ್ರಾಂತೀಯ ಬದಲಾವಣೆಗಳಿದ್ದರೂ ಇದು ಬಿಜಾಪುರದ ಕೊಡುಗೆಯಾಗಿದೆ. 19ನೇ ಶತಮಾನದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಂದಿ ಶಿಯಾಗಳು ದಕ್ಷಿಣ ಕನ್ನಡದಲ್ಲಿದ್ದು ಆ ಸಂದರ್ಭದಲ್ಲಿ ಮೊಹರ್ರಂ ಆಚರಣೆಯು ಇಲ್ಲಿ ಜನಜನಿತಗೊಂಡವು.

ದಖ್ಖನ್ನಿನವರಾದ ಹನಫಿಗಳು ಮೊಹರ್ರಂನ್ನು ಪ್ರಸಿದ್ದಿಗೊಳಿಸಿದರು. ಮೊಹರ್ರಂ ಆಚರಿಸುವ ಪ್ರದೇಶವನ್ನು ಕರ್ಬಲಾ ಮೈದಾನ ಎಂದು ಕರೆಯಲಾಗುತ್ತದೆ. ಇಂದಿಗೂ ಈ ಹೆಸರಿನ ಸ್ಥಳಗಳಿರುವುದು ಕಂಡುಬರುತ್ತದೆ. ಮಂಗಳೂರಿನ ಕುದ್ರೋಳಿಯ ನಡುಪಳ್ಳಿ ಬಳಿ ಇರುವ ಬೀಬಿ ಅಲಾಬಿ ಅಶೂರ ಖಾನವು ಇಂದಿಗೂ ಇದೆ. ನಿರ್ನಾಮ ಸ್ಥಿತಿಯಲ್ಲಿರುವ ಈ ಕಟ್ಟಡವು ಈ ಆಚರಣೆಯ

ಸ್ಮಾರಕವಾಗಿದೆ. ಮಂಗಳೂರಿನಲ್ಲಿ ಕರ್ಬಲಾ ರಸ್ತೆ, ಬೀಬಿ ಅಲಾಬಿ ರಸ್ತೆಗಳಿದ್ದು ಇವು ಮೊಹರ್ರಂ ಆಚರಣೆಯ ದ್ಯೋತಕವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸುನ್ನಿಗಳಲ್ಲಿ ಮೊಹರ್ರಂ ಒಂಬತ್ತು ಮತ್ತು ಹತ್ತನೇ ದಿನದ ಉಪವಾಸವನ್ನು ಹೊರತುಪಡಿಸಿ ಪ್ರತ್ಯೇಕ ಆಚರಣೆ ಯಾವುದೂ ಕಂಡುಬರುವುದಿಲ್ಲ.

**2. ಈದ್ ಮೀಲಾದ್**

ಈದ್ ಮೀಲಾದ್ ಮುಸ್ಲಿಮರು ಆಚರಿಸಿಕೊಂಡು ಬರುತ್ತಿರುವ ಹಬ್ಬವಾಗಿದೆ. ಪ್ರವಾದಿಯವರ ಜನ್ಮದಿನವನ್ನು ಈದ್ ಮೀಲಾದ್ ದಿನವಾಗಿ ಆಚರಿಸಲಾಗುತ್ತದೆ. ಪ್ರವಾದಿಯವರ ಜನನವು ರಬಿಉಲ್ ಅವ್ವಲ್ 12ರಂದು ಆಗಿದೆ. ಈ ದಿನವನ್ನು ಮಾತ್ರವಲ್ಲದೆ ಇಡೀ ರಬೀಉಲ್ ಅವ್ವಲ್ ತಿಂಗಳನ್ನು ಪ್ರವಾದಿಯವರ ತಿಂಗಳಾಗಿ ಆಚರಿಸಲಾಗುತ್ತದೆ.

ಮುಸ್ಲಿಮರು ಈ ತಿಂಗಳಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಕೆಲವೊಂದು ಸಂಸ್ಥೆಗಳಲ್ಲಿ ಮೌಲೂದ್ ಪಠಣ ಮಾಡುತ್ತಾರೆ. ಊಟಬಡಿಸುತ್ತಾರೆ, ಸೀರಣಿ ವಿತರಿಸುತ್ತಾರೆ. ಮುಖ್ಯವಾಗಿ ರಬೀಉಲ್ ಅವ್ವಲ್ 12ರಂದು ಎಲ್ಲಾ ಮಸೀದಿಗಳಲ್ಲಿ ಮೌಲೂದ್ ಪಠಣ ನಂತರ ಊಟ, ಸಿಹಿ ಹಂಚಿ, ಅದ್ದೂರಿಯಾಗಿ ಆಚರಿಸುತ್ತಾರೆ.

ಪ್ರತ್ಯೇಕವಾಗಿ ಧಾರ್ಮಿಕ ಪಾಠಶಾಲೆ(ಮದರಸ)ಗಳಲ್ಲಿ ಮಕ್ಕಳಿಗಾಗಿ ನೆಬಿ ಮದ್‌ಹ್, ಗಾನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ.

ಈ ಹಬ್ಬವು ಮುಖ್ಯವಾಗಿ ಮಲಬಾರಿನ ಮಾಪಿಳ್ಳೆಗಳು ಮತ್ತು ತುಳುನಾಡ ಬ್ಯಾರಿಗಳಲ್ಲಿ ಕಂಡುವರುವಂತಹದ್ದು. ಇವರು ಇದನ್ನು ಅತ್ಯಂತ ಉತ್ಸಾಹದಿಂದ ಪ್ರವಾದಿಯರನ್ನು ಕೊಂಡಾಡುತ್ತಾ ಸ್ತುತಿ ಗಾನಗಳಿರುವ ಮೌಲೂದ್ ಪಾರಾಯಣ ಮಾಡುತ್ತಾ, ಹಾಡು ಹಾಡುತ್ತಾ ಮೆರವಣಿಗೆ ನಡೆಸುತ್ತಾ, ಧಫ್ ಮುಂತಾದವುಗಳನ್ನು ಒಳಗೊಂಡು ಆಚರಿಸುತ್ತಾರೆ.

ಈ ಮೌಲೂದ್ ಅನ್ನು ಮಂಕೂಸ್ ಮೌಲೂದ್ ಎಂದು ಕರೆಯುತ್ತಾರೆ. ಇದು ಬ್ಯಾರಿ ಮತ್ತು ಮಾಪಿಳ್ಳೆ ಜನಾಂಗದಲ್ಲಿ ಬಹಳ ಪ್ರಸಿದ್ಧವಾಗಿದೆ. ಮೂಲತಃ ಇದರ ಲೇಖಕರು ಪೊನ್ನಾನಿಯ ಝೈನುದ್ದೀನ್ – ಬಿನ್ –ಅಲಿ ಎಂಬವರಾಗಿದ್ದು, ಇದನ್ನು ಕ್ರಿ.ಶ 1521 (ಹಿಜರಿ 723)ರಲ್ಲಿ ರಚಿಸಲಾಗಿದೆ. ಮಾಪಿಳ್ಳೆಯರಲ್ಲಿ ಜನಜನಿತವಾಗಿದ್ದ ಇದು ಕಾಲಕ್ರಮೇಣ ಜಿಲ್ಲೆಯ ಮುಸಲ್ಮಾನರಲ್ಲೂ ಪಸರಿಸಿತು.

ಇದು ಪ್ರಮುಖವಾಗಿ ಹಬ್ಬದ ಸಂದರ್ಭದಲ್ಲಿ ಪಠಿಸುವುದಾಗಿದ್ದು ಇದರಲ್ಲಿ ಪ್ರವಾದಿಯವರ ಗುಣಗಾನ ಮಾಡುತ್ತಾ ಅವರನ್ನು ಕೊಂಡಾಡಲಾಗಿದೆ.

ಮಂಕೂಸ್ ಮೌಲೂದ್ ಅನ್ನು ಕೇವಲ ರಬೀಉಲ್ ಅವ್ವಲ್ ತಿಂಗಳಲ್ಲಿ ಮಾತ್ರ ಪಠಿಸುವುದಲ್ಲದೆ ಇನ್ನಿತರ ಶುಭ ಸಂದರ್ಭಗಳಲ್ಲಿ ಪಠಿಸಲಾಗುತ್ತದೆ. ಹೊಸ ಅಂಗಡಿಯನ್ನು ಉದ್ಘಾಟಿಸುವ ಸಂದರ್ಭದಲ್ಲಿ ಸೀಮಂತದ ಸಂದರ್ಭದಲ್ಲಿ ಮರಣದ ನಂತರ ಮೂರನೇ ದಿನ ಏಳನೇ ದಿನ, 40ನೇ ದಿನದ ಸಂದರ್ಭದಲ್ಲಿ ಹಜ್ ನಂತಹ ಯಾತ್ರೆಯ ಮೊದಲು ಮೌಲೂದ್ ಪಠಿಸುತ್ತಾರೆ. ಈ ಮೌಲೂದ್‌ನ ಪಠಣವು ತುಂಬಾ ಪ್ರಸಿದ್ಧವಾಗಿದೆ.

**3. ರಾತೀಬ್**

ಬಗ್ದಾದ್‌ನ ಸಂತರಾದ ಶೇಖ್ ಮುಹಿಯದ್ದೀನ್ ಅಬ್ದುಲ್ ಖಾದಿರ್ ಜೀಲಾನಿ (ಖ.ಅ.)ರವರ ಸ್ಮರಣೆಯನ್ನು ಅವರ ಮರಣ ಹೊಂದಿದ ದಿವಸವು ಆದ ರಬಿಉಲ್ ಆಖಿರ್ ಹನ್ನೊಂದನೇ ದಿನದಂದು ಮುಸ್ಲಿಮರು ರಾತೀಬ್ ಆಚರಿಸುತ್ತಾರೆ. ಇವರು ಮುಸ್ಲಿಂ ಸಮುದಾಯದಲ್ಲಿ ಹೆಚ್ಚು ಗೌರವಕ್ಕೆ ಪಾತ್ರರಾದ ಸಂತರಾಗಿದ್ದಾರೆ.

ಕೋಝಿಕ್ಕೋಡಿನ ಖಾಝಿ ಮುಹಮ್ಮದ್ ಎಂಬವರು ಇವರನ್ನು ಕೊಂಡಾಡುವ 'ಮುಹಿಯದ್ದೀನ್ ಮಾಲ' ಎಂಬ ಕಾವ್ಯವನ್ನು ರಚಿಸಿದ್ದು ಇದು ಬಹಳ ಪ್ರಸಿದ್ದಿಯನ್ನು ಪಡೆದಿದೆ. ಅಲ್ಲದೆ ವಿದ್ವಾಂಸರು ದೇವನ ಮಹಿಮೆಯನ್ನು ಕೊಂಡಾಡುವ ಗೀತೆಗಳನ್ನು ರಚಿಸಿದ್ದು ಅವುಗಳನ್ನು ರಾತೀಬ್ ಮತ್ತು ಝಿಕ್ರ್ ಎಂದು ಕರೆಯುತ್ತಾರೆ. ರಾತೀಬ್‌ನಲ್ಲಿ ಅತ್ಯಂತ ಪ್ರಸಿದ್ದವಾದ ರಾತೀಬ್ ಮುಹಿಯದ್ದೀನ್ ಮತ್ತು ಕುತುಬಿಯ್ಯತ್ ಆಗಿದೆ. ಕುತುಬಿಯ್ಯತ್ರನ್ನು ದಫ್ ನೊಂದಿಗೆ ಹಾಡಲಾಗುತ್ತದೆ. ಇದನ್ನು 'ದಫ್ ರಾತೀಬ್' ಎಂದು ಕರೆಯುತ್ತಾರೆ. ಇದನ್ನು ರಬೀಉಲ್ ಆಖಿರ್ ತಿಂಗಳಲ್ಲಿ ಆಚರಿಸುತ್ತಾರೆ. ಝಿಕ್ರ್ ಕೂಡಾ ಇಂತಹದೆ ಒಂದು ರಚನೆಯಾಗಿದೆ. ಇದನ್ನು ರಬೀಉಲ್ ಆಖಿರ್ ತಿಂಗಳ ಹನ್ನೊಂದರಂದು ಸೂಫಿ ಸಂತರಾದ ಶೇಖ್ ಮುಹಿಯದ್ದಿನ್ (ಖ.ಸ.)ರವರ ನೆನಪಿನಲ್ಲಿ ಆಚರಿಸಲಾಗುತ್ತದೆ. ಮೌಲೂದ್ ನಂತೆ ಇದನ್ನು ಮಸೀದಿಗಳಲ್ಲಿ ಸಾಮೂಹಿಕವಾಗಿ ಆಚರಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಸ್ಥಳಗಳಲ್ಲಿ ಈ ಆಚರಣೆ ಚಾಲ್ತಿಯಲ್ಲಿದೆ. ರಬೀಉಲ್ ಆಖಿರ್ ತಿಂಗಳು ಪೂರ್ತಿ ಮೌಲೀದ್, ರಾತ್ರ. ಖುತುಲಿಯ್ಯತ್ ಮನೆ – ಮನೆಗಳಲ್ಲಿ ನಡೆಯುವುದುಂಟು. ಮಸೀದಿಯ ಮೌಲ್ವಿಗಳನ್ನು ಕರೆದು ಮನೆಮನೆಗಳಲ್ಲಿ ರಾತ್ರಿ ವೇಳೆ ಖುತಿಬಿಯ್ಯತ್ ನೇರ್ಚೆ ನಡೆಸುತ್ತಾರೆ. ಗೃಹ

ಪ್ರವೇಶದ ಸಂದರ್ಭಗಳಲ್ಲಿಯೂ ಹೆಚ್ಚಾಗಿ ರಾತ್ರಿ ವೇಳೆ ಖುತುಬಿಯ್ಯತ್ ನಡೆಸುವುದು ರೂಢಿ.

**4. ಬರಾಅತ್**

ಬರಾಅತ್, ಮುಸ್ಲಿಂ ಸಮುದಾಯದಲ್ಲಿ ಆಚರಣೆಯಲ್ಲಿರುವ ಇನ್ನೊಂದು ಪ್ರಮುಖ ಆಚರಣೆಯಾಗಿದೆ. ಬರಾಅತ್ ದಿನವಾಗಿ ಶಅಬಾನ್ ತಿಂಗಳ 15ನೇ ದಿನದಂದು ಆಚರಿಸಲಾಗುತ್ತದೆ. ಆ ದಿನದಂದು ಅಲ್ಲಾಹನು ಮನುಷ್ಯನ ಜೀವನೋಪಾಯವಾಗಿರುವ ಆಹಾರವನ್ನು ನಿರ್ಧರಿಸುವಂತಹ ಹಾಗೂ ಮನುಷ್ಯನ ಅದೃಷ್ಟವನ್ನು ನಿರ್ಧರಿಸುವ ದಿನ ಎಂದು ಮುಸ್ಲಿಮರ ಅಚಲ ವಿಶ್ವಾಸ.

ಈ ಕಾರಣದಿಂದ ಅಂದು ಸೂರ್ಯಾಸ್ತದ ನಂತರ ಮುಸ್ಲಿಮರೆಲ್ಲರೂ ಸೂರ: ಯಾಸೀನ್ (ಕುರ್‌ಆನ್‌ನ ಒಂದು ಅಧ್ಯಾಯ) ವನ್ನು ಮೂರು ಬಾರಿ ಮತ್ತು ಕೆಲವರು ನಂತರದಲ್ಲಿ ಸೂರ: ದುಖಾನ್ (ಕುರ್‌ಆನ್‌ನ ಒಂದು ಅಧ್ಯಾಯ) ಪಾರಾಯಣ ಮಾಡುತ್ತಾರೆ. ಅಲ್ಲಾಹನಲ್ಲಿ ತಮ್ಮ ಜೀವಿತಾವಧಿ ದೀರ್ಘಗೊಳಿಸಲು, ಅದೇ ರೀತಿ ತನಗೂ ತನ್ನ ಕುಟುಂಬಕ್ಕೂ, ಅಗತ್ಯ ಆಹಾರ ಕರುಣಿಸಲು ಮತ್ತು ಒಳ್ಳೆಯ ಮರಣವನ್ನು ಆಗ್ರಹಿಸಿ ಅದರೊಂದಿಗೆ ನಿಮ್ಮಿಂದ ಅಗಲಿದವರಿಗೆ ಖಬರಿನಲ್ಲಿ ಸುಖ ಶಾಂತಿ ಲಭಿಸಲು ಸೂರ: ಯಾಸೀನ್ ಪಠಿಸುತ್ತಾರೆ.

ಈ ಆಚರಣೆಯು ಎಲ್ಲಾ ಮಸೀದಿಗಳಲ್ಲಿಯೂ ಶಅಬಾನ್ 15ರಂದು ಸೂರ್ಯಾಸ್ತದ ನಂತರ ನಡೆಯುತ್ತದೆ. ಮತ್ತು ಮಸೀದಿಯಲ್ಲಿನ ಗುರುಗಳ ಪ್ರಾರ್ಥನೆ ನಡೆಯುತ್ತದೆ. ನಂತರದಲ್ಲಿ ಜಮಾಅತಿನ ಎಲ್ಲಾ ಬಾಂಧವರು ಒಟ್ಟಾಗಿ ನಮ್ಮಿಂದ ಅಗಲಿದವರ ಖಬರಿನ ಬಳಿ ಹೋಗಿ ಸೂರ: ಯಾಸೀನ್ ಪಠಿಸಿ ಅವರಿಗಾಗಿ ದುಅ (ಪ್ರಾರ್ಥನೆ) ನೆರವೇರಿಸುತ್ತಾರೆ. ಶಅಬಾನ್ 15ರ ಹಗಲಿನಲ್ಲಿ ಉಪವಾಸ ಆಚರಿಸುತ್ತಾರೆ. ದಕ್ಷಿಣ ಕನ್ನಡದ ಮುಸ್ಲಿಮರು ಬರಾಅತನ್ನು ಪವಿತ್ರ ದಿನವನ್ನಾಗಿ ಕಂಡು ಅದನ್ನು ವಿಧಿವತ್ತಾಗಿ ಆಚರಿಸುತ್ತಾರೆ. ರಾತ್ರಿಗಳಲ್ಲಿ ಸಿಹಿ ಹಂಚುತ್ತಾರೆ. ಬರಾಅತ ಆಚರಣೆ ಇಂದಿಗೂ ಚಾಲ್ತಿಯಲ್ಲಿದೆ.

**5. ಈದುಲ್ ಫಿತ್ರ್ (ಚೆರಿಯೊ ಪೆರ್ನಾಲ್)**

ಈದ್ ಅಥವಾ ಪೆರ್ನಾಲ್ ಹಬ್ಬವು ಬಹಳ ಸಡಗರ ಸಂಭ್ರಮದಲ್ಲಿ ಮುಸ್ಲಿಮರು ಆಚರಿಸುವ ಹಬ್ಬವಾಗಿದೆ. ರಂಝಾನ್ ತಿಂಗಳ ಕೊನೆಯ ಉಪವಾಸ ಮುಗಿದು ಶವ್ವಾಲ್ ತಿಂಗಳ ಪ್ರಥಮ ದಿನದಂದು ಈದ್ ಹಬ್ಬವನ್ನು ಆಚರಿಸುತ್ತಾರೆ.

ಮುಸ್ಲಿಮರೆಲ್ಲರೂ ಬೆಳಿಗ್ಗೆ ಬೇಗನೆ ಎದ್ದು ಮಿಂದು ಶುಭ್ರ ಬಟ್ಟೆಗಳನ್ನು ಧರಿಸಿ ಮಸೀದಿಗೆ ತೆರಳುವರು. ಮಸೀದಿಯಲ್ಲಿ ಪೆರ್ನಾಲ್ ನಮಾಝ್ ಮತ್ತು ಖುತುಬಾ ನಡೆಯುತ್ತದೆ. ನಾಡಿನ ಎಲ್ಲಾ ಬಾಂಧವರು ಮಸೀದಿಯಲ್ಲಿ ಒಟ್ಟುಗೂಡುವರು.

ನಂತರ ಬಂಧು ಮಿತ್ರರ ಮನೆಗಳಿಗೆ ತೆರಳುವರು ಇದು ಅತ್ಯಂತ ಸಡಗರದಿಂದ ಆಚರಿಸುವ ಹಬ್ಬವಾಗಿದೆ. ಈ ದಿನ ಫಿತ್ರ್ ಝಕಾತ್ (ಕಡ್ಡಾಯ ದಾನ) ನೀಡಲಾಗುತ್ತದೆ. 2.600 ಗ್ರಾಂ ಆಹಾರ ಧಾನ್ಯವನ್ನು ಈದ್ ನಮಾಝ್ ನಿರ್ವಹಿಸುವ ಮೊದಲು ವಿತರಿಸುತ್ತಾರೆ. ಈ ಝಕಾತ್ ಪ್ರತಿಯೋರ್ವ ಅನುಕೂಲಸ್ಥ, ಅರ್ಹ ಮುಸ್ಲಿಮನ ಮೇಲೆ ಕಡ್ಡಾಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಇದನ್ನು ಕಟ್ಟು ನಿಟ್ಟಿನಲ್ಲಿ ಪಾಲಿಸುತ್ತಾರೆ. ಎಲ್ಲಾ ಮುಸ್ಲಿಂ ಭಾಂದವರು ಈ ಹಬ್ಬವನ್ನು ಇತರ ಹಬ್ಬಗಳಿಗಿಂತ ಹೆಚ್ಚಿನ ಮಹತ್ವದೊಂದಿಗೆ, ಸಡಗರದೊಂದಿಗೆ ಆಚರಿಸುತ್ತಾರೆ.

### 6. ಈದುಲ್ ಅಝ್ಹಾ/ಬಕ್ರೀದ್ ಅಥವಾ ಬೆಲಿಯೆ ಪೆರ್ನಾಲ್

ಈದುಲ್ ಅಝ್ಹಾವನ್ನು ಸಾಮಾನ್ಯವಾಗಿ ಬಕ್ರೀದ್ ಅಂದರೆ ದೊಡ್ಡ ಹಬ್ಬ ಎಂದು ಕರೆಯುತ್ತಾರೆ. ಬ್ಯಾರಿಗಳು ಇದನ್ನು ಬೆಲಿಯೆ ಪೆರ್ನಾಲ್ ಎಂದು ಕರೆಯುತ್ತಾರೆ. ಈ ಹಬ್ಬವು ಈದುಲ್ ಫಿತ್ರ್ ನಂತೆಯೇ ಆಚರಿಸಲಾಗುತ್ತದೆ. ಇಲ್ಲಿ ಫಿತ್ರ್‌ನ ರೂಪದಲ್ಲಿ ಧಾನ್ಯಕ್ಕೆ ಬದಲಾಗಿ ಉಳ್ಳವರು ಆಡು, ಕುರಿ, ದನದ ಮಾಂಸವನ್ನು ಬಡ ಬಗ್ಗರಿಗೆ ಸಂಬಂಧಿಕರಿಗೆ ಈದ್ ನಮಾಝಿನ ನಂತರ ಹಂಚುತ್ತಾರೆ.

ಈದ್‌ಗಾಗಳಲ್ಲಿ ಈದುಲ್ ಫಿತ್ರ್‌ನಂತೆ ಈ ಹಬ್ಬದಂದು ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಮುಖ್ಯವಾಗಿ ಈದ್‌ಗಾ ಅಥವಾ ಊರಿನ ಮಸಿದಿಗಳಲ್ಲಿ ಪೆರ್ನಾಳ್ ನಮಾಝ್ ನಿರ್ವಹಿಸುತ್ತಾರೆ. ಈದುಲ್ ಝಹಾ ಎಂದರೆ ಬಲಿದಾನದ ಹಬ್ಬವಾಗಿದ್ದು ಅಲ್ಲಾಹನಿಗಾಗಿ ಬಲಿದಾನಗಳನ್ನು ಅರ್ಪಿಸುವುದು ಈ ಹಬ್ಬದ ಮಹತ್ವವಾಗಿದೆ. ಈದ್ ನಮಾಝಿನ ನಂತರ ಜಾನುವಾರುಗಳನ್ನು ಅಲ್ಲಾಹನ ತೃಪ್ತಿಗಾಗಿ ಬಲಿಕೊಡುವುದು ಮತ್ತು ಅದನ್ನು ಬಡಬಗ್ಗರಿಗೆ ಹಂಚುತ್ತಾರೆ.

ಪ್ರವಾದಿ ಇಬ್ರಾಹಿಂ (ಅ.ಸ.) ರವರು ತನ್ನ ಮಗನಾದ ಇಸ್ಮಾಯಿಲ್ (ಅ.ಸ.) ರವರನ್ನು ಬಲಿ ಕೊಡಲು ತಯಾರಾದಾಗ ಅದರ ಬದಲು ಆಡೊಂದು ದೇವದೂತ ಜಿಬ್ರೀಲ್ (ಅ.ಸ.) ರವರ ಮೂಲಕ ಪ್ರತ್ಯಕ್ಷಗೊಂಡಾಗ ಅದನ್ನು ಬಲಿ ನೀಡಲು ಅಲ್ಲಾಹನು ನಿರ್ದೇಶಿಸಿದ ಕಾರ್ಯವಾಗಿದೆ. ಈ ಘಟನೆಯನ್ನು

ನೆನಪಿಸಿಕೊಂಡು ಜಾನುವಾರುಗಳನ್ನು ಬಲಿ ನೀಡಲಾಗುತ್ತದೆ. ಇದನ್ನು ಹಜ್ಜ್ – ಪೆರ್ನಾಲ್ ಎಂದೂ ಕರೆಯಲಾಗುತ್ತದೆ. ಈ ದಿನದಂದು ಹಜ್ ಯಾತ್ರಿಗಳು ಮಕ್ಕಾ ನಗರದಲ್ಲಿ ವಿಶೇಷವಾಗಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಹಾಗೆಯೇ ಪ್ರತಿಯೊಂದು ಮಸೀದಿಯಲ್ಲಿ ನಡೆಯುವ ಪ್ರಾರ್ಥನೆಯನ್ನು ಸಣ್ಣ ಹಜ್ ಅಥವಾ ಬಡವರ ಹಜ್ ಎಂದು ಕರೆಯಲಾಗುತ್ತದೆ. ಹಜ್ಜ್ ಪೆರ್ನಾಲ್ ಮುಸ್ಲಿಮರು ಸಂಭ್ರಮದಿಂದ ಆಚರಿಸುವ ಇನ್ನೊಂದು ಹಬ್ಬವಾಗಿದೆ.

**ಆ. ಮದುವೆ**

ಹಿಂದೆ ಮದುವೆ, ಭಾರಿ ಸಡಗರ ಸಂಭ್ರಮದಲ್ಲಿ ನಡೆಯುತ್ತಿತ್ತು. ಮದುವೆಗೆ ಇಂದಿನ ಹಾಗೆ ಕೆಲವು ದಿನಗಳ ಹಿಂದೆ ದಿನ ನಿಶ್ಚಯಿಸುವುದು ಅಲ್ಲ. ಹಿಂದೆ ಜಮಾಅತಿನ ಮೋಕ್ತೆಸರರ ಬಳಿ ಹೋಗಿ ದಿನ ನಿಶ್ಚಯ ಮಾಡುತ್ತಿದ್ದರು. ಮೋಕ್ತೆಸರರ ಬಳಿ ಹೋಗುವಾಗ ಕಾಣಿಕೆಯಾಗಿ ವೀಳ್ಯದೆಲೆ, ಅಡಿಕೆ ಸಮರ್ಪಿಸಿ ಭಾರಿ ವಿನಯದಿಂದ ದಿನ ನಿಶ್ಚಯಿಸಲು ಕೇಳಿಕೊಳ್ಳುತ್ತಿದ್ದರು. ಅವರು ಹೇಳಿದ ದಿನ ನಿಶ್ಚಯಿಸುತ್ತಿದ್ದರು.

ಮದುವೆ ಅಂದರೆ ಇಂದಿನ ಹಾಗೆ ಒಂದು ಘಂಟೆ ಅಥವಾ ಒಂದು ದಿನದಲ್ಲಿ ಮುಗಿಯುವ ವಿಷಯವಲ್ಲ. ಸುಮಾರು ದಿನಗಳ ವರೆಗೆ ನಡೆಯುತ್ತಿತ್ತು. 15ರ ತಾಲದ ವರೆಗೆ ಮದುಮಗ ಎಣ್ಣೆ ಸ್ನಾನ ಮಾಡುವುದು. ಮದುಮಗನ ತಂದೆಗೆ ಗಮ್ಮತ್ತು. ಬಾವನಿಗೆ ಗಮ್ಮತ್ತು, ಸಹೋದರನಿಗೆ ಗಮ್ಮತ್ತು ಹೀಗೆ ಹಲವಾರು ಚಮ್ಮನ (ಬಿರುಂದ್) ನಡೆಯುತ್ತಿತ್ತು. ಒಂದು ದಿನ ನೈಗಂಜಿ, ಒಂದು ದಿನ ಅಪ್ಪರಿ (ಅಪ್ಪ+ಕರಿ)ಯ ತಾಲ, ಮತ್ತೊಂದು ದಿನ ಮದುಮಗಳಿಗೆ ಬಳೆ ಇಡುವುದು ಹೀಗೆ 15 ದಿವಸವು ಮದುವೆಯೇ.

ಒಂದು ಊರಿನಲ್ಲಿ ಒಬ್ಬ ಗಂಡು ಇದ್ದಾನೆ ಎಂದು ತಿಳಿದರೆ, ಹಿರಿಯರು ಒಟ್ಟು ಸೇರಿ ವಿವಾಹ ಸಂಬಂಧ ಕುದುರಿಸಲು ಗಂಡಿನ ಮನೆಗೆ ಹೋಗುವುದು ರೂಢಿ. ಹಾಗೆ ಹೋದ ಸಂದರ್ಭದಲ್ಲಿ ಎರಡು ಕಡೆಯವರು ಒಟ್ಟು ಸೇರಿ, ಚರ್ಚೆಗೆ ಪೀಠಿಕೆ ಹಾಕುತ್ತಾರೆ. ಮೊದಲಿಗೆ ಕುಡಿಯಲು ಪಾನೀಯ ನೀಡಿ ಚರ್ಚಿಸಿ, ನಿಶ್ಚಯವಾದರೆ, ಕಾಸಿ, ಬೆಳ್ಳಿ –ಬಂಗಾರ ವಸ್ತುವಿನ ವಿಷಯ ಬರುತ್ತದೆ. ಇದು ತುಂಬ ಹೊತ್ತು ಚರ್ಚೆಯಾಗುತ್ತದೆ. ಈ ಚರ್ಚೆಗೆ ಕುಳಿತುಕೊಳ್ಳುವಾಗ ವೀಳ್ಯದ ಬಟ್ಟಲು, ತುಪ್ಪಡ, (ಪೀಕದಾನಿ) ಹತ್ತಿರ ಇಡುತ್ತಾರೆ. ವೀಳ್ಯದೆಲೆ ಅಗಿದು ಅಗಿದು ಪೀಕದಾನಿ ತುಂಬುವುದು ಉಂಟು.

ಚರ್ಚೆಯ ಸಂದರ್ಭದಲ್ಲಿ ಮನೆಯ ಒಳಗೆ ಮದುವೆ ಗಂಡು ಇದ್ದರೂ, ಅವನ ಹತ್ತಿರ ಒಂದು ಮಾತು ಕೂಡ ತಂದೆ ತಾಯಿ ಕೇಳುವುದಿಲ್ಲ. "ತೋಕೂರು ಅಬ್ಬಣಾಕರ ಮಗಳನ್ನು ನಿನಗೆ ನಿಶ್ಚಯಿಸಿದ್ದೇವೆ" ಎಂದರೆ ಮಗ ಎದುರು ಮಾತಾಡುವುದಿಲ್ಲ. ಈಗಿನ ಹಾಗೆ ಹೆಣ್ಣು ನೋಡುವ ವಿಷಯವೇ ಇಲ್ಲ. ಪ್ರೇಮ ವಿವಾಹ ಇಲ್ಲವೇ ಇಲ್ಲ. ಹೆಣ್ಣು ಎಷ್ಟು ಕಲಿತಿದ್ದಾಳೆ ಎಂದು ಕೇಳಿದರೆ, 'ಹತ್ತುಜುಝು' ಓದಿದ್ದಾಳೆ ಎಂದರೆ ಅದು ಸಾಕು ಎಂದು ಹೇಳುತ್ತಿದ್ದರು. ಮಾತು ಮುಗಿಸಿ ಹೊರಡುವಾಗ ಕುರಿ (ನಿಶ್ಚಯ)ಗೆ ಕರೆಯುತ್ತಾರೆ.

**ನಾಲ್ಕುರಿ (ದಿನ ನಿಶ್ಚಯ)**

ನಿಶ್ಚಯಕ್ಕೆ ಹೋಗುವಾಗ ತೀರ್ಮಾನಿಸಿದ ಹಣದ ಅರ್ಧ ಹಣ ಮುಂಗಡ ವಾಗಿ ಕಟ್ಟಬೇಕಿತ್ತು. ಕುರಿಗೆ ಹೋಗುವಾಗ ಹೆಣ್ಣಿನ ಕಡೆಯವರು ಈ ಹಣ ಹಿಡಿದುಕೊಂಡು ಹೋಗಬೇಕು. ಹೋದವರಿಗೆ ಗೌರವದಲ್ಲಿ ವೀಳ್ಯದ ಬಟ್ಟಲು ಇಟ್ಟು, ಮದುವೆ ಯಾವಾಗ ಎಂದು ಚರ್ಚೆಯನ್ನು ಶುರುಮಾಡುತ್ತಾರೆ. ಕಾಸಿನ ಅರ್ಧ ಹಣ ಕಟ್ಟಲು ಒಂದು ಬಟ್ಟಲಲ್ಲಿ ಉರ್ಮಾಲ್ ಪಟ್ಟ್ ಹೆಣ್ಣಿನ ಕಡೆಯವರು ಗಂಡಿನ ಕಡೆಯವರೆದುರಿಗೆ ಇಡುತ್ತಿದ್ದರು. ಅದರಲ್ಲಿ ಎಷ್ಟು ಹಣ ಉಂಟು ಎಂದು ಎಲ್ಲರಿಗೂ ತಿಳಿಸಿ, ತೋರಿಸಿ ಒಳಗೆ ತೆಗೆದುಕೊಂಡು ಹೋಗಬೇಕು, ನಂತರ ಅವಲಕ್ಕಿ–ಬಾಳೆಹಣ್ಣಿನ ಚಮ್ಮನ (ಗಮ್ಮತ್ತು) ನಡೆಯುತ್ತಿತ್ತು. ತುಂಬಾ ದೂರದಿಂದ ಬಂದವರಾದರೆ, ಕೋಳಿ–ಊಟ (ಕೋಳಿ –ಚೋರು) ಗಮ್ಮತ್ತು ನಡೆಯುವುದು ಇತ್ತು.

**ಮದುವೆ – ಆಮಂತ್ರಣ**

ಮದುವೆಗೆ ಕರೆಯಲು ಹಿಂದೆ ಮದುವೆ ಗಂಡು ಹೋಗಬೇಕು. ಹೆಣ್ಣಿನ ಪರವಾಗಿ ತಂದೆ ಅಥವಾ ಅಣ್ಣ ಹೋಗಬೇಕು. ಈಗಿನ ಹಾಗೆ ಮದುವೆ ಕಾಗದ ಕಳುಹಿಸಿ ಕರೆಯುವ ರೂಢಿಯೇ ಇರಲಿಲ್ಲ. ಮದುಮಗ ನೇರವಾಗಿ ಕರೆಯದಿದ್ದರೆ ಅಪಸ್ವರ ಎತ್ತುತ್ತಿದ್ದರು, ಗಂಡು ಕರೆಯುವುದೇ ಮರ್ಯಾದಿ.

**ತಿರುಂಬು**

ಮದುವೆ ಹೆಣ್ಣಿಗೆ ತಿರುಂಬು ಇಡುವುದು ಬಾರೀ ಸಡಗರದಲ್ಲಿ ನಡೆಯುತ್ತಿತ್ತು. 7 ದಿನ, 5 ದಿನ ಕಡಿಮೆ ಎಂದರೆ 3 ದಿನ ಇರುತ್ತಿತ್ತು. ಅರಶಿನ ಕಡೆದು

ಹಾಲಿನಲ್ಲಿ ಹಾಕಿ ಮದುಮಗಳಿಗೆ ಲೇಪಿಸಿ ಕತ್ತಲೆ ಕೋಣೆಯಲ್ಲಿ ಕುಳ್ಳಿರಿಸಬೇಕಿತ್ತು. ಇದಕ್ಕೆ ಸಂಬಂಧಿಕರನ್ನು ಕರೆದು ಗಮ್ಮತ್ತು ಮಾಡಬೇಕಿತ್ತು. ತಿರುಂಬು (ಮಚುಂಚಿ) ಲೇಪಿಸುವುದು ಮರ್ಯಾದೆಯಾಗಿತ್ತು.

**ಮೋತುಬಲೆ**

ನಿಕಾಹ್‌ಗೆ ಬರುವ ಮೊದಲು ಮದುಮಗನ ಮನೆಯಲ್ಲಿ ಮೋತು ಬಲೆ ನಡೆಯುತ್ತಿತ್ತು. ಈ ಮೋತುಬಲೆಗೆ ಮದುವೆಗೆ ಬಂದ ಎಲ್ಲರು ಸೇರುತ್ತಾರೆ. ಭಂಡಾರಿ ಬಂದು ಈ ಕಾರ್ಯ ಆರಂಭಿಸುತ್ತಾನೆ. ಕುರ್ಚಿಗೆ ಒಂದು ಬಿಳಿ ಬಟ್ಟೆ ಹಾಯಿಸಿ ಮದುವೆ ದೊಂಪದ ಮಧ್ಯೆ ಇಡುತ್ತಿದ್ದರು. ಅದರಲ್ಲಿ ಮದುಮಗ ಕುಳಿತುಕೊಳ್ಳುತ್ತಾನೆ. ಇಬ್ಬರು ಯುವಕರು 'ಮೇಲ್ತಿರಿ' ಹಿಡಿದು ಅದನ್ನು ಮದುಮಗನ ಬಲ ಎಡ ಬದಿಗಳಲ್ಲಿ ನಿಲ್ಲುತ್ತಿದ್ದರು. ಆ ಬೆಳಕಿನಲ್ಲಿ ಭಂಡಾರಿ ಮೆಲ್ಲನೆ ಮದುಮಗನ ದಾಡಿ ಕತ್ತರಿಸುತಿದ್ದ, ಆ ಸಂದರ್ಭದಲ್ಲಿ ಪದ್ಯದ ಕಾರ್ಯಕ್ರಮ ದೊಂಪದೊಳಗೆ ನಡೆಯುತ್ತದೆ. ಕೆಲ ಸ್ಥಳಗಳಲ್ಲಿ ಹಾಡು ಗೊತ್ತಿರುವ ಹಿರಿಯರ ನಡುವೆ ಸ್ಪರ್ಧೆ ನಡೆಯುತ್ತಿತ್ತು. ಈ ಚಪ್ಪಾಳೆ ಹಾಡು (ಕೈಕೊಟ್ಟು ಪಾಟ್) ಹಲವು ದಾಟಿಯಲ್ಲಿ ಹಲವು ನಮೂನೆಗಳಲ್ಲಿ ನಡೆಯುತ್ತಿತ್ತು. ಮದುವೆಗೆ ಸೇರಿದವರಿಗೆ ಒಳ್ಳೆಯ ಖುಷಿ ನೀಡುತ್ತಿತ್ತು.

ಮೋತುಬಲೆ ಮುಗಿದ ನಂತರ ಭಂಡಾರಿಗೆ ಕೈ ತುಂಬ ಕಾಣಿಕೆ, ಮೋತು ಬಲೆಗೆ ಉಪಯೋಗ ಮಾಡಿದ ಬಟ್ಟೆ ನೀಡಿ ಕಳುಹಿಸುತ್ತಿದ್ದರು. ಸೇರಿದವರಿಗೆಲ್ಲರಿಗೂ ಶರಬತ್ ನೀಡುತ್ತಿದ್ದರು. ಈ ಆಚರಣೆಯು ಮದುಮಗಳ ಮನೆಯಲ್ಲೂ ನಡೆಯುತ್ತಿತ್ತು. ಎರಡು ಮಹಿಳೆಯರು ಮೇಲ್ತಿರಿ ಹಿಡಿದು ಎರಡು ಬದಿಗಳಲ್ಲಿ ನಿಲ್ಲುತ್ತಿದ್ದರು. ಮದುಮಗಳ ಮಾವ (ತಾಯಿಯ ಸಹೋದರ) ಕತ್ತರಿಯಲ್ಲಿ ಹಣೆಯ 2 ಕೂದಲು ಕತ್ತರಿಸಿ ಶುರುಮಾಡುತ್ತಿದ್ದರು. ಇದು ಮಾವನ ಮರ್ಯಾದಿ ಯಾಗಿತ್ತು. ನಂತರ ಮಹಿಳೆಯರು ಮೋತುಬಲೆ ತೆಗೆಯಲು ಶುರುಮಾಡುತ್ತಿದ್ದರು. ಆಗ ಅಲ್ಲಿ ಸೇರಿದ ಮಹಿಳೆಯರು ಕೆಲವು ತರಹದ ಹಾಡು ಕೈಚಪ್ಪಾಳೆಯೊಂದಿಗೆ ಹಾಡುತ್ತಿದ್ದರು.

**ಕಾಯಿನ್ನೊ ಕುಲಿ – (ನಿಕಾಹ್‌ಗೆ ಸ್ನಾನ)**

ಮೋತುಬಲೆಯ ಕಾರ್ಯಕ್ರಮ ಮುಗಿದ ನಂತರ ಮದುಮಗ ನಿಕಾಹ್‌ನ ಸ್ನಾನಕ್ಕೆ ಹೊರಡುತ್ತಾನೆ. ಬಾವ ಮದುಮಗನ ತಲೆಗೆ ಹಾಲು ಅಥವಾ ಒಂದು

ಬಿಂದಿಗೆ ನೀರು ಆದರೂ ಸುರಿಸಿ ಶುರುಮಾಡಬೇಕು. ಇದು ಬಾವನ ಮರ್ಯಾದಿ. ಸ್ನಾನದ ನಂತರ ಬಿಳಿ ವಸ್ತ್ರಧರಿಸಿ ತಂದೆ ತಾಯಿಯ ಆಶೀರ್ವಾದದೊಂದಿಗೆ ನಿಕಾಹ್‌ಗ್ ಕರೆದುಕೊಂಡು ದೊಂಪದೊಳಗೆ ಬರುತ್ತಾರೆ.

**ಮೈಲಾಂಜಿ (ಮದರಂಗಿ)**

ಮೈಲಾಂಜಿ (ಮದರಂಗಿ) ಇಡುವ ಕಾರ್ಯಕ್ರಮ ಹೆಣ್ಣಿ ಮನೆಯಲ್ಲೂ, ಗಂಡಿನ ಮನೆಯಲ್ಲೂ ಬಾರಿ ಸಡಗರದಲ್ಲಿ ನಡೆಯುತ್ತಿತ್ತು. ಆದಿನ ಮದುಮಗಳನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಮಹಿಳೆಯರು ಸುತ್ತು ನಿಂತು ಕೈ ಚಪ್ಪಾಳೆಯೊಂದಿಗೆ ಹಾಡುತ್ತಿದ್ದರು. ಮೈಲಾಂಜಿಯ ಗಿಡ ಎಲ್ಲರ ಮನೆಯಲ್ಲೂ ಇರುತ್ತಿತ್ತು. ಮದರಂಗಿಯ ಸೊಪ್ಪು ಕೀಳಿ ತಂದು ಅರೆದು ಮದರಂಗಿ ತಯಾರಿಸುತ್ತಿದ್ದರು. ಈಗಿನ ಹಾಗೆ ರೆಡಿಮೇಡ್ ಮದರಂಗಿ ಆಗ ಇರಲಿಲ್ಲ.

**ನಿಕಾಹ್ (ಮದುವೆಯ ವಿಧಿವಿಧಾನ)**

ಹೆಣ್ಣಿನ ಕಡೆಯವರು ನಿಕಾಹ್‌ಗೆ ಮದುಮಗನ ಮನೆಗೆ ಹೋಗುವುದು, ಹೋಗುವಾಗ ಬ್ಯಾಂಡ್, ಚೀನ, ಕೋಲು, ಪಟಾಕಿ ಸಿಡಿಸಿ, ಗರ್ನಲ್ ದುರ್ಸು ಬಿಡುತ್ತಾ ಕೊಂಬು ಊದಿಕೊಂಡುತರ ತರಹದ ಪೆಟ್ರೋಮ್ಯಾಕ್ಸ್ ಲೈಟ್‌ನಲ್ಲಿ ಮೆರವಣಿಗೆ ಹೋಗುವುದು. ಮೆರವಣಿಗೆಯಲ್ಲಿ ಹೋಗಿ ತಮಗೆ ಸಿದ್ಧಗೊಳಿಸಿದ ದೊಂಪದಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ಮದುಮಗನಿಗೆಂದೇ ದೊಂಪದ ನಡುವೆ ಒಂದು ಕುರ್ಚಿಗೆ ಬಿಳಿ ಬಟ್ಟೆ ಹಾಯಿಸಿರುತ್ತಿದ್ದರು. ಬಂದ ಎಲ್ಲರಿಗೂ ಅವಲಕ್ಕಿ –ಬಾಳೆಹಣ್ಣು ನೀಡುತ್ತಿದ್ದರು.

ಮದುವೆಗೆ 15 ದಿವಸ ಮೊದಲೇ ಮದುವೆ ಮನೆಯ ಅಂಗಳದಲ್ಲಿ ದೊಂಪ ಹಾಕುತ್ತಿದ್ದರು. ಕಂಗಿನ ಕಂಬ ಹೂತು, ಬಿದಿರು – ಮೊಳೆಯ ಸಲಕೆಗಳನ್ನು ಕಟ್ಟಿ ತೆಂಗಿನ ಮಡಲಿನ ದೊಂಪ ಹಾಕುತ್ತಿದ್ದರು. ಈ ದೊಂಪವನ್ನು ತೆಗೆಯಲು ಹದಿನೈದರ ತಾಲ ಮುಗಿಯಬೇಕಿತ್ತು. ಮದುಮಗಳ ಮನೆಯಲ್ಲೂ ಈ ತರಹದ ದೊಂಪ ಹಾಕುತ್ತಿದ್ದರು. ಎರಡು ಕಡೆಯ ದೊಂಪದೊಳಗೆ ಹಾಕಲು ಉಯ್ಯಾಲೆಯನ್ನು ಹಾಕಿರುತ್ತಿದ್ದರು. ಶಾಮಿಯಾನದ ದೊಂಪ ಆಗ ಇರುತ್ತಿರಲಿಲ್ಲ. ಮಾತ್ರವಲ್ಲ ಹಾಲ್‌ನಲ್ಲಿ ಮದುವೆ ನಡೆಯುವ ಕ್ರಮವೇ ಇಲ್ಲ. ದೊಂಪ ಕಟ್ಟಿ ಆದ ಮೇಲೆ ದೊಂಪದ ಒಳಗಿನ ಅಂಗಳಕ್ಕೆ ಮಣ್ಣು ಹಾಕಿ ಪೊಲಿಮನೆ (ಮಣ್ಣನ್ನು ಸಮತಟ್ಟು ಮಾಡುವ ಸಾಧನ)ಯಲ್ಲಿ ಮಣ್ಣನ್ನು ಸಮತಟ್ಟುಗೊಳಿಸು

ತ್ತಿದ್ದರು. ಧೂಳು ಬರದಂತೆ ಸೆಗಣಿ ಗುಡಿಸುತ್ತಿದ್ದರು. ಆಗ ಸೆಗಣಿ ನಜಸ್ ಎಂದು ಗೊತ್ತಿರಲಿಲ್ಲ. ಆಗ ಈಗಿನ ಹಾಗೆ ಹಗಲು ಹೊತ್ತು ನಿಕಾಹ್ ನಡೆಯುವ ಕ್ರಮವೇ ಇಲ್ಲ, ಎಲ್ಲ ನಿಕಾಹ್ ರಾತ್ರಿಯೇ ನಡೆಯುವುದು.

ಹೆಣ್ಣಿನ ಕಡೆಯವರು ಬಂದ ಮೇಲೆ ನಿಕಾಹ್‌ಗೆ ಬಟ್ಟೆ ಹಾಸುವುದು. ದೊಂಪದೊಳಗಿನ ಮಂಚಕ್ಕೆ ಬಟ್ಟೆ ಹಾಸುವುದು ರೂಢಿ. ಬಟ್ಟೆ ಹಾಸುವಾಗ ಸೇರಿದ ಸಭೆಯಲ್ಲಿ ಅನುಮತಿ ಕೇಳುವುದುಂಟು. "ಸೇರಿದ ಸಭೆಯೊಂದಿಗೆ ನಾನು ನಿಕಾಹ್‌ಗೆ ಬಟ್ಟೆ ಹಾಸಲು ಎಲ್ಲರ ಒಪ್ಪಿಗೆ ಇದೆಯೇ" ಎಂದು ಕೇಳುವುದುಂಟು. ಕೆಲವೊಮ್ಮೆ ತಮಾಷೆಗಾಗಿ ಸೇರಿದವರು ಕೇಳಲಿಲ್ಲ, ಕೇಳಲಿಲ್ಲ ಎಂದು ಹೇಳುವುದುಂಟು. ಹೀಗೆ ಎರಡು ಮೂರು ಸಲ ಕೇಳಿದ ನಂತರ ಸೇರಿದ ಸಭೀಕರು ಒಪ್ಪಿಗೆ ಕೊಡುವರು.

ನಿಕಾಹ್‌ಗೆ ಕುತುಬ ಓದುವ ಮೊದಲು 'ಮಹ್‌ರ್' ಎಷ್ಟು ಎಂದು ನಿಗದಿಪಡಿಸುವುದುಂಟು. ಈ ವಿಷಯದಲ್ಲಿ ಮದುಮಗನ ಕಡೆಯವರಿಗೂ, ಮದುಮಗಳ ಕಡೆಯವರಿಗೂ ತುಂಬಾ ಚರ್ಚೆ ನಡೆಯುವುದುಂಟು. ಹೀಗೆ ಚರ್ಚೆ ನಡೆದು ಮದುವೆ ನಡೆಯದೆ ಹೋದ ಘಟನೆಗಳು ಇದೆ.'ಇಲ್ಲ' ಅನುಸರಿಸಿ 'ಮಹ್‌ರ್' ಬರೆಸುವ ರೂಢಿ ಇತ್ತು. ತುಳುವರಲ್ಲಿಯೂ ಈ ಪದ್ಧತಿ ಇತ್ತು. ಬ್ಯಾರಿಗಳಲ್ಲಿ ಈಗ ಕಾಣಲು ಸಿಗುವುದಿಲ್ಲ.

ಮಹರ್ 'ಆಮಡೆ' (ಬಂಗಾರದ ನಾಣ್ಯ) ಅಥವಾ ಬಿರಿಯಾನ್ (ಬೆಳ್ಳಿ ನಾಣ್ಯ) ಲೆಕ್ಕದಲ್ಲಿ ಬರೆಯುವುದು ರೂಢಿ.

ನಿಖಾಹ್ ಆದ ನಂತರ ಊಟದ ವ್ಯವಸ್ಥೆ ಮಾಡುವರು. ಊಟ ಈಗಿನ ತರಹ ಟೇಬಲ್‌ಗಳಲ್ಲಿ ಅಥವಾ ಬಫೆ ಪದ್ಧತಿ ಆಗಿರಲಿಲ್ಲ. ಮದ್ಯದಲ್ಲಿ ಊಟದ ತಟ್ಟೆ ಮತ್ತು ಪದಾರ್ಥದ ಪಾತ್ರೆ ಇಟ್ಟು ಸುತ್ತಲು ಮಣೆ ಹಾಕಿ ಎಲ್ಲರೂ ಒಂದೇ ತಟ್ಟೆಗೆ ಕೈ ಹಾಕಿ ಉಣ್ಣುವರು. ಮೊದಲು ಕುಚ್ಚಲಕ್ಕಿ ಅನ್ನ ಮತ್ತು ನಂತರ ನೈಚೋರು ನೀಡುವುದು ಪದ್ಧತಿ. ಬಾವ ಬಿಸ್ಮಿ ಹೇಳಿ ಆರಂಭಿಸಬೇಕು. ಬೇರೆಯವರು ಆರಂಭಿಸಿದರೆ ಜಗಳ ನಡೆಯುತ್ತಿತ್ತು.

ಉಣ್ಣುವುದಕ್ಕಿಂತ ಮೊದಲು ಪಧಿ (ಹಣ ಇಡುವುದು) ಪದ್ಧತಿ. ನಿಕಾಹ್ ನಡೆದ ನಂತರ ಮದುಮಗನನ್ನು ದೊಂಪದೊಳಗಿನ ಒಂದು ಕುರ್ಚಿಯಲ್ಲಿ ಕುಳ್ಳಿರಿಸಿ ಎದುರು ಒಂದು ತಟ್ಟೆ ಇಡುತ್ತಾರೆ. ಆ ತಟ್ಟೆಯಲ್ಲಿ ಎಲ್ಲರೂ ಪಧಿ(ಹಣ) ಇಡುವರು. ಪಧಿ ಇಡದ ಮದುವೆಯೇ ಇರಲಿಲ್ಲ. ಮೊದಲಿಗೆ ಊರಿನ ಮೊಕ್ತೇಸರ, ನಂತರ ಬಾವ ಪಧಿ ಇಡುವುದು ಪದ್ಧತಿ. ತುಳುವರಲ್ಲಿಯೂ ಈ ಪದ್ಧತಿ ಇತ್ತು.

ಹಣವನ್ನೆಲ್ಲ ಒಂದು ಪುಸ್ತಕದಲ್ಲಿ ಎಷ್ಟು ನೀಡಿದ್ದಾರೆ ಎಂದು ಬರೆಯುವುದಿತ್ತು. ಹಣ ಇಟ್ಟವರು ಅವರ ಮನೆಯಲ್ಲಿ ಸಮಾರಂಭ ನಡೆಯುವಾಗ ನೆನಪಿನಲ್ಲಿ ಆ ಹಣವನ್ನು ಹಿಂದೆ ತೆಗೆಯಬೇಕು. ಕೆಲವರು ಅದಕ್ಕೆ ಸ್ವಲ್ಪ ಹಣ ಸೇರಿಸಿ ಇಡುವುದು ಉಂಟು.

**ಬೀಟ್ ಕೂಡೊ ಪೊಂಡೆ (ಮದುಮಗ ಬಂಧಿ ಹಾಕಲು ಹೋಗುವುದು)**

ಒಂದೇ ಊರಾಗಿದ್ದರೆ ಅದೇ ದಿನ ಮತ್ತು ದೂರದ ಊರಾಗಿದ್ದರೆ ಮರುದಿನ ಹೆಣ್ಣಿನ ಕಡೆಗೆ ಹೋಗುವುದು. ಇದಕ್ಕೆ ಬೇರೆಯೇ ಆಮಂತ್ರಣ ನೀಡಬೇಕು. ಮದುಮಗ ರಾತ್ರಿ ಬಂಧಿ ಹಾಕಲಿಕ್ಕೆ (ಬೀಟ್ ಕೂಡೊ ಪೊಂಡೆ) ಹೋಗುವುದು, ನೀವು ಬಂದು ಸಹಕರಿಸಿ ಎಂದು ಕರೆಯದಿದ್ದರೆ ಯಾರೂ ಹೋಗಲಾರರು. ಹೆಂಗಸರನ್ನು ಬೇರೆಯೇ ಕರೆಯಬೇಕು. ಬಡವರು ನಡೆದುಕೊಂಡು ಮೆರವಣಿಗೆ ಹೋದರೆ ಶ್ರೀಮಂತರು ಕುದುರೆಯಲ್ಲಿ ಮದುಮಗನನ್ನು ಕುಳ್ಳಿರಿಸಿ ಕರೆದೊಯ್ಯುತ್ತಾರೆ. ಅದೊಂದು ಉತ್ಸವವೇ ಆಗಿತ್ತು. ಆ ಮೆರವಣಿಗೆಯನ್ನು ಊರವರೆಲ್ಲಾ ನಿಂತು ನೋಡುತ್ತಿದ್ದರು. ಆ ರಾತ್ರಿ ಯಾರೂ ನಿದ್ರಿಸುತ್ತಿರಲಿಲ್ಲ. ದೀವಟಿಗೆಯ ಬೆಳಕಿನಲ್ಲಿ ಮೆರವಣಿಗೆ ನಡೆಯುತ್ತಿದ್ದದ್ದು. ನಂತರ ಗ್ಯಾಸ್ ಲೈಟ್ ಬರಲು ಶುರುವಾಯಿತು. ಹಲವು ಬಗೆ ಬಗೆಯ ಲೈಟ್‌ಗಳು ಮಂಗಳೂರಿನಲ್ಲಿ ಬಾಡಿಗೆಗೆ ಲಭಿಸುತ್ತಿದ್ದವು.

ಮದುಮಗ ಬಂಧಿ ಹಾಕಲು ಹೊರಡುವುದಕ್ಕೆ ಮೊದಲು ಮದುಮಗನ ಮನೆಯ ಹೆಂಗಸರು ಮದುಮಗಳನ್ನು ಶೃಂಗರಿಸಲು ಮತ್ತು ಕರೆತರಲು ಮದುಮಗಳ ಮನೆಗೆ ಹೋಗುತ್ತಾರೆ. ಮದುಮಗಳನ್ನು ಶೃಂಗರಿಸಲು ಬಂದ ಹೆಂಗಸರಿಗೆ ಗೌರವ ನೀಡುವುದು ಪದ್ಧತಿ. ನಂತರ ಮದುಮಗಳನ್ನು ಶೃಂಗರಿಸಲು ಶುರು ಮಾಡುತ್ತಾರೆ.

**ಮದುಮಗಳ ಶೃಂಗಾರ**

ಮದುಮಗಳನ್ನು ಶೃಂಗಾರಿಸುವಾಗ ಧರಿಸುವ ಕೆಲವು ಚಿನ್ನ ಎಂದರೆ:– ಬಟ್ಟೆ – 8 ಮೊಳ ಉದ್ದದ ಬೈಂಗನ್ ಪಟ್ಟೆ, ಆರ್ಗಂಡಿ ಕುಪಾಯ, ಕೆಲವೊಂದು ತರಹದ ವಸ್ತ್ರಗಳೆಂದರೆ ಕಲ್ಲಿರೆ, ಪೊಡಿಕಲ, ಬೈಂಗನ್ ಪಟ್ಟೆ, ಗಚ್ಚಿ ಕಿನ್ಕಾಪು, ಈ ಬಟ್ಟೆ 8 ಮೊಳ ಮಾತ್ರ ಉದ್ದ ಇರುವುದು. ಕಾಲಿಗೆ ಮೆದ್ಕಡಿ (ಚಪ್ಪಲಿ). ಕೆಲವೊಂದು ತರದ ಚಿನ್ನಾಭರಣಗಳನ್ನು ತಲೆ, ಕುತ್ತಿಗೆ, ಕಿವಿಗೆ ಧರಿಸಿ ಶೃಂಗರಿಸುತ್ತಿದ್ದರು.

**ಮದುಮಗನ ಬಟ್ಟೆಬರೆ**

ನಾಲ್ಕು ಮೊಳ ಉದ್ದದ ಮದ್ರಾಸ್ ಲುಂಗಿ, ಬಿಳಿ ಬಣ್ಣದ ಅಂಗಿ, ಗೊಂಡೆ ಬಂದ ಟೊಪ್ಪಿ, ಉದ್ದದ ಶಾಲು, ಚರ್ಮದ ಚಪ್ಪಲಿ ಮತ್ತು ಕೊಡೆ. ಕೊಡೆ ಇಲ್ಲದಿದ್ದರೆ ಮದುಮಗ ಎಷ್ಟು ರಾತ್ರಿಯಾದರೂ ಹೊರಡಲಾರ. ಮದುಮಗನಿಗೆ ಕೊಡೆ ಹಿಡಿಯುವ ಮರ್ಯಾದಿ ಬಾವನಿಗೆ. ಮದುಮಗನು ಮದುಮಗಳ ಅಂಗಳಕ್ಕೆ ಬಂದಾಗ ಬಾವ ಬಂದು ಒಳಗೆ ಕರೆದುಕೊಂಡು ಹೋಗಿ ಬಂದಿ ಹಾಕುತ್ತಾರೆ. ಬಂದಿ ಹಾಕಿದ ಮದುಮಗನನ್ನು ದೊಂಪದೊಳಗಿನ ಬಿಳಿ ಬಟ್ಟೆ ಹಾಯಿಸಿದ ಕುರ್ಚಿಯಲ್ಲಿ ಕುಳ್ಳಿರಿಸುತ್ತಾರೆ. ಎದುರಿನಲ್ಲಿರುವ ಮೇಜಿನ ಮೇಲಿರುವ ತಟ್ಟೆಯಲ್ಲಿ ಹಣ ಇಡುತ್ತಾರೆ, ಮೊಟ್ಟೆ, ಕೋಳಿ ಊಟ, ನೈಚೋರು ಗಮ್ಮತ್ತು ಎಲ್ಲರಿಗೂ ಇರುತ್ತಿತ್ತು. ದೊಂಪದೊಳಗಿನ ಉಯ್ಯಾಲೆಯಲ್ಲಿ ಮದುಮಗನನ್ನು ಕುಳ್ಳಿರಿಸಿ ಹಾಡು ಹಾಡುತ್ತಿದ್ದರು.

ಮದುಮಗಳನ್ನು ಶೃಂಗರಿಸಲು ಬಂದ ಹೆಂಗಸರು ಮದುಮಗಳನ್ನು ಕರೆದುಕೊಂಡು ಹೊರಡುತ್ತಾರೆ. ಅವರೊಟ್ಟಿಗೆ ಮದುಮಗಳ ಕಡೆಯ ಹೆಂಗಸರು ಹೊರಡುವರು. ಮದುಮಗನ ಮನೆ ದೂರವಾಗಿದ್ದರೆ, ಎತ್ತಿನ ಗಾಡಿಯಲ್ಲಿ ಮದುಮಗಳನ್ನು ಕುಳ್ಳಿರಿಸಿ ಕರೆದುಕೊಂಡು ಹೋಗುತ್ತಿದ್ದರು.

ಮರುದಿವಸ ಮದುಮಗನನ್ನು ಕರೆದುಕೊಂಡು ಹೋಗಲು ಹೆಣ್ಣಿನ ಕಡೆಯ ಇಬ್ಬರು ಬರಬೇಕು. ಮದುಮಗ ಹೋಗುವಾಗ ಗೌರವವಾಗಿ ಮಲ್ಲಿಗೆ ಹೂ ಜೊತೆಗೆ ವೀಳ್ಯದ ಎಲೆ, ಅಡಿಕೆ, ಸೊಪ್ಪು ತೆಗೆದುಕೊಂಡು ಹೋಗಬೇಕು. ಹೀಗೇ 15ರ ತಾಲದವರೆಗೆ ಮದುಮಗ, ಮದುಮಗಳ ಮನೆಗೆ ಹೋಗುವಾಗ ತೆಗೆದುಕೊಂಡು ಹೋಗುವುದು ರೂಢಿ.

**ತಾಲ**

ಈ ತಾಲ ಒಂದು ಉತ್ಸವದ ರೀತಿಯಲ್ಲಿ ನಡೆಯುತ್ತಿತ್ತು. ತಾಲಕ್ಕೆ ಹೋಗುವಾಗ ಮದುಮಗನೊಂದಿಗೆ ಗೆಳೆಯರೆಲ್ಲ ಸೇರಿ ಪದ್ಯ ಹಾಡುತ್ತಾ ಕೋಲಾಟ ದಪ್ಪುವಿನೊಂದಿಗೆ ಸಡಗರದಲ್ಲಿ ಹೋಗುತ್ತಾರೆ. ಹೋಗುವಾಗ ದೊಡ್ಡ ದೊಡ್ಡ ತಟ್ಟೆಯಲ್ಲಿ ಬೇರೆ, ಬೇರೆ ಬಗೆಯ ತಿನಿಸು, ಸಾಮಾಗ್ರಿ ಇರಿಸಿ ರೇಷ್ಮೆ ಹೊದಿಸಿ, ಸಣ್ಣ ಮಕ್ಕಳಲ್ಲಿ ಹೊರಲು ಹೇಳುತ್ತಿದ್ದರು. ಹೂವು, ಜಿಲೇಬಿ, ಮಾಲ್ಪುರಿ, ಲಡ್ಡು, ವೀಳ್ಯದೆಲೆ, ಅಡಿಕೆ, ಸೊಪ್ಪು, ಪೌಡರ್, ಸ್ನೋ, ಸಾಬೂನು, ಬಾಚಣಿಗೆ, ನಾಡೆ ಹೀಗೇ ಹಲವಾರು ಸಾಮಾಗ್ರಿಗಳು ಇರಿಸುತ್ತಿದ್ದರು. ಹೀಗೆ ಹೋದವರಿಗೆ

ತಾಲ ಇರುತ್ತಿತ್ತು. ಸುತ್ತಲೂ ಮಣೆ ಇರಿಸಿ ಮಧ್ಯದಲ್ಲಿ ಅನ್ನ, ಸಾರು ಇರಿಸಿ ಸುತ್ತಲು ಕೂತು ಉಣ್ಣುವುದಕ್ಕೆ ತಾಲ ಎಂದು ಕರೆಯುತ್ತಿದ್ದರು. ಎಲ್ಲ ಬಂದ ನಂತರ ಮದುಮಗ ಬಿಸ್ಮಿ ಹೇಳಿ ಊಟ ಆರಂಭಿಸುತ್ತಿದ್ದರು. ಅಂದು ರಾತ್ರಿ ಮದುಮಗ ಮದುಮಗಳ ಮನೆಯಲ್ಲಿ ತಂಗುವನು. ಉಳಿದವರು ಹಿಂದಿರುಗುವರು. ಈ ತಾಲ ರಾತ್ರಿ ಮಾತ್ರ ನಡೆಯುತ್ತಿತ್ತು.

**ಅಪ್ಪತ್ತೊ ಮಂಜೆಲ**

ಹಿಂದಿನ ಕಾಲದಲ್ಲಿ ಸೀಮಂತವು ಬಾರಿ ಸಡಗರದಲ್ಲಿ ನಡೆಯುತ್ತಿತ್ತು. ಗರ್ಭಿಣಿಗೆ ಏಳು ತಿಂಗಳು ಆಗುವಾಗ ಮದುಮಗನ ಮನೆಯಲ್ಲಿ ಗಮ್ಮತ್ತು ಮಾಡುವ ದಿನ ನಿಶ್ಚಯಿಸಿ ಹೆಣ್ಣಿನ ಮನೆಗೆ ತಿಳಿಸುತ್ತಾರೆ. ಆ ನಿಗದಿಪಡಿಸಿದ ದಿವಸದಂದು ಹೆಣ್ಣಿನ ಮನೆಯವರು ಹೋಗುವರು. ದೂರದ ಊರು ಆಗಿದ್ದಲ್ಲಿ ಹಿಂದಿನ ದಿನವೇ ಹೊರಡುತ್ತಿದ್ದರು. ಹೋಗುವಾಗ ಹೂ, ಮಿಠಾಯಿ, ಚಿನ್ನಾಭರಣ ಕೊಂಡು ಹೋಗುತ್ತಿದ್ದರು.  ಹೋದವರಿಗೆ ಅವಲಕ್ಕಿ ಬಾಳೆ ಹಣ್ಣಿನ ಸತ್ಕಾರ ನಡೆಯುತ್ತಿತ್ತು. ಅಂದು ರಾತ್ರಿ ಇಡೀ ಹಾಡು, ಕೇಕೆ, ನಗು ಎಲ್ಲ ಮುಗಿದ ಮೇಲೆ ಕೋಳಿ ಊಟದ ಗಮ್ಮತ್ತು ನಡೆದು ಅಲ್ಲೇ ತಂಗುತ್ತಿದ್ದರು.

ಮರುದಿವಸ ಗರ್ಭಿಣಿಯನ್ನು ಶೃಂಗರಿಸಿ, ಹೆಣ್ಣಿನ ಮನೆಯವರು ತಂದ ಚಿನ್ನಾಭರಣ ಮತ್ತು ಮದುಮಗನ ಮನೆಯವರು ಕೊಟ್ಟ ಚಿನ್ನವನ್ನು ಎಲ್ಲರ ಮುಂದೆ ತೋರಿಸುವರು. ಗರ್ಭಿಣಿಯನ್ನು ಶೃಂಗರಿಸುವಾಗ ಎಲ್ಲ ಮಹಿಳೆಯರು ಸುತ್ತುವರಿಸಿ ಹಾಡುವರು. ಹಾಡು ಮುಗಿದ ನಂತರ ಅವಲಕ್ಕಿ ಬಾಳೆ ಹಣ್ಣು, ನೈಚೋರು, ಕರಿಯ ಗಮ್ಮತ್ತು ನಡೆಯುತ್ತಿತ್ತು. ಹಿಂದಿನ ಕಾಲದಲ್ಲಿ ಸೀಮಂತದ ದಿವಸ ಹಲವು ಬಗೆ ಬಗೆಯ ತಿಂಡಿಗಳನ್ನು ತಯಾರಿಸಿ ಗರ್ಭಿಣಿಗೆ ತಿನ್ನಿಸುತ್ತಿದ್ದರು. ಮುಖ್ಯವಾಗಿ ಎಣ್ಣೆ ತಿಂಡಿ, ಸಂಕ್ರೋಲಿ, ಗುಲಿಯಪ್ಪ, ಅದರೊಂದಿಗೆ ಲಡ್ಡು, ಹಲ್ವ, ನೇವರಿ, ಮಾಲ್ಪುರಿ ತಯಾರಿಸಿ ಒಂದು ದೊಡ್ಡ ತಟ್ಟೆಯಲ್ಲಿ ಇಟ್ಟು ಗರ್ಭಿಣಿಗೆ ತಿನ್ನಿಸುತ್ತಿದ್ದರು. ಊಟದ ಪದ್ದತಿಯೂ ಇದೇ ರೀತಿಯಾಗಿತ್ತು. ಸುತ್ತಲು ಕೂತು, ತಟ್ಟೆಯಲ್ಲಿ ಅನ್ನ–ಸಾರು, ಇಟ್ಟು ಊಟ ಮಾಡುತ್ತಿದ್ದರು. ಹೀಗೆ ಊಟ ಮಾಡುವುದು ಗೌರವದ ಸಂಗತಿಯಾಗಿತ್ತು.

ಗರ್ಭಿಣಿಗೆ ಏಳು ತಿಂಗಳು ತುಂಬಿದಾಗ ತಂದೆ–ತಾಯಿ ಮಗಳ ಸುಶ್ರೂಷೆಗೆ ಹೆರಿಗೆ ಮಾಡಿಸುವುದರಲ್ಲಿ ನಿಪುಣರಾದವರನ್ನು ಹುಡುಕಿ ಅವರನ್ನು ಸತ್ಕರಿಸುತ್ತಿದ್ದರು. ಮುಂಗಡ ಹಣ ನೀಡುತ್ತಿದ್ದರು. ಹಲವು ಬಗೆಯ ಮದ್ದುಗಳನ್ನು ತಯಾರು

ಮಾಡಿ ಇಡುತ್ತಿದ್ದರು. ಈಗಿನ ಹಾಗೆ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುವ ಪ್ರಮೇಯವೇ ಇರಲಿಲ್ಲ. ಗರ್ಭಿಯನ್ನು ಪರೀಕ್ಷೆ ನಡೆಸುವುದು, ಹೆರಿಗೆ ನಡೆಸುವುದು ಊರಿನ ಹಿರಿಯ ಮಹಿಳೆಯರಾಗಿದ್ದರು. ಹೆರಿಗೆ ನೋವು ಶುರುವಾಗುವ ಸಂದರ್ಭದಲ್ಲಿ ಅದು ರಾತ್ರಿಯಾದರೂ, ಹಗಲಾದರೂ, ಆ ಹಿರಿಯ ಹೆಂಗಸರನ್ನು ಕರೆತಂದು ಹೆರಿಗೆ ನಡೆಸುತ್ತಿದ್ದರು.

ಹೆರಿಗೆಯಾದೊಡನೆ ಬಾಂಗ್ ಮತ್ತು ಇಖಾಮತ್ ಕೊಟ್ಟು ಹಿರಿಯರು ಮಗುವಿನ ನಾಲಗೆಗೆ ಸಿಹಿ ಮುಟ್ಟಿಸುತ್ತಿದ್ದರು. ನಂತರ ಬಿಸಿ ನೀರಿನಲ್ಲಿ ಸ್ನಾನ ಮಾಡಿಸುತ್ತಿದ್ದರು. ಒಣ ದ್ರಾಕ್ಷೆಯನ್ನು ನೀರಿನಲ್ಲಿ ನೆನೆಸಿಟ್ಟು, ಬಿಳಿ ಬಟ್ಟೆಯಲ್ಲಿ ಕಟ್ಟಿ ಮಗುವಿನ ಬಾಯಿಗೆ ಅದನ್ನು ಇಡುತ್ತಿದ್ದರು. ಅದನ್ನು ಮಗು ಚೀಪುತ್ತಿತ್ತು.

**ಮುಂಜಿ ಕರ್ಮ (ಸುನ್ನತ್ ಮದುವೆ)**

ಮುಂಜಿ ಮಾಡುವ ರೂಢಿಯು ಮುಸ್ಲಿಂ ಸಮುದಾಯದಲ್ಲಿ ನಡೆಸುವ ಒಂದು ಕಡ್ಡಾಯ ಕರ್ಮವಾಗಿದೆ. ಮುಂಜಿ ಮಾಡಿಸುವುದಕ್ಕೆ 'ಸುನ್ನತ್ ಮಂಜಿಲ' ಎಂದು ಆಚರಿಸುತ್ತಾರೆ. ಮುಂಜಿ ಮಾಡಿಸುವ ಸಂದರ್ಭ ಮತ್ತು ಗುಣಮುಖ ಗೊಂಡು ಹಾಸಿಗೆಯಿಂದ ಎದ್ದು ಮಸೀದಿಗೆ ಹೋಗುವ ಸಂದರ್ಭ ಇದನ್ನು ಸಂಭ್ರಮದಲ್ಲಿ ಆಚರಿಸುತ್ತಾರೆ. ಊರಿನ ಎಲ್ಲರನ್ನೂ ಕರೆದು ಮೌಲೂದ್ ಪಠಣ ನಡೆಸಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ಸುನ್ನತ್ ನಡೆಸಿದ ದಿವಸದಿಂದ ಮುಂದಿನ ಏಳು ದಿನಗಳವರೆಗೆ ರಾತ್ರಿ 'ಬದ್ರ್ ಪಾಟ್ಟ್' ಹಾಡಲಾಗುತ್ತಿತ್ತು. ನೆರೆ–ಹೊರೆಯವರು ಮತ್ತು ಸಂಬಂಧಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಪ್ರತಿದಿನ ಉಡುಗೊರೆಗಳನ್ನು ನೀಡುತ್ತಿದ್ದರು. ಹುಡುಗ ಗುಣಮುಖಗೊಂಡ ಬಳಿಕ ದೊಡ್ಡ ಮಂಜಿಲ ನಡೆಸಲಾಗುತ್ತದೆ. ಈ ದೊಡ್ಡ ಕಾರ್ಯಕ್ರಮಕ್ಕೆ ಊರಿನ ಎಲ್ಲರನ್ನು ಆಹ್ವಾನಿಸುತ್ತಾರೆ. ಹೆಚ್ಚಾಗಿ ಶುಕ್ರವಾರದಂದು ಹುಡುಗನಿಗೆ ಒಳ್ಳೆಯ ಶುಭ್ರ ಬಟ್ಟೆ ತೊಡಿಸಿ ಶೃಂಗರಿಸಿ ಕೆಲವರು ದಪ್ಪ್ ಮುಖಾಂತರ, ಕೆಲವರು ಬರೀ ಹಾಡು ಹೇಳುತ್ತಾ ಮೆರವಣಿಗೆಯಲ್ಲಿ ಮಸೀದಿಗೆ ತೆರಳುತ್ತಾರೆ. ಹಣದ, ಹೂವಿನ ಹಾರಗಳನ್ನು ಹಾಕುತ್ತಿದ್ದರು.

ಹಿಂದಿನ ಕಾಲದಲ್ಲಿ ವಸ ಬಂದು ಸುನ್ನತಿ ಕರ್ಮ ನಡೆಸುತ್ತಿದ್ದರು. ಈಗಿನ ಹಾಗೆ ಬ್ಯಾಂಡೇಜ್, ಮುಲಾಮ್ ವ್ಯವಸ್ಥೆ ಇರಲಿಲ್ಲ. ಬಟ್ಟೆಯಲ್ಲಿ ಹತ್ತಿ ಇಟ್ಟು ಗಾಯಕ್ಕೆ ಕಟ್ಟುತ್ತಿದ್ದರು. ಗಾಯವನ್ನು ಶುಚಿಗೊಳಿಸಲು ಕೋಳಿಯ ಪುಕ್ಕ ಉಪಯೋಗಿಸುತ್ತಿದ್ದರು. ಹಿಂದೆ ಗುಣಮುಖವಾಗಲು ತಿಂಗಳುಗಳೇ ಬೇಕಾಗುತ್ತಿತ್ತು.

ಮುಂಜಿ ಕರ್ಮ ಮಾಡಿದ ಮಕ್ಕಳನ್ನು ಹೆರಿಗೆಯ ಸಂದರ್ಭದಲ್ಲಿ ಮಹಿಳೆಯನ್ನು ಸುಶ್ರೂಷೆ ಮಾಡುವ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದರು. ಕುಡಿಯಲು ಬಿಸಿ ನೀರು, ತಿನ್ನಲು ಪತ್ತಿರ್, ಕಡಲೆ ನೆನೆಸಿದ ಪದಾರ್ಥ, ಕೋಳಿ ಪದಾರ್ಥ ಪತ್ತಿರ್ (ರೊಟ್ಟಿ)ಗೆ ತುಪ್ಪ ಹಚ್ಚಿ ನೀಡುತ್ತಿದ್ದರು.

ಸುನ್ನತ್ ಆದ ಆರಂಭದಲ್ಲಿ ಮಕ್ಕಳು ಹೊರಳದ ಹಾಗೆ ರಾತ್ರಿಯಿಡೀ ಕಾದು ಕುಳಿತುಕೊಳ್ಳುತ್ತಾರೆ. ಸುನ್ನತ್ ಕರ್ಮದ ಊಟದ ಕಾರ್ಯ ನಡೆದ ನಂತರ ಹಣ ಇಡುವ ಪದ್ದತಿ ಇದೆ. ಇಟ್ಟ ಹಣದ ಲೆಕ್ಕವನ್ನು ಹಿಂದಿನ ಕಾಲದಲ್ಲಿ ಬರೆದಿಡುತ್ತಿದ್ದರು. ಮುಂದೆ ಹಣ ಇಟ್ಟವರ ಮನೆಯಲ್ಲಿ ಇಂಥಹ ಸಮಾರಂಭ ನಡೆದಾಗ ಆ ಹಣವನ್ನು ನೀಡುತ್ತಿದ್ದರು. ಕೆಲವೊಮ್ಮೆ ಅದಕ್ಕೆ ಸೇರಿಸಿ ಕೊಡುತ್ತಿದ್ದರು.

**ಜನಾಂಗದ ಅಭಿವೃದ್ಧಿಗೆ ಸಂಸ್ಕೃತಿಯ ಕೊಡುಗೆ**

ದಕ್ಷಿಣ ಕನ್ನಡದ ಮುಸ್ಲಿಮರಲ್ಲಿ ಶೇ. 80% ರಷ್ಟು ಬ್ಯಾರಿಗಳಿದ್ದು ಇವರಲ್ಲಿ ತಮ್ಮ ಪೂರ್ವಿಕರಾದ ಇತರ ಧರ್ಮಾನುಯಾಯಿಗಳ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿ ಕಂಡುಬರುತ್ತಿತ್ತು. ತಮಗೆ ಪರಿಚಿತವಿರುವ ಸ್ಥಳೀಯ ಭಾಷೆಯನ್ನು ಆಡುತ್ತಿದ್ದ ಇವರು ತಮ್ಮ ಪ್ರದೇಶದಲ್ಲಿದ್ದ ಜೀವನಶೈಲಿ, ಹವ್ಯಾಸಗಳನ್ನು ರೂಢಿಸಿಕೊಂಡು ಇತರರಿಗಿಂತ ಭಿನ್ನವಾಗಿ ರೂಪುಗೊಂಡಿದ್ದರು. ಇದೇ ರೀತಿ ಮಾಪಿಳ್ಳೆಗಳು ಇಂತಹದೇ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದು ತಮ್ಮ ಆಡುಭಾಷೆಯಾಗಿ ಮಲಯಾಳಂ ಅನ್ನು ಆರಿಸಿಕೊಂಡಿದ್ದರು. ಬ್ಯಾರಿಗಳು ಮತ್ತು ಮಾಪಿಳ್ಳೆಗಳಲ್ಲಿ ಕೆಲವೊಂದು ಸಾಮ್ಯತೆಗಳಿವೆ. ಬ್ಯಾರಿಗಳು ಮತ್ತು ಮಾಪಿಳ್ಳೆಗಳು ಒಂದೇ ಮೂಲದಿಂದ ಬಂದವರಾಗಿದ್ದರೂ ಅವರಲ್ಲಿ ವಿವಿಧ ಭಿನ್ನತೆಗಳು ಕಾಣಬಹುದು. ಇಲ್ಲಿನ ಸ್ಥಳೀಯ ಸಾಂಪ್ರದಾಯಗಳ ಮೂಲದಿಂದ ಬಂದ ಈ ಎರಡು ವರ್ಗಗಳಲ್ಲಿ ಸ್ಥಳೀಯ ಸಂಸ್ಕೃತಿಯ ಪ್ರಭಾವವಿರುವುದು ಕಂಡುಬರುತ್ತದೆ.

ಬ್ಯಾರಿಗಳು ಮತ್ತು ಮಾಪಿಳ್ಳೆಗಳು ತಮ್ಮ ಮೂಲ ಭಾಷೆ ಹಾಗೂ ಸಂಸ್ಕೃತಿಯನ್ನು ಉಳಿಸಿಕೊಂಡವರಾಗಿದ್ದು, ತಮ್ಮ ಪೂರ್ವಿಕರಾದ ಭಾರತೀಯರು ಯಾವ ಭಾಷೆಯನ್ನು ಮಾತನಾಡುತ್ತಿದ್ದರೋ ಅದೇ ಭಾಷೆಯನ್ನು ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ ಕೂಡಾ ಮುಂದುವರಿಸಿದರು. ಮಲಬಾರಿನ ಭಾಷೆ ಮಲಯಾಳಂ ಆಗಿದ್ದು ಈ ಭಾಷೆಯನ್ನು ಮಾಪಿಳ್ಳೆಗಳು ರೂಢಿಸಿಕೊಂಡರು. ಬ್ಯಾರಿಗಳು ತಮ್ಮದೇ ಆದ ಆಡುಭಾಷೆಯನ್ನು ಹೊಂದಿದ್ದು ಇದರಲ್ಲಿ ತುಳು ಭಾಷೆಯ ಮೂಲ ಪದಗಳು ಕಂಡು ಬರುತ್ತದೆ ಮತ್ತು ಇದಕ್ಕೆ ಮಲಯಾಳಂನಂತಹ

ಉಚ್ಚಾರ ಇದೆ. ಇದೊಂದು ಸ್ವತಂತ್ರ ಆಡು ಭಾಷೆಯಾಗಿದ್ದು ಇದನ್ನು ಬ್ಯಾರಿ ಭಾಷೆ ಎಂದು ಕರೆಯಲಾಗುತ್ತದೆ. ಮಾಪಿಳ್ಳೆಗಳಿಗಿರುವ ಸಂಸ್ಕೃತಿಯು ಮಲಬಾರಿನ ಸ್ಥಳೀಯ ಸಂಸ್ಕೃತಿಯಿಂದ ಪ್ರಭಾವಿತಗೊಂಡರೆ ಬ್ಯಾರಿ ಸಂಸ್ಕೃತಿಯು ಇಲ್ಲಿನ ತುಳುನಾಡಿನ ಸಂಸ್ಕೃತಿಯೊಂದಿಗೆ ಅವಿನಾಭಾವ ನಂಟನ್ನು ಹೊಂದಿದೆ.

ಬ್ಯಾರಿಗಳು ಹಾಗೂ ಮಾಪಿಳ್ಳೆಗಳು ಇಸ್ಲಾಮೀ ಜೀವನ ಶೈಲಿಯನ್ನು ಸ್ವೀಕರಿಸಿದವರಾಗಿದ್ದು ಮಲಬಾರಿನಲ್ಲಿ ದೀನಾರ್ ಶಾಲೆ ಎಂಬ ಹೆಸರಿನಲ್ಲಿ ಮತೀಯ ಚಟುವಟಿಕೆಗಳು ನಡೆಯುತ್ತಿದ್ದು ಹಲವು ಇಸ್ಲಾಮೀ ವಿದ್ವಾಂಸರನ್ನು ಸಮೂಹಕ್ಕೆ ಸಮರ್ಪಿಸಿದೆ. ಇವರು ಮಾಪಿಳ್ಳೆಗಳಲ್ಲಿ ಬಹಳ ಪ್ರಭಾವಪೂರ್ಣವಾಗಿ ಇಸ್ಲಾಮೀ ತತ್ವ ಮತ್ತು ಜೀವನ ಶೈಲಿಯನ್ನು ಭೋದಿಸುತ್ತಾರೆ. ಆದರೆ ತುಳುನಾಡಿನಲ್ಲಿ ಈ ರೀತಿಯ ಧಾರ್ಮಿಕ ಭೋದನಾ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಹೀಗಾಗಿ ಬ್ಯಾರಿಗಳು ಧಾರ್ಮಿಕ ಶಿಕ್ಷಣಕ್ಕಾಗಿ ಈ ಮೌಲ್ವಿಗಳನ್ನು ಅವಲಂಬಿಸಿದ್ದರು. ಇಸ್ಲಾಮ್ ಬ್ಯಾರಿಗಳ ಮತ್ತು ಮಾಪಿಳ್ಳೆಗಳ ಮಧ್ಯೆ ಸಂಪರ್ಕ ಸೇತುವೆಯಾಗಿ ಪರಿಣಮಿಸಿತು.

ಬ್ಯಾರಿಗಳ ಮೇಲಿನ ಅವಲಂಬನೆಯಿಂದ ಈ ಮಾಪಿಳ್ಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ತುಳುನಾಡಿಗೆ ಬರುವಂತೆ ಮಾಡಿತು. ಮುಸ್ಲಿಮ್ ಸಂಘಟನೆ ಮತ್ತು ಸಂಪ್ರದಾಯ ಅಥವಾ ಇಸ್ಲಾಮೀ ಆಚಾರ, ಜೀವನ ಶೈಲಿ ಮಾಪಿಳ್ಳೆಗಳ ಮಾರ್ಗದರ್ಶನದಂತೆ ರೂಪುಗೊಂಡಿತು. ಎಲ್ಲಾ ಜಮಾಅತ್‌ಗಳು ಮತ್ತು ಸಂಘಟನೆಗಳೂ ಮಾಪಿಳ್ಳೆ ಶಿಕ್ಷಕರು ಅಥವಾ ಮೌಲ್ವಿಗಳ ಮಾರ್ಗದರ್ಶನ ನಿರ್ದೇಶನದಂತೆ ನಡೆಯುತ್ತಿತ್ತು. ಎಲ್ಲಾ ಬ್ಯಾರಿ ವಿದ್ಯಾರ್ಥಿಗಳು ಮಾಪಿಳ್ಳೆ ಅಧ್ಯಾಪಕರಿಂದ ಶಿಕ್ಷಣ ಪಡೆಯುತ್ತಿದ್ದರು. ಈ ಮಾಪಿಳ್ಳೆ ಸಂಸ್ಕೃತಿಯು ಕ್ರಮೇಣ ಬ್ಯಾರಿ ಸಂಸ್ಕೃತಿಯೊಂದಿಗೆ ಸೇರಿಕೊಂಡವು ಬ್ಯಾರಿಗಳ ಧಾರ್ಮಿಕ ವಿಧಿಗಳು, ಆಚರಣೆಗಳು, ಸಾಹಿತ್ಯ ಹಾಗೂ ಧಾರ್ಮಿಕ ಬೋಧನೆಗಳು ಮಾಪಿಳ್ಳೆ ಶೈಲಿಯಲ್ಲಿದ್ದವು.

**ಸಂಸ್ಕೃತಿಯ ಕೊಡುಗೆ**

**ಸಾಹಿತ್ಯ:**–ಬ್ಯಾರಿ ಜನಾಂಗದ ಅಭಿವೃದ್ಧಿಗೆ ಸಂಸ್ಕೃತಿಯ ಕೊಡುಗೆ ಅಪಾರವಾಗಿದೆ. ಮುಖ್ಯವಾಗಿ ಸಾಹಿತ್ಯ, ಕಲೆ, ಸಂಪ್ರದಾಯಗಳು ಆಚರಣೆಗಳು ಬ್ಯಾರಿ ಸಂಸ್ಕೃತಿಯನ್ನು ಉಳಿಸಿಕೊಂಡಿತು. ಕೆಲವೊಂದು ಸಂಸ್ಕೃತಿಯನ್ನು ಇತರ ಮೂಲಗಳಿಂದ ಅಳವಡಿಸಿಕೊಂಡವು.

**ಮಾಪಿಳ್ಳೆ ಹಾಡು** : ಇದು ಬ್ಯಾರಿ ಸಂಸ್ಕೃತಿಯ ಭಾಗವಾಗಿ ಅಂಗೀಕರಿಸುವ ಒಂದು ಸಾಹಿತ್ಯ ಸರಣಿಯಾಗಿದೆ. ಮಾಪಿಳ್ಳೆ ಭಾಷೆಯಲ್ಲಿ ಅಥವಾ ಬ್ಯಾರಿ ಭಾಷೆ, ತುಳು, ಕನ್ನಡ, ಅರೆಬಿಕ್, ಹಿಂದುಸ್ಥಾನಿ ಇತ್ಯಾದಿ ಮಿಶ್ರ ಭಾಷೆಗಳಲ್ಲಿರುವ ಆಕರ್ಷಕ ಹಾಡುಗಳಾಗಿವೆ. ಇವುಗಳಲ್ಲಿ ಮುಖ್ಯವಾಗಿ ಕಿಸ್ಸಾಪಾಟ್ಟು, ಮಾಲಪ್ಪಾಟು, ಒಪ್ಪನಪ್ಪಾಟ್ಟು, ಮೈಲಾಂಜಿಪ್ಪಾಟ್ಟು, ಅಮ್ಮಾಯಿಪ್ಪಾಟ್ಟು ಮತ್ತು ತಾಲೇಲೆ ಪಾಟುಗಳಾಗಿವೆ.

**ಕಿಸ್ಸಾ ಹಾಡು** : ಇವು ಪ್ರವಾದಿ (ಸ.ಅ) ಹಾಗೂ ಅವರ ಅನುಯಾಯಿಗಳ ಶೌರ್ಯ ಸಾಧನೆಗಳನ್ನು ಬಣ್ಣಿಸುವ ಹಾಡುಗಳು ಮೊದಿನ್ ಕುಟ್ಟಿ ವೈದ್ಯರ್ ಇವರನ್ನು ಕಿಸ್ಸಾ ಪಾಟ್ಟು ರಾಜ ಎಂದು ಕರೆಯುತ್ತಾರೆ. ಬದ್ರುಲ್ ಮುನೀರ್ ಹಸನುಲ್ ಜಮಾಲ್ ಜನಪ್ರಿಯ ಸಾಹಿತ್ಯವಾಗಿದೆ. ಇದು ಬ್ಯಾರಿಗಳಲ್ಲಿ ಒಂದು ಮುಖ್ಯ ಭಾಗವಾಗಿ ಮಾರ್ಪಟ್ಟಿತ್ತು. ಇದರೊಂದಿಗೆ ಬ್ಯಾರಿಗಳು ಹಲವು ಸಂದರ್ಭಗಳಲ್ಲಿ ಉಹ್ದು, ಹುನೈನ್, ಕರ್ಬಲಾ, ಮದೀನತ್ ಮಾಲಾ, ಮಲಪ್ಪುರಂ ಮಾಲ ಇತ್ಯಾದಿಗಳು ಸಹ ಹಾಡುತ್ತಿದ್ದರು.

ಮಾಲಪ್ಪಾಟ್ಟು ಇದು ಅರಬಿ ಮಳಯಾಲದಲ್ಲಿದ್ದ ಇನ್ನೊಂದು ಸಾಹಿತ್ಯ ಸರಣಿ. ಈ ಮೌಲಿದ್ ಹಾಡುಗಳು ಹಲವು ಸಂತರ ಜೀವನ ಸಾಧನೆಗಳನ್ನು ಮತ್ತು ಪ್ರಾಮುಖ್ಯತೆಯನ್ನು ವಿವರಿಸುತ್ತಿದ್ದವು. ಅತ್ಯಂತ ಹಳೆಯ ಮಾಲಪ್ಪಾಟ್ಟು ಅಂದರೆ ಕುಂಞಆನ್ ಮುಸ್ಲಿಯಾರ್ (1151)ರವರ ನೂಲಾಮಾಲ. ಇನ್ನೊಂದು ಮುಖ್ಯ ಮಾಲಾ ಅಂದರೆ ಮೊಹಿಯದ್ದೀನ್ ಮಾಲ. ಇದು ಬ್ಯಾರಿಗಳ ನಡುವೆ ಧಾರ್ಮಿಕ ಕ್ರಿಯೆಯ ಸ್ಥಾನವನ್ನು ಪಡೆದಿತ್ತು. ಇದನ್ನು ಖಾಝಿ ಮಹಮ್ಮದ್ ಎಂದು ಗುರುತಿಸಿಕೊಂಡಿದ್ದ ಮೊಹಮ್ಮದಿಬ್‌ನು ಅಬ್ದುಲ್ ಅಜೀಜ್ ಬರೆದರು. ಇವುಗಳೊಂದಿಗೆ ಬದ್ರ್ ಮಾಲ ನಫೀಸತ್ ಮಾಲಾ ಸಹ ಬ್ಯಾರಿಗಳಿಗೆ ಜನಪ್ರಿಯ ವಾಗಿತ್ತು. ಈ ಖಾಳಿ ಬಾಪಕುಂಞಿ ಮುಸ್ಲಿಯಾರ್ ಬರೆದ ಸೈಯದ್ ಮದನಿ ಮಾಲಾ ಕೂಡ ಜನಪ್ರೀಯವಾಗಿತ್ತು. ಈ ಎಲ್ಲಾ ಮೂಲಗಳು ಅರಬ್ಬಿ ಮಲಯಾಳಂ ಭಾಷೆಯಲ್ಲಿದ್ದರೂ ಅವು ಬ್ಯಾರಿಗಳಿಗೆ ಮೈಲಾಂಜಿ ಪಾಟ್ಟು ಆಕರ್ಷಕ ಹಾಡುಗಳಾಗಿದ್ದವು. ಇವು ಬ್ಯಾರಿಗಳಲ್ಲಿ ಮತ್ತು ಮಾಪಿಳ್ಳೆಗಳಲ್ಲಿ ಸಾಮಾನ್ಯವಾಗಿತ್ತು. ಇದನ್ನು ಮೈಲಾಂಜಿ ದಿನ ಅಂದರೆ ಸಾಮಾನ್ಯವಾಗಿ ಮದುವೆಯ ಹಿಂದಿನ ದಿನ ಹಾಡಲಾಗುತ್ತಿತ್ತು. ಮಹಿಳೆಯರು ಮದುಮಗಳನ್ನು ಸುತ್ತುವರಿದು ಕೆಲವೊಮ್ಮೆ ಕೈತಟ್ಟಿಕೊಂಡು ಹಾಡುತ್ತಿದ್ದರು.

ಒಪ್ಪನಪಾಟ್ಟು ಇದು ಮದುವೆ ಸಂದರ್ಭದಲ್ಲಿ ಹಾಡುವ ಇನ್ನೊಂದು ಪ್ರಕಾರ ಮದುವೆ ಸಂದರ್ಭದಲ್ಲಿ ಅಂದರೆ, ಅರಕ್ಕಿಡಲ್ ಅಥವಾ ಮೆರವಣಿಗೆಗೆ ಅಥವಾ ಒಪ್ಪಣದ ಸಂದರ್ಭದಲ್ಲಿ ಬ್ಯಾರಿಗಳು ಈ ಹಾಡುಗಳನ್ನು ಹಾಡುತ್ತಿದ್ದರು. ಮದುಮಗ ಮತ್ತು ಮದುಮಗಳಿಗೆ ಅತ್ತೆ ನೀಡುವ ಆತಿಥ್ಯವನ್ನು ಬಣ್ಣಿಸುವ ಅಮ್ಮಾಯಿಪ್ಪಾಟ್ಟು ಮದುವೆ ಸಮಾರಂಭಕ್ಕೆ ಕಳೆತರುತ್ತಿದ್ದವು. ಇನ್ನೊಂದು ಸಾಮಾನ್ಯ ಹಾಡು ಎಂದರೆ 'ತಾಲೋಲಿಪ್ಪಾಟ್ಟ್' ಇದನ್ನು ತೊಟ್ಟಿಲು ಸಮಾರಂಭದ ವೇಳೆ ಹಾಡಲಾಗುತ್ತಿತ್ತು. ಇದು ಮಗುವನ್ನು ಮಲಗಿಸುವ ಜೋಗುಳದಂತೆ ಹಾಡಲಾಗುತ್ತಿತ್ತು. ಈ ಎಲ್ಲಾ ಮಾಪಿಳ್ಳೆಪ್ಪಾಟ್ಟುಗಳನ್ನು ಓತುಪಳ್ಳಿ ಅಥವಾ ಮದ್ರಸಾದಲ್ಲಿ ಕಲಿಸಲಾಗುತ್ತಿತ್ತು. ಕೆಲವೊಮ್ಮೆ ಯುವಕರು ಇದರ ತರಬೇತಿ ನೀಡಲು 'ಪಾಟ್ಟುಮಾಲಿಕಾ' ಏರ್ಪಡಿಸುತ್ತಿದ್ದರು. ಮಂಗಳೂರಿನಲ್ಲಿ 1916ರಲ್ಲಿ ಅಂಜುಮಾನ್ ಇತಿಹಾದುಲ್ ಇಸ್ಲಾಂ ಮತ್ತು ಅಂಜುಮಾನ್ ಕುವ್ವತುಲ್ ಇಸ್ಲಾಂ ಅಂತಹ ಪಾಟ್ಟುಮಾಲಿಕಾ ಆಯೋಜಿಸಿದ್ದವು.

ತುಳುನಾಡು ಪ್ರದೇಶದಲ್ಲಿನ ಖ್ಯಾತ ಮಾಪಿಳ್ಳೆಪಾಟ್ಟು ರಚನೆಕಾರರ ಬಗ್ಗೆ ಮಾಹಿತಿ ಇಲ್ಲ. ಸೈಯದ್ ಮದನಿ ಮೂಲ ಬರೆದ ಬಾಪುಕುಂಞಿ ಮುಸ್ಲಿಯಾರ್ ಇನ್ನೂ ಹಲವು ಮೂಲಗಳನ್ನು ಬರೆದಿದ್ದಾರೆ. ಮಂಗಳೂರಿನ ಉಂಞಿ ಮುಸ್ಲಿಯಾರ್ ಸಹ ಅಂತಹ ಕೆಲಸ ಮಾಡಿದ್ದಾರೆ. ಆದರೆ ಅವರ ರಚನೆಗಳ ಬಗ್ಗೆ ನಿಖರ ಮಾಹಿತಿ ಇಲ್ಲ.

ಮೊಗ್ರಾಲ್‌ನ ಕುಂಞಿಪಕ್ಕಿ, ಟಿ. ಉಬೈದ್ ಕಾಸರಗೋಡು, ಹೈದರ್ ಗುರುವಾಯನಕೆರೆ, ಟಿ.ಕೆ ಹುಸೇನ್ , ಬಿ. ಎಂ.ಎ. ರಫೀಕ್, ಅಬ್ದುಲ್ ಹಕೀಂ ಅಹ್ಮದ್, ಎಫ್.ಎಚ್. ಒಡೆಯಾರ್ ಇವರು ಸಾಹಿತ್ಯಕ್ಕೆ ನೀಡಿದ ಕೊಡುಗೆ ಶ್ಲಾಘನೀಯವಾಗಿದೆ.

ಇವುಗಳಲ್ಲದೆ ಧಫ್ ಕೋಲುಕಲಿ, ಕವಾಲಿ ಮುಂತಾದವುಗಳು ಇಂದು ಬ್ಯಾರಿ ಜನಾಂಗದಲ್ಲಿ ಒಂದು ಸಾಂಸ್ಕೃತಿಕ ದ್ಯೋತಕವಾಗಿ ನಿಂತಿದೆ.

**ಭವಿಷ್ಯ**

ಬ್ಯಾರಿ ಜನಾಂಗದ ಇತಿಹಾಸ ಮತ್ತು ಸಂಪ್ರದಾಯವನ್ನು ಮುಂದಿನ ತಲೆಮಾರಿಗೆ ತಲುಪಿಸುವ ನಿಟ್ಟಿನಲ್ಲಿ ಬ್ಯಾರಿ ಸಾಹಿತ್ಯ ಅಕಾಡೆಮಿಯ ಹೆಜ್ಜೆಯು ಶ್ಲಾಘನೀಯವಾಗಿದೆ. ಬ್ಯಾರಿ ಸಂಸ್ಕೃತಿಯ ಬಗ್ಗೆ ಬ್ಯಾರಿ ಜನಾಂಗದಲ್ಲಿ ಅರಿವನ್ನು ಮೂಡಿಸುವ ಉದ್ದೇಶದಿಂದ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ದಫ್,

ಕೋಲುಕಲಿ, ಒಪ್ಪನೆ ಮುಂತಾದವುಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸುತ್ತದೆ. ಬ್ಯಾರಿ ಸಮುದಾಯದಲ್ಲಿ ಸಂಪ್ರದಾಯ, ಸಂಸ್ಕೃತಿಯ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಸಂದೋಲ, ಕಲೋತ್ಸವ, ಕಾರ್ಯಗಾರ ಕಮ್ಮಟಗಳು, ವಿಚಾರಗೋಷ್ಠಿ ಮುಂತಾದ ಪ್ರಮುಖ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಪ್ರಸಕ್ತ ಕಾಲಘಟ್ಟದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಸಿಲುಕಿ ನಲುಗಿ ಹೋಗುತ್ತಿರುವ ಸಂದರ್ಭದಲ್ಲಿ ಬ್ಯಾರಿ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ತಲುಪಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಜನಾಂಗದ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಪದ್ಧತಿಯನ್ನು ಮುಂದಿನ ಜನಾಂಗಕ್ಕೆ ತಲುಪಿಸುವ ನಿಟ್ಟಿನಲ್ಲಿ ಎಲ್ಲರು ಸಹಕರಿಸುವುದು ಅನಿವಾರ್ಯವಾಗಿದೆ.

**ಪೂರಕ ಅಂಶಗಳು**

**ಬ್ಯಾರಿಗಳು ಮತ್ತು ಕೊಡವರ – ಸಾಮ್ಯತೆ**

ಬ್ಯಾರಿಗಳು ಮತ್ತು ಕೊಡವರ ಸಂಸ್ಕೃತಿಯ ನಡುವೆ ಸಾಮ್ಯತೆ ಇರುವುದನ್ನು ಕಾಣಬಹುದು. ಕೊಡವ ಭಾಷೆ ಹಲವು ರೀತಿಯಲ್ಲಿ ಬ್ಯಾರಿ ಭಾಷೆಯನ್ನು ಹೋಲುತ್ತದೆ. ಉಚ್ಚಾರ ಮಾತ್ರವಲ್ಲ ಹಲವು ಶಬ್ದಗಳು ಎರಡು ಭಾಷೆಯಲ್ಲಿ ಸಾಮಾನ್ಯವಾಗಿದೆ. ಉದಾಹರಣೆಗೆ: ಕೆಟ್ಟ್, ಪೆಞಾಯಿ ಮತ್ತಿತರ ಹಲವು ಸಾಮ್ಯತೆಗಳನ್ನು ಇಲ್ಲಿ ಕಾಣಬಹುದು.

| **ಸಂಸ್ಕೃತಿ** | **ಬ್ಯಾರಿ** | **ಕೊಡವ** |
|---|---|---|
| ಮದುವೆ | ಮಂಜಿಲ | ಮಂಗಿಲ |
| ನಿಶ್ಚಿತಾರ್ಥ | ಉರಪ್ಪು | ಮೌರ್ತ |
| ಋತುಮತಿ ಕಾರ್ಯಕ್ರಮ | ಬುಲೂಕು ಮಂಜಿಲ | ಪೊಲಿಕೊಂಡ್ ಮಂಜಿಲ |
| ಚೊಚ್ಚಲ ಗರ್ಭಿಣಿ | ಅಪ್ಪತ್ತೊ ಮಂಜಿಲ | ಕುಲಿಯಾಮೆ ಮಂಜಿಲ |

ಮಂಗಿಲ, ಮೌರ್ತ, ಪೊಲಿಕೊಂಡ ಮಂಗಿಲ, ಪೊಲಿಯಮೆ ಮಂಗಿಲ, ಪೈಂತಲ್ ಮಂಗಿಲ (ಮಗು ಜನನದ 11ನೇ ದಿನದ ಬಳಿಕ) ಇತ್ಯಾದಿಗಳು ಬ್ಯಾರಿ ಆಚರಣೆಗಳನ್ನು ಹೋಲುತ್ತದೆ. ಪುರುಷರು ಮತ್ತು ಮಹಿಳೆಯರು ಧರಿಸುವ ಉಡುಪುಗಳನ್ನು ಕುಪ್ಪಾಯಿ ಎನ್ನಲಾಗುತ್ತಿತ್ತು. ಬಹುತೇಕ ಆಭರಣಗಳು ಸಾಮಾನ್ಯವಾಗಿದ್ದವು. ಮದುವೆಗೆ ಮೊದಲು ಹುಡುಗಿಯ ಸ್ನಾನ ಮಾಡಿಸುವುದು.

ಬ್ಯಾರಿ ಹಾಗೂ ಕೊಡವರಲ್ಲಿ ಸಾಮಾನ್ಯವಾಗಿದೆ. ಮೆಟಲ್ ಲ್ಯಾಂಪ್ ಬಳಕೆಯಲ್ಲಿತ್ತು. ಬ್ಯಾಂಡ್ ಮತ್ತು ಮ್ಯೂಸಿಕ್ ಬಳಕೆ ಇಬ್ಬರಲ್ಲೂ ಇತ್ತು.

**ಬ್ಯಾರಿಗಳ ಉಡುಪು**

ಬ್ಯಾರಿಗಳು ಬಹುತೇಕ ಸರಳ ಉಡುಪು ಧರಿಸುತ್ತಿದ್ದರು ಒಂದು ಮುಂಡು ಅಥವಾ ಸಾದಾ ಉಡುಪು ನಡುಪಟ್ಟಿಯೊಂದಿಗೆ ಧರಿಸುತ್ತಿದ್ದರು. ಮಕ್ಕಳು ಮಾತ್ರವಲ್ಲದೆ ವಯಸ್ಕರು ಸಹ ಲುಂಗಿ (ಬಣ್ಣದ ಮುಂಡು) ಧರಿಸುವುದು ಸಾಮಾನ್ಯವಾಗಿತ್ತು. ಶರ್ಟ್ ಅನ್ನು ಕುಪ್ಪಾಯ ಎನ್ನಲಾಗುತ್ತಿತ್ತು. ಮಹಿಳೆಯರು ಕೂಡಾ ಎದುರು ಬದಿಯಲ್ಲಿ ಕುಸುರಿ ಕೆಲಸ ಹೊಂದಿದ್ದ ಕುಪ್ಪಾಯ ಧರಿಸುತ್ತಿದ್ದರು. ಬ್ಯಾರಿಗಳು ತಮ್ಮ ತಲೆಗೂದಲನ್ನು ಬೋಳಿಸಿ ರುಮಾಲು ಅಥವಾ ಟೊಪ್ಪಿ ಧರಿಸುತ್ತಿದ್ದರು. ದೊಡ್ಡದಾದ ಟೊಪ್ಪಿ ಧರಿಸುವುದು ರೂಢಿಯಾಗಿತ್ತು. ಮಹಿಳೆಯರು ಸಾಮಾನ್ಯವಾಗಿ ರಾತ್ರಿ ಉಡುಪು 'ಕಾಚೆ ಮುಂಡು'ವಿನ ರೀತಿಯ ದಿರಿಸು ಧರಿಸುತ್ತಿದ್ದರು. ಅವರು ಚಿನ್ನದ ಕುಸುರಿ ಕೆಲಸ ಹೊಂದಿದ್ದ ಬಣ್ಣದ ಪಟ್ಟು (ರೇಷ್ಮೆ) ಸೀರೆ ಉಡುತ್ತಿದ್ದರು. ಮಹಿಳೆಯವರಿಗೆ ಆಭರಣಗಳು ಬಹಳ ಇಷ್ಟವಾಗಿದ್ದವು. ಬಂಗಾರದ ನಾಣ್ಯದ ಚಾವಡ, ಚಿನ್ನದ ಎಸಳುಗಳು, ಬಳೆ ಮತ್ತು ಉಂಗುರಗಳು ಸಾಮಾನ್ಯವಾಗಿದ್ದವು.

ಅಗಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಆಭರಣಗಳು ಇರುತ್ತಿದ್ದವು. ಇವುಗಳನ್ನು ಬಹುತೇಕ ಸ್ಥಳೀಯರು ಕುಸುರಿಯ ಒಡವೆಗಳಿಂದ ಮಾಡಿಸಲಾಗುತ್ತಿತ್ತು. ಚಿನ್ನದ ಕೆಲಸಗಾರರು ಬಹುತೇಕ ಅಮುಸ್ಲಿಮರಾಗಿದ್ದು ಬ್ಯಾರಿಗಳು ಅವರಿಂದ ಬೇಕಾದ ಒಡವೆಗಳನ್ನು ಮಾಡಿಸುತ್ತಿದ್ದರು. 19ನೇ ಶತಮಾನದಲ್ಲಿ ಬ್ಯಾರಿಗಳು ಅಭಿಪ್ರಾಯ ಪಥದಲ್ಲಿ ಸಾಗಿದರು. ಸುಧಾರಣಾ ಚಳುವಳಿಯಿಂದಾಗಿ ಅವರ ಸಮಾಜದಲ್ಲಿ ಬಹಳಷ್ಟು ಬದಲಾವಣೆಗಳು ಉಂಟಾದವು.

**ಬ್ಯಾರಿಗಳ ಸಾಮಾನ್ಯ ಆಭರಣಗಳು**

| ಕೈ ಒಡವೆಗಳು | ಕಿವಿ ಆಭರಣಗಳು | ತಲೆ ಆಭರಣಗಳು | ಕುತ್ತಿಗೆ ಆಭರಣಗಳು | ಕಾಲು/ನಡು ಆಭರಣಗಳು |
|---|---|---|---|---|
| ಬಳೆ | ಅಲಿಕತ್ | ತಲೆಸಿಂಗಾರ್ | ತಾಳಿಮಾಲೆ | ಕಾಲ್ ಪಟ್ಟಿ |
| ಎಳಬಳೆ | ಕಾಯಿಲಂ | ಕೂಕಟ್ಟ್ | ಗೆಜ್ಜೆಟಿಕ್ | ಸರಪಳಿ |
| ಸುರ್ಗಿತಿರಿ | ಕೊಪ್ಪು | ಕೇದೆಗೆ | ಚಾವಡ | ನಡುಪಟ್ಟಿ |

| | | | | |
|---|---|---|---|---|
| ಮುರ್ಗಿತಿರಿ | ಸರಪಳಿ | ಜಡಪೊಳ್ಳ | ಉರುಕುಲೇಸ್ | ಅರಪಟ್ಟಿ |
| ಎಡೆಬಳೆ | ಕುಡುಕ್ಕ | ಕುರಿ | ಮಿಸ್ರಿಮಾಲೆ | ಅರಂಞಾನ |
| ತಟ್ಟಬಳೆ | ಅರುಲಿ | ಚೌರಿ | ಒಟ್ಟ ಉರುಕು | ನೂಲು |
| ಕಾದುಬಳೆ | ಬೆಂಡೋಲೆ | ತಿರ್ಮ | ಪೂಮಾಲೆ | |

**ತಾಲಕ್ಕಾರ್ ಅಥವಾ ಇಲ್ಲಮ್**

ಬ್ಯಾರಿಗಳಲ್ಲಿ ಹಲವು ಇಲ್ಲಂಗಳಿದ್ದು, ಪ್ರತಿಯೊಂದು ಇಲ್ಲಂಗೂ ಒಂದೊಂದು ದರ್ಜೆ ಇರುತ್ತದೆ. ಇಲ್ಲಂನ ದರ್ಜೆಯನ್ನು ಅಳೆಯುವ ಮಾಪನವೇನೆಂದರೆ ಮದುವೆ ಸಂದರ್ಭದಲ್ಲಿ ತಮ್ಮ ಮಗಳಿಗೆ ಎಷ್ಟು ಮಹ್ರ ಅನ್ನು ನಿಗದಿ ಪಡಿಸುತ್ತಾರೆ ಎಂಬ ವಿಚಾರದ ಮೇಲಾಗಿತ್ತು. ಕುಟುಂಬದ ಘನತೆಗೆ ತಕ್ಕಂತೆ ತಮ್ಮ ಮಕ್ಕಳ ಮದುವೆಗೆ ಮಹ್ರ್‌ನ್ನು ನಿರ್ಧರಿಸುತ್ತಾರೆ. ಈ ಇಲ್ಲಂ ಪದ್ಧತಿಯು ಮಂಗಳೂರು ಹಾಗೂ ಕಾಸರಗೋಡು ಪ್ರಾಂತ್ಯದಲ್ಲಿ ಚಾಲ್ತಿಯಲ್ಲಿತ್ತು. ಆದರೆ ಈ ಎರಡು ಪ್ರಾಂತ್ಯಗಳ ಇಲ್ಲಂನ ಹೆಸರುಗಳಲ್ಲಿ ಭಿನ್ನತೆ ಕಂಡುಬರುತ್ತಿತ್ತು.

**ಮಂಗಳೂರು ಪ್ರಾಂತ್ಯದ ಇಲ್ಲಂಗಳು** : ಕೈಸರ್ ಇಲ್ಲಂ, ಸುಲ್ತಾನ್ ಬೆಲಿಯೆ, ಅಕ್ಕಬೆಲಿಯೆ, ಚಮಕ್ ಬೆಲಿಯೆ, ಪಟಿಲ್ಲಮ್ ಅಂಜಿಲ್ಲಮ್, ಚಂದವಲ್ಲಿ, ಕಡಿಂಗರ್ ಮತ್ತು 21 ಮತ್ತು 11 ಅಮಾಡ ಪೊನ್ನು (ಸವರಿನ್) ಮಹ್ರ್ ಆಗಿತ್ತು.

**ಕಾಸರಗೋಡು ಪ್ರಾಂತ್ಯದ ಇಲ್ಲಂಗಳು** : ಬಿರಾನ್ ಇಲ್ಲಂ, ಮಿಯಾನ್ ಇಲ್ಲಂ, ತಲ ಇಲ್ಲಮ, ಮುತುಲ್ ಇಲ್ಲಮ್, ಕುಂಚಿಲ್ಲಮ್ ಅಂಜಿಲ್ಲಮ್, ಪಾಟ್ಟಿಲ್ಲಮ್, ಅಪಾಟ್ಟಿಲ್ಲಮ್ ಮತ್ತು 21 ಮತ್ತು 11 ಅಮಾಡ ಪೊನ್ನು (ಸವರಿನ್) ಮಹ್ರ್ ಆಗಿತ್ತು. ಇವುಗಳಲ್ಲದೆ, ಇನ್ನೂ ಕೆಲವು ಇಲ್ಲಮ್‌ಗಳಿದ್ದವು. ಆದರೆ ಅವುಗಳ ಕುರುಹುಗಳು ಕಂಡುಬರುವುದಿಲ್ಲ. ಈಗಲೂ ಕೆಲವು ವ್ಯಕ್ತಿಗಳು ತಮ್ಮ ಇಲ್ಲಮ್‌ಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುವುದು ಕೇಳಿಬರುತ್ತದೆ. ಅಂಜಿಲ್ಲಮ್‌ನ ಡಾ. ಮಹಮ್ಮದ್ ಶರೀಫ್, ಚಮಕ್ ಬೆಲ್ಯದ ಡಾ. ಝಕರಿಯ್ಯಬ್ಬ ಹಾಗೂ ಮಿಯಾನ್ ಇಲ್ಲಮ್‌ನ ಬಾಪು ಬ್ಯಾರಿ ಇತ್ಯಾದಿಗಳು ಇಲ್ಲಮ್ ವ್ಯವಸ್ಥೆಯ ಕೆಲವು ಉದಾಹರಣೆಗಳು.

**ಇಲ್ಲಮ್‌ನ ಗುಣ ಲಕ್ಷಣಗಳು**

- ಇಲ್ಲಮ್‌ಗಳು ಸರಂಜಾಮಿ (ಊಳಿಗಮಾನ್ಯ) ಪದ್ಧತಿಯಂತೆ ಕಂಡುಬರುತ್ತದೆ. ಇವು ಕುಟುಂಬವೊಂದರ ಆರ್ಥಿಕ ಅಂತಸ್ತಿಗೆ ತಕ್ಕಂತೆ ರೂಪುಗೊಂಡಿದೆ. ಈ ಘನತೆಯನ್ನು ಎಲ್ಲ ಸಾಮಾಜಿಕ ಸಂದರ್ಭಗಳಲ್ಲೂ ಬಳಸಿಕೊಳ್ಳಲಾಗುತ್ತದೆ.
- ಇಲ್ಲಮ್‌ಗಳು ತಾಯಿಯ ಸಂತಾನದಿಂದ ಬಂದುದಾಗಿದ್ದು ತಾಯಿಯ ಇಲ್ಲಮ್ ಅನ್ನು ಮಕ್ಕಳು ಅನುಸರಿಸುತ್ತಾರೆ. ಇದು ತಾಯಿಯ ಘನತೆಯನ್ನು ಹೆಚ್ಚಿಸುತ್ತದೆ.
- ಒಂದೇ ಇಲ್ಲಮ್‌ನ ಸದಸ್ಯರ ಮಧ್ಯೆ ವಿವಾಹ ಸಂಬಂಧಗಳು ಏರ್ಪಡುವಂತಿರಲಿಲ್ಲ. ಇಲ್ಲಮ್ ಎಂದರೆ ಭಾರತೀಯ ಪದ್ಧತಿಯಂತೆ ಒಂದು ಗೋತ್ರಕ್ಕೆ ಸಮಾನ. ಈ ಪದ್ಧತಿ ತುಳುವರಲ್ಲಿರುವ ಬರಿ ಪದ್ದತಿಯಿಂದ ಉಗಮಿಸಿದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆಯಾಗಿದೆ. ಪುಟ್ಟಿ ಬರಿ ಪದ್ಧತಿಯ ಪ್ರಕಾರ ಹುಟ್ಟಿದ ಗೋತ್ರ ಮತ್ತು ಮದುವೆ ಸಂದರ್ಭಗಳನ್ನು ಬೆಳೆಸಿದ ಗೋತ್ರಗಳೆರಡೂ ಒಂದೇ ಆಗಿರುವುದು ಸಾಧ್ಯವಿಲ್ಲ. 20ನೇ ಶತಮಾನದ ಮಧ್ಯದವರೆಗೂ ಈ ಭಿನ್ನಗೋತ್ರಗಳ ಮದುವೆಯ ಪದ್ಧತಿ ಬ್ಯಾರಿಗಳಲ್ಲಿ ಚಾಲ್ತಿಯಲ್ಲಿತ್ತು.
- ವಿವಾಹ ಸಂದರ್ಭದಲ್ಲಿ ಈ ಇಲ್ಲಮ್‌ಗಳ ಮಹತ್ವದ ಪಾತ್ರವಿರುತ್ತದೆ. ಇಲ್ಲಮ್‌ನ ಆಧಾರದಲ್ಲಿ ವರನ ಕಡೆಯಿಂದ ವಧುವಿಗೆ ನೀಡಲಾಗುವ ಮಹ್‌ರನ್ನು ನಿರ್ಧರಿಸಲಾಗುತ್ತದೆ. 21 ಅಮಾನ ಪೊನ್ನು (ಸವರಿನ್) ಮತ್ತು 11 ಅಮಾಡ ಪೊನ್ನು (ಸವರಿನ್) ಎಂಬ ಇಲ್ಲಮ್‌ಗಳಿದ್ದವು. ಮಹ್‌ರ್ ಪೂರ್ವ ನಿರ್ಧರಿತವಾಗಿದ್ದು. ಯಾವುದೇ ರೀತಿಯ ರಿಯಾಯಿತಿ ಪಡೆಯಲು ಅವಕಾಶವಿರಲಿಲ್ಲ. ಇಲ್ಲಮ್‌ಗಳೇ ಮಹ್‌ರ್‌ನ್ನು ನಿರ್ಧರಿಸಿ ಮದುವೆಯ ಕಾರ್ಯವನ್ನು ನಿಗದಿಪಡಿಸಲಾಗುತ್ತಿತ್ತು. ಹೀಗಾಗಿ ಹೆಚ್ಚಿನ ಮಹ್‌ರ್ ನೀಡುವವರ ಮತ್ತು ಕಡಿಮೆ ಮಹ್‌ರ್ ನೀಡುವವರ ವರ್ಗ ಎಂದು ಎರಡು ವರ್ಗಗಳು ರೂಪುಗೊಂಡವು ಹಾಗೂ ಮದುವೆಯ ನಿಯಮಗಳು ಇನ್ನಷ್ಟು ಸಂಕೀರ್ಣಗೊಂಡವು. ಮದುಮಗನಿಗೆ ಉನ್ನತ ವರ್ಗದ ಅಂತಸ್ತಿಗೆ ತಕ್ಕಂತೆ ಮಹ್‌ರ್ ನೀಡಲು ಸಾಧ್ಯವಿಲ್ಲದಿದ್ದರೆ 11 ಮತ್ತು 21 ಮಹ್‌ರ್ ವರ್ಗಗಳ ಮಧ್ಯೆ ವಿವಾಹ ಸಂಬಂಧ ಏರ್ಪಡುವುದರಲ್ಲಿ ಯಾವುದೇ ನಿರ್ಭಂದವಿರಲಿಲ್ಲ. ಇದು ಒಂದು ವಿಶಿಷ್ಟ ಸರಂಜಾಮಿ ಪದ್ಧತಿಯಾಗಿದೆ.
- ಉತ್ತರದಾಯಿತ್ವ ಮತ್ತು ಆಸ್ತಿಗೆ ಉತ್ತರಾಧಿಕಾರಿಯಾಗಿ ಯಾರನ್ನು ನಿರ್ಣಯಿಸು

ವುದು ಎಂಬುದರ ವಿಚಾರದಲ್ಲಿ ಇಲ್ಲಮ್‌ಗಳ ಯಾವುದೇ ಪಾತ್ರವಿರಲಿಲ್ಲ. ಉತ್ತರ ಮಲಬಾರ್ ಮಾಪಿಳ್ಳೆಗಳು ಮತ್ತು ರಾಜ ಮನೆತನದವರಿಗೆ ಹೊರತಾಗಿ ಬ್ಯಾರಿಗಳು ಉತ್ತರದಾಯಿತ್ವದ ನಿಯಮವನ್ನು ಇಸ್ಲಾಮೀ ಕಾನೂನಿನನ್ವಯ ಪಾಲಿಸುತ್ತಾರೆ. ಮಾತೃ ವಂಶಸ್ಥ ಪದ್ಧತಿಯನ್ನು ಈ ಉತ್ತರದಾಯಿತ್ವ ಹಾಗೂ ಆಸ್ಥಿಯ ವಿಚಾರದಲ್ಲಿ ಪಾಲಿಸಲಾಗುವುದಿಲ್ಲ. ಈ ನಿಯಮವು ಬ್ಯಾರಿಗಳನ್ನು ಮಾಪಿಳ್ಳೆಗಳಲ್ಲ ರಿವಾಜುಗಳಿಂದ ಬೇರ್ಪಡಿಸುತ್ತದೆ.

- ಬ್ಯಾರಿಗಳ ಇಲ್ಲಮ್‌ಗಳಲ್ಲಿ ಪರಸ್ಪರ ಹೋಲುವ ಅಂಶಗಳು ಕಂಡುಬರುತ್ತದೆ. ಎಲ್ಲ ಬ್ಯಾರಿಗಳು ತಮ್ಮ ಇಲ್ಲಂ ಉನ್ನತ ಮತ್ತು ಕೆಳ ವರ್ಗದವರಾಗಿದ್ದರೂ ಅವರನ್ನು ತಾಲಕ್ಕಾರ್ ಎಂದು ಗುರುತಿಸಿಕೊಳ್ಳಲಾಗುತ್ತದೆ. 'ತಾಲ' ಎಂದರೆ ಅಂತಸ್ತು. ಅವರು ಎಲ್ಲ ಸಮಾರಂಭಗಳಿಗೂ ಆಹ್ವಾನಿತರು ಮತ್ತು ಅವರನ್ನು ಬಹಳ ಆದರ ಪೂರ್ವಕವಾಗಿ ಸತ್ಕರಿಸಲಾಗಿತ್ತು. ಈ ಪದ್ಧತಿಯು ಮಂಗಳೂರು ಮತ್ತು ಕಾಸರಗೋಡು ಪ್ರಾಂತ್ಯದಲ್ಲಿಯೂ ಕಂಡುಬರುತ್ತದೆ.
- ಕೆಲವು ಬ್ಯಾರಿಗಳಲ್ಲಿ ಯಾವುದೇ ಇಲ್ಲಮ್‌ಗೆ ಸೇರಿದವರೂ ಇದ್ದರು, ಇಂತಹ ಮುಸ್ಲಿಮರನ್ನು 'ತಾಲ' ಇಲ್ಲಾತ್ತೋರು ಎಂದು ಪರಿಗಣಿಸಲಾಗುತ್ತಿತ್ತು. ಇವರು ಸಾಮಾಜಿಕ ಅಂತಸ್ತಿನ ಆಧಾರದಲ್ಲಿ ಕೆಳವರ್ಗದವರಾಗಿದ್ದು 19ನೇ ಶತಮಾನದಲ್ಲಿ ಅವರನ್ನು ಕೆಳಜಾತಿಯವರೊಂದಿಗೆ ವ್ಯವಹರಿಸುವ ರೀತಿಯಲ್ಲಿ ವ್ಯವಹರಿಸಲಾಗುತ್ತಿತ್ತು. ಇದಕ್ಕೆ ಹೊರತಾಗಿ ಮಂಗಳೂರಿನ ಮುಸ್ಲಿಮರಾದ ಪದಿನಾರಗ ಒಂದು ಭಿನ್ನ ವರ್ಗದವರಾಗಿದ್ದರು. ಈ ಪದಿನಾರಗದ ಮಧ್ಯೆ ವಿವಾಹ ಸಂಬಂಧಗಳು ಏರ್ಪಡಿಸುವುದು ವಿರಳವಾಗಿತ್ತು. ಆದರೆ ಅವರ ಮಧ್ಯೆ ಮದುವೆ ಸಂಬಂಧವೇರ್ಪಡಿಸಲು ಇಚ್ಛಿಸಿದ್ದರೆ ಅದಕ್ಕೆ ಅನುಮತಿಯಿತ್ತು 19ನೇ ಶತಮಾನಗಳ ಅಗಗಳ ಶತಮಾನವಾದ್ದರಿಂದ ಅಂತಹ ವಿವಾಹ ಸಂಬಂಧಗಳು ಏರ್ಪಡುತ್ತಿರಲಿಲ್ಲ.

**ಇಲ್ಲಮ್ ವರ್ಗಕ್ಕೆ ಸೇರಿದವರು ಅಥವಾ ತಾಲ–ಇಲ್ಲಾತ್ತೋರು**

ಇಲ್ಲಮ್ ವರ್ಗಕ್ಕೆ ಸೇರಿದ ಬ್ಯಾರಿಗಳ ಗುಂಪು ಬಹುಮುಖ್ಯ ಜನವರ್ಗವಾಗಿತ್ತು. ಯಾವುದೇ ಇಲ್ಲಮ್‌ಗೆ ಸೇರುವ ಅರ್ಹತೆ ಇಲ್ಲದವರು ಅಥವಾ ತಮ್ಮ ಬಡತನ ನಿರುದ್ಯೋಗ ಅಥವಾ ಅಂತಸ್ತಿನ ಲೆಕ್ಕಾಚಾರದಲ್ಲಿ ಇತರ ವರ್ಗಗಳಿಂದ ಭಿನ್ನರಾದವರ ಗುಂಪೇ 'ತಾಲ ಇಲ್ಲಾತ್ತೋರು' ಆಗಿದೆ.

ಈ ಕೆಳಗಿನ ವರ್ಗದವರು ಇಲ್ಲಮ್ ವರ್ಗಕ್ಕೆ ಸೇರದವರು

1. ಬಡುವರು ಅಥವಾ ಬಡುಗರ್
2. ಚೀನಿಕ್ಕಾರ್
3. ಪುದು ಇಸ್ಲಾಂ
4. ವಸಗಳು
5. ತಾಲ ಇಲ್ಲಾತೊರು

ಬಡುಗರಗಳು ಅಥವಾ ಬಡುವಗಳು ತುಂಬಾ ಬಡವರ್ಗದ ಜನರಾಗಿದ್ದರು. ಹೆಚ್ಚಾಗಿ ಇವರು 19ನೇ ಶತಮಾನದ ಆರಂಭದಲ್ಲಿ ಕೂಲಿ ಕಾರ್ಮಿಕರಾಗಿದ್ದರು. ಇವರು ಬ್ಯಾರಿ ವ್ಯಾಪಾರಿಗಳ ಅಥವಾ ಜಮೀನ್ದಾರರ ಕೈ ಕೆಳಗೆ ಕೆಲಸ ಮಾಡುವವ ರಾಗಿದ್ದು ತಮ್ಮ ಜೀವನೋಪಾಯಕ್ಕಾಗಿ ಉನ್ನತ ವರ್ಗದವರನ್ನು ಅವಲಂಬಿಸಿದವರಾಗಿದ್ದರು. ಇಸ್ಲಾಂ ಗುಲಾಮಗಿರಿಯ ವಿಮೋಚನೆಯನ್ನು ಅತ್ಯಂತ ಪುಣ್ಯ ಕಾರ್ಯ ಎಂದು ಸಾರಿದೆ. ಆದರೆ 19ನೇ ಶತಮಾನದ ಆರಂಭದಲ್ಲಿ ಬ್ಯಾರಿ ಸಮುದಾಯದಲ್ಲಿಯೂ ಒಂದು ವಿಧದ ಗುಲಾಮ ಗಿರಿಯ ಪದ್ಧತಿ ಇದ್ದಂತಿತ್ತು. ಕೆಳವರ್ಗದ ಬಾಲಕ ಬಾಲಕಿಯರನ್ನು ಉನ್ನತ ವರ್ಗದ ವ್ಯಾಪಾರಿಗಳಿಗೆ ಅವರ ಸೇವೆ ಮಾಡಲಿಕ್ಕಾಗಿ ಮಾರಲಾಗುತ್ತಿತ್ತು. ಈ ವ್ಯಾಪಾರಿಗಳು ಅವರನ್ನು ಗುಲಾಮ ರಂತೆ ಬಳಸಿಕೊಳ್ಳುತ್ತಿದ್ದರು. ಈ ಗುಲಾಮರು ಯಾವುದೇ ಒಂದು ಶುಭ ಕಾರ್ಯದ ಸಂದರ್ಭದಲ್ಲಿ ಮುಕ್ತರಾಗುತ್ತಿದ್ದರು ಮತ್ತು ಸಮಾಜದ ಸ್ವತಂತ್ರ ಅಭ್ಯರ್ಥಿಯಾಗಿ ಮಾರ್ಪಡುತ್ತಿದ್ದರು. ಈ ಜನವರ್ಗವನ್ನೇ 'ಬಡುಗರು ಅಥವಾ ಬಡುವರು' ಎಂದು ಕರೆಯಲಾಗುತ್ತದೆ. ಈ ವರ್ಗದ ಮುಂದಿನ ತಲೆಮಾರಿನ ಜನರು ಒಂದು ಭಿನ್ನ ವರ್ಗವಾಗಿ ಇಲ್ಲಮ್ ವರ್ಗಕ್ಕೆ ಸೇರಿದವರಾಗಿ ಮಾರ್ಪಟ್ಟರು. 20ನೇ ಶತಮಾನದಲ್ಲಿ ಗುಲಾಮಗಿರಿಯು ಸಂಪೂರ್ಣ ನಿರ್ಮೂಲನವಾಗಿದ್ದರೂ, ಈ ಬಡುವಗಳನ್ನು ಕೆಳವರ್ಗದ ಜನರಾಗಿ ಕಾಣುತ್ತಿದ್ದರು. 1940ರ ನಂತರ ಕ್ರಮೇಣ ಇಲ್ಲಮ್ ಪದ್ಧತಿಯು ಮಾಯವಾಗುತ್ತಾ ಬಂದಾಗ ಈ ಸಾಮಾಜಿಕ ಅಸಮತೋಲನವೂ ನಿರ್ಮೂಲನೆಯಾಯಿತು.

ಚೀನಿಕ್ಕಾರ್ ಎಂಬುದು ಇನ್ನೊಂದು ಇಲ್ಲಮ್ ವರ್ಗಕ್ಕೆ ಸೇರಿದ ಪಂಗಡ ವಾಗಿತ್ತು. ಸಂಗೀತ, ಈ ಜನ ವರ್ಗದವರ ಸಂಪ್ರದಾಯವಾಗಿತ್ತು. ಬ್ಯಾಂಡ್, ಡ್ರಮ್, ಚೀನಿ (ಶತ್‌ಮಲ್ ರೂಪದ ವಾದ್ಯ) ಯು ಈ ಇವರಲ್ಲಿ ಸಾಮಾನ್ಯವಾಗಿ ಕಾಣಿಸುತ್ತಿತ್ತು. ಕೊಟ್ಟು ಮುರ್ಸೆ, ಮತ್ತು ಚೀನಿ ಪಂಗಡಗಳು, ಮುಸ್ಲಿಮರಲ್ಲಿ ಪ್ರಸಿದ್ಧವಾಗಿತ್ತು. ದುಡಿ ಮತ್ತು ಕೊಳಲು ಹಿಂದೂ ಬಾಂಧವರಲ್ಲಿ ಕೆಳವರ್ಗದವರ (ಕೊರಗರ) ಸಂಗೀತ ವಾದ್ಯವಾಗಿತ್ತು. ಆದ್ದರಿಂದ ಬ್ಯಾರಿಗಳು ಈ ವರ್ಗದವರನ್ನು

ಕೆಳಜಾತಿಯವರಂತೆ ನೋಡಿಕೊಳ್ಳುತ್ತಿದ್ದರು. ಬ್ರಾಹ್ಮಣರು ಮತ್ತು ಜೈನರು ಸಂಗೀತವನ್ನು ನುಡಿಸುವ ಜನ ವರ್ಗವನ್ನು ಕೆಳಜಾತಿಯವರೆಂದು ಪರಿಗಣಿಸುತ್ತಿದ್ದರು. ಜೈನರ ಸಂಸ್ಕೃತಿಯ ಪ್ರಭಾವ ಮುಸ್ಲಿಮರ ಮೇಲೆ ಬಹಳವಾಗಿತ್ತು. ಹಾಗಾಗಿ ಬ್ಯಾರಿಗಳು ಈ 'ಚೀನಿ'ಗಳನ್ನು ಇಲ್ಲಮ್ ವರ್ಗಕ್ಕೆ ಸೇರಿದವರೆಂದು ಪರಿಗಣಿಸುತ್ತಿರಲಿಲ್ಲ.

ಪುದು ಇಸ್ಲಾಂ ಎಂಬುದು ಇಸ್ಲಾಂ ಮತಕ್ಕೆ ಇತರ ಕೆಳಜಾತಿಗಳಿಂದ ಮತಾಂತರಗೊಂಡ ಜನರ ವರ್ಗವಾಗಿತ್ತು. 19ನೇ ಶತಮಾನದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಜನರ ಸಂಖ್ಯೆ ಬಹಳ ಕಡಿಮೆಯಿತ್ತು ಅಥವಾ ಈ ಪ್ರಕ್ರಿಯೆ ಸಂಪೂರ್ಣ ನಿಂತಿತು ಎಂದೇ ಹೇಳಬಹುದು. ಇದಕ್ಕೆ ಕಾರಣ ಕ್ರಿಶ್ಚಿಯನ್ ಮಿಶನರಿಗಳು ತಮ್ಮ ಧರ್ಮಕ್ಕೆ ಜನರನ್ನು ಆಕರ್ಶಿಸುವಲ್ಲಿ ಸಫಲ ರಾಗುತ್ತಿದ್ದರು. ಆದರೂ ಕೆಲವೊಂದು ಕೆಳ ವರ್ಗದ ಜನರು ತಮ್ಮ ಸಾಮಾಜಿಕ ಅಂತಸ್ತನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರ ಗೊಳ್ಳುತ್ತಿದ್ದರು. ಪುದು ಇಸ್ಲಾಂ ಎಂಬ ವರ್ಗದ ಜನರಿಗೆ ಎಲ್ಲ ವಿಧದ ಸಹಕಾರವನ್ನು ಒದಗಿಸಲಾಗುತ್ತಿತ್ತು. ಹಾಗೂ ಉದ್ಯೋಗಗಳನ್ನು ಅವರಿಗೆ ನೀಡಲಾಗುತ್ತಿತ್ತು. ಹೀಗಾಗಿಯೇ ಅವರ ಮೂಲ ಮತ್ತು ಆರ್ಥಿಕ ಸ್ಥಿತಿಯ ಆಧಾರದಲ್ಲಿ ಅವರನ್ನು ಇಲ್ಲಮ್ ಪಂಗಡದ ಸದಸ್ಯರೆಂದು ಪರಿಗಣಿಸಲಾಗುತ್ತಿರಲಿಲ್ಲ. ಇನ್ನೊಂದು ವರ್ಗದ ಚೇರಕೂಟನ್ ಎಂಬುದು ಇಲ್ಲಮ್ ಗುಂಪಿಗೆ ಸೇರದ ವರ್ಗವಾಗಿತ್ತು.

'ವಸ'ಗಳು ಸುನ್ನತಿ ಕಾರ್ಯ ಮಾಡುವುದರಲ್ಲಿ ಪರಿಣತ ವ್ಯಕ್ತಿಗಳಾಗಿದ್ದರು. ಸುನ್ನತಿ ಎಂಬುದು ಒಂದು ಧಾರ್ಮಿಕ ವಿಧಿಯಾಗಿದ್ದು, ಈ ವಸಗಳು ಸುನ್ನತಿಯ ಸಂದರ್ಭದ ಎಲ್ಲ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ತಲೆಯ ಕೂದಲನ್ನು ತೆಗೆಯುತ್ತಿದ್ದರಿಂದ ಹಿಡಿದು ಗಾಯ ಒಣಗಿಸುವ ಕಾರ್ಯದವರೆಗಿನ ಎಲ್ಲ ಕೆಲಸವನ್ನು ಈ ವಸ್ತುಗಳು ನಿಭಾಯಿಸುತ್ತಿದ್ದರು. ಹೀಗಾಗಿ ವಸಗಳು ಕ್ಷೌರಿಕನ ಕೆಲಸವನ್ನು ನಿರ್ವಹಿಸುತ್ತಿದ್ದರು. ಮುಸ್ಲಿಮರಲ್ಲಿ ಕ್ಷೌರಿಕರಿಲ್ಲದಿದ್ದುದರಿಂದ ವಸಗಳೇ ಈ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಹಾಗಾಗಿ ವಸಗಳನ್ನು ಪರಿಕ್ಷೌರಿಕರಂತೆ ಗಣಿಸಲಾಗುತ್ತಿತ್ತು. ಬ್ಯಾರಿಗಳು ಈ ವರ್ಗದ ಜನರನ್ನು ಇಲ್ಲಮ್ ಗುಂಪಿಗೆ ಸೇರದವರೆಂದು ಪರಿಗಣಿಸಿದರು. ಇಸ್ಲಾಂನಲ್ಲಿ ಧರ್ಮದಿಂದ ಬಹಿಷ್ಕಾರಕ್ಕೊಳಗಾದ ಜನವರ್ಗವನ್ನು ಸಾಮಾನ್ಯವಾಗಿ ಅಪರಾಧಿಗಳೆಂದೇ ಪರಿಗಣಿಸಲಾಗುತ್ತಿತ್ತು. ಇಸ್ಲಾಂನಲ್ಲಿ ಧರ್ಮದಿಂದ ಬಹಿಷ್ಕರಿಸಲ್ಪಟ್ಟವರು ಎಂಬ ಕಲ್ಪನೆ ಇಲ್ಲ. ಅತ್ಯಾಚಾರ,

ವ್ಯಭಿಚಾರ, ಮಾನಭಂಗದಂತಹ ಗುರುತರ ಅಪರಾಧವೆಸೆಗಿದವರಿಗೆ ಮರಣ ದಂಡನೆ ವಿಧಿಸುತ್ತದೆ. ಆದರೆ ಭಾರತೀಯ ಕಾನೂನಿನಲ್ಲಿ ಇದಕ್ಕೆ ಅನುಮತಿಯಿಲ್ಲ. ಅಂತಹ ಜನರಿಗೆ ಬ್ಯಾರಿ ಜನಾಂಗದಲ್ಲಿ ಯಾವುದೇ ಸ್ಥಾನವಿಲ್ಲ.

'ತಾಲ ಇಲ್ಲಾತೋರು' ಎಂಬುದು ಒಂದು ಭಿನ್ನ ವರ್ಗವಾಗಿದ್ದು, ಇವರು ಇಸ್ಲಾಂ ನೀಡಿದ ಎಲ್ಲಾ ಹಕ್ಕುಗಳನ್ನು ಪಡೆದಿದ್ದರು. ಆದರೆ ಇವರು ತಾಲಕ್ಕಾರ್‌ಗೆ ಸಮಾನರಾದವರಾಗಿರಲಿಲ್ಲ. ಇದು ಧಾರ್ಮಿಕ ವಿಂಗಡನೆಯಾಗಿರದೆ ಸಾಮಾಜಿಕ ವ್ಯವಸ್ಥೆಯ ಆಧಾರದಲ್ಲಿ ಉಂಟಾದ ಭಿನ್ನತೆಯಾಗಿದೆ. 20ನೇ ಶತಮಾನದಲ್ಲಿ ಈ ಇಲ್ಲಮ್ ಪದ್ಧತಿಯು ಯಾವುದೇ ಮಹತ್ವವನ್ನು ಪಡೆಯದೆ ನಗಣ್ಯವಾಗಿ ಪರಿಣಮಿಸಿತು. ಬ್ಯಾರಿಗಳ ಪ್ರಭಾವ, ಹೊಸ ಚಳುವಳಿಗಳು, ಶೈಕ್ಷಣಿಕ ಬೆಳವಣಿಗೆಯು ಈ ಇಲ್ಲಮ್ ವ್ಯವಸ್ಥೆಯನ್ನು ಇಲ್ಲವಾಗಿಸಿತು. ಈ ಪದ್ಧತಿ ನಿರ್ಮೂಲನೆಗೊಂಡಿದ್ದ ರಿಂದ ಇಲ್ಲಮ್‌ಗೆ ಹೊರತಾದ ಪಂಗಡಗಳಿಗೂ ಸಾಮಾಜಿಕ ಮನ್ನಣೆ ದೊರೆತು ಸಾಮಾಜಿಕ ಅಸಮತೋಲನ ನಿವಾರಣೆಯಾಯಿತು.

**ಸಂದರ್ಶನ ಮೂಲಕ ಸಂಪರ್ಕಿಸಲಾದ ವ್ಯಕ್ತಿಗಳು**

ಪ್ರೊ: ಬಿ. ಎಂ. ಇಚ್ಲಂಗೋಡು
ಮಹಮ್ಮದ್ ಬಡ್ಡೂರು
ರಫೀಕ್ ಮೌಲವಿ ಕಡಾಬು
ಸಿದ್ದೀಕ್ ಅಬ್ದುಲ್ ಖಾದರ್
ಸಂಶುದ್ದೀನ್ ಅಶ್ರಫಿ ಮಾಚಾರ್

**ಆಕರ ಗ್ರಂಥಗಳು**

ದಿ. ಬ್ಯಾರೀಸ್ ಆಫ್ ತುಳುನಾಡು –ಪ್ರೊ: ಬಿ. ಎಂ. ಇಚ್ಲಂಗೋಡು
ನಂಡೊ ರಾಯ ನಂಡೊ ಸಂಸ್ಕೃತಿ –ಟಿ. ಎ. ಆಲಿಯಬ್ಬ ಜೋಕಟ್ಟೆ.

* * *

# ಬ್ಯಾರಿ ಜನಾಂಗತ್ತೊ ಉಗಮ, ಚರಿತ್ರೆ ಪಿನ್ನೆ ಸಂಸ್ಕೃತಿರೊ ಬೆಳೆಚೆಲ್, ತುಳು, ಜೈನ ಇಜಂತೊ ಸಾಂಸ್ಕೃತಿಕ ಪ್ರಭಾವ, ಸಂಸ್ಕೃತಿರೊ ವೈಶಿಷ್ಟ್ಯಜ ಪಿನ್ನೆ ಭವಿಷ್ಯ


**ಸಲೀನ ಭಾನು ಬಿ.ಎ.**

ಎಂ.ಎ. ವಿದ್ಯಾರ್ಥಿನಿ

ಆಳ್ವಾಸ್ ಕಾಲೇಜು, ಮೂಡುಬಿದಿರೆ

# ಬ್ಯಾರಿ ಸಂಸ್ಕೃತಿ ಪಿನ್ನೆ  ಬ್ಯಾರಿ ಜನಾಂಗ

ದಕ್ಷಿಣಕನ್ನಡ ಜಿಲ್ಲೆಲ್  ಬ್ಯಾರಿ ಜನಾಂಗ ಚೆಲ್ದೆದ್ ಸಾಂಸ್ಕೃತಿಕಮಾಯಿಟ್ಟ್ ಒರು ವಿಶಿಷ್ಟ ಪಂಗಡಮಾಯಿಟ್ಟ್ ಇದ ತಂಡೋದೆ ಆಯೋ ಇತಿಹಾಸ ಪರಂಪರೆಡೊ ಬಲ್ಚೋಂಟುರು. ಇಂಡ್ ದಕ್ಷಿಣ ಕನ್ನಡ ಜಿಲ್ಲೆಲ್ ಒಟ್ಟು ಮುಸ್ಲಿಂ ಜನಸಂಖ್ಯೆರೊ ಶೇ. 80ರತ್ತರೆ ಭಾಗತ್ತ್ಲ್ ಬ್ಯಾರಿಂಜ ಉಲ್ಲಾರ್, ಜಿಲ್ಲೆರೊ ಮುಟ್ಟ ಮುಟ್ಟತ್ತೊ ಜಿಲ್ಲೆಜಲಾಯೋ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಉತ್ತರ ಕನ್ನಡತ್ತ್ ಲೆಲ್ಲ ಇದ್ರೋ ಪ್ರಭಾವ ಫಸರಿಸಿರ್. ಅದಲ್ಲಾಂಟ್ ಮುಂಬೈ, ಗೋವಾ ಪಿನ್ನೆ ಕೊಲ್ಲಿ ರಾಷ್ಟ್ರತ್ತ್ಲ್ಮ್, ಇದ್ ಪಸರಿಯೋಂಟ್ ವಿವಿಧ್ ಕ್ಷೇತ್ರತ್ತ್ಲ್ ತಂಡದೇ ಆಯೋ ಪರಿಣಿತಿರೋ ಕೊಂಡು ಚಮ್ಮೆ ಪ್ರಮಾಣತ್ತ್ಲ್ ದೇಶತ್ತೋ ಪುನರ್ ನಿರ್ಮಾಣ ಪಿನ್ನೆ ಅಭಿವೃದ್ಧಿಗ್ ಕೊಡುಗೆರೋ ಕೊಡ್ತೋಂಟುಂಡು.

## ಬ್ಯಾರಿಜ ಚೆನ್ನೆಂಗ್ ಆರ್?

ಕರ್ನಾಟಕತ್ತೋ ದಕ್ಷಿಣಕನ್ನಡ ಜಿಲ್ಲೆ, ಕೇರಳದ ಕಾಸರಗೋಡುರೋ ಉಲ್ಲ್ರೋ ಬೈಂದೂರ್ಡೋ ಪಿಡ್ಚಿಟ್ಟ್ ಕಾಸರಗೋಡು ತೋಲೊ ಪಂಡತ್ತೋ ತುಳುನಾಡ್ ಚೆಲ್ಡೋ ಪ್ರದೇಶತ್ತ್ಲ್ ಬೆಲಜ್ಜಿ ಬನ್ನೋ ಮುಸ್ಲಿಮ್ರಜಲೆ "ಬ್ಯಾರಿ" ಚೆನ್ನ್ಟ್ಟ್ ಪೇರ್ ಬಿಲಿಕ್ಡಾರ್.

ಪತ್ತೋಲಿಂಬೋ ಶತಮಾನತ್ತೋ ಕಾಲತೋಲೊ ಅಜಲೋ ಪೇರ್ರೋ ಮುನ್ನೊಲು 'ಬ್ಯಾರಿ' ಚೆಲ್ಡೋ ಪದತ್ತೋ ಹೆಮ್ಮೆಲ್, ಗೌರವತ್ತ್ಲ್ ಪದ ಆಯಿಟ್ಟ್ ಬಳಕೆ ಆಕ್ಯೋಂಟಿನ್ನೋ ಬ್ಯಾರಿಜಲೆ ಇತಿಹಾಸತ್ತೋ. ಹಿನ್ನಲೆರೋ ತೆರಿಯಾತೋ, ಎಲ್ತ್ಗಾರ್ಮಾರ್, ಇತಿಹಾಸಗಾರಮ್ಮಾರ್ ಮಲಬಾರ್ರೋ ಮಾಪ್ಲಾ ಚೆನ್ನ್ಟ್ಟೇ ಎಲ್ದಿಯೋ ಉಲ್ಲಾರ್.

ಕರಾವಳಿಯ ಮುಸ್ಲಿಮ್ ಜನಾಂಗತ್ತ್ಲ್, ಪಂಡತ್ತೋ ಕಾಲತ್ತ್ಲೇ ಶೇಕಡಾ ತೊನ್ನೂತಿ ಅಂಜಿ ರತ್ತರೆ 'ಬಾನ್ಯತ್ತೆಮೇ ತಂಡೋ ಕಸೂಬಾಯಿಟ್ಟೇ  ಆಕಿಯೋಂಟು ಬನ್ನೊ ಈ ವರ್ಗತ್ತ್ರೆ ಊಡೆತ್ತೊ ಆಲ್ಮಾರ್ 'ಬ್ಯಾರಿ' ಚೆಂತ್ ಬಿಲ್ಚಾರ್. ಈ ಬ್ಯಾರಿ ಚೆಲ್ಡೋ ಪದ ತುಳು ಪದ ಆಯಿಟಿಕ್ಕ್ರ್. ಬಾನ್ಯತ್ತ್ಗ್ ತುಳು ಭಾಸೆಲ್ 'ಬ್ಯಾರ' ಚೆನ್ನೆಟ್ಟ್, ಅದ್ರೋ ಕಸುಬು ಆಕ್ಯೋ ಆಲ್ಮಾರೋ 'ಬ್ಯಾರಿ' ಚೆನ್ನಟ್ಟ್ ಬಿಲಿಕೋಗಾವುರು. ಬ್ಯಾರಿ ಪದ ಮೂಲತ್ತೋ ಬಗ್ಗೆ ಎಲ್ಲಾ

ಚರಿತ್ರೆಕಾರಮಾರ್ ಒಮ್ಮತತ್ತೋ ಅಬಿಪ್ರಾಯ ತನ್ನ್ಂರಾರ್.

ಬ್ಯಾರಿಜ ಚೆನ್ನೆಂಗ್, ಸ್ಥಳೀಯಮಾಯಿಟ್ಟ್ ಅರಬ್ ಸಂಪರ್ಕತ್ತಲ್ ಉಂಡಾಯೋ ಸಮುದಾಯ ಚೆನ್ನ್ಟ್ಟ್ ಕೊರಿಯಾ ಎಲ್ತ್ಗಾರ್ ಒಪ್ಪುಡಾರ್.

ಇತಿಹಾಸಕಾರ ಆಯೋ ತಾರಾಚಂದ ಇಯಲೋ ಅಭಿಪ್ರಾಯತ್ತೋ ಪ್ರಕಾರ, ಪೋರ್ಚುಗೀಸಮ್ಮಾರ್ ಕರಾವಳಿಲ್ ಬಾನ್ಯ ಆಕ್ರೈಕ್ ಮುನ್ನೋಲು, ಚೆನ್ನೆಂಗ್ ಪೊವುನಾಲನೇ ಶತಮಾನತೋಲು ಅರಬ್ರಜಲೋ ಬಾನ್ಯ ನಿರಂತರ ನಡನ್ನೋ ಇಂತ್. ಅರಬಿಂಜ ಬಾನ್ಯ ಕಚ್ಚೋಡತ್ತ್ಗಾಯಿಟ್ಟ್ ಕರಾವಳಿತೋಲು ನೆಲೆ ನಿಂಡ್ನ್ನಾರ್. ಮುಟ್ಟತ್ತೋ ಪೆನ್ನಜ್ಜಲೋ ಮಂಜಿಲ ಆಯೋಂಟಿನ್ನಾರ್. ಅಜಲೋ ಸಂತಾನಜ. ಪಿನ್ನೆ ಮುಸ್ಲಿಂ ಆಯಿಟ್ಟ್ ಬೆಳೆಜ್ಜಾರ್. ಇಜನ್ತೊ ಆಲ್ಮಾರ್ ಕರಾವಳಿಳ್ ಸಾಮಾನ್ಯ ಮಾಯಿಟ್ಟ್ ಉಂಡು. ಇದ್ಲೇ ಮುಸ್ಲಿಂ ಜನಾಂಗ ಉಂಡಾಯಿರ್ ಚೆಲ್ಡೋ ಅಭಿಪ್ರಾಯ ಉಂಡ್.

ಒಲಿಂಬೋ ಪಿನ್ನೆ ಪತ್ತನೇ ಶತಮಾನತ್ತ್ಲ್ ಅರಬ್ ಎಲ್ತ್ಗಾರಮಾರ್ ಆಯೋ ಇಬ್ನು ಕುರ್ದದ್ಬಾ ಪಿನ್ನೆ ಹೌಕರ್ ಚೆಲ್ಡೋ ಎಲ್ತ್ಗಾರ್ ಅರಬ್ ಬಾನ್ಯ ಕಚ್ಚೋಡ ಬೆಲ್ಇಜ್ಞ್ನ ಬಗ್ಗೆ ಬಿಸಯತ್ತೋ ತೆರಿಪಾಟ್ರಾರ್.

ಇತಿಹಾಸತ್ತೋ ದಾಖಲೆರೋ ಪರಿಶೀಲನೆ ಆಕ್ಕೆಂಗ್ ಅರಬಿಂಜಲೋ ಬಾನ್ಯತ್ತೋ ಸಂಪರ್ಕ ಪಂಡತ್ತೋ ಕಾಲತ್ತ್ಲೇ ಇಂತ್, ಬಾರಕೂರು, ಮೈಕಾಲ, ಉಳ್ಳಾಲ, ಮಂಜೇಶ್ವರ ಪಿನ್ನೆ ಕಾಸರಗೋಡುತೋಲು ವ್ಯಾಪಾರ ಕೇಂದ್ರಮಾಯಿಟ್ಟ್, ಅವುಡೆಲ್ಲಾ ಮುಸ್ಲಿಂ ಸಮುದಾಯ ಬೆಳೆಜ್ಜಿರ್ ಚೆಲ್ಡೋ ಅಭಿಪ್ರಾಯತ್ತೋ ಗಣಪತಿರಾವ್ ಐಗಳ್ ತೆರಿಪಾಟ್ರ್.

### ಬ್ಯಾರಿ ಜನಾಂಗತ್ತೋ ಉಗಮ (ಬೆಲೆಚತ್) ಪಿನ್ನೆ ಇತಿಹಾಸ

ಬ್ಯಾರಿ ಜನಾಂಗತ್ತೋ ಉಗಮ ಚೆಲ್ಡೆದ್ ನಿಖರಮಾಯಿಟ್ಟ್ ದಾಖಲೆ ಆಯಿಟ್ಲೆ. ತುಳುನಾಡ್ರೊಟ್ಟಿಗೆ ಅರಬ್ ಕಚ್ಚೋಡತ್ತಜಲೋ ಸಂಪರ್ಕ ಚೆಲ್ಡೆದ್ ಒರು ಸಂತಾನ ಪಿನ್ನೆ ಸಮುದಾಯತ್ತ್ಗ್ ಜನ್ಮ ಕೊಡ್ತುರು ಚೆಲ್ಡೆದ್ ಆಯಿಟಿಕ್ಕ್ರ್. ಇಸ್ಲಾಮುಡೊ ಪ್ರವೇಶತ್ತೊಟ್ಟುಗು ಅಜಲೋ ಬಾನ್ಯ ಕಚ್ಚೋಡತ್ತೋ ಒಟ್ಟಿಗೆ ಅರಬಿಮ್ಮಾರ್ ದೀನ್ರೋಂ ಪ್ರಚಾರತ್ತ್ಗ್ ತೊಡಜಿನ್ನಾರ್. ಅಂಡತ್ತೋ ಕಾಲತ್ತ್ಲ್ ತುಳುನಾಡ್ಲ್ ಊಳಿಗಮಾನ್ಯ ಚೆಲ್ಡೋ ವ್ಯವಸ್ಥೆ ಇಂತ್ ಪಿನ್ನೆ ಜಾತಿ ಪದ್ಧತಿ ಯಾರಮಾಯಿಟ್ಟ್ ಇಂತ್. ಅರಬಿಮ್ಮಾರ್ ಅಜಲೋ ಪ್ರಾಮಾಣಿಕತೆ ಪಿನ್ನೆ ನಲ್ಲೋ ಶಿಸ್ತುಬದ್ಧ ಜೀವನಶೈಲಿರೋ ಮುಖಾಂತರ ಅವುಡ್ರೋ ಮುಟ್ಟತ್ತೋ

ಆಲ್‌ಮಾರೋ ಅಜಲಹರ ಬಲ್ಲೋಂಡ್ಡಾರ್. ಇದೇ ನಮಾಂತೊ ಅರಬಿಮ್ಮಾರೋ ಸಂಪರ್ಕತ್ತೊಟ್ಟಿಗೆ ಪಡ್‌ಇಾರ್ ಕರಾವಳಿಲ್ ನಮು–ನಮೂಂತೆ ಚಮ್ಮೆ ಜನಾಂಗಜ ಬೆಲೆಜಿತ್ತ್ ಮಲಬಾರ್, ಕೊಂಕಣಿ, ಕೋರಮಂಡಲ ತೀರತ್ತ್‌ಲ್ ಪೆತ್ತ್ ಬೆಳೆಜೋ ಜನಾಂಗಂಜ ಕ್ರಮೇಣ ಮಾಪಿಳ್ಳ, ನವಾಯತ್ ಪಿನ್ನೆ ಲಬ್ಬೆಯಿಜ ಚೆಲ್ಲೋ ಪೇರ್‌ಲ್ ಗುರುತಿಸ್ಯೋಂಟುಲ್ಲಾರ್.

ಅರಬಿಜಲೋ ಸಂಪರ್ಕತ್ತ್‌ಲಾಯಿಟ್ಟ್ ದಕ್ಷಿಣ ಕರಾವಳಿಳ್ ಪುದಿಯೋ ಜನಾಂಗಜ್ಜ ಉಂಡೈತ್ ಚೆಲ್ಲೋ ವಾದತ್ತೆ ತಾರಾ ಚಂದ್, ಥೋಮಸ್ ಅರ್ನಾಲ್ಡ್ ಸಾಲೆತ್ತೂರ್ ಪಿನ್ನೆ ಚಮ್ಮೆ ಎಲ್ತ್‌ಗಾರ್‌ಮಾರ್. ಬೆಂಬಲ ಆಕ್ಯೋಂಟುಲ್ಲಾರ್. ಇಜನೆ ಇಸ್ಲಾಮ್‌ಗ್ ಮತಾಂತರ ಆಯೋ ಆಲ್‌ಮಾರ್‌ಲ್ ಯಾರಜ ಕೀಳ್ ಜಾತಿಗ್ ಸೇರಿಯಜ ಆಯಿಟ್ಟಿನ್ನಾರ್ ಅಜ ಸ್ಥಳೀಯಮಾಯೋ ಜಾತಿ ನಂಬಿಕೆರೋ ಪಾಲಿಸ್ಯೋಂಟು ಬನ್ನಾರ್. ಆಯೆಂಗಾ ಇಜ ಬೇರೆ ಮುಟ್ಟತ್ತೋ ಆಲ್‌ಮಾರೊಟ್ಟುಗೆ ಅಜಲೋ ಸಂಬಂಧತ್ತೋ ಗಟ್ಟಿ ಆಕ್ಯೋಂಟೇ ಪೋಯೊರ್ ಪಾಡ್ದನತ್ತ್‌ತ್ ಜಂಡ್ ನಮೂಂತೆ ಗುಂಪ್‌ಗ್ ಸೇರಿಯೋ ಬ್ಯಾರಿಜಲೋ ಉಲ್ಲೇಖ ಉಂಡು. ಜಾತಿ–ನೀತಿ ಬ್ಯಾರಿಜ ಪಿನ್ನೆ ಜಾತಿ ಕೆಟ್ಟೊ ಬ್ಯಾರಿಜ. ಜಾತಿ ನೀತಿ ಬ್ಯಾರಿಜೊಗು ಸ್ಥಳೀಯ ಆಲ್‌ಮಾರೊ ದೃಷ್ಟಿಲ್ ಯಾರತ್ತೋ ಗೌರವ ಇಂತ್. ಪಿನ್ನೆ ಅಜ ಇಸ್ಲಾಂಡೋ ನಂಬಿಕೆ ಪಿನ್ನೆ ಶಿಸ್ತುರೊ ಪಾಲಿಸ್ಯೋಂಟು ಬನ್ನಾರ್.

1891ರೊ ಸೆನ್ಸಸ್ ಪ್ರಕಾರತ್ತ್‌ಲ್ ಜಿಲ್ಲೆರೋ 95,000 ಬಾನ್ಯ ಕಚ್ಚೋಡಕ್ಕಾರತ್ 90,345 ಆಲ್ ಮಾಪಿಳ್ಳೆ ಬ್ಯಾರಿಜ ಪಿನ್ನೆ 2104 ನವಾಯಿತಮಾರ್ ಇನ್ನಾರ್. ಇದ್‌ಲಾಯಿಟ್ಟ್, ಬ್ಯಾರಿಜ ವ್ಯಾಪಾರಿಜಂಟೇ ಗುರುತಿಸ್ಯೋಂಡ್‌ರಾರ್. ಬಾನ್ಯ ಚೆಲ್ದೆದ್ ಧಾರ್ಮಿಕಮಾಯಿಟ್ಟ್ ಆಕಿಯೋಂಟು ಬನ್ನೋ ಕಸುಬಾಯಿಟಿಕ್ಕ್‌ರ್. ಅಜನೇಯಿಟ್ಟ್, ಪಂಡತ್ತೋ ಕಾಲತ್ತೋ ಪಿಡ್ಡಿಟ್ಟ್ ಬ್ಯಾರಿಜ ಪ್ರತ್ಯೇಕಮಾಯಿಟ್ಟ್ ಬೆಳಇಗ್ಲೊಬನ್ನೋ ಒರು ಜನ ಸಮುದಾಯ ಆಯಿಟಿಕ್ಕ್‌ರ್.

ಬ್ಯಾರಿಜಲೋ ಇತಿಹಾಸ ಪಿನ್ನೆ ಸಂಸ್ಕೃತಿರೋ ಬಗ್ಗೆ ತುಳು ಪಾಡ್ದನಜ ತೆರಿ ಪಾಟ್ಯೋಂಟುಂಡು. ಬೊಬ್ಬಯ್ಯ ಪಾಡ್ದನ, ಮೈಸಂದಾಯ ಪಾಡ್ದನ, ಪಿನ್ನೆ ಚಮ್ಮೆ ನಮೂಂತೆ ಪಾಡ್ದನತ್ತ್‌ಲ್ ಬ್ಯಾರಿಜಲೋ ಬಗ್ಗೆ ಉಲ್ಲೇಖ ಉಂಡು. ಬ್ಯಾರಿಜಲ್ಲ್ ಜಾತಿ ನೀತಿ ಬ್ಯಾರಿಜ. ಸೆಟ್ಟಿಬ್ಯಾರಿಜ ಚೆಲ್ಲೋ ಜಂಡ್ ನಮೂಂತೆ ವರ್ಗ ಉಂಡು, ಧಾರ್ಮಿಕ ರೀತಿ ನೀತಿಲ್ ಪಾಲನೆ ಆಕ್ಯೋಂಟು ಬನ್ನೋ ಜಾತಿ ಬ್ಯಾರಿಜಲೋ ಎಲ್ಲಾ ಜಾತಿರೋ ಆಲ್‌ಮಾರ್ ಗೌರವ ಆಕ್ಯೋಂಟುಲ್ಲಾರ್ ಚೆನ್ನ್‌ಟ್ಟ್ ಪಾಡ್ದಣಇ ತೆರಿಪಾಟ್ಯೋಂಟುಂಡು.

ಬ್ಯಾರಿಜ ಮಲಬಾರ್‌ಡೊ ವಲಸೆ ಬನ್ನಜ ಅಲ್ಲ. ದಾರ್ಮಿಕಮಾಯಿಟ್ಟ್ ಮಾತ್ರ ಮಲಬಾರ್‌ಡೊ ಪ್ರಭಾವ ಅಜಲೊ ಮೇಲಾಯಿರ್. ಅದಲ್ಲಾಂಟ್, ಜನವಾಸತ್ತೋ ಮೂಲ ತುಳುನಾಡ್‌ರೊಮೆ ತೊಡಜಿರ್ ಚೆಲ್ದೆದ್ ಸುಸ್ಪಶ್ಟ ಆಯಿಟಿಕ್ಕ್‌ರ್. ಬ್ಯಾರಿ ಚೆಲ್ದೆದ್ ಒರು ಗೌರವ ಸೂಚಕ ಪದ ಆಯಿಟಿಂತ್‌ಂಟ್ ಚೆಲ್ದೆದ್ ಸುರೂಕು ಸರ್ವೇ ಆಕುಂಬೋ ದಾಖಲೆಯಾಯಿರ್. ಕೌಚ್‌ಮೆನ್ ಸರ್ವೆ ಪಿನ್ನೆ ಸೆಟ್ಲ್‌ಮೆಂಟ್ ದಾಖಲೆ ಬೂಕ್‌ಲ್ ಬ್ಯಾರಿಜ ಪಿನ್ನೆ ಬ್ಯಾರಿ ಪದತ್ತ್‌ಗ್ ಉಲ್ಲೊ ಗೌರವತೆಜ ನೋಕೊಗಾವುರು.

ಅದಲ್ಲಾಂಟ್ ಇಸ್ಲಾಂ ಕರಾವಳಿಲ್ ಪ್ರಚಾರ ಆವುರೋ ಮುನ್ನೊಲೇ ಅರಬ್ಬಿಮ್ಮಾರೋ ಸಂಪರ್ಕತ್ತ್‌ಲಾಯಿಟ್ಟ್ ಬೆಳೆಇನ್ನೊ ಆಲ್‌ಮಾರೆ ಸಾಬಿ ಮಾರ್‌ಂಟ್ ಬಿಲಿಚ್ಚೋ ಇನ್ನೋ ಬಗ್ಗೆ ಚಮ್ಮೆ ಆಲ್ ಅಭಿಪ್ರಾಯ ಚೆಲ್ದಾರ್. ಸಾಬಿಚೆಲ್ದೆದ್ ಸಬಿಯಮ್ಮಾರ್ ಚೆಲ್ದೋ ಪಲಕತ್ತೋ ಸೂಚನೆ ಆಕ್‌ರ್. ಇಸ್ಲಾಮುಗು ಮುನ್ನೊಲು ದೀನ್‌ರೊ ಆಚಾರಜಲೋ ಸಬಿಯಮ್ಮಾರೋ ದೀನ್ ಚೆನ್ನೊಟ್ಟ್ ಬಿಲ್ದೋ ಇನ್ನಾರ್. ಅಜಲೋ ಸಾಬಿಂಟ್ ಬಿಲ್ದೋ ಬಗ್ಗೆ ಬೈಬಲ್ ಪಿನ್ನೆ ಪಾಶ್ಚಾತ್ಯ ಸಾಹಿತ್ಯತ್ತ್‌ಲೆಲ್ಲಾ ಉಲ್ಲೇಖ ಉಂಡು.

ಇನ್ನೊ ಅರಬ್ಬಿಮಾರೋ ಸಂಪರ್ಕತ್ತ್‌ಲಾಯಿಟ್ಟ್ ಇಸ್ಲಾಂ ಧರ್ಮತ್ತೆ ಅನುಸರಿಚೋ ಇನ್ನೋ ಕರಾವಳಿರೋ ಆಲ್‌ಮಾರೋ ಬ್ಯಾರಿಂಟ್ ಬಿಲೆಚಾರ್. ಇಸ್ಲಾಂ ದೀನ್ ಕ್ರಿ.ಶ. 570ಲ್ ಪಿನ್ನೆ ಪ್ರಚಾರ ಆಯಿತ್. ಅರಬ್ಬಿಮಾರೋ ಸಂಪರ್ಕ ಸುರೂಡೆ ಶತಮಾನತ್ತ್‌ಲ್ ಪಿನ್ನೆ ಇಂತ್ ಚೆಲ್ದೆದ್‌ರೋ ಎಲ್ತ್‌ಗಾರಮಾರ್ ಅದ್‌ರ ಬಗ್ಗೆ ಎಲ್ದ್‌ರಾರ್. ಅನರ್ತಸೀಡ್‌ರೋ ಕಾಲತ್ತ್‌ಲೇ ಅರಬಿ ಬಾನ್ಯ ಕಚ್ಚೋಡ ಇಂತ್ ಚೆಲ್ದೆದ್‌ರೋ ರೈನಾರ್ಡ್ ಎಲ್ದ್‌ರ. ಇಜ್ಜನೆ ಇಕ್ಕುಂಬೋ ಕರಾವಳಿರೋ ಅರಬಿ ಸಂಪರ್ಕ ಇಸ್ಲಾಂ ಪ್ರಚಾರತ್ತೋ ಮುನ್ನೊಲೊ ಕಾಲತ್ತ್‌ಲೇ ಇಂತ್. ಅಜಲೋ ಸಂತಾನಜ ಇಂತ್. ಅಞ ಅರಬಿ ದೀನ್‌ರೋ ಅವಲಂಬಿಸಿಯೋಂಟಿನ್ನಾರ್. ಇಸ್ಲಾಮ್ ದೀನ್ ಪ್ರಚಾರ ಆಯೋಲ್ ಪಿನ್ನೆ ಅರಬಿಮಾರ್ ಮುಸ್ಲಿಂ ಆಯಾರ್. ಅಜಲೋ ಸಂಪರ್ಕತ್ತ್‌ಲ್ ಬೆಳೆಞಗ ಮುಸ್ಲಿಂ ಆಯಾರ್. ಬ್ಯಾರಿ ಪದ ಚೆಲ್ದೆದ್ ಧರ್ಮಾಧಾರಿತ ಅಲ್ಲ, ಅದೊರು ಕಚ್ಚೋಡ ಕಲ್ಪಿತ ಪದ ಆಯಡ್ ಕೊಂಟುಟ್ಟು, ಕರಾವಳಿರೋ ಮುಸ್ಲಿಂರಜ ಎಲ್ಲಾ ಬ್ಯಾರಿ ಆವೊನೂಂಟು ಎಂದುಂಮಿಲ್ಲೇ. ಶೇ. 95ರತ್ತರೆ ಮುಸ್ಲಿಂರಜ ಬಾನ್ಯತ್ತೆಮೇ ಅಜಲೋ ನೇರಾಯೋ ಕಸುಬು ಆಕ್ಯೋಂಡದಲ್ಲಾಯಿಟ್ಟ್ ಸಾಮಾನ್ಯಮಾಯಿಟ್ಟ್ ಅಜೊಗು ಬ್ಯಾರಿಂಟ್ ಚೆಲ್ದೊ ಪೈರ್ ಅನ್ವಯ ಆವುರು. ಬಾಸೆ, ಸಂಸ್ಕೃತಿಲ್

ಸಾಮಾನ್ಯಮಾಯಿಟ್ಟ್ ಇನ್ನೋ ಇಲ್ಲಂ ಪದ್ಧತಿಮ್ ಬ್ಯಾರಿಜಲ್ಲ್ ಉಂಡು. ಬ್ಯಾರಿಜಯೆಲ್ಲಾ ಒರೇ ಜಾತಿ, ಸಂಸ್ಕೃತಿರೋ ಆಚರಣೆ ಆಕೋನೂಂಟು ಚೆಲ್ಡೋ ನಿಯಮ ಬ್ಯಾರಿ ಸಂಸ್ಕೃತಿಲಿಲ್ಲೆ. ಬಾಸೆ, ಆಚಾರ, ಕಸುಬು, ಬ್ಯಾರಿ ಸಂಸ್ಕೃತಿರೊ ವೈಶಿಷ್ಟ ಆಯಿಟ್ಟಿಕ್ಕ್ಕೆರ್.

## ಬ್ಯಾರಿ ಮುಸ್ಲಿಂ ಜನಾಂಗತ್ತೊ ಅಧ್ಯಯನತ್ತೊ ಕೊರಿಯ ಆಕರಜ

### 1. ಶಾಸನತ್ತ್ಲ್

ಕರಾವಳಿರೋ ಕರ್ನಾಟಕತ್ತ್ಲ್ ಮುಸ್ಲಿಂದೀನ್‌ರೊ ಏಳಿಗೆ ಏಲನೇ ನೂತ್ಯಾಂಡ್‌ರೊ ನಡುಲು ಆರಂಭ ಆಯಿತ್. ಇಜಲೋ ಅಪ್ಪತ್ತೋ ನೇದಾವು ಮಾಲಿಕ್ ದೀನಾರ್. ಇಯಲ್ ಹಿಜಿರ 22 ಇಸ್ಲಾಂ ಮಾಸತ್ತೋ ಶಾಭಾನ್ 13 ತಿಂಗಳ್ಯಾಸೆರಂಡ್ ಕಾಸರಗೋಡ್‌ಲ್ ಪಲ್ಲಿ ಕೆಟ್ಟ್ ಬಾಟಿತ್ತ್. ಇದ್‌ರೋ ಬಗ್ಗೆ. ಕೊರಿಯ ಶಾಸನಜ ಕಾಸರಗೋಡುರೋ ತಳಂಗೆರೆಲ್ ಜಾಮಿಯ ಪಲ್ಲಿರೊ ಮುಟ್ಟತ್ತ್‌ಲ್ ಕಿಟ್ಟಿತ್ತ್. ಇದ್ ಅರೇಬಿಕ್ ಶಾಸನ. ಆಯಿಟ್ಟಿಂತ್. 1990ಲ್ ಖ್ವಾಜ ಜಿ. ಎಸ್. ಚೆಲ್ಡಯಲ್ ಈ ಶಾಸನತ್ತೆ ಪರ್ತ್‌ಕ್ವಾಂತ್ ಈ ಶಾಸನತ್ತೋ ಮುಖ್ಯಮಾಯೋ ಬಿಸಯ ಚೆನ್ನೆಂಗ್ ತುಳುನಾಡ್‌ರೋ ಕಾಸರಗೋಡ್‌ಲು ಇಸ್ಲಾಂ ದೀನ್ ಏದೊರು ರೀತಿಲ್ ಒತ್ತಾಯ ಇಲ್ಲಾಂಟೆ ಶಾಂತ ರೀತಿಲ್ ತಂಡೋ ಪ್ರಗತಿರೊ ಮುನ್ನೊಲು ಕಾಟಿತ್ತ್ ಇದಲ್ಲಾಂಟ್ ಕಾಸರಗೋಡು, ವ್ಯಾಪಾರ ಕೇಂದ್ರತ್ತೊಟ್ಟಿಗೆ ಒನ್ನಾಯಿಟ್ಟ್ ಅರಬ್ಬಿಮ್ಮಾರೋ ಸಂಪರ್ಕತ್ತೋ ಬೆಳೆಪಾಟಿತ್ತ್. ಈ ಶಾಸನತ್ತ್‌ಲ್ ಪಿನ್ನೆ ಕರಾವಳಿ ಕರ್ನಾಟಕತ್ತೋ ಮುಸ್ಲಿಂ ಜನಾಂಗತ್ತೋ ಏಲ್ಚೆರೆ ನಜ ನ್ಗೋಕುರ.

ಶಾಸನತ್ತ್‌ಲ್ ಬ್ಯಾರಿ ಸಂಸ್ಕೃತಿರೋ ಮುಸ್ಲಿಂರಜ ಹಂಜುಮಾನ ಚೆಲ್ಡೋ ಬಾನ್ಯ ಸಂಘತ್ತೊಟ್ಟಿಗೆ ತಂಡೋ ಒಗ್ಗಟ್ಟ್‌ರೆ ಕಾಟ್‌ರ್. ಉದಾ: ಮೈಕಾಲ್ತೋ 1421ರೋ ಶಾಸನತ್ತ್‌ಲ್ ಹಂಜಮಾನ್ ಮುಸ್ಲಿಂರಂಕ್ ಎದುರಾಯೋ ಸಂಕಷ್ಟತ್ತೋ ವಿಜಯನಗರತ್ತೋ ಅಂಡ್ರತ್ತೋ ದೊರೆ ಅದ್‌ರೆ ಪರಿಹಾರ ಆಕಿಟ್ಟ್ ಅಂಕ್ ಎತ್ತೊನಾಯೋ ಮಾನ್ಯರಿಜಲೋ ಮರುಸ್ಥಾಪನೆ ಆಕಿಯದ್‌ರೆ ತೆರಿಪಾಟ್‌ರ್. (South Indian inscriptions VII, 1821) ಇದೇ ಪೋಲೆ ಉಳ್ಳಾಲತ್ತೊ ಹನುಮಂತ ದೇವಾಲಯತ್ತೋ ಪರ್ತ್‌ಲ್ ಉಲ್ಲೋ ಶಾಸನತ್ತ್‌ಲ್ ಹಂಜಮಾನ ಬ್ಯಾರಿಜಲೊಗು ಮೈಕಾಲ್ತೋ ವಿಜಯನಗರತ್ತೋ ರಾಜ್ಯಪಾಲ ವೀರರಸ ದೊರೆ ಚೆಲ್ಡವುನು ದಾನ ಆಕ್ಯೊಂಟಿನ್ನ ಚೆಲ್ಡದ್‌ರೊ ಬಗ್ಗೆ ಉಲ್ಲೇಖ ಉಂಡು. ಇದ್‌ರೋ

ಕಾಲ ಶಕ 1396, ಬಾರಕೂರ್‌ಡೋ ಕ್ರಿ.ಶ. 1568ರೋ ಶಾಸನ ಹಮ್ಮು ಬ್ಯಾರಿ ಭೂದಾನ ಆಕಿಟ್ಟ್ ನಲ್ಲೊ ಪೇರ್ ಎಡ್ತದ್‌ರೋ ಬಿಸಯ ತೆರಿಪಾಟ್‌ರ್.

**ಕಡತತ್ತ್‌ಲ್ ಬ್ಯಾರಿ ಸಮುದಾಯ**

ಕರ್ಪು ತುನಿರೊ ಮೇಲೆ ಸೀಸತ್ತೋ ಕಡ್ಡಿಲ್ ಎಲ್ದಿಯೋ ದಾಖಲೆ ಒರು ಪ್ರಮುಖವಾಯೋ ಸ್ವದೇಶೀ ದಾಖಲೆ ಪತ್ರ ಆಯಿಟ್ಟಿಕ್ಕ್‌ರ್. ಇದ್‌ರೊ ನಜ ಕಡತ ಚೆನ್ನ್‌ಟ್ ಬಿಲಿಕ್‌ರ. ಇಜಂತೋ ಕಡತತ್ತ್‌ಲ್ ಬ್ಯಾರಿಜ ಕಚ್ಚೋಡಕ್ಕಾರ್ ಮಾರಯಿಟ್ಟ್, ಕೊರಿಯ ಸಂದರ್ಭತ್ತ್‌ಲ್ ಕಪ್ಪೋಲು ನಡೆಪಾಟ್‌ರೊ ಅಧಿಕಾರಿಯಾಯಿಟ್ಟ್ ಕಾಂಡೊಂಟ್ ಉಲ್ಲಾರ್. ಹಲಸನಾಡು ದಾಖಲೆಲ್ ಬ್ಯಾರಿಜ ಬಾನ್ಯಕಾರಾಯಿಟ್ಟ್ ಕಾಂಡಾರ್. ಈ ಬ್ಯಾರಿಜ ಕಾಸರಗೋಡು, ಮಂಜೇಶ್ವರ ಪಿನ್ನೆ ಮೈಕಾಲತ್ತ್‌ಗ್ ಬನ್ನ್‌ಟ್ಟ್ ಬಸ್ರೂರು ಚೆಲ್ಡೋ ಜಾಗೆಲ್ ಬಾನ್ಯ ಆಕ್ಯೋಂಟಿನ್ನಾರ್ ಚೆಂತ್ ಈ ದಾಖಲೆಲ್ ಉಲ್ಲೇಖ ಆಯಿರ್. ಮಂಜೇಶ್ವರತ್ತ್‌ಲ್ ಕಿಟ್ಟಿಯೊ ಕ್ರಿ. ಶ.1704 ರೋ ಕಡತತ್ತ್‌ಲ್ ಪೋಕಚು ಬ್ಯಾರಿ ಕೆಳದಿ ಅರಸಮ್ಮಾರೋ ಸೈನ್ಯತ್ತೋ ನೇದಾವು ಚೆಲ್ಡದ್‌ರೆ ತೆರಿಪಾಟ್‌ರ್.

**ವಿದೇಶಿ ಎಲ್ ಪಿನ್ನೆ ದಾಖಲೆಂಜತ್ತ್‌ಲ್**

13ನೇ ನೂತ್ಯಾಂಡ್‌ಲ್ ಬನ್ನೊ ಮಾರ್ಕೊ ಪೋಲೊ ಚೆಲ್ಡವುನು ಮೈಕಾಲ್ತ್‌ಲ್ ಮುಸ್ಲಿಂ ಕಚ್ಚೋಡಕ್ಕಾರ್‌ಮಾರ್ ಯಾರ ಆಲ್ ಉಲ್ಲಾರ್. ಅಜ್ಜ ಅಜಲದೇ ಆಯೋ ಬಾಸೆ ಪಲಕ ಬರಿಡಾರ್. ಇಜ ಚೀನಾತೊಟ್ಟುಗು ಬಾನ್ಯ ನಡೆಪಾಟ್ಯೋಂಟುಲ್ಲಾರ್. ಚೆನ್ನ್‌ಟ್ಟ್ ಎಲ್ದ್‌ರ. ವಿದೇಶಿ ಪ್ರವಾಸಿಯಾಯೊ ಇಬ್ಬಬಟೂಟ ಚೆಲ್ಡವುನು ಮೈಕಾಲ್ತ್‌ಲ್ ಮುಸ್ಲಿಂ ವಲಸೆ ಇಂತ್‌ಂಟ್ ಪಿನ್ನೆ ಅಜಲೊ ಬಾನ್ಯತ್ತೋ ಬಿಸಯತ್ತೋ ತೆರಿಪಾಟ್‌ರ. ಇಂಕುಮ್ ಪಿನ್ನೆ ಮುಟ್ಟತ್ತೋ ಜನಾಂಗತ್ತಂಕ್ ಅಪ್ಪಪ್ಪ ಲಡಾಯಿ ಆಯೊಂಟು ಇಂತ್‌ಂಟ್ ಚೆಲ್ಡ. ಪಿನ್ನೆ ಮೈಕಾಲ್ತೊ ರಾಜರಾಮದೇವ ಚೆಲ್ಡವುನು ಸಮಾಧಾನ ಆಕ್ಯೋಂಟಿನ್ನ. ಎಂದಿಗ್ ಚೆನ್ನೆಂಗ್ ರಾಜರಾಮದೇವರೋ ಬಾನ್ಯ ಅವುಡ್ರೋ ಮುಸ್ಲಿಂ ಬಾನ್ಯಕ್ಕಾರೊಟ್ಟುಗು ಯಾರ ನಡನ್ನೋ ಇಂತ್. ಈ ಮುಸ್ಲಿಂ ಬಾನ್ಯಕ್ಕಾರ್ ಪಾರ್ಸ್ ಪಿನ್ನೆ ಎಮೆನ್ ರಾಜ್ಯತ್ತಜಲೊಟ್ಟಿಗು ಚಮ್ಮೆ ನಮೂಂತೆ ಬಾನ್ಯ ನಡೆ ಪಾಟ್ಯೋಂಡಿನ್ನಾರ್. ಅದಲ್ಲಾಂಟ್ ಮೈಕಾಲ್ತ್‌ಲ್ ಮುಸ್ಲಿಂ ವರ್ತಕ್ಕಮ್ಮಾರೋ ವರ್ಚಸ್ಸ್ ಇಂತ್‌ಂಟ್ 1510ಲ್ ಬನ್ನೊ ಬರ್ಬೋಸ ತೆರಿಪಾಟ್‌ರ.

ಕ್ರಿ. ಶ. 1623ಲ್ ಮೈಕಾಲ್ತ್‌ಗ್ ಬನ್ನೊ ಪ್ರವಾಸಿ ಡೆಲ್ಲಾವೆಲ್ಲಿ ಚೆಲ್ಡವುನು ತಂಡೊ ವರದಿಲ್ ಮೂಸಾಬ್ಯಾರಿಡೊ ಬಿಸಯ ತೆರಿಪಾಟ್‌ರ. ಓನು ಬಂಗರಾಜಲೋ ನೌಕಾದಳಪತಿಯಾಯಿಟ್ಟ್, ಕೆಳದಿರೊ ವೆಂಕಟ್ಟಪ್ಪ ನಾಯಕರೊ ನೌಕಾಧಿಕಾರಿಯಾಯಿಟ್ಟ್ ಪನಿ ಆಕಿಯೋ ಇನ್ನ. ಅದಲ್ಲಾಂಟ್ ಸಂಧಾನ ಕಾರೋಮ್ ಅಯಿಟಿನ್ನ, ಉಳ್ಳಾಲ್ತಜ ಸೈನ್ಯತ್ತ್‌ಲ್ ಚಮ್ಮೆ ನಮೂಂತೆ ಹೋರಾಟ ಆಕ್ಯೋಂಟಿನ್ನಾರ್. ಅದಲ್ಲಾಂಟ್ ಈ ರಾಷ್ಟ್ರತ್ತೊ ನೌಕಾದಳತ್ತೋ ತಾಕತ್ತೆ ಈ ಸಮುದಾಯತ್ತೋ ನಲ್ಲೋ ನಮೂಂತೆ ಸೇವೆಗ್ ಕಾರಣ ಆಯಿತ್‌ಂಟ್ ಈ ಪ್ರವಾಸಿ ತೆರಿಪಾಟ್‌ರ. ಆಂಗ್ಲ ಬಾಸೆರೋ ಪತ್ರ ದಾಖಲೆಲ್ 1743ಲ್ ಬಪ್ಪಬ್ಯಾರಿ, ಹಮ್ಮುಬ್ಯಾರಿಜ ಚೆಲ್ಡೊ ವ್ಯಾಪಾರಿಮ್ಮಾರೋ ಉಲ್ಲೇಖ ಉಂಡು. ಈ ದಾಖಲೆರೋ ಹಿನ್ನಲೆಲ್ ಬಪ್ಪಬ್ಯಾರಿ ಚೆಲ್ಡವುನು ಮೂಲ್ಕಿಲ್ ಇನ್ನ್‌ಟ್ಟ್ ಬಪ್ಪನಾಡ್‌ರೊ ದುರ್ಗಾದೇವಿರೊ ದೇವಸ್ಥಾನತ್ತೋ ಪುನರ್ ಸ್ಥಾಪನೆ ಆಕೋಗು ಆರ್ಥಿಕ ಸಹಾಯ ಆಕ್ಯೋಂಟಿನ್ನಾ ಚೆಲ್ಡೋ ಅಭಿಪ್ರಾಯ ತೆರಿಇಬಂಡ್.

**ಪಾಡ್ದನಜ**

ಬ್ಯಾರೆ ಜಾತಿಜಲೊಟ್ಟಿಗ್ ಬ್ಯಾರಿಜಲೋ ನಲ್ಲೋ ರೀತಿರೊ ಸಮ್ಮಂದ ಎಜನಿಂತ್ ಚೆಲ್ಡದ್‌ರೆ ಪಾಡ್ದನಜ ನಂಕ್ ತೆರಿಪಾಟ್‌ರ್. ಬ್ಯಾರಿಂಜ ಬ್ಯಾರೆ ನಲ್ಲೆ ಆಲ್ಮಾರೊಟ್ಟು ಒರ್ಮೆಪ್ಪಾಡ್‌ಲ್ ಕೂಡಿಯೊ ಇನ್ನಾರ್. ಪಿನ್ನೆ ಅಜಲೋ ಧಾರ್ಮಿಕ ಹಬ್ಬತ್ತ್‌ಲ್ ಭಾಗವಹಿಸಿಯೋಂಟಿನ್ನಾರ್. ಅಜಲೋ ನಲ್ಲೊ ನಡವಳಿರೆ ಎಲ್ಲಾರುಂ ಇಷ್ಟ ಪಟ್ಟೋ ಇನ್ನಾರ್. ಮಂಜೇಶ್ವರತ್ತೊ ಮುಟ್ಟತ್ತೋ ಉದ್ಯಾವರಂ ಚೆನ್ನೆಂಗ್ ಉದ್ದಾರತ್ತ್‌ಲ್ ಪ್ರತಿ ವರ್ಷ ಉದ್ದಾರತ್ತೊ ದೈವಂಜಲೊ ಗೌರವಾರ್ಥ ಭೂತನೃತ್ಯತ್ತೊ ಏರ್ಪಾಡ್ ಆಕ್ಯೋಂಟಿನ್ನಾರ್. ಗುಡಿ ಕೆಟ್ಟೋಗು ಜಾಗ ಕೊಡ್ತೋ ಮುಸ್ಲಿಂಮುಗು ಈ ಭೂತ ಆಶ್ವಾಸನೆರೊ ಕೊಡ್ತೋಂಟ್ ಇಂತ್.

ಮೂಲ್ಕಿರೋ ಬಪ್ಪನಾಡ್ ಚೆಲ್ಡೊ ರಾಯತ್ತ್‌ಲ್ ಬಪ್ಪ ಬ್ಯಾರಿಡೋ (ದುರ್ಗಾ ಪರಮೇಶ್ವರಿ ದೇವಸ್ಥಾನತ್ತೊ ಕೆಟ್ಟ್ ಬಾಟಿಯೊ ಆಲ್) ಕುಟುಂಬತ್ತಜಗು ಇಪ್ಪೊಂ ದೇವಾಸ್ಥಾನತ್ತೋ ಪ್ರಸಾದತ್ತೊ ಕೊಡ್‌ಕುರಾರ್. ಕುಂಬಳೆರೊ ಆರಿಕ್ಕಾಡಿ ಚೆಲ್ಡೋ ಪಕ್ಕತ್ತಲ್ ನಡಕುರೋ ಆಲಿ ಬೂತತ್ತೊ ಪರ್ಬ ನಡಕುರೋ ಸಂದರ್ಭತ್ತ್‌ಲ್ ಮುಸ್ಲಿಂ ಆಲ್‌ಮಾರೋ ಉಪಸ್ಥಿತಿ ಒರು ಸಂಪ್ರದಾಯವಾಯಿಟ್ಟ್ ಮುಂದುವರಿಇಗೋ ಬನ್ನ್‌ರ್. ಇಂಜಂತೋ ನೂರಾರ್ ಉದಾಹರಣೆಂಜ ಜಿಲ್ಲೆರೊ ನಾನಾ ಜಾಗೆಲುಮ್ ಇಪ್ಪಮ್ ನಡನೋ ಉಲ್ಲದ್ ನಂಕ್ ಕಂಡ್ ಬಂಡ್.

ಬ್ಯಾರಿಜ ಕೀಳ್ ಜಾತಿರೋ ಆಲ್ ಮಾರೊಟ್ಟಿಗೆ ಪಿನ್ನೆ ಜೈನ ಜಹಗೀರ್ದಾರರೊಟ್ಟಿಗೆ ಮುಕ್ತ ಆಯಿಟ್ಟ್ ಒಟ್ಟಿಗೆ ಕೂಡಿಲಯೋಂಟಿನ್ನಾರ್. ಚೆಲ್ದಡ್‌ರೋ ಪಾಡ್ದನಜ. ನಂಕ್ ತೆರಿಪಾಟ್‌ರ್. ಜೈನ ಗುತ್ತುಲ್ ಬಾವಾ ಆಯಿಟ್ಟ್ ಪನಿ ಆಕ್ಯೋಂಟಿನ್ನೋ ಆಲ್‌ಮಾರ್ ಇಂಡ್ ಅದೇ ಪೇರ್‌ರೋ ಅಜಲೋ ಮೂಲಪೇರಾಯಿಟ್ಟ್ ಬಳಕೆ ಆಕ್ಯೋಂಟುಲ್ಲಾರ್. ಬಾವಾ,ಬಾವು, ಕಾಟುಬಾವ, ಚೆಯ್ಯ ಬಾವಾ ಇಂಜ್ಜತ್ತೆಲ್ಲಾ ಪೇರ್‌ಜ ಹೆಗ್ಗಡೆ ಪಿನ್ನೆ ಬಲ್ಲಾಳ ಜಾತಿರಜಲೋ ಅಡಿಲ್ ಅಜ ಆಕ್ಯೋಂಟಿನ್ನೋ ನೈಮರೋ ನೆನಪಾಯಿಟ್ ಇಪ್ಪೊಂ ಉಳಿಜ್ಜಿರ್.

ಬೊಬ್ಬರ್ಯ ಪಾಡ್ದನ ಬ್ಯಾರಿಜೊಗು ಬ್ಯಾರೆ ಜಾತಿಜ್ಜಲೊಟ್ಟುಗು ಇನ್ನೊ ನಲ್ಲೋ ಸಂಬಂಧತ್ತೊ ಅನ್ಯೋನತೆರೊ ತೆರಿಪಾಟ್‌ರ್. "ಏಳ್ ಪಟ್ಟಣತ್ತೋ ಮರಕಲಮಾರ್ ಪಿನ್ನೆ ಏಳ್ ಕಡೆರೋ ಬ್ಯಾರಿಜ ಒಟ್ಟು ಸೇರಿಟ್ಟ್ ಕಲಂಜಾರ್ ಚೆಲ್ದೋ ಜಾಗೆಗ್ ಪೋಯಾರ್. ಅಪ್ಪ ಅವುಡ್ರೆ ಆಲ್‌ಮಾರ್ "ನಿಜ ಜಾತಿ – ನೀತಿ ಬ್ಯಾರಿಜಮಾ ಇಲ್ಲೆಂಗ್ ಜಾತಿ–ಸೆಟ್ಟಿ ಬ್ಯಾರಿಜಮಾ" ಚೆನ್ನ್ಟಿಟ್ಟ್ ಕೇಟಾರ್ "ನಿಜ ಜಾತಿ–ನೀತಿ ಬ್ಯಾರಿಜ ಆಯಿಟಿನ್ನೆ ಔತುರುಲ್ಲ ಬರ್ರು ಚೆಲ್ದೊ ನಲ್ಲೊ ಆಹ್ಮಾನತ್ತೋ ಬಿಲಿ ಅವುಡ್ರಜಲ್ಲೇ ಬಂತ್ ಅಲ್ಲಾಂಟೆ ನಲ್ಲ ನಮೂಂತ್‌ಲ್ ಅತಿಥಿ ಸತ್ಕಾರ ಆಕ್ಯಾರ್.

ಇನ್ನೊರು ಪಾಡ್ದನತ್ತ್‌ಲುಮ್ ಇದೇ ಪಲ್ತೋ ಉಲ್ಲೇಖ ಉಂಡು 'ಯೆಡ್ಡೋಡಿ ಸೊತ್ತು ಮರಕಲೆನ ಕತೆ" ಚೆಲ್ದಡ್ ಅದ್‌ರೊ ಶೀರ್ಷಿಕೆ ಮೂನಾಲ್ ಬ್ಯಾರಿಜ ಕಲಂಜಾರ್ ಚೆಲ್ದೋ ದೇವಸ್ಥಾನತ್ತ್‌ಗ್ ಪೋಯಾರ್. ಗುತ್ತುರೋ ಆಲ್‌ಮಾರ್ ಇದ್‌ರೋ ಮುನ್ನೊಲು ಪಾಡ್ದನತ್ತ್‌ಲ್ ಕೇಟೋ ಪ್ರಶ್ನೆರೊಮೇ ಇಂಕ್ ಕೇಟಾರ್ ನಜ ಜಾತಿ–ನೀತಿ ಬ್ಯಾರಿಜಂಟ್ ಇಜ ಉತ್ತರ ಕೊಡ್ತಾರ್ ಪಿನ್ನೆ ಗುತ್ತುರಜ ಇಜಲೋ ಅವುತುರುಲ್ಲ ಬಿಲ್ಚಾರ್. ಆಲ್‌ಮಾರೋ ನಡುಲು ಬ್ಯಾರಿಜಗುಂ ವಿಶೇಷಮಾಯೋ ನಲ್ಲೊ ಗೌರವ ಕೊಡ್ತಾರ್ ಚೆಲ್ದಡ್ ಇದ್‌ಲ್ ವ್ಯಕ್ತಮಾಯಿಟ್ಟ್ ತೆರಿಇ ಬಂಡ್.

16 ಶತಮಾನತ್ತ್‌ಲ್ ಉಂಡಾಯೋ 'ಅತ್ತಾವರ ದೈಯಂಗಳು" ಚೆಲ್ದೊ ಪಾಡ್ದನತ್ತ್‌ಲ್ ತುಳುನಾಡ್‌ಲ್ ಮುಸ್ಲಿಂ ಸಮುದಾಯತ್ತೋ ಅಂತಸ್ತ್ ಆ ಕಾಲತ್ತ್‌ಲ್ ಎಜನಿಂತ್ ಚೆಲ್ದಡ್‌ರೆ ತೆರಿಪಾಟ್‌ರ್ ಪಾಣೆ ಮಂಗಳೂರುಡೆ ಬಂಗರಾಜರೋ ಆಳ್ವಿಕೆಲ್ ಮುಸ್ಲಿಮ್‌ರೊ ಅಂತಸ್ತ್‌ರೊ ಬಗ್ಗೆ "ಅತ್ತಾವರ ದೈಯಂಗಳು" ಚೆಲ್ದೊ ಈ ಪಾಡ್ದನ ಬಾರಿ ನಲ್ಲೊ ರೀತಿಲ್ ಚಿತ್ರಣ ತಂಡ್. ಉದ್ದಾರ (ಉದ್ಯಾವರ ಮಂಜೇಶ್ವರತ್ತೋ ಮುಟ್ಟತ್ತ್‌ಲ್) ಹಿಂದೂ ಸಹೋದರಮಾರ್ ಮುಸ್ಲಿಮ್

ಆಲ್‌ಮಾರೊ ಬಗ್ಗೆ ಬಾರಿ ಗೌರವತ್ತೆ ಕಾಟಿಯೋಂಟಿನ್ನಾರ್ ಚೆಲ್ದೆದ್‌ರೆ ಉದ್ಯಾವರತ್ತೊ ವರ್ಷತ್ತೋ ರಥೋತ್ಸವತ್ತೊ ಸಂದಭಫತ್ತ್‌ಲ್ ಅತ್ತಾವರ ದೈಯಂಗಳು ಚೆಲ್ದೋ ಭೂತ ಉದ್ಯಾವರತ್ತೋ ಪಳ್ಳಿರೊ ಎದುರುಗು ಪೋಯಿಟ್ಟ್, ಇಪ್ಪ ಮರಕೋಗಾವಾತೊ ಪಂಡತ್ತೋ ಮುಸ್ಲಿಂ ಸೇನಾಧಿಪತಿ ಪಿನ್ನೆ ಅವುನು ಭೂತತ್ತೋ ಆರಾಧನೆ ಆಕೊನು ಕೊಡ್ತೋ ಜಾಗತ್ತೋ ಭೂಮಿಡೊ ಬಿಸಯತ್ತೆ ಕೃತಜ್ಞತೆ ಚೆನ್ನೋಂಟು, ಅವುಂಡೋ ನಲ್ಲೋ ನಮೂಂತ್‌ಲ್ ಪೋಗಲ್‌ರದ್ ವಾಡಿಕೆಲ್ ಬನ್ನ್‌ರ್. ಈ ಪಾಡ್ದಣಜ ಸುಮಾರ್ ಕ್ರಿ.ಶ. 11ರೋ ಪಿಡ್ಡಿಟ್ಟ್ 14ನೇ ಶತಮಾನತ್ತೊ ಕಾಲತ್ತದ್ ಚೆನ್ನ್‌ಟ್ಟ್ ಚೆಲ್ದಾರ್. ಅಲ್ಲಾಂಟೆ ಕೊರಿಯ ಪ್ರಮುಖಯಾಯೊ ಪಾಡ್ದನಜ ಆಯೋ ಬಲೀಂದ್ರ ಪಾಡ್ದನ, ಜುಮಾದಿ ದೈವ ಪಾಡ್ದನ, ಶ್ರೀ ಪಾಡ್ದನತ್ತ್‌ಲ್ ತುಳುನಾಡ್‌ರೊ ಮುಸ್ಲಿಂರಜಲೊ ಉಲ್ಲೇಖ ಉಂಡು.

ಇನ್ನೋರು ನಮೂಂತೆ ಪಾಡ್ದನತ್ತ್‌ಲ್ ತುಳುನಾಡ್‌ರೊ ಬ್ಯಾರಿಜಲೋ (ಮುಸ್ಲಿಮ್‌ರಜಲೋ) ಸಂಬಂಧತ್ತೆ ಇಜನೆ ತೆರಿಪಾಟ್‌ರ್. ಬ್ಯಾರಿಜ ಬ್ರಹ್ಮರೋ ದೇವಸ್ಥಾನತ್ತೋ ಮುಟ್ಟ ಬನ್ನಪ್ಪ ಅವುಡ್ರೋ ಆಲ್‌ಮಾರ್ ಅಜಲೆ ನಿಕ್ಕ್ ಪಾಟಿಟ್ಟ್ "ನಿಜ ಜಾತಿ ಬ್ಯಾರಿಜಮಾ, ನೀತಿ ಬ್ಯಾರಿಜಮಾ? ನಿಜ ಜಾತಿ ಬ್ಯಾರಿಜ ಅಯಿಟಿನ್ನೆಂಗ್ ದೇವಸ್ಥಾನತ್ತೋ ಪ್ರವೇಶ ಆಕಿಟ್ಟ್ ನಿಂಕ್ ಎಂದ್ರೋ ವರಬೇನು ಚೆನ್ನ್‌ಟ್ಟ್ ಕೇಕೊರು". ತುಳು ಮಾಪಿಳ್ಳೆಜ (ಮುಸ್ಲಿಮ್ರಜ) ಹಿಂದೂ ಎಲೆಮೂತಜ್ಞಮಾರೈಲ್ ಎಡ್ತೋ ಬನ್ನೋ ಗೌರವ ಸೂಚಕ ಇದಾಯಿಟ್ಟಿಕ್ಕ್‌ರ್ ಚೆಲ್ದೆದ್‌ರೋ ಬಿ.ಎ. ಸಾಲೆತ್ತೂರು ಅಭಿಪ್ರಾಯ ಪಡ್ರ್.

ತುಳುನಾಡ್‌ರೋ ಸಾಂಸ್ಕೃತಿಕ ಇತಿಹಾಸತ್ತೋ ಅವಲೋಕನ ಅಕ್ಯೆಂಗ್ ಪಾಡ್ದನಲಜ ಅಲ್ಲಾಂಟೆ ಭೂತಾರಾಧನೆರೋ ಶ್ಲೋಕಜ ಈ ನಾಡ್‌ರೋ ಮುಖ್ಯ ಪರಂಪರೆಡೋ ತೆರಿಪಾಟ್‌ರ್ ಭೂತರಾಧನೆ ಚೆಲ್ದೆದ್ ಈ ನಾಡ್‌ರೋ ಮುಖ್ಯ ಪರಂಪರೆ ಆಯಿಟ್ಟಿಂತ್ ಭೂತರಾಧನೆ ಚೆಲ್ದೆದ್ ಈ ನಾಡ್‌ರೋ ಚಮ್ಮೆ ಪಲೆಯೋ ಕಾಲತ್ತೋ ಆರಾಧನೆ ಪದ್ಧತಿ ಆಯಿಟ್ಟಿಕ್ಕ್‌ರ್. "ಆಲಿ" ಚೆಲ್ದೋ ಒರು ಮುಸ್ಲಿಮ್ ನಾಯಕಡೆ ಪಾಡ್ದನಜ ದೈವ ಪಿನ್ನೆ ದೈವಿಕ ಪುರುಷ ಚೆನ್ನ್‌ಟ್ಟ್ ವರ್ಣನೆ ಆಕಿರ್.

ಇನ್ನೊರು ಪಾಡ್ದನ ಆಯೋ ಬೊಬ್ಬಯ್ಯ ಪಾಡ್ದನತ್ತ್‌ಲ್ ಒರು ಮುಸ್ಲಿಮ್‌ಡೆ ದೈವಿ ಪುರಷ ಆಯಿಟ್ಟ್ ಅಲ್ಲಾಂಟೆ ಮೀನ್‌ಗಾರ ಮಾರುಡೋ (ಮೊಗವೀರ ಮಾರ್‌ಡೋ) ಅರಾಧ್ಯ ದೈವ ಆಯಿಟ್ಟ್ ಆರಾಧನೆ ಆಕ್‌ರದ್ ಅದ್‌ರ್‌ಪ ಆವುರು. ಬಬ್ಬರ್ಯ ಇಲ್ಲೆಂಗ್ ಬಾವು ಬ್ಯಾರಿ ತುಳುನಾಡ್‌ರೋ ಕರಾವಳಿ ಆಲ್‌ಮಾರ್‌ರೋ

ವಿಶೇಷಮಾಯಿಟ್ಟ್ ಮೊಗವೀರ ಮಾರ್ರೋ ಸಂಕಪ್ಪತ್ತೋ ಕಾಲತ್ತ್‌ಲ್ ಸಹಾಯ ಆಕಿಯೋ ದೈವ ಚೆನ್ನ್‌ಟ್ಟ್ ವರ್ಣನೆ ಆಕಿರ್.

**ಹಂಜುಮಾನ್‌ಮಾರ್ (ಅಂಜುಮಾನ್‌ಮಾರ್)**

ಹಂಜಮಾನ್ ಚೆಲ್ದೆದ್ ಅಂಜುಮಾನ್ ಚೆಲ್ಲೋ ಶಬ್ದತ್ತೆ ಉಂಡಾಯಿರ್. ಸಂಘ, ಕ್ಲಬ್, ಸೊಸೈಟಿ ಅಲ್ಲೆಂಗ್ ಗಿಲ್ದ್ ಚೆಲ್ಲೋ ಅರ್ಥ ಅದ್‌ಕ್ಕುಂಡು. ಅಂಜುಮಾನ್ ಚೆಲ್ದದ್ ಸಂಘತ್ತ್‌ಗ್ ಉಲ್ಲೋ ಜನಪ್ರಿಯ ಪರ್ಯಾಯ ಪದ ಆಯಿಟ್ಟ್, ಮುಸ್ಲಿಮ್‌ರಜಲೋ ನಡುಲು ಇಪ್ಪತ್ತ್‌ಗುಂ ಚಮ್ಮೆ ನಮೂಂತೆ ಅಂಜುಮನ್‌ಜ ಅಸ್ತಿತ್ವತ್ತ್‌ಲ್ ಉಂಡು.

### ಕಡತಗಳಲ್ಲಿ ಬ್ಯಾರಿ ಜನಾಂಗ

ಕಪ್ಪು ಬಟ್ಟೆಯ ಮೇಲೆ ಸೀಸದ ಕಡ್ಡಿಯಿಂದ ಬರೆದ ದಾಖಲೆ ಒಂದು ಪ್ರಮುಖ ಸ್ವದೇಶಿ ದಾಖಲೆ ಪತ್ರವಾಗಿದೆ. ಇದನ್ನು ಕಡತ ಎನ್ನುತ್ತೇವೆ. ಇಂತಹ ಕಡತಗಳಲ್ಲಿ ಬ್ಯಾರಿಗಳು ವ್ಯಾಪಾರಸ್ಥರಾಗಿ ಕೆಲವು ಸಂದರ್ಭಗಳಲ್ಲಿ ನೌಕೆ ನಡೆಸುವ ಅಧಿಕಾರಿಗಳಾಗಿ ಕಾಣಸಿಗುತ್ತಾರೆ. ಹಲಸನಾಡು ದಾಖಲೆಗಳಲ್ಲಿ ವ್ಯಾಪಾರಿಗಳಾಗಿ ಕಾಣಸಿಗುತ್ತಾರೆ. ಈ ಬ್ಯಾರಿಗಳು ಕಾಸರಗೋಡು, ಮಂಜೇಶ್ವರ ಮತ್ತು ಮಂಗಳೂರಿಗೆ ಬಂದು ಬಸ್ರೂರಿನಲ್ಲಿ ವ್ಯಾಪಾರ ನಡೆಸುತ್ತಿದ್ದು, ಈ ದಾಖಲೆಗಳಲ್ಲಿ ನಮೂದಿತ ವಾಗಿದೆ. ಮಂಜೇಶ್ವರದಲ್ಲಿ ಸಿಕ್ಕಿದ ಕ್ರಿ.ಶ. 17–04ರ ಕಡತದಲ್ಲಿ ಪೊಕ್ಕಚು ಬ್ಯಾರಿ ಕೆಳದಿ ಅರಸರ ಸೈನಿಕರ ನಾಯಕ ಎಂಬುದನ್ನು ಸ್ಪಷ್ಟಪಡಿಸುತ್ತದೆ.

### ವಿದೇಶಿ ಬರಹ ಮತ್ತು ದಾಖಲೆಗಳಲ್ಲಿ

13ನೇ ಶತಮಾನದಲ್ಲಿ ಬಂದ ಮಾರ್ಕೊ ಪೋಲೊ ಮಂಗಳೂರಿನಲ್ಲಿ ಮುಸ್ಲಿಂ ವರ್ತಕರಿದ್ದು ಅವರು ತಮ್ಮದೇ ಆದ ಭಾಷೆಯನ್ನಾಡುತ್ತಾರೆ. ಇವರು ಚೀನಾದೊಂದಿಗೆ ವ್ಯಾಪಾರ ನಡೆಸುತ್ತಾರೆ. ವಿದೇಶಿ ಪ್ರವಾಸಿಗರಾದ ಇಬ್ನ ಬಟೂಟ ಮಂಗಳೂರಿನಲ್ಲಿ ಮುಸ್ಲಿಮರು ವಲಸೆ ಇದ್ದುದ್ದನ್ನು ತಿಳಿಸಿ ಅವರ ವ್ಯಾಪಾರ ವ್ಯವಸ್ಥೆಯ ಬಗ್ಗೆ ತಿಳಿಸುತ್ತಾರೆ. ಇವರಿಗೂ ಮತ್ತು ಸ್ಥಳೀಯ ಜನಾಂಗದವರಿಗೂ

ಆಗಿಂದಾಗ್ಗೆ ಘರ್ಷಣೆ ನಡೆಯುತ್ತಿತ್ತು. ಮತ್ತು ಮಂಗಳೂರಿನ ರಾಜ ರಾಮದೇವ ಇದನ್ನು ಸಮಾಧಾನ ಮಾಡುತ್ತಿದ್ದ. ಏಕೆಂದರೆ ಇವನ ವ್ಯಾಪಾರ ಅಲ್ಲಿಯ ಮುಸ್ಲಿಂ ವರ್ತಕರನ್ನು ಅವಲಂಬಿಸಿತ್ತು. ಈ ಮುಸ್ಲಿಂ ವರ್ತಕರು ಫಾರ್ಸ್ ಮತ್ತು ಯೆಮೆನ್ ರಾಜ್ಯಗಳೊಂದಿಗೂ ಸಾಗರೋತ್ತರ ವ್ಯಾಪಾರ ನಡೆಸುತ್ತಿದ್ದರು. ಅಲ್ಲದೆ ಮಂಗಳೂರಿನಲ್ಲಿ ಮುಸ್ಲಿಂ ವರ್ತಕರ ವರ್ಚಸ್ಸು ಇದ್ದುದ್ದನ್ನು 1510ರಂದು ಬಂದ ಬಾರ್ಬೋಸ ತಿಳಿಸಿದ್ದಾನೆ.

ಕ್ರಿ.ಶ. 1623ರಲ್ಲಿ ಮಂಗಳೂರಿಗೆ ಬಂದ ಪ್ರವಾಸಿ ಡೆಲ್ಲಾವೆಲ್ಲೆ ತನ್ನ ವರದಿಯಲ್ಲಿ ಮೂಸಾ ಬ್ಯಾರಿಯ ವಿಚಾರ ತಿಳಿಸುತ್ತಾರೆ. ಇವನು ಬಂಗರಾಜನ ನೌಕಾ ದಳಪತಿಯಾಗಿ ಕೊನೆಗೆ ಕೆಳದಿ ವೆಂಕಟ್ಟಪ್ಪ ನಾಯಕನ ಸೇನಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ. ಇವನು ನೌಕಾಧಿಕಾರಿಯಾಗಿ ನುರಿತ ಸಂಧಾನಕಾರನಾಗಿದ್ದ, ಉಳ್ಳಾಲದವರೂ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರಲ್ಲದೆ ಈ ರಾಷ್ಟ್ರದ ನೌಕಾದಳದ ಸಮರ್ಥತೆ ಈ ಜನಾಂಗದವರ ಉತ್ತಮ ಸೇವೆಗೆ ಕಾರಣವಾಯಿತೆಂದು ಇದೇ ಪ್ರವಾಸಿ ತಿಳಿಸಿದ್ದಾನೆ. ಆಂಗ್ಲ ಪತ್ರ ದಾಖಲೆ 1743ರಲ್ಲಿ ಬಪ್ಪಬ್ಯಾರಿ, ಹಮ್ಮು ಬ್ಯಾರಿಗಳೆಂಬ ವ್ಯಾಪಾರಸ್ಥರ ಉಲ್ಲೇಖ ಕಂಡುಬರುತ್ತದೆ. ಈ ದಾಖಲೆಯ ಹಿನ್ನಲೆಯಲ್ಲಿ ಬಪ್ಪಬ್ಯಾರಿ ಮೂಲ್ಕಿಯಲ್ಲಿದ್ದು ಬಪ್ಪನಾಡು ದುರ್ಗಾದೇವಿಯ ದೇವಾಲಯ ಪುನರ್ ರಚಿಸಲು ಆರ್ಥಿಕ ಸಹಾಯ ಮಾಡಿರಬೇಕು ಎಂಬ ಅಭಿಪ್ರಾಯ ಬರುತ್ತದೆ.

**ಪಾಡ್ದನಗಳು**

ಇತರರೊಂದಿಗೆ ಬ್ಯಾರಿಗಳು ಹೊಂದಿದ್ದ ಉತ್ತಮ ಸಾಮಾಜಿಕ ಸಂಬಂಧವನ್ನು ಪಾಡ್ದನಗಳು ಎತ್ತಿ ತೋರಿಸುತ್ತವೆ. ಬ್ಯಾರಿಗಳು ಇತರರೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದರು ಮತ್ತು ಅವರ ಧಾರ್ಮಿಕ ಹಬ್ಬಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರು ಹೊಂದಿದ್ದ ಸಾಮಾಜಿಕ ಸ್ಥಾನಮಾನದಿಂದಾಗಿ ಎಲ್ಲರೂ ಅವರನ್ನು ಇಷ್ಟಪಡುತ್ತಿದ್ದರು. ಮಂಜೇಶ್ವರದ ಸಮೀಪದ ಉದ್ಯಾವರ ಅರ್ಥಾತ್ ಉದ್ದಾರದಲ್ಲಿ ಪ್ರತಿ ವರ್ಷ ಉದ್ದಾರದ ದೈಯಂಗಳ ಗೌರವಾರ್ಥ ಭೂತನೃತ್ಯವನ್ನು ಏರ್ಪಡಿಸಲಾಗುತ್ತಿತ್ತು. ಗುಡಿಗಾಗಿ ಜಮೀನು ನೀಡಿದ ಮುಸ್ಲಿಮನಿಗೆ ಆ ಭೂತವು ಆಶ್ವಾಸನೆಯನ್ನು ನೀಡುತ್ತಿತ್ತು.

ಮೂಲ್ಕಿಯ ಬಪ್ಪನಾಡಿನಲ್ಲಿ ಬಪ್ಪ ಬ್ಯಾರಿಯ (ದುರ್ಗಾ ಪರಮೇಶ್ವರಿ ಮಂದಿರದ ನಿರ್ಮಾತೃ ಎನ್ನಲಾದ ವ್ಯಕ್ತಿ) ವಂಶಸ್ಥರಿಗೆ ಈಗಲೂ ಪ್ರತಿ ವರ್ಷ

ದೇವಸ್ಥಾನದ ಪ್ರಸಾದವನ್ನು ನೀಡಲಾಗುತ್ತದೆ. ಕುಂಬಳೆಯ ಆರಿಕ್ಕಾಡಿಯಲ್ಲಿ ಆಲಿ ಭೂತ ಹಬ್ಬದ ಸಂದರ್ಭದಲ್ಲಿ ಮುಸ್ಲಿಮ್ ಮುಖ್ಯಸ್ಥರ ಉಪಸ್ಥಿತಿಯು ಒಂದು ಸಂಪ್ರದಾಯವಾಗಿ ಮುಂದುವರಿದುಕೊಂಡು ಬಂದಿದೆ. ಇಂತಹ ನೂರಾರು ಉದಾಹರಣೆಗಳು ಜಿಲ್ಲೆಯ ವಿವಿಧ ಕಡೆಗಳಲ್ಲಿ ಈಗಲೂ ಕಂಡು ಬರುತ್ತದೆ.

ಬ್ಯಾರಿಗಳು ಯಾವ ರೀತಿ ಏಕಕಾಲದಲ್ಲಿ ಕೆಳಜಾತಿಯ ಜನರೊಂದಿಗೆ ಮತ್ತು ಜೈನ ಜಹಗೀರ್ದಾರರೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದರು ಎಂಬುದನ್ನು ಪಾಡ್ದನಗಳಲ್ಲಿ ವಿವರಿಸಲಾಗಿದೆ. ಜೈನ ಗುತ್ತುಗಳಲ್ಲಿ (ಬೀಡು) ಬಾವಾಗಳಾಗಿ ಕೆಲಸ ಮಾಡುತ್ತಿದ್ದವರು ಅದನ್ನೇ ತಮ್ಮ ಮೂಲ ಹೆಸರಾಗಿ ಉಳಿಸಿಕೊಂಡಿದ್ದಾರೆ. ಬಾವಾ, ಬಾವು, ಕಾಟುಬಾವ, ಚೆಯ್ಯಾ ಬಾವಾ ಇತ್ಯಾದಿ ಹೆಸರುಗಳು ಹೆಗ್ಗಡೆ ಮತ್ತು ಬಲ್ಲಾಳರ ಅಡಿಯಲ್ಲಿ ತಾವು ಸಲ್ಲಿಸಿದ ಸೇವೆಯ ಕುರುಹುಗಳಾಗಿ ಈಗಲೂ ಉಳಿದುಕೊಂಡಿದೆ.

ಬೊಬ್ಬರ್ಯ ಪಾಡ್ದನವು ಬ್ಯಾರಿಗಳಿಗೆ ಇತರ ಜಾತಿಗಳೊಂದಿಗಿದ್ದ ಅನ್ಯೋನ್ಯತೆಯನ್ನು ಹೀಗೆ ವಿವರಿಸುತ್ತದೆ. "ಏಳು ಪಟ್ಟಣದ ಮರಕಲರು ಮತ್ತು ಏಳು ಕಡೆಯ ಬ್ಯಾರಿಗಳು ಒಟ್ಟು ಸೇರಿ ಕಲಂಜಾರ್ ಎಂಬಲ್ಲಿಗೆ ತೆರಳಿದರು. ನೀವು ಜಾತಿ–ನೀತಿ ಬ್ಯಾರಿಗಳೊ ಅಥವಾ ಜಾತಿ ಸೆಟ್ಟಿ ಬ್ಯಾರಿಗಳೋ ಎಂದು ಅವರನ್ನು ಅಲ್ಲಿನವರು ಕೇಳಿದರು. ತಾವು ಜಾತಿ ಬ್ಯಾರಿಗಳೆಂದು ಬ್ಯಾರಿಗಳು ಉತ್ತರಿಸಿದರು. ನೀವು ಜಾತಿ–ನೀತಿ ಬ್ಯಾರಿಗಳಾಗಿದ್ದರೆ ಆವರಣದೊಳಕ್ಕೆ ಬನ್ನಿ" ಎಂಬ ಆಹ್ವಾನ ಅಲ್ಲಿನವರಿಂದ ಬಂತು ಅವರಿಗೆ ಒಲ್ಲೆಯ ಅತಿಥ್ಯವೂ ದೊರೆಯಿತು.

ಇನ್ನೊಂದು ಪಾಡ್ದನದಲ್ಲೂ ಇದೇ ಬಗೆಯ ಉಲ್ಲೇಖ ಕಂಡುಬರುತ್ತದೆ. ಯೆಡ್ಡೋಡಿ ಸೊತ್ತು ಮರಕಲೆನ ಕತೆ ಎಂಬುದು ಅದರ ಶೀರ್ಷಿಕೆ. ಮೂವರು ಬ್ಯಾರಿಗಳು ಕಲಂಜಾರ್ ಎಂಬಲ್ಲಿನ ದೇವಸ್ಥಾನಕ್ಕೆ ಹೋದರು ಗುತ್ತುವಿನ ಜನರು ಈ ಹಿಂದಿನ ಪಾಡ್ದನಗಳಲ್ಲಿ ಕೇಳಿದ್ದ ಪ್ರಶ್ನೆಗಳನ್ನೇ ಕೇಳಿದರು. ತಾವು ಜಾತಿ–ನೀತಿ ಬ್ಯಾರಿಗಳೆಂದು ಅವರು ಉತ್ತರಿಸಿದರು. ನಂತರ ಗುತ್ತುವಿನವರು ಬ್ಯಾರಿಗಳನ್ನು ಅವರಣದೊಳಕ್ಕೆ ಬರಮಾಡಿಕೊಂಡರು. ಜನಸಾಮಾನ್ಯರ ನಡುವೆ ಬ್ಯಾರಿಗಳಿಗೆ ವಿಶೇಷವಾದ ಗೌರವವಿತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

16ನೇ ಶತಮಾನದಲ್ಲಿ ರಚಿತವಾದ 'ಅತ್ತಾವರ ದೈಯಂಗಳು' ಎನ್ನುವ ಪಾಡ್ದನವು ತುಳುನಾಡಿನಲ್ಲಿ ಮುಸ್ಲಿಮರ ಅಂತಸ್ತು ಆ ಕಾಲದಲ್ಲಿ ಹೇಗಿತ್ತು ಎಂದು ವಿವರಿಸುತ್ತದೆ. ಪಾಣೆಮಂಗಳೂರಿನ ಬಂಗರಾಜನ ಆಳ್ವಿಕೆಯಲ್ಲಿ ಮುಸ್ಲಿಮರ

ಸಾಮಾಜಿಕ ಅಂತಸ್ತಿನ ಬಗ್ಗೆ "ಅತ್ತಾವರ ದೈಯಂಗಳು" ಪಾಡ್ದನವು ಸರಿಯಾದ ಚಿತ್ರಣವನ್ನು ನೀಡುತ್ತದೆ. ಉದ್ಯಾವರ (ಉದ್ಯಾವರ ಮಂಜೇಶ್ವರದ ಹತ್ತಿರ) ಹಿಂದೂ ಸಹೋದರರು ಮುಸ್ಲಿಮರ ಬಗ್ಗೆ ಗೌರವ ಆದರಗಳನ್ನು ತೋರ್ಪಡಿಸುತ್ತಿದ್ದರು ಎನ್ನುವುದಕ್ಕೆ ಉದ್ಯಾವರ ವಾರ್ಷಿಕ ರಥೋತ್ಸವ ಸಮಯದಲ್ಲಿ ಅತ್ತಾವರ ದೈಯಂಗಳು ಎನ್ನುವ ಭೂತ ಉದ್ಯಾವರ ಮಸಿದಿಯ ಮುಂಭಾಗಕ್ಕೆ ಹೋಗಿ, ಇದೀಗ ಮರೆಯಲಾದ ಪ್ರಾಚೀನ ಮುಸ್ಲಿಮ್ ಸೇನಾಧಿಪತಿ ಮತ್ತು ಆತನು ಭೂತ ಆರಾಧನೆಗಾಗಿ ನೀಡಿರುವ ಭೂಮಿಯ ಬಗ್ಗೆ ಕೃತಜ್ಞತೆ ಸಲ್ಲಿಸಿ, ಆತನನ್ನು ಹೊಗಳುವುದು ವಾಡಿಕೆಗಳಲ್ಲಿ ಬಂದಿದೆ. ಈ ಪಾಡ್ದನಗಳು ಸುಮಾರು ಕ್ರಿ.ಶ. 11ರಿಂದ 14ನೇ ಶತಮಾನದ ಕಾಲದವು ಎಂದು ನಂಬಲಾಗಿದೆ. ಅಲ್ಲದೇ ಕೆಲವು ಪ್ರಮುಖ ಪಾಡ್ದನಗಳಾದ ಬಲೀಂದ್ರ ಪಾಡ್ದನ, ಜುಮಾದಿ ದೈವ ಪಾಡ್ದನ, ಶ್ರೀ ಪಾಡ್ದಣಗಳಲ್ಲಿ ತುಳುನಾಡಿನ ಮುಸ್ಲಿಮರ ಉಲ್ಲೇಖಗಳಿವೆ.

ಇನ್ನೊಂದು ಪಾಡ್ದನವೊಂದರಲ್ಲಿ ತುಳುನಾಡಿನ ಬ್ಯಾರಿಗಳ (ಮುಸ್ಲಿಮರ) ಸಂಬಂಧವನ್ನು ಈ ರೀತಿ ವಿವರಿಸಲಾಗಿದೆ. ಬ್ಯಾರಿಗಳು ಬ್ರಹ್ಮನ ದೇವಸ್ಥಾನದ ಹತ್ತಿರ ಬಂದಾಗ ಹಳ್ಳಿಯ ಜನರು ಅವರನ್ನು ತಡೆದು " ನೀವು ಜಾತಿ ಬ್ಯಾರಿಗಳೋ, ನೀತಿ ಬ್ಯಾರಿಗಳೋ? ನೀವು ಜಾತಿ ಬ್ಯಾರಿಗಳಾಗಿದ್ದರೆ ದೇವಸ್ಥಾನದ ಮೊಗಸಾಲೆಗೆ ಪ್ರವೇಶಿಸಿ ಬಾಗಿಲನ್ನು ಮುಟ್ಟಿ ನಿಮಗೆ ಏನು ಬೇಕಾಗಿದೆ ಎಂದು ಕೇಳಿ" ತುಳು ಮಾಪಿಳ್ಳೆಗಳು (ಮುಸ್ಲಿಮರು) ತಮ್ಮ ಹಿಂದೂ ಸಹೋದರರಿಂದ ಪಡೆದ ಗೌರವ ಇದಾಗಿದೆಯೆಂದು ವಿದ್ವಾಂಸ ಬಿ.ಎ. ಸಾಲೆತ್ತೂರ್ ಅಭಿಪ್ರಾಯ ಪಡುತ್ತಾರೆ.

ತುಳುನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಅವಲೋಕಿಸಿದರೆ ಪಾಡ್ದನಗಳು ಇಲ್ಲವೆ ಭೂತರಾಧನೆಯ ಶ್ಲೋಕಗಳು ಈ ನಾಡಿನ ಮುಖ್ಯ ಪರಂಪರೆಗಳೆಂದು ತಿಳಿಯಲಾಗುತ್ತದೆ. ಭೂತಾರಾಧನೆಯ ಈ ನಾಡಿನ ಅತೀ ಪುರಾತನ ಆರಾಧನೆ ಪದ್ಧತಿಯೂ ಹೌದು. "ಅಲಿ" ಎಂಬ ಒಬ್ಬ ಮುಸ್ಲಿಮ್ ನಾಯಕನನ್ನು ಪಾಡ್ದನಗಳಲ್ಲಿ ದೈವ ಇಲ್ಲವೇ ದೈವಿಕ ಪುರುಷನೆಂದು ವರ್ಣಿಸಲಾಗಿದೆ.

ಇನ್ನೊಂದು ಮುಖ್ಯ ಪಾಡ್ದನವಾದ ಬೊಬ್ಬರ್ಯ ಪಾಡ್ದನದಲ್ಲೂ ಒಬ್ಬ ಮುಸ್ಲಿಮನನ್ನು ದೈವಿ ಪುರುಷನಾಗಿ ಇಲ್ಲವೇ ಮೀನುಗಾರರ ಆರಾಧ್ಯ ದೈವನಾಗಿ ಆರಾಧಿಸಲ್ಪಡುವುದು ಆಶ್ಚರ್ಯಕರವಾಗಿದೆ. ಬಬ್ಬರ್ಯನು ಇಲ್ಲವೆ ಬಾವು ಬ್ಯಾರಿ ತುಳುನಾಡಿನ ಕರಾವಳಿಯ ಜನರಿಗೆ ವಿಶೇಷವಾಗಿ ಮೀನುಗಾರರಿಗೆ ಸಂಕಷ್ಟದ ಸಮಯದಲ್ಲಿ ಸಹಾಯಹಸ್ತವನ್ನು ನೀಡುವ ದೈವವೆಂದು ಬಿಂಬಿಸಲಾಗಿದೆ.

**ಹಂಜುಮಾನ್‌ಗಳು (ಅಂಜುಮಾನ್‌ಗಳು)**

ಹಂಜುಮಾನ್ ಎಂದರೆ ಅಂಜುಮಾನ್ ಎಂಬ ಪದದ ಅಪಭ್ರಂಶ ಸಂಘ, ಕ್ಲಬ್, ಸೊಸೈಟಿ ಅಥವಾ ಗಿಲ್ಡ್ ಎಂಬ ಅರ್ಥವೂ ಅದಕ್ಕಿದೆ. ಅಂಜುಮಾನ್ ಎಂಬುದು ಸಂಘಕ್ಕೆ ಇರುವ ಅತ್ಯಂತ ಜನಪ್ರಿಯ ಪರ್ಯಾಯ ಪದವಾಗಿದ್ದು, ಮುಸ್ಲಿಮರ ಮಧ್ಯೆ ಇಂದಿಗೂ ಹಲವು ಅಂಜುಮನ್‌ಗಳು ಅಸ್ತತ್ವದಲ್ಲಿದೆ.

ಜೈನ ವರ್ತಕರ ವ್ಯಾಪಾರ, ಒಕ್ಕೂಟಗಳು ಹಂಜುಮಾನದ ಮುಸ್ಲಿಮರ ಮಧ್ಯೆ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಹಂಜುಮಾನರು ಸಮಾಜದ ಒಂದು ಪ್ರಮುಖ ಘಟಕದಾಗಿದ್ದರಿಂದ ಎಲ್ಲ ಪ್ರಮುಖ ಸಮಾರಂಭ ಗಳಿಗೂ ಚಟುವಟಿಕೆಗಳಿಗೂ. ಆಡಳಿತಗಾರರು ಅವರನ್ನು ಆಹ್ವಾನಿಸುತ್ತಿದ್ದರು. ಮಂಗಳೂರಿನ ಮುಸ್ಲಿಮರ ವ್ಯಾಪಾರ ಘಟಕವನ್ನು ಹಂಜುಮಾನರು (ಅಂಜುಮಾನ್) ಎಂದೇ ಕರೆಯಲಾಗುತ್ತಿತ್ತು.

ಕ್ರಿ.ಶ. 1419ರ ಮಂಗಳೂರು ಶಿಲಾಶಾಸನವು ಹಂಜುಮಾನ್‌ಗಳಿಗೆ ಸೇರಿದ ಐದು ಮಸೀದಿಗಳನ್ನು ಅಂದಿನ ಮಂಗಳೂರು ರಾಜ್ಯದ ಗವರ್ನರ್ ಧ್ವಂಸಗೊಳಿಸಿದ ಬಗ್ಗೆ ಪ್ರಸ್ತಾಪಿಸುತ್ತದೆ. ಹಂಜುಮಾನ್‌ಗಳು ಈ ಬಗ್ಗೆ ಆಡಳಿತಗಾರನಿಗೆ ದೂರು ನೀಡಿರುವಂತಿದೆ. ವಿಜಯನಗರದ ರಾಜನು ಈ ವಿಷಯದ ಬಗ್ಗೆ ತನಿಖೆ ನಡೆಸಲು ಬೈಚಪ್ಪ ನಾಯಕನನ್ನು ಕಳುಹಿಸಿಕೊಟ್ಟನು ಮತ್ತು ಹಂಜುಮಾನ್‌ಗಳಿಗೆ ಅನ್ಯಾಯವಾಗಿರುವುದನ್ನು ಕಂಡುಕೊಂಡನು. ಅಷ್ಟೇ ಅಲ್ಲ ಮಸೀದಿಗಳನ್ನು ಮತ್ತೆ ನಿರ್ಮಿಸಿ ಕೊಡುವಂತೆಯೂ ಆದೇಶಿಸಿದ್ದನು ಎಂದು ಶಿಲಾಶಾಸನ ಉಲ್ಲೇಖಿಸಿದೆ.

ಕ್ರಿ.ಶ.1405ರಲ್ಲಿ ಬಾರ್ಕೂರಿನಲ್ಲಿ ದೊರೆತ ಇನ್ನೊಂದು ಶಿಲಾಶಾಸನವು ಬಾರ್ಕೂರಿನ ಗವರ್ನರ್ ಸೆಟ್ಟಿಕಾರ ಹಾಲರ ಕಛೇರಿ ಮತ್ತು ಕೆಲಸಗಳಲ್ಲಿ ಹಸ್ತಕ್ಷೇಪ ನಡೆಸಿದ್ದ ಎಂದು ಉಲ್ಲೇಖಿಸಿದೆ. ನಖರಾ ಹಂಜುಮಾನವು ಸೆಟ್ಟಿಕಾರ ಹಾಲರ ವ್ಯಾಪ್ತಿಗೆ ಸೇರಿತ್ತು. ಇದರ ಬಗ್ಗೆ ರಾಜ ಎರಡನೇಯ ಬುಕ್ಕನಿಗೆ ಮನವಿಯನ್ನು ಸಲ್ಲಿಸಲಾಗಿತ್ತು.

ಕ್ರಿ. ಶ.1474ರಲ್ಲಿ ನಖರಾ ಹಂಜುಮಾನ ಮತ್ತು ಸೆಟ್ಟಿಕಾರ ಸಂಘ ಒಂದು ಕಕ್ಷಿಯಾಗಿಯೂ ನೀಡುಂಬೂರು ಮುಡಿಲಾಗಳು ಮತ್ತು ಆರು ಬಲ್ಲಾಳರು ಇನ್ನೊಂದು ಕಕ್ಷಿಯಾಗಿಯೂ ಇರುವಂತೆ ಒಡಿಯೂರಿನ ಜಮೀನಿಗೆ ಸಂಬಂಧಿಸಿ ದಂತೆ ಇದ್ದ ವ್ಯಾಜ್ಯವನ್ನು ಬಾರ್ಕೂರಿನ ಗವರ್ನರ್ ಹಂಜುಮಾನ್ ಅವರ ಪರವಾಗಿ ಇತ್ಯರ್ಥಪಡಿಸಿದ್ದನು. ಈ ಎಲ್ಲಾ ಶಿಲಾ ಶಾಸನಗಳಿಂದ ಹದಿನಾರನೇ

ಶತಮಾನದ ವೇಳೆಗೆ ಮುಸ್ಲಿಮರು – ಮಂಗಳೂರು, ಭಟ್ಕಳ ಮತ್ತು ಹೊನ್ನಾವರಗಳಲ್ಲಿ ವ್ಯಾಪಾರಕ್ಕೆ ಸಂಬಂಧಿಸಿ ಮೇಲುಗೈ ಸಾಧಿಸಿದ್ದರು ಎಂಬುದು ವ್ಯಕ್ತವಾಗುತ್ತದೆ. ಹಂಜುಮಾನರು ಪ್ರಮುಖ ವ್ಯಾಪಾರಿ ಸಂಘವಾಗಿ ಮಾರ್ಪಟ್ಟರು ಮತ್ತು ಅಂದಿನ ಆಡಳಿತಗಾರರು ಕೂಡಾ ಅವರ ಮೇಲೆ ಭಾರಿ ತೆರಿಗೆ ಹಾಕಿದ್ದರು.

ಕ್ರಿ.ಶ.1565ರಲ್ಲಿ ಬಾರ್ಕೂರಿನಲ್ಲಿ ದೊರೆತ ಶಿಲಾಶಾಸನವು ಈ ಅಂಶವನ್ನು ಪುಷ್ಟೀಕರಿಸುತ್ತದೆ. ಬಸ್ರೂರಿನ ಹಂಜುಮಾನ್‌ರು ತಮ್ಮ ಮೇಲಿನ ತೆರಿಗೆಯನ್ನು ಬಂಗಾರದ ರೂಪದಲ್ಲಿ ಕೊಡಲು ಸಾಧ್ಯವಾಗದಿದ್ದಾಗ ಅವರು ತಮ್ಮ ಬಳಿಯಿದ್ದ ಪಳ್ಳಿ ಮರ್ಯಾದೆಯನ್ನು ಹಿಂದಿರುಗಿಸಿದ್ದರು ಎಂದು ಶಿಲಾಶಾಸನವು ಹೇಳುತ್ತದೆ. ಈ ತೆರಿಗೆಗಳ ಮೂಲಕ ಹಂಜುಮಾನಗಳು ರಾಜ್ಯದ ಬೊಕ್ಕಸಕ್ಕೆ ಕೊಡುಗೆ ನೀಡಿದ್ದವು.

**ಬ್ಯಾರಿ ಜನಾಂಗ ಸ್ವತಂತ್ರ ಜನಾಂಗವೇ?**

ಬ್ಯಾರಿ ಸಮುದಾಯವು ತುಳು, ಅರಬಿ, ಮಲಯಾಳದ ಪ್ರಭಾವದೊಂದಿಗೆ ಮಿಶ್ರ ಸಂಸ್ಕೃತಿಯೊಂದಿಗೆ ಉಗಮವಾಗಿದೆ. ಅಂದಿನ ಸಮಾಜದಲ್ಲಿ ಉಚ್ಚ ಜಾತಿಯವರ ಪ್ರಾಬಲ್ಯ ಹೆಚ್ಚುತ್ತಾ ಜೈನ, ಬೌದ್ಧ ಮತದ ಪ್ರಭಾವವೂ ತುಳುನಾಡಿನಲ್ಲಿ ಕಡಿಮೆಯಾದಂತೆ ಕೆಳಜಾತಿಯವರು ಮೇಲ್ಜಾತಿಯವರ ಅಸಮಾನತೆ ಮೇಲು–ಕೀಳು ಪದ್ಧತಿ, ಸಾಮಾಜಿಕ ಬಹಿಷ್ಕಾರಗಳಿಗೆ ಗುರಿಯಾಗಿದ್ದರು. ಈ ಸಂದರ್ಭದಲ್ಲಿ ಇಸ್ಲಾಂ ಅರಬ್ ಧರ್ಮ ಪ್ರಚಾರಕರ ಮೂಲಕ ಕರಾವಳಿ ಪ್ರದೇಶದಲ್ಲಿ ಹರಡಿದಾಗ ಇಲ್ಲಿ ಹೊಸ ಬ್ಯಾರಿ ಸಂಸ್ಕೃತಿಯೊಂದು ಜನ್ಮ ತಾಳಿತು. ಹೊಸ ಸಂಸ್ಕೃತಿಯೊಂದಿಗೆ ಭಾಷೆ, ಸಾಹಿತ್ಯ, ಜನಪದ ಹಾಡು, ಕಥೆ, ಐತಿಹ್ಯಗಳು ಸೇರಿಕೊಂಡವು.

ಬ್ಯಾರಿ ಜನಾಂಗದಲ್ಲಿ ಬೇರೆ –ಬೇರೆ ಭಾಷೆಗಳನ್ನು ಆಡುವ ಜನರು ಸಾಕಷ್ಟು ಮಂದಿ ಇದ್ದಾರೆ. ಅದರಲ್ಲೂ ಬ್ಯಾರಿ ಭಾಷೆಯನ್ನು ಆಡುವ ಜನರಲ್ಲಿ ಬಹುಪಾಲು ಮಲಯಾಳ ಮತ್ತು ತುಳು ಪದಗಳಲ್ಲಿ ಅಡಕವಾಗಿದೆ.

ರಾತೀಬ್, ಮೌಲೂದ್ ಮುಂತಾದವುಗಳು ಅರಬಿ ಭಾಷೆಯಲ್ಲೆ ಇದ್ದು ಬ್ಯಾರಿಗಳಲ್ಲಿ ಆಚರಣೆಯಲ್ಲಿದೆ. ಈಗಲೂ ಇದೆ. ಮಾಲೆಪಾಟ್ಟುಗಳು, ಒಪ್ಪನ ಪ್ಪಾಟ್‌ಗಳ ಸಾಹಿತ್ಯ ಮಿಶ್ರಭಾಷೆಯಲ್ಲಿಯೇ ಅಡಕವಾಗಿದೆ. ಮಾಪಿಳ್ಳೆ ಪಾಟ್‌ಗಳೆಂದೇ ಪ್ರಸಿದ್ಧಿ ಪಡೆದ ಮೊಯಿನ್ ಕುಟ್ಟಿ ವೈದ್ಯರ ಎಲ್ಲಾ ಕಾವ್ಯ ಕೊಡುಗೆಗಳು ಮಿಶ್ರ ಭಾಷೆಯಲ್ಲಿವೆ.

ಬ್ಯಾರಿ ಜನಾಂಗವನ್ನು ಒಂದು ಸ್ವತಂತ್ರ ಜನಾಂಗವಾಗಿ ಅಭಿವೃದ್ಧಿಪಡಿಸ ಬೇಕಾದರೆ ಮೊದಲು ಬ್ಯಾರಿ ಭಾಷೆ, ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸಬೇಕು. ಬ್ಯಾರಿ ಭಾಷೆ ಅಥವ ಜನಾಂಗದಲ್ಲಿ ಈಗ ಇರುವ ಪ್ರಭೇದಗಳನ್ನು ನೀಗಿಸಿ, ಒಂದೇ ಭಾಷೆಯಾಗಿ ಬೆಳೆಸುವ ಪ್ರಯತ್ನ ಮಾಡಬೇಕು. ಪ್ರಪ್ರಥಮ ಹೆಜ್ಜೆಯೇ ಭಾಷೆ ಮತ್ತು ಸಂಸ್ಕೃತಿಗೊಂದು ರೂಪ ನೀಡುವುದು.

**ವ್ಯಾಪ್ತಿ**

ಬ್ಯಾರಿಗಳು ಹಿಂದಿನ ಅವಿಭಜಿತ ದಕ್ಷಿಣ ಕನ್ನಡದ ಭಾಗಗಳಾದ ಮಂಗಳೂರು, ಉಡುಪಿ ಮತ್ತು ಕಾಸರಗೋಡಿಗೆ ಆಗಮಿಸಿದ್ದ ಪ್ರಾಚೀನ ಅರಬ್ ವರ್ತಕರು ಮತ್ತು ಸ್ಥಳೀಯ ಮೂಲವಾಸಿಗಳ ಸಂತಾನವಾಗಿದ್ದಾರೆ. ಒಂದು ವರ್ತಕ ಸಮುದಾಯವಾಗಿರುವ ಕಾರಣ ಇವರು ನದಿ ತಟದಲ್ಲಿ ವಾಸ ಹೂಡಿದ್ದರು. ಅರಬಿ ಸಮುದ್ರದ ಹಿನ್ನೀರಿನಿಂದ ನದಿಗಳ ಮೂಲಕ ದೋಣಿಯಲ್ಲಿ ಸಂಚರಿಸಲು ಸಾಧ್ಯವಿರುವ 15 ಕಿ.ಮೀ ವ್ಯಾಪ್ತಿಯವರೆಗೂ ಈ ಜನಾಂಗ ವಾಸ ಹೂಡಿತ್ತು. ಮತ್ತೊಂದೆಡೆ ಕಾಸರಗೋಡಿನಿಂದ ಮಂಜೇಶ್ವರದವರೆಗಿನ ತೀರ ಪ್ರದೇಶದಲ್ಲಿ ಕೂಡಾ ಇವರು ಇದೇ ರೀತಿ ನದಿ ತೀರದಲ್ಲಿ ವಾಸ ಹೂಡಿದರು. ಇವು ಬ್ಯಾರಿಗಳ ಪ್ರಾಚೀನ ವಸತಿ ಪ್ರದೇಶಗಳಾಗಿದ್ದವು ಮತ್ತು ಇಲ್ಲಿ ಕ್ರಿ.ಶ. 7ನೇ ಶತಮಾನದಷ್ಟು ಹಿಂದೆಯೇ ಇಸ್ಲಾಂನ ಪ್ರವೇಶವಾಗಿತ್ತು.

ಕ್ರಮೇಣ ಬ್ಯಾರಿಗಳು ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಿಗೂ ಹರಡಿದರು. ಕ್ರಿ.ಶ. 1950ರ ನಂತರ ಇವರು ಕೇವಲ ಭಾರತದಲ್ಲಷ್ಟೇ ಅಲ್ಲ ಗಲ್ಫ್, ಅಮೇರಿಕಾ, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳಿಗೂ ತಮ್ಮ ವ್ಯಾಪ್ತಿ ವಿಸ್ತರಿಸಿಕೊಂಡರು. ಇಂದು ಇವರು ಭಾರತದ ಪ್ರಮುಖ ನಗರಗಳಾದ ಬೆಂಗಳೂರು, ಮುಂಬೈ, ಗೋವಾ ಮತ್ತು ಮೈಸೂರಿನಲ್ಲೂ ಕಂಡುಬರುತ್ತಾರೆ. ಇಂದು ಬ್ಯಾರಿಗಳ ಜನಸಂಖ್ಯೆ 15 ಲಕ್ಷವನ್ನು ದಾಟಿದ್ದು, ವಿಶ್ವದಾದ್ಯಾಂತ ಹಬ್ಬಿಕೊಂಡಿದ್ದಾರೆ.

**ಬ್ಯಾರಿ ಸಂಸ್ಕೃತಿಯ ಮೇಲೆ ಮಲೆಯಾಳಿಗಳ ಪ್ರಭಾವ**

ದ.ಕ. ಜಿಲ್ಲೆಯ ಪುತ್ತೂರು, ವಿಟ್ಲ, ಸುಳ್ಯ, ಫಜೀರ್, ಅರ್ಕಾನ, ಮಂಜನಾಡಿ, ಕೊಣಾಜೆ, ಕಿನ್ಯ, ಪಟ್ಟೋರಿ, ನರಿಂಗಾನ, ಕೈರಂಗಳ, ಇರಾ, ಪಾತೂರು, ಬಾಕ್ರಬೈಲ್, ಸಾಲೆತ್ತೂರು, ನಾರ್ಶ, ಬೋಳಂತೂರು, ಸುರಿಬೈಲ್ ಹೀಗೆ ಕೇರಳ ರಾಜ್ಯದ ಗಡಿಭಾಗಕ್ಕೆ ತಾಗಿರುವ ಮತ್ತು ಆಸುಪಾಸಿನ ಪ್ರದೇಶದಲ್ಲಿ ನೆಲೆಸಿರುವ

ಬ್ಯಾರಿ ಜನಾಂಗದ ಮೇಲೆ ಮಲೆಯಾಳಿಗರ ಪ್ರಭಾವವೂ ಹೆಚ್ಚಿದೆ.

ಮಲಯಾಳ ಭಾಷೆಯನ್ನಾಡುವವರು ದ್ರಾವಿಡ ಜನವರ್ಗಕ್ಕೆ ಸೇರಿದವರು. ಆರ್ಯರು ಭಾರತಕ್ಕೆ ಬರುವ ಮುಂಚೆಯೇ ಅವರು ಈ ಕಡೆ ಬಂದವರು.

ಅರಬ್ ವ್ಯಾಪಾರಿಗಳು ಮಲಬಾರ್ ಕರಾವಳಿ ಹಾಗೂ ತುಳುನಾಡಿನ ಕರಾವಳಿಯಲ್ಲಿ ಬಂದು ನೆಲೆಸಿದಾಗ ಅವರು ಸ್ಥಳೀಯ ಹೆಂಗಸರನ್ನು ಮದುವೆ ಯಾದರು. ಈ ಸಂಪರ್ಕದಿಂದ ಹೊಸದೊಂದು ಜನ ವರ್ಗದ ನಿರ್ಮಾಣ ವಾಯಿತು. ಹಾಗೆ ಮದುವೆ ಮಾಡಿಕೊಂಡು ಮತಾಂತರ ಹೊಂದಿದ ಹೆಂಗಸರೂ ಮಕ್ಕಳೂ ತಮ್ಮ ತುಳು ಭಾಷೆಯನ್ನೇ ಬಳಸಿದರೂ ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ತುಳು ಮಾತಾಡುವವರೊಂದಿಗೆ ಅವರ ಸಂಬಂಧ ಕ್ಷೀಣಿಸುತ್ತಾ ಹೋಯಿತು. ಸಾಮಾಜಿಕವಾಗಿ ಮಲಬಾರಿನ ಮುಸಲ್ಮಾನರೊಡನೆ ಅವರ ಸಂಪರ್ಕ ಹೆಚ್ಚಾಗುತ್ತಾ ಹೋಯಿತು. ಹೀಗಾಗಿ ಅವರ ಆಡುನುಡಿಯಲ್ಲಿ ತುಳುವಿನ ಧ್ವನಿ, ವ್ಯಾಕರಣದ ಪ್ರಭಾವವಿದ್ದರೂ ಶಬ್ದ ಸಂಪತ್ತು ಮಲಯಾಳ ಮಾತಾಡುವ ಮುಸಲ್ಮಾನರಿಂದ ಪ್ರಭಾವಿತವಾಯಿತು. ಆಡು ಭಾಷೆಗಳನ್ನಾಡುವವರಲ್ಲಿ ಪರಸ್ಪರ ಸಂಪರ್ಕ ಕಡಮೆಯಾಗಲಿಕ್ಕೆ ಪ್ರಾರಂಭವಾದಾಗ ವ್ಯತ್ಯಾಸಗಳು ಹೆಚ್ಚಾಗತೊಡಗಿ ಅವು ಪ್ರತ್ಯೇಕ ಭಾಷೆಗಳಾಗುತ್ತವೆ. ಹೀಗಾಗಿ ದಕ್ಷಿಣ ಕನ್ನಡದ ಬ್ಯಾರಿ ಜನಾಂಗದವರು ಅತ್ತ ಮಲಯಾಳದ ಶಬ್ದ ಸಂಪತ್ತನ್ನು ಬೆಳೆಸಿಕೊಂಡರು.

ಕಾಸರಗೋಡು, ಮಂಜೇಶ್ವರ ಮತ್ತು ಕೊಣಾಜೆ, ಪಜೀರ್, ವಿಟ್ಲ, ಪುತ್ತೂರು, ಮಂಜನಾಡಿ, ಕಿನ್ಯಾ ಪರಿಸರದ ಬಹುತೇಕ ಮಂದಿ ಮಜ್ಞಳಾವರಂ ಎನ್ನುವುದರ ಬದಲು ಮೈಕಾಲ ಎಂದೇ ಹೇಳುತ್ತಾರೆ. ಹಾಗಾಗಿ ಅವರನ್ನು ಬ್ಯಾರಿಗಳು ಎಂದು ಪರಿಗಣಿಸಬಹುದು.

ಮಲಯಾಳಂನಲ್ಲಿ ನೀರಿಗೆ 'ವೆಳ್ಳಂ' ಮತ್ತು ಬೆಳಿಗ್ಗೆಗೆ 'ರ್ಯಾವಿಲೆ' ಎನ್ನುತ್ತಾರೆ. ಆದರೆ ಮಂಜೇಶ್ವರ ಆಸುಪಾಸಿನ ಬ್ಯಾರಿಗಳು 'ವೆಳ್ಳಂ' ಬದಲು ಬ್ಯಾರಿಗಳಂತೆ 'ತನ್ನಿ' ಮತ್ತು 'ರ್ಯಾವಿಲೆ' ಎಂಬುದರ ಬದಲು 'ಸುಬೈ' ಎನ್ನುತ್ತಾರೆ. ಇದು ಕೂಡಾ ಇವರನ್ನು ಬ್ಯಾರಿಗಳು ಎಂದು ಗುರುತಿಸಲು ಸಹಕಾರಿಯಾದೀತು.

### ಬ್ಯಾರಿ ಸಂಸ್ಕೃತಿಯ ಮೇಲೆ ಜೈನರ ಪ್ರಭಾವ

ಜೈನರೊಂದಿಗಿನ ಸಂಪರ್ಕದಿಂದಾಗಿ ಬ್ಯಾರಿಗಳು ಪ್ರವರ್ಧಮಾನಕ್ಕೆ ಬಂದರು. ಹದಿನಾರನೇ ಶತಮಾನದಲ್ಲಿ ಚೌಟರು, ಬಂಗರು ಮತ್ತು ಅಜಿಲಗಳೆಂಬ ಜೈನ ಕುಟುಂಬಗಳು ಬ್ಯಾರಿಗಳ ವ್ಯಾಪಾರ ಮತ್ತು ಸೇವೆಗೆ ಹೆಚ್ಚಿನ ಉತ್ತೇಜನ ಕೊಟ್ಟರು.

ಬ್ಯಾರಿಗಳು ಅತ್ಯಂತ ನಂಬಿಗಸ್ಥ ಸೇವಕರೆಂಬ ಗೌರವವನ್ನು ಸಂಪಾದಿಸಿದರು. ರಾಣಿ ಅಬ್ಬಕ್ಕ ಜತೆಗೆ ಸೇವಕರಾಗಿ ಕಾರ್ಯನಿರ್ವಹಿಸಿದ ಬಗ್ಗೆಯೂ ಉಲ್ಲೇಖಗಳೂ ಕಂಡುಬರುತ್ತದೆ. ಪೋರ್ಚುಗೀಸರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಸೇನಾನಿಯಾಗಿಯೂ ಅಬ್ಬಕ್ಕ ರಾಣಿಯ ಸೈನಿಕರಾಗಿಯೂ ಕಾರ್ಯ ನಿರ್ವಹಿಸಿದ್ದರು.

ತುಳುನಾಡಿನಲ್ಲಿ ಸುದೀರ್ಘ ಕಾಲದವರೆಗೂ ಪ್ರಭುತ್ವವಾಗಿ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಂಡಿದ್ದರು. ಜೈನರ ಮುಖ್ಯವಾದ ಹತ್ತು ಬೀಡುಗಳಿದ್ದವು.

1. ಪುತ್ತಿಗೆ (ಮೂಡಬಿದ್ರೆ)ಯ ಚೌಟರು
2. ಬಂಗಪಾಡಿಯ ಬಂಗರಸರು
3. ವೇಣೂರಿನ ಅಜಿಲರು
4. ಕಾರ್ಕಳದ ಬೈರರಸರು
5. ಸುರಾಲಿನ ತೋಳಹಾರರು
6. ಮುಲ್ಕಿಯ ಸಾಮಂತರು
7. ಎರ್ಮಾಲು ಬೀಡು
8. ಪಣಪಿಲು ಬೀಡು
9. ಪಡುಬಿದ್ರೆ ಬೀಡು
10. ಕೂಳೂರು ಬೀಡು

ಇದಲ್ಲದೆ 200ಕ್ಕಿಂತಲೂ ಹೆಚ್ಚು ಜೈನ ಬೀಡುಗಳಿದ್ದವು ಕುಂದಾಪುರದಿಂದ ಕಾಸರಗೋಡು ಜಿಲ್ಲೆಯ ಆರಕ್ಕಾಡಿ ಉಳುವಾರು ಗ್ರಾಮಗಳಲ್ಲೂ ಜೈನ ಬೀಡು ಗಳಿದ್ದವು ಎಂದು ಗಣಪತಿ ರಾವ್ ಐಗಳು ಬರೆದಿದ್ದಾರೆ. ಬ್ಯಾರಿಗಳು ವ್ಯಾಪಾರಿಗಳಾಗಿದ್ದು ಜೈನರೊಡನೆ ನಿಕಟ ಸಂಪರ್ಕವಿತ್ತು. ಜೈನ ಬೀಡುಗಳಿದ್ದಲ್ಲೆಲ್ಲಾ ಬ್ಯಾರಿಗಳು ಕೂಡಾ ನೆಲೆ ನಿಂತಿದ್ದರು.

ಜೈನ ಸಂಪ್ರದಾಯದ ಪ್ರಭಾವದಿಂದ ಬೆಳೆದು ಬಂದ ಪ್ರಭುತ್ವವಾದದ ಪರಿಣಾಮವೇ 'ಪದಿನಾರಗ' ಎಂಬುದನ್ನು ತುಳುನಾಡಿನಾದ್ಯಂತ ವ್ಯವಸ್ಥಿತವಾಗಿ ಸ್ಥಾಪಿಸಲ್ಪಟ್ಟ ಜೈನ್ ವರ್ತಕ ಸಂಪ್ರದಾಯವನ್ನು ಸ್ಪಷ್ಟವಾಗಿ ಗುರುತಿಸಬಹುದು. ಬ್ಯಾರಿಗಳ ಹಂಜುಮಾನಗಳ ಪ್ರಭುತ್ವ ಪ್ರಾಚೀನವಾದದ್ದು. ವರ್ತಕ ಸಮುದಾಯ ವಾಗಿ ಬೆಳೆದ ಬ್ಯಾರಿಗಳು ನಿಕಟ ವರ್ತಕ ಸಮುದಾಗವಾದ ಜೈನ ಸಂಪ್ರದಾಯ ವನ್ನು ಅನುಕರಿಸಿದರು. ಪರಿಣಾಮವಾಗಿ, ಜೈನ ಸೆಟ್ಟಿಕಾರರ ಸಂಘದ ವರ್ತಕ ಕೇಂದ್ರವಾದ ಮಂಗಳೂರಿನ್ನಲಿ ಬ್ಯಾರಿಗಳ 'ಪದಿನಾರಗ ಪದ್ಧತಿ' ಸ್ಥಾಪಿಸಲಾಯಿತು.

ಅವರ ಆಚಾರ ಪದ್ಧತಿಗಳು ಜೈನ ಪ್ರಭುತ್ವವಾದದ ಪ್ರಭಾವದಿಂದಾಗಿತ್ತು. ಪದಿನಾರಗ ಮತ್ತು ಜೈನ ವರ್ತಕ ಸಂಘಗಳಲ್ಲಿ ಕಂಡುಬರುವ ಸಾಂಸ್ಕೃತಿಕ ಸಾಮೀಪ್ಯಕ್ಕೆ ಧಾರಾಳ ಉದಾಹರಣೆಗಳು ದೊರಕುತ್ತವೆ.

ಜೈನರ ಪ್ರಭಾವವನ್ನು ಬ್ಯಾರಿ ಸಂಸ್ಕೃತಿಯಲ್ಲೂ ಸ್ಪಷ್ಟವಾಗಿ ಕಾಣಬಹುದು. ಬ್ಯಾರಿ ಮನೆಗಳ ವಾಸ್ತು ಮತ್ತು ವಿನ್ಯಾಸ ಪ್ರತ್ಯೇಕವಾಗಿ 'ಅಗ'ಗಳಲ್ಲಿ ಮತ್ತು ಬ್ಯಾರಿ ಪ್ರಮುಖರಲ್ಲಿ ಮತ್ತು ಬಹಳಷ್ಟು ನಿಕಟವಾಗಿ ಬ್ಯಾರಿ ಸ್ತ್ರೀಯರ ಆಭರಣಗಳಲ್ಲಿ ಕಾಣಬಹುದು. ಬಳೆಗಳಲ್ಲಿ ಪಿರ್ಗಿಬಳೆ, ಮುರ್ಗಿಬಳೆ, ಸರ್ಗಿಬಳೆ, ಎಲಬಳೆ, (ಎಡಬಳೆ), ತಲೆ ಸಿಂಗಾರದಲ್ಲಿ ತಲೆ ಸಿಂಗಾರ, ಬಾಕಟಿ, ಕೇದಗೆ, ಚೌರಿ, ಜಡೆಸುಲ್ಲಿ, ಕಿವಿಯಲ್ಲಿ ಓಲೆ, ಆಲಿಕತ್ತು, ಕಾಯಲಂ, ಕೊಪ್ಪು, ಅರಳಿ, ಸರಪಳಿ ಇತ್ಯಾದಿ. ಕುತ್ತಿಗೆಯ ಉರುಕು, ಮಿಸ್ರಿಮಾಲೆ, ಚಾವಡ, ತಾಲಿಮಣಿ, ಚೈನು ಇತ್ಯಾದಿ, ಕಾಲುಂಗರಕ್ಕೂ ಕುನುಪು, ಕಾಲಿನ ಚೈನು, ಸೊಂಟದ ಪಟ್ಟಿ ಅರೆಂಞಣ ಇತ್ಯಾದಿಗಳೆಲ್ಲಾ ಜೈನರಿಂದ ಬಂದಿರಬೇಕೆಂದೂ ಜೈನ ಆಭರಣಗಳನ್ನು ಪರಿಶೀಲಿಸಿದಾಗ ತಿಳಿಯಬಹುದು. ಸಾಮಾಜಿಕ ವ್ಯವಸ್ಥೆಯಲ್ಲೂ, ವ್ಯಾಪಾರದಲ್ಲೂ ಕೂಡ ಜೈನರ ಪ್ರಭಾವ ಇದೆ. ಜೈನರ ಪ್ರಭಾವವೇ ಒಂದು ಅಧ್ಯಯನ ವಿಷಯವಾಗಬಹುದು.

ತುಳುನಾಡಿನ ಪರಂಪರೆಯಲ್ಲಿ ಜೈನ ಬಲ್ಲಾಳರು ಮತ್ತು ಹೆಗ್ಗಡೆಗಳು ದಕ್ಕನದಿಂದ ಕರಾವಳಿಯವರೆಗೆ ಹಬ್ಬಿಕೊಂಡಿರುವ ಬಗ್ಗೆ ಪ್ರಸ್ತಾವವಿದೆ. ಒಂದು ಸಾವಿರನೇ ಇಸವಿಯ ವೇಳೆಗೆ ಜೈನರು ದಕ್ಕನದಿಂದ ಕರಾವಳಿ ಪ್ರದೇಶಕ್ಕೆ ವಲಸೆ ಬಂದರು. ಒಂದು ರೀತಿಯ ಜಹಗಿರ್ದಾರಿ ಪ್ರವೃತಿಯವರಾಗಿದ್ದರು. ಮಣ್ಣಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು ಸಮಾಜದಲ್ಲಿ ಊಳಿಗಮಾನ್ಯ ವ್ಯವಸ್ಥೆಯನ್ನು ಸ್ಥಾಪಿಸಿದರು. ಪ್ರತಿ ಕುಟುಂಬವೂ ಬಲ್ಲಾಳ್ ಅಥವಾ ಹೆಗ್ಗಡೆ ಎಂದು ಕರೆಯಲ್ಪಡುತ್ತಿತ್ತು ಮತ್ತು ಅವರು ಮಾಗಣೆಯ ದಣಿಗಳಾಗಿದ್ದರು. ಪ್ರತಿ ಕುಟುಂಬಕ್ಕೆ ಸಹಾಯ ಮಾಡಲು ಒಬ್ಬ ಬಾವಾ, ಮೂರು ಬಾಲಿಕೆ ಮತ್ತು ನಾಲ್ಕು ಪರಾರಿಗಳಿದ್ದರು.

ಜೈನ ವರ್ತಕರ ವ್ಯಾಪಾರಿ ಒಕ್ಕೂಟಗಳು ಹಂಜುಮಾನದ ಮುಸ್ಲಿಮರ ಮಧ್ಯೆ ವ್ಯಾಪಾರಿ ಸಂಘಗಳು ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಜೈನ ವರ್ತಕರ ಒಕ್ಕೂಟಗಳು ಸೆಟ್ಟಿಕಾರ ಸಂಘಗಳೆಂದು ಹೆಸರಾಗಿದ್ದವು. ಸೆಟ್ಟಿಕಾರ ಸಂಘಗಳಂತೆಯೇ ಮುಸ್ಲಿಮರ ಹಂಜುಮಾನಗಳು ಕೂಡಾ ಸ್ಥಳೀಯ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಜೈನ ಸೆಟ್ಟಿಕಾರ ಸಂಘಗಳಂತೆಯೇ ಹಂಜುಮಾನಗಳು

ಮಂಗಳೂರು, ಬಾರ್ಕೂರು ಮತ್ತು ಬಸ್ರೂರುಗಳ ಮೇಲೆ ನಿಯಂತ್ರಣ ಹೊಂದಿದ್ದವು.

ಜೈನ ಸೆಟ್ಟಿಕಾರ ಸಂಘಗಳು 16 ಕುಟುಂಬವನ್ನು ನಗರಗಳಲ್ಲೂ 8 ಕುಟುಂಬವನ್ನು ಪಟ್ಟಣಗಳಲ್ಲು ಹೊಂದಿತ್ತು. ಬಾರ್ಕೂರು ಮತ್ತು ಮಂಗಳೂರು ಎರಡು ನಗರಗಳಾಗಿದ್ದು ಇಲ್ಲಿ ಹಂಜುಮನ್‌ಗಳು ಮತ್ತು ಸೆಟ್ಟಿಕಾರ ಸಂಘಗಳು ಇದ್ದವು. ಜೈನ ಧರ್ಮದಿಂದ ಮತಾಂತರಗೊಂಡ ಮುಸ್ಲಿಮರಲ್ಲಿ ಜೈನರದೇ ಆದ ವ್ಯಾಪಾರಿ ವಿಧಾನಗಳು ಪ್ರಭಾವ ಬಹಳವಾಗಿದ್ದುದು ಕಂಡುಬರುತ್ತಿತ್ತು.

ಜೈನ ಮುಸ್ಲಿಮ್ ಸಂಬಂಧವು ಮಂಗಳೂರಿನಲ್ಲಿ ಅಧಿಕವಾಗಿ ಈ ಹದಿನಾರು ಮನೆಗಳವರೂ ಮುಸ್ಲಿಮ್ ಮತಾನುಯಾಯಿಗಳಾಗಿ ಮಾರ್ಪಟ್ಟು ಜೈನ ವ್ಯಾಪಾರಿ ಮನೆತನದವರೇ ಆಗಿದ್ದರು. ಈ ಮನೆಗಳಿಗಿರುವ ಹೆಸರುಗಳಲ್ಲಿ ಚೆಟ್ರ ಅಗ, ಬಲ್ಲಾಳ್ ಅಗ, ಪಾಂಡ್ಯಲನ (ಚೆರಿಯ ಬಲ್ಲಾಳಗ) ಇತ್ಯಾದಿಗಳು ಜೈನರ ಪ್ರಭಾವವನ್ನು ತೋರಿಸುತ್ತದೆ.

**ಬ್ಯಾರಿ ಮಾಪ್ಲಾ (ಮಾಪಿಳ್ಳೆ)ಗಳ ಸಂಬಂಧ**

ಕೇರಳದ ಮಲಪ್ಪುರಂ ಜಿಲ್ಲೆಯಿಂದ ಕಣ್ಣೂರು, ಕಾಸರಗೋಡು ಜಿಲ್ಲೆಗಳನ್ನು ಒಳಗೊಂಡ ಈ ಪ್ರದೇಶವನ್ನು ಭಾಷಾ ರಾಜ್ಯಗಳಾಗಿ ವಿಂಡಿಸುವುದಕ್ಕೆ ಮೊದಲು ಮಲಬಾರ್ ಎಂದೇ ಗುರುತಿಸಲಾಗಿತ್ತು. ಅರಬರೂ ಕೂಡಾ ಈ ಪ್ರದೇಶವನ್ನು ಮಲಬಾರ್ ಎಂದೇ ಕರೆಯುತ್ತಿದ್ದರು. ಈ ಪ್ರದೇಶಕ್ಕೆ ಹತ್ತಿರವಾಗಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಮಲಬಾರಿನ ಮುಸ್ಲಿಮರು ವಲಸೆ ಬಂದು ನೆಲೆಸಿರುವ ಸಾಧ್ಯತೆಗಳು ಇದೆ. ಹಾಗೇ ಬಂದ ಮಲಬಾರಿ ಮುಸಲ್ಮಾನರನ್ನು ಇಲ್ಲಿನ ತುಳುವರು ಬ್ಯಾರಿಗಳು ಎಂದು ಸಂಬೋಧಿಸಿರಬಹುದು ಎಂದು ಲೇಖಕ ಸಾಲೆತ್ತೂರು ಅಬೂಬಕ್ಕರ್ ಫೈಝಿ ಅಭಿಪ್ರಾಯ ಪಡುತ್ತಾರೆ.

ಕೇರಳದ ಮಲಬಾರ ಪ್ರಾಂತ್ಯದಲ್ಲಿ ವಾಸವಾಗಿರುವ ಮುಸ್ಲಿಮರನ್ನು ಮಾಪ್ಲಾಗಳೆಂದು ಕರೆಯುತ್ತಾರೆ. ಈ ಮಾಪ್ಲಾಗಳೇ ವ್ಯಾಪಾರ ನಿಮಿತ್ತ ತಮಿಳು ನಾಡಿಗೆ ಬಂದು ತಳವೂರಿ ಇಲ್ಲಿನ ಸ್ತ್ರೀಯರನ್ನು ಮದುವೆಯಾಗಿ ಬ್ಯಾರಿಗಳೆಂದು ಗುರುತಿಸಿಕೊಂಡರು ಎಂಬ ವ್ಯಾಖ್ಯಾನಕ್ಕೆ ಸಾಹಿತಿ ಫಕೀರ್ ಮುಹಮ್ಮದ್ ಕಟ್ಪಾಡಿ ಅಭಿಮತ ವ್ಯಕ್ತಪಡಿಸುತ್ತಾರೆ.

ಇತಿಹಾಸಕಾರ ಬಿ.ಎ. ಸಾಲೆತ್ತೂರು ತುಳು ಮಾಪಿಳ್ಳೆಗಳು (ಬ್ಯಾರಿಗಳು) ಅರಬ್ಬೀ ತಂದೆಗೆ ಮತ್ತು ತುಳು ತಾಯಿಗೆ ಹುಟ್ಟಿದ ಮಕ್ಕಳು ಎಂದು ದಾಖಲಿಸುತ್ತಾರೆ.

ಇದು ಬ್ಯಾರಿ ಜನಾಂಗದ ಅಸ್ತಿತ್ವದ ಕಾಲಘಟ್ಟವನ್ನು ಸೂಚಿಸುತ್ತದೆ. ಬ್ಯಾರಿಗಳು ಧಾರ್ಮಿಕವಾಗಿ ಇಸ್ಲಾಂ ಧರ್ಮಾವನ್ನು ಅಂಗೀಕರಿಸಿದ್ದರೂ ಅವರ ಆಚಾರ ವಿಚಾರದಲ್ಲಿ ಕೆಲವು ತುಳು ಸಂಸ್ಕೃತಿಗಳು ನುಸುಳಿಕೊಂಡಿರುವುದನ್ನು ಕಾಣಬಹುದು.

ಕಾಸರಗೋಡಿನಿಂದ ಹಿಡಿದು ಸುತ್ತಮುತ್ತಲಿನ ಪ್ರದೇಶದಲ್ಲಿ ಮಲಯಾಳ ಭಾಷೆಯ ಶಾಲಿಯಾರ್ (ನೇಕಾರ), ಚೆಲ್ಸ (ಗಾಣಿಗ), ಮಣಿಯಾಣಿ (ಯಾದವ), ಬಲ್ಯಾ (ಕಣಿ ನೋಕುರಜ), ವಣ್ಣಾನ್ (ದೈವ ನರ್ತಕ), ಮಲೆಯನ್ (ದೈವ ನರ್ತಕ), ತೀಯನ್ (ಬಿಲ್ಲವ), ಮೋಯನ್ (ಬೋವಿ), ಬ್ಯಾರಿ (ಮಾಪಿಳ್ಳೆ) ಭಾಷೆಯಲ್ಲಿ ಜನರು ಮಾತನಾಡುತ್ತಾರೆ. ಇವರ ಈ ಭಾಷೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸ ಉಂಟಾಗುತ್ತದೆ.

ಆದರೆ ಬ್ಯಾರಿ ಎಂಬ ಪದ ಬಳಕೆಯು ಕೇವಲ ತುಳುನಾಡಿನಲ್ಲಿ ಮಾತ್ರ ಕಂಡು ಬಂದ ಕಾರಣ ಮತ್ತು ಬ್ಯಾರವನ್ನೇ ನೆಚ್ಚಿಕೊಂಡ ಜನರನ್ನು ಬ್ಯಾರಿಗಳು ಎಂದು ತುಳುವರು ಕರೆದಿರುವ ಸಾಧ್ಯತೆ ಹೆಚ್ಚಿದೆ, ಅದಕ್ಕೆ ಪೂರಕವಾಗಿ, ಬ್ಯಾರಿ ಭಾಷೆ ಮಾಪಿಳ್ಳೆ ಮೂಲದ್ದಲ್ಲ. ಅದು ತುಳು ಮೂಲದ್ದೇ ಆಗಿದೆ ಮತ್ತು ಬ್ಯಾರಿಗಳು ತುಳು ನಾಡಿನವರೇ ಆಗಿದ್ದಾರೆ ಎಂದು ಲೇಖಕ ಪೇರೂರು ಜಾರು ಅವರ ಅಭಿಪ್ರಾಯವಾಗಿದೆ.

ಒಟ್ಟಿನಲ್ಲಿ ಬ್ಯಾರಿ ಎಂಬ ಪದ ತುಳು ಭಾಷೆಯದ್ದಾಗಿದ್ದು, ವ್ಯಾಪಾರಕ್ಕೆ ತುಳುವಿನಲ್ಲಿ ಬ್ಯಾರ ಮತ್ತು ವ್ಯಾಪಾರಿಗೆ ಬ್ಯಾರಿ ಎನ್ನಲಾಗುತ್ತಿವೆ. ಇದು ತುಳುವರು ಬ್ಯಾರಿಗಳಿಗೆ ಕೊಟ್ಟ ಗೌರವ ಸೂಚಕ ಪದವಾಗಿದೆ ಎಂದು ಹೇಳಬಹುದಾಗಿದೆ.

ಬ್ಯಾರಿಗಳ ಸಂಸ್ಕೃತಿಯಲ್ಲಿ ಮುಖ್ಯವಾಗಿ ಮಾಪ್ಲಾ ಸಂಸ್ಕೃತಿಯೇ ತೋರುತ್ತದೆ. ಮಲಬಾರಿನ ಹಿಂದೂ ಮಹಿಳೆಯರು ಕಿವಿ ಮೇಲ್ಬಾಗವನ್ನು ಚುಚ್ಚಿ ಆಭರಣ ಗಳನ್ನಿಡುತ್ತಿದ್ದರು. ಅಲ್ಲದೆ ಅಡ್ಡಮುಂಡು, ಉದ್ದಕೈಯ ಕುಪ್ಪಯ ಹಾಕುತ್ತಿದ್ದರು. ಈಗಲೂ ಕಲ್ಲಿಕೋಟೆ, ಕಾಂಞಗಾಡು ಮುಂತಾದ ಪ್ರದೇಶಗಳ ಪ್ರಾಯದ ಹಿಂದೂ ಹೆಂಗಸರಲ್ಲಿ ಈ ರೀತಿಯ ವೇಷ ಭೂಷಣ ಕಾಣಬಹುದು ಮಾಪ್ಲಾ ಸ್ತ್ರೀಯರು ಅಡ್ಡಮುಂಡು (ಕಾಚಿ), ಕೈಯ ಕುಪ್ಪಾಯ, ಕಿವಿ ಮೇಲ್ಬಾಗಕ್ಕೆ ಅಲಿಕತ್ ಹಾಕುವುದು ಕಾಣಬಹುದು. ಅದು ಅಲ್ಲಿಯ ಹಿಂದೂ ಸ್ತ್ರೀಯರಿಗಿದ್ದ ಸಂಪ್ರದಾಯವನ್ನೇ ಮಾಪ್ಲಾ ಸ್ತ್ರೀಯರೂ ಅನುಸರಿಸಿದುದಾಗಿದೆ. ಅದು ಮುಸ್ಲಿಂ ಸಂಪ್ರದಾಯವೂ ಅಲ್ಲ, ಅರಬ್ ಸಂಸ್ಕೃತಿಯೂ ಅಲ್ಲ.

ಮಾಪ್ಲಾ ಗಂಡಸರ ಮತ್ತು ಬ್ಯಾರಿ ಗಂಡಸರ ವೇಷ ಭೂಷಣಗಳು ಹೆಚ್ಚು ಕಡಿಮೆ ಒಂದೇ ಆಗಿದೆ. (ಲುಂಗಿ, ಶರ್ಟು, ತಲೆಗೆ ಟೊಪ್ಪಿ ಅಥವಾ ಮುಂಡಾಸು)

ಇದರಿಂದ ಬ್ಯಾರಿಗಳು ಮೂಲತಃ ಉತ್ತರ ಮಲಬಾರಿನಿಂದ ವಲಸೆ ಬಂದು ತುಳುನಾಡಿನಲ್ಲಿ ನೆಲೆಸಿದ ಮಾಪ್ಲಾಗಳ ಸಂತಾನವೆಂದು ಊಹಿಸಬಹುದು. ಆದರೆ ಮಾಪ್ಲಾಗಳಲ್ಲಿ ಕೆಲವರು ಇಲ್ಲಿಯ ತುಳು ಸ್ತ್ರೀಯರನ್ನು ಮದುವೆಯಾಗಿ ಅವರ ಪ್ರಭಾವದಿಂದ ಆ ಸ್ತ್ರೀಗಳು ಅವರ ಮಕ್ಕಳು ಮಾಪ್ಲಾ ಸಂಸ್ಕೃತಿಗೆ ಹೊಂದಿಕೊಂಡಿರ ಬೇಕು.

ಹೀಗೆ ಮಾಪ್ಲಾ ಮತ್ತು ತುಳು ಭಾಷೆಗಳು ಮಿಶ್ರಣವಾಗಿ ಬ್ಯಾರಿ ಭಾಷೆ, ಜನಾಂಗ ಬೆಳೆಯಲು ಕಾರಣವಾಯಿತು. ಮಾಪ್ಲಾಗಳು ತುಳುನಾಡಿನಲ್ಲಿ ನೆಲೆಸಿ ತುಳು ಭಾಷೆಯ ಅತಿಯಾದ ಸಂಪರ್ಕದಿಂಲೂ ಮಲೆಯಾಳಿ ಭಾಷೆಯ ಸಂಪರ್ಕ ಕೊರತೆಯಿಂದಲೂ ಅವರ ಭಾಷೆಗೆ ಹೆಚ್ಚಿನ ತುಳು ಶಬ್ದಗಳು ವ್ಯಾಕರಣವೂ ಸೇರಿ ಬ್ಯಾರಿಭಾಷೆಯ ರೂಪ ಪಡೆಯಿತು.

**ಬ್ಯಾರಿಗಳು ಮಾಪಿಳ್ಳಗಳಲ್ಲ**

ತುಳುನಾಡಿನ ಶೇ.80ಕ್ಕೂ ಹೆಚ್ಚು ಮುಸ್ಲಿಮರು ಬ್ಯಾರಿಗಳಾಗಿದ್ದಾರೆ. ಆದೆ ಇತಿಹಾಸಕಾರರು ಮತ್ತು ಲೇಖಕರು ಈ ಮುಸ್ಲಿಮರನ್ನು ಮಾಪಿಳ್ಳೆಗಳೆಂದು ಗುರುತಿಸಿದ್ದಾರೆ. ಇಪ್ಪತ್ತನೇ ಶತಮಾನದ ಆರಂಭದ ವರ್ಷಗಳವರೆಗೂ ಬ್ಯಾರಿಗಳು ತಮ್ಮ ಹೆಸರಿನ ಮುಂದೆ ಅಭಿಮಾನ ಪೂರ್ವಕವಾಗಿ ಬ್ಯಾರಿಗಳು ಎಂದು ಬರೆಯುತ್ತಿದ್ದರು. ಸರಕಾರಿ ದಾಖಲೆಗಳು ಕೂಡಾ ಅವರನ್ನು ಬ್ಯಾರಿಗಳೆಂದೇ ಗುರುತಿಸಿದೆ. ಸಂಸ್ಕೃತಿ ಮತ್ತು ಸಂಪ್ರದಾಯದ ವಿಚಾರದಲ್ಲಿ ಇವರು ಮಾಪಿಳ್ಳೆ ಗಳಿಗಿಂತ ಭಿನ್ನ. ಇತಿಹಾಸಕಾರರು ಈ ವಾಸ್ತವಗಳನ್ನು ಕಡೆಗಣಿಸಿದರು ಮತ್ತು ಧಾರ್ಮಿಕ ಮದ್ರಸಾಗಳ ಮೇಲಿನ ಅವಲಂಬನೆಯ ಕಾರಣ ಬ್ಯಾರಿಗಳಿಗೆ ಮಲಬಾರಿನ ಮಾಪಿಳ್ಳೆಗಳೊಂದಿಗೆ ಸಾಮ್ಯತೆ ಇದ್ದುದರಿಂದ ಅವರನ್ನು ಅದೇ ಗುಂಪಿಗೆ ಸೇರಿಸಿಬಿಟ್ಟರು. ಇದರ ಪರಿಣಾಮವಾಗಿ ಅತ್ಯಂತ ಮುಖ್ಯ ಜನವಿಭಾಗ ವಾಗಿದ್ದ ಬ್ಯಾರಿಗಳು ತುಳುನಾಡಿನ ಭವ್ಯ ಚರಿತ್ರೆಯಿಂದ ಹೊರಗುಳಿಯು ವಂತಾಯಿತು. ವಾಸ್ತವದಲ್ಲಿ ಬ್ಯಾರಿಗಳು ಮಾಪಿಳ್ಳಗಳಿಂದ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿದೆ ಎಂಬ ಪ್ರತೀತಿ ಇದೆ.

**ತುಳು–ಬ್ಯಾರಿ ಸಂಬಂಧ**

ಬ್ಯಾರಿಗಳು ಹಾಗೂ ತುಳುವರು ತುಳುನಾಡೆಂಬ ಅತೀ ಸುಂದರ ಪ್ರದೇಶದಲ್ಲಿ ಹುಟ್ಟಿ ಬೆಳೆದವರು. ಇಲ್ಲಿಯ ಸಮೃದ್ಧ ಭೂಮಿ, ಕಾಡು ಹಾಗೂ ಸಮುದ್ರ

ನಮ್ಮನ್ನು ಸಾಹಸಶೀಲರನ್ನಾಗಿ ಮಾಡಿದೆ. ಒಂದು ಕಡೆಯಲ್ಲಿ ಬೋರ್ಗರೆಯುವ ಅರಬ್ಬಿ ಸಮುದ್ರವಾದರೆ, ಇನ್ನೊಂದು ಕಡೆಯಲ್ಲಿರುವ ಪಶ್ಚಿಮ ಘಟ್ಟಗಳ ಸಾಲು ಈ ನಾಡಿಗೆ ಒಂದು ಮೆರುಗನ್ನೇ ನೀಡಿದೆ ಎನ್ನಬಹುದು. ತುಳುನಾಡಿನಲ್ಲಿ ತುಳು,ಬ್ಯಾರಿ, ಕೊಂಕಣಿ, ಕನ್ನಡ, ಇಂಗ್ಲಿಷ್, ಮಲಯಾಳ, ಉರ್ದು ಇತ್ಯಾದಿ ಭಾಷಿಗರು ಭಾಷಾ ಸಾಮರಸ್ಯ ಮೆರೆದಿದ್ದಾರೆ. ತುಳುವರೊಂದಿಗೆ ಬ್ಯಾರಿಗಳ ಸಂಬಂಧ ಏನು ಎನ್ನುವ ಪ್ರಶ್ನೆಗೆ ಉತ್ತರವು ಬ್ಯಾರಿಗಳು ತುಳುನಾಡಿನಲ್ಲೇ ಹುಟ್ಟಿರುವುದರಿಂದ ಇಲ್ಲಿಯ ಬ್ಯಾರಿಗಳು ಮತ್ತು ತುಳುವರು ಸಹೋದರ–ಸಹೋದರಿಯರೇ ಆಗಿದ್ದಾರೆ. ತುಳುನಾಡಿನ ಪಾಡ್ದಣಗಳಲ್ಲಿ ಬ್ಯಾರಿಗಳನ್ನು ತುಳುವರು ಎಂದು ಗುರುತಿಸಿಲಾಗಿದೆ. ತುಳುನಾಡಿನ ಜನರನ್ನು ಬಿಲ್ಲವರು, ಬಂಟರು, ಬ್ರಾಹ್ಮಣರು, ಜೈನರು, ಮೊಗವೀರರು, ಬ್ಯಾರಿಗಳು ಎಂದು ಸಂಭೋದಿಸ ಲಾಗಿದೆ. ಪಂಬದರು, ದಲಿತರು, ಕೊರಗರು, ಈ ನಾಡಿನ ಮಣ್ಣಿನ ಮಕ್ಕಳೆಂದು ಬಣ್ಣಿಸಲಾಗಿದೆ.

ಡಾ. ವಹಾಬ್ ದೊಡ್ಡಮನೆಯವರ "ತುಳು ನಾಡಿನ ಮುಸ್ಲಿಮರು" ಎನ್ನುವ ಗ್ರಂಥದಲ್ಲಿ ಬ್ಯಾರಿಗಳನ್ನು ಈ ರೀತಿ ವರ್ಣಿಸಲಾಗಿದೆ. "ಕಷ್ಟ ಸಹಿಷ್ಣುಗಳಾದ ಈ ಜನಾಂಗ, ಸ್ವಾಭಿಮಾನಿಗಳು ಕೂಡಾ. ವ್ಯಾಪಾರ ಅವರ ವಂಶವಾಹಿನಿಯಲ್ಲೇ ಬಂದಿದೆ. ತುಳುನಾಡಿನ ಮನೆ ಮನೆಗಳಿಗೆ ಸೈಕಲಿನಲ್ಲಿ ಮೀನು ಹೊತ್ತು ಮಾರುವ, ಒಂದು ಹಲಸಿನ ಕಾಯಿಯನ್ನು ಐವತ್ತಕ್ಕೂ ಹೆಚ್ಚು ಅಚ್ಚುಕಟ್ಟಾದ ಹೋಳುಮಾಡಿ, ಪ್ರತಿ ತುಂಡನ್ನು ಚೌಕಾಸಿ ಮಾಡಿ ಮಾರಾಟ ಮಾಡುವ, ಬೀಡಿ ಕಾರ್ಮಿಕರಾಗಿ ದುಡಿಯುವ, ಕೂಲಿಗಳಾಗಿ ಹೊರೆ ಹೊರುವ, ನದಿ ಸಮುದ್ರಗಳನ್ನು ತಮ್ಮ ದೋಣಿಗಳಲ್ಲಿ ಹಾಯಾಗಿ ಪಯಣಿಸುವ, ಹಂದಿಮಾಂಸ ಮತ್ತು ಶರಾಬು ಹೊರತುಪಡಿಸಿ ಎಲ್ಲವನ್ನು ತನ್ನ ವ್ಯಾಪಾರದ ಕಕ್ಷೆಯಲ್ಲಿ ತರುವ, ಯಾವುದೇ ತುರ್ತು ಸಂದರ್ಭದಲ್ಲಿ ಆಪತ್‌ಭಾಂದವನಾಗಿ ತನ್ನ ನೆರೆಹೊರೆಯವೊಂದಿಗೆ ಸ್ಪಂದಿಸುವ ನಗುಮುಖದ ಬ್ಯಾರಿ, ತುಳುನಾಡಿನ ಎಲ್ಲರಿಗೂ ಬೇಕಾದ ಜನಸಾಮಾನ್ಯರು". ಆದರೆ ಬದಲಾದ ಈ ಜಗತ್ತಿನಲ್ಲಿ ಬ್ಯಾರಿಗಳು ಉದ್ಯಮಿಗಳಾಗಿ, ಕೃಷಿಕರಾಗಿ, ರಾಜಕೀಯ ನೇತಾರರಾಗಿ ಸರಕಾರಿ ಪತ್ರಕರ್ತರಾಗಿ ಸಾಹಸ ಮೆರೆಯುತ್ತಿದ್ದಾರೆ.

ತುಳು–ಬ್ಯಾರಿ ಸಂಬಂಧಗಳು ಶತಮಾನಗಳಷ್ಟು ಹಿಂದಿನದು. ಫಾತಿಮಾರ ಮಗ ಬಬ್ಬು (ಬಾವು) ತುಳುವರ ಆರಾಧ್ಯ ದೈವನಾದ. ಕಡಲ ತಡಿಯ ತುಳುವರಿಗೆ ಬಬ್ಬರ್ಯ ಪಾಡ್ದನದ ಕಥೆ ಹೇಳಬೇಕಾಗಿಲ್ಲ. ಆಲಿ ಬ್ಯಾರಿ ಆಲಿಭೂತನಾಗಿ

ತುಳು ಜನರ ಮನದಲ್ಲಿ ಸ್ಥಾನ ಪಡೆದ ವ್ಯಾಪಾರ ಮಾಡುತ್ತಿರುವ ಅಂದರೆ 'ಬ್ಯಾರ' ಮಾಡುತ್ತಿರುವ ಬ್ಯಾರಿಯನ್ನು ಬ್ಯಾರಿ ಎಂದು ಕರೆಯದೇ ತುಳುವರು ಎಂದು ಹೇಳಲಾಗುತ್ತದೆ. ಇನ್ನು ತುಳು ಭಾಷೆಯ 'ಸೊಲ್ಮೆ' ಎನ್ನುವ ಶಬ್ದ ಅರಬೀ ಭಾಷೆಯ 'ಸಲಾಂ'ನಿಂದ ಹುಟ್ಟಿಕೊಂಡಿದೆ ಎಂದು ತುಳು ವಿದ್ವಾಂಸರು ಒಪ್ಪುತ್ತಾರೆ. ಇತಿಹಾಸಕಾರರು ಹೇಳುವಂತೆ ಬ್ಯಾರಿಗಳು ತುಳುವ ಮಾಪಿಳ್ಳೆಗಳು, ಅಂದರೆ ತುಳು ತಾಯಿ ಅರಬೀ ತಂದೆಯ ಮಕ್ಕಳು. ಇಸ್ಲಾಂ ಧರ್ಮ ಪಶ್ಚಿಮ ಕರಾವಳಿಗೆ ಪಸರಿಸುವ ಮುನ್ನವೇ ಸಾವಿರಾರು ವರ್ಷಗಳಿಂದ ತುಳುನಾಡಿನ ಕರಾವಳಿಗೆ ಬರುತ್ತಿದ್ದ ಅರಬೀ ವ್ಯಾಪಾರಿಗಳು, ತುಳು ಸ್ತ್ರೀಯರನ್ನು ಮದುವೆಯಾಗಿ ಸಂಸಾರ ಮಾಡಿದ ಫಲವೇ ಬ್ಯಾರಿಗಳ ಜನನವಾಯಿತು ಎಂದು ಇತಿಹಾಸಕಾರರು ವಿವರಿಸುತ್ತಾರೆ. ಆದರೆ ತುಳುವರಲ್ಲಿದ್ದ ಬ್ಯಾರಿ ಜನಾಂಗವೇ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿ, ಬ್ಯಾರಿ ಮುಸ್ಲಿಮರಾದರು ಎಂಬ ವಾದ ಒಂದು ಕಡೆಯಾದರೆ, ಮಲಬಾರ್ ಪ್ರಾಂತ್ಯದಿಂದ ಉತ್ತರಕ್ಕೆ ವಲಸೆ ಬಂದ ಮಲಬಾರಿಗಳೇ ಬ್ಯಾರಿಗಳಾದರು ಎಂಬುದು ಇನ್ನೊಂದು ತರ್ಕ.

**ಸೌಹಾರ್ದದ ತುಳುನಾಡು**

ತುಳುನಾಡಿನಲ್ಲಿ ಎಲ್ಲಾ ಜಾತಿಗಳು ಹಾಗೂ ಬ್ಯಾರಿಗಳು ಸೇರಿ ಸೌಹಾರ್ದದಿಂದ ಬಾಳುತ್ತಿದ್ದ ನಾಡು. ಇಲ್ಲಿಯ ಬಂಟರು, ಬಿಲ್ಲವರು ಬೆಳೆಸಿದ ಕೃಷಿ ಉತ್ಪನ್ನಗಳನ್ನು ಶತಮಾನಗಳಿಂದ ವಿದೇಶಿ ವ್ಯಾಪಾರಿಗಳಿಗೆ ಮಾರುವವರು ಬ್ಯಾರಿಗಳು, ಮೊಗವೀರರು ಸಮುದ್ರದಿಂದ ಹಿಡಿದುಕೊಟ್ಟ ರುಚಿಯಾದ ಮೀನು, ಬ್ಯಾರಿಗಳಿಗೆ ದೈನಂದಿನ ಆಹಾರ, ಇದೆಲ್ಲದರ ನಡುವೆ ಇಂದು ರಾಜಕೀಯ ಬಲೆಯಲ್ಲಿ ಸಿಕ್ಕಿರುವ ಕೋಣ, ಎಮ್ಮೆಗಳನ್ನು ದನಕರುಗಳನ್ನು ಇತರರಿಂದ ಖರೀದಿಸಿ ಇತರ ಜಾತಿಯವರಿಗೆ ಮಾರುವುದು ಕೂಡ ಬ್ಯಾರಿಗಳ ಕಾಯಕವಾಗಿತ್ತು. ಮುಂಬೈಯಲ್ಲಿ ವಾಸವಾಗಿರುವ ಶ್ರೀಮಂತ ರಾಮಣ್ಣ ಶೆಟ್ಟರ ಮಗಳಿಗೆ ವರ ಹುಡುಕುವ ಕೆಲಸ, ವ್ಯಾಪಾರಕ್ಕಾಗಿ ವಿವಿದೆಡೆ ಸಂಚರಿಸುತ್ತಿದ್ದ ಬಾವು ಬ್ಯಾರಿಯದ್ದು ಎಂದರೆ ತುಳುವರ ಹಾಗೂ ಬ್ಯಾರಿಗಳ ಸಂಬಂಧ ಹೇಗಿತ್ತು ಎನ್ನುವುದಕ್ಕೆ ಒಂದು ಉದಾಹರಣೆ ಮಾತ್ರ. ಹಾಗೆಯೇ ಕೃಷಿ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ನೀಡಿ, ಯಥೇಚ್ಚ ಕೃಷಿ ಉತ್ಪನ್ನಗಳನ್ನು ತುಳುನಾಡಿನ ತುಳುವರು ಹಾಗೂ ಬ್ಯಾರಿಗಳು ಬೆಳೆಯುತ್ತಿದ್ದರು.

ಪ್ರಥಮ ಮಹಾಯುದ್ಧ ಹಾಗೂ ಎರಡನೇ ಮಹಾಯುದ್ಧದ ಕಾಲಕ್ಕೆ

ತುಳುನಾಡಿನ ಸಾಹಸಿ ಯುವಕನಿಗೆ ಬೊಂಬಾಯಿಗೆ ಹೋಗಬೇಕಾಗಿತ್ತು. ಅಲ್ಲಿ ನೌಕರಿ, ಹೋಟೆಲ್ ಉದ್ಯಮಗಳಲ್ಲಿ ತೊಡಗಿಸಿಕೊಳ್ಳಬೇಕಿತ್ತು. ಬೊಂಬಾಯಿಯ ಕುಂದನ್ ಲಾಲ್ ಸೈಗರ್‌ನ ಹಾಡು, ಹಾಗೆಯೇ ಮುಹಮ್ಮದ್ ರಫಿ, ಮುಖೇಶ್, ಕಿಶೋರ್ ಕುಮಾರ್‌ರವರ ಹಾಡು ರೇಡಿಯೋದಲ್ಲಿ ಬರುವ ಕಾಲ. ದಿಲೀಪ್ ಕುಮಾರ್, ರಾಜ್‌ಕಪೂರರು ತಮ್ಮ ಊರಿಗೆ ಬಂದು ಟೆಂಟ್ ಸಿನಿಮಾದಲ್ಲಿ ನಟಿಸಿದ್ದ ಕಾಲ ಬೊಂಬಾಯಿ ನೋಡಬೇಕೆಂಬ ಹಂಬಲ, ಪ್ರತಿಯೊಂದು ತುಳು ಹಾಗೂ ಬ್ಯಾರಿ ಯುವಕನ ಮನಸ್ಸಾಗಿತ್ತು. ಪ್ರಯಾಣಕ್ಕೆ ವಾರಕ್ಕೊಮ್ಮೆ ಬರುವ ಹಡಗು ದುಬಾರಿ. ಮುಂಬೈಗೆ ಹೋಗುವುದೆಂದರೆ ಈಗ ಆಸ್ಟ್ರೇಲಿಯಾ, ಅಮೇರಿಕಾಕ್ಕೆ ಹೋದಕ್ಕಿಂತಲೂ ಹೆಚ್ಚು ಸಂಭ್ರಮ ಹಾಗೂ ಸಾಹಸ. ಆ ಕಾಲದಲ್ಲಿ ಬ್ಯಾರಿಗಳು ದೊಡ್ಡ ಮಂಜಿಗಳು, 'ಕೋಟಿಯ', 'ಪತ್ತೆಮಾರ್'ಯಂತಹ ದೋಣಿ ಗಳನ್ನು ನಡೆಸುತ್ತಿದ್ದರು. ಅದರಲ್ಲಿಯೂ ತುಳುನಾಡಿನ ಅಡಿಕೆ, ಶುಂಠಿ, ಸಾಂಬಾರ ಜೀನಸುಗಳನ್ನು ಮುಂಬೈ ಮಾರುಕಟ್ಟೆಯಲ್ಲಿ ಬ್ಯಾರಿಗಳು ಮಾರಾಟ ಮಾಡಿ ಹಣದ ಗಂಟನ್ನು ತುಳುನಾಡಿನ ಕೃಷಿಕರಿಗೆ ನೀಡುತ್ತಿದ್ದರು.

ಇನ್ನು ಬ್ಯಾರಿಗಳು ಕೂಡಾ ತುಳುವರ ಹೋಟೇಲ್ ಉದ್ಯಮಗಳಲ್ಲಿ ಭಾಗಿಯಾದ ಉದಾಹರಣೆಗಳು ಹಲವು. ಬ್ಯಾರಿ ಭಾಷೆಯಲ್ಲಿ ಗಡಿಬಿಡಿಗೆ 'ವಾಟಲ್ ಪಾಚಲ್' ಎನ್ನುವ ಶಬ್ದವಿದೆ. ಹಿಂದೆ ಮುಂಬಯಿಯಲ್ಲಿ **'Hotel Pachal'** ಎನ್ನುವ ಹೋಟೆಲ್ ಇತ್ತೆಂದು ಪ್ರತೀತಿ. ಆ ಹೋಟೇಲಿನ ವ್ಯಾಪಾರದ ಭರಾಟೆ ಎಂದರೆ ಉಸಿರಾಟ ಮಾಡಲಿಕ್ಕೆ ಪುರುಸೊತ್ತು ಇರಲಿಲ್ಲ. ಯಾವಾಗಲೂ ಜನಜಂಗುಳಿ. ಇದರಿಂದಗಿ ತುಳುನಾಡಿನ ಬ್ಯಾರಿಯೊಬ್ಬ ತನ್ನ ಊರಿನ ಮದುವೆ ಮನೆಯ ಗಲಾಟೆ ನೋಡಿ, 'ವಾಟಲ್ ಪಾಚಲ್' ಎಂದನಂತೆ ಮುಂದೆ ಇದು ಬ್ಯಾರಿ ಶಬ್ದಕೋಶದ ಭಾಗವಾಯಿತು. ಬ್ಯಾರಿಗಳು ತುಳುವರು ಬೇರೆ–ಬೇರೆ ಎಂದು ಸಾಮಾಜಿಕವಾಗಿ ವಿಭಾಗಿಸಬೇಕಿಲ್ಲ. ಬ್ಯಾರಿಗಳು ಅಚ್ಚ ತುಳು ಭಾಷೆ ಮಾತನಾಡುವವರು ಹಾಗೆಯೇ ಹಿರಿಯ ತಲೆಮಾರಿನ ತುಳು ಜನರು ಬ್ಯಾರಿ ಭಾಷೆಯನ್ನು ನಿರರ್ಗಳವಾಗಿ ಮಾತನಾಡುತ್ತಿದ್ದರು. ಆದರೆ ಈಗ ತುಳುವರು ಮತ್ತು ಬ್ಯಾರಿಗಳು ಕೋಮು ಭಾವನೆಯ ಪ್ರಭಾವದಿಂದಾಗಿ ಪ್ರತ್ಯೇಕ ಕಾಲನಿಗಳಲ್ಲಿ ವಾಸ ಮಾಡುವುದು, ತಮ್ಮದೇ ಆದ ಶಾಲೆ ಕಾಲೇಜುಗಳಿಗೆ ಬೇರೆ ಬೇರೆಯಾಗಿ ಮಕ್ಕಳನ್ನು ಸೇರಿಸುವುದರಿಂದಾಗಿ, ತುಳುವರು ಬ್ಯಾರಿ ಭಾಷೆ, ಜನಾಂಗ ಮರೆಯುತ್ತಿದ್ದಾರೆ. ಹಾಗೇಯೇ ಬ್ಯಾರಿಗಳು ತುಳುಭಾಷೆಯನ್ನು ಮರೆಯುತ್ತಿದ್ದಾರೆ. ಇದು ಸಲ್ಲದು. ಅಣ್ಣ–ತಮ್ಮಂದಿರ ಸಂಬಂಧದಂತೆ ನಮ್ಮ ನಡುವೆ ಸೌಹಾರ್ದ

ಸಂಬಂಧಗಳು ಮುಂದುವರಿಯಬೇಕು.

ಧರ್ಮ, ಭಾಷೆ ಅಥವಾ ಜೀವನ ಕ್ರಮಗಳು ಬೇರೆಯಾದಾಗ ಅವು ಆತಂಕ ಸೃಷ್ಟಿಸಬೇಕೆಂದಿಲ್ಲ. ಮನಸ್ಸಿದ್ದರೆ ಸಹಬಾಳ್ವೆ ಯಶಸ್ವಿಯಾಗುತ್ತದೆ ಎಂಬುದಕ್ಕೆ ಬ್ಯಾರಿಗಳು ಮತ್ತು ತುಳುವರ ಜೀವನವೇ ಸಾಕ್ಷಿ.

**ಬ್ಯಾರಿ ಸಂಸ್ಕೃತಿ**

ಸಂಸ್ಕೃತಿ ಎನ್ನುವುದು ಪ್ರಾದೇಶಿಕವಾದದ್ದು, ಆಯಾ ಪ್ರದೇಶದ ಭಾಷೆ, ಆಹಾರ, ಉಡುಪು, ಜೀನವ ಶೈಲಿ, ಪದ್ಧತಿ, ನಂಬಿಕೆಗಳು, ವೃತ್ತಿಪರ ಆಚರಣೆಗಳು, ಆರಾಧನೆಯ ವಿಧಾನಗಳು, ಹಬ್ಬ, ಹೀಗೆ ಎಲ್ಲವೂ ಸಂಸ್ಕೃತಿಯಲ್ಲಿ ಒಳಗೊಂಡಿರುತ್ತದೆ. ಒಂದು ಪ್ರದೇಶದ ಸಂಸ್ಕೃತಿ ಸಾಮಾನ್ಯವಾಗಿ ಆ ಪ್ರದೇಶದ ಎಲ್ಲ ಧರ್ಮಗಳ ಜನರಲ್ಲು ಕಾಣಿಸಿಕೊಳ್ಳುತ್ತದೆ. ಅದೇ ರೀತಿ ಸುಮಾರು 50 ಕಿ. ಮೀ. ಅಂತರಕ್ಕೆಲ್ಲ ಬದಲಾಗುವ ಭಾಷೆಯಂತೆಯೇ ಸಂಸ್ಕೃತಿಯಲ್ಲು ಸಾಮಾನ್ಯ ವ್ಯತ್ಯಾಸಗಳು ಕಾಣಿಸಿಕೊಳ್ಳುತ್ತದೆ. ಆ ಸಣ್ಣ ಪುಟ್ಟ ವ್ಯತ್ಯಾಸಗಳು ಕೆಲವೆಡೆ ಧರ್ಮಗಳ ಆಧಾರದಲ್ಲೂ ರೂಪುಗೊಂಡಿರುತ್ತವೆ. ಆದರೆ ಬಹುತೇಕವಾಗಿ ಸಂಸ್ಕೃತಿ ಅನ್ನುವುದು ಧರ್ಮವನ್ನು ಮೀರಿ ಪ್ರಾದೇಶಿಕವಾಗಿರುತ್ತದೆ.

ಬ್ಯಾರಿ ಸಂಸ್ಕೃತಿ ಅನ್ನುವುದೊಂದು ಬೇರೆಯೇ ಇದೆಯೇ? ಇದೆ ಎಂದಾದರೆ ಅದಕ್ಕೂ ಸ್ಥಳೀಯ ತುಳು ಸಂಸ್ಕೃತಿಗೂ ಮಧ್ಯೆ ಏನಾದರೂ ವ್ಯತ್ಯಾಸ ಇದೆಯೇ? ಈ ಸಂಸ್ಕೃತಿಯ ಬೇರುಗಳನ್ನು ತಡಕಾಡುವಾಗ ಬಳಸಬೇಕಾದ ಮಾನದಂಡ ಗಳೇನು? ಈ ಸಾಂಸ್ಕೃತಿಕ ಬೇರುಗಳು ಇತ್ತೀಚೆಗೆ ಸಡಿಲಗೊಳ್ಳುತ್ತಿವೆಯೇ? ಬ್ಯಾರಿ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳುವ ಅಗತ್ಯವಿದೆಯೆ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಅಷ್ಟು ಸುಲಭವಲ್ಲ. ಮೊದಲನೆಯದಾಗಿ ಬ್ಯಾರಿ ಸಂಸ್ಕೃತಿಯ ಮೂಲವಾದ ಬ್ಯಾರಿ ಭಾಷೆಯೇ ಅಪಾಯದಲ್ಲಿದೆ. ಭಾಷೆ ನಶಿಸುತ್ತಾ ಹೋದಂತೆ ಸಂಸ್ಕೃತಿಯೂ ನಶಿಸುತ್ತಾ ಹೋಗುತ್ತದೆ.

ಸಂಸ್ಕೃತಿಯ ತಾಯಿ ಬೇರುಗಳನ್ನು ತಡಕಾಡುತ್ತಾ ಹೋದಂತೆ ಬ್ಯಾರಿ ಸಮುದಾಯದ ಹಲವು ಕುತೂಹಲಕರ ಸಾಂಸ್ಕೃತಿಕ ವಿವರಗಳು ಬೆಳಕಿಗೆ ಬರುತ್ತದೆ. ಅದರಲ್ಲಿ ಬಹುತೇಕ ವಿವರಗಳು ಕರಾವಳಿಯ ತೌಳ ಸಂಸ್ಕೃತಿಯ ಜತೆಗೆ ತಳುಕು ಹಾಕಿಕೊಂಡಿರುವುದೂ ಗಮನಾರ್ಹ.

ಸಾಕಷ್ಟು ಬ್ಯಾರಿ ಕುಟುಂಬಗಳು ಹಿಂದೆ ಕೃಷಿ ಪ್ರಧಾನ ಕುಟುಂಬಗಳಾಗಿದ್ದವು. ಕೃಷಿಕೇಂದ್ರಿತ ಬ್ಯಾರಿ ಕುಟುಂಬಗಳ ಅಂಗಳವನ್ನು ಸೆಗಣಿಯಿಂದ ಗುಡಿಸಿ

ಸಾರಿಸಲಾಗುತ್ತಿತ್ತು. ಅಂಗಳದ ಮೂಲೆಯಲ್ಲಿ ಇರುತ್ತಿದ್ದ ಕೊಟ್ಟಿಗೆ ತುಂಬಾ ದನಗಳು, ಎಮ್ಮೆಗಳು, ಕೋಣಗಳನ್ನು ಸಾಕುವುದು ಮಾಮೂಲಾಗಿತ್ತು. ನಮ್ಮ ಪಕ್ಕದ ಮನೆಯ ತುಳುವರು ಬಲಿಯೇಂದ್ರನ ಪರ್ಬ ಮಾಡುತ್ತಿದ್ದುದನ್ನು ನನ್ನ ತಂದೆಗೆ ಇನ್ನೂ ನೆನಪಿದೆ. ಗದ್ದೆಯಲ್ಲಿ ಭತ್ತದ ಹೊಸ ಬೆಳೆ ಬರುವಾಗಿನ ಸಂಭ್ರಮವದು. ಅವರು ಗದ್ದೆಗೆ ಹೋಗಿ ಹೊಸ ಭತ್ತದ ಕೊರಳನ್ನು ತಂದು ಚಾವಡಿಯ ಜಂತಿಗೆ ಕಟ್ಟುತ್ತಿದ್ದರು. ಆವತ್ತು ಪುದಿಯೊ ಅರಿಯ ಚಕ್ಕರೆ ಚೋರು, ತೆಂಗಿನ ಹಾಲಿನ ಅನ್ನ ಮಾಡುತ್ತಿದ್ದರು. ಹಾಗೆಯೇ ದೀಪಾವಳಿಯ ಸಂದರ್ಭದಲ್ಲಿ ದನಕರುಗಳನ್ನು ಚೆನ್ನಾಗಿ ತಿಕ್ಕಿ ತೊಳೆದು ಸ್ನಾನ ಮಾಡಿಸಿ, ಬೇಲಿಯಲ್ಲಿ ಸಿಗುತ್ತಿದ್ದ ಮಿಠಾಯಿ ಹೂವಿನ ಮಾಲೆ ಹಾಕುತ್ತಿದ್ದರು. ಬೆಳಿಗ್ಗೆ ದನಕರುಗಳಿಗೆ ಇಡ್ಲಿ ತಿನ್ನಿಸುತ್ತಿದ್ದರು. ಹಲವು ಊರುಗಳಲ್ಲಿ ಬಿದಿರಿನಿಂದ ಬಿಳಿಯ ಬಣ್ಣದ ಸೀಲುಗಳನ್ನು ಹಾಕಿ ಅಲಂಕಾರ ಮಾಡಿ ಸಂಭ್ರಮಿಸುತ್ತಿದ್ದರು. ತಮ್ಮ – ತಮ್ಮ ಮನೆಗಳನ್ನು ಚೆನ್ನಾಗಿ ಶುಚಿಗೊಳಿಸಿ ಅಲಂಕಾರ ಮಾಡುತ್ತಿದ್ದರು. ಮನೆಯ ಅಂಗಳದಲ್ಲಿ ದೀಪಗಳನ್ನು ಹಚ್ಚಿ ಮನೆಯನ್ನು ತೂಗುದೀಪಗಳಿಂದ ಶೃಂಗಾರ ಮಾಡುತ್ತಿದ್ದರು.

ದನಗಳನ್ನು ಸಾಕಿದಂತೆಯೆ ಕುರಿಗಳನ್ನು ಸಾಕುವುದೂ ಬ್ಯಾರಿಕುಟುಂಬಗಳಿಗೆ ಅತ್ಯಂತ ಪ್ರಿಯವಾದ ಕೆಲಸವಾಗಿತ್ತು. ಆದರೆ ಇದು ತುಳುವರಲ್ಲಿ ಕಾಣಿಸುವುದಿಲ್ಲ. ಮೇಕೆ, ಕುರಿಗಳ ಕುರಿತು ಬ್ಯಾರಿಗಳ ವಿಶೇಷ ಮೋಹಕ್ಕೆ ಒಂದು ಧಾರ್ಮಿಕ ಎಳೆಯೂ ಇದೆ. ಅರೇಬಿಯಾದಲ್ಲಿ ಪ್ರವಾದಿ ಮುಹಮ್ಮದ್ ಪೈಗಂಬರ್ (ಸ) ಅವರು ಕುರಿ ಸಾಕುತ್ತಿದ್ದರು, ಮೇಯಿಸುತ್ತಿದ್ದರು ಎನ್ನುವ ಅಂಶ. ಸಂಸ್ಕೃತಿಯ ಎಷ್ಟೋ ಅಂಶಗಳು ದೇಶ ಕಾಲಗಳನ್ನು ದಾಟಿ ಮುಂದಕ್ಕೆ ಪ್ರವಹಿಸುತ್ತವೆ.

ಆದರೆ ಇತ್ತೀಚೆಗೆ ಬ್ಯಾರಿಗಳ ಈ ಸಾಂಸ್ಕೃತಿಕ ಅಂಶ ಮರೆಯಾಗುತ್ತಿದೆ. ಕೃಷಿ ಭೂಮಿಯಲ್ಲಿ ದುಡಿಯುವವರು ಇಲ್ಲವಾಗಿದ್ದಾರೆ. ಮೀಸೆ ಮೊಳೆಯುತ್ತಿದ್ದಂತೆಯೇ ಕೊಲ್ಲಿ ದೇಶಗಳ ಕಡೆಗೆ ಮುಖ ಮಾಡುವ ಬ್ಯಾರಿ ಯುವಜನರಿಂದಾಗಿ ಬಹುತೇಕ ಕುಟುಂಬಗಳು ಹೊಲಗದ್ದೆಗಳನ್ನು ಮಾರಾಟ ಮಾಡಿವೆ.

ಬ್ಯಾರಿಗಳು ಹೇಗೆ ಕೃಷಿಕರೋ ಹಾಗೆಯೇ ವ್ಯಾಪಾರಿಗಳೂ ಆಗಿರುವುದರಿಂದ ವಯಸ್ಸಾದ ದನಗಳನ್ನು ಮಾರುವುದು ಅವರಿಗೆ ಸಹಜವಾದ ವ್ಯಾಪಾರವಾಗಿತ್ತು. ಹಾಗೆಯೇ ಬಹುತೇಕ ಬ್ಯಾರಿಗಳ ಪೂರ್ವಜರು ದಲಿತ, ಕೆಳವರ್ಗದಿಂದ ಮತಾಂತರವಾಗಿರುವ ಹಿನ್ನೆಲೆಯಲ್ಲಿ ದನದ ಮಾಂಸ ಅವರ ಆಹಾರ ಪದ್ಧತಿಯಲ್ಲಿ ಸೇರಿಹೋಗಿತ್ತು. ಆದರೆ ಇವತ್ತು ಈ ಆಹಾರ ಪದ್ಧತಿ ಮತ್ತು ವ್ಯಾಪಾರವೇ ಹಲವರಿಗೆ ರಾಜಕೀಯ ಬಂಡವಾಳವಾಗಿದೆ. ಹಾಗೆಯೇ ಹಿಂದೂ ಮುಸ್ಲಿಮರ

ಮಧ್ಯೆ ಸಾಮಾಜಿಕ ವೈಷಮ್ಯದ ಬೀಜ ಬಿತ್ತಿದೆ.

ಬ್ಯಾರಿಗಳ ಜನಸಾಂದ್ರತೆ ಹೆಚ್ಚಿರುವ ಕೆಲವು ಪ್ರದೇಶಗಳಲ್ಲಿ ದರ್ಗಾಗಳು ಇರುವುದೂ, ಅಲ್ಲಿ ಉರೂಸ್ ನಡೆಯುವುದೂ ಸಾಮಾನ್ಯ. ಈ ದರ್ಗಾಗಳಲ್ಲಿ ವರ್ಷಕ್ಕೊಮ್ಮೆ ಉರೂಸ್ ಹೆಸರಿನಲ್ಲಿ ಅನ್ನ ಸಂತರ್ಪಣೆ ನಡೆಯುವುದು, ಜನಜಾತ್ರೆ ಸೇರುವುದು, ಧಾರ್ಮಿಕ ಉಪನ್ಯಾಸಗಳು ನಡೆಯುವುದು ನಡೆದುಕೊಂಡು ಬಂದಿದೆ. ಈ ಆಚರಣೆಯ ಮೇಲೆ ಮುಖ್ಯವಾಗಿ ಹಿಂದೂಸ್ತಾನದ ಸಂಸ್ಕೃತಿಯ ಪ್ರಭಾವ ಬಿದ್ದಿದೆ. ಯಾಕೆಂದರೆ ಮುಸ್ಲಿಮರೇ ಆಡಳಿತ ನಡೆಸುತ್ತಿರುವ ಕೊಲ್ಲಿ ದೇಶಗಳಲ್ಲಿ ಉರೂಸ್‌ಗಳು ಕಂಡು ಬರುವುದಿಲ್ಲ. ಆದರೆ ಪಾಕಿಸ್ತಾನ, ಇರಾಕ್ ಮುಂತಾದ ದೇಶಗಳಲ್ಲಿ ಕಾಣಿಸುತ್ತದೆ.

ಹಿಂದೆಲ್ಲಾ ದರ್ಗಾಗಳಿಗೆ ಊರಿನ ಎಲ್ಲಾ ಜಾತಿಯ, ಎಲ್ಲಾ ಧರ್ಮಗಳ ಜನರು ಬರುತ್ತಿದ್ದರು. ಇಡೀ ಹಳ್ಳಿಯ ಮೇಲೆ ಸೂಫಿ ಸಂತರ ಪ್ರಭಾವ ಇರುತ್ತಿತ್ತು. ಇವತ್ತು ದರ್ಗಾಗಳಿಗೆ ಬರುವ ಬ್ಯಾರಿಯೇತರ ಜನರ ಸಂಖ್ಯೆ ಸಾಕಷ್ಟು ಕಡಿಮೆಯಾಗಿದೆ. ಹಾಗೆಯೇ ಬ್ಯಾರಿಗಳ ಸಂಖ್ಯೆಯೂ ಕಡಿಮೆಯಾಗಿದೆ. ಹಿಂದೆ ಸಾಮರಸ್ಯದ ಸಾಂಸ್ಕೃತಿಕ ಕೇಂದ್ರಗಳಾಗಿ ಮೆರೆಯುತ್ತಿದ್ದ ದರ್ಗಾಗಳು ಇವತ್ತು ಬ್ಯಾರಿಗಳಲ್ಲೆ ಒಂದು ಗುಂಪಿನವರ ಶೃದ್ಧಾ ಕೇಂದ್ರವಾಗಿ ಮಾತ್ರ ಉಳಿದಿದೆ.

ಅಲ್ಲದೇ ತುಳುನಾಡಿನ ಪ್ರತಿಯೊಂದು ಹಬ್ಬಕ್ಕೂ ಒಂದು ರೀತಿಯ ವಿಶೇಷತೆ ಇದೆ. ಆಟಿ ಅಮಾವಾಸ್ಯೆ, ಕೃಷ್ಣ ಜನ್ಮಾಷ್ಟಮಿ, ಗಣೇಶ ಚತುರ್ಥಿ, ದೀಪಾವಳಿ, ಬಲೀಂದ್ರ ಪೂಜೆ, ಗೋಪೂಜೆ, ಭೂಮಿ ಪೂಜೆ (ಕೆಡ್ಡೆಸ), ಅಂಗಡಿ ಪೂಜೆ ಇತ್ಯಾದಿ. ತುಳುನಾಡಿನಲ್ಲಿ ಅಕ್ಕಿಮುಡಿ ಕಟ್ಟುವುದು, ಅಕ್ಕಿ ಸಂಗ್ರಹಣೆ ಮಾಡುವ ವಿಶೇಷವಾದ ವಿಧಾನ. ಮುಡಿ ಕಟ್ಟಿದ ಅಕ್ಕಿಯು ವರ್ಷಾನುಗಟ್ಟಲೇ ಕಳೆದರೂ ಯವುದೇ ತೊಂದರೆಯಿಲ್ಲದೆ ಜೋಪಾನವಾಗಿರುತ್ತದೆ. ಪೂಜೆ ಹೊರತು ಪಡಿಸಿ ಉಳಿದ ಎಲ್ಲಾ ವಿಧಾನವನ್ನು ಬ್ಯಾರಿಗಳು ಅವರ ಮನೆಯಲ್ಲಿ ಅನುಸರಿಸುತ್ತಿದ್ದುದು ಇನ್ನೊಂದು ವಿಶೇಷದ ಸಂಗತಿ.

ತುಳುನಾಡಿನ ಇನ್ನೊಂದು ವಿಶೇಷವಾದ ಆಟವೆಂದರೆ ಕಂಬಳ. ಇದು ನಾಡಿನಲ್ಲಿರುವ ಕೋಣಗಳ ಕೆಸರುಗದ್ದೆ ಓಟದ ಸ್ಪರ್ಧೆ. ಈ ಓಟದಲ್ಲಿ ವಿಜೇತ ರಾದವರಿಗೆ ಸನ್ಮಾನಿಸಲಾಗುತ್ತದೆ. ಇಲ್ಲಿ ವಿಜೇತರಿಗೆ ಒಂದು ರೀತಿಯ ಖುಷಿಯಾದರೆ, ವೀಕ್ಷಕರಿಗಂತೂ ಮನತಣಿಸುತ್ತದೆ. ಚಳಿಗಾಲದಲ್ಲಿ ನಡೆಯುವ ಈ ಕಂಬಳವನ್ನು ವೀಕ್ಷಿಸಲು ಜನರ ಮಹಾಪೂರವೇ ಹರಿದು ಬರುತ್ತದೆ. ಕೇವಲ ಹಿಂದೂ ಧರ್ಮದವರಷ್ಟೇ ಅಲ್ಲದೇ ಬ್ಯಾರಿಗಳು, ಕ್ರೈಸ್ತರು ಹಾಗೂ

ಇನ್ನಿತರ ಧರ್ಮದವರು ಈ ಮನೋರಂಜನೆಯನ್ನು ನೋಡಲು ಸಾಲುಗಟ್ಟಿ ಬರುತ್ತಿದ್ದರು. ತುಳುನಾಡಿನ ಜನರ ಮನರಂಜನೆಯೆಂದರೆ ಯಕ್ಷಗಾನ, ಇಂದು ಯಕ್ಷಗಾನವು ದೇಶ–ವಿದೇಶಗಳಲ್ಲಿ ಬಾರೀ ಪ್ರಚಾರ ಹೊಂದಿದೆ. ಹಿಂದಿನ ಕಾಲದಲ್ಲಿ ಊರಲ್ಲಿ ಯಕ್ಷಗಾನವಿದ್ದರೆ ನೆರೆಮನೆಯವರ ಜೊತೆಗೂಡಿ ಬ್ಯಾರಿಗಳು ಅದನ್ನು ವೀಕ್ಷಿಸಲು ಹೋಗುತ್ತಿದ್ದರು.

**ಉಡುಪು ವಿನ್ಯಾಸಗಳು**

ಬ್ಯಾರಿಗಳು ಡ್ರೆಸ್ ಕೋಡ್ ಕೂಡಾ ಬದಲಾಗಿದೆ. ನನ್ನ ಅಜ್ಜನ ಕಾಲದ ಬ್ಯಾರಿಗಳು ತಲೆಗೊಂದು ಮುಂಡಾಸು, ಪಟ್ಟ್ ಪಟ್ಟೆಯ ಮುಂಡು, ಉದ್ದನೆಯ ಬುಶ್ ಶರ್ಟ್ ಹಾಕುತ್ತಿದ್ದರು. ಮುಂಡಾಸಿನ ಮಧ್ಯೆ ಇಸ್ತ್ರಿ ಮಾಡಿದ ಬಿಳಿಯ ಚೌಕದ ಟೊಪ್ಪಿಯು ತಲೆಯಲ್ಲಿ ಇರುತ್ತಿತ್ತು. ಸೊಂಟದಲ್ಲಿ ಹಸಿರು ಬಣ್ಣದ ಪರ್ಸ್ ಸಹಿತ ಬೆಲ್ಟ್ ಇರುತ್ತಿತ್ತು. ಕಣ್ಣಿಗೆ ಸುರ್ಮ, ಬಟ್ಟೆಗೆ ಸೆಂಟ್, ಅತ್ತರ್ ಆಗಿನ ಫ್ಯಾಶನ್ನ್. ನನ್ನ ಬಾಪ್ಪಾನವರ ಕಾಲದಲ್ಲಿ ಇದು ಸ್ವಲ್ಪ ಬದಲಾಯಿತು. ಅವರಿಗೆ ಇಂಗ್ಲಿಷ್ ವಿದ್ಯಾಭ್ಯಾಸ ಸಿಕ್ಕಿ ಸರಕಾರಿ ನೌಕರಿಯೂ ಲಭಿಸಿದ್ದರಿಂದ ಮದುವೆಯ ದಿನ ಕೋಟು ಸೂಟಿನಲ್ಲಿ ನಿಂತಿದ್ದರು. ಮುಂಡಾಸ್ ಬದಲಿಗೆ ಉದ್ದನೆಯ ತುಪ್ಪಳದ ಮಕ್ಮಲ್ ಟೋಪಿ ಧರಿಸಿದ್ದರು. ನನ್ನ ಕಾಲದಲ್ಲಿ ತಲೆಯ ಮೇಲೆ ಕಾಟನ್ ಟೊಪ್ಪಿಗೆ ಬಂದು ಕುಳಿತಿದೆ. ಬ್ಯಾರಿ ಹೆಣ್ಣುಮಕ್ಕಳ ಡ್ರೆಸ್ ಕೂಡಾ ವೇಗವಾಗಿ ಬದಲಾಗುತ್ತಿದೆ. 55 ವರ್ಷಗಳ ಹಿಂದೆ ನನ್ನ ಉಮ್ಮ ಮದುವೆಯಾಗಿ ಗಂಡನ ಮನೆಗೆ ಬಂದಾಗ ಒಂದು ಜತೆ ಹೊಸ ಚಪ್ಪಲಿಯ ಜೊತೆಗೆ ಇನ್ನೊಂದು ಜತೆ ಮರದ ಮೆಡಿಯೂ ಉಡುಗೊರೆಯಾಗಿ ಸಿಕ್ಕಿತ್ತು. ಮಂಗಳೂರಿನಿಂದ ತರಿಸಿದ್ದ ಹೊಸ ಹಳದಿ, ಕೆಂಪು ಬಣ್ಣದ ವೊಲ್ಲಿ ಹೊದ್ದು ಅವರು ಗಂಡನ ಮನೆಗೆ ಬಂದಿದ್ದರು. ಆಗ ಬುರ್ಕಾ ಇರಲಿಲ್ಲ. ನನ್ನ ನೆರೆಮನೆಯ ಅತ್ತಿಜಂದಾದ ಮತ್ತು ಮೊಮ್ಮಾಟಿಯಮ್ಮ ಜೋಡಿವಲ್ಲಿ ಹೊದ್ದುಕೊಂಡು ಹಳೆಯಂಗಡಿಯ ಹರಿಭಟ್ಟರ ಆಯುರ್ವೇದ ಶಾಪಿಗೆ ಔಷಧಿ ತರಲು ನಡೆದುಕೊಂಡು ಹೋಗುತ್ತಿದ್ದುದ್ದನ್ನು ಅಮ್ಮ ನೆನಪಿಸುತ್ತಾರೆ.

ಆ ಬಳಿಕ ಸೌದಿ ಅರೇಬಿಯಾದಿಂದ ಬುರ್ಕಾದ ಪ್ರೇರಣೆ ಸಿಕ್ಕಿತು. ಬ್ಯಾರಿ ಗಂಡಸರು ಕೊಲ್ಲಿಗೆ ದುಡಿಯಲು ಹೋಗುವುದು ಹೆಚ್ಚಾದಂತೆಲ್ಲಾ ಊರಿಗೆ ಬುರ್ಕಾದ ಬಟ್ಟೆಯ ಪಾರ್ಸೆಲ್ ಬರುವುದು ಮಾಮೂಲಿ ಆಯಿತು. ಆವತ್ತಿನ ಬುರ್ಕಾದಿಂದ ಶುರುವಾಗಿ ಈಗ ತುಂಟು ಬುರ್ಕಾದವರೆಗೆ ಫ್ಯಾಶನ್

ಬದಲಾಗುತ್ತಲೆ ಇದೆ. ಅಂದಿನ ಬ್ಯಾರಿ ಹೆಣ್ಣು ಮಕ್ಕಳು ಧರಿಸುತ್ತಿದ್ದ ಅರ್ಗಂಟಿ ಕುಪ್ಪಾಯ, ಕಲ್ಬಾರೆ ಎಂಬ ಹಳದಿ ಸೀರೆ, ಪೊಡಿಕಲ ಎಂಬ ಕೆಂಪು ಸೀರೆ, ವಲ್ಲಿ, ಜೋಡುವಲ್ಲಿ, ಪಟ್ಟ್‌ವೊಲಿ, ಮಞ್ಞಲ್‌ವೊಲಿ, ಎಲ್‌ಸಾರ ಉರ್ಮಾಲುಗಳೆಲ್ಲಾ ಈಗ ಕಣ್ಮರೆಯಾಗಿವೆ.

ಬ್ಯಾರಿಗಳು ಬಹುತೇಕ ಸರಳ ಉಡುಪು ಧರಿಸುತ್ತಿದ್ದರು. ಒಂದು 'ಮುಂಡು' ಅಥವಾ ಸಾದಾ ಉಡುಪನ್ನು ನಡುಪಟ್ಟಿಯೊಂದಿಗೆ ಧರಿಸುತ್ತಿದ್ದರು. ಮಕ್ಕಳು ಮಾತ್ರವಲ್ಲದೆ ವಯಸ್ಕರು ಸಹ ಲುಂಗಿ ಅಂದರೆ ಬಣ್ಣದ ಮುಂಡು ಧರಿಸುವುದು. ಸಾಮಾನ್ಯವಾಗಿತ್ತು. ಶರ್ಟ್ ಅನ್ನು ಕುಪ್ಪಾಯ ಎನ್ನಲಾಗುತ್ತಿತ್ತು. ಮಹಿಳೆಯರು ಸಹ ಎದುರು ಬದಿಯಲ್ಲಿ ಕುಸುರಿ ಕೆಲಸ ಹೊಂದಿದ್ದ ಕುಪ್ಪಾಯ ಧರಿಸುತ್ತಿದ್ದರು. ಬ್ಯಾರಿಗಳು ತಮ್ಮ ತಲೆಯನ್ನು ಬೋಳಿಸಿ ರುಮಾಲು ಅಥವಾ ಟೊಪ್ಪಿ ಧರಿಸುತ್ತಿದ್ದರು. ದೊಡ್ಡದಾದ ಟೊಪ್ಪಿ ಧರಿಸುವುದು ರೂಢಿಯಾಗಿತ್ತು. ಮಹಿಳೆಯರು ಸಾಮಾನ್ಯವಾಗಿ ರಾತ್ರಿ ಉಡುಪಾಗಿ 'ಕಾಚಿ ಮುಂಡು'ವಿನ ರೀತಿಯ ಧಿರಿಸು ಧರಿಸುತ್ತಿದ್ದರು. ಅವರು ಚಿನ್ನದ ಕುಸುರಿ ಕೆಲಸ ಹೊಂದಿರುವ ಬಣ್ಣದ ಪಟ್ಟು (ರೇಷ್ಮೆ) ಸೀರೆ ಉಡುತ್ತಿದ್ದರು. ಬ್ಯಾರಿ ಹೆಣ್ಣು ಮಕ್ಕಳು ಲಂಗ–ರವಕೆಯಲ್ಲಿ ಮೆರೆಯುತ್ತಿದ್ದರು. ಆಧುನಿಕ ಮೈಯಾರತೆಯ ಸೋಗಿನಲ್ಲಿ ಇತರರಂತೆ ಚೂಡಿದಾರ್, ಮಿಡಿ, ನೈಟಿ, ಮುಂತಾದ ಬಟ್ಟೆ ಬರೆಗಳನ್ನು ತೋಡುವುದು ಕಂಡು ಬರುತ್ತದೆ. ಬ್ಯಾರಿಗಂಡು ಮಕ್ಕಳು ಇಜಾರ್ (ಚಡ್ಡಿ)ಯನ್ನು ಧರಿಸಿದರೆ ಬ್ಯಾರಿ ಪುರುಷರು ಮುಂಡು ಅಥವಾ ಕಂಬಯಿ (ಲುಂಗಿ) ತೊಡುತ್ತಿದ್ದರು.

**ತಿಂಡಿ ತಿನಿಸುಗಳು ಮತ್ತು ಮನೆಮದ್ದು**

ಊಟ ತಿಂಡಿಯ ವಿಷಯದಲ್ಲೂ ಹಾಗೆಯೇ ಬದಲಾವಣೆ ಆಗಿದೆ. ಒಂದು ಕಾಲದಲ್ಲಿ ಬ್ಯಾರಿಗಳ ಮನೆಯಲ್ಲಿ ಬೆಳಿಗ್ಗೆ ನಾಷ್ಟಾ ಎಂದರೆ ಹಬೆಯಾಡುವ ತನ್ನಿ ಪಿಂಡೆ ಜತೆಗೆ ಬಿಸೆಲಿಡಪ್ಪ, ಕಲ್ತಪ್ಪ, ಇರ್‌ಮನೆಡಪ್ಪ, ನೇವರಿ, ಚಕ್ಕೆಕೂರುಡೊ ಪೊಡಿಕರಿ, ಪೊಡಿಯೆಟ್ಟಿರೊ ಚಟ್ನಿ, ಹೀಗೆ ಬ್ಯಾರಿಗಳದ್ದೇ ಆದ ಸಾಂಪ್ರದಾಯಿಕ ತಿಂಡಿಗಳಿದ್ದವು. ಧೋ ಎಂದು ಮಳೆ ಸುರಿಯುತ್ತಿದ್ದ ಆಟಿ ತಿಂಗಳಿನಲ್ಲಿ ಮನೆಯೊಳಗೆ ಬೆಚ್ಚನೆ ಕುಳಿತು ಸುಟ್ಟು ತಿನ್ನುತ್ತಿದ್ದ ಬಿಸಿ ಬಿಸಿ ಚಕ್ಕೆಕೊರು ಈಗಲೂ ನನ್ನ ಬೆಚ್ಚನೆಯ ಬಾಲ್ಯ ಕಾಲದ ನೆನಪುಗಳಲ್ಲಿದೆ. ಬೇಸಿಗೆ ಕಾಲದಲ್ಲಿ ಚಕ್ಕೆ ಕೂರನ್ನು ಚೆನ್ನಾಗಿ ಬೇಯಿಸಿ ಅಂಗಳದಲ್ಲಿ ಮೆಣಸಿನ ಬಳ್ಳಿಯ ಚಾಪೆ ಹಾಸಿ ಅದರಲ್ಲಿ ಒಣಗಲು ಇಡುತ್ತಿದ್ದರು. ಅದು ಮಳೆಗಾಲಕ್ಕೆ ಮುಖ್ಯ ಟಾನಿಕ್ಕು. ಈಗ

ಮಳೆಯೂ ಇಲ್ಲ, ಚಕ್ಕೆಕೂರು ಇಲ್ಲ.

ಇದಲ್ಲದೆ ಯರ್ಚಿರೊ ಪಿಂಡೆ, ಕೊವುಲುರೊ ಪಿಂಡೆ, ಎಟ್ಟಿರೊ ಪಿಂಡೆ, ಬಸಲೆರೊ ಪಿಂಡೆ, ನೈಯಪ್ಪ, ಪುದಿಯಾಂಪುಲೆ ಅಪ್ಪ (ದಲಿಯಪ್ಪ), ಮುಟ್ಟೆಡೊ ಅಪ್ಪ, ಕಲ್ತಪ್ಪ, ಗುಲಿಯಪ್ಪ ಹೀಗೆ ನಾನಾ ಬಗೆಯ ಘಮಘಮ ಪರಿಮಳ ಬೀಸುವಂತಹ ಅಡುಗೆಗಳನ್ನು ಮನೆಯಲ್ಲಿಯೇ ತಯಾರಿಸುತ್ತಿದ್ದರು.

ನನ್ನ ಚಿಕ್ಕಮ್ಮ ಒಬ್ಬ ಮಂಗಳೂರಿನ ದೊಡ್ಡ ಮನೆತನಕ್ಕೆ ಸೇರಿದವರು. ಇವತ್ತೂ ಅವರ ಮನೆಯಲ್ಲಿ ಗುಡ್ಡ ಬಲಿಕುಡೊ ಅಭ್ಯಾಸ ಇದೆ. ಸಿರಿವಂತ ಬ್ಯಾರಿಗಳ ಮನೆಯಲ್ಲಿ ಮಾತ್ರವಲ್ಲ ಬಡ ಬ್ಯಾರಿಗಳ ಮನೆಯಲ್ಲೂ ಈ ಹುಕ್ಕ ಸೇದುವ ಅಭ್ಯಾಸ ಹೆಣ್ಣು ಮಕ್ಕಳಿಗೂ ಇತ್ತು. ಚಿಕ್ಕಂದಿನಲ್ಲಿ ಹೊಟ್ಟೆ ನೋವಾದರೆ ಹೊಕ್ಕುಳಿಗೆ ತೆಂಗಿನ ಎಣ್ಣೆ ಹಾಕುವುದು, ಕಿವಿ ಸೋರಿದರೆ ಕಿವಿಗೆ ತೆಂಗಿನ ಎಣ್ಣೆ ಹೊಯ್ಯುವುದು ಮನೆ ಮದ್ದು, ಕೊದಿ ಎಡ್ಡುವ ಕ್ರಮವಂತೂ ಈಗ ಮಾಯ ವಾಗಿದೆ. ಮೂರು ದಾರಿಯ ಕಲ್ಲುಗಳನ್ನು ತಂದು ಸ್ವಲ್ಪ ಮೆಣಸು, ಉಪ್ಪು ಮತ್ತು ಕರಿಯನ್ನು ಸೇರಿಸಿ ಬಟ್ಟೆಯಲ್ಲಿ ಕಟ್ಟಿ ಹೊಟ್ಟೆಗೆ ನೀವಿ, ಅದಕ್ಕೆ ತುಫ್ ಎಂದು ಉಗುಳಿ ಬೆಂಕಿಯಲ್ಲಿ ಹಾಕಿದರೆ ಚಟ ಚಟ ಸದ್ದು, ಕೆಲವೇ ನಿಮಿಷಗಳಲ್ಲಿ ಹೊಟ್ಟೆ ನೋವು ಮಾಯ.

ಈ ರೀತಿಯ ಕೆಲವು ಸಾಂಸ್ಕೃತಿಕ ಅಂಶಗಳ ಹಿಂದೆ ಬ್ಯಾರಿಗಳ ಮೂಢನಂಬಿಕೆ ಗಳು ಕೆಲಸ ಮಾಡುತ್ತಿದ್ದವು ಎನ್ನುವವರೂ ಇದ್ದಾರೆ. ಅದರಲ್ಲಿ ಸ್ವಲ್ಪಾಂಶ ನಿಜವೂ ಇದೆ.

**ಆಹಾರ :** ಪ್ರಾಚೀನ ಬ್ಯಾರಿಗಳ ಅನ್ನ ಆಹಾರಗಳು ವೈವಿಧ್ಯಮಯದಿಂದ ಕೂಡಿದೆ. ಹಾಗೂ ಅತ್ಯಂತ ಸರಳವಾಗಿದೆ. ಬ್ಯಾರಿಗಳು ಕೃಷಿ, ದೋಣಿ ಮುಂತಾದ ಕ್ಷೇತ್ರಗಳಲ್ಲಿ ದುಡಿಯುವವರಾಗಿದ್ದು, ಕೆಲವರು ಜಮೀನ್ದಾರರಾಗಿ ಮೆರೆದುದು ಐತಿಹಾಸಿಕ.

ವ್ಯವಸಾಯದಲ್ಲಿ ನಿರತರಾಗಿರುವ ಬ್ಯಾರಿಗಳು 'ಸುಗ್ಗಿ'ಯ ಕಾಲದಲ್ಲಿ ಬೆಳೆದ ಅಕ್ಕಿಯನ್ನು ಕನಿಷ್ಟ ಪಕ್ಷ ನಲ್ವತ್ತು ಮಕ್ಕಳಿಗೆ ಪುದಿಯೆ ಅರಿರೆ ಚೋರು (ಹೊಸ ಅಕ್ಕಿಯ ಊಟ) ಆಗಿ ಊಟ ಕೊಡುವ ಪದ್ಧತಿ ಇತ್ತು. ಹಿರಿಯ ಜಮೀನ್ದಾರರುಗಳು ಮನೆಯಲ್ಲಿ ನಡೆಯುತ್ತಿದ್ದ ಇಂತಹ ಊಟಕೊಡುವ ಸಮಾರಂಭಗಳಿಗೆ ಊರಿನ ಎಳೆಯ ಮಕ್ಕಳಿಗೆ ಕರೆ ಹೋಗುತ್ತಿತ್ತು. ಇದನ್ನು ಕೇವಲ ಮಕ್ಕಳಿಗೆ ಮಾತ್ರ ಕೊಡುವ ಕ್ರಮವಾದದ್ದರಿಂದ ಮಕ್ಕಳೆ ಕಂಞೆ (ಮಕ್ಕಳ ಗಂಜಿ) ಎನ್ನುವರು.

ಈ ಗಂಜೀ ಹೆಚ್ಚು ಪ್ರಮಾಣದಲ್ಲಿ 'ಬೆಲ್ಲ' ಬೆರೆಸುವುದರಿಂದ ಇದನ್ನು ಚಕ್ಕರೆ ಕಂಞಿ (ಬೆಲ್ಲದ ಗಂಜಿ) ಎಂದೂ ಕರೆಯುತ್ತಿದ್ದರು. ಈಗ ಈ ಊಟವನ್ನು ಕೆಲವೆಡೆ ಮದ್ರಸಾಗಳಲ್ಲಿ ಕೊಡುವ ಕ್ರಮ ಬೆಳೆದು ಬಂದಿದೆ. ಅದಲ್ಲದೆ ಅನಾರೋಗ್ಯ, ಕಷ್ಟ – ಸಂಕಷ್ಟ ಬಂದಾಗ ಇಟ್ಟ ಹರಕೆ ಸಂದಾಯ ಮಾಡಲು ಚಕ್ಕರೆ ಕಂಞಿಯನ್ನು ಮಕ್ಕಳಿಗೆ ಕೊಡಲಾಗುತ್ತದೆ.

ಕೆಲವು ಕಡೆ ಇದನ್ನು ವಿಶೇಷ ಸಡಗರ ಮತ್ತು ಸಂಭ್ರಮದಿಂದ ಹಾಗೂ ವಿಶಿಷ್ಟ ರೀತಿಯಲ್ಲಿ ಆಚರಿಸಲಾಗುತ್ತದೆ. ಈ ಆಚರಣೆಗೆ (ಪುದಿಯೆ ಅರಿರೆ ಚೋರು) 'ಹೊಸತುಣ್ಣುವ ಹಬ್ಬ' ಎನ್ನುವರು.

ನದಿಯ ನೀರು ಭರತಕ್ಕೆ ಏರುವ ಹೊತ್ತು ಮನೆಯ 'ಗಂಡು ಮಗ' ಭತ್ತದ ತೆನೆಯನ್ನು ತಲೆ ಮೇಲಿಟ್ಟುಕೊಂಡು 'ಬಿಸ್ಮಿ' ಉಚ್ಚರಿಸುತ್ತಾ ಮನೆಯ ಪಡಸಾಲೆಯ ಮೂಲಕ ಬಲಗಾಲು ಇಟ್ಟು ಪ್ರವೇಶಿಸುತ್ತಾ ಮಧ್ಯಭಾಗದಲ್ಲಿ ತೆನೆಯನ್ನು ಕಟ್ಟುತ್ತಾನೆ. ಅದಲ್ಲದೆ ತೆನೆಯ ಕೆಲವು ಭತ್ತವನ್ನು ಸುಲಿದು ಬೆಳೆ ಸಮೃದ್ಧಿಗಾಗಿ ವಿಶೇಷ ದುಆ ಮಾಡಲಾಗುತ್ತದೆ. ಈ ವಿಶಿಷ್ಟ ಆಚರಣೆಯ ನಂತರ ಹೊಸ ಅಕ್ಕಿಯನ್ನು ಮನೆಯ ಒಳಗೆ ಬಳಸಲಾಗುತ್ತದೆ.

ಬ್ಯಾರಿಗಳಿಗೆ ಪೊಟ್ಟು ಚೋರು (ಸಾಮಾನ್ಯ ಊಟ) ದಿನದ ಪ್ರಮುಖ ಆಹಾರವಾಗಿತ್ತು. ಶ್ರೀಮಂತರ ಅಡುಗೆಯಲ್ಲಿ ಬಿರಿಯಾನಿಯ ಜೊತೆಗೆ ಕೋಳಿ ಪೊರ್ಚೆದ್, ಕೋಳಿ ಫ್ರೈಯು ಇರುತ್ತಿತ್ತು. ಪ್ರಾಚೀನ ಕಾಲದ ಬ್ಯಾರಿಗಳು ಮದುವೆ ಮತ್ತಿತರ ಸಮಾರಂಭಗಳಿಗೆ ನೈಚೋರು (ತುಪ್ಪದೂಟ) ಮತ್ತು ಸಾಮಾನ್ಯ ಜನರು ಕೋಳಿ ಚೋರ್‌ನ್ನು ಬಳಸುತ್ತಿದ್ದರು. ಆದರೆ ಈಗ ಅದರ ಸ್ಥಾನವನ್ನು ಬಿರಿಯಾನಿ, ಕುಷ್ಕವು ಆಕ್ರಮಿಸಿಕೊಂಡಿದೆ.

ಕೆಲವು ಬ್ಯಾರಿಗಳು ಕಂಞಿ ಅಥವಾ ಕುಲ್ತೆ ಕಂಞಿ (ಗಂಜಿ)ಯ ಜೊತೆಗೆ ಮೊಸರನ್ನು ಬಳಸಿ ಹೊಟ್ಟೆ ತಣಿಸುತ್ತಿದ್ದರು. ಮಸಾಲೆ ತುಂಬಿದ ಮೀನನ್ನು ಎಣ್ಣೆಯಲ್ಲಿ ಕರಿದರೆ ಕಾಯಿಚೆದ್ (ಕಾಯಿಸಿದ್ದು) ಎಂದೂ ಮಣ್ಣಿನ ಮಡಕೆಯಲ್ಲಿಟ್ಟು ಅಡಿಯ ಒಲೆಯಲ್ಲಿ ಬೆಂಕಿ ಕೆಂಡವನ್ನು ಹಾಕಿ ಮೀನನ್ನು ಕಾಯಿಸಿದರೆ ಬರ್ಪಯೆದ್ ಎನ್ನುವರು. ಹೀಗೆ ಮಾಡಿದ ಮೀನನ್ನು ಮತ್ತೆ ಎಣ್ಣೆಯಲ್ಲಿ ಹಾಕಿ ಕರಿದರೆ ಪೋರ್‌ಚೆದ್ ಎನ್ನುವರು. ಅದೇ ರೀತಿ ಅಮ್ಲೆಟ್ ಮತ್ತು ಮೊಟ್ಟೆ ಬೇಯಿಸಿ ತಿನ್ನುವುದು ಕೂಡ ಬ್ಯಾರಿಗಳ ವಿಶೇಷ ಆಹಾರವಾಗಿತ್ತು. ಇದರ ಜೊತೆಗೆ ಬೀಫ್ ಸುಕ್ಕ, ಮಟನ್ ಸುಕ್ಕವೂ ಕೂಡಾ ಬ್ಯಾರಿಗಳ ಅತಿಪ್ರಿಯ ಆಹಾರವಾಗಿತ್ತು ಹಾಗೂ ಬಗೆ ಬಗೆಯ ಪಲ್ಯಗಳನ್ನು ಕೂಡಾ ತಯಾರಿಸುತ್ತಿದ್ದು ಇದಕ್ಕೆ ಪೊಡಿಕರಿ

ಅಥವಾ ಬರ್ತೆಕರಿ ಅಥವಾ ಬರ್ತೆಕೂಟಹ ಎಂದು ಕರೆಯುತ್ತಾರೆ.

ನೋಂಬು (ರಮ್ಜಾನ್) ತಿಂಗಳಲ್ಲಿ ತ್ಯಾಂಜಡೆ ಕಂಞಿ, ಸೋಜಿ, ಚೊರೆಡೆ ಮಣ್ಣಿ, ಮೆತ್ತಡೆ ಮಣ್ಣಿ, ಕಡ್ಲೆ ಮಣ್ಣಿ ಮುಂತಾದ ಫಲಹಾರಗಳನ್ನು ಮಾಡುವರು. ಅದಲ್ಲದೆ ಚಕ್ಕೆಡೆ ಅಪ್ಪ, ಪಲ್ತಪ್ಪ, ತೆಕ್ಕಿಡೆ ಎಲೆಡೆ ಅಪ್ಪ, ಕಲ್ತಪ್ಪ ಅಥವಾ ಬಿಸೆಲಿಲ್ ಬೀತಿಯೆ ಅಪ್ಪ, ಓಡುಲು ಬೀತಿಯೆ ಅಪ್ಪ, ಎಣ್ಣೆಲ್ ಕಾಚೆ ಅಪ್ಪ, ಗುಳಿಯಪ್ಪ, ಪತ್ತ್ರ್, ಪೋಲೆ ಅಥವಾ ಕಾವಲಿಲ್ ಬೀತಿಯೆ ಅಪ್ಪ, ಪೂಪೋಲೆ ಅಥವಾ ಪೂತಾಲೆ, ಬಾಲೆಡೆ ಎಲೆಲ್ ಬೀತಿಯೆ ಅಪ್ಪ, ನೈಯಪ್ಪ ಉಂಡೆ ಅಥವಾ ಪಿಂಡಿ, ಕೌಲ್ಲೆ ಪಿಂಡಿ, ತನ್ನಿರೆ ಪಿಂಡಿ, ಪೂ ಅಪ್ಪ, ಸೇಮೆ ಅಥವಾ ಇರ್ಮಂಡೆ ಅಪ್ಪ, ನೇವರಿ, ಬಾಣಲೆಡೆ ಅಪ್ಪ, ಮುಂತಾದ ತಿಂಡಿ ತಿನಿಸುಗಳನ್ನು ಮಾಡುತ್ತಿದ್ದರು.

ದಿನದಲ್ಲಿ ಕಾಫಿ,ಚಾ ತಿಂಡಿಯ ಜೊತೆಗೆ ಸೀರ್ ಕುರ್ಮ ಮತ್ತು ಪಯರ್ರೆ ತನ್ನಿಯನ್ನು ಕುಡಿಯುವುದು ಸಾಮಾನ್ಯವಾಗಿತ್ತು.

ಎಳೆಯ ಮಕ್ಕಳು ತೀರಿದಾಗ ಅವರ ಸವಿನೆನಪಿಗಾಗಿ ಆರ್ಥಿಕ ಪರಿಸ್ಥಿತಿ ಗನುಗುಣವಾಗಿ ನೆರೆಯ ಎಲ್ಲಾ ಮಕ್ಕಳಿಗೆ ಹಾಲಿಗೆ ಬಾಳೆ ಹಣ್ಣನ್ನು ಬೆರೆಸಿ ಕೊಡುವ ಪದ್ಧತಿಯು ಕೆಲವು ಗ್ರಾಮಾಂತರ ಪ್ರದೇಶಗಳ ಬ್ಯಾರಿಗಳಲ್ಲಿ ಬಳಕೆಯಲ್ಲಿತ್ತು. ಇದಕ್ಕೆ 'ಪಾಲುಂ ಬಾಳೆ' ಎನ್ನುವರು. ಇದರ ಮುಖ್ಯ ಉದ್ದೇಶ ತೀರಿಹೋದ ಮಕ್ಕಳನ್ನು ಜ್ಞಾಪಕಕ್ಕೆ ತರುವುದು ಮತ್ತು ಅವರ ಮಗ್ಫಿರತ್‌ಗಾಗಿ ಪ್ರಾರ್ಥನೆ ಸಲ್ಲಿಸುವುದಾಗಿದೆ.

**ಆಭರಣ ವಿನ್ಯಾಸಗಳು**

ಬ್ಯಾರಿ ಹೆಣ್ಣುಮಕ್ಕಳು ಬಳಸುತ್ತಿದ್ದ, ಆಭರಣಗಳ ವಿನ್ಯಾಸವಂತೂ ಅದ್ಭುತ. ಅಲಿಕ್ಕಾತ್, ಕೊಪ್ಪು, ಸರಪೊಳಿ, ವಾಲೆ, ಒಲಿ, ಬಾಲೀಕ್, ತಲೆ ಸಿಂಗಾರ, ಬಂದಿ, ಗೆಜೆತಿಕ್ ಮಾಲೆ, ಪದಕಲ, ಚಾನೊಲ್ಡೊ ಮಾಲೆ, ನೆಂಜಿ ಮಾಲೆ, ಪತ್ತೊಲು ಮಾಲೆ, ಮಿನ್ನಿ ಮಾಲೆ, ಮಿಸ್ರಿಮಾಲೆ, ಅರಜನ ನೂಲು, ಕುಣಿಪು ಸರಪೊಲಿ, ಗೆಜ್ಜೆ, ಪಿರಿ ಬಲೆ, ತರಿ ಬಲೆ, ಚೂಡಗಿ, ಕಂಕಣ, ಕೈಕಲ, ಅಸಕಡಗ, ಕಾಮೂಸ್ ಕಡಗ ಇನ್ನಷ್ಟು ಹೆಸರುಗಳನ್ನು ಹೇಳು ನನ್ನ ಅಜ್ಜಿಯನ್ನು ಪೀಡಿಸಿದಾಗ ಮಯ್ಯಾವುಡಿಪೋ, ನಕ್ಕ್ ಚೆಂತ್ ಬಚ್ಚಿ ಪೋಯಿತ್ ಎಂದದ್ದರಿಂದ ಇಲ್ಲಿಗೆ ನಿಲ್ಲಿಸಿದ್ದೇನೆ.

ಅಲ್ಲದೆ ಆಭರಣ ಎಂದರೆ ಬ್ಯಾರಿ ಜನಾಂಗದವರಿಗೆ ಇಷ್ಟದ ವಿಷಯ. ಅದರಲ್ಲೂ ಹಿಂದಿನ ಕಾಲದ ಬ್ಯಾರಿ ಹೆಂಗಸರು ಧರಿಸುತ್ತಿದ್ದ ಒಡವೆಗಳು ನಾನಾ ತರಹಗಳು. ಅದರಲ್ಲಿ ಕಿವಿಗೆ ಹಾಕುವ ಅಲಿಕಾತ್ ಬಾರಿ ಹೆಸರು

ವಾಸಿಯಾಗಿದೆ. ಹಿಂದಿನ ಬ್ಯಾರಿ ಹೆಂಗಸರು ಕಿವಿಗೆ 7–8 ಅಲಿಕಾತ್ತ್ ಹಾಕಿ ಕೊಳ್ಳುತ್ತಿದ್ದರು. ಕೊಪ್ಪು ಸರಪೊಲಿ ಮತ್ತು ತಲೆಸಿಂಗಾರ ಎನ್ನುವಂತದ್ದು ಬ್ಯಾರಿಗಳಿಗೆ ಬಾರಿ ಇಷ್ಟದ ಆಭರಣಗಳು. ಬಂಗಾರದ ನಾಣ್ಯದ 'ಚಾವಡ' ಚಿನ್ನದ ಎಸಳುಗಳು, ಬಳೆ ಮತ್ತು ಉಂಗುರಗಳು ಸಾಮಾನ್ಯವಾಗಿದ್ದವು.

**ಬ್ಯಾರಿಗಳ ಸಾಮಾನ್ಯ ಆಭರಣಗಳು :**

| **ಕೈ ಒಡವೆಗಳು** | **ಕಿವಿ ಆಭರಣಗಳು** | **ತಲೆ ಆಭರಣಗಳು** | **ಕುತ್ತಿಗೆ ಆಭರಣಗಳು** | **ಕಾಲು/ನಡು ಆಭರಣಗಳು** |
|---|---|---|---|---|
| ಬಳೆ | ಅಲಿಕಾತ್ | ತಲೆ ಸಿಂಗಾರ್ | ತಾಳಿಮಾಲೆ | ಕಾಲ್ ಪಟ್ಟಿ |
| ಎಳಬಳೆ | ಕಾಯಿಲಂ | ಕೂಕಟ್ಟ್ | ಗೆಜ್ಜೆಟಿಕ್ | ಸರಪಳಿ |
| ಸುರ್ಗಿತಿರಿ | ಕೊಪ್ಪು | ಕೇದೆಗೆ | ಚಾವಡ | ನಡುಪಟ್ಟಿ |
| ಮುರ್ಗಿತಿರಿ | ಸರಪಳಿ | ಜಡಪೊಳ್ಳ | ಉರುಕುಲೇಸ್ | ಅರಪಟ್ಟಿ |
| ಎಡೆಬಳೆ | ಕುಡುಕ್ಕ | ಕುರಿ | ಮಿಸ್ರಿಮಾಲೆ | ಅರಂಞಾನ |
| ತಟ್ಟಬಳೆ | ಅರುಲಿ | ಚೌರಿ | ಒಟ್ಟ ಉರುಕು | ನೂಲು |
| ಕಾದುಬಳೆ | ಬೆಂಡೋಲೆ | ತಿರ್ಮ | ಪೂಮಾಲೆ | |

ಆಭರಣಪ್ರಿಯರಾದ ಬ್ಯಾರಿ ಸ್ತ್ರೀಯರು ಮೈತುಂಬಾ ಬಂಗಾರ್ ತೊಡಲು ಉತ್ಸುಕರಾಗಿರುವರು. ಈ ಸ್ತ್ರೀಯರು ತೊಡುವ ಆಭರಣವು ಇತರ ಜನಾಂಗಿಯರಿಗಿಂತ ತೀರ ಭಿನ್ನವಾಗಿದೆ. ಮದುವೆ, ಮುಂಜಿ, ಹಬ್ಬ ಮತ್ತಿತರ ಸಮಾರಂಭಗಳಿಗೆ ಹೋಗುವಾಗ ಮೈ ತುಂಬಾ ಬಂಗಾರ ಧರಿಸುವುದು ಕಂಡುಬರುತ್ತದೆ.

ಬ್ಯಾರಿ ಮನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಆಭರಣಗಳು ಇರುತ್ತಿದ್ದವು. ಇವುಗಳನ್ನು ಬಹುತೇಕ ಸ್ಥಳೀಯರು ಕುಸುರಿನ ಒಡವೆಗಳಿಂದ ಮಾಡಿಸಲಾಗುತ್ತಿತ್ತು. ಚಿನ್ನದ ಕೆಲಸಗಾರರು ಬಹುತೇಕರು ಅಮುಸ್ಲಿಮರಾಗಿದ್ದು, ಬ್ಯಾರಿಗಳು ಅವರಿಂದ ಬೇಕಾದ ಒಡವೆಗಳನ್ನು ಮಾಡಿಸುತ್ತಿದ್ದರು.

ಆದರೆ ಈಗ ಈ ಸಾಂಪ್ರದಾಯಿಕ ಆಭರಣಗಳು ಕಣ್ಮರೆಯಾಗುತ್ತಿದ್ದು ಅವುಗಳ ಸ್ಥಾನವನ್ನು ನೆಕ್ಲೆಸ್, ಟಿಕ್ಕಿ, ಬಾಲ್ಸರ ಮುಂತಾದವುಗಳು ಆಕ್ರಮಿಸಿದೆ. ಆದರೂ ಹಳೆಯ ಆಭರಣಗಳ ಆಕರ್ಷಣೆಯಿಂದ ಬ್ಯಾರಿ ಸ್ತ್ರೀಯರು ಪೂರ್ಣ ಮುಕ್ತರಾಗಿಲ್ಲ.

**ಬ್ಯಾರಿ ಕಲೆಗಳು**

ಕುಸಾಲು ಗುಮ್ಮತ್ತಿಗೆ ಬ್ಯಾರಿಗಳು ಹೆಸರುವಾಸಿ ಎದುರು ಮಸಲೆ, ತಮಾಸೆ ಕಲಿಯಲ್ಲಿ ನಮ್ಮವರದ್ದು ಎತ್ತಿದ ಕೈ ಸಹಜವಾಗಿಯೇ ಹಾಸ್ಯ ಪ್ರಜ್ಞೆ ಬ್ಯಾರಿಗಳ ಸಾಂಸ್ಕೃತಿಕ ಸಂಪತ್ತು ಆಗಿತ್ತು. ಈಗ ಅದು ಕಣ್ಮರೆಯಾಗುತ್ತಿದೆ. ಹಾಸ್ಯ ಪ್ರಜ್ಞೆಯ ಮೂಲಕ ಗಂಭೀರ ಸನ್ನಿವೇಶಗಳನ್ನು ನಿಭಾಯಿಸುತ್ತಿದ್ದ ಬ್ಯಾರಿಗಳ ಚಾಕಚಕ್ಯತೆ ಮಾಯವಾಗುತ್ತಿದೆ.

ದಪ್ಪುಪಾಟ್ ಮತ್ತು ಕೋಲ್ ಕಲಿ ಅಲ್ಲಲ್ಲಿ ಈಗಲೂ ಉಳಿದುಕೊಂಡಿದೆ. ಆದರೆ ದಾಯಿರ ಮೆಲ್ಲನೆ ಕಣ್ಮರೆಯಾಗುತ್ತಿದೆ. ಮದುವೆಯಲ್ಲಿ ಮ್ಯೊಲಾಂಜಿ ಪಾಟ್. ಕೈ ಕೊಟ್ಟು ಪಾಟ್, ಒಪ್ಪನೆ ಪಾಟ್‌ಗಳು ಈಗ 'ಷೋಕೇಸ್ ಪೀಸ್' ಆಗಿವೆ. ಬ್ಯಾರಿಗಳ ಮನೆಯಲ್ಲಿ ಪದೇ ಪದೇ ನಡೆಯುತ್ತಿದ್ದ ಮೌಲೂದ್ ಪಾರಾಯಣಗಳೂ ಒಂದು ವಿಶಿಷ್ಟ ಸಾಂಸ್ಕೃತಿಕ ಸನ್ನಿವೇಶವನ್ನು ಸೃಷ್ಟಿಸಿದ್ದವು. ಮಂಕೂಸು ಮೌಲೂದು, ಬದ್‌ರ್ ಮೌಲೂದ್, ರಿಫಾಯಿ ಮಾಲೆ, ಮೈಯ್ಯದ್ದಿ ಮಾಲೆ, ಕುತುಬಿಯತ್ ಮುಂತಾದವುಗಳು ಬ್ಯಾರಿಗಳು ಪದೇ ಪದೇ ಒಂದೆಡೆ ಸೇರಿ ನಡೆಸುತ್ತಿದ್ದ ಕೂಟ ಕೂಡಾ ಬ್ಯಾರಿಗಳ ಸೌಹಾರ್ದತೆಯನ್ನು ಹೆಚ್ಚಿಸಿದ್ದು ಸುಳ್ಳಲ್ಲ.

ಅದರಲ್ಲೂ ಇತ್ತೀಚೆಗೆ ಕೋಲ್ ಕಲಿ ಮತ್ತು ದಪ್ಪ್ ಪಾಟ್‌ಗಳಿಗೆ ಬ್ಯಾರಿಗಳು ಮಹತ್ವವನ್ನು ನೀಡುತ್ತಿದ್ದಾರೆ. ದಪ್ಪು ಪಾಟಿನಲ್ಲಿ ಪ್ರವಾದಿ ಮಹಮ್ಮದ್(ಸ)ರ ಮದ್‌ಹ್ ಹಾಡನ್ನು ಹಾಡುತ್ತಾ ಕುಣಿಯುವುದು ಇನ್ನೊಂದು ರೀತಿಯ ಖುಷಿ. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪನೆಯಾದ ಮೇಲೆ ದಪ್ಪ್ ಪಾಟ್ ಮತ್ತು ಕೋಲ್ ಕಲಿಗಳನ್ನು ಜನಪ್ರಿಯ ಮಾಡಲು ತುಂಬಾ ಯೋಜನೆಗಳನ್ನು ಜಾರಿಗೆ ತಂದಿದೆ.

'ಎದುರ್ ಮಸಾಲೆ' (ಒಗಟುಗಳು) ಮಸಾಲೆ (ಕಥೆಗಳು), ಕೈಕೊಟ್ಟು ಪಾಟ್, (ಚಪ್ಪಾಳೆ ತಟ್ಟಿ ಹಾಡುವುದು), ಮ್ಯೊಲಾಂಜಿ ಪಾಟ್ (ಮದಿರೆಂಗಿ ಇಡುವಾಗ ಹಾಡುವುದು) ಒಪ್ಪನೆ ಪಾಟ್ (ವಧುವನ್ನು ಶೃಂಗರಿಸಿ ಕುಳ್ಳಿರಿಸಿ ಹಾಡುವುದು) ಮುಂತಾದ ಹಾಡುಗಳ ಸಮುದಾಯವೇ ಬ್ಯಾರಿ ಸಾಹಿತ್ಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

**ಒಗಟುಗಳು : (ಎದುರ್ ಮಸಾಲೆ)**

1. ಚೋಟು ಉದ್ದ ಹೆಣ್ಣಿಗೆ ಮೂರುದ್ದದ ಲಂಗ – ಸೂಜಿ ನೂಲು

2. ಅಡ್ಡ ಮರದಲ್ಲಿ ಬೊಡ್ಡೆ ಮಲಗಿದ್ದಾನೆ – ಹಲಸಿನ ಹಣ್ಣು
3. ಬಿಳಿ ಮೈದಾನದಲ್ಲಿ ಕಪ್ಪು ಚೆಂಡು – ಕಣ್ಣು
4. ಕಪ್ಪು ಕಾಡಲ್ಲಿ ಕಪ್ಪು ಕುಡಿ ಮೇಯುತ್ತಾ ಇದೆ – ಹೇನು
5. ಜಟ್ ಪಟ್ ಲೇಡಿಗೆ ಒಂದೇ ಕಣ್ಣು – ಸೂಜಿ
6. ಜುಟ್ಟು ಉಂಟು ಋಷಿಯಲ್ಲ, ಮೂರು ಕಣ್ಣು ಉಂಟು ಶಿವ ಅಲ್ಲ, ನೀರು ಉಂಟು ಕಡಲಲ್ಲ ನಾನು ಯಾರು? – ತೆಂಗಿನಕಾಯಿ

**ಬ್ಯಾರಿಗಳ ಹಬ್ಬಗಳು**

**1. ಮೊಹರ್ರಮ್**

ಮೊಹರ್ರಮ್‌ನ ತಿಂಗಳು ಇಸ್ಲಾಮಿ ಇತಿಹಾಸದಲ್ಲಿ ದುಃಖದ ತಿಂಗಳಾಗಿದೆ. ಏಕೆಂದರೆ ಮೊಹರ್ರಮ್ ಹತ್ತರಂದು ಪ್ರವಾದಿಯವರ ಮೊಮ್ಮಗ ಹುಸೈನ್ ಕರ್ಬಲಾ ಮೈದಾನದಲ್ಲಿ ಹುತಾತ್ಮರಾದರು. ಅವರು ಹುತಾತ್ಮರಾದುದನ್ನು ನೆನಪಿಸುತ್ತಾ ಮೊಹರ್ರಮ್ ಹತ್ತನ್ನು ದುಃಖದ ದಿನವಾಗಿ ಆಚರಿಸಲಾಗುತ್ತದೆ. ಪ್ರವಾದಿಯವರು ಮೊಹರ್ರಮ್ ಒಂಭತ್ತು ಮತ್ತು ಹತ್ತರಂದು ಉಪವಾಸವಿಡಲು ಆದೇಶಿಸಿದ್ದು ಈ ದಿನಗಳನ್ನು ಆಶೂರಿ ಎಂದು ಕರೆಯಲಾಗುತ್ತದೆ. ಮೊಹರ್ರಮ್ ಅತ್ಯಂತ ಪ್ರಮುಖ ಆಚರಣೆಯಾಗಿದ್ದು ಸುಮಾರು ಹತ್ತು ದಿನಗಳವರೆಗೂ ಈ ಆಚರಣೆ ನೆರವೇರುತ್ತಿತ್ತು.

**2. ಈದ್ ಮಿಲಾದ್**

ಪ್ರವಾದಿಯವರ ಜನ್ಮದಿನವನ್ನು ಈದ್ ಮಿಲಾದ್ ಎಂದು ಆಚರಿಸಲಾಗುತ್ತದೆ. ರಬೀವುಲ್ ಅವ್ವಲ್ 12 ಪ್ರವಾದಿಯವರ ಜನನ ದಿನವಾಗಿದ್ದು ಇದೇ ದಿನಾಂಕದಂದು ಪ್ರವಾದಿಯವರು ನಿಧನರಾಗಿದ್ದರು. ಆದ್ದರಿಂದ ಈ ದಿನದ ಆಚರಣೆಯು ಪ್ರವಾದಿಯವರ ಜನ್ಮ ಮರಣವನ್ನು ಸಂಕೇತಿಸುತ್ತದೆ. ಮುಸ್ಲಿಮರು ಈ ತಿಂಗಳಲ್ಲಿ ತಮ್ಮ ಮನೆಗಳಲ್ಲಿ ಮೌಲೂದ್ ಪಠಣ ಮಾಡುತ್ತಾರೆ. ಹಾಗೂ ಬಡವರಿಗೆ ಉಣಿಸುತ್ತಾರೆ. ಮುಖ್ಯವಾಗಿ 12ನೇ ತಾರೀಖೀನಂದು ಎಲ್ಲಾ ಜಮಾತ್ ಗಳಲ್ಲಿ ಮೌಲೂದ್ ಪಠಣದ ನಂತರ ಊಟ, ಸಿಹಿ ತಿಂಡಿಗಳನ್ನು ಹಂಚುವುದರ ಮೂಲಕ ಅದ್ದೂರಿಯಾಗಿ ಆಚರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ರವಾದಿಯವರ ಘೋಷಣೆಯೊಂದಿಗೆ ಮೆರವಣಿಗೆ ಹೋಗಿ ಮತ್ತು ಹೊಸ ಹೊಸ ಕಾರ್ಯಕ್ರಮ, ಹಾಡುಗಳನ್ನು ಈದ್ ಮಿಲಾದ್ ಭಾಗವನ್ನಾಗಿ ಮಾಡಿಕೊಳ್ಳಲಾಗಿದೆ.

**3. ರಾತೀಬ್, ಝಿಕ್ರ್**

ಪ್ರವಾದಿಯವರ ಜನ್ಮದಿನದಂತೆ ಬಗ್ದಾದ್‌ನ ಸಂತರಾದ ಶೇಖ್ ಮೊಹಿಯುದ್ದೀನ್ ಅಬ್ದುಲ್ ಖಾದರ್ ಜೀಲಾನಿಯವರ ಜನ್ಮ ದಿನವನ್ನು ಸ್ಮರಿಸಲಾಗುತ್ತದೆ. ಇವರನ್ನು ಕೊಂಡಾಡುವ ಗಾನವನ್ನು ರಚಿಸಲಾಗಿದ್ದು ಇದನ್ನು ಮೊಹಿಯುದ್ದೀನ್ ಮಾಲ ಎಂದು ಕರೆಯುತ್ತಾರೆ. ಮಾಪಿಳ್ಳೆ ವಿದ್ವಾಂಸರು ದೇವನ ಮಹಿಮೆಯನ್ನು ಕೊಂಡಾಡುವ ಗೀತೆಗಳನ್ನು ರಚಿಸಿದ್ದು ಅವುಗಳನ್ನು ರಾತೀಬ್ ಮತ್ತು ಝಿಕ್ರ್ ಎಂದು ಕರೆಯಲಾಗುತ್ತದೆ. ಇದನ್ನು ರಬೀವುಲ್ ಆಖಿರ್ ತಿಂಗಳಲ್ಲಿ ಆಚರಿಸಲಾಗುತ್ತದೆ.

**4. ಬರಾಅತ್**

ಇದನ್ನು ಶಅಬಾನ್ ತಿಂಗಳ ಹದಿನೈದನೇ ದಿನದಂದು ಆಚರಿಸಲಾಗುತ್ತದೆ. ಈ ದಿನವನ್ನು ಅಲ್ಲಾಹ್ ಮನುಷ್ಯನ್ ಜೀವನೋಪಾದಿಯಾಗಿಟ್ಟು ಆಹಾರವನ್ನು ನಿರ್ಧರಿಸುವಂತಹ ಹಾಗೂ ಮನುಷ್ಯನ ಅದೃಷ್ಟವನ್ನು ನಿರ್ಧರಿಸುವ ದಿನ ಎಂದು ನಂಬುತ್ತಾರೆ. ಈ ಕಾರಣಕ್ಕಾಗಿಯೇ ಈ ದಿನ ಸೂರ್ಯಸ್ತದ ನಂತರ ಉಪಾಸನೆಗಳನ್ನು ನೆರವೇರಿಸುತ್ತಾರೆ. ಈ ದಿನದಂದು ಗೋರಿಯಲ್ಲಿರುವವರು ಭೂಮಿಯಲ್ಲಿರುವ ತಮ್ಮ ಸಂಬಂಧಿಕರನ್ನು ನೆನಪಿಸುವ ದಿನವಾಗಿದೆ.

**5. ಈದುಲ್ ಫಿತ್ರ್ ಅಥವಾ ಪೆರ್ನಾಲ್**

ಇದು ರಮಝಾನ್ ತಿಂಗಳ ಉಪವಾಸದ ಕೊನೆಗೆ ಶವ್ವಾಲ್ ತಿಂಗಳ ಪ್ರಥಮ ದಿನ ಆಚರಿಸುವ ಹಬ್ಬವಾಗಿದ್ದು ವಿಶ್ವದಾದ್ಯಂತ ಮುಸ್ಲಿಮರು ಈ ಹಬ್ಬವನ್ನು ಆಚರಿಸುತ್ತಾರೆ. ವಿಧ ವಿಧದ ಖಾದ್ಯಗಳನ್ನು ತಯಾರಿಸಿ ಹೊಸಬಟ್ಟೆ ಧರಿಸಿ ತುಂಬಾ ಸಡಗರದೊಂದಿಗೆ ಮುಸಲ್ಮಾನರ ಎಲ್ಲಾ ಮನೆಗಳಲ್ಲಿ ಈ ಹಬ್ಬಾಚರಣೆ ಕಾಣಸಿಗುತ್ತದೆ. ರಮಝಾನ್‌ನಲ್ಲಿ ಝಕಾತ್ (ಕಡ್ಡಾಯ ದಾನ)ವನ್ನು ನೀಡಲಾಗುತ್ತದೆ. ಹಾಗು ಈದ್‌ನ ದಿನ ಫಿತ್ರ್ ಝಕಾತ್ ಅಂದರೆ ಆಹಾರ ಧಾನ್ಯಗಳನ್ನು ವ್ಯಕ್ತಿಯೋರ್ವನ ಮೇಲೆ 2.6 ಕಿ.ಗ್ರಾಂನಂತೆ ಈದ್ ನಮಾಝ್ ನಿರ್ವಹಿಸುವ ಮೊದಲು ವಿತರಿಸಲಾಗುವುದು. ಫಿತ್ರ್ ಝಾಕಾತ್‌ನ ಮಹತ್ವದ ಆಧಾರದಲ್ಲೆ ಈ ಹಬ್ಬವನ್ನು ಈದುಲ್ ಫಿತ್ರ್ ಎಂದು ಕರೆಯಲಾಗುತ್ತದೆ.

**6. ಈದುಲ್ ಆಝ್‌ಹಾ ಅಥವಾ ಬಕ್ರೀದ್ ಅಥವಾ ಬೆಲಿಯ ಪೆರ್ನಾಲ್**

ಇದನ್ನು ಬ್ಯಾರಿಗಳು (ಮುಸಲ್ಮಾನರು) ಈದುಲ್ ಫಿತ್ರ್‌ನಂತೆಯೇ ಆಚರಿಸಲಾಗುತ್ತದೆ. ಇಲ್ಲಿ ಫಿತ್ರ್‌ನ ರೂಪದಲ್ಲಿ ಧಾನ್ಯಕ್ಕೆ ಬದಲಾಗಿ ಉಳ್ಳವರು ಕುರಿಮಾಂಸ, ದನದ ಮಾಂಸಗಳನ್ನು ಬಡಬಗ್ಗರಿಗೆ, ಸಂಬಂಧಿಕರಿಗೆ ಈದ್ ನಮಾಝ್‌ನ ನಂತರ ಹಂಚುತ್ತಾರೆ.

ಈದುಲ್ ಫಿತ್ರ್‌ನಂತೆ ಈ ಹಬ್ಬದಂದು ಪ್ರಾರ್ಥನೆ (ನಿಸ್ಕಾರ) ಸಲ್ಲಿಸಲಾಗುತ್ತದೆ. ಈದುಲ್ ಝುಹಾ ಎಂದರೆ ಬಲಿದಾನದ ಹಬ್ಬವಾಗಿದ್ದು ದೇವನಿಗಾಗಿ ಬಲಿದಾನವನ್ನು ಅರ್ಪಿಸುವುದು ಈ ಹಬ್ಬದ ಮಹತ್ವದ್ದಾಗಿದೆ. ಈದ್ ನಮಾಝ್‌ನ ನಂತರ ದೇವನ ಹೆಸರಲ್ಲಿ ಜಾನುವಾರುಗಳನ್ನು ಬಲಿಕೊಡಲಾಗುವುದು ಮತ್ತು ಅದನ್ನು ಬಡ ಬಗ್ಗರಿಗೆ ಹಂಚಲಾಗುವುದು. ಈ ಹಬ್ಬವನ್ನು ಹಜ್ಜ್ ಪೆರ್ನಾಲ್ ಎಂದೂ ಕರೆಯಲಾಗುತ್ತದೆ. ಪ್ರವಾದಿ ಇಬ್ರಾಹಿಂ ತನ್ನ ಮಗ ಇಸ್ಮಾಯಿಲ್‌ರನ್ನು ಬಲಿ ಕೊಡಲು ತಯಾರಾದಾಗ ಅದರ ಬದಲುದ ಅಡೊಂದು ಪ್ರತ್ಯಕ್ಷಗೊಂಡು ಪವಾಡ ಸದೃಶ್ಯ ಪಾರಾದ ಘಟನೆ ನೆನಪಿಸಲಿಕ್ಕಾಗಿ ಈ ಹಬ್ಬ ಆಚರಿಸಲಾಗುತ್ತದೆ.

**ಬ್ಯಾರಿ ಭಾಷೆ**

ಭಾಷೆ ಜನರ ಮಾಧ್ಯಮ, ಸಂಪರ್ಕದ ಸಾಧನ ಅಥವಾ ಕೊಂಡಿಯ ಸಂಕೇತ. ಭಾಷೆಯಿಂದ ಪರಸ್ಪರ ಭಾವೈಕ್ಯ ಮತ್ತು ಸುಲಲಿತವಾಗಿ ಜೀವನ ನಡೆಸಲು ಸಾಧ್ಯವಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ಭಾರತದ ಈ ಮಣ್ಣಿನಲ್ಲಿ ತುಳುನಾಡು ಕೂಡಾ ಮಿನಿ ಭಾರತವೇ ಆಗಿದೆ.

ಬ್ಯಾರಿ ಭಾಷೆಯನ್ನು ನಕ್ಕ್ ನಿಕ್ಕ್ ಭಾಷೆ ಎಂದು ಹೆಚ್ಚಾಗಿ ಕರೆಯುತ್ತಿದ್ರು. 2 ದಶಕಗಳ ಹಿಂದೆ ಬೆಂಗಳೂರಿನಲ್ಲಿ ಸಕ್ರಿಯವಾಗಿ ಆರಂಭಗೊಂಡ ಚಳುವಳಿಯಿಂದ ಬ್ಯಾರಿ ಎಂಬ ಕೀಳರಿಮೆ ದೂರವಾಗಿದೆ. ಯುವ ಜನಾಂಗ ಕೂಡಾ ಬ್ಯಾರಿ ಎಂದು ಹೆಮ್ಮೆಯಿಂದ ಹೇಳಲು ಇಷ್ಟಪಡುತ್ತದೆ. ನಕ್ಕ್ ನಿಕ್ಕ್ ಎಂಬುದರ ಬದಲು ಬ್ಯಾರಿ ಎಂದು ಸಂಭೋದಿಸುವ ಪ್ರಕ್ರಿಯೆ ವ್ಯಾಪಕವಾಗಿದೆ.

ಬ್ಯಾರಿ ಭಾಷೆಗೆ ಲಿಪಿ ಇದೆ ಅಥವಾ ಇಲ್ಲ ಎಂಬ ವಾದ ವಿವಾದವಿದೆ. ಆದರೆ ಅದು ಇಲ್ಲಿ ಮುಖ್ಯವಲ್ಲ. ಯಾಕೆಂದರೆ ಜಗತ್ತನ್ನೆ ಆಳಬಲ್ಲ ಇಂಗ್ಲಿಷ್ ಭಾಷೆಗೆ ಸ್ವಂತ ಲಿಪಿ ಇಲ್ಲ.

ಬ್ಯಾರಿ ಎಂಬ ಪದವು ಕೇವಲ ಇಸ್ಲಾಂ ಧರ್ಮದ ಸಂಕೇತವಿಲ್ಲ. ಅದು ಭಾಷೆಯ ದ್ಯೋತಕವಷ್ಟೇ.

ಅರೇಬಿಯವು ಭಾರತದ ಪಶ್ಚಿಮ ಕರಾವಳಿಯೊಂದಿಗೆ 3 ಸಾವಿರ ವರ್ಷಗಳಿಗೂ ಹಿಂದೆಯೇ ಸಾಗರ ಸಂಪರ್ಕ ಹೊಂದಿತ್ತು ಎಂದು ಖ್ಯಾತ ಇತಿಹಾಸ ತಜ್ಞ ಕೆ.ಎಂ. ಪಣಿಕ್ಕರ್ ಅಭಿಪ್ರಾಯ ಪಡುತ್ತಾರೆ. ಹಾಗಾಗಿ ಬ್ಯಾರಿ ಭಾಷೆಗೆ 1200 ವರ್ಷವಲ್ಲ, 3 ಸಾವಿರಕ್ಕೂ ಅಧಿಕ ವರ್ಷದ ಇತಿಹಾಸವಿದೆ ಎಂದು ತರ್ಕಿಸಬಹುದಾಗಿದೆ. ಅಂದರೆ ಭಾರತದ ಪಶ್ಚಿಮ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಸ್ಲಾಂ ಧರ್ಮ ಪ್ರಚಾರವಾಗುವುದಕ್ಕೆ ಮುಂಚೆಯೇ ಬ್ಯಾರಿ ಭಾಷೆ ಬಳಕೆಯಲ್ಲಿತ್ತು ಎಂಬ ವಾದ ಕೇಳಿಬರುತ್ತಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಆಗಬೇಕಾಗಿದೆ.

ಇಸ್ಲಾಂ ಧರ್ಮ ಕರಾವಳಿಯಲ್ಲಿ ಪ್ರಚಾರವಾದದ್ದು ಕ್ರಿ. ಶ. 570ರ ನಂತರ ಆದರೆ ಕರಾವಳಿಯ ಉದ್ದಕ್ಕೂ ಅರಬ್ ವ್ಯಾಪಾರಿಗಳ ಸಂಪರ್ಕ ಕ್ರಿ.ಶ.ದ ಮೊದಲ ಶತಮಾನದಲ್ಲೇ ಇತ್ತೆಂದು ಹಲವು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಅಂದರೆ ಇಸ್ಲಾಂ ಧರ್ಮ ತುಳುನಾಡಿಗೆ ಪ್ರಚಾರಗೊಳ್ಳುವ ಮುನ್ನವೇ ಬ್ಯಾರಿ ಭಾಷೆ ಇತ್ತು ಎಂಬ ಮಾತಿದೆ.

ಈ ಎಲ್ಲಾ ಅಭಿಪ್ರಾಯಗಳ ಮಧ್ಯೆಯೂ ಬ್ಯಾರಿಗಳೆಲ್ಲರೂ ಮುಸ್ಲಿಮರೇ? ಮುಸ್ಲಿಮೇತರರಲ್ಲಿ ಕೂಡಾ ಬ್ಯಾರಿಗಳಿಲ್ಲವೇ? ಬ್ಯಾರಿ ಎಂದು ಕರೆಸಿಕೊಳ್ಳಲು ಇರುವ ಮಾನದಂಡವಾದರೂ ಏನು? ಎಂಬ ಜಿಜ್ಞಾಸೆ ಪ್ರಾರಂಭವಾಗಿದೆ.

ಕ್ರಿ.ಶ.644ನೇ ಇಸವಿಯಲ್ಲಿ ಮಾಲೀಕ್ ದಿನಾರ್‌ರು ಇಸ್ಲಾಂ ಧರ್ಮದ ಪ್ರಚಾರವನ್ನು ಮಂಗಳೂರು ಸುತ್ತ ಮುತ್ತ ಮಾಡುತ್ತಿದ್ದು, ಅವರ ಜತೆಗಿದ್ದ ಶಿಷ್ಯರು ತುಳು, ಕೊಂಕಣಿ, ಕನ್ನಡ ಭಾಷೆಯನ್ನು ಸ್ವಲ್ಪ ಸ್ವಲ್ಪವೇ ಕಲಿತು ಅರಬೀ –ಮಲಯಾಳಂ ಭಾಷೆಯ ಜೊತೆಗೆ ವಿಲೀನಗೊಳಿಸಿ 'ಬ್ಯಾರಿ ಭಾಷೆ'ಯನ್ನು ಹುಟ್ಟು ಹಾಕಿದರು ಎಂದು ಪ್ರತೀತಿ ಇದೆ.

ಆದರೆ ಕೆಲವರು ಇದನ್ನು ಒಪ್ಪಿಕೊಳ್ಳದೆ ಮಾಲೀಕ್ ದಿನಾರ್ ಭಾರತಕ್ಕೆ ಪ್ರವೇಶಿಸುವ ಮುಂಚೆಯೇ ಬ್ಯಾರಿ ಭಾಷೆ ಬಳಕೆಯಲ್ಲಿತ್ತು ಎಂದು ಅಭಿಪ್ರಾಯ ಪಡುತ್ತಾರೆ.

ತುಳು ಭಾಷೆ ಸ್ಥಳದಿಂದ ಸ್ಥಳಕ್ಕೆ ಮಾತಿನಲ್ಲೂ, ಶಬ್ದದಲ್ಲೂ, ಪದದಲ್ಲೂ, ಆಚರಣೆಯಲ್ಲೂ ವ್ಯತ್ಯಾಸ ಹೊಂದಿದಂತೆ ಬ್ಯಾರಿ ಭಾಷೆ ಕೂಡಾ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದಿದೆ.

ಕೋಣಾಜೆಯ ಸುತ್ತ ಮುತ್ತ ಬ್ಯಾರಿಗಳು ಅಧಿಕ ಸಂಖ್ಯೆಯಲ್ಲಿ ತಳವೂರಿದ್ದರೂ ಕೂಡಾ ಅವರ ಮಧ್ಯೆ ನೆಲೆಸಿರುವ ಕೆಲವು ಮುಸ್ಲಿಮರು ಬ್ಯಾರಿ – ಮಲೆಯಾಳಂ

ಮಿಶ್ರಿತ ಭಾಷೆಯಲ್ಲಿ ಮಾತುಕತೆ ನಡೆಸುವುದು ಕಂಡುಬರುತ್ತದೆ.

ಉಳ್ಳಾಲದ ಕಡೆ 'ಏನು' ಎಂಬುದಕ್ಕೆ 'ಯಾಂತೆ' ಎಂದೂ ಮಂಗಳೂರು ಸುತ್ತಮುತ್ತ 'ಎಂದೋ' ಎಂದೂ, ಕೋಣಾಜೆ ಕಡೆ 'ಎಂದೆ' ಎಂದೂ ಬ್ರಹ್ಮಾವರದ ಕಡೆ 'ಎನಿ' ಎಂದು ಹೇಳುವುದಷ್ಟೆ. ಬ್ಯಾರಿ ಭಾಷೆ ಸ್ಥಳದಿಂದ ಸ್ಥಳಕ್ಕೆ ಭಾಷಾ ಶೈಲಿ ಮತ್ತು ಆಚರಣೆಯಲ್ಲಿ ವ್ಯತ್ಯಾಸ ಹೊಂದಿದೆ ಎನ್ನಲು ಸಾಕು.

ಬ್ಯಾರಿಗಳು ಹಲವಾರು ವಿಷಯ ಮತ್ತು ವಸ್ತುಗಳಿಗೆ ಎರಡೆರಡು ಪದದಿಂದ ಗುರುತಿಸಿಕೊಳ್ಳುತ್ತಿರುವುದು ಕಂಡು ಬರುತ್ತದೆ.

| | | | | | |
|---|---|---|---|---|---|
| ಉದಾ: 1. | ಪನಿ | – | ಸೊರ | = | ಕೆಲಸ |
| 2. | ಕಂಡಿ | – | ತಾಕಬೈಲ್ | = | ಕಿಟಕಿ |
| 3. | ಸಾಣ್ | – | ಬಟೆಂಜ್ಜ | = | ಪ್ಲೇಟು |
| 4. | ಕಂಡ | – | ಪೂಲು | = | ತುಂಡು |

ಹೆತ್ತವರು ಒಡಹುಟ್ಟಿದವರು, ಆಪ್ತ ಸಂಬಂಧಿಕರನ್ನು ಕೂಡಾ ಬ್ಯಾರಿಗಳು ಅತ್ಯಂತ ಸರಳವಾಗಿ ಗುರುತಿಸಿಕೊಳ್ಳುತ್ತಾರೆ.

| | | | | | |
|---|---|---|---|---|---|
| ಉದಾ: 1. | ಉಮ್ಮ | – | ಅಬ್ಬ | = | ಅಮ್ಮ ಅಪ್ಪ |
| 2. | ಕುಂಞಮ | – | ಕುಂಞಬ | = | ಚಿಕ್ಕಮ್ಮ ಚಿಕ್ಕಪ್ಪ |
| 3. | ಕಾಕ | – | ಮಾಮಿ | = | ಮಾವ ಅತ್ತೆ |
| 4. | ಮಾಪ್ಲೆ | – | ಪೆಂಞಯಿ | = | ಗಂಡ ಹೆಂಡತಿ |
| 5. | ಮೋನು | – | ಮೋಳು | = | ಮಗ ಮಗಳು |
| 6. | ಮರ್ಮೋನು | – | ಮರ್ಮೊಳು | = | ಅಳಿಯ ಸೊಸೆ |
| 7. | ಅಲಿಯಾಕ | | | = | ಬಾವ |
| 8. | ಬಾಬಿ | | | = | ಅತ್ತಿಗೆ |
| 9. | ಕಿಡಾವು | | | = | ಮಗು |
| 10. | ಬೆಲಮ/ಬೋಮ | | ಬೆಲಬ/ಬೋಬ | = | ಅಜ್ಜ ಅಜ್ಜಿ |

ತುಳು ಮತ್ತು ಬ್ಯಾರಿ ಭಾಷೆಯಲ್ಲಿನ ಹಲವಾರು ಪದಗಳು ಒಂದೇ ಅರ್ಥವನ್ನು ಕೊಡುತ್ತಿದ್ದು ಅವುಗಳನ್ನು ಗುರುತಿಸಿದಾಗ

1. ಕಜಂಬು (ತಲೆಕ್ಷೌರ) 2. ಮುಕ್ಕಲಿಗೆ (ಬೆಂಚು) 3. ಪೊದು (ನೆಂಟಸ್ಥಿಕೆ) 4. ದೊಂಪ (ಚಪ್ಪರ) 5. ಮಡಲ್ (ತೆಂಗಿನ ಸೋಗೆ), 6. ಕೊದಿ (ದೃಷ್ಟಿ ಬೀಳುವುದು), 7. ಅರಿ (ಅಕ್ಕಿ), 8. ಪುರ್ಸೊತ್ತು (ವಿರಾಮ), 9. ಕೆಯ್ (ಭತ್ತದ ಪೈರು), 10. ಮಾಮಿ (ಅತ್ತೆ).....ಇತ್ಯಾದಿ.

ಬ್ಯಾರಿಗಳು ಅಲ್ಪ ಪ್ರಮಾಣದಲ್ಲಿ ಶಿಕ್ಷಣದ ಸತ್ವವನ್ನು ಹೀರಿದರೂ ಕೂಡಾ ಹಲವಾರು ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಕಂಡು ಬರುತ್ತದೆ. ಅದರಲ್ಲೂ ಸಾಹಿತ್ಯ ಕ್ಷೇತ್ರಕ್ಕೆ ಬ್ಯಾರಿಗಳ ಪಾಲು ಸಾಕಷ್ಟು ಹಿರಿದು.

ಬ್ಯಾರಿ ಭಾಷೆಯಲ್ಲಿ ಗಂಡು ಮಕ್ಕಳು ತನ್ನ ಅಕ್ಕದ ಅಥವಾ ತಂಗಿಯನ್ನು ಇತರರಿಗೆ ಪರಿಚಯಿಸುವಾಗ ಪೆಂಜಳ್ ಎಂದೂ, ಹೆಣ್ಣು ತನ್ನ ಅಣ್ಣ ಅಥವಾ ತಮ್ಮನನ್ನು ಆಂಜಳೆ ಎಂದು ಗುರುತಿಸಿಕೊಡುತ್ತಾರೆ. ಅದೇ ರೀತಿ ಅಕ್ಕ ತಂಗಿಯಂದಿರುಗಳ ಗಂಡಂದಿರುಗಳು ತಮ್ಮನ್ನು ಇತರರಿಗೆ ಪರಿಚಯಿಸಿಕೊಡುವಾಗ ಸಾಮಾನ್ಯವಾಗಿ, 'ಸಾಡು' ಎಂಬ ಪದವನ್ನು ಬಳಸುವುದು ಕಂಡುಬರುತ್ತದೆ.

ವಾರದ ಏಳು ದಿನಗಳನ್ನು (ಜ್ಞಾರಸೆ), ತಿಂಙಳಾಸೆ (ಸೋಮವಾರ), ಚೊವ್ವಾಸೆ (ಮಂಗಳವಾರ), ಪೊದನಾಸೆ (ಬುಧವಾರ), ಬ್ಯಾಲಾಸೆ (ಗುರುವಾರ), ಬೆಲಿಯಾಸೆ (ಶುಕ್ರವಾರ), ಚೆನಿಯಾಸೆ (ಶನಿವಾರ) ಎಂದು ಗುರುತಿಸುತ್ತಾರೆ.

ಹೀಗೆ ಬ್ಯಾರಿಗಳು ಭಾಷೆಯಲ್ಲಿ ಮಾತ್ರವಲ್ಲ, ಜೀವನದಲ್ಲೂ ಒಂದು ವಿಶಿಷ್ಟ ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದರು. ಪ್ರಾಚೀನ ಬ್ಯಾರಿಗಳು ಇತರ ಎಲ್ಲಾ ಸ್ಥಳೀಯ ಜನಾಂಗಗಳಿಂದ ಗೌರವಕ್ಕೆ ಪಾತ್ರರಾಗಿದ್ದು, ಸಮಾಜದಲ್ಲಿ ವಿಶಿಷ್ಟ ಸ್ಥಾನವನ್ನು ಹೊಂದಿದ್ದರು.

ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾರಿ ಸಂಸ್ಕೃತಿ ಮತ್ತು ಭಾಷೆಯು ತನ್ನ ಸ್ಥಾನಮಾನದಲ್ಲಿ ಹಿನ್ನಡೆ ಕಾಣುತ್ತಿದೆ. ಆದರೂ ಪ್ರಸಕ್ತ ಬ್ಯಾರಿಗಳು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆ ಮುಂತಾದ ಕ್ಷೇತ್ರಗಳಲ್ಲಿ ಅವಿರತವಾಗಿ ದುಡಿಯುತ್ತಿದ್ದು, ಜಿಲ್ಲೆಯ ಬ್ಯಾರಿಗಳು ಪತ್ರಿಕೋದ್ಯಮಿಗಳಾಗಿ, ಕೈಗಾರಿಕೋದ್ಯಮಿಗಳಾಗಿ, ಮತ್ತೋದ್ಯಮಿಗಳಾಗಿ, ಪ್ರಾಧ್ಯಾಪಕರಾಗಿ, ಇಂಜಿನಿಯರುಗಳಾಗಿ, ವೈದ್ಯರುಗಳಾಗಿ, ಸಾಹಿತಿಗಳಾಗಿ, ಸರ್ಕಾರದ ಉನ್ನತ ಅಧಿಕಾರಿಗಳಾಗಿ, ರಾಜಕಾರಣಿಗಳಾಗಿ, ಕಲಾವಿದರುಗಳಾಗಿ ಮೆರೆಯುತ್ತಿರುವುದು ಕಾಣಬಹುದು.

**ಜೀವನ ಶೈಲಿ**

ಬ್ಯಾರಿ ಜನಾಂಗದವರ ಜೀವನ ಶೈಲಿಯಲ್ಲಿ ಮುಖ್ಯವಾಗಿ ಬ್ಯಾರಿ ಹೆಂಗಸರು ನಡೆಸುತ್ತಿದ್ದ ಸ್ವಾವಲಂಬಿ ಜೀವನವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ತೆಂಗಿನ ಸೋಗೆ ಕಟ್ಟಿಯೋ, ತೆಂಗಿನ ಕಾಯಿಯ ಸಿಪ್ಪೆ ಗುದ್ದಿ ಹಗ್ಗ ಮಾಡಿಯೋ, ಹಿಡಿಸೂಡಿ ಮಾಡಿಯೋ, ಬೀಡಿ ಕಟ್ಟಿಯೋ ಕಾಸು ಕೂಡಿಡುತ್ತಿದ್ದರು. ಇದು

ಬ್ಯಾರಿ ಹೆಂಗಸರ ಸಹಜ ಉದ್ಯೋಗವಾಗಿತ್ತು. ಜತೆಗೆ ತರಕಾರಿ ಬೆಳೆದು ಮಾರುವವರೂ, ಹಾಲು ಬೆಣ್ಣೆ ಮಾರಿ ಬದುಕುವವರೂ ಇದ್ದರು.

ಆದರೆ ಇವತ್ತು ಬ್ಯಾರಿ ಹೆಂಗಸರ ಆರ್ಥಿಕ ಚಟುವಟಿಕೆಗಳು ಬಹುತೇಕ ನಿಂತೇ ಹೋಗಿದೆ. ಬೀಡಿ ಉದ್ಯಮ ಎನ್ನುವಂತದ್ದು ನಾಶವಾಗಿ ಹೋಗುವ ಹಂತದಲ್ಲಿದೆ. ಗಲ್ಫ್ ರಾಷ್ಟ್ರದಿಂದ ಬರುವ ದುಡ್ಡಿಗಾಗಿ ಕಾಯುವ ಸ್ಥಿತಿ ಅವರದ್ದಾಗಿದೆ. ಆರ್ಥಿಕವಾಗಿ ಶೈಕ್ಷಣಿಕವಾಗಿ ಬಲವುಳ್ಳ ಬ್ಯಾರಿ ಕುಟುಂಬಗಳ ಹೆಣ್ಣು ಮಕ್ಕಳು ಕೆಲವರು ಉನ್ನತ ಶಿಕ್ಷಣ ಪಡೆಯುತ್ತಿದ್ದರೂ ಅವರ ಶೈಕ್ಷಣಿಕದ ಅರ್ಹತೆಗೆ ತಕ್ಕಂತೆ ಮದುವೆಗೆ ಗಂಡುಗಳು ಸಿಗದೆ ಹೊಸ ಸಾಂಸ್ಕೃತಿಕ ಬಿಕ್ಕಟ್ಟುಗಳು ಉದ್ಭವಿಸುತ್ತಿವೆ. ಹೆಣ್ಣುಮಕ್ಕಳ ಮದುವೆಗಾಗಿ ಕೇರಳದ ಕಡೆಗೆ ಓಡಾಡುವ ಬ್ಯಾರಿಗಳು ಹೆಚ್ಚಾಗಿದ್ದಾರೆ.

ಇನ್ನೊಂದೆಡೆ ಒಂದು ಇಡೀ ತಲೆಮಾರು ದೂರದ ಕೊಲ್ಲಿಯಲ್ಲಿ ಬದುಕು ಸವೆಸುತ್ತಾ ಇಲ್ಲಿ ಅವರ ಮಕ್ಕಳು ತಂದೆಯ ಪ್ರೀತಿ ವಾತ್ಸಲ್ಯದಿಂದ ದೂರವಾಗುವ ಪ್ರಕ್ರಿಯೆಯೂ ನಡೆದಿದೆ.

ಸಾಕಷ್ಟು ಬ್ಯಾರಿ ಕುಟುಂಬಗಳು ಹಿಂದೆ ಕೃಷಿ ಪ್ರಧಾನ ಕುಟುಂಬಗಳಾಗಿದ್ದವು. ತರಕಾರಿ ಬೆಳೆದು ಮಾರುವವರ ಸಂಖ್ಯೆಯೂ ಸಾಕಷ್ಟಿತ್ತು. ಕೊಟ್ಟಿಗೆ ತುಂಬಾ ದನಗಳು, ಎಮ್ಮೆಗಳು, ಕೋಣಗಳನ್ನು ಸಾಕುವುದು ಮಾಮೂಲಾಗಿತ್ತು. ಕೃಷಿ ಮಾಡದ ಬ್ಯಾರಿ ಕುಟುಂಬಗಳೂ ದನಗಳನ್ನು ಹಾಲಿಗಾಗಿ ಸಾಕುತ್ತಿದ್ದರು. ಹಾಲನ್ನು ಮಾರಿ ಅದರಿಂದ ಬಂದ ಹಣದಿಂದ ಜೀವನವನ್ನು ನಡೆಸುತ್ತಿದ್ದರು.

ದನಗಳನ್ನು ಸಾಕಿದಂತೆಯೇ ಕುರಿಗಳನ್ನು ಸಾಕುವುದೂ ಬ್ಯಾರಿ ಕುಟುಂಬಗಳಿಗೆ ಅತ್ಯಂತ ಪ್ರಿಯವಾದ ಕೆಲಸವಾಗಿತ್ತು. ಆದರೆ ಇತ್ತೀಚೆಗೆ ಬ್ಯಾರಿಗಳ ಈ ಸಾಂಸ್ಕೃತಿಕ ಅಂಶಗಳು ಮರೆಯಾಗುತ್ತಿವೆ. ಕೃಷಿ ಭೂಮಿಯಲ್ಲಿ ದುಡಿಯುವವರು ಇಲ್ಲವಾಗಿದ್ದಾರೆ. ಮೀಸೆ ಮೊಳೆಯುತ್ತಿದ್ದಂತೆಯೇ ಕೊಲ್ಲಿ ದೇಶಗಳ ಕಡೆಗೆ ಮುಖ ಮಾಡುವ ಬ್ಯಾರಿ ಯುವ ಜನಾಂಗದಿಂದಾಗಿ ಬಹುತೇಕ ಕುಟುಂಬಗಳು ಹೊಲಗದ್ದೆಗಳನ್ನು ಮಾರಾಟ ಮಾಡಿವೆ, ಮಾಡುತ್ತಿವೆ.

ಇದಲ್ಲದೆ ಬ್ಯಾರಿ ಕುಟುಂಬಗಳ ಸದಸ್ಯರು ತುಳುನಾಡಿನ ಮನೆ–ಮನೆಗಳಿಗೆ ಸೈಕಲ್ಲಿನಲ್ಲಿ ಮೀನು ಹೊತ್ತು ಮಾರುವ, ಒಂದು ಹಲಸಿನ ಕಾಯಿಯನ್ನು ಐವತ್ತಕ್ಕೂ ಹೆಚ್ಚು ಅಚ್ಚುಕಟ್ಟಾದ ಹೋಳುಮಾಡಿ ಪ್ರತಿ ತುಂಡನ್ನು ಚೌಕಾಸಿ ಮಾಡಿ ಮಾರಾಟ ಮಾಡುವಂತಹ, ಕೂಲಿಗಳಾಗಿ ಹೊರೆ ಹೊರುವಂತಹ, ದಿನಸಿ ಅಂಗಡಿಗಳಲ್ಲಿ ಸಾಮಗ್ರಿಗಳನ್ನು ಇಟ್ಟು ಮಾರಾಟ ಮಾಡುವಂತಹ

ಜೀವನವನ್ನು ನಡೆಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾರಿಗಳು ಉದ್ಯಮಿಗಳಾಗಿ, ಕೃಷಿಕರಾಗಿ ರಾಜಕೀಯ ನೇತಾರರಾಗಿ, ಸರಕಾರಿ ಅಧಿಕಾರಿಯಾಗಿ, ಪತ್ರಕರ್ತರಾಗಿ ಸಾಹಸ ಮೆರೆಯುತ್ತಿದ್ದಾರೆ.

**ಬ್ಯಾರಿ ಜನಜೀವನ**

ಬ್ಯಾರಿ ಸಮಾಜದಲ್ಲಿ ಕುಟುಂಬ ಪ್ರಮುಖ ಸ್ಥಾನ ಹೊಂದಿದೆ. ಬ್ಯಾರಿ ಕುಟುಂಬ ಹಲವು ಸ್ಥಳೀಯ ಅಂಶಗಳನ್ನು ಹಾಗೂ ಇಸ್ಲಾಮಿನ ಕಟ್ಟಳೆಗಳನ್ನು ಒಳಗೊಂಡ ಹೊಸ ಅರೆ ಜಮೀನ್ದಾರಿ ವ್ಯವಸ್ಥೆಯಾಗಿದೆ. ಇವರ ಹೊಸ ಕುಟುಂಬ ವ್ಯವಸ್ಥೆ ಹಲವು ವಿಷಯಗಳಲ್ಲಿ ಸ್ಥಳೀಯ ಹನಫಿ ಹಾಗೂ ಮಾಪಿಳ್ಳೆಯವರಿಗಿಂತ ಭಿನ್ನವಾಗಿದೆ. ಧಾರ್ಮಿಕ ಆಚರಣೆಗಳು ಸಮಾನವಾಗಿದ್ದರೂ, ಇವರ ಜೀವನ ಶೈಲಿ, ಸ್ಥಳೀಯ ಸಂಪ್ರದಾಯ ಮತ್ತು ಆಚರಣೆಗಳಿಂದ ಪ್ರಭಾವಿತಗೊಂಡು ಇತರರಿಗಿಂತ ಭಿನ್ನವಾಗಿದೆ. ಮೂಲತಃ ಸ್ಥಳೀಯ ತುಳುವರಾಗಿದ್ದ ಬ್ಯಾರಿಗಳು ಮತಾಂತರಗೊಂಡರೂ ಮೂಲ ಸಂಸ್ಕೃತಿಯ ಕುರುಹುಗಳು ಕೆಲಮಟ್ಟಿಗೆ ಇನ್ನೂ ಬಾಕಿ ಉಳಿದಿದೆ. ಆದರೆ 20ನೇ ಶತಮಾನದ ಮೊದಲ ಭಾಗದಲ್ಲಿ ನಡೆದ ಧಾರ್ಮಿಕ ಶಿಕ್ಷಣ ಮತ್ತು ಪರಿಣಾಮಕಾರಿ ಸುಧಾರಣೆಗಳು ಸಮಾಜದಲ್ಲಿ ನಿಧಾನ ವಾಗಿ ಬದಲಾವಣೆಗಳಿಗೆ ಹಾದಿ ಮಾಡಿತು. ಇದರ ಪರಿಣಾಮವಾಗಿ ಅವರು ಮಾಪಿಳ್ಳೆ ಮೌಲ್ವಿಗಳ ಮಾರ್ಗದರ್ಶನದ ಪ್ರಕಾರ ಮುಸ್ಲಿಮರಂತೆ ಬದುಕಲು ಆರಂಭಿಸಿದರು. ಈ ಎಲ್ಲಾ ಸುಧಾರಣೆಗಳ ಹೊರತಾಗಿಯೂ ಸ್ಥಳೀಯ ಸಂಪ್ರದಾಯಗಳು ಮುಂದುವರಿದವು.

**ವ್ಯಾಪಾರದ ಸರಕುಗಳು**

ಆರಂಭದ ಶತಮಾನದಲ್ಲಿ ಅಕ್ಕಿಯು ಪ್ರಮುಖ ವ್ಯಾಪಾರದ ಸರಕು ಆಗಿತ್ತು. ಅದನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಲಬಾರ್, ಮೂಲ್ಕಿ, ಮುಂಬೈ, ಕುಂಬಳೆ, ಮಂಜೇಶ್ವರ, ಮಂಗಳೂರು, ಹಂಗರಕಟ್ಟೆ ಮತ್ತು ಬಸ್ರೂರು ಪ್ರಮುಖ ಬಂದರುಗಳಾಗಿದ್ದವು. ಜಿಲ್ಲೆಯೊಳಗೆ ಭಾರಿ ಸಂಖ್ಯೆಯ ಜನರು ಅಕ್ಕಿಯ ವ್ಯಾಪಾರದಲ್ಲಿ ತೊಡಗಿದ್ದರು. ಪ್ರತಿಯೊಂದು ಜಿನಸು ಅಂಗಡಿಯಲ್ಲೂ ಅಕ್ಕಿಯ ವ್ಯಾಪಾರ ನಡೆಯುತ್ತಿತ್ತು.

ತೆಂಗು ಇನ್ನೊಂದು ವ್ಯಾಪಾರ ಸರಕಾಗಿತ್ತು. ಮಲಬಾರ್ ನಂತೆಯೇ ತುಳುನಾಡು ಜಿಲ್ಲೆಯಲ್ಲೂ ತುಂಬಾ ತೆಂಗಿನ ತೋಪುಗಳಿದ್ದವು. ತೆಂಗಿನ ಮರವು

ಮನೆ ನಿರ್ಮಾಣಕ್ಕೆ ಅಗತ್ಯವಿರುವ ಬೀಮ್ ಮತ್ತು ಪಕ್ಕಾಸಿಗೆ ಬಳಕೆಯಾಗುತ್ತದೆ. ಜತೆಗೆ ಮನೆಯ ಹೆಂಚಾಗಿ, ಉರುವಲಾಗಿ, ಖಾದ್ಯ ತೈಲವಾಗಿ, ಲೇಪನವಾಗಿ, ಪದಾರ್ಥ ಮತ್ತು ಸಿಹಿ ತಿನಿಸನಲ್ಲೂ, ಸೇಂದಿ ಮತ್ತು ಮದ್ಯದ ತಯಾರಿಕೆಗೂ ಇದು ಬಳಕೆಯಾಗುತ್ತದೆ.

ಕಬ್ಬು ಜಿಲ್ಲೆಯ ಇನ್ನೊಂದು ಸಾಮಾನ್ಯ ಬೆಳೆಯಾಗಿತ್ತು. ಅದನ್ನು ಹೆಚ್ಚಾಗಿ ಬೆಲ್ಲದ ಉತ್ಪಾದನೆಗಾಗಿ ಬೆಳೆಯಲಾಗುತ್ತಿತ್ತು. ಬೆಲ್ಲ ಅಂದು ಚಹಾ, ಕಾಫಿಗಳಿಗೆ ಬಳಸಲಾಗುತ್ತಿತ್ತು. ಇದಲ್ಲದೆ ತರಕಾರಿಗಳು, ಧಾನ್ಯ,ಬೇಳೆ ಮತ್ತಿತರ ಸ್ಥಳೀಯ ಉತ್ಪನ್ನಗಳೂ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿದ್ದವು. ಮೂಡಬಿದ್ರೆ ಪುತ್ತೂರು, ಕಾರ್ಕಳ, ಉಡುಪಿ, ಕುಂದಾಪುರಗಳಲ್ಲಿ ವಾರದ ಸಂತೆ ನಡೆಯುತ್ತಿತ್ತು. ಬ್ಯಾರಿಗಳು ಈ ಸಂತೆಗಳಲ್ಲಿ ಭಾಗವಹಿಸುತ್ತಿದ್ದರು. ಸಾಮಾನ್ಯವಾಗಿ ಈ ಸಂತೆಗಳಲ್ಲಿ ತೆಂಗಿನಕಾಯಿ, ಮೆಣಸು, ಅಕ್ಕಿ ಮತ್ತು ತರಕಾರಿ ಮಾರಾಟವಾಗುತ್ತಿತ್ತು.

**ಕೈಗಾರಿಕೆಗಳು ಮತ್ತು ವೃತ್ತಿಗಳು**

ಮುಸ್ಲಿಮರು ಒಳ್ಳೆಯ ಉದ್ಯಮಿಗಳಾಗಿರುವಂತೆಯೇ ಬುದ್ದಿವಂತ ವ್ಯಾಪಾರಿಗಳು ಹೌದು. ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಅವರು ದಿನಸಿ ಅಂಗಡಿಗಳನ್ನು ತೆರೆದರು. ಇದು ಬ್ಯಾರಿಗಳ ಪ್ರಮುಖ ವ್ಯಾಪಾರವಾಗಿತ್ತು. ಅಕ್ಕಿ ಬೇಳೆ ಮತ್ತು ಬೆಲ್ಲ ಈ ಅಂಗಡಿಗಳಲ್ಲಿ ಮಾರಾಟವಾಗುತ್ತಿತ್ತು. ಹಳ್ಳಿಗಳಲ್ಲಿದ್ದ ಜಮೀನ್ದಾರರೂ ಕೂಡಾ ಬಿಡುವಿನ ಸಮಯದಲ್ಲಿ ಈ ವ್ಯಾಪಾರವನ್ನು ಆರಂಭಿಸಿದರು.

ಬಟ್ಟೆ ವ್ಯಾಪಾರ 19ನೇ ಶತಮಾನದಲ್ಲಿ ನವಾಯತರು ಮತ್ತು ಮೇಮನ್‌ಗಳ ಏಕಸ್ವಾಮ್ಯದಲ್ಲಿತ್ತು. ಮಂಗಳೂರಿನಲ್ಲಿ ಅವರೇ ಮುಖ್ಯ ಬಟ್ಟೆ ವ್ಯಾಪಾರಿಗಳು ದಾದಾ ಹಾಜಿ ಇವರಲ್ಲಿ ಪ್ರಖ್ಯಾತರು.

ಹೊಟೇಲುಗಳು ಮುಸ್ಲಿಮರು ನಡೆಸುತ್ತಿದ್ದ ಮತ್ತೊಂದು ಮುಖ್ಯ ಉದ್ಯಮ. ಪಟ್ಟಣ ಮತ್ತು ಗಾಮೀಣ ಭಾಗಗಳೆರಡರಲ್ಲೂ ಮುಸ್ಲಿಮರು ನಡೆಸುವ ಹೊಟೇಲುಗಳು ವ್ಯಾಪಕವಾಗಿದೆ.

1930ರಲ್ಲಿ ಬೀಡಿ ಉದ್ಯಮದ ವ್ಯಾಪಕವಾಯಿತು. ಬೀಡಿಗೆ ಬಂದ ಬೇಡಿಕೆಯಿಂದಾಗಿ ಈ ಉದ್ಯಮ ಬಹವೇಗವಾಗಿ ಅಭಿವೃದ್ಧಿ ಹೊಂದಿತು. ಬೀಡಿ ಉದ್ಯಮದಲ್ಲಿ ಕಾರ್ಮಿಕರಾಗಿ ದುಡಿಯುವುದು ಮುಸ್ಲಿಮರಿಗೆ ಅನಿವಾರ್ಯ ವಾಯಿತು. ಇದಕ್ಕೆ ಹಲವು ಕಾರಣಗಳಾಗಿವೆ.

1. ಸಂಪ್ರದಾಯ ಬದ್ದತೆ ಮುಸ್ಲಿಂ ಮಹಿಳೆಯರನ್ನು ಮನೆಗೆ ಸೀಮಿತವಾಗಿ ಉಳಿಸಿತ್ತು. ಅವರಿಗೆ ಹೊಲ–ಗದ್ದೆಗಳಲ್ಲಿ ದುಡಿಯುವ ಅವಕಾಶವಿರಲಿಲ್ಲ. ಮಾತ್ರವಲ್ಲ ಅವರು ಹೊರಗೆ ಹೋಗಿ ಯಾವುದೆ ದುಡಿಮೆಯಲ್ಲಿ ತೊಡಗಿಕೊಳ್ಳಲು ಸಾಧ್ಯವಿರಲಿಲ್ಲ. ಇಂತಹ ಕುಟುಂಬಗಳಲ್ಲಿ ತಂದೆಯೊಬ್ಬ ಯಜಮಾನ ಮಾತ್ರ ದುಡಿಯುವ ಸದಸ್ಯ. ಇದು ಕುಟುಂಬಗಳನ್ನು ತೀವ್ರ ಬಡತನಕ್ಕೆ ದೂಡಿತ್ತು. ಇಂಥ ಕುಟುಂಬಗಳ ಮಹಿಳೆಯರಿಗೆ ಬೀಡಿ ಸುತ್ತುವ ಕೆಲಸ ಒಂದು ವರದಾನ ವಾಯಿತು. ಮನೆಯಲ್ಲೇ ಇದ್ದುಕೊಂಡು ಸಂಪಾದಿಸುವ ಅವಕಾಶ ದೊರೆಯಿತು.

2. ಮುಸ್ಲಿಂ ಕುಟುಂಬಗಳು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಆಧುನಿಕ ಶಾಲಾ ಶಿಕ್ಷಣಕ್ಕೆ ಒಂದು ರೀತಿಯಲ್ಲಿ ಧಾರ್ಮಿಕ ಸಂಪ್ರದಾಯ ಶರಣತೆಯೂ ಅಡ್ಡಿಯಾಗಿತ್ತು. ಪರಿಣಾಮವಾಗಿ ಬಾಲಕ ಬಾಲಕಿಯರೂ ಬೀಡಿಕಾರ್ಮಿಕರಾದರು.

3. ಮೂರನೆಯದಾಗಿ ಬೀಡಿ ಉದ್ಯಮವೆಂಬುದು ಒಂದು ಗುಡಿ ಕೈಗಾರಿಕೆ ಯಾದ್ದರಿಂದ ಒಳ್ಳೆಯ ಸ್ಥಿತಿಯಲ್ಲಿದ್ದು ಬಡನದ ದವಡೆಗೆ ದೂಡಲ್ಪಟ್ಟ ಅನೇಕ ಮುಸ್ಲಿಂ ಕುಟುಂಬಗಳೂ ಈ ವೃತ್ತಿಯನ್ನು ತಮ್ಮ ಜೀವನಾಧಾರವಾಗಿ ಸ್ವೀಕರಿಸಿದವು.

19ನೇ ಮತ್ತು 20ನೇ ಶತಮಾನದಲ್ಲಿ ಅಡ್ಯಾರ್– ಕಣ್ಣೂರು ಗುರುಪುರ ನದಿ ದಂಡೆಗಳಲ್ಲಿ ಇಟ್ಟಿಗೆ ತಯಾರಿಕಾ ಉದ್ದಿಮೆಯಲ್ಲಿ ತೊಡಗಿಸಿಕೊಂಡಿದ್ದ ಅನೇಕ ಬ್ಯಾರಿಗಳಿದ್ದರು. 20ನೇ ಶತಮಾನದಲ್ಲಿ ಮರದ ನಾಟಾದ ವ್ಯಾಪಾರ ಬ್ಯಾರಿಗಳನ್ನು ಆಕರ್ಷಿಸಿತು. ಕೆಲವು ನಾಟಾ ವ್ಯಾಪಾರಿಗಳು ದೊಡ್ಡ ಉದ್ಯಮಿಗಳಾಗಿ ಬೆಳೆದರು. ನಾಟಾದ ವ್ಯಾಪಾರ ಅಥವಾ ಹಂಚು ತಯಾರಿಕೆಯ ಜೊತೆಗೆ ಮುಸ್ಲಿಮರಿಗೆ ಯಾವುದೇ ಪಾರಂಪರಿಕ ಸಂಬಂಧಗಳಿರಲಿಲ್ಲ.

ಈ ಪ್ರದೇಶದಲ್ಲಿ ಮುಸ್ಲಿಮರ ಜನಸಂಖ್ಯೆಯಲ್ಲಿ ಕಂಡುಬಂದ ಹೆಚ್ಚಳ ಅವರ ಆರ್ಥಿಕ ಬದುಕಿನಲ್ಲಿ ಬಹು ಮುಖ್ಯ ಪಲ್ಲಟಕ್ಕೆ ಕಾರಣವಾಯಿತು. ಗಮನಾರ್ಹ ಸಂಖ್ಯೆಯ ಮುಸ್ಲಿಮರು ಹೊರಗೆ ಹೋಗಿ ಉದ್ಯೋಗ ಮತ್ತು ವ್ಯಾಪಾರಗಳನ್ನು ಹುಡುಕಿಕೊಳ್ಳಲು ಆರಂಭಿಸಿದರು. 19ನೇ ಶತಮಾನದಲ್ಲಿ ಮುಸ್ಲಿಂ ಯುವಕರು ಉದ್ಯೋಗ ಅರಸಿ ಮುಂಬೈಗೆ ಪ್ರಯಾಣ ಬೆಳೆಸಲಾರಂಭಿಸಿದರು.

### ಸ್ವಾತಂತ್ರ್ಯ ಹೋರಾಟದಲ್ಲಿ ಬ್ಯಾರಿಗಳು

ಮೈಸೂರಿನ ನವಾಬ ಹೈದರಾಲಿಯ ಯಶಸ್ಸು ಮತ್ತು ತುಳುನಾಡಿಗೆ ಆತನ ಪ್ರವೇಶವು ಮುಸ್ಲಿಮರಲ್ಲಿ ಹೊಸ ಹುಮ್ಮಸ್ಸು ಮೂಡಿಸಿತು. ಅದು ಕರಾವಳಿ ಜಿಲ್ಲೆಯಲ್ಲಿ ಮುಸ್ಲಿಮ್ ಆಡಳಿತದ ಮೊದಲ ಅನುಭವವಾಗಿತ್ತು.

ಬಿದನೂರ್ ಸಾಮ್ರಾಜ್ಯದ ಕಲ್ಪನೆಯೊಂದಿಗೆ ತುಳುನಾಡು ಜಿಲ್ಲೆಯು ಔಪಚಾರಿಕವಾಗಿ ಸುಲ್ತಾನರ ಕೈವಶವಾಯಿತು. ದಿಗ್ವಿಜಯದ ಬೆನ್ನಲ್ಲೇ ಸುಲ್ತಾನನು ಹೊಸಂಗಡಿಯ ಮೂಲಕ ಜಿಲ್ಲೆಯನ್ನು ಪ್ರವೇಶಿಸಿದರು ಮತ್ತು ರಾಜ್ಯಪಾಲನನ್ನು ನೇಮಕ ಮಾಡಲು ಬಾರ್ಕೂರಿಗೆ ತೆರಳಿದನು. ನಂತರ ಕಾರ್ಕಳಕ್ಕೆ ತೆರಳಿ ಅಲ್ಲಿ ಹಲವಾರು ಮುಖ್ಯಸ್ಥರು ಅವನನ್ನು ಭೇಟಿಯಾಗಿ ನಿಷ್ಠೆ ಪ್ರದರ್ಶಿಸಿದರು. ಚಂದ್ರಶೇಖರ ಚಿಕ್ಕರಾಜ ಚೌಟ ಸೇರಿದಂತೆ ಹಲವಾರು ಮುಖ್ಯಸ್ಥರು ಉಪಸ್ಥಿತರಿದ್ದರು. ಹೈದರಾಲಿಗೆ ಕಾರ್ಕಳದಲ್ಲಿ ಆತ್ಮೀಯ ಸ್ವಾಗತವನ್ನು ನೀಡಲಾಯಿತು. ಇಕ್ಕೇರಿ ಸಾಮ್ರಾಜ್ಯದ ಪತನವು ಒಂದು ಕರಾಳ ದೌರ್ಜನ್ಯಕಾರಿ ಯುಗದ ಕೊನೆಯಾಗಿತ್ತು ಮತ್ತು ಇದರಿಂದಾಗಿ ಜೈನ ಪಾಳೇಗಾರರು ಈ ಬೆಳವಣಿಗೆಯಿಂದ ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಇಕ್ಕೇರಿ ಆಡಳಿತ ಕಾಲದಲ್ಲಿ ಜೈನರು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡರು. ಅವರ ಜನಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಯಿತು. ಹೆಗ್ಗಡೆ ಮತ್ತು ಬಲ್ಲಾಳರು ತಮ್ಮ ಅಸ್ಥಿತ್ವವನ್ನೇ ಕಳೆದುಕೊಂಡರು. ಅವರ ವ್ಯಾಪಾರದ ಮೇಲೆ ಇದು ಪರಿಣಾಮ ಬೀರಿತು. ಇದು ಮುಸ್ಲಿಮರು ಆಡಳಿತಗಾರರ ಕಾಲದಲ್ಲಿ ಎದುರಿಸಿದ ಮರ್ದನವನ್ನು ನೆನಪಿಸುವಂತಿತ್ತು. ಹೀಗಾಗಿ ಎರಡೂ ಸಮುದಾಯಗಳಿಗೆ ಅದೊಂದು ಅತ್ಯಂತ ಸಂತೋಷಕಾರಿ ಘಟನೆಯಾಗಿತ್ತು ಮತ್ತು ಅವರು ಹೊಸ ಆಡಳಿತಗಾರನಿಗೆ ಭವ್ಯ ಸ್ವಾಗತವನ್ನು ಕೋರಿದರು. ಈ ಸ್ವಾಗತವು ಸುಲ್ತಾನನಿಗೆ ನೀಡಿದ ಹಸಿರು ನಿಶಾನೆಯಾಗಿತ್ತು. ಆತನನ್ನು ಮೂಡಬಿದ್ರೆಗೆ ಆಮಂತ್ರಿಸಲಾಯಿತು. ಆತ ಕೋಟೆಯನ್ನು ವಶಪಡಿಸಿಕೊಂಡನು ಮತ್ತು ಅಲ್ಲಿನ ಕಾವಲುಗಾರನೊಂದಿಗೆ ಒಂದು ರಕ್ಷಣಾ ಪಡೆಯನ್ನು ಬಿಟ್ಟು ಹೋದನು. ಚೌಟರ ಅರಸನು ಪೊನ್ನಚ್ಚೇರಿ ಮಠದಲ್ಲಿ ಸುಲ್ತಾನನಿಗೆ ಭವ್ಯ ಸ್ವಾಗತವನ್ನು ಏರ್ಪಡಿಸಿದನು. ಅಲ್ಲಿ ಹಲವು ಮುಖ್ಯಸ್ಥರು ಅವನನ್ನು ಸೇರಿಕೊಂಡರು. ಚೌಟ ಅರಸನು 14,000 ವರಾಹಗಳನ್ನು ಕೊಡುಗೆಯಾಗಿ ನೀಡಲು ಒಪ್ಪಿಕೊಂಡನಲು. ಸುಲ್ತಾನನ ಕಡೆಗೆ ಸೇರಿದ್ದ ಸ್ಥಳೀಯ ರಾಜತಾಂತ್ರಿಕ ಬಜ್ಪೆ ಕೃಷ್ಣ ಎಂಬವರು  ಸಂಧಾನಕಾರರ ಪಾತ್ರ ವಹಿಸಿದರು. ಜಿಲ್ಲೆಯ ಎಲ್ಲಾ ಪಟ್ಟಣಗಳಿಗೆ ಸಂದರ್ಶನ ನೀಡುವಾಗ ಆತ ಸುಲ್ತಾನನ ಜತೆಗಿದ್ದರು. ಸಕಲ ಜೈನ ಸಂಪ್ರದಾಯ ಮತ್ತು ಆಚರಣೆಗಳೊಂದಿಗೆ ಅವರನ್ನು ಭವ್ಯವಾಗಿ ಬರ ಮಾಡಿಕೊಳ್ಳಲಾಯಿತು. ನಿಜವಾಗಿ ಇಕ್ಕೇರಿಯ ಪತನವು ಈ ಜಿಲ್ಲೆಯ ಜೈನರಿಗೆ ಪಕ್ಕಾ ಸಂಭ್ರಮದ ವಿಷಯವಾಗಿತ್ತು. ನಂತರ ಆತನು ಮಂಗಳೂರಿಗೆ ತೆರಳಿದನು. ದಾರಿ ಮಧ್ಯೆ ಗುರುಕಂಬಳದಲ್ಲಿ ಮಣೇಲ್, ಗುರುಪುರ ಮತ್ತು

ಬಜ್ಪೆಯ ಮುಖ್ಯಸ್ಥರು ಮತ್ತು ಖ್ಯಾತ ಮುಸ್ಲಿಮರು ಆತನನ್ನು ಬರಮಾಡಿಕೊಂಡರು. ಕಣ್ಣೂರಿನ ಅಲಿರಾಜ ಮತ್ತು ಆತನ ಸೋದರ ಶೇಖ್ ಅಲಿ, ಬಂಗ ಮುಖಂಡರು ಹಾಗೂ ತಿಮ್ಮಣ್ಣ ಅಜಿಲ ಉಪಸ್ಥಿತರಿದ್ದರು. ವರ್ತಕರೂ ಸೇರಿದಂತೆ ಗಣ್ಯ ಮುಸ್ಲಿಮ್ ಮುಖಂಡರು ಸುಲ್ತಾನನಿಗೆ ಸತ್ಕಾರ ಏರ್ಪಡಿಸುವಲ್ಲಿ ಉತ್ಸುಕರಾಗಿದ್ದರು. ಬಂದರ್‌ನಲ್ಲಿರುವ ಮುಖ್ಯ ಮಸೀದಿ ಆತನ ಆಗಮನವನ್ನು ಸಂಭ್ರಮದಿಂದ ಆಚರಿಸಿತು ಮತ್ತು ಈಗ ಈದ್ಗಾ ಇರುವ ಜಾಗದಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಲಾಯಿತು. ಅದೊಂದು ತೆರೆದ ಗಿರಿಶಿಖರವಾಗಿತ್ತು. ಟಿಪ್ಪು ಸುಲ್ತಾನನು ಆಲಿ ರಾಜನನ್ನು ಕರಾವಳಿ ಜಿಲ್ಲೆಯ ರಾಜನ ಪ್ರತಿನಿಧಿಯಾಗಿ ನೇಮಿಸಿದನು. ಆತನ ಸಹೋದರ ಶೇಖ್ ಅಲಿಯನ್ನು ಗವರ್ನರ್ ಆಗಿ ನೇಮಕ ಮಾಡಲಾಯಿತು. ಶೇಖ್ ಆಲಿ ಸುಲ್ತಾನನ ಮೊಟ್ಟಮೊದಲ ಅಡ್ಮಿರಲ್ ಆಗಿದ್ದನು ಮತ್ತು ದಾಮಾಜಿ ಪಂತ್ ಸ್ಥಳೀಯ ಆಡಳಿತಗಾರನಾಗಿದ್ದನು. ಶೇಖ್ ಆಲಿ ಮಾಲ್ದೀವ್ಸ್‌ಗೆ ದಂಡಯಾತ್ರೆ ಹೊರಟನು ಮತ್ತು ಅಲಿ ಮಾಲ್ದೀವ್ಸ್‌ನ ದೊರೆಯನ್ನು ಸೆರೆ ಹಿಡಿದನು. ಈ ಯಶಸ್ವಿ ದಂಡಯಾತ್ರೆಯ ಬಗ್ಗೆ ಆತನು ಸುಲ್ತಾನನಿಗೆ ಮಾಹಿತಿ ನೀಡಿದನು. ಆದರೆ ಆಲಿಯು ದೊರೆಗೆ ನೀಡಿದ ಕಿರುಕುಳದಿಂದ ಅಸಮಧಾನಗೊಂಡ ಸುಲ್ತಾನನು ಆತನನ್ನು ಸೇನೆಯ ಜವಾಬ್ದಾರಿಯಿಂದ ಮುಕ್ತಗೊಳಿಸಿದನು.

ಲತೀಫ್ ಆಲಿ ಬೇಗ್‌ನನ್ನು ಆಡ್ಮಿರಲ್ ಆಗಿ ನೇಮಕ ಮಾಡಲಾಯಿತು. ಆದರೆ ಆಲಿ ಮತ್ತು ಆತನ ಸೋದರರು ಸುಲ್ತಾನನಿಗೆ ನಿಷ್ಠರಾಗಿಯೇ ಇದ್ದರು.

ತಲಚೇರಿಯಲ್ಲಿದ್ದ ಬ್ರಿಟಿಷ್ ಕಾರ್ಖಾನೆಯು ಮಂಗಳೂರಿನ ಭತ್ತದ ಪೂರೈಕೆಯನ್ನು ಅವಲಂಬಿಸಿತ್ತು. ಕ್ಷಿಪ್ರ ರಾಜಕೀಯ ಬದಲಾವಣೆಯು ಮಲಬಾರ್‌ನಲ್ಲಿ ಬ್ರಿಟಿಷರಿಗೆ ದೊಡ್ಡ ಹೊಡೆತವಾಗಿತ್ತು. ಅವರು ಭತ್ತದ ಪೂರೈಕೆಗಾಗಿ ಮಂಗಳೂರಿನಲ್ಲಿ ಬಿದನೂರಿನ ರಾಜ್ಯಪಾಲನಾಗಿದ್ದ ಸೂರಪ್ಪಯ್ಯನೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಹೊಸ ಆಡಳಿತದ ಉದಯವು ಈ ವ್ಯಾಪಾರಕ್ಕೆ ತಡೆಯೊಡ್ಡಿತು. ಬ್ರಿಟಿಷರು ಸುಲ್ತಾನನನ್ನು ಭೇಟಿಯಾಗಿ ಹೊಸ ಆಡಳಿತದೊಂದಿಗೆ ಒಪ್ಪಂದ ಕುದುರಿಸಲು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದರು. ಆದರೆ ಫರ್ಮಾನ್‌ನ ರೂಪದಲ್ಲಿ ಒಡಂಬಡಿಕೆಗೆ ಅಂಗೀಕಾರ ನೀಡಲಾಯಿತು. ಅದರ ಪ್ರಕಾರ ಮಂಗಳೂರಿನಿಂದ ತಲಚ್ಚೇರಿಗೆ ಭತ್ತ ರಫ್ತು ಮಾಡಲು ಕಂಪನಿಗೆ ಅವಕಾಶ ನೀಡಲಾಯಿತು. ಇದಕ್ಕೆ ಪ್ರತಿಯಾಗಿ ಎರಡೂ ಪಕ್ಷಗಳು ಪರಸ್ಪರರ ವೈರಿಗಳಿಗೆ ಸಹಾಯ ಮಾಡಬಾರದೆಂಬ ನಿಬಂಧನೆ ಹೇರಲಾಯಿತು. ತಮ್ಮನ್ನು ಮಂಗಳೂರಿ

ನಲ್ಲಿ ಭೇಟಿಯಾಗುವಂತೆ ಹೈದರಾಲಿ ಮುಖ್ಯಸ್ಥರಿಗೆ ಸೂಚನೆ ಕಳುಹಿಸಿದ. ಕಡಬ, ಕುಂಬಳೆ ಮತ್ತು ವಿಟ್ಲದ ದೊರೆಗಳು ಹೊಸ ಆಡಳಿತಕ್ಕೆ ಶರಣಾಗಳು ಹಿಂಜರಿದರು. ಹೈದರಾಲಿಯು ಅವರನ್ನು ಬಲಪ್ರಯೋಗಿಸಿ ಶರಣಾಗುವಂತೆ ಮಾಡಿದನು. ಕುಂದಾಪುರವು ಒಂದು ಬಂದರಾಗಿದ್ದುದರಿಂದ ಅದನ್ನು ಒಂದು ಹೊಸ ವ್ಯವಸ್ಥೆಗೊಳಪಡಿಸಿದನು. ಮತ್ತು ಆ ಬಂದರಿನ ಸುತ್ತ ಕಾವಲು ಸೇನೆಯನ್ನು ನಿಯೋಜಿಸಿದನು. ಶೇಖ್ ಆಯಾಝ್‌ನನ್ನು ಬಿದನೂರಿಗೆ ಕೋಟೆಯ ಕಾವಲುಗಾರ ನಾಗಿ ಕಳುಹಿಸಲಾಯಿತು. ಕ್ರಿ.ಶ. 1766ರೊಳಗೆ ಹೈದರಾಲಿ ನೀಲೇಶ್ವರದವರೆಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು ಮತ್ತು ಮಲಬಾರ್‌ನ ಔಮೋರಿನ್ ಅರಸನನ್ನು ಸೋಲಿಸಿದನು. ನಂತರ ಅವನು ಕೊಯಂಬತ್ತೂರಿನ ಕಡೆಗೆ ತೆರಳಿದನು ಮತ್ತು ಕ್ರಿ. ಶ. 1768ರಲ್ಲಿ ರಾಜಧಾನಿಗೆ ಹಿಂದಿರುಗಿದನು.

ಹೊಸ ಆಡಳಿತದ ಉದಯವು ಮುಸ್ಲಿಮರ ಮಟ್ಟಿಗೆ ಅತ್ಯಂತ ಪ್ರೋತ್ಸಾಹಕರ ಅಂಶವಾಗಿತ್ತು. ಮುಸ್ಲಿಮ ವರ್ತಕರು ವಾಣಿಜ್ಯ ರಂಗದಲ್ಲಿ ತಮಗಾದ ಅಘಾತದಿಂದ ಚೇತರಿಸಿಕೊಂಡರು ಮತ್ತು ಹೊಸತಾಗಿ ನೆಲೆ ಕಂಡುಕೊಳ್ಳತೊಡಗಿದರು. ಸುಲ್ತಾನನು ಧರ್ಮಭಕ್ತನಾಗಿದ್ದುದರಿಂದ ಮುಸ್ಲಿಮರಲ್ಲಿ ಧಾರ್ಮಿಕ ಜಾಗ್ರತಿಯನ್ನೂ ಮೂಡಿಸಿದನು. ಮಂಗಳೂರಿನಲ್ಲಿ ಒಂದು ಹೊಸ ಸೇನಾ ವ್ಯವಸ್ಥೆಯನ್ನು ಸ್ಥಾಪಿಸಲು ರಾಜ್ಯಪಾಲ ಶೇಖ್ ಅಲಿ ನಿಧಿ ಸಂಗ್ರಹಿಸಲು ಪ್ರಯತ್ನಿಸಿದ್ದನು. ಆತನು ಒರಟಾದ ಕ್ರಮಗಳ ಮೂಲಕ ಸ್ಥಳೀಯ ಮುಖ್ಯಸ್ಥರನ್ನು ಕೊಳ್ಳೆಹೊಡೆದನು. ಇದರಿಂದ ಅವಮಾನಿತರಾದ ಜೈನ ಮುಖ್ಯಸ್ಥರು ಶೇಖ್ ಅಲಿಯ ದೌರ್ಜನ್ಯದ ವಿರುದ್ಧ ದೂರು ನೀಡಲು ಆರಂಭಿಸಿದರು. ಕ್ರಿ. ಶ. 1766ರಲ್ಲಿ ಹೈದರಾಲಿ ಭೇಟಿ ನೀಡಿದಾಗ ಆತನನ್ನು ಮೂಡಬಿದ್ರೆಯಲ್ಲಿ ಭೇಟಿಯಾದ ಮುಖ್ಯಸ್ಥರು ಫಿರ್ಯಾದಿ ಸಲ್ಲಿಸಿದರು. ಸುಲ್ತಾನನು ಅವರಿಗೆ ಇನಾಮುಗಳನ್ನು ನೀಡುವ ಮೂಲಕ ಸಮಾಧಾನ ಪಡಿಸಿದನು ಹಲವರು ವಾರ್ಷಿಕ ಪಿಂಚಣಿಗೆ (ತಸ್ಥೀಕ್) ಪ್ರತಿಯಾಗಿ ತಮ್ಮ ಸೊತ್ತುಗಳನ್ನು ಒಪ್ಪಿಸಿದರು.

ಈ ಹೊತ್ತಿಗಾಗಲೇ ಮುಂಬೈಯಿಂದ ಬ್ರಿಟಿಷ್ ಕಂಪನಿ ಗವರ್ನರ್ ಕರಾವಳಿಯ ಭಾಗಗಳನ್ನು ಮರು ವಶಪಡಿಸಿಕೊಳ್ಳಲಿಕ್ಕಾಗಿ ಹೊರಟನು ಮತ್ತು ಬ್ರಿಟಿಷ್ ಹಡಗುಗಳ ಗುಂಪು ಕ್ರಿ.ಶ. 1768ರಲ್ಲಿ ಮಂಗಳೂರಿಗೆ ಆಗಮಿಸಿತು. ಬ್ರಿಟಿಷರು ಮಂಗಳೂರನ್ನು ವಶಪಡಿಸಿಕೊಂಡರು. ಹೈದರಾಲಿಯು 3000 ಯೋಧರು ಮತ್ತು 12,000 ಅಶ್ವಯೋದರೊಂದಿಗೆ ಟಿಪ್ಪು ಸುಲ್ತಾನನನ್ನು ಕಳುಹಿಸಿದನು. ತಾನೇ ಇನ್ನೊಂದು ದೊಡ್ಡ ಪಡೆಯೊಂದಿಗೆ ಹೈದರಾಲಿಯೂ

ಹೊರಟನು. ಈ ಕದನದಲ್ಲಿ ಆಂಗ್ಲರಿಗೆ ಸೋಲಾಯಿತು. ಆತನು ಸೈನ್ಯವನ್ನು ಪುನಶ್ಚೇತನಗೊಳಿಸಲು ಮತ್ತು ನೌಕಪಡೆಯನ್ನು ಬಲಪಡಿಸಲು ಸಕ್ರಿಯ ಕ್ರಮ ಕೈಗೊಂಡನು. ಹೈದರ್ ಕೊನೆಗೂ ಬ್ರಿಟಿಷರನ್ನು ಹೊರದಬ್ಬುವಲ್ಲಿ ಯಶಸ್ವಿಯಾದನು. ಕ್ರಿ. ಶ 1780ರಲ್ಲಿ ಹೈದರಾಲಿಯು ಹೊಸತಾಗಿ ನಿರ್ಮಿಸಲಾದ ನೌಕಾಪಡೆಯನ್ನು ಸರ್ ಎಡ್‌ವರ್ಡ್ ಹೂಗರ್ ಮಂಗಳೂರಿನಲ್ಲಿ ಧ್ವಂಸಗೊಳಿಸದನು. ಇದರ ಬೆನ್ನಲ್ಲೇ ಜನರಲ್ ಮ್ಯಾಥ್ಯೂಸ್ ಮುಂಬೈಯಿಂದ ಕುಂದಾಪುರಕ್ಕೆ ಆಗಮಿಸಿದನು. ಸುಲ್ತಾನನ ಸೇನೆಯು ಈ ಅತಿಕ್ರಮವನ್ನು ಹಿಮ್ಮೆಟ್ಟಿಸಲಾಗದೇ ಹೋಯಿತು. ಅವರು ಕುಂದಾಪುರವನ್ನು ವಶಪಡಿಕೊಂಡು ಹೊಸಂಗಡಿ ಮಾರ್ಗವಾಗಿ ಬಿದನೂರ್ ತಲುಪಿದರು. ಹೈದರನ ನೆಚ್ಚಿನ ಖಿಲೇದಾರ ಶೇಖ್ ಅಯಾಜ್ ಬ್ರಿಟಿಷರಿಗೆ ಕೋಟೆಯನ್ನು ಒಪ್ಪಿಸಿದನು. ಹೈದರ್‌ಘಡ್ (ಹೊಸ ಹೆಸರು) ಬ್ರಿಟಿಷರ ಪಾಲಾಯಿತು. ಭಾರಿ ಪ್ರಮಾಣದ ಸೇನೆಯೊಂದಿಗೆ ಟಿಪ್ಪು ಕೋಟೆಯೆಡೆಗೆ ತೆರಳಿದನು ಮತ್ತು ತನ್ನ ಶೌರ್ಯದ ಪ್ರಯತ್ನದಿಂದಾಗಿ ಕೋಟೆಯನ್ನು ಮತ್ತೆ ವಶಪಡಿಸಿಕೊಂಡನು ಬ್ರಿಟಿಷರಿಗೆ ಸೋಲಾಯಿತು.

ಕರ್ನಲ್ ಕ್ಯಾಂಬೆಲ್ 700 ಯುರೊಪಿಯನ್ನರು ಮತ್ತು 2000 ಸಿಪಾಯಿಗಳ ನೆರವಿನಿಂದ ಮಂಗಳೂರನ್ನು ವಶಪಡಿಸಿಕೊಂಡನು. ಹೈದರ್‌ನ ಮುಂಚೂಣಿ ಪಡೆ ಹಾಗೂ ಕಾವಲು ಸೈನ್ಯ ಆತ್ಮ ರಕ್ಷಣೆಯಲ್ಲಿ ಸೋತಿತು. ಬ್ರಿಟಿಷರು ಪಾಣೆ ಮಂಗಳೂರು ಮತ್ತು ಮೊಡಂಕಾಪುವನ್ನು ವಶಪಡಿಸಿಕೊಂಡರು. ಆ ಸಂದರ್ಭದಲ್ಲಿ ಟಿಪ್ಪು ಮಂಗಳೂರಿಗೆ ನುಗ್ಗಿದನು. ಬ್ರಿಟಿಷರು ಮಂಗಳೂರನ್ನು ಉಳಿಸಿಕೊಳ್ಳಲಾರ ದಾದರು ಹಾಗೂ ಭಾರಿ ಪ್ರಮಾಣದ ನಷ್ಟವನ್ನು ಅನುಭವಿಸಿದರು. ಕ್ರಿ. ಶ 1785ರ ಮಾರ್ಚ್ 11ರಂದು ಮಂಗಳೂರು ಒಪ್ಪಂದಕ್ಕೆ ಟಿಪ್ಪು (ಈತ ಕ್ರಿ.ಶ/. 1782ರಲ್ಲಿ ಹೈದರಾಲಿಯ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡನು) ಸಹಿ ಹಾಕಿದನು. ಇದು ಸುಲ್ತಾನನಿಗೆ ಅನುಕೂಲಕರವಾಗಿತ್ತು. ಜನರಲ್ ಕ್ಯಾಂಬಲ್ ತನ್ನ ಗಡಿ ಕಾವಲನ್ನು ವಾಪಸ್ ಪಡೆದುಕೊಂಡನು. ತನ್ನನ್ನು ಸೇರಿಕೊಳ್ಳು ಹಿಂಜರಿಯುತ್ತಿದ್ದ ಸ್ಥಳೀಯ ಆಡಳಿತಗಾರರ ಬಗ್ಗೆ ಟಿಪ್ಪು ಸುಲ್ತಾನನಿಗೆ ಅನುಮಾನವಿತ್ತು. ಬ್ರಿಟಿಷರಿಗೆ ಸಹಕಾರ ನೀಡಿದ ಕುಂಬಳೆ ರಾಜನನ್ನು ನಾಡಿನಿಂದ ಹೊರದಬ್ಬಲಾಯಿತು. ಮತ್ತು ಆತನ ಸೋದರನನ್ನು ಗಲ್ಲಿಗೇರಿಸಲಾಯಿತು. ವಿಟ್ಠಲ ಹೆಗ್ಗಡೆ ಪಲಾಯನಗೈದನು ವಿಟ್ಲದ ರಾಜ ಮತ್ತು ಕುಂಬಳೆಯ ರಾಜ ಪರಸ್ಪರ ಒಂದಾಗಿ ಡಕಾಯಿತರಾದರು. ಮಂದಿರ ಮತ್ತು ವರ್ತಕರ ಮೇಲೆ ದಾಳಿ ನಡೆಸುವುದು, ಕೊಳ್ಳೆಹೊಡೆಯುವುದು ಅವರ ಕಾಯಕವಾಗಿತ್ತು. ಸುಲ್ತಾನನು

ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ರಕ್ಷಿಸುವಲ್ಲಿ ಯಶಸ್ವಿಯಾದನು. ಆತನಿಗೆ ಎರಡು ಅನುಕೂಲಕರ ಅಂಶಗಳಿದ್ದವು.

1. ಜನಸಂಖ್ಯೆಯಲ್ಲಿ ಮುಸ್ಲಿಮರೇ ಗಮನಾರ್ಹ ಸಂಖ್ಯೆಯಲ್ಲಿದ್ದುದರಿಂದ ದೇಶಭಕ್ತ ಮುಸ್ಲಿಂ ಅರಸನಿಗೆ ಅವರು ಬೆಂಬಲ ನೀಡಿದರು ಮತ್ತು ಸಾಮ್ರಾಜ್ಯಕ್ಕೆ ಕೊಡುಗೆ ನೀಡಿದರು.

2. ಜೈನರ ಪ್ರಮುಖ ವರ್ತಕ ಗುಂಪು ಮುಸ್ಲಿಮರೊಂದಿಗೆ ಸ್ನೇಹದಿಂದಿದ್ದರು. ಮತ್ತು ಅವರು ಆಡಳಿತಗಾರನಿಗೆ ಪರವಾಗಿದ್ದರು ಸುಲ್ತಾನ್ ಮುಕ್ತ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಿದನು ಹಾಗೂ ದಬ್ಬಾಳಿಕೆಯನ್ನು ಕೊನೆಗೊಳಿಸದನು. ಹೀಗೆ ಸುಲ್ತಾನನು ತನ್ನ ಕ್ರಮಗಳನ್ನು ಚಾರಿಗೊಳಿಸಿದರು.

ಕೊಡಗಿನ ವೀರರಾಜೆಂದ್ರ ಅರಸನು ಬ್ರಿಟಿಷ್ ಕಂಪನಿಯ ಮಿತ್ರನಾಗಿದ್ದನು. ಬ್ರಿಟಿಷರನ್ನು ಮಂಗಳೂರಿನಲ್ಲಿ ಸೋಲಿಸಿದ ಬಳಿಕ ಕೊಡಗಿಗೆ ತೆರಳಿದ ಟಿಪ್ಪು ಸುಲ್ತಾನ್ ಆತನನ್ನು ಬಲಾತ್ಕಾರದಿಂದ ಶರಣಾಗಿಸಿದನು. ಬಂಡುಕೋರರಿಗೆ ಕ್ಷಮೆ ನೀಡಿದನು. ಜೈನುಲ್ ಆಬಿದೀನ್ ರುಸ್ತಿಯನ್ನು ಕೊಡಗಿನ ಮುಖ್ಯ ಆಡಳಿತಾಧಿಕಾರಿಯಾಗಿ ನೇಮಿಸಲಾಯಿತು. ಕ್ರಿ. ಶ. 1795ರಲ್ಲಿ ರಾಜನು ಬ್ರಿಟಿಷರೊಂದಿಗೆ ಸೇರಿ ಬಂಡೆದ್ದನು. ಟಿಪ್ಪು ಸುಲ್ತಾನ್ ಮತ್ತು ಫ್ರೆಂಚ್ ಜನರಲ್ ಡಿ ಲಾಲಿ ಕೊಡಗಿಗೆ ತೆರಳಿದರು, ದಂಗೆಯನ್ನು ಕೊನೆಗಾಣಿಸಿದರು. ಮಡಿಕೇರಿಯಲ್ಲಿ ನೆಲೆಸಿದ ಸುಲ್ತಾನನು ನಂತರ ಅಯ್ಯಂಗಾರಿ ಮತ್ತು ಭಾಗಮಂಡಲಕ್ಕೆ ತೆರಳಿದನು. ಇಲ್ಲಿ ಕಣ್ಣೂರಿನ ರಾಣಿ ಬಲಿಯಾ ಬಾನು ಅಮೂಲ್ಯ ಉಡುಗೊರೆಗಳನ್ನು ಕಾಣಿಕೆಯಾಗಿ ಕೊಟ್ಟಳು.

**ರಾಣಿ ಬಲಿಯಾ ಬಾನು**

ಕಣ್ಣೂರಿನ ಅರಕ್ಕಳ ಪರಿವಾರದ ರಾಣಿಯಾಗಿದ್ದ ಬಲಿಯಾ ಬಾನು ಮಲಬಾರ್ ದಂಡಯಾತ್ರೆಯ ಸಂದರ್ಭದಲ್ಲಿ ಟಿಪ್ಪು ಸುಲ್ತಾನನ ಬೆಂಬಲಿಗಳಾಗಿ ಮಾರ್ಪಟ್ಟಳು. ಬ್ರಿಟಿಷರ ವಿರುದ್ಧ ಹೋರಾಡಲು ಆಕೆ ಜನರಲ್ ಫಝ್ಲ್ ಖಾನ್‌ಗೆ ನಾಲ್ಕು ಸಾವಿರ ಸೈನಿಕರ ಮಾಪಿಳ್ಳೆ ತುಕಡಿಯೊಂದನ್ನು ಕಳುಹಿಸಿಕೊಟ್ಟಿದ್ದಳು. ಮಲಬಾರ್ ಯುದ್ಧದ ಸಂದರ್ಭದಲ್ಲಿ ಆಕೆ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದ್ದಳು ಎಂದು ಟಿಪ್ಪುವಿನ ಮುಂದೆ ಸೋಲನುಭವಿಸಿದ್ದ ಜನರಲ್ ರಾಬರ್ಟ್ ಟೇಲರ್ ವರದಿ ಮಾಡಿದ್ದ. ಆಕೆಯ ಮಗಳನ್ನು ಟಿಪ್ಪು ಸುಲ್ತಾನನ ಮಗನಿಗೆ ಮದುವೆ ಮಾಡಿಕೊಡಲಾಗಿತ್ತು ಮತ್ತು ಆಕೆಯ ಪರಿವಾರ ತದನಂತರ ಮೈಸೂರಿನ ರಾಜ

ಕುಟುಂಬದೊಂದಿಗೆ ನಿಕಟ ಸಂಪರ್ಕ ಬೆಳೆಸಿತ್ತು. ಸುಲ್ತಾನನು ಮೈಸೂರಿಗೆ ವಾಪಸಾದ ನಂತರ ಜನರಲ್ ಟೇಲರ್ ಮತ್ತೆ ದಾಳಿ ನಡೆಸಿ ಆಕೆಯನ್ನು ಶರಣಾಗುವಂತೆ ಬಲಾತ್ಕರಿಸಿದ್ದ ಆದರೆ ಸುಲ್ತಾನನ ಜನರಲ್‌ಗಳೊಂದಿಗೆ ಸೇರಿ ತಂತ್ರ ಹೆಣೆದ ಆಕೆ ಸುಲ್ತಾನನ ಪಡೆ ಆಗಲೇ ಕಣ್ಣೂರನ್ನು ತ್ಯಜಿಸಿದೆ ಮತ್ತು ಮಂಗಳೂರಲ್ಲಿ ತಂಗಿದೆ ಎಂದು ವದಂತಿ ಹಬ್ಬಿಸಿದಳು. ಬ್ರಿಟಿಷರನ್ನು ಮಾತುಕತೆಗೆ ಆಹ್ವಾನಿಸಿದಳು. ಜನರಲ್ ಟೇಲರ್ ಮೇಜರ್ ಡೌ ಎಂಬಾತನನ್ನು ತಲಚ್ಚೇರಿಯಿಂದ ಕಣ್ಣೂರಿಗೆ ಕಳುಹಿಸಿಕೊಟ್ಟನು. ಆತನನ್ನು ಬರಮಾಡಿಕೊಂಡ ರಾಣಿ ಕೋಟೆಯ ಮುಂಭಾದಲ್ಲಿ ಅವರಿಗೆ ಬಿಡಾರಗಳನ್ನು ಹಾಕಿಕೊಟ್ಟಳು. ಆದರೆ ಮಧ್ಯರಾತ್ರಿಯ ವೇಳೆಗೆ ಮಾಪಿಳ್ಳ ಪಡೆಯ ಶಿಬಿರಗಳ ಮೇಲೆ ಆಕ್ರಮಣ ನಡೆಸಿತು. ಮುಖಾಮುಖಿ ಸಂಘರ್ಷದಲ್ಲಿ ಹಲವರು ಸತ್ತರು ಮತ್ತು ಇನ್ನು ಕೆಲವರು ತಲಚೇರಿಗೆ ಪಲಾಯನ ಮಾಡಿದರು. ಜನರಲ್ ಓಬರ್ ಕ್ರಾಂಬಿಗೆ ಪತ್ರ ಬರೆದ ಜನರಲ್ ಟೇಲರ್ ಮೈಸೂರಿಗೆ ಹೋಗುವ ದಾರಿಯಲ್ಲಿ ರಾಣಿಯನ್ನು ಶಿಕ್ಷಿಸುವಂತೆ ಸೂಚಿಸಿದನು. ಬ್ರಿಟಿಷರು ಮಾಪಿಳ್ಳೆಗಳನ್ನು ಸೋಲಿಸಿದರು ಮತ್ತು ರಾಣಿಯು ಶಾಂತಿಯ ಬೇಡಿಕೆಯನ್ನು ಮುಂದಿಟ್ಟಳು.

ಜನರಲ್ ಆಬರ್ ಕ್ರಾಂಬಿಗೆ ಆತನ ಮೈಸೂರು ದಂಡಯಾತ್ರೆಯಲ್ಲಿ ಮಾರ್ಗದರ್ಶನ ನೀಡುತ್ತಿದ್ದ ಕೊಡಗಿನ ರಾಜ ವೀರರಾಜೇಂದ್ರ ಈ ಹೊತ್ತಿಗೆ ತಲಚ್ಚೇರಿಯಲ್ಲಿದ್ದ ಕಣ್ಣೂರಿನ ರಾಜ ಕುಟುಂಬವು ಆತನಿಗೆ ಆರಂಭದ ಕಷ್ಟ ಕಾಲದಲ್ಲಿ ನೆರವಾಗಿತ್ತು. ಹೀಗಾಗಿ ರಾಣಿಯು ಆತನ ನೆರವು ಪಡೆಯಲು ನಿರ್ಧರಿಸಿದಳು. ತನ್ನ ದೂತ ಕುಂಞಪಕ್ಕಿ ಮತ್ತು ಮೂಸಾ ಬ್ಯಾರಿಯನ್ನು ತನ್ನ ಅಪ್ರಾಪ್ತ ವಯಸ್ಕ ಮಗನೊಂದಿಗೆ ರಾಜನ ಬಳಿಗೆ ಆಕೆ ಕಳುಹಿಸಿದಳು. ಸಾಮ್ರಾಜ್ಯವನ್ನು ತನ್ನ ಮಗನಿಗೆ ಕೊಡುವಂತೆ ಮನವಿ ಮಾಡಿದಳು. ಅವರನ್ನು ರಾಜನು ಜನರಲ್ ಟೇಲರ್ ಬಳಿಗೆ ಒಯ್ದನು ಬ್ರಿಟಿಷ್ ಯೋಜನೆಯಲ್ಲಿ ವೀರ ರಾಜೇಂದ್ರನ ಮಹತ್ವವನ್ನು ಪರಿಗಣಿಸಿ ಟೇಲರ್ ಅವರನ್ನು ಜನರಲ್ ಆಬರ್ ಕ್ಯಾಂಬಿ ಬಳಿಗೆ ಒಯ್ದನು. ಆತನ ಮಧ್ಯಸ್ಥಿಕೆಯ ಪರಿಣಾಮವಾಗಿ ಬ್ರಿಟಿಷ್ ಕಂಪೆನಿಗೆ ಶರಣಾಗುವ ಷರತ್ತಿನೊಂದಿಗೆ ರಾಜಕುಮಾರನಿಗೆ ಪಟ್ಟ ಬಿಟ್ಟುಕೊಡಲು ಜನರಲ್ ಒಪ್ಪಿದನು. ರಾಣಿಗೆ ಕ್ಷಮೆ ನೀಡಲಾಯಿತು ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಕಣ್ಣೂರಿನಲ್ಲಿ ನಿಯೋಜಿಸಲಾಯಿತು.

**ಲಂಗ್ಡಾದಾಡಿ ಶೇಖ್ ಇಮಾಮ್**

ಕ್ರಿ. ಶ. 1792ರಲ್ಲಿದ ಟಿಪ್ಪು ಸುಲ್ತಾನನ ಸಿಫಾದಾರ್ ಆಗಿದ್ದ ಲಂಗ್ಡಾದಾಡಿ ಶೇಖ್ ಇಮಾಮ್ ದಕ್ಷಿಣ ಕೆನರಾದಲ್ಲಿ ಸುಲ್ತಾನನ ಆಳ್ವಿಕೆಯನ್ನು ಮರುಸ್ಥಾಪಿಸಲು ಯತ್ನಿಸಿದ. ಆತ ಪಾಂಚಾ ಮತ್ತು ಬೆಳ್ಳಾರೆ ಮಾಗಣೆಯನ್ನು ತಮಗೆ ಒಪ್ಪಿಸುವಂತೆ ಕೊಡಗಿನ ರಾಜನಿಗೆ ಒತ್ತಡ ಹೇರಿದ. ಅಷ್ಟೇ ಅಲ್ಲ, ಈ ಎರಡು ಪ್ರದೇಶಗಳನ್ನು ಆತ ಆಕ್ರಮಿಸಿಕೊಂಡ. ಜತೆಗೆ ಅಮರಸುಳ್ಯ ಮಾಗಣೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಯತ್ನಿಸಿದ. ರೈತರ ಮೇಲೆ ಆಕ್ರಮಣ ನಡೆಸಿ ಅವರನ್ನು ಕೊಳ್ಳೆ ಹೊಡೆದ. ವೀರರಾಜೇಂದ್ರ ಅರಸನು ಬ್ರಿಟಿಷರ ಮೊರ ಹೋದ. ಈ ಬಗ್ಗೆ ತನಿಖೆ ನಡೆಸುವಂತೆ ಕಾರ್ನ್‌ವಾಲಿಸನು ಮಲಬಾರ್‌ನ ಕಮಿಷನರ್ ವಿಲಿಯಮ್ ಪಾಲ್ಮರ್ ಮತ್ತು ಮೇಜರ್ ಅಲೆಕ್ಸಾಂಡರ್. ಡೌಗೆ ಆದೇಶ ಜಾರಿಗೊಳಿಸಿದ ಗಡಿಗಳಲ್ಲಿ ಕಾವಲನ್ನು ಸಶಕ್ತಗೊಳಿಸಲು ಬ್ರಿಟಿಷರು ಕ್ರಮಗಳನ್ನು ತೆಗೆದುಕೊಂಡರು.

ಕ್ರಿ.ಶ. 1797ರಲ್ಲಿ ಅಮರ ಸುಳ್ಯ ಮಾಗಣೆಯ ವಿವಾದವನ್ನು ಇತ್ಯರ್ಥಪಡಿಸಲು ಮಲಬಾರ್‌ನ ಕಮಿಷನರ್ ಸ್ಪೆನ್ಸರ್ ಜೋಸಯ್ಯ ಉಟೋಫ್ ಮತ್ತು ಕ್ಯಾಪ್ಟನ್ ಮಹಾನೆಯನ್ನು ವೀರರಾಜೇಂದ್ರ ದೊರೆಯ ಬಳಿ ಕಳುಹಿಸಕೊಟ್ಟ. ರಾಜ ತನ್ನ ಪ್ರತಿನಿಧಿ ಕಾರ್ಣಿಕ್ ಸುಬ್ಬಯ್ಯನನ್ನು ಕಳುಹಿಸಿಕೊಟ್ಟ. ಸುಲ್ತಾನನು ಶೇಖ್ ಶಿಹಾಬುದ್ದೀನ್ ಮತ್ತು ಮೀರ್ ಮೊಹಮ್ಮದಾಲಿಯನ್ನು ತನ್ನ ಏಜೆಂಟರಾಗಿ ಕಳುಹಿಸಿಕೊಟ್ಟ. ಆದರೆ ಟಿಪ್ಪುವಿನ ಮರಣದವರೆಗೂ ಈ ವಿವಾದ ಇತ್ಯರ್ಥಗೊಳ್ಳಲೇ ಇಲ್ಲ.

**ಸಾಧುರಿ ಬ್ಯಾರಿ**

ಬಂಟ್ವಾಳ ತಾಲೂಕಿನ ಒಬ್ಬ ಜಮೀನುದಾರ. ಆತನ ಮೂಲ ಗ್ರಾಮವು ಪ್ರಾಯಶಃ ಅಜಿಲಮೊಗರು ಆಗಿತ್ತು. ಅಲ್ಲಿ ಆತನಿಗೆ ಭಾರಿ ಪ್ರಮಾಣದ ಸಂಪತ್ತು ಇತ್ತು. ಮೂತ ಮಾಹಿನ್ ಬ್ಯಾರಿ ಎಂಬ ಶ್ರೀಮಂತ ಕೃಷಿಕ ಆತನ ಅಪ್ಪನಾಗಿದ್ದ. ಒಬ್ಬ ಜಮೀನ್ದಾರನಾಗಿದ್ದುದರಿಂದ ಆತ ಹೆಚ್ಚಿನ ಮುಸ್ಲಿಮ್ ವರ್ತಕರು ಮತ್ತು ಕೃಷಿಕರನ್ನು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಸಂಘಟಿಸುವಲ್ಲಿ ಯಶಸ್ವಿಯಾದ. ಆತನಿಗೆ ಟಿಪ್ಪು ಸುಲ್ತಾನನಿಂದ ಸನ್ಮಾನವೂ ದೊರೆತಿತ್ತು. ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡಾಗ ಆತ ತುಳುನಾಡನ್ನು ಬ್ರಿಟಿಷ್ ಕಂಪೆನಿಯ ಆಳ್ವಿಕೆಯಿಂದ ಬಿಡುಗಡೆಗೊಳಿಸಲು ಯತ್ನಿಸಿದ. ಆತನಿಗೆ ಕೊಡಗಿನ ರಾಜನ ಆಳ್ವಿಕೆಯ ಬಗ್ಗೆಯು ಅಸಮಾಧಾನವಿತ್ತು. ಆತನ  ಮೊಮ್ಮಗನಾದ ಸಾಧುಂ ಬೆಹಾರಿ ಕ್ರಿ.ಶ. 1856ರಲ್ಲಿ

ಉಪ್ಪಿನಂಗಡಿಯ ಬೆಲ್ಯ ಗ್ರಾಮದ ಪಟೇಲನಾಗಿದ್ದ. ಆತನ ಉತ್ತರಾಧಿಕಾರಿಗಳು ಈಗಲೂ ಅಜಿಲಮೊಗರು ಮತ್ತು ಮಂಗಳೂರಿನಲ್ಲಿ ವಾಸವಾಗಿದ್ದಾರೆ.

ಕ್ರಿ.ಶ. 1799ರಲ್ಲಿ ಬ್ರಿಟಿಷ್ ಪಡಯು ಶ್ರೀರಂಗಪಟ್ಟಣವನ್ನು ಸುತ್ತುವರಿಯಿತು. ಬ್ರಿಟಿಷ್ ದಾಳಿಯನ್ನು ಹಿಮ್ಮೆಟ್ಟಿಸಲು ಕೋಟೆಯನ್ನು ಸಶಕ್ತಗೊಳಿಸಲು ಸುಲ್ತಾನ ಹೆಣಗುತ್ತಿದ್ದ. ಬ್ರಿಟಿಷರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿರುವಾಗಲೇ ಸುಲ್ತಾನನ ಮಿತ್ರರು ಮತ್ತು ಹಿತೈಷಿಗಳು ತುಳುನಾಡಿನ ಬೇರೆ–ಬೇರೆ ಕಡೆಗಳಲ್ಲಿ ಬಂಡಾಯದ ಬಾವುಟ ಹಾರಿಸಿದರು. ಬ್ಯಾರಿಗಳ ಒಂದು ಗುಂಪು ಕಾಸರಗೋಡು ಸಮೀಪದ ಕುಂಬಳೆಯಲ್ಲಿ ದಂಗೆ ಎದ್ದಿತು ಮತ್ತು ಬ್ರಿಟಿಷ್ ಬೆಂಬಲಿಗರನ್ನು ಸೂರೆಗೈಯಿತು. ಕೊಡಗಿನ ವೀರ ರಾಜೇಂದ್ರ ಅರಸನು ಕಾರ್ಣಿಕ್ ಸುಬ್ಬಯ್ಯ ಮತ್ತು ಕಾರ್ಯಕಾರ ಬೋಪ ಎಂಬವರ ನೇತೃತ್ವದಲ್ಲಿ ಇನ್ನೂರು ಕೊಡವರ ಪಡೆಯೊಂದನ್ನು ಕಳುಹಿಸಿಕೊಟ್ಟ ಕ್ಯಾಪ್ಟನ್ ಮಹಾನ್ ಎಂಬ ಬ್ರಿಟಿಷ್ ಸಲಹೆಗಾರನು ಈ ದಂಡಯಾತ್ರೆಯನ್ನು ನಿರ್ದೇಶಿಸಿದ್ದ. ಸೇನೆಯು ವಿಟ್ಲ ಬಳಿಯ ವೀರಕಂಬಕ್ಕೆ ತಲುಪಿ ಅಲ್ಲೆ ಠಿಕಾಣಿ ಹೂಡಿತು. ಅವರು ತುಳುನಾಡಿನ ಮುಸ್ಲಿಮ್ ಮುಖಂಡ ಸಾಧುರಿ ಬ್ಯಾರಿ ಬಳಿ ರಾಜನಿಗೆ ಶರಣಾಗುವಂತೆ ಸೂಚನೆ ಕಳುಹಿಸಿದರು.

ವೀರ ಕಂಭದಲ್ಲಿ ಕೊಡಗು ಸೇನೆಯನ್ನು ಕಂಡ ಸಾಧುರಿ ಸೇನೆಯನ್ನು ಸಂಘಟಿಸಿ ಕೊಡವರ ಮೇಲೆರಗಲು ಯೋಜನೆ ರೂಪಿಸಿದ. ಆದರೆ ಕೊಡವರು ಒಮ್ಮೆಲೆ ಆತನ ಶಿಬಿರದ ಮೇಲೆ ದಾಳಿ ನಡೆಸಿ ಸೋಲಿಸಿಬಿಟ್ಟರು. ಸಾಧುರಿ ಓಡಿ ಹೋದನು. ಈ ಸಂಘರ್ಷದಲ್ಲಿ 23 ಮಂದಿ ಸತ್ತು ಸುಮಾರು 400 ಮಂದಿ ಗಾಯಗೊಂಡರು. ಕ್ಷತ್ರಿ ಕೃಷ್ಣರಾಜ ಎಂಬ ಸಾಧುರಿಯ ಒಬ್ಬ ಸರದಾರನನ್ನು ಸೆರೆಹಿಡಿದು ಕ್ಯಾಪ್ಟನ್ ಮಹಾನೆಯ ಬಳಿಗೆ ಕರೆದೊಯ್ಯಲಾಯಿತು. ಈ ಮಧ್ಯೆ ಸಾಧುರಿ ಬ್ಯಾರಿ, ಸುಲ್ತಾನನ ಅಧಿಕಾರಿಯಾಗಿದ್ದ ಮೀರ್ ಮೊಹಮ್ಮದಾಲಿಯೊಂದಿಗೆ ಸೇರಿ ಇನ್ನೂ ದೊಡ್ಡದಾದ ಬ್ಯಾರಿ ಪಡೆಯನ್ನು ಬಂಟ್ವಾಳದ ಸುತ್ತಮುತ್ತ ಕಟ್ಟಿದ. ನದಿ ದಂಡೆಗೆ ಆಗಮಿಸಿದಾಗ ಬ್ಯಾರಿ ಪಡೆಗಳು ಅವರ ಮೇಲೆ ದಾಳಿ ನಡೆಸಿದವು.

ಸಾಧುರಿ ಬ್ಯಾರಿ ಮತ್ತು ಮೊಹಮ್ಮದಾಲಿ ಕೂಡಲೇ ಗ್ರಾಮಗಳಿಗೆ ತೆರಳಿ ಬ್ಯಾರಿ ಪಡೆಗಳನ್ನು ಸಂಘಟಿಸಿದರು. ರಕ್ಷಣಾ ಪಡೆಯೊಂದನ್ನು ಸಂಘಟಿಸುವಂತೆ ಕರೆ ನೀಡಿದರು. ಶ್ರೀರಂಗಪಟ್ಟಣದಲ್ಲಿ ಸುಲ್ತಾನ್ ಸಂಕಷ್ಟದಲ್ಲಿರುವುದರಿಂದ ಬ್ರಿಟಿಷ್ ಕಂಪನಿಯಿಂದ ತುಳುನಾಡನ್ನು ರಕ್ಷಿಸುವುದು ಅವರ ಮುಖ್ಯ ಗುರಿಯಾಗಿತ್ತು. ಉದ್ಯಾವರದ ಬ್ಯಾರಿಗಳು ಆತನ ಪಡೆಯನ್ನು ಸೇರಿದರು. ಮೌನಾಂಕಡಲಿನ (ಮಲಬಾರ್) ನಾಯನಾರ್‌ಗಳು ಮತ್ತು ಕುಂಬಳೆ ಮಂಜೇಶ್ವರ, ಉಳ್ಳಾಲ,

ಬಂಟ್ವಾಳ ಮತ್ತು ಬೆಳ್ತಂಗಡಿಯ ಬ್ಯಾರಿಗಳು ಕೂಡಾ ಆತನ ಹಿಂದೆ ಒಟ್ಟಾಗಿದ್ದರು. ಹೀಗೆ ಸುಮಾರು ಮೂರು ಸಾವಿರ ಸೈನಿಕರಿದ್ದ ಪಡೆಯು ಕೊಡಗು ಸೇನೆಯನ್ನು ಉದ್ಯಾವರದ ಬಳಿ ತಡೆ ಹಿಡಿಯಲು ಪ್ರಯತ್ನಿಸಿತು. ಆದರೆ ಅವರ ಬಳಿ ಸಾಕಷ್ಟು ಶಸ್ತ್ರಾಸ್ತ್ರ ಸಲಕರಣೆಗಳು ಇರಲಿಲ್ಲ. ಬ್ರಿಟಿಷ್ ಪಡೆಗಳು ಸುಲ್ತಾನನನ್ನು ಸುತ್ತುವರಿದ ಕಾರಣ ಆತನ ಸಹಾಯವು ಅವರಿಗೆ ದೊರೆಯಲಿಲ್ಲ. ಟಿಪ್ಪು ಸುಲ್ತಾನನ ಪತನವು ಆಘಾತಕಾರಿ ಹೊಡೆತವನ್ನು ಅವರ ಮೇಲೆ ಬೀರಿತ್ತು. ಹೀಗೆ ಈ ಹೋರಾಟವೂ ವಿಫಲವಾಯಿತು. ಈ ಯುದ್ಧದಲ್ಲಿ ಸಾಧುರಿ ಮತ್ತು ಮೊಹಮ್ಮದಾಲಿ ಪಲಾಯನಗೈದರು.

ಪೋರ್ಚುಗೀಸರ ತೊಂದರೆಯಿಂದ ಬಾರ್ಕೂರು ವಿಭಾಗವು ತನ್ನ ಮಹತ್ವವನ್ನು ಕಳೆದುಕೊಂಡಿತ್ತು. ಅದರ ಪ್ರಾಮುಖ್ಯತೆಯನ್ನು ಮರುಸ್ಥಾಪಿಸಲು ಸುಲ್ತಾನನು ಯತ್ನಿಸಿದನು. ಪ್ರಾಂತ್ಯಕ್ಕೆ ನವಾಬ್ ತಾಲೂಕು ಎಂದು ಹೆಸರಿಸಲಾಯಿತು. ಮತ್ತು ಮೂರು ಹೋಬಳಿಯಾಗಿ ಅದನ್ನು ವಿಂಗಡಿಸಿಲಾಯಿತು. (ಬಸ್ರೂರು ರಾಜ್ಯ, ಕುಂದಾಪುರ ರಾಜ್ಯ ಮತ್ತು ಕಾರ್ಕಳ ರಾಜ್ಯ) ಗಂಗಾಧರಯ್ಯ ಕುಂದಾಪುರದ ಚೊಚ್ಚಲ ಗವರ್ನರ್ ಆಗಿದ್ದ. ಆತನ ಬಳಿಕ ಮೊಹಮ್ಮದಾಲಿ ಖಾನ್ ಜಾಬೇರ್ ಅಧಿಕಾರವನ್ನು ವಹಿಸಿಕೊಂಡ. ಉಳಿದ ಎರಡು ಹೋಬಳಿಗಳನ್ನು ಮಳಲಿ ಹಮ್ಮಬ್ಬ ಮತ್ತು ಮೊಹಮ್ಮದ್ ಶರೀಫ್ ನೋಡಿಕೊಳ್ಳುತ್ತಿದ್ದರು. ಮೊಹಮ್ಮದಾಲಿಯ ನಂತರ ನೂರ್ ಗುಲಾಮ್ ಅಲಿ ಅಧಿಕಾರ ವಹಿಸಿಕೊಂಡನು. ಟಿಪ್ಪು ಸುಲ್ತಾನ್ ಬೆಳ್ತಂಗಡಿಯ ಬೆಟ್ಟದ ಮೇಲಿದ್ದ ನರಸಿಂಹಘಡ್ ಎಂಬ ಕೋಟೆಯನ್ನು ವಶಪಡಿಸಿ ಅದಕ್ಕೆ ಜಮಾಲಾಬಾದ್ ಎಂದು ಮರುನಾಮಕರಣ ಮಾಡಿದನು. ಜೊತೆಗೆ ಅಲ್ಲಿ ಮಸೀದಿಯೊಂದನ್ನು ನಿರ್ಮಿಸಿ ಮುಸ್ಲಿಮ್ ವಸತಿ ಕೇಂದ್ರವನ್ನು ಸ್ಥಾಪಿಸಿದ. ಆತ ಮಂಗಳೂರಿನ ಸುಲ್ತಾನ್ ಪಳ್ಳಿಯನ್ನು ಜೀರ್ಣೋದ್ಧಾರಗೊಳಿಸಿದನು. ಇದು ತುಳು ನಾಡಿನಲ್ಲೇ ಅತ್ಯಂತ ಶ್ರೇಷ್ಟವಾದ ಮರದ ಶಿಲ್ಪವೆನಿಸಿದೆ. ಮಂದಿರ ಮತ್ತು ಇತರ ಆರಾಧನಾ ಕ್ಷೇತ್ರಗಳಿಗೂ ಆತ ದತ್ತಿ ಮತ್ತು ಅನುದಾನವನ್ನು ಒದಗಿಸಿದ.

ಈ ಅವಧಿಯಲ್ಲಿ ಮಂಗಳೂರು ಬಂದರ್ ಕ್ಷಿಪ್ರವಾಗಿ ಬೆಳವಣಿಗೆ ಹೊಂದಿತು. ನೌಕಾಬಲವೂ ಗಮನಾರ್ಹವಾಗಿ ಹೆಚ್ಚಿತು. ಬಂದರನ್ನು ಷಾ ಬಂದರ್ ಎಂದು ಹೆಸರಿಸಲಾಯಿತು. ಹೊಸ ವರ್ತಕರ ಉದಯವಾಯಿತು. ಕೊಂಕಣಿಗಳು, ಗೋವಾದ ಗೌಡ ಸಾರಸ್ವತರು ಒಂದು ಸಕ್ರಿಯ ವರ್ತಕ ವರ್ಗವಾಗಿ ರೂಪು ಗೊಂಡರು. ಪೋರ್ಚುಗೀಸ್ ದೌರ್ಜನ್ಯದಿಂದ ಪಾರಾಗಲು ಅವರು ಗೋವಾ

ದಿಂದ ತುಳುನಾಡಿಗೆ ಬಂದು ಜಿಲ್ಲೆಯ ವಿವಿಧೆಡೆ ನೆಲೆಸಿದರು. ಮೇಮನ್‌ಗಳು ಇನ್ನೊಂದು ಗುಂಪಾಗಿದ್ದರು. ಬ್ಯಾರಿ ವರ್ತಕರು ತಮ್ಮ ಹಂಜಮಾನ್‌ಗಳನ್ನು ಕಳೆದುಕೊಂಡು ಹೆಚ್ಚು ಜಾಗೀರ್ದಾರಿ ಹವ್ಯಾಸಗಳನ್ನು ಬೆಳೆಸಿಕೊಳ್ಳತೊಡಗಿದರು. ಮತ್ತು ದಕ್ಕನದ ಹನಫಿಗಳು ಮತ್ತು ಮೆಮನ್‌ಗಳ ಇಸ್ಲಾಮಿನೊಡನೆ ಸುಧಾರಣಾವಾದಿ ಗಳಾಗಿ ಕಂಡುಬಂದರು. ತುಳುನಾಡಿನ ಮುಸ್ಲಿಮರ ಬದುನಿನಲ್ಲಿ ಸುಲ್ತಾನ್ ಆಳ್ವಿಕೆಯು ಒಂದು ನೆಲೆಯನ್ನು ಕಲ್ಪಿಸಿಕೊಟ್ಟಿತು. ಮಂಗಳೂರು ಮತ್ತು ತುಳುನಾಡಿನ ಮುಸ್ಲಿಮರು ನವಾಬರ ಆಳ್ವಿಕೆಯಿಂದ ಸ್ಫೂರ್ತಿ ಪಡೆದರು.

**ಸಾಂಸ್ಕೃತಿಕ ವೈಶಿಷ್ಟ್ಯ ಪ್ರಭಾವ**

ಬ್ಯಾರಿ ಜನಾಂಗವು ಸಾಂಸ್ಕೃತಿಕವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಪಡದಿದೆ. ಈ ಜನಾಂಗದ ಮದುವೆ ಪದ್ದತಿ, ಗೃಹಪ್ರವೇಶ ಉಡಿಗೆ–ತೊಡಿಗೆ, ಆಚಾರ ವಿಚಾರಗಳೆಲ್ಲವೂ ಕೇವಲ ಆಚರಣೆ ಅಥವಾ ಬಳಕೆಯಲ್ಲಿದೆಯಷ್ಟೆ.

**ಮದುವೆ ಪದ್ಧತಿ**

ಬ್ಯಾರಿಗಳ ಮದುವೆ ಪದ್ಧತಿಯು ತನ್ನದೇ ಆದ ನೀತಿ ನಿಯಮಗಳನ್ನು ಹೊಂದಿದ್ದು, ಹೆಚ್ಚಿನ ಕೆಲವು ಕಟ್ಟುಪಾಡುಗಳು ತುಳುವರಿಂದ ಪ್ರಭಾವಿತವಾದು ದಾಗಿದೆ.

ಬ್ಯಾರಿಗಳು ತಮ್ಮ ಮದುವೆ ಸಂದರ್ಭದಲ್ಲಿ ಮೊದಲು ಎತ್ತುವ ವಿಷಯವೆಂದರೆ ಕಾಸಿ–ಬಂಗಾರು ಅಥವಾ ಎಡಿಕೆ–ಕೊಡಿಕೆ ಬ್ಯಾರಿಗಳು ಮುಸ್ಲಿಮರಾದುದರಿಂದ ಇಸ್ಲಾಂ ಧರ್ಮ ಕಲ್ಪಿಸಿಕೊಟ್ಟಂತೆ ವರದಕ್ಷಿಣೆ ಪಡೆಯುವಂತಿಲ್ಲ. ಬದಲಾಗಿ ಅರಬಿಯಾದಲ್ಲಿರುವಂತೆ ವಧುದಕ್ಷಿಣೆ ಕೊಡಬೇಕು. ತುಳುನಾಡಿನ ಸಂಸ್ಕೃತಿಯನ್ನು ತನ್ನ ಜೀವನದಲ್ಲಿ ಮೈಗೂಡಿಸಿಕೊಂಡಿರವ ಬ್ಯಾರಿ ಪೂರ್ವಜರು ತುಳುವರಂತೆ ಅಥವಾ ಅವರ ಆಚಾರ–ವಿಚಾರದಿಂದ ಸ್ಫೂರ್ತಿಗೊಂಡು ಮಹತ್ವದ ಸ್ಥಾನವನ್ನಿತ್ತರು. ಹುಡುಗಿಯು ತನ್ನನ್ನು ಮದುವೆಯಾಗುವ ಗಂಡಿಗೆ ಗೌರವಾದರ ಭಾವದಿಂದ ದಕ್ಷಿಣೆ ಕೊಡಬೇಕೆನ್ನುವ ಪದ್ಧತಿಯನ್ನು ರೂಪಿಸಿದರು. ಇದು ಮುಂದೆ 'ವರದಕ್ಷಿಣೆ'ಯಾಗಿ ನಾಮಾಂಕಿತವಾಯಿತು.

**ಪೆಣ್ಣ್ ನೋಕುರೆ (ಹೆಣ್ಣು ನೋಡುವುದು)**:– ಹೇಳಿಕೆ ಕೊಟ್ಟಂತೆ ಹೆಣ್ಣನ್ನು ನೋಡಲು ಗಂಡಿನ ಕಡೆಯ ಐದಾರು ಮಂದಿ ಬರುತ್ತಿದ್ದರು. ಇಲ್ಲಿ ಗಂಡು ತನಗೆ ಬೇಕಾದ ಹುಡುಗಿಯನ್ನು ಆಯ್ಕೆ ಮಾಡುವ ಬದಲು ಹುಡುಗನ ತಾಯಿ

ಅಥವಾ ಅಕ್ಕಂದಿರು ಮುಂದಾಳತ್ವ ವಹಿಸುತ್ತಾರೆ. ತಮಗೆ ಹುಡುಗಿ ಒಪ್ಪಿಗೆಯಾದಲ್ಲಿ 'ಉಂಗುರ' ತೊಟ್ಟು ಹೋಗುತ್ತಾರೆ. ಆ ದಿನ ಸಣ್ಣ ಮಟ್ಟದ ಭೋಜನ ಕೂಟವು ನಡೆಯುತ್ತದೆ.

**ವರಪ್ಪು (ನಿಶ್ಚಿತಾರ್ಥ):**– ಇದು ವೈವಾಹಿಕ ಸಂಬಂಧಗಳನ್ನು ಏರ್ಪಡಿಸುವ ದ್ವಿತೀಯ ಹಂತ. ಇದರ ಮುಖ್ಯ ಉದ್ದೇಶ ಹೆಣ್ಣು ಗಂಡಿಗೆ ಸಂಬಂಧಿಸಿದ ಪ್ರಮುಕರನ್ನೆಲ್ಲಾ ಒಂದೆಡೆ ಸೇರಿಸಿ ಕಾಸಿ–ಬಂಗಾರು ಮತ್ತು ಮದುವೆಯ ದಿನಾಂಕ ಗೊತ್ತುಪಡಿಸುವುದು ಹಾಗೂ ಪ್ರಮುಖರ ಮರ್ಯಾದೆಗೆ ಗೌರವ ಕೊಡುವುದಾಗಿದೆ. ಈ ಕಾರ್ಯಕ್ರಮ ಗಂಡಿನ ಮನೆಯಲ್ಲಿ ನಡೆಯುತ್ತದೆ.

**ಕೇಳಿ ಕೇಕ್‌ರೆ:**– ಇದು ವರಪ್ಪು ಆಗಿ ಮದುವೆಗೆ ಒಂದು ವಾರ ಇರುವಾಗ (ಶುಕ್ರವಾರದಂದು) ಗಂಡು ಹೆಣ್ಣಿಹ ಕಡೆಯವರು ತಮ್ಮ ತಮ್ಮ ಜಮಾತ್ ಪಳ್ಳಿಯಲ್ಲಿ ಆಯಾ ಜಮಾತ್‌ನವರು ನಿರ್ಧರಿಸಿದ ಮೊತ್ತವನ್ನು ಪಳ್ಳಿಯ ಖತೀಬ್ ಅಥವಾ ಅಧ್ಯಕ್ಷರ ಕೈಯಲ್ಲಿಟ್ಟು "ಆಯಿರ ಜಮಾತ್‌ರಜಲ್ಲ ನಾನ್ ಕೇಳಿ ಕೇಕ್‌ರೆ" ಎಂದು ಹೆಣ್ಣು–ಗಂಡಿನ ತಂದೆ ಅಥವಾ ಸಂಬಂಧಪಟ್ಟವರು ಮೂರು ಬಾರಿ ಉಚ್ಚರಿಸುತ್ತಾರೆ. ಅಂದರೆ ನನ್ನ ಮಗ ಅಥವಾ ಮಗಳ ಮದುವೆಯ ವಿಷಯವನ್ನು ಸಾವಿರ ಜಮಾತರಲ್ಲಿ ತಿಳಿಯಪಡಿಸುತ್ತೇನೆ ಎಂದು ಕೇಳಿಕೆ ಕೋರುತ್ತಾರೆ.

**ತಿಂರ್ಬು ಇಡ್ರೆ ಅಥವಾ ಪಾಲ್ ಇಡ್ರೆ:**– ಈ ಕಾರ್ಯಕ್ರಮ ಮದುವೆಗೆ ಒಂದು ವಾರದ ಮುಂಚೆ ನಡೆಯುತ್ತದೆ ಕುಡುಗು (ಹುರುಳಿ) ಪಚ್ಚರಿ (ಬೆಳ್ತಿಗೆ) ಮಂಞಳ್ (ಅರಶಿನ) ಹಾಗೂ ಮೊಟ್ಟೆಯ ಬಿಳಿ ಅಂಶವನ್ನು ಬೆರೆಸಿ ಚೆನ್ನಾಗಿ ಕಡೆಯಬೇಕು. ತದನಂತರ ತ್ಯಾಂಜ್ಯೆಡೆ ಪಾಲ್ ಅಂದರೆ ತೆಂಗಿನಕಾಯಿಯ ರಸಕ್ಕೆ ಬೆರೆಸಿ ಚೆನ್ನಾಗಿ ಕಲಸಬೇಕು.

ಅಂಟಾದ ಈ ಹಳದಿ ಅಂಶವನ್ನು ಪುದಿಯೆ ಪೆಣ್ಣ್‌ನ ಮೈಗೆ ಬೆಳಿಗ್ಗೆ ಹಚ್ಚಿ ಮುಸ್ಸಂಜೆಗೆ ಸೀಗೆ ಹುಡಿಯಲ್ಲಿ ಸ್ನಾನ ಮಾಡಿಸಲಾಗುತ್ತದೆ. ಇದಕ್ಕೆ ತಿಂರ್ಬು ಇಡ್ರೆ ಎನ್ನುವರು. ಸಾಮಾನ್ಯವಾಗಿ ಈ ಕಾರ್ಯಕ್ರಮ ಒಂದು ವಾರದವರೆಗೂ ನಡೆಯುತ್ತದೆ. ಹಿಂದೆ ತಿಂರ್ಬು ಹಾಕಲ್ಪಟ್ಟ ಹುಡುಗಿ ಅಂಗಳ ಇಳಿಯುವಂತಿಲ್ಲ. ಅನ್ಯ ಸಮುದಾಯದ ಸ್ತ್ರೀಯರೂ ಕೂಡಾ ತನ್ನನ್ನು ನೋಡುವಂತಿರಲಿಲ್ಲ.

ಹಿಂದೆ ತಿಂರ್ಬು ಇಡ್ರೆ ಎಂದು ಕರೆಯಲ್ಪಡುತ್ತಿದ್ದ ಆಚರಣೆಯು ಇಂದು ಪಾಲ್ ಇಡ್ರೆ ಎಂಬ ಹೆಸರಿನೊಂದಿಗೆ ಕರೆಯಲ್ಪಡುತ್ತವೆ. ಪಾಲ್ ಇಡ್ರೆ ಅಂದರೆ ಹಸುವಿನ ಹಾಲಿಗೆ ಸಿಗಸ ಅಥವಾ ಸಿಕ್ಸ ಹುಡಿಯನ್ನು ಹಾಕಿ ಚೆನ್ನಾಗಿ ಕಲಸಿ ಮದುಮಗಳ ಮೈಗೆ ಹಚ್ಚುವುದು.

**ಮೈಲಾಂಜಿ ಪ್ಹಾಟ್ (ಮದರಂಗಿ ಹಾಡು):–** ಈ ಕಾರ್ಯಕ್ರಮ ಸಾಮಾನ್ಯವಾಗಿ ಮದುವೆಯ ಮುಂಚಿನ ದಿವಸ ರಾತ್ರಿ ನಡೆಯುತ್ತದೆ. ಅಂದು ಮುಸ್ಸಂಜೆಗೆ ಗಂಡಿನ ಕಡೆಯಿಂದ ಕೆಲವು ಸ್ತ್ರೀಯರು ಮದರಂಗಿಯನ್ನು ಹೆಣ್ಣಿನ ಮನೆಗೆ ಕೊಂಡುಹೋಗಿ ರಂಗೇರಿದ ಪುದಿಯ ಪೆಣ್ಣ್ಣನ (ಮದುಮಗಳ) ಕೈಗೆ ಮದರಂಗಿ ಇಟ್ಟು ಮದರಂಗಿ ಹಾಡನ್ನು ಹಾಡುತ್ತಾರೆ.

ಆದರೆ ಇಂದಿನ ಕಾಲದಲ್ಲಿ ಗಂಡಿನ ಕಡೆಯವರಿಂದ ಮದರಂಗಿ ಹಚ್ಚುವ ಬದಲಾಗಿ ಮದುಮಗಳ ಹಿರಿಯ ಅಕ್ಕ ತನ್ನ ತಂಗಿಗೆ ಮದರಂಗಿ ಹಚ್ಚುತ್ತಿದ್ದಳು. ಸಂಬಂಧಿಕರಲ್ಲಿ ಅಥವಾ ಸ್ನೇಹಿತರಲ್ಲಿ ಯಾರಿಗಾದರೂ ಮದರಂಗಿ ಹಚ್ಚಲು ಬರುವವರಿದ್ದರೆ ಅವರನ್ನು ಕರೆಸಿ ಮದರಂಗಿ ಹಚ್ಚುವ ಕ್ರಮವೂ ಈಗ ರೂಢಿಯಲ್ಲಿದೆ. ಅಲ್ಲದೆ ನೆರೆಕರೆಯವರಿಗೆಲ್ಲ ವಿಶೇಷ ಆಹ್ವಾನ ನೀಡಲಾಗುತ್ತಿದ್ದು, ನವವಿವಾಹಿತೆಯರು ಮತ್ತು ಮೈನೆರೆದ ಹೆಣ್ಮಕ್ಕಳು ಹಾಜಗಾಗುತ್ತಿದ್ದರು. ಮದುಮಗಳ ತಲೆ ತುಂಬಾ ಮಲ್ಲಿಗೆ ಹೂವಿನಿಂದ ತುಂಬಿದ್ದು ಅಲ್ಲೆಲ್ಲಾ ಪರಿಮಳ ಹರಡಿರುತ್ತದೆ. ಕೈ ಕೊಟ್ಟು ಪ್ಹಾಟ್ ಹಾಡುವ ಹೆಂಗಸರು ತಾಳಕ್ಕೆ ತಕ್ಕ ಸರಿಯಾಗಿ ಚಪ್ಪಾಳೆ ತಟ್ಟುತ್ತಾ.....ಹಾಡುತ್ತಾ....ರಂಜನೀಯ ವಾತಾವರಣ ನಿರ್ಮಿಸುತ್ತಾರೆ.

**ಮೋತುಬಲೆ:–** ಮೋತುಬಲೆ ಬ್ಯಾರಿಗಳ ವಿಶಿಷ್ಟ ಆಚರಣೆಗಳಲ್ಲಿ ಒಂದು. ಇದು ಮದುಮಗಳ ಮುಖ ಲಕ್ಷಣದ ಶುಭ ಸೂಚಕವೂ ಹೌದು.
ಮದುಮಗಳನ್ನು ಖಾಯಿಂತ್ ನೀರಿನಲ್ಲಿ ಸ್ನಾನಮಾಡಿ ವಲು ಮಾಡಿಸಿದ ನಂತರ ಬೆಲೆ ಬಾಳುವ ಕುರ್ಚಿಯಲ್ಲಿ ಕೂರಿಸಲಾಗುತ್ತದೆ. ಮುಖವಿಡಿ ಬೀಳಿ ಬಣ್ಣದ ವಸ್ತ್ರದಿಂದ ಮುಚ್ಚಲ್ಪಟ್ಟಿದ್ದು, ಆವಾಗ ಅವಳು ಗಚ್ಚಿ ಸೀರೆ ಮತ್ತು ಬುಟ್ಟೆ ಕುಪ್ಪಾಯವನ್ನು ಧರಿಸುತ್ತಾಳೆ. ಮದುಮಗಳ ಮಾತೃ ಸಂಬಂಧಿಗಳಲ್ಲಿ ಒಬ್ಬಳು ಅವಳ ತಲೆಗೂದಲನ್ನು ನಾಟಕೀಯವಾಗಿ ಮುಟ್ಟಿ ಮುಂಭಾಗದ ತಲೆಗೂದಲು, ಹಣೆಯ ರೋಮ, ಪೆರಡಿ (ಕತ್ತಿನ ಮುಂಭಾಗ)ಯ ರೋಮ ಮತ್ತು ಮುಂಗಾಲು ಹಾಗೂ ಮುಂಗೈನ ರೋಮವನ್ನು ಬಾಳ್‌ನಿಂದ ತೆಗೆಯುವುದಕ್ಕೆ ಮೋತುಬಲೆ ಎನ್ನುವರು.

**ಖಾಯಿಂತ್ (ನಿಖಾಹ್):–** ಪ್ರಾಚೀನ ಕಾಲದಲ್ಲಿ ನಿಖಾಹ್ ಸ್ಥಳೀಯ ಪಳ್ಳಿಯಲ್ಲಿ ನಡೆಯುತ್ತಿತ್ತು. ಅದರೆ ಇಂದು ವರನ ಮನೆಯಲ್ಲಿ ನಡೆಯುತ್ತದೆ.

ವಧುವಿನ ತಂದೆ ಅಥವಾ ಸಂಬಂಧ ಪಟ್ಟವರಲ್ಲಿ ಒಬ್ಬರು ಮದುಮಗಳ ಬಳಿ ಬಂದು 'ಮಗಳೇ ನಾನು ನಿನಗೆ ನಿಖಾಹ್ ಕಲ್ಪಿಸಿಕೊಡುತ್ತೇನೆ. ನಿನ್ನ ಒಪ್ಪಿಗೆಯಾ' ಎಂದು. ಮೂರು ಬಾರಿ ಕೇಳಿ ಅವರ ಸಮ್ಮತಿಯ ಮೇರೆಗೆ

ವರನ ಮನೆಯತ್ತ ಹೊರಡಲು ಮುಂದಾಗುತ್ತಾರೆ.

ವರನ ಮನೆಗೆ ಕಾಲಿಟ್ಟ ವಧುವಿನ ಕಡೆಯವರನ್ನು ಅಲ್ಲಿ ಸೇರಿದ್ದ ಉತ್ಸಾಹಿಗಳೆಲ್ಲಾ ಆದರದಿಂದ ಸ್ವಾಗತಕೋರುವುದು ವಾಡಿಕೆ.

ನಂತರ ಮದುಮಗ ತನ್ನ ತಂದೆ–ತಾಯಿ ಮತ್ತು ನೆರೆದಿದ್ದ ತನ್ನೂರಿನವರ ಆಶೀರ್ವಾದ ಪಡೆದು 'ವಲು' ಮಾಡಿ ಸೌಗಂಧಪೂರಿತವಾದ ಬಟ್ಟೆಬರೆ (ಬಿಳಿ ಬಣ್ಣ) ಧರಿಸಿ ಸಭೆಯ ಮುಂದೆ ಬಂದು 'ಸಲಾಂ'' ನುಡಿಯುತ್ತಾನೆ.

ನಂತರ ವಿಶೇಷ ಅಲಂಕೃತ ಮಂಚದ ಮೇಲೆ ವರ ಮತ್ತು ವಧುವಿನ ತಂದೆ ಎದುರು ಬದುರಾಗಿ ಕೂತು ಪರಸ್ಪರ ಕೈ ಕುಲುಕಿ ಚುಂಬಿಸುತ್ತಾರೆ. ಬಳಿಕ ವರನ ಜಮಾತ್‌ಗೆ ಸೇರಿದ ಮಸೀದಿಯ ಖತೀಬರು ಅವರೊಳಗೆ ಖಾಯಿನ್‌ನ ಧ್ವನಿ ಮೊಳಗಿಸುತ್ತಾರೆ. ಆ ಮುನ್ನ ಎರಡೂ ಕಡೆಯ ಜಮಾತಿನ ದಾಖಲಾತಿ ಪಟ್ಟಿಯಲ್ಲಿ ವಧು–ವರರ ಊರು, ಹೆಸರು, ತಂದೆ–ತಾಯಿಗಳ ಹೆಸರು ಮತ್ತು ಇಬ್ಬರು, ಸಾಕ್ಷಿಗಳ ಸಹಿಯನ್ನು ಸ್ಥಳೀಯ ಮುಕ್ರಿ ದಾಖಲು ಮಾಡುತ್ತಾರೆ.

ಖಾಯಿಂತ್ ಆದ ನಂತರ ಮದುಮಗನಿಗೆ ಆಸಕ್ತರು ಹೂಮಾಲೆ ಹಾಕುತ್ತಾರೆ ಮತ್ತು ಪರಸ್ಪರ ಆಲಂಗಿಸುತ್ತಾರೆ ಹೀಗೆ ಅಲಂಗಿಸುತ್ತಾ ಬಂದಂತೆ ಮದುಮಗನ ಅಲಿಯ (ಭಾವ) ಹೂಮಾಲೆ ಹಾಕುತ್ತಾನೆ. ಇದಕ್ಕೆ 'ಬಂದಿ' ಎನ್ನಲಾಗುತ್ತದೆ. ಬಳಿಕ ಬೆಲೆಬಾಳುವ ವಾಚ್ ಕಟ್ಟುತ್ತಾನೆ.

ಖಾಯಿಂತ್ ಆದ ಕೂಡಲೇ ಹೆಣ್ಣಿನ ಕಡೆಯಿಂದ ಬಂದವರಿಗೆಲ್ಲ ಭೋಜನ ಕೂಟವು ನಡೆಯುತ್ತದೆ. ಹಿಂದೆ ಶ್ರೀಮಂತರು ತಮ್ಮ ಮದುವೆ ಸಮಾರಂಭಗಳಿಗೆ ನೈಚೋರು (ತುಪ್ಪದೂಟ), ಸಾಮಾನ್ಯ ಜನರು ಕೋಳಿ ಚೋರು (ಕೋಳಿಯೂಟ) ಅನ್ನು ಮಾಡುತ್ತಿದ್ದರು. ಆದರೆ ಅದಿಂದು ಕಣ್ಮರೆಯಾಗುತ್ತಿದ್ದು, ಅದ ಸ್ಥಾನವನ್ನು ಕುಷ್ಕ, ಬಿರಿಯಾನಿ ಆಕ್ರಮಿಸಿಕೊಂಡಿದೆ.

ಇಂದು ಬ್ಯಾರಿಗಳು ಹಾಲ್‌ಗಳಲ್ಲಿ ಮದುವೆ ನಡೆಸುತ್ತಾರಲ್ಲದೆ, ದಿಬ್ಬಣ ಮುಂತಾದ ಕೆಲವು ಕಟ್ಟುಪಾಡುಗಳನ್ನು ದೂರಕ್ಕೆ ತಳ್ಳಿ ಆಧುನಿಕ ವೈಯಾರತೆಯಲ್ಲಿ ಮೆರೆಯುತ್ತಿದ್ದಾರೆ.

**ಬೀಟ್ ಕೂಟುರೆ (ಗಂಡು ಹೆಣ್ಣು ಒಗ್ಗೂಡಿಸುವುದು):–** ನಿಖಾಹ್ ಆದ ಮೇಲೆ ಮದುಮಗನು ಮದುಮಗಳ ಮನೆಗೆ ಹೋಗಬೇಕಾಗುತ್ತದೆ. ಹಾಗೆ ಹೋಗುವ ಮುನ್ನ ಮತ್ತೊಮ್ಮೆ ತನ್ನ ತಂದೆ ತಾಯಿಯ ಆಶೀರ್ವಾದ ಪಡೆಯ ಬೇಕಾಗುತ್ತದೆ.

ಮದುಮಗ ಅಂದದ ಕೋಟು–ಪ್ಯಾಂಟ್ (ಬಟ್ಟ–ಬರೆ) ಧರಿಸಿ ಅಲಂಕೃತ ಕುದುರೆಯ ಮೇಲೇರಿ ತನ್ನ ಗೆಳೆಯರು, ಎಳೆಯ ಮಕ್ಕಳು ಮುಂತಾದವರನ್ನು ಒಳಗೊಂಡ ದಿಬ್ಬಣದೊಂದಿಗೆ ಕೋಲ್ ಕಲಿ, ತಾಲೀಮು, ಬ್ಯಾಂಡ್ ವಾದ್ಯದ ಗೌಜಿಯಲ್ಲಿ, ಹಾಡಿನ ಅಬ್ಬರದಲ್ಲಿ ಮದುಮಗಳ ಮನೆಗೆ ಕಾಲಿಡುವುದು ರೂಢಿ.

ಹಿಂದೆ ಶ್ರೀಮಂತ ಕುಟುಂಬದಿಂದ ಬಂದ ಮದುಮಗ ಕುದುರೆ ಗಾಡಿಯಲ್ಲೂ, ಮಧ್ಯಮ ವರ್ಗದವನು ಎತ್ತಿನ ಗಾಡಿಯಲ್ಲೂ, ಶ್ರೀಸಾಮಾನ್ಯನು ನಡೆದುಕೊಂಡು ಬರುತ್ತಿದ್ದರು. ಇಂದು ಕೋಲ್ ಕಲಿ, ಬ್ಯಾಂಡ್ ಸ್ಥಾನವನ್ನು ದಪ್ಪ್ ಆಕ್ರಮಿಸಿಕೊಂಡಿದೆ.

ಮದುಮಗನು ಮದುಮಗಳ ಮನೆಯ ದಾರಂದ ದಾಟುವಷ್ಟರಲ್ಲಿ ಮದುಮಗಳ ತಮ್ಮ ಅಥವಾ ಸಂಬಂಧಿ ಹುಡುಗ ಅಲ್ಲೇ ಹಿತ್ತಾಳ ಚೊಂಬೊಂದರಲ್ಲಿ ಹಾಲು ಹಿಡಿದು ನಿಂತಿರುತ್ತಾನೆ. ಹಾಗೆಯೇ ಮದುಮಗ ಅದಕ್ಕೆ ಚಿನ್ನದ ಮೊದರಿ ಅಥವಾ ಸರವನ್ನು ಹಾಕುತ್ತಿದ್ದಂತೆಯೇ ಹುಡುಗನು ಸ್ವಲ್ಪ ಹಾಲನ್ನು ಮದುಮಗನ ಕಾಲಿಗೆ ಸುರಿಯುತ್ತಾನೆ.

ಮುಂದೆ ಮದುಮಗನು ಅಲಂಕೃತ ಕುರ್ಚಿಯಲ್ಲಿ ಕೂತಿದ್ದ ಮದುಮಗಳ ಬಳಿ ಸಾಗಿ ಪೂಮಾಲೆ (ಹೂವಿನ ಹಾರ) ಅಥವಾ ವಾಚನ್ನು ಕಟ್ಟುತ್ತಾನೆ. ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಹೆಂಗಸರು, ಎಳೆಯ ಮಕ್ಕಳು ಅಲ್ಲಾಹು–ಅಕ್ಬರ್ ಎಂದು ಧ್ವನಿ ಮೊಳಗಿಸುತ್ತಾರೆ. ಬ್ಯಾರಿಗಳು ಈ ವಿಶಿಷ್ಟ ಆಚರಣೆಗೆ 'ಬೀಟ್ ಕೂಟುರೆ' ಎನ್ನುವರು.

ಮದುಮಗ ಮದುಮಗಳ ಕುತ್ತಿಗೆಗೆ ಮಾಲೆ ಹಾಕಿದ ಬಳಿಕ ಅಲ್ಲೇ ತನಗಾಗಿ ವಿಶೇಷ ಅಲಂಕೃತ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ. ಅಷ್ಟರಲ್ಲಿ ಮದುಮಗಳ ಎಳೆಯ ತಂಗಿ ಕುಡಿಯಲು ಹಾಲನ್ನು ತಂದು ಕೊಡುವಳು. ಮದುಮಗನು ನಾಟಕೀಯವಾಗಿ ಅದನ್ನು ಸ್ವಲ್ಪ ಕುಡಿದು ತನ್ನ ಪತ್ನಿಗೆ ಕುಡಿಯಲು ಕೊಟ್ಟು ಅಲ್ಲಿಂದ ಹೊರಬರುತ್ತಾನೆ.

**ಕುಟ್ಟು ತನ್ನಿ:**– ಮದುಮಗನು ಮದುಮಗಳ ಮನೆಗೆ ಬಂದ ಮೇಲೆ ಮದುಮಗಳು ತನ್ನನ ಗಂಡನ ಮನೆಗೆ ಕಳುಹಿಸಿಕೊಡಲು ಸಜ್ಜ ನಡೆಯುತ್ತದೆ. ತನ್ನ ಗಂಡನ ಮನೆಯ ಹೊಸ್ತಿಲು ದಾಟಿ ದಾರಂದದ ಬಳಿ ಹೋದಾಗ ಅವಳ ಮಾಮಿ (ಅತ್ತೆ)ಯು ಒಂದು ಬಟ್ಟಲಿಗೆ ಒಂದಿಷ್ಟು ಬೂದಿ ಮತ್ತು ಅರಸಿನ ಹುಡಿ ಹಾಕಿ ನೀರಲ್ಲಿ ಕಲಸಿಟ್ಟು ಅಲ್ಲಿ ನಿಂತಿರುತ್ತಾಳೆ. ಕಲಸಿಟ್ಟ ನೀರನ್ನು ಅತ್ತೆಯು ಪುದಿಯ ಪೆಣ್ಣಿನ (ಮದುಮಗಳ) ತಲೆಯ ಸುತ್ತ ಮೂರು ಬಾರಿ

ಸುತ್ತುತ್ತಾ ಜೊತೆಗೆ ಸ್ವಲಾತ್ ಹೇಳುತ್ತಲೇ ಅವಳ ಮೈಗೆ ಸ್ವಲ್ಪ ಸಿಂಪಡಿಸುತ್ತಾಳೆ. ಇದಕ್ಕೆ 'ಕುಟ್ಟು ತನ್ನಿ' ಎನ್ನುವರು.

ಕುಟ್ಟು ತನ್ನಿಗೆ ಇಸ್ಲಾಮಿನಲ್ಲಿ ಯಾವುದೇ ಸ್ಥಾನಮಾನ ಇಲ್ಲದಿದ್ದುದರಿಂದ ಕೆಲವರು ಇದನ್ನು ವಿರೋಧಿಸುತ್ತಾರೆ. ಆದರೆ ಪ್ರಾಚೀನ ಬ್ಯಾರಿಗಳು ತಮ್ಮ ಮದುವೆ ಸಮಾರಂಭಗಳಲ್ಲಿ ಇದಕ್ಕೆ ಮಹತ್ವ ಕಲ್ಪಿಸಿಕೊಟ್ಟು, ಇದೊಂದು ಸಂಪ್ರದಾಯವಾದುದರಿಂದ ವಿರೋಧಿಗಳ ನಡುವೆಯೂ ಇದನ್ನು ಅಚರಿಸುವ ಬ್ಯಾರಿಗಳಿಗೆ ಕೊರತೆಯಿಲ್ಲ.

**ತಾಲ:**– 'ತಾಲ' ಅಂದರೆ ನವದಂಪತಿಗಳ ಮೊದಲ ರಾತ್ರಿ ಮದುಮಗ ತನ್ನ ಮೊದಲ ರಾತ್ರಿಯನ್ನು ಹೆಂಡತಿಯ ಮನೆಯಲ್ಲಿ ಕಳೆಯುಬೇಕಾಗುತ್ತದೆ.

ಹಿಂದೆ ಈ ತಾಲವು ಮದುವೆ ಮರುದಿವಸ ರಾತ್ರಿ ನಡೆಯುತ್ತಿತ್ತು. ಆದರೆ ಇಂದು ಬ್ಯಾರಿಗಳ ಮದುವೆಯು ಹಗಲು ಹೊತ್ತಲ್ಲಿ ನಡೆಯುತ್ತಿದ್ದು ತಾಲವನ್ನು ಆ ದಿನವೇ ಮಾಡಲಾಗುತ್ತದೆ. ಮದುಮಗನು ತನ್ನ ಬಂಧು ಮಿತ್ರರ ಜತೆಗೂಡಿ ಮದುಮಗಳ ಮನೆಗೆ ಬರುತ್ತಾನೆ. ಹೀಗೆ ಬರುವಾಗ ಮದುಮಗ ಹಲ್ವಾ, ಬಾಳೆ, ಮಿಠಾಯಿಗಳನ್ನು ತರಲೇಬಾಕಾಗುತ್ತದೆ.

**ರೂಮುರೆ ಮರ್ಯಾದಿ:**– ಗ್ರಾಮೀಣ ಪ್ರದೇಶದ ಮದುಮಗನು ತನ್ನ ತಾಲದಂದು ಅತ್ತೆಯ ಮನೆ ಅಥವಾ ಹಾಸಿಗೆ ಅಥವಾ ಶೃಂಗರಿಸಿದ ಕೋಣೆಯಲ್ಲಿ ಮಲಗಬೇಕಾಗುತ್ತದೆ. ಅದರ ಮರ್ಯಾದೆಗೋಸ್ಕರ ತಲೆದಿಂಬಿನ ಅಡಿಯಲ್ಲಿ ಸ್ವಲ್ಪ ಹಣ ಇಡುವುದು ರೂಢಿಯಾಗಿತ್ತು. ಇದಕ್ಕೆ ರೂಮೂರೆ ಮರ್ಯಾದಿ ಎನ್ನಲಾಗುತ್ತದೆ.

**ನೈಡೆ ಕಂಜಿ( ತುಪ್ಪದ ಗಂಜಿ):**–ಇದನ್ನು ತಾಲದ ಮರುದಿವಸ ಬೆಳಿಗ್ಗೆ ಅತ್ತೆ ತನ್ನ ಅಳಿಯನಿಗೆ ವಿಶೇಷ ಅಡುಗೆಯಾಗಿ ಬಳಸುವ ಒಂದು ಪದ್ಧತಿ. ಈ ವಿಶಿಷ್ಟ ಪದ್ಧತಿಯ ಪ್ರಕಾರ ಎಲ್ಲರೂ ಒಂದು ತಟ್ಟೆಯಲ್ಲಿ ತುಪ್ಪದ ಗಂಜಿ ಹಾಕಿ ಅದರ ಸುತ್ತಲೂ ಕೂತು ಉಣ್ಣಬೇಕಾಗುತ್ತದೆ. ಈ ಪದ್ಧತಿಯನ್ನು ಈಗಲೂ ಹಲವು ಗ್ರಾಮೀಣ ಪ್ರದೇಶದ ಬ್ಯಾರಿಗಳು ತಮ್ಮ ಮದುವೆಯ ಅವಿಭಾಜ್ಯ ಅಂಗಗಳಲ್ಲಿ ಒಂದಾಗಿಸಿದ್ದಾರೆ.

**ಬಳೆ ಬೆಯ್ಕ್‌ರೆ:**– ತಾಲದಂದಿನ ಸವಿಯುಂಡ ಮದುಮಗಳು ಮರುದಿವಸ ತನ್ನ ಗಂಡನ ಮನೆಗೆ ಹೋಗಬೇಕಾಗುತ್ತದೆ. ಮದುಮಗಳನ್ನು ಕರೆದುಕೊಂಡು ಹೋಗಲು ಗಂಡಿನ ಕಡೆಯಿಂದ ಒಂದಿಬ್ಬರು ಗಂಡಸರು ಹಾಗೂ ಹಲವಾರು ಸ್ತ್ರೀಯರು ಬರುತ್ತಾರೆ. ಹಾಗೇ ಬರುವಾಗ ಹೂವಿನ ಎಣ್ಣೆ, ಹೂ, ಕಾಡಿಗೆ

ಮತ್ತಿತರ ಅಲಂಕೃತ ವಸ್ತುಗಳನ್ನು ತಂದು ಸ್ವತಃ ತಾವೇ ಮದುಮಗಳನ್ನು ಶೃಂಗರಿಸುತ್ತಾರೆ.

ಮದುಮಗಳು ಗಂಡನ ಮನೆಗೆ ಹೋಗುವ ಆದಿನ ಎಳೆಯ ಹೆಣ್ಣು ಮಕ್ಕಳು, ನೆರೆಯ ಕನ್ಯೆಯರು, ಮೈ ನೆರೆದ ಹೆಣ್ಮಕ್ಕಳು, ಮತ್ತಿತರ ಸ್ತ್ರೀಯರು ಅಲ್ಲಿ ಉಪಸ್ಥಿತರಿದ್ದು ಅವರಿಗೆಲ್ಲಾ ಪುಕ್ಕಟೆಯಾಗಿ ಬಳೆಯನ್ನು ತೊಡಿಸಲಾಗುತ್ತದೆ. ಇದನ್ನು ಬಳೆ ಬೆಯ್ಕ್‌ರೆ ಎನ್ನುವರು.

**ಬಳೆ ಬೆಚ್ಚಿ ಕುಟ ಪೋಂಡೆ:**– ಮದುವೆ ಕಳೆದು ಮೂರು ದಿವಸದ ನಂತರ ಮದುಮಗಳನನು ತನ್ನ ಗಂಡನ ಮನೆಯಿಂದ ತವರು ಮನೆಗೆ ಕರೆತರಲು ಮದುಮಗಳ ಮನೆಯಿಂದ ಮದುಮಗನ ಮನೆಗೆ ಹಲವಾರು ಸ್ತ್ರೀಯವರು ಬರುತ್ತಾರೆ.

ಈ ಕಾರ್ಯಕ್ರಮ ಗಂಡಿನ ಮನೆಯಲ್ಲಿ ನಡೆಯುತ್ತದೆ. ಮದುಮಗನು ಬಳೆ ಮಾರುವವನನ್ನು ಸ್ವತಃ ತನ್ನ ಮನೆಗೆ ಕರೆತಂದು ಅಲ್ಲಿ ಸೇರಿದ ಎಲ್ಲಾ ಹೆಣ್ಣುಮಕ್ಕಳಿಗೆ ಬಳೆ ತೊಡಿಸುವ ವ್ಯವಸ್ಥೆ ಮಾಡುತ್ತಾನೆ.

ಹೀಗೆ ಬಳೆ ತೊಟ್ಟ ಮದುಮಗಳು ಅವಳ ಕಡೆಯಿಂದ ಬಂದ ಸ್ತ್ರೀಯರು ಶೃಂಗರಿಸಿ ತನ್ನ ತವರೂರಿಗೆ ಕರೆದುಕೊಂಡು ಹೋಗುವುದಕ್ಕೆ 'ಬಳೆ ಬೆಚ್ಚಿ ಕುಟ ಪೋಂಡೆ'' ಎನ್ನುವರು. ಆದರೆ ಈ ಆಚರಣೆ ಬ್ಯಾರಿಗಳಿಂದ ದೂರವಾಗುತ್ತಿದ್ದು ಸಂಸ್ಕೃತಿಯ ನಾಶಕ್ಕೆ ಹೇತುವಾಗಿದೆ.

ಸಾಮಾನ್ಯವಾಗಿ ಮದುಮಗ – ಮದುಮಗಳಿಗೆ ನೆರೆಕೆಯವರು ಆಪ್ತ ಸಂಬಂಧಿಗಳು 'ದಾವತ್' ಕೊಟ್ಟು ವಿಶೇಷ ಔತಣ ಕೂಟ ಏರ್ಪಡಿಸುವ ಕ್ರಮ ಈಗ ಬ್ಯಾರಿಗಳಲ್ಲಿ ಬಳಕೆಗೆ ಬಂದಿದೆ. ಈ ವಿಶಿಷ್ಟ ಕ್ರಮಕ್ಕೆ ಬ್ಯಾರಿಗಳು ಬಿರ್‌ಂದ್ (ಅತಿಥಿ ಸತ್ಕಾರ) ಎನ್ನುವರು.

**ಪುದಿಯಾಪ್ಲೆ ಪಳ್ಳಿಗ್ ಪೋಂಡೊ:**– ಮದುಮಗನು ತನಗೆ ಸಿಗುವ ಮೊತ್ತ ಮೊದಲ ಜುಮ್ಮಾ ನಮಾಜನ್ನು ತನ್ನ ಹೆಂಡತಿಯ ಊರಿನ ಜುಮ್ಮಾ ಮಸ್ಜಿದ್‌ಗೆ ಹೋಗಿ ನಿರ್ವಹಿಸಬೇಕೆಂಬ ಸಾಮಾನ್ಯ ರೂಢಿ ಇತ್ತು. ಆವಾಗ ಮದುಮಗನ ಜತೆಗೂಡಿ ಅವನ ಗೆಳೆಯರು, ಭಾವಂದಿರು, ಸಂಬಂಧಿಕರು ಹೋಗುತ್ತಾರೆ. ಇದಕ್ಕೆ 'ಪುದಿಯಾಪ್ಲೆ ಪಳ್ಳಿಗ್ ಪೋಂಡೊ'' ಎನ್ನಲಾಗುತ್ತದೆ.

**ಅಪ್ಪತ್ತೆ ಮಂಜೆಲ:**– ಕನ್ನಡದ ಬಯಕೆ ಅಥವಾ ಸೀಮಂತವು ಬ್ಯಾರಿ ಭಾಷೆಯಲ್ಲಿ ಅಪ್ಪತ್ತೆ ಮಂಜೆಲವಾಗಿ ರೂಪಾಂತರಗೊಂಡಿದೆ. ಇದರ ಮುಖ್ಯ ಸಮಾರಂಭ ಪತಿಯ ಮನೆಯಲ್ಲಿ ನಡೆಯುತ್ತದೆ. ಮದುಮಗಳಿಗೆ ಏಳು

ತಿಂಗಳಾದೊಡನೆ ಒಳ್ಳೆಯ ದಿನ ನೋಡಿ ಅಪ್ಪತ್ತೆ ಮಂಜೆಲ ಮಾಡುವ ಏರ್ಪಾಡು ನಡೆಯುತ್ತದೆ.

ಮದುಮಗಳ ತವರು ಮನೆಯಿಂದ ಹತ್ತಾರು ಸ್ತ್ರೀಯರು ಪೂವೆಣ್ಣೆ, ಮೋದರ, ಸರ ಹೀಗೆ ಚಿನ್ನಾಭರಣ ಉಡುಗೊರೆಯಾಗಿ ಹಿಡಿದುಕೊಂಡು ಗಂಡಿನ ಮನೆಗೆ ಬರುತ್ತಾರೆ. ಗಂಡಿನ ಮನೆಯಲ್ಲಿ ವಿಶೇಷ ಔತಣಕೂಟ ನಡೆಯುತ್ತದೆ.

**ಪೇರ್ ಬೆಯ್ಕ್‌ರೆ (ನಾಮಕರಣ ಮಾಡುವುದು)**:– ಮಗುವಿಗೆ ಜನ್ಮವಿತ್ತ ಏಳನೇ ದಿನದಲ್ಲಿ ಈ ಕಾರ್ಯಕ್ರಮ ಮಾಡಲಾಗುತ್ತದೆ. ಆ ದಿನ ನೆರೆಕರೆಯವರಿಗೆ ಮಿಠಾಯಿ ಕಡ್ಲೆ ವಿತರಿಸುವುದು ನಾಮಕರಣ ಕಾರ್ಯಕ್ರಮದ ವಿಶೇಷತೆಯಾಗಿರುತ್ತದೆ.

**ಕಜಂಬು (ತಲೆಕ್ಪೌರ)**:– ಮಗು ಹುಟ್ಟಿದ ಹದಿನೈದು ಅಥವಾ ಮೂವತ್ತರಂದು ಹೆಣ್ಣು–ಗಂಡು ಭೇದವಿಲ್ಲದೆ ಕಜಂಬು ಮಾಡಲಾಗುತ್ತದೆ. ಆ ದಿನ ನೆರೆಕರೆ ಮತ್ತು ಹತ್ತಿರದ ಸಂಬಂಧಿಕರುಗಳಿಗೆ ಕರೆ ಹೋಗಲಿರುವುದರಿಂದ ವಿಶೇಷ ಔತಣಕೂಟವೂ ನಡೆಯುತ್ತದೆ.

ಕಜಂಬು ಮಾಡಿದ ತಲೆಗೂದಲನ್ನು ತೋಡು, ನದಿ, ಸಮುದ್ರಗಳಿಗೆ ಬಿಟ್ಟು ಬಿಡಲಾಗುತ್ತದೆ. ಕೆಲವರು ಅದನ್ನು ತೆಂಗಿನ ಮರಕ್ಕೆ ಕಟ್ಟಿ ಬಿಡುತ್ತಾರೆ. ಇನ್ನೂ ಕೆಲವು ಶ್ರೀಮಂತ ಬ್ಯಾರಿಗಳು ಆ ಕೂದಲನ್ನು ತೂಗಿ ನೋಡಿ ಅಷ್ಟು 'ಗ್ರಾಂ' ತಕ್ಕಂತೆ ಬಂಗಾರವನ್ನು ಪಳ್ಳಿ ಅಥವಾ ಮುಖಾಮಗಳಿಗೆ ಹರಕೆ ಸಲ್ಲಿಸುತ್ತಾರೆ.

**ನಾಪೋವುರೆ ಕುಲಿ:** ಮಗುವಿಗೆ ಜನ್ಮವಿತ್ತ ಬಾಣಂತಿ ತನ್ನ 40ನೇ ದಿನದಲ್ಲಿ ವಿಶೇಷ ಸ್ನಾನ ಮಾಡುತ್ತಾಳೆ. ಇದಕ್ಕೆ ನಾಪೋವುರೆ ಕುಲಿ ಎನ್ನುವರು.

ಆಗ ತಾನೆ ಹುಟ್ಟಿದ ಮಗುವಿನ ಜತೆಗೂಡಿ ಬಾಣಂತಿ ತನ್ನ ಗಂಡನ ಮನೆಗೆ ಹೋಗಬೇಕಾದುದು ಅನಿವಾರ್ಯ ತಾನೆ. ಹಾಗೆ ಹೋಗುವ ಮೊದಲು ಸ್ನಾನ ಮಾಡುವುದು ಸಾಮಾನ್ಯ. ಬಾಣಂತಿ ತನ್ನ ಮಗುವಿನ ಜತೆಗೂಡಿ ನಲ್ವತ್ತನೆ ದಿನದಲ್ಲಿ ಗಂಡನ ಮನೆಗೆ ಹೋಗುವುದನ್ನು ರೂಢಿಯಾಗಿಸಿದ ಬ್ಯಾರಿಗಳು ಆ ದಿನ ಸ್ನಾನ ಮಾಡುವುದಕ್ಕೆ 'ನಾಪೋವುರೆ ಕುಲಿ' ಎನ್ನುವರು.

**ಕಾವ್ (ಕಾದ್) ಕುತ್ತುರೊ ಮಂಜೆಲ**:– ಹೆಣ್ಣುಮಗುವಿಗೆ ಆರು–ಹತ್ತು ತಿಂಗಳಲ್ಲಿ ಅಥವಾ ಒಂದು ಎರಡು ವರ್ಷದಲ್ಲಿ ಮೊದಲ ಬಾರಿಗೆ ಕಾವ್ ಕುತ್ತಲು (ಕಿವಿ ಚುಚ್ಚಲು) ಬ್ಯಾರಿಗಳು ಮುಂದಾಗುತ್ತಾರೆ. ಸಾಮಾನ್ಯವಾಗಿ ಇದನ್ನು ತುಳುನಾಡಿನ 'ಆಚಾರಿ' ಯು ಬಂದು ಮಾಡುತ್ತಾನೆ. ಬ್ಯಾರಿಗಳು ಇವನನ್ನು ಕಾವ್ ಕುತ್ತುರೊ ಆಚಾರಿ ಎನ್ನುವರು ಹಿಂದೆ ಈ ಕಾವ್ ಕುತ್ತುರೊ ಮಂಜೆಲವು ವಿಶೇಷ ಸಡಗರದಿಂದ ಜರಗುತ್ತಿತ್ತು. ಆಭರಣ ಪ್ರಿಯರಾಗಿರುವ ಹೆಣ್ಣು ಮೊತ್ತ

ಮೊದಲ ಬಾರಿಗೆ ತನ್ನ ಮೈಗೆ ಚಿನ್ನಾಭರಣ ತೊಡುವ ಕಾರಣ ಆ ದಿನದಲ್ಲಿ ಹಾಡುವುದು ಕುಣಿಯುವುದು, ಸಂತೋಷ ಪಡುವುದು ಸಾಮಾನ್ಯವಾಗಿತ್ತು.

**ಕುಟ್ಟಿಬೈಲ್ (ಶಂಕು ಸ್ಥಾಪನೆ):**– ಬ್ಯಾರಿಗಳು ತಮ್ಮ ಮನೆ ಮಠ, ಅಂಗಡಿ ಮುಂತಾದವುಗಳನ್ನು ಕಟ್ಟುವ ಮೊದಲು ಕುಟ್ಟಿಬೈಲ್ ಮಾಡಿಸುವರು. ಅಂದರೆ ಮನೆ ಅಥವಾ ಇನ್ನಿತರ ಕಟ್ಟಡಗಳನ್ನು ಕಟ್ಟುವ ಜಾಗದಲ್ಲಿ ಮಧ್ಯಭಾಗದಲ್ಲಿ ತೆನೆ ಇರುವ ಕುಟ್ಟಿಯನ್ನು ಹೊಡೆಯಲಾಗುತ್ತದೆ. ಇದಕ್ಕೆ ಪಾಲ್ ಕುಟ್ಟಿ ಎನ್ನತ್ತಾರೆ.

ಈ ಕುಟ್ಟಿ ಬೈಲ್ ಹೊಡೆದೊಡನೆ ಮುಕ್ರಿಯವರಿಂದ ಯಾಸೀನ್ ಪಠಣ ಮತ್ತು 'ದುಆ' ನೆರವೇರುತ್ತದೆ. ಇದಕ್ಕೆ ಪಳ್ಳಿಯ ಮುಕ್ರಿಯವರು ಒಳ್ಳೆಯ ದಿನ ಮತ್ತು ಸಮಯ ನಿಗದಿಪಡಿಸುವರು. ಸಾಮಾನ್ಯವಾಗಿ ಇದು ಪ್ರಾತಃಕಾಲದ ಸಮಯದಲ್ಲಿ, ಆದರೆ ಸುಬಹ್ ಬಾಂಗ್ ಮೊಳಗಿದ ನಂತರ ಹೊಡೆಯಲಾಗುತ್ತದೆ.

**ಅಗ ಒಕ್ಕೊಲು (ಗ್ರಹ ಪ್ರವೇಶ):**– ಬ್ಯಾರಿಗಳ ಗ್ರಹಪ್ರವೇಶವು ವೈಶಿಷ್ಟತೆಯನ್ನು ಪಡೆದಿದೆ. ಇವರ ಈ ಆಚರಣೆಯು ವಿಶೇಷ ಸಡಗರ, ಸಂಭ್ರಮದಿಂದ ನಡೆಯುತ್ತದೆ. ನೆರೆಕರೆ ಹಾಗೂ ಸಂಬಂಧಿಕರಿಗೆ ವಿಶೇಷ ಕರೆ ಹೋಗುತ್ತದೆ. ಬಂದ ಅತಿಥಿಗಳಿಗೆಲ್ಲಾ ಭೋಜನ ಕೂಟವು ಭರದಿಂದ ಸಾಗುತ್ತದೆ. ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಉಡುಗೊರೆ ಸಿಗುತ್ತದೆ.

ಸಾಮಾನ್ಯವಾಗಿ ಈ ಅಗ ಒಕ್ಕೊಲು ಕಾರ್ಯಕ್ರಮ ಪ್ರಾತಃ ಕಾಲದ ಸಮಯದಲ್ಲಿ ನಡಯುತ್ತದೆ. ಸುಬಹ್ ಬಾಂಗ್ ನಂತರ ಆ ಮನೆಯಲ್ಲಿ ನಮಾಜನ್ನು ಮಾಡಲಾಗುತ್ತದೆ. ನಂತರ ಮನೆಯ ಒಡತಿ ಅಥವಾ ಸಂಬಂಧಪಟ್ಟ ಹಿರಿಯ ಮಹಿಳೆ ಹಾಲು ಬಿಸಿಮಾಡಿ ಉಕ್ಕೇರಿದ ಹಾಲನ್ನು ಸೇರಿದವರೆಗೆಲ್ಲಾ ಕುಡಿಯಲು ಕೊಡುತ್ತಾಳೆ. ಹಾಗೆ ಮುಕ್ರಿಯವರಿಂದ ಕುರಾನ್ ಪಾರಾಯಣ ಮತ್ತು ವಿಶೇಷ ದುಆ ನೆರವೇರುತ್ತದೆ. ಹೀಗೆ ಹೊಸ ಮನೆಯಲ್ಲಿ ಮೊದಲ ಬಾರಿಗೆ ಹಾಲು ಕುಡಿದ ನಂತರ ಕುಟುಂಬದ ಹಿರಿಯ ಸದಸ್ಯರೊಬ್ಬರು ಅಕ್ಕಿ ಮುಡಿಯನ್ನು ಮನೆಯ ಒಳಗೆ ಕೊಂಡೋಗಿ ಇಡುತ್ತಾರೆ. ತದನಂತರ ಮನೆಯೊಳಗೆ ಇಡುವ ಇತರ ಎಲ್ಲಾ ವಸ್ತುಗಳನ್ನು ಇಡಲಾಗುತ್ತದೆ.

**ಸುನ್ನತ್ ಮಂಜೆಲ:**– ಎಳೆಯ ಗಂಡು ಮಕ್ಕಳು ಎಳೆಯ ಪ್ರಾಯದಲ್ಲಿ ಸುನ್ನತ್ ಮಂಜೆಲಕ್ಕೆ ಒಳಗಾಗುತ್ತಾರೆ. ಇದನ್ನು ಕನ್ನಡದಲ್ಲಿ ಮುಂಜಿ ಮದುವೆ ಎನ್ನುವರು. ಈ ಮುಂಜಿ ಮದುವೆಯು ಇಸ್ಲಾಮಿ ಕರ್ಮಶಾಸ್ತ್ರವಾಗಿದ್ದು ಕಡ್ಡಾಯ ವಾಗಿದೆ.

ಸಾಮಾನ್ಯವಾಗಿ ಹಿಂದೆ ಈ ಮದುವೆಯು ಹುಡುಗನಿಗೆ ಏಳು ವರ್ಷ ತುಂಬುವುದರೊಳಗೆ ನಡೆಯುತ್ತಿತ್ತು. ಈ ಸುನ್ನತ್‌ನ್ನು ವಸನ್ (ಮುಸ್ಲಿಂ ಸಮುದಾಯದ ಕ್ಷೌರಿಕ) ನಿಂದ ನಡೆಯತ್ತದೆ.

ಸಂಬಂಧಪಟ್ಟವರು ಒಂದೆರಡು ಮುಡಿ ಅಕ್ಕಿಯ ಮೇಲೆ ಹುಡುಗನನ್ನು ಕೂರಿಸುವರು. ನಂತರ ಆತನ ಮುಖವನ್ನು ಬಲಭಾಗಕ್ಕೆ ತಿರುಗಿಸುತ್ತಲೆ, ವಸನ್ ಅಲ್ಲಾಹು – ಅಕ್ಬರ್ ಎನ್ನುತ್ತಾ ಮುಂಜಿ (ಶಿಶ್ನದ ಮುಂಭಾಗದ ಚರ್ಮವನ್ನು ಕತ್ತರಿಸುವುದು) ಮಾಡಿ ಆ ಹುಣ್ಣಿಗೆ ಬ್ಯಾಂಡೇಜ್ ಹಾಕುವರು. ಅದಲ್ಲದೆ ಚರ್ಮವನ್ನು ಬೂದಿಯಲ್ಲಿ ಬೆರೆಸಿ ತೆಂಗಿನ ಮರದ ಬುಡದಲ್ಲಿ ಹೂತು ಬಿಡಲಾಗುತ್ತದೆ. ಸುನ್ನತ್‌ಗೊಳಗಾದ ಹುಡುಗನ ಹುಣ್ಣಿಗೆ ಬಟ್ಟೆ–ಬರೆ ತಾಗದಂತೆ ಬಿಳಿ ವಸ್ತ್ರವು ಆತನ ಕತ್ತಿನ ಸುತ್ತ ಸುತ್ತಲ್ಪಟ್ಟಿರುತ್ತದೆ. ಆತನನ್ನು ನೋಡಲು ಬಂದು ಊರವರು, ಸಂಬಂಧಿಕರು ಕೈಯಲ್ಲಿ ಕವರ್(ಹಣ) ಕೊಡುವುದು ಸಾಮಾನ್ಯ. ಸುನ್ನತ್‌ಗೊಳಗಾದವರ ಹುಣ್ಣನ್ನು ಮೂರು, ಐದು, ಏಳು, ಒಂಭತ್ತು ಹೀಗೆ ಅದು ಒಣಗುವ ತನಕ ತೊಳೆಯಬೇಕಾಗುತ್ತದೆ. ಅದರಲ್ಲಿ ಮೂರನೇ ದಿವಸದಲ್ಲಿ ಮೊದಲ ಬಾರಿಗೆ ತೊಳೆಯುವ (ಮೂನುರೆ ಪುಣ್ಣು ಕಲ್‌ಗ್‌ರೆ) ಸಮಾರಂಭ ನಡೆಯುತ್ತದೆ. ಮುಂಜಿಗೆ ಒಳಗಾದ ಹುಡುಗನ ಹುಣ್ಣು ಒಣಗಿದ ಕೂಡಲೆ (ಶುಕ್ರವಾರ) ಪಳ್ಳಿಗೆ ಹೋಗಲಾಗುತ್ತದೆ. ಇದಕ್ಕೆ "ಸುನ್ನತ್ ಪುದಿಯಾಪ್ಲೋ ಪಳ್ಳಿಗೆ ಪೋಂಡೋ" ಎನ್ನುವರು.

ಆದರೆ ಈಗ ವಸನ್ ಸ್ಥಾನವನ್ನು ನಗರದ ಕೆಲ ವೈದ್ಯರುಗಳು ತುಂಬುತ್ತಿದ್ದು ಮನೆಯ ಬದಲು ಆಸ್ಪತ್ರೆಗಳಲ್ಲಿ ಮುಂಜಿಗೊಳಗಾಗಿ ಐದು ಅಥವಾ ಆರರಂದುಸುನ್ನತ್ ಪುದಿಯಾಪ್ಲೋಯಾಗಿ ಪಳ್ಳಿಗೆ ಹೋಗುತ್ತಾನೆ.

**ಬ್ಯಾರಿ ಸಂಘ ಸಂಸ್ಥೆಗಳು**

**1] ಝೀನತ್ ಬಕ್ಷ್ ಯತೀಂ ಖಾನಾ:** ಅನಾಥ ಮುಸ್ಲಿಂ ಮಕ್ಕಳನ್ನು ಸಮಾಜದಲ್ಲಿ ಯೋಗ್ಯ ನಾಗರಿಕರನ್ನಾಗಿಸುವ ಉದ್ದೇಶದಿಂದ ಸ್ಥಾಪಿಸಿದ್ದು ಇಲ್ಲಿ ಅವರಿಗೆ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ, ಆಹಾರ, ವಸ್ತ್ರ ವಸತಿ ಮುಂತಾದ ಸೌಕರ್ಯಗಳನ್ನು ಉದಾರವಾಗಿ ಒದಗಿಸಲಾಗುತ್ತದೆ. ಇದು 1981ರಿಂದಲೇ ಕಾರ್ಯಾಚರಿಸುತ್ತಿದೆ.

**2] ಜಮೀಯತುಲ್ ಫಲಾಹ್:–** ಮುಸ್ಲಿಂ ವಿದ್ಯಾರ್ಥಿಗಳ ಶಿಕ್ಷಣಕ್ಕೆ

ಪ್ರೋತ್ಸಾಹ ಕೊಡುವ ಗುರಿ ಹೊಂದಿದೆ. ಬಡವರಿಗೆ ಆರ್ಥಿಕ ನೆರವು, ಉದ್ಯೋಗ ನೆರವು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಮುಸ್ಲಿಂ ವಿದ್ಯಾರ್ಥಿಗಳಿಗಾಗಿ ಹೈಸ್ಕೂಲು ಮತ್ತು ಹಲವಾರು ಪ್ರೈಮರಿ ಶಾಲೆ, ಹಾಸ್ಟೆಲ್ ಗಳನ್ನು ಸ್ಥಾಪಿಸಲಾಗಿದೆ. ಇದು ಬಹುತೇಕ ಬ್ಯಾರಿಗಳಿಂದಲೇ ನಡೆಸಲ್ಪಡುತ್ತದೆ.

**3] ಮುಸ್ಲಿಂ ಸೆಂಟ್ರಲ್ ಕಮಿಟಿ:** ಕೋಮು ಗಲಭೆಯ ವೇಳೆ ನಷ್ಟಕ್ಕೆ ಒಳಗಾದವರಿಗೆ ನೆರವಾಗುವುದು, ಔಷದಿ ಚಿಕಿತ್ಸೆಗಳನ್ನು ಒದಗಿಸುವುದು, ನೈಸರ್ಗಿಕ ವಿಕೋಪ ಮತ್ತು ದುರಂತಗಳ ಸಂದರ್ಭಗಳಲ್ಲಿ ಸಂಬಂಧ ಪಟ್ಟವರಿಗೆ ನೆರವಾಗುವುದು. ಕೋಮು ಸಾಮರಸ್ಯವನ್ನು ವೃದ್ಧಿಪಡಿಸುವುದ ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹಿಸುವುದು. ಇತ್ಯಾದಿ ಇದರ ಕಾರ್ಯಾ ಚಟುವಟಿಕೆಗಳಾಗಿದೆ.

**4] ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್:–** ಈ ಸಂಸ್ಥೆಯು ಸರಕಾರ ದಿಂದಲೂ, ವಿದೇಶಿ ಮುಸ್ಲಿಂ ಸಂಘ ಸಂಸ್ಥೆಗಳಿಂದ ಸಿಗುವ ವಿದ್ಯಾರ್ಥಿ ವೇತನದ ಮಾಹಿತಿ ಕೊಡುತ್ತಿದೆ. ಇನ್ನೂ ಮದುವೆಯಾಗದೆ ಮೂವತ್ತು ವರ್ಷಕ್ಕಿಂತ ಮೇಲ್ಪಟ್ಟ ಬ್ಯಾರಿ ಹೆಣ್ಣು ಮಕ್ಕಳ ಮದುವೆ ಯೋಜನೆ ಮತ್ತು ನೆರವೇರಿಕೆ ಐ.ಎ.ಎಸ್., ಕೆ.ಎ.ಎಸ್. ಇತ್ಯಾದಿ ಪರೀಕ್ಷೆಗಳ ಬಗ್ಗೆ ತರಬೇತಿ ಮತ್ತು ಮಾರ್ಗದರ್ಶನ, ಪ್ರತಿಭಾವಂತ ಬ್ಯಾರಿ ವಿದ್ಯಾರ್ಥಿಗಳಿಗಾಗಿ ನೋಡಲ್ ಏಜೆನ್ಸಿ ತೆರೆದಿರುವುದು, ಸ್ತ್ರೀಯರಿಗೆ ಹೊಲಿಗೆ ಯಂತ್ರ, ಪುರುಷರಿಗೆ ಜೀವನೋಪಾಯ ಕ್ಕಾಗಿರುವ ಸವಲತ್ತುಗಳನ್ನು ಒದಗಿಸುವುದು ಇತ್ಯಾದಿ.

**5] ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ:–** ಕರ್ನಾಟಕ ಸರಕಾರವು 2007ನೇ ಇಸವಿಯಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಎನ್ನುವ ಒಂದು ಸ್ವಾಯತ್ತ ಸಂಸ್ಥೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಘೋಷಣೆ ಮಾಡಿತು. 2008ನೇ ಇಸವಿಯಲ್ಲಿ ಇದನ್ನು ವಿದ್ಯುಕ್ತಗೊಂಡು ಸ್ಥಾಪನೆಗೊಳಿಸ ಲಾಯಿತು. 2009ರಲ್ಲಿ ಎಂ.ಬಿ. ಅಬ್ದುರ್ರಹ್‌ಮಾನ್‌ರನ್ನು ಪ್ರಥಮ ಅಧ್ಯಕ್ಷರಾಗಿ ನೇಮಕ ಮಾಡಿತು. 2012ರಲ್ಲಿ 2ನೇ ಅಧ್ಯಕ್ಷರಾಗಿ ರಹೀಮ್ ಉಚ್ಚಿಲ್‌ರನ್ನು ನೇಮಕಗೊಳಿಸಿತು 2014ರಲ್ಲಿ ಬಿ.ಎ. ಮೊಹಮ್ಮದ್ ಹನೀಫ್‌ರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿತು. ಅಕ್ಟೋಬರ್ 3ರಂದು ಬ್ಯಾರಿ ಭಾಷಾ ದಿನಾಚರಣೆಯನ್ನು ಆಚರಿಸಲು ಈ ಅಕಾಡೆಮಿಯು ಪ್ರೋತ್ಸಾಹ ನೀಡಿದೆ.

**ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಪ್ರಮುಖ ಯೋಜನೆಗಳು**

1. ಪದವಿ ಹಂತದಲ್ಲಿ ಬ್ಯಾರಿ ಭಾಷೆ, ಕಲೆ, ಸಂಸ್ಕೃತಿ, ಸಾಹಿತ್ಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ.
2. ಗೌರವ ಪ್ರಶಸ್ತಿ ಪ್ರಧಾನ – ಪುರಸ್ಕಾರ ಸಮಾರಂಭ ಹಾಗೂ ಪುಸ್ತಕ ಬಹುಮಾನಗಳು.
3. ಸಾಹಿತ್ಯಿಕ – ಸಾಂಸ್ಕೃತಿಕ ಕಾರ್ಯಕ್ರಮ: ಹಬ್ಬ, ಸಂದೋಲ, ಕಲಾ ಉತ್ಸವಗಳು – ಇತ್ಯಾದಿ
4. ಕಾರ್ಯಾಗಾರ, ಕಮ್ಮಟಗಳು, ಕವಿಗೋಷ್ಠಿ, ಬಹುಭಾಷಾ ಕವಿ ಸಮ್ಮಿಲನ ಮತ್ತು ವಿಚಾರಗೋಷ್ಠಿ
5. ಅಕಾಡೆಮಿಗಳ/ ಇಲಾಖೆಗಳ ಸಹಯೋಗದ ಕಾರ್ಯಕ್ರಮಗಳು.
6. ರಾಜ್ಯದ ಎಲ್ಲಾ ಅಕಾಡೆಮಿ/ಪ್ರಾಧಿಕಾರಿಗಳ ಜಂಟಿ ಸಮಾವೇಶ
7. ಗಡಿನಡು ಕಾರ್ಯಕ್ರಮ/ಹೊರನಾಡು ಕಾರ್ಯಕ್ರಮಗಳು
8. ಬ್ಯಾರಿ ಉತ್ಸವಗಳು – ಹೊರರಾಜ್ಯ/ರಾಷ್ಟ್ರ/ ಅಂತರ್ ರಾಷ್ಟ್ರೀಯ ಮಟ್ಟ.
9. ರಾಜ್ಯ ಮಟ್ಟದ ಬ್ಯಾರಿ ಜಾನಪದ ತರಬೇತಿ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ
10. ರಾಜ್ಯಾದ್ಯಂತ ಬ್ಯಾರಿ ಭಾಷಾ ಸಾಹಿತ್ಯ ಸಾಂಸ್ಕೃತಿಕ ಜಾಗ್ರತಿ ಕಾರ್ಯಕ್ರಮ
11. ಬ್ಯಾರಿ ಅಕಾಡೆಮಿಯು ಇತರ ಅಕಾಡೆಮಿಗಳ ಸಹಯೋಗದಲ್ಲಿ ಸಾಹಿತ್ಯದಿಂದ ಸಾಮರಸ್ಯ ಕಾರ್ಯಕ್ರಮ
12. ಬ್ಯಾರಿ ಜನಾಂಗ, ಸಾಹಿತ್ಯ, ಸಂಸ್ಕೃತಿಯ ಸಂಶೋಧನೆ.
13. ಬ್ಯಾರಿ ಹಳೆಯ ದಾಖಲೆಗಳ ಸಂಗ್ರಹ, ಮೈಕ್ರೊ ಫಿಲ್ಮ್‌ಗಳ ವ್ಯವಸ್ಥೆ
14. ಕಲಾವಿದರಿಗೆ ಕಲಾಪರಿಕರ ವಿಮಾ ಯೋಜನೆ, ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ, ಮನೆ ಮನೆ ಬ್ಯಾರಿ ಭಾಷಾ ಸಾಹಿತ್ಯ ಕೃತಿಗಳ ವಿತರಣೆ.
15. ಬ್ಯಾರಿ ಲಿಪಿ ಬಗ್ಗೆ ಚರ್ಚೆಗೋಷ್ಠಿ, ಬ್ಯಾರಿ ಶಾಸನ ನಿರ್ಮಿಸುವ ಬಗ್ಗೆ ಸಮೂಹ ಮಾಧ್ಯಮುಗಳ ಮೂಲಕ ಬ್ಯಾರಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸಾರ.
16. ಇಂಟರ್ ನೆಟ್ ಮೂಲಕ ಬ್ಯಾರಿ ಆಸಕ್ತರಿಗೆ ಬ್ಯಾರಿ ಕನ್ನಡ, ಇಂಗ್ಲೀಷ್ ಉರ್ದು, ಇತರ ಭಾಷೆಗಳಲ್ಲಿ ಬ್ಯಾರಿ ಸಾಹಿತ್ಯ ಮತ್ತು ಸಂಸ್ಕೃತಿ ಬಗ್ಗೆ ಮಾಹಿತಿ.
17. ವಿದ್ವಾಂಸರ ಮಾರ್ಗದರ್ಶನದಲ್ಲಿ ಬ್ಯಾರಿ ಸಂಸ್ಕೃತಿ, ಭಾಷೆ ಮತ್ತು ಜನಾಂಗದ ಬಗ್ಗೆ ಸಂಶೋಧನೆ,ಬ್ಯಾರಿ ಸಾಂಸ್ಕೃತಿಕ ಉತ್ಸವ, ಬ್ಯಾರಿ ಬಾಲ ಪ್ರತಿಭಾ ವಿಕಸನ ಮತ್ತು ಪ್ರಶಸ್ತಿ.

18. ಬ್ಯಾರಿ ಫೆಲೊಶಿಪ್ (ಸಾಹಿತ್ಯ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ)
19. ಬ್ಯಾರಿ ಹಿರಿಯರೊಂದಿಗೆ ಮನೆಯಂಗಳದಲ್ಲಿ ಮಾತುಕತೆ ಮತ್ತು ದಾಖಲಿಕರಣ
20. ಬ್ಯಾರಿ ನಿಘಂಟು ಗ್ರಂಥಕೋಶ (ಬ್ಯಾರಿ–ಕನ್ನಡ–ಇಂಗ್ಲೀಷ್ ಅರ್ಥಕೋಶ)
21. ರಾಷ್ಟ್ರೀಯ ಹಬ್ಬಗಳ ಆಚರಣೆ, ವೃತ್ತಿ ನಾಟಕ ತಂಡಗಳಿಗೆ ಪ್ರೋತ್ಸಾಹ ಸಂಗೀತ ವಾದ್ಯ ನೃತ್ಯ ಜನಪದ, ಕಲೆ ಪರಿಕರಕ್ಕೆ ಪ್ರೋತ್ಸಾಹ ಸಹಾಯ, ಬ್ಯಾರಿ ಹಿರಿಯರಲ್ಲಿ ಮಾತುಕತೆ.
22. ವಿಶ್ವ ವಿದ್ಯಾನಿಲಯದಲ್ಲಿ ಬ್ಯಾರಿ ಅಧ್ಯಯನ ಪೀಠ ಸ್ಥಾಪನೆಗೆ ಪ್ರಯತ್ನ
23. ಬ್ಯಾರಿ ಕ್ಯಾಲೆಂಡರ್ ಬಿಡುಗಡೆ ಇತ್ಯಾದಿ.

**6] ಅಖಿಲ ಭಾರತ ಬ್ಯಾರಿ ಪರಿಷತ್:**–ಬ್ಯಾರಿ ಭಾಷೆ, ಸಂಸ್ಕೃತಿ ಸಾಹಿತ್ಯ ಮತ್ತು ಬ್ಯಾರಿಗಳ ಅಭಿವೃದ್ಧಿಗಾಗಿ ಮಂಗಳೂರಿನಲ್ಲಿ ಬ್ಯಾರಿಗಳಲ್ಲಿ ಕೆಲವರು ಒಟ್ಟು ಸೇರಿ 9–8–2005ರಂದು ಅಖಿಲ ಭಾರತ ಬ್ಯಾರಿ ಪರಿಷತ್ ಎಂಬ ಸಂಘವನ್ನು ಕಟ್ಟಿದರು.

ಜೆ. ಹುಸೈನ್ ಇವರನ್ನು ಅಧ್ಯಕ್ಷರನ್ನಾಗಿ, ಬಿ.ಎಂ. ಮುಮ್ತಾಜ್ ಆಲಿ ಇವರನ್ನು ಗೌರವಾಧ್ಯಕ್ಷರಾಗಿ ನೇಮಕ ಮಾಡಿ ಅಖಿಲ ಭಾರತ ಬ್ಯಾರಿ ಪರಿಷತ್ 12–09–2005ರಂದು ನೋಂದಣಿಗೊಂಡಿತು. ಆಯಿತು. 2006 ಅಗಸ್ಟ್ 13ರಂದು ಕರೆದ ಪ್ರಥಮ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಬಿ.ಎ. ಮೊಹಮ್ಮದ್ ಹನೀಫ್ ಇವರನ್ನು ನೇಮಕ ಮಾಡಲಾಯಿತು.

**ಅಖಿಲ ಭಾರತ ಬ್ಯಾರಿ ಪರಿಷತ್ ಇದರ ಕಾರ್ಯ ಚಟುವಟಿಕೆಗಳು:–**

1. ಸುಮಾರು 15 ಮಕ್ಕಳಿಗೆ ಸ್ಕಾಲರ್ ಶಿಪ್ ವಿತರಿಸುವ ಕಾರ್ಯಕ್ರಮ.
2. 28–12–2006ರಂದು ಬದ್ರಿಯಾ ಕಾಲೇಜಿನ್ಲಲಿ ಪೆರ್ನಾಲ್ ಸ್ನೇಹಕೂಟ ಮತ್ತು ಬ್ಯಾರಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ.
3. 1–3–2007ರಂದು ಬ್ಯಾರಿ ಅಧ್ಯಯನ ಕೇಂದ್ರದಲ್ಲಿ ಉಲೇಮಾರೊಂದಿಗೆ ಸಾಮಾಜಿಕ ಚಿಂತನಾ ಸಭೆ.
4. 8–8–2007ರಂದು ರಮ್‌ಝಾನ್ ಬಗ್ಗೆ ಎನ್.ಜಿ.ಓ. ಹಾಲ್‌ನಲ್ಲಿ 'ಝಾಕಾತ್ ಮತ್ತು ಸದಕ' ಎಂಬ ವಿಷಯದಲ್ಲಿ ವಿಚಾರಗೋಷ್ಠಿ.
5. 15–12–2007ರಂದು ಮೂಡಬಿದ್ರೆಯ ಪದ್ಮಾವತಿ ಕಲಾ ಮಂಟಪದಲ್ಲಿ ಚೆರಿ–ಕಲಿ ಒರ್ಮೆ ಪ್ಲಾಡ್ ಕಾರ್ಯಕ್ರಮ.

6. 31–01–2008ರಂದು ಅಖಿಲ ಭಾರತ ಬ್ಯಾರಿ ಅಧ್ಯಯನ ಕೇಂದ್ರದ ಆಫೀಸಿನಲ್ಲಿ ಬ್ಯಾರಿ ಸಾಹಿತ್ಯ ಸಂವಾದ ಕಾರ್ಯಕ್ರಮ.
7. 22–2–2008ರಂದು ಪಂಪ್‌ವೆಲ್ ಮಸ್ಜಿದ್ ತಕುವಾ ಮಸಿದಿಯಲ್ಲಿ ವರದಕ್ಷಿಣೆ ನೀಡದೆ ಆಭರಣ ನೀಡಿ ಮೂರು ನಿಖಾಹ್ ಕಾರ್ಯಕ್ರಮದ ಏರ್ಪಾಡು.
8. 28–03–2008ರಂದು ಮಂಗಳೂರಿನಲ್ಲಿ 'ಬ್ಯಾರಿ ಅಂದೋಲನ ಮತ್ತು ಅವಲೋಕನ ಕಾರ್ಯಕ್ರಮ'
9. ಎಸ್.ಎಸ್.ಎಲ್.ಸಿ. ಮೊದಲು ಮತ್ತು ನಂತರ ಕಲಿಯುವ ಸುಮಾರು 1200 ಬ್ಯಾರಿ ಮಕ್ಕಳಿಗೆ ಅಬ್ದುಲ್ ಅಝೀಜ್ ಹಕ್ ಸ್ಕಾಲರ್ ಶಿಪ್ ಅರ್ಜಿ ಬರೆದುಕೊಟ್ಟು ಸಹಕಾರ.
10. 15–8–2008ರಲ್ಲಿ ಉಳ್ಳಾಬೆಟ್ಟುವಿನಲ್ಲಿ ಬಸ್ಸು ನೀರಿಗೆ ಬಿದ್ದು ಜೀವ ಹೋದ ಶಾಲೆಯ ಮಕ್ಕಳಿಗೆ ಕೇಂದ್ರ ಸರಕಾರದ ಮುಖಾಂತರ ಸಹಾಯ ಕೋರಲು ದಿಲ್ಲಿಗೆ ಕಡತ ನಿಯೋಗ ರವಾನೆ, ಇತ್ಯಾದಿ.

**ಕೊನೆಯ ಮಾತು**

ಸಂಸ್ಕೃತಿ ಎಂದರೆ ಸಂಸ್ಕಾರ ಎಂದು ಅರ್ಥ ಅದು ಮನುಷ್ಯನ ಜೀವನ ವಿಧಾನಕ್ಕೆ ಸಂಬಂಧಿಸಿದ್ದು, ಸಂಸ್ಕೃತಿ ಎನ್ನುವುದು ಪ್ರಾದೇಶಿಕವಾದುದು. ಆಯಾ ಪ್ರದೇಶದ ಭಾಷೆ, ಆಹಾರ, ಉಡುಪು, ಜೀವನಶೈಲಿ, ಪದ್ಧತಿ ನಂಬಿಕೆಗಳು, ವೃತ್ತಿಪರ ಆಚರಣೆಗಳು, ಹಬ್ಬ ಹೀಗೆ ಎಲ್ಲವೂ ಸಂಸ್ಕೃತಿಯಲ್ಲಿ ಒಳಗೊಂಡಿರುತ್ತದೆ. ಸಮಾಜವೊಂದರಲ್ಲಿ ಕೇಳಿಸುವ ದನಿಗಳು ಕಾಣಿಸುವ ಪದಗಳು ಆಯಾ ಸಂಸ್ಕೃತಿಯ ಒಳಗಡೆ ಆ ಸಮುದಾಯಗಳ ಅಸ್ತಿತ್ವ ಅದೃಶ್ಯತೆಗಳೊಂದಿಗೆ ಸಂಬಂಧ ಪಟ್ಟಿರುತ್ತದೆ.

ಸಮಾಜವೆಂದರೆ ಪರಸ್ಪರ ಅವಲಂಬನೆ. ಜಗತ್ತಿನ ಪ್ರತಿ ದೇಶಗಳ ಚರಿತ್ರೆಯಲ್ಲೂ ಒಂದು ಸುದೃಡ ಯುಗವಿತ್ತು. ತುಳುನಾಡು ಹಲವು ಭಾಷೆ, ಜನಾಂಗ, ಕಲೆ ಸಂಸ್ಕೃತಿಗೆ ಜನ್ಮವಿತ್ತ ನಾಡು. ಈ ನಾಡಿನ ಮಣ್ಣಲ್ಲಿ ಜನ್ಮ ತಾಳಿದ ಪ್ರತಿಯೊಂದು ಜನಾಂಗವು ತನ್ನದೆ ಆದ ವಿಶಿಷ್ಟತೆಯನ್ನು ಪಡೆದಿದೆ. ಇಲ್ಲಿ ಇರುವ ಜಾತಿ, ಉಪಜಾತಿ, ಜನಾಂಗ, ಭಾಷೆ ಬೇರೆಲ್ಲೂ ಕಾಣಲು ಸಿಗುವುದಿಲ್ಲ. ಇಂತಹ ವಿಶಿಷ್ಟತೆ ಪಡೆದ ತುಳುನಾಡಿನಲ್ಲಿ ಜನ್ಮ ತಾಳಿದ ಜನಾಂಗಗಳಲ್ಲಿ ಬ್ಯಾರಿ ಜನಾಂಗವೂ ಒಂದು. ಬ್ಯಾರಿ ಜನಾಂಗ, ಭಾಷೆ ಹಾಗೂ ಸಾಂಸ್ಕೃತಿಕ ರಂಗದಲ್ಲಿ ತನ್ನದೇ

ಆದ ಪ್ರಭಾವ ಬೀರಿದೆ. ಕೇರಳ ರಾಜ್ಯದ ಕಾಸರಗೋಡಿನಿಂದ ಕುಂದಾಪುರದ ಬಾರಕೂರ್‌ವರೆಗೆ ಬ್ಯಾರಿ ಜನಾಂಗ ಹಿಂದಿನಿಂದ ವಾಸಿಸುತ್ತಿದ್ದ ಪ್ರದೇಶ. ಆದರೆ ಈ ಬ್ಯಾರಿ ಜನಾಂಗದವರು ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಕೊಡಗು, ಬೆಂಗಳೂರು ಪೋರಬಂದರ್ ಗೋವಾ, ಚೆನ್ನೈ, ದೆಹಲಿ, ಮುಂಬೈ, ಇಂಗ್ಲೆಂಡ್, ಅಮೆರಕಾ, ನ್ಯೂಜಿಲ್ಯಾಂಡ್, ಗಲ್ಫ್ ರಾಷ್ಟ್ರಗಳಾದ ಆಸ್ಟ್ರೇಲಿಯದಂತಹ ರಾಷ್ಟ್ರಗಳಿಗೆ ಉದ್ಯೋಗ ನಿಮಿತ್ತ ಹೋಗಿ ಅಲ್ಲೇ ನೆಲೆಸಲು ಆರಂಭಿಸಿದ್ದಾರೆ. ಈ ನಾಡಿಗೆ ತಮ್ಮದೇ ಆದ ಆಚಾರ ವಿಚಾರಗಳಿಂದ ಕೊಡುಗೆಯನ್ನು ಕೊಟ್ಟವರೇ ಬ್ಯಾರಿಗಳು. ಸಂಸ್ಕೃತಿ ಎನ್ನುವುದು ಎಷ್ಟೇ ವರ್ಷಗಳು ಸಂದರೂ ಅದು ನಶಿಸಿ ಹೋಗುವುದಿಲ್ಲ. ಬ್ಯಾರಿ ಸಮುದಾಯ ಸಮಾಜದಲ್ಲಿ ತಮ್ಮ ಭಾಷೆ ಆಚರಣೆಗಳು ಸಂಭ್ರಮ ಆರ್ಥಿಕ ಕಾರಣಗಳಿಂದ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ತುಳುನಾಡಿನ ಕರಾವಳಿ ಪ್ರದೇಶದಲ್ಲಿ ನೆಲೆಸಿದ ಅರಬ್ ವ್ಯಾಪಾರಿಗಳ ಹಾಗೂ ಸ್ಥಳೀಯ ಹೆಂಗಸರ ಸಂಪರ್ಕದಿಂದ ಬೆಳೆದು ಬಂದ ಜನಾಂಗವನ್ನು 'ಬ್ಯಾರಿಗಳು' ಎಂದು ಕರೆಯುತ್ತಾರೆ. ಹದಿನಾರನೆಯ ಶತಮಾನದ ಬಂಗ ಹಾಗೂ ಚೌಟ ಅರಸರುಗಳ ಆಸ್ಥಾನದಲ್ಲಿ ಬ್ಯಾರಿಗಳು ಸೇನಾನಾಯಕ ಹುದ್ದೆಯಲ್ಲಿದ್ದರು. ಉಳ್ಳಾಲದ ರಾಣಿ ಅಬ್ಬಕ್ಕ ತನ್ನ ಬ್ಯಾರಿ ಸೈನಿಕರ ಸಹಾಯದಿಂದ ಪೋರ್ಚುಗೀಸ್ ಆಕ್ರಮಣಕಾರರಿಗೆ ಸಾಕಷ್ಟು ಬಾರಿ ಪಾಠ ಕಲಿಸಿದ್ದಳು. ತುಳು ಪಾಡ್ದನಗಳಲ್ಲಿ ರಚಿಸಿದಂತೆ ಬ್ಯಾರಿಗಳು ಪಾಣೆಮಂಗಳೂರು ಬಂಗರಸರ ಆಸ್ಥಾನದಲ್ಲಿ ಉನ್ನತ ಹುದ್ದೆಗಳನ್ನು ನಿರ್ವಹಿಸುತ್ತಿದ್ದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಪೋರ್ಚುಗೀಸರ ಪ್ರಾಬಲ್ಯ ತಗ್ಗಿದಾಗ ಬ್ಯಾರಿ ವರ್ತಕರು ಕರಾವಳಿ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿಕೊಂಡಿದ್ದರು.

ಸಂಸ್ಕೃತಿಯ ತಾಯಿಬೇರುಗಳನ್ನು ತಡಕುತ್ತಾ ಹೋದಂತೆ ಬ್ಯಾರಿ ಸಮುದಾಯದ ಸಾಂಸ್ಕೃತಿಕ ವಿವರಗಳು ತೌಳವ ಸಂಸ್ಕೃತಿಯ ಜತೆಗೆ ತಳಕು ಹಾಕಿಕೊಂಡಿದೆ. ಹಿಂದೆ ಬ್ಯಾರಿ ಕುಟುಂಬಗಳು ಕೃಷಿಪ್ರಧಾನ ಕುಟುಂಬಗಳಾಗಿದ್ದವು. ಇದರಿಂದಲೇ ಅವರು ತಮ್ಮ ಜೀವನವನ್ನು ನಡೆಸುತ್ತಿದ್ದರು.

ಬ್ಯಾರಿಗಳ ಮದುವೆ ಸಮಾರಂಭವು ಹಿಂದಿನ ಕಾಲದಲ್ಲಿ ಎರಡು ವಾರಗಳ ತನಕ ನಡೆಯುತ್ತಿದ್ದವು. ಮದುವೆ ಸಮಾರಂಭದಲ್ಲಿ ಕುಟುಂಬದ ಎಲ್ಲಾ ಸದಸ್ಯರು ಬಹಳ ಸಂಭ್ರಮದಿಂದ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಿದ್ದರು. ಒಂದು ವಾರದ ಮೊದಲೇ ಸಂಸಾರ ಸಮೇತರಾಗಿ ಮದುವೆ ಮನೆಯಲ್ಲಿ ತಂಗಿರುತ್ತಿದ್ದರು.

ಆದರೆ ಈಗ ಸಂಬಂಧಿಕರನ್ನು ಔಪಚಾರಿಕವಾಗಿ ಕರೆಯುವಂತಾಗಿದೆ.

ಹಿಂದಿನ ಕಾಲದಲ್ಲಿ ಬ್ಯಾರಿಗಳು ಅವಿಭಕ್ತ ಕುಟುಂಬಸ್ಥರಾಗಿದ್ದರು. ಈಗ ಅವು ನಶಿಸುತ್ತಾ ಇದೆ. ಇದಕ್ಕೆಲ್ಲಾ ಸಾಮಾಜಿಕ ಜೀವನದಲ್ಲಾದ ಬದಲಾವಣೆಯೇ ಕಾರಣ. ಕಾಲ ಬದಲಾದಂತೆ ಬ್ಯಾರಿ ಕೌಟುಂಬಿಕ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳಾಗಿವೆ. ಈ ನಿಟ್ಟಿನಲ್ಲಿ ಬ್ಯಾರಿ ಜನಾಂಗವನ್ನು ಮುನ್ನಡೆಸುವಲ್ಲಿ ಯುವ ಜನರ ಪಾತ್ರವೂ ಬಹಳ ಮುಖ್ಯವಾಗಿರುತ್ತದೆ.

## ಆಕರ ಗ್ರಂಥಗಳು


1. ತುಳುನಾಡಿನ ಬ್ಯಾರಿಗಳು : ಇಂಗ್ಲಿಷ್‌ಮೂಲ (ಪ್ರೊ. ಬಿ.ಎಂ. ಇಚ್ಲಂಗೋಡು)
2. ಪೆರಿಮೆ : (ಬೇರೆ ಬೇರೆ ಲೇಖಕರು)
3. ತುಳುನಾಡಿನ ಮುಸ್ಲಿಮರು : ಡಾ. ವಹಾಬ್ ದೊಡ್ಡಮನೆ
4. ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ : ಡಾ. ವಹಾಬ್ ದೊಡ್ಡಮನೆ
5. ಮೈಸೂರು ಪಿಲಿ ಟಿಪ್ಪು : ಪಿ. ಇಸ್ಮಾಯಿಲ್ ಮೂಡುಶೆಡ್ಡೆ
6. ಬ್ಯಾರಿ ಭಾಷೆ : ಡಾ. ಸುಶೀಲಾ ಪಿ. ಉಪಾಧ್ಯಾಯ
7. ಮ್ಯೊಲಾಂಜಿ : ಹಂಝು ಮಲಾರ್
8. ಮೈನಾರಿಟಿ ಕಾಂಪ್ಲೆಕ್ಸ್ : ಬಿ.ಎಂ. ಹನೀಫ್
9. ತರವಾಡ್ : ಯು.ಎ. ಕಾಸೀಮ್ ಉಳ್ಳಾಲ್
10. ಬೆಲ್ಕಿರಿ (ಅಕಾಡೆಮಿ ತ್ರೈಮಾಸಿಕ) : 2014–2015
11. ಬ್ಯಾರಿ ಅಧ್ಯಯನ : ಬೇರೆ ಬೇರೆ ಲೇಖಕರು
12. ಓದು ಕಿಡಾವು ಓದು : 2006 ಡಾ. ಎ. ವಹಾಬ್ ದೊಡ್ಡಮನೆ
13. ಬ್ಯಾರಿ ಆಂದೋಲನದ ಹೆಜ್ಜೆಗಳು : 2008 ಬಿ.ಎ. ಮೊಹಮ್ಮದ್ ಹನೀಫ್

# ಬ್ಯಾರಿ ಬಾಸೆ,
# ಸಾಹಿತ್ಯತ್ತೆ ಬೆಲೆಚಲ್,
# ಜಾನಪದ ಮಸಲೆಜ, ಪಾಟ್‌ಜ,
# ಸಾಹಿತ್ಯತ್ತೊ ಪ್ರಕಾರಜ ಪಿನ್ನೆ ಮಸಲೆ,
# ಕಾದಂಬರಿ, ಪಾಟ್, ನಾಟಕ,
# ಪ್ರಬಂಧ, ಸಿ.ಡಿ, ಕ್ಯಾಸೆಟ್,
# ಸಿನೆಮಜ ಪಿನ್ನೆ ಅದ್‌ರೊ ಪ್ರಬಾವ

---


**ನಾಝಿಯ**

ಬಿ.ಎ. ವಿದ್ಯಾರ್ಥಿನಿ

ಲಕ್ಷ್ಮಿ ಸೋಮ ಬಂಗೇರ ಪ್ರಥಮ ದರ್ಜೆ ಕಾಲೇಜ್

ಉಡುಪಿ

"ಬ್ಯಾರಿ ಬಾಸೆ, ಸಾಹಿತ್ಯತ್ತೊ ಬೆಲೆಚೆಲ್ ನಿಕ್ಕ್ಡೆ ತನ್ನಿ ಅಲ್ಲ, ಅದ್ ಪೊಯೋನ್‌ತ್ತಿಕ್‌ಡೆ ತನ್ನಿ", ನಜ ಬ್ಯಾರಿ ಸಾಹಿತ್ಯತ್ತೊ ಬೆಲೆಚೆಲ್‌ಡೆ ನಲ್ಲೊ ರೂಪತ್ತಿಲ್ ಕಾನೊಗು ಸಾದ್ಯ ಅವುಡು. ಇಂಡ್‌ಗ್ ಬ್ಯಾರಿ ಸಾಹಿತ್ಯ ಅಕಾಡೆಮಿ ಚೆಲ್ಡೊ ಒರು ಸಂಸ್ಥೆಡೆ ಸಾಹಿತ್ಯ ಬಾಸೆ ಪಿನ್ನೆ ಸಂಸ್ಕೃತಿಗಾಯಿಟ್ಟ್ ಕೊಡುಗೆ ಚಮ್ಮೆ ಉಂಡು.

ಮನಿಸ ಮನಿಸರ ನಡುಲು ಭಾವನೆಂಜಲೊ ವಿನಿಮಯತ್ತ್‌ಗ್ ಬಳಕೆ ಯಾವುಡೊ ಒರು ವಿಶಿಷ್ಟ ಸಂಜ್ಞಾ ಸಮೂಹಮೇ ಬಾಸೆ. ವ್ಯಕ್ತಿ ಒರ್‌ತಡೆ ಜೀವಿತಕಾಲ ಯಾರ ಚೆನ್ನೆಂಗ್ 100 ವರ್ಷ ಆಯೆಂಗ್ ಬಾಸೆಡೆ ಜೀವಿತಕಾಲ ಶತಮಾನತ್ತೊಲ್, ಇಕ್ಕು. ಮನುಷ್ಯಡೊ ಕಾನ ಬಾಸೆ ಸಂಸ್ಕೃತಿಂಜ ಬೆಲಿಯದ್ ಸ್ವಂತ ಲಾಭತ್‌ಗ್ ದೇಶ–ಬಾಸೆ –ಸಂಸ್ಕೃತಿಡೆ ಬಳಕೆ ಆ ಕಾಂಟಿ ಅದ್‌ಕ್ ಗೌರವ ಬಂಡೆ ರೀತಿಲ್ ಚೈಚಿ ಬಾಲೋನ್. ಬಾಸೆ ಚೆಲ್‌ಡೆದ್ ಒನ್ ಸಂಪರ್ಕ ಸಾಧನ. ಒರ್ತ ಇನ್ನೊರ್‌ತ್ತಡೊಟ್ಟ ಪಲಕ್ ಬರೆಯೊಂಜ ಬಾಸೆ ಬಳಕೆ ಅವುಡು ಅದ್ ನಿರಂತರ ಅಯಿತ್ ಇನ್ನೆಂಜ ಆ ಬಾಸಡೆ ಉಳಿಪಾಟ್ಟೊಗ್ ಸಾಧ್ಯ, ಅಪರೂಪತ್‌ಲ್ ಬಾಸೆಡೆ ಬಳಕೆ ಆಕೆಂಗ್ ಅದ್ ಉಲಿಲ್ಲೆ. ಇಂಡಾತ್ತೊ ನಾಲ್‌ಲ್ ಮಸ್ತ್ ಅಲ್‌ಮಾರ್ ಮಕ್ಕಜಲೆ ಇಂಗ್ಲೀಷ್ ಮೀಡಿಯಮ್‌ಗ್ ಕಡತ್ತಯೋಂಟುಲ್ಲಾರ್. ಇದ್ರೇ ಚೇಂತ್ ಬಾಪ –ಉಮ್ಮ ಮಕ್ಕಂಜಲೆ ಮುನ್ನೊಲ್ ಬ್ಯಾರಿ ಬಾಸೆಲ್ ಪಲಕ್ ಬರೆಯೋಗ್ ಹಿಂಜರಿಡಾರ್. ಇಜನೆ ಎಲ್ಲಾರೂಂ ಆಕೆಂಗ್ ಬಾಸೆ ಎಜನೆ ಉಳಿಯೋಗ್ ಸಾಧ್ಯ? ಬಾಸೆ ಬೆಳವಣಿಗೆ ಆವುಡದೆ ಏಜನೆ? ಸಾಹಿತ್ಯ ಮಾತ್ರ ಇದ್‌ಕ್ ಮರಂದಾ? ಈ ಪ್ರಶ್ನೆಂಜ ಎದ್‌ರ್ ಬಂಡ್. ಅದಕ್ ಸಮಾತೋ ಉತ್ತರಮೇ ಕಿಟ್ಟ್‌ಲ್ಲೆ. ಇಂಡ್ ಎಲ್ಲಾ ಕರಾವಳಿ ಪ್ರದೇಶತ್ತಲ್ ಬ್ಯಾರಿ ಸಾಹಿತ್ಯ ಸಮ್ಮೇಳನ ನಡನೋಂಟುಂಡ್ ಸುಮಾರ್ ವರ್ಷತ್ತಗ್ ಇಪಾರ ನಜಲಜ ಬ್ಯಾರಿ ಬಾಸೆ, ಜನಾಂಗ ಪಿನ್ನೆ ಸಾಹಿತ್ಯತ್ತೊ ಅಭಿವೃದ್ಧಿಗಾಯಿಟ್ಟ್ ಪ್ರಯತ್ನ ಆಕ್ಯೋಂಟುಲ್ಲಾರ್.

ಬ್ಯಾರಿ ಬಾಸೆ ಸಾಹಿತ್ಯತ್ತೆ ಅಬಿವೃದ್ದಿ ಆಕೋನೆಂಗ್ ಸುರೂಕ್ ಬಾಸೆಡೆ ಮುನ್ನೋಲು ಕೊಂಪೋನು. ಬ್ಯಾರಿ ಸಾಹಿತ್ಯತ್ತೆ ಬೆಳವಣಿಗೆ ಆಕೊನೆಂಗ್ ಬ್ಯಾರಿ ಸಾಹಿತ್ಯ ಅಕಾಡೆಮಿಡೆ ನಜ ಅಭಿವೃದ್ಧಿ ಆಕೊಣು. ಸಾಹಿತ್ಯತ್ತೊ ಅಭಿವೃದ್ಧಿಗ್ ಪೂರಕಮಾಯಿಟ್ಟ್ ಮೆಹನತಾಕೊನು ಚೆನ್ನೆಂಗ್ ತಪ್ಪಾವುಲ್ಲೆ.

ಬ್ಯಾರಿ ಸಾಹಿತ್ಯ ಪಿನ್ನೆ ಬ್ಯಾರಿ ಭಾಷೆ ಅಭಿವೃದ್ಧಿ ಆಕೋನು, ಮುನ್ನೋಲು ಬಾಸೆಡೆ ಬೆಳವಣಿಗೆಡೊ ತೆರುಕ್ ಕೊಂಪೋನು ಅದ್‌ಕ್ ಮುನ್ನೋಲ್ ಬ್ಯಾರಿ

ಶಬ್ದಕೋಶ ರಚನೆ ಆವೊನ್ ಪಿನ್ನೆ ಬಾಸೆಡೊ ತಜ್ಞಮಾರೊ ಸಮಿತಿ ರಚನೆ ಆವೊನ್. ಈ ಸಮಿತಿ ಶಬ್ದಕೋಶತ್ತೊ ಕ್ರೋಢೀಕರಣತ್ತ್‌ಗ್ ಪ್ರಾಮಾಣಿಕ ಪ್ರಯತ್ನ ಆಕೆಂಗ್ ಮಾತ್ರ ಉದ್ದೇಶ ಸಫಲ ಅವುಡು. ಇಲ್ಲೆಂಗ್ ಬಾಸೆ ಬೆಳವಣಿಗೆ ಆವುಲ್ಲೆ. ಪ್ರಯತ್ನ ಆಕೆಂಗ್ ಬಾಸೆ ಬಲೆಯೊಗು ಸಾದ್ಯ ಆವುಡು. ಎದೇ ಸಂಸ್ಥೆ ಒರ್‌ಕಲೇ ಮೇಲೇ ಸಾದ್ಯ ಇಲ್ಲೆ. ಚೆನ್ನೆಂಗ್ ಕಿಡವುಗ್ ಸುರ್‌ಕ್ ಪಲಕ ಬರೆಯೋಗ್, ನಡಕೋಗ್ ಅವುಲ್ಲೆ. ಆ ಕಿಡಾವುಡೋ ಅಂಬೆಗಾಲ್‌ಡೊ ನಡತ ಕೊಇ್ಞ ಪಲೊಕ ಇದ್ರೇ ಮೂಲಕ ಆ ಕಿಡಾವು ಪಲಕಾ ಬರೆಯೋಗ್, ನಡಕೋಗ ಸಾದ್ಯ ಆವುಡು. ಅಜನಮೇ ಬ್ಯಾರಿ ಸಾಹಿತ್ಯತ್ತೆ ಬೆಳವಣಿಗೆ ಚೆಲ್ದೆದ್ ನಿಧಾನ ಮಾಯಿಟ್ಟ್ ತಂಡೋ ಪ್ರಯತ್ನತ್ತೊ ಮೂಲಕ ಫಲ ಎಡ್‌ತೋನುಟ್ಟು ಬೆಳವಣಿಗೆ ಆವೊಗು ಸಾದ್ಯ ಉಂಡು.

ನಜಲೊ ಜೀಮನ ನಲ್ಲೇವೊನೆಂಗ್ ನಜೊಗು ಸಾಹಿತ್ಯ, ಸಂಸ್ಕೃತಿ ಬಾಸೆಡೊ ಬಿಸಯತ್ತ್‌ಲ್ ಪಿರ್ಸ, ಅಬಿಮಾನ ಇಕ್ಕೊನೆ. ಇದ್ ಚೆರ್ದ್‌ಲೇ ನಜಲೊ ನಡವಡಿಲ್, ಪಡಿಪುಲ್ ಬರೊನು. ಇದೆಲ್ಲೊ ನಜಲೊ ಪಡಿಪುಡೊ ಒರು ಅಂಗಮೇ ಆಯಿತ್ತ್ ಆ ಕೋನಂಜ ನಜಲ್ಲೆ ಕಂಡ್‌ಬಂಡ್.

ನಂಜ ಬ್ಯಾರಿ ಬ್ಯಾಸೆಲ್ ಪಲಕ್ ಬರೆಯೊಗ್ ಚೆಂಗೆ ಆಕೆಂಗ್ ಅವುಲ್ಲೆ ಅಲ್ಮಾರ್‌ಡೊ ಅಡ್ಡಿ ಅವಾತೊ ಪೋಲೇ ಬ್ಯಾರಿ ಬಾಸೆಲ್ ಫಲಕ್ ಬರೆಯೋನ್. ಚಂಗೇ ಪಟ್ಟೆಂಗ್ ನಂಜ ಬ್ಯಾರಿ ಭಾಷೆ ಪಲಕ್ ಬರೆಯೊಗ್ ಸಾಧ್ಯ ಅವುಲ್ಲೇ. ಬಾಸೆಡೊ ಉಳಿಪಾಟ್ಯೆಂಗ್ ಮಾತ್ರ ಆ ಬಾಸೆಡೊ ಸಾಹಿತ್ತೊ ಬೆಳೆವಣಿಗೆ ಕಾನೊಗ್ ಸಾಧ್ಯ ಅವುಡು. ಎಲ್ಲಾದ್ರೇಕಾಟಿ ಮೂನ್ನೊಲ್ ನಜ ನಂಜ ಮಾತೃ ಭಾಷೆಯಾಯೊ ಬ್ಯಾರಿ ಬಾಸೆಲ್ ಪಲಕ್ ಬರೆಯೊನು. ನಂಜಲೇ ಭಾಷೆಗ್ ಗೌರವಿಕ್ಕೋನು. ನಂಜಲೇ ಬಾಸೆಡೆ ಗೌರವ ಕೊಡತ್ತುಲೆಂಗ್, ಬೇರೆ ಅಲ್‌ಮಾರ್ ಗೌರವ ಕೊಡ್‌ಕೊಗ್ ಸಾಧ್ಯಮಾ? ಅಪ್ಪ ಬಾಸೆ ಬೆಳವಣಿಗೆ ಅವೊಗ್ ಸಾಧ್ಯಮಾ? ಚೆಲ್ದೆದ್ ಅರಿಂಇೊತನ.

ಬ್ಯಾರಿ ಬಾಸೆಲ್ ಜಾನಪದ ಕತೆ, ಕವನ, ಪಾಟ್‌ಜ ಪೆರೋತ್ತೋ ಕಾಲತ್ತ್‌ಲ್ ಇನ್ತ್. ಮಂಜಿಲ, ಮ್ಯೊಲಾಂಜಿ ಇಜಂತೊ ಕಾರ್ಯಕ್ರಮತ್ತಲ್ ಹಿರಿಯರ್ ಬ್ಯಾರಿ ಬಾಸೆಲ್ ಪಾಡ್ಯೊನ್‌ತ್ ಇನ್ನಾರ್. ಯಾರತ್ತೆ ಕಡೆಲ್ ಬ್ಯಾರಿ ಪಾಟ್‌ಜಲೆ ಸಮಾರಂಭತ್‌ಲ್ ಮಾತ್ರ ಕೇಕ್‌ಡಾರ್. ಧಪ್ ಕಲೆ ಚೆಲ್ದೆದ್ ಅಂಡ ಕಾಲತ್ತ್‌ಲ್ ಇನ್ತ್. ಆಯೆಂಗ್ ಅದಕ್ಕೊನ್ನು ಅಡಿಪಾಯ ಇಲ್ಲಾಂತ್. ಇಪ್ಪ ಅದ್ ಸ್ಪರ್ಧೆಂಗಲೊ ಮೂಲಕ ಪ್ರಚಲಿತ ಆಯೊನ್‌ತ್ ಉಂಡ್. ಅಲ್ಲಾಂಟ್ ಮುನ್ನೊಲ್

ಸಾಗ್ಯೋನುತ್ತುಂಡು. ಒರುಕಾಲತ್ತ್‌ಲ್ ಬ್ಯಾರಿ ಬಾಸೆಲ್ ಜನಪದ ಸಾಹಿತ್ಯತ್ತೊ ಬಂಡರಮೇ ಇಂತ್.

ಸಾಹಿತ್ಯತ್‌ಗ್ ಉಲ್ಲತ್ತರೆ ಶಕ್ತಿ ಬ್ಯಾರೆ ಏದುಕುಂ ಇಲ್ಲೆ ಪಿರ್ಸ ಮಾನವೀಯತೆ, ಸಹೋದರತೆಜ ಸಾಹಿತ್ಯತ್ತೆ ಮೂಲಕ ಪ್ರಸಾರ ಆವ್ನೊನು ಸದ್ಯತ್ತೆ ಪರಿಸ್ಥಿತಿಲ್ ಕರಾವಳಿ ಕರ್ನಾಟಕತ್ತ್‌ಗ್, ರಾಜ್ಯತ್ತ್‌ಗ್ ಪಿನ್ನೆ ದೇಶತ್ತ್‌ಗ್ ಬೇನಾಯದ್ ಮನಸ್ಸ್ – ಮನಸ್ಸ್‌ಡೆ ಬೆಸೆಯಿಡೊ ಕಾರ್ಯತ್ತೆ ಸಾಹಿತ್ಯತ್ತೊ ಮೂಲಕ ಕಾರ್ಯರೂಪತ್ತ್‌ಗ್ ಎಡತ್ತೊಬನ್ನೆಂಗ್ ಆರೋಗ್ಯ ಪೂರ್ತಿಯಾಯೊ ಸಮಾಜತ್ತೆ ನಂಜ ಕಾಣೊಗ್ ಅವುಡು. ಇದಕ್ ಪ್ರತಿಯೋರ್ತ ಬ್ಯಾರಿ ಅಕಾಡೆಮಿಡೊಟ್ಟುಗು ಕೈ ಜೋಡಿಸೊನು.

ಪತ್ರಿಕೆಜ ಇಂಡ್ ಪ್ರಪಂಚತ್ತೆ ಮೂಲೆ ಮೂಲೆಡೆ ಸಮಾಚಾರತ್ತೆ ಅಲ್‌ಮರ್ದೊ ಔತ್‌ಡೆ ಬಾಯಿಲ್‌ಗ್ ಕೊಂಪೋಯೋಂಟುಂಡು. ವರ್ತಮಾನ ಪತ್ರಿಕೆಜ ಓದು ಎಲ್‌ದೋಗು ಬನ್ನಂಜಲೇ ಪಾಲ್‌ಗ್ ನೆಸೀಬ್. ಆಂಗ್ಲ ಭಾಷೆಯಲ್ NEWS ಚೆಲ್ದೆದ್‌ರೆ N=North, E=East, W=West, S=South. ಇದೆಲ್ಲಾ ವಿರುದ್ಧ ಮೋತುಗು ಉಂಡು. ಇದೆಲ್ಲಾ ಎಂದುಂ ಪರಸ್ಪರ ಸೇರ್‌ಲ್ಲೆ. ಸುದ್ದಿಜ ದೂರ ದೂರತ್ತುಲೊ ಆಲ್‌ಮಾರೊ ಒಟ್ಟು ಗಾಕ್‌ಡ್. ದೂರತ್ತೆ ಮುಟ್ಟ ಆಕ್‌ಡ್. ಪತ್ರಿಕೆ ನಾಲ್ ದಿಕ್ಕ್‌ಡೆಬಿಸಯತ್ತೆ ಒಳಪಡ್‌ರ್. ಪತ್ರಿಕೆಜ ಇಂಡ್ ಬ್ಯಾರಿ ಬಾಸೆಲುಂ ಪ್ರಕಟ ಆಯೆಡದ್‌ಲಾಯಿಟ್ಟ್. ಅದ್‌ಲೂಂ ಮಾಹಿತಿಡೆ ಮುಖ್ಯಮಾಯಿತ್ ರಾಷ್ಟ್ರೀಯ– ಅಂತರಾಷ್ಟ್ರೀಯತ್ತೆ, ಸ್ಥಳೀಯ ಸುದ್ದಿಜ, ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯ ಪಿನ್ನೆ ವ್ಯವಸಾಯತ್ತೆ ಪಿನ್ನೆ ಕೈಗಾರಿಕೆ ಇನ್ನು ಚೆಲೆ ವಿಭಾಗತ್ತೆ ಸುದ್ದಿಡೆ ಅರಿಯೋಗ್ ಅನುಕೂಲ ಆವುಡು. ಈ ಮುಖಾಂತರ ಬ್ಯಾರಿ ಸಾಹಿತ್ಯತ್ತೆ ಬೆಳವಣಿಗೆ ನೋಕೊಗ್ ಅವುಡು. ಬ್ಯಾರಿ ಸಾಹಿತ್ಯತೆ ಬೆಳವಣಿಗೆ ಆಕೊಗು. ಆಕೊಗು ಪತ್ರಿಕೆಜ ಚಮ್ಮೆ ಉಮೇದ್ ಕೊಡತ್ತೊಂಟು ಉಂಡ್. ಅದ್‌ಲ್:–

1) ಬ್ಯಾರಿ ವಾರ್ತೆ

